# ಬೌದ್ಧಧರ್ಮದ ಮೂಲ ಬೋಧನೆಗಳು

## ಮಹಾಬೋಧಿ ಪಾಲಿ ಮತ್ತು ಬೌದ್ಧ ಅಧ್ಯಯನ ಕೇಂದ್ರದ ಡಿಪ್ಲೊಮಾ ಪಠ್ಯಪುಸ್ತಕ ಭಾಗ–2

**ಇಂಗ್ಲಿಷ್ ಮೂಲ**

ಪೂಜ್ಯ ಆಚಾರ್ಯ ಬುದ್ಧರಕ್ಷಿತ

ಕನ್ನಡಕ್ಕೆ

ಮೊಳಕಾಲ್ಮೂರು ಶ್ರೀನಿವಾಸಮೂರ್ತಿ

**ಬುದ್ಧ ವಚನ ಟ್ರಸ್ಟ್**
**ಮಹಾ ಬೋಧಿ ಸೊಸೈಟಿ**
**ಗಾಂಧಿನಗರ, ಬೆಂಗಳೂರು–560 009**



ಪ್ರಕಾಶನ :
**ಬುದ್ಧ ವಚನ ಟ್ರಸ್ಟ್**
14, ಕಾಳಿದಾಸ ಮಾರ್ಗ
ಗಾಂಧಿನಗರ, ಬೆಂಗಳೂರು–560 009
ದೂರವಾಣಿ : 080–22250684
ಫ್ಯಾಕ್ಸ್ : 080–41148440
E-mail : books@mahabodhi.info

ಹಕ್ಕು : ಬುದ್ಧ ವಚನ ಟ್ರಸ್ಟ್ – ಎಲ್ಲ ಹಕ್ಕುಗಳನ್ನು ಕಾಯ್ದಿರಿಸಿದೆ.

ಪ್ರತಿಗಳು : 1000 (ಮಾರ್ಚ್ 2013)

**ಬೆಲೆ : ರೂ. 80/–**

ಮುಖಪುಟ ವಿನ್ಯಾಸ :

ಮುದ್ರಕರು :
**ಶ್ರೀ ಅರವಿಂದ್ ಪ್ರಿಂಟರ್ಸ್**
ಸರಸ್ವತಿಪುರಂ, ಬೆಂಗಳೂರು–560 096
ದೂ : 080–23498198, ಮೊ : 9916461691

## ಮುನ್ನುಡಿ

ಬೌದ್ಧ ಧರ್ಮದ ಮೂಲ ಬೋಧನೆಗಳು, ಭಾಗ-2 ಪುಸ್ತಕವು ಡಿಬಿಸ್ (ಡಿಪ್ಲೊಮಾ ಇನ್ ಬುದ್ಧಿಸ್ಟ್ ಸ್ಟಡೀಸ್) ಕೋರ್ಸಿಗೆ ಗೊತ್ತು ಮಾಡಲಾದ ಪಠ್ಯಪುಸ್ತಕ. ಮಹಾಬೋಧಿ ಬುದ್ಧಿಸ್ಟ್ ಓಪನ್ ಯುನಿವರ್ಸಿಟಿಯು (ಎಂಬಿಓಯು) ಈ ಕೋರ್ಸನ್ನು ನಡೆಸುತ್ತಿದ್ದು, ಈ ಪುಸ್ತಕವು ಮಹಾಬೋಧಿ ಮೊನಾಸ್ಟಿಕ್ ಇನ್‌ಸ್ಟಿಟ್ಯೂಟ್‌ನಲ್ಲಿನ ಸಂನ್ಯಾಸಿಗಳಿಗೂ ನಿಯಮಿಸಲಾದ ಪಠ್ಯ ಪುಸ್ತಕವಾಗಿದೆ.

ಈ ಪುಸ್ತಕದಲ್ಲಿ ಒಟ್ಟು ಒಂಭತ್ತು ಅಧ್ಯಾಯಗಳಿದ್ದು, ಈ ಪುಸ್ತಕದ ಆಧಾರದ ಮೇಲೆಯೇ ಡಿಬಿಎಸ್ ಕರೆಸ್ಪಾಂಡೆನ್ಸ್ ಕೋರ್ಸ್‌ನ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸಲಾಗುತ್ತದೆ. ಈ ಕೋರ್ಸ್‌ನ ಮುಖ್ಯ ಉದ್ದೇಶವೆಂದರೆ ಬುದ್ಧನ ತತ್ವಗಳನ್ನು ಸ್ಪಷ್ಟವಾಗಿ ತಿಳಿಹೇಳಿ ಜನರನ್ನು ಬೌದ್ಧ ಧ್ಯಾನಗಳತ್ತ ಮತ್ತು ಪಂಚಶೀಲಗಳತ್ತ ಸೆಳೆದು ಸಾಧನಾಪಥದಲ್ಲಿ ಅವರನ್ನು ಮುಂದುವರಿಸುವುದು.

ಈ ಕೋರ್ಸಿನಲ್ಲಿ ಜ್ಞಾನಾರ್ಜನೆ ಮತ್ತು ಸಾಧನೆಗೆ ಸಂಬಂಧಿಸಿದ ಸಂಗತಿಗಳನ್ನು ಒಟ್ಟಿಗೆ ಸೇರಿಸಲಾಗಿದೆ. ಹೀಗೆ ಕೋರ್ಸ್ ಮುಗಿಯುವ ಹೊತ್ತಿಗೆ ವಿದ್ಯಾರ್ಥಿಗಳು ಬೌದ್ಧ ಧರ್ಮದಲ್ಲಿ ಅಡಗಿರುವ ಅತ್ಯುತ್ತಮ ವಿಚಾರಗಳನ್ನು ಭಿಕ್ಖುಗಳಾಗಿಯೊ ಇಲ್ಲವೇ ಉಪಾಸಕರಾಗಿಯೋ ಜಗತ್ತಿನಾದ್ಯಂತ ಪಸರಿಸಬಹುದು.

ಡಿಬಿಎಸ್ ಕೋರ್ಸಿಗೆ ಸೇರಿಕೊಂಡ ವಿದ್ಯಾರ್ಥಿಗಳು ಪ್ರತಿ ತಿಂಗಳ ಮೊದಲ ವಾರದಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಅಂಚೆ ಮುಖಾಂತರವಾಗಲಿ, ಇಲ್ಲವೆ ಇ-ಮೇಲ್ ಮೂಲಕವಾಗಲಿ ಪಡೆಯುತ್ತಾರೆ. ಇಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಹೇಗೆ ರೂಪಿಸಲಾಗಿದೆ ಎಂದರೆ ಅವುಗಳನ್ನು ಉತ್ತರಿಸುತ್ತಾ ಹೋದಂತೆ ಭಗವಾನ್ ಬುದ್ಧನ ಬೋಧನೆಗಳನ್ನು ಹಂತಹಂತವಾಗಿ ಅರಿಯುತ್ತಾ ಹೋಗಬಹುದು. ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಗಳನ್ನು ಪಡೆದ ಇಪ್ಪತ್ತು ದಿನಗಳೊಳಗಾಗಿ ಉತ್ತರ ಬರೆದು ಅಂಚೆ ಅಥವಾ ಇ-ಮೇಲ್ ಮೂಲಕ ಕಳಿಸಬೇಕಾಗುತ್ತದೆ.

ಎಂಬಿಓಯು ಮುಂದಿನ ತಿಂಗಳಲ್ಲಿ ಸರಿ ಉತ್ತರ ಪತ್ರಿಕೆಯನ್ನು ವಿದ್ಯಾರ್ಥಿಗಳಿಗೆ ಕಳಿಸುತ್ತದೆ. ಹೀಗೆ ವಿದ್ಯಾರ್ಥಿಯು ತಾನು ಈ ಹಿಂದೆ ಬರೆದು ಕಳಿಸಿದ ಉತ್ತರಗಳು ಸರಿ ಇವೆಯೇ ಎಂಬುದನ್ನು ಅವರೇ ಪರಿಶೀಲಿಸಿಕೊಳ್ಳಬಹುದು. ವರ್ಷದ ಕೊನೆಯಲ್ಲಿ ಪರೀಕ್ಷೆಗಳನ್ನು ನಡೆಸಲಾಗುವುದು. ಪ್ರತಿ ವರ್ಷ ಮೇ ತಿಂಗಳಲ್ಲಿ ನಡೆಯುವ ಬುದ್ಧ ಜಯಂತಿಯ ದಿನ ಡಿಪ್ಲೊಮಾಗಳನ್ನು ವಿಶೇಷ ಘಟಿಕೋತ್ಸವ ಸಮಾರಂಭದಲ್ಲಿ ವಿತರಿಸಲಾಗುವುದು.

ಡಿಬಿಎಸ್ ಕೋರ್ಸ್‌ನ್ನು ಎರಡು ಭಾಗಗಳನ್ನಾಗಿ ಮಾಡಲಾಗಿದೆ. ಎರಡನೇ ಭಾಗಕ್ಕೆ ಇದು ಪಠ್ಯಪುಸ್ತಕವಾಗಿದೆ.

**ಪೂಜ್ಯ ಆಚಾರ್ಯ ಬುದ್ಧರಕ್ಖಿತ**
ಮಹಾಬೋಧಿ ಸೊಸೈಟಿ, ಬೆಂಗಳೂರು



## ಈ ಪುಸ್ತಕವನ್ನು ಓದುವ ಮುನ್ನ ಅನುವಾದಕನ ಒಂದೆರಡು ಮಾತು

ಈ ಪುಸ್ತಕದಲ್ಲೊಂದು ಸುಂದರವಾದ ಕಥೆ ಇದೆ.

ಕೋಶಲ ದೇಶದ ರಾಜಧಾನಿ ಶ್ರಾವಸ್ತಿ. ಅಲ್ಲಿನ ಮಹಾ ಶ್ರೀಮಂತ ಅನಾಥಪಿಂಡಿಕ. ಮಗಧ ದೇಶದ ರಾಜಧಾನಿ ರಾಜಗೃಹ. ಅಲ್ಲಿನ ಮಹಾ ಶ್ರೀಮಂತ ರಾಜಗೃಹ ಶ್ರೇಷ್ಠಿ. ಅನಾಥಪಿಂಡಿಕನ ಸೋದರಿಯನ್ನು ರಾಜಗೃಹ ಶ್ರೇಷ್ಠಿಯೂ, ರಾಜಗೃಹ ಶ್ರೇಷ್ಠಿಯ ಸೋದರಿಯನ್ನು ಅನಾಥಪಿಂಡಿಕನು ಮದುವೆಯಾಗಿ ಈರ್ವರೂ ಬಂಧುಗಳು. ರಾಜಗೃಹ ಶ್ರೇಷ್ಠಿಯು ಶ್ರಾವಸ್ಥಿಗೆ ಬಂದರೆ ಅನಾಥಪಿಂಡಿಕನು ಅನನ್ಯವಾದ ಆತಿಥ್ಯವನ್ನು ಹಾಗೆಯೇ ಅನಾಥಪಿಂಡಿಕನು ರಾಜಗೃಹಕ್ಕೆ ಹೋದರೆ ಶ್ರೇಷ್ಠಿಯು ಅಪಾರ ಪ್ರೀತಿಯ ಆತಿಥ್ಯವನ್ನು ನೀಡುತ್ತಿದ್ದರು. ಒಮ್ಮೆ ಅನಾಥಪಿಂಡಿಕನು ತನ್ನ ಐನೂರು ಬಂಡಿಗಳಲ್ಲಿ ವಾಣಿಜ್ಯ ಸರಕನ್ನು ತುಂಬಿಸಿಕೊಂಡು ರಾಜಗೃಹಕ್ಕೆ ವ್ಯಾಪಾರಕ್ಕೆ ಹೋದನು. ಇನ್ನೇನು ರಾಜಗೃಹ ಹತ್ತಿರ ಬಂದಿತೆನ್ನುವಷ್ಟರಲ್ಲಿ ಶ್ರೇಷ್ಠಿಗೆ ತಾನು ಬರುತ್ತಿರುವ ಸುದ್ದಿಯನ್ನು ಕಳುಹಿಸಿದನು. ಪ್ರತಿಸಾರಿ ಬಂದಾಗಲೂ ಭವ್ಯವಾದ ಸ್ವಾಗತವನ್ನೇ ಏರ್ಪಾಡು ಮಾಡುತ್ತಿದ್ದ ಶ್ರೇಷ್ಠಿ: ದೂರವಿರುವಾಗಲೇ ಬಂದು ಕರೆದುಕೊಂಡು ಹೋಗುತ್ತಿದ್ದ. ಆ ರೀತಿಯ ಯಾವ ಸ್ವಾಗತವೂ ಈ ಸಾರಿ ಸಿಗಲಿಲ್ಲ. ಎಷ್ಟಾದರೂ ತಂಗಿಯ ಮನೆ ಅಲ್ಲವೇ ಎಂದು ಸ್ವಾಗತ ಸಿಗದಿದ್ದರೂ ಅನಾಥಪಿಂಡಿಕನು ನೇರವಾಗಿ ಮನೆಗೆ ಹೋದ. ಶ್ರೇಷ್ಠಿಯ ಮನೆಯಲ್ಲಿ ಮನೆಯ ತುಂಬ ಆಳು-ಕಾಳು, ಅತ್ತಿಂದಿತ್ತ ಓಡಾಡುತ್ತ ಭಾರೀ ಸಂಭ್ರಮದ ಕೆಲಸದಲ್ಲಿ ಮುಳುಗಿದ್ದು, ಭಾವ ಅನಾಥಪಿಂಡಿಕ ಬಂದಿರುವುದನ್ನು ಶ್ರೇಷ್ಠಿಯೂ ಗಮನಿಸಲೇ ಇಲ್ಲ. ಮುಂಚೆಯಾದರೆ ಬಂದ ಭಾವನಿಗೆ ಕಾಲಿಗೆ ನೀರುಕೊಟ್ಟು ಕ್ಷೇಮ ಸಮಾಚಾರದ ನಂತರ ಉಪಚಾರಾದಿ ಗೌರವಗಳನ್ನು ಸಲ್ಲಿಸುತ್ತಿದ್ದ. ಈ ಯಾವ ಸತ್ಕಾರವೂ ಅನಾಥಪಿಂಡಿಕನಿಗೆ ಶ್ರೇಷ್ಠಿಯಿಂದ ಸಿಗಲಿಲ್ಲ. ಏನೂ ಬೇಧಭಾವ ಎಣಿಸದೆ ಅನಾಥಪಿಂಡಿಕನು ಶ್ರೇಷ್ಠಿ ಭಾವನಿಗೆ, "ಏನು ಭಾವನವರೆ, ಇಷ್ಟೊಂದು ಸಂಭ್ರಮದ ಕೆಲಸದಲ್ಲಿ ಮುಳುಗಿದ್ದೀರಿ. ಮನೆಯಲ್ಲೇನಾದರೂ ಮದುವೆಯ ಸನ್ನಿವೇಶವೇ ಅಥವಾ ರಾಜನೇನಾದರೂ ನಿನ್ನ ಮನೆಗೆ ಬರುತ್ತಿದ್ದಾನೆಯೇ?" ಎಂದು ಕೇಳಿದನು. ಶ್ರೇಷ್ಠಿಯು "ಇಲ್ಲ ಭಾವ, ಈ ಜಗತ್ತನ್ನು ಬೆಳಗಿಸುವ ತಥಾಗತರು ನಮ್ಮ ಮನೆಗೆ ತಮ್ಮ ಭಿಕ್ಖು ಸಂಘದೊಡನೆ ನಾಳೆ ಬರುತ್ತಿದ್ದಾರೆ, ಅವರನ್ನು ನಾನು ಆಹ್ವಾನಿಸಿದ್ದೇನೆ". ಯಾವಾಗ ಶ್ರೇಷ್ಠಿಯು 'ತಥಾಗತ' ಎನ್ನುವ ಪವಿತ್ರ ಪದವನ್ನು

ಉಸುರಿದನೋ ಅನಾಥಪಿಂಡಿಕನಿಗೆ ರೋಮಾಂಚನವಾಯಿತು. "ಯಾರು, ಇನ್ನೊಮ್ಮೆ ಹೇಳು" ಎಂದು ಮೂರುಸಾರಿ ಕೇಳಲು ಮೂರುಸಾರಿಯೂ ಶ್ರೇಷ್ಠಿಯು 'ತಥಾಗತ'ನೆಂದು ಹೇಳಿದನು. "ತಥಾಗತ ಎನ್ನುವ ಹೆಸರನ್ನು ಕೇಳುವುದೇ ಅಪರೂಪ ಈ ಜಗತ್ತಿನಲ್ಲಿ, ಅವರನ್ನು ನಾನು ಈಗಲೇ ನೋಡಬೇಕು" ಎನ್ನಲು, ಶ್ರೇಷ್ಠಿಯು "ಬೇಡ, ಈಗ ಕತ್ತಲು ಮುಸುಕುತ್ತಿದೆ, ನಾಳಿನ ಮುಂಜಾನೆ ನೀನು ಅವರನ್ನು ನೋಡಬಹುದು" ಎಂದನು.

ತಥಾಗತ ಶಬ್ದದಿಂದ ಭಾವಾವೇಷ್ಟಿತನಾದ ಅನಾಥಪಿಂಡಿಕನಿಗೆ ರಾತ್ರಿ ಕಳೆಯುವುದೇ ಕಷ್ಟವಾಯಿತು. ಮುಂಜಾನೆ ಯಾವಾಗ ಆಗುತ್ತದೋ ಎಂದು ಕಾಯುತ್ತಿದ್ದ, ನಿದ್ದೆಯನ್ನೇ ಮಾಡಲಿಲ್ಲ. ಮುಂಜಾನೆಯಾಗಲು ಇನ್ನೆರಡು ಗಂಟೆಯಿರುವಾಗಲೇ ಮಬ್ಬು ನಸುಕಿನಲ್ಲೇ ಎದ್ದು ವೇಣುವನದಲ್ಲಿದ್ದ ತಥಾಗತರನ್ನು ನೋಡಲು ಹೊರಟ. ರಾಜಗೃಹದ ಸ್ಮಶಾನವನ್ನು ಹಾದುಹೋದ ನಂತರ ತಥಾಗತರಿರುವ ಆವಾಸ ಸಿಗುತ್ತಿತ್ತು. ಭಯಪಟ್ಟುಕೊಂಡು ಹೆಜ್ಜೆಗಳನ್ನು ಹಾಕುತ್ತಿರಲು ದಿವ್ಯ ಯಕ್ಷನೊಬ್ಬನು ಅನಾಥಪಿಂಡಿಕನಿಗೆ ದಾರಿ ತೋರಿಸುತ್ತಾ ಹೋದ. ಆ ಕತ್ತಲಲ್ಲಿ ಹೆಜ್ಜೆಗಳನ್ನು ಮುಂದೆ ಇಟ್ಟರೆ, ಎಲ್ಲಿ ಬೀಳುತ್ತೇನೋ ಎಂದು ಅನಾಥಪಿಂಡಿಕನು ಭಯಪಡುತ್ತಿರಲು ಯಕ್ಷನಾದ ಸೀವಕನು "ಅನಾಥಪಿಂಡಕ, ನೀನು ಮುಂದೆ ಇಡುವ ಪ್ರತಿ ಹೆಜ್ಜೆಯೂ ಅಸಮಾನವಾದುದು. ಶತಸಹಸ್ರ ಆನೆಗಳಾಗಲಿ, ಅಶ್ವಗಳಾಗಲಿ, ಒಂಟೆಗಳಾಗಲಿ, ರಥಗಳಾಗಲಿ, ಕರ್ಣಕುಂಡಲಗಳಿಂದ ಶೋಭಿತರಾದ ಕನ್ಯೆಯರಾಗಲಿ– ಇವರ್ಯಾರೂ ನೀನು ಇಡುವ ಒಂದು ಹೆಜ್ಜೆಯ ಹದಿನಾರನೇ ಒಂದು ಭಾಗಕ್ಕೂ ಸಮರಲ್ಲ. ಆದ್ದರಿಂದ ನೀನು ಧೈರ್ಯವಾಗಿ ಹೆಜ್ಜೆಯನ್ನು ಮುಂದೆ ಇಡು, ಹಿಂದೆಗೆಯಬೇಡ" ಎಂದನು.

ಅನಾಥಪಿಂಡಿಕನು ದಿಟ್ಟವಾಗಿ ಮುನ್ನಡೆದು ವೇಣುವನದ ಬಳಿ ಹತ್ತಿರ ಬರುತ್ತಿದ್ದಂತೆ ಮಬ್ಬಿನ ನಸುಕಿನಲ್ಲಿ ಮನುಷ್ಯಾಕೃತಿಯೊಂದು ಆಸನವೊಂದರ ಮೇಲೆ ಕುಳಿತು 'ಬಾ ಸುದತ್ತ' ಎಂದಿತು. ತನ್ನನ್ನು ಯಾರೂ ಮೂಲನಾಮ 'ಸುದತ್ತ' ಎಂಬ ಹೆಸರಿನಿಂದ ಕರೆದಿರಲಿಲ್ಲ. ತನ್ನ ತಂದೆ–ತಾಯಿಗಳು ಮಾತ್ರ ಆ ಹೆಸರಿನಿಂದ ಕರೆಯುತ್ತಿದ್ದರು. ಆ ದನಿಯಲ್ಲಿ ಪ್ರೀತಿ, ಮೋಹಕತೆ ಇತ್ತು. ಆಕೃತಿಯತ್ತ ಧ್ವನಿಯತ್ತ ನಡೆದು ಹೋಗಲು ತಥಾಗತ ಬುದ್ಧರು ಕುಳಿತಿದ್ದರು! ಸಾಷ್ಟಾಂಗ ಪ್ರಣಾಮಗಳನ್ನು ಸಲ್ಲಿಸಿದನು. ಬುದ್ಧ ಭಾವದಿಂದ ತುಂಬಿಹೊದ ಅನಾಥಪಿಂಡಿಕನಿಗೆ ಏನು ಮಾತನಾಡಬೇಕೆಂಬ ಅರಿವಾಗದೆ "ಭಗವಾನರಿಗೆ ನಿದ್ದೆ ಚೆನ್ನಾಗಿ ಆಯಿತೆ?" ಎಂದು ಕೇಳಿದ. ಬುದ್ಧ ಭಗವಾನರು "ಸಾಂಸಾರಿಕ ಸುಖಗಳಿಗೆ, ಕಾಮಗಳಿಗೆ, ಆಸಕ್ತಿಗಳಿಗೆ ಅಂಟಿಕೊಂಡಿರದ ಬುದ್ಧರು ಚೆನ್ನಾಗಿಯೇ ನಿದ್ದೆ ಮಾಡುತ್ತಾರೆ" ಎಂದು ಹೇಳಿದರು.



ಕಥೆ ಇಷ್ಟಕ್ಕೆ ಮುಗಿಯುವುದಿಲ್ಲ. ಅನಾಥಪಿಂಡಿಕನು ಮುಂದೆ ಭಗವಾನರಿಗೆ ಜೇತವನವನ್ನೇ ದಾನ ಮಾಡುತ್ತಾನೆ. ಅನಾಥರಿಗೆ ಅನ್ನವನ್ನು ಸದಾ ಹಾಕುತ್ತಿದ್ದರಿಂದ 'ಅನಾಥಪಿಂಡಿಕ' ಎಂಬ ಅನ್ವರ್ಥನಾಮದ ಬಗ್ಗೆ ತಿಪಿಟಕದಲ್ಲಿ ಹೇರಳವಾದ ಸರಕಿದೆ.

ಈ ಪುಸ್ತಕ ಕೇವಲ ಡಿಪ್ಲೊಮಾ ವಿದ್ಯಾರ್ಥಿಗಳಿಗಲ್ಲ. ಎಲ್ಲರೂ ಓದಬೇಕಾದ ಪುಸ್ತಕ. ಬೌದ್ಧಧರ್ಮದ ಬಗ್ಗೆ ಒಳನೋಟಗಳನ್ನು ಕೊಡುವ ಸಾಹಿತ್ಯ ಇಲ್ಲಿದೆ. ಇಂತಹ ಗ್ರಂಥಗಳನ್ನು ಅನಾಥಪಿಂಡಿಕನ ಮನೋಸ್ಥಿತಿಯಿಂದ ಓದಿದಾಗ ಬುದ್ಧ ಭಗವಾನರ ಬದುಕು ಮತ್ತು ಧರ್ಮ ರಂಜನೀಯವಾಗಿ ಕಾಣುತ್ತದೆ. ತಥಾಗತರ ಬಗ್ಗೆ ಓದುವುದೇ ಒಂದು ದಿವ್ಯ ಆನಂದ. ತಥಾಗತರನ್ನು ನೋಡುವುದಕ್ಕೆ ಅನಾಥಪಿಂಡಿಕನಿಗೆ ಯಾವ ಕಾತರವಿತ್ತೋ, ಆ ಕಾತರವನ್ನು ನಾವು ಇಂದು ಸಂಪಾದಿಸಿಕೊಳ್ಳಬೇಕಾಗಿದೆ. ಸುಖದ ನಿದ್ದೆಯನ್ನು ಮಾಡಲು ಬೇಕಾದ ಧ್ಯಾನವನ್ನು, ಅರಿವನ್ನು ಈ ಪುಸ್ತಕದ ಮೂಲಕ ಪಡೆಯಬಹುದು. ಅಷ್ಟಾಂಗ ಮಾರ್ಗದ ಕಡೆ ಒಯ್ಯುವ ಇಂತಹ ಪುಸ್ತಕಗಳನ್ನು ಬರೆದ ಪರಮಪೂಜ್ಯ ಆಚಾರ್ಯ ಬುದ್ಧರಕ್ಖಿತರಿಗೆ ನಾನು ಅನಂತ ವಂದನೆಗಳನ್ನು ಸಲ್ಲಿಸುತ್ತೇನೆ. ಇಂತಹ ಇಳಿ ವಯಸ್ಸಿನಲ್ಲೂ ಅದಮ್ಯ ಚೇತನವನ್ನಿರಿಸಿಕೊಂಡು ಧಮ್ಮಕಾರ್ಯವನ್ನು ಮಾಡುತ್ತಿರುವ ಈ ಬಡಾ ಭಂತೇಜಿಯವರು ನನ್ನ ಪ್ರೇರಣೆಯಾಗಿದ್ದಾರೆ. ಮಹಾ ಬೋಧಿ ಸೊಸೈಟಿಯ ಪೂಜ್ಯ ಬುದ್ಧದತ್ತ ಭಂತೇಜಿಯವರು ಈ ಪುಸ್ತಕವನ್ನು ಅನುವಾದ ಮಾಡಿಕೊಡಿ ಎಂದು ಹೇಳಿದ್ದರು. ಅದು ಈಗ ಆಗಿದೆ. ಈ ಪುಣ್ಯ ಕಾರ್ಯವನ್ನು ನನ್ನಿಂದ ಮಾಡಿಸಿದ ಪೂಜ್ಯ ಬುದ್ಧದತ್ತ ಭಂತೇಜಿಯವರಿಗೂ ಮತ್ತು ಮಹಾಬೋಧಿ ಸೊಸೈಟಿಯ ಎಲೆಮರೆಯ ಹೂವಿನಂತೆ ಪರಿಮಳವನ್ನು ಬೀರುತ್ತಿರುವ ಕಾರ್ಯದರ್ಶಿಗಳಾದ ಪರಮಪೂಜ್ಯ ಆನಂದ ಭಂತೇಜಿಯವರಿಗೂ ನನ್ನ ಪ್ರಣಾಮಗಳು. ಕೆಲವೇ ದಿನಗಳಲ್ಲಿ ಮುದ್ರಣ ಕಾರ್ಯವನ್ನು ಮಾಡಿ ಮುಗಿಸಿದ ಅರವಿಂದ ಪ್ರಿಂಟರ್ಸ್‌ನ ಶ್ರೀ ತಿಮ್ಮರಾಯಪ್ಪಗೌಡರಿಗೂ ನನ್ನ ಕೃತಜ್ಞತೆಗಳು.

ಧಮ್ಮಸೇವಕನಾದ

**ಮೊಳಕಾಲ್ಮೂರು ಶ್ರೀನಿವಾಸಮೂರ್ತಿ**

04–02–2013

ಬೆಂಗಳೂರು

# ಪರಿವಿಡಿ

## ಅಧ್ಯಾಯ-1


**ಬುದ್ಧ ಭಗವಾನರ ಬದುಕು** **1**

1. ನಾಲ್ಕು ಮಹಾ ದೃಶ್ಯಗಳು 1
2. ಆರು ವರ್ಷಗಳ ನೋವಿನ ದೇಹದಂಡನೆ 6
3. ಸುವರ್ಣ ಮಾಧ್ಯಮ 14
4. ಸಂಬೋಧಿಪ್ರಾಪ್ತಿಯ ದಿನ 15
5. ಸುಜಾತಳು ನೀಡಿದ ಘನ ಪಾಯಸ 16
6. ನೇರಂಜರಾ ನದಿ 17
7. ಮಾರನೊಂದಿಗೆ ಯುದ್ಧ 18
8. ಸಮ್ಮಾಸಂಬೋಧಿಯ ಸಾಕ್ಷಾತ್ಕಾರ 24
9. ತಥಾಗತನ (ಸತ್ಯವಾಹಕ) ಆಗಮನ 28
10. ಬೋಧಿ ಪಲ್ಲಂಕ ಸಪ್ತಾಹ 29
11. ಅನಿಮಿಷ ಸಪ್ತಾಹ 30
12. ಚಂಕಮಣ ಸಪ್ತಾಹ 31
13. ರತನಘರ ಸಪ್ತಾಹ 31
14. ಅಜಪಾಲ ಸಪ್ತಾಹ 32
15. ಮುಚಲಿಂದ ಸಪ್ತಾಹ 37
16. ರಾಜಾಯತನ ಸಪ್ತಾಹ 38
17. ಬ್ರಹ್ಮಯಾಚನ – ಬ್ರಹ್ಮನು ಧಮ್ಮವನ್ನು ಉಪದೇಶಿಸುವಂತೆ ಪ್ರಾರ್ಥಿಸಿದ್ದು 40
18. ಧಮ್ಮವನ್ನು ಯಾರಿಗೆ ಮೊದಲು ಹೇಳಬೇಕು 44


## ಅಧ್ಯಾಯ-2


**ಧಮ್ಮರತನ** **47**

1. ಮೊದಲ ಧರ್ಮೋಪದೇಶ 47
2. ಅನತ್ತ ಲಕ್ಖಣ ಸುತ್ತ 48
3. ಅನತ್ತ ಲಕ್ಖಣ ಸುತ್ತ (ಸಂಯುಕ್ತನಿಕಾಯ 2.3.59) 49
4. ಮೊದಲ ವರ್ಷಾವಾಸ 53
5. ಮೂವತ್ತು ರಾಜಕುಮಾರರು 54
6. ಮೂವರು ವಿರಕ್ತ ಸೋದರರು 55
7. ಆದಿತ್ತ ಪರಿಯಾಯ ಸುತ್ತ 60
8. ತಿರೋಕುಡ್ಡ ಸುತ್ತ 62




## ಅಧ್ಯಾಯ-3


**ಧಮ್ಮ ಪ್ರಚಾರದ ಮೊದಲ ವರ್ಷಗಳು** **66**

1. ಘಟನಾವಳಿ 66
2. ವೇಳುವನ ವಿಹಾರ 67
3. ಜೇತವನ ವಿಹಾರ, ಅನಾಥಪಿಂಡಿಕಾರಾಮ 71
4. ನಿರಂತರ ಬೆಂಬಲ 79
5. ರಾಜ ಶುದ್ಧೋಧನನು ತನ್ನ ರಾಯಬಾರಿಗಳನ್ನು ಕಳುಹಿಸುವುದು 80
6. ಬುದ್ಧರು ಕಪಿಲವಸ್ತುವಿಗೆ ನಡೆದು ಹೋದುದು 84
7. ರಾಜನು ಮೂರನೇಬಾರಿ ಗೌರವವನ್ನು ಸಲ್ಲಿಸಿದುದು 88
8. ರತನ ಚಂಕಮಣದ ಮೇಲೆ ಧಮ್ಮದೇಸನ 88
9. ಬುದ್ಧವಂಸದ ಮೇಲೆ ಧಮ್ಮದೇಸನ 90
10. ರಾಜಕುಮಾರ ನಂದನ ಪಟ್ಟಾಭಿಷೇಕ 93
11. ರಾಜಕುಮಾರ ರಾಹುಲನಿಗೆ ದೀಕ್ಷೆ 94
12. ಸಾವಿರ ರಾಜಕುಮಾರರು ಭಿಕ್ಖುಗಳಾಗುವುದು 97
13. ಆರು ರಾಜಕುಮಾರರು ಮತ್ತು ನಾಪಿತ ಉಪಾಲಿ 98


## ಅಧ್ಯಾಯ-4


**ಪರಿತ್ತ ಸುತ್ತಗಳ ಕಥೆಗಳು** **101**

1. ಮಹಾಮಂಗಳ ಸುತ್ತಕ್ಕೆ ಸಂಬಂಧಿಸಿದ ಕಥೆ 101
2. ರತನ ಸುತ್ತದ ಹಿಂದಿನ ಕಥೆ 102
3. ಕರಣೀಯ ಮೆತ್ತಾ ಸುತ್ತದ ಹಿಂದಿನ ಕಥೆ 106


## ಅಧ್ಯಾಯ-5


**ಬುದ್ಧನ ಅಗ್ರ ಶ್ರಾವಕರು**

1. ಮೊದಲ ಐದು ಶಿಷ್ಯರು 110
2. ಬುದ್ಧನ ಸಂಶೋಧನೆಯ ಬಗೆಗಿನ ಪ್ರಮಾಣ ಅಥವಾ ಸಾಕ್ಷಿ 113
3. ಆಯುಷ್ಮಂತ ಅಸ್ಸಾಜಿ 116
4. ಪ್ರಮುಖ ಶಿಷ್ಯರಾದ ಆಯುಷ್ಮಂತ ಸಾರಿಪುತ್ತ, ಮಹಾಮೊಗ್ಗಲ್ಲಾನ 120
5. ಆಯುಷ್ಮಂತ ಮಹಾಕಸ್ಸಪ 127
6. ಆಯುಷ್ಮಂತ ಥೇರನಂದ 131
7. ಆಯುಷ್ಮಂತ ರಾಹುಲ 134
8. ಆಯುಷ್ಮಂತ ಆನಂದ 142
9. ಆಯುಷ್ಮಂತ ಕುಮಾರ ಕಸ್ಸಪ 147

## ಅಧ್ಯಾಯ-6

**ಬೌದ್ಧ ದೃಷ್ಟಿಯಲ್ಲಿ ಲೋಕ** **156**
1. ಬೌದ್ಧ ಧರ್ಮದಲ್ಲಿ ಲೋಕ ಮತ್ತು ಲೋಕೋತ್ತರ 156
2. 31 ಬಗೆಯ ಅಸ್ತಿತ್ವಗಳು 156
3. ಅರಿಯರು (ಆರ್ಯರು) 158
4. ಸಂಕಟದ ಪಾತಾಳ ಲೋಕಗಳು 161
5. ದೇವರು ಮತ್ತು ದೇವರುಗಳು ಎಂಬ ಪರಿಕಲ್ಪನೆ 164

## ಅಧ್ಯಾಯ-7

**ಪಟಿಚ್ಚ ಸಮುಪ್ಪಾದ** **168**
1. ಪಟಿಚ್ಚ ಸಮುಪ್ಪಾದ 168
2. ಸಂಸಾರ ಚಕ್ರ 169
3. ಮೂರು ವೃತ್ತಗಳು 171
4. ನಿರೋಧದ ವಿಧಾನ 172
5. ಎರಡು ಸ್ರೋತಗಳು 173
6. ಕಾರ್ಯಕಾರಣಗಳ ಸರಪಳಿ 175
7. ಸರಪಳಿಯನ್ನು ಮುರಿಯುವುದು 176
8. ಮೊದಲ ಕಾರಣ 177
9. ಕಾರ್ಯಕಾರಣ ಕೊಂಡಿಗಳು 179
10. ಕಮ್ಮ ಮತ್ತು ಪುನರ್ಜನ್ಮ ನಿಯಮ 187
11. ಕಮ್ಮ ಬಗೆಗಿನ ತಪ್ಪು ಕಲ್ಪನೆಗಳು 188
12. ಪುನರ್ಜನ್ಮ 190
13. ಕಮ್ಮ ಪಚ್ಚಯ 191

## ಅಧ್ಯಾಯ-8

**ಎರಡು ಬಗೆಯ ಸತ್ಯಗಳು** **193**
1. ಪರಮಾರ್ಥ ಧರ್ಮ – ಅಂತಿಮ ಸತ್ಯ 193
2. ಮನೋಸ್ಥಿತಿ ಮತ್ತು ಚೇತಸಿಕಾ 194
3. ಚೇತಸಿಕಾ (ಮಾನಸಿಕ ಸ್ಥಿತಿಗಳು) 194
4. ರೂಪ ಮತ್ತು ರೂಪವನ್ನು ಮೀರಿದ್ದು 195
5. ನಿಬ್ಬಾಣ (ಸಂಸಾರದಿಂದ ಬಿಡುಗಡೆ) 195
6. ಅಷ್ಟಾಂಗ ಮಾರ್ಗ 196



## ಅಧ್ಯಾಯ-9

1. ಭಿಕ್ಖುಣಿ ಸಂಘದ ಸ್ಥಾಪನೆ 197
2. ಬುದ್ಧರ ನಲವತ್ತೈದು ವರ್ಷಾವಾಸಗಳು 200
3. ಭಗವಾನರ ಎರಡು, ಮೂರು ಮತ್ತು ನಾಲ್ಕನೇ ವರ್ಷಾವಾಸಗಳು 202

# ಅಧ್ಯಾಯ–1

# ಬುದ್ಧ ಭಗವಾನರ ಬದುಕು

## ನಾಲ್ಕು ಮಹಾ ದೃಶ್ಯಗಳು

ಸಿದ್ಧಾರ್ಥನ ವಿವಾಹವಾದ ಮೇಲೆ ಮುಂದೊಂದು ದಿನ ಇವನು ರಾಜನಾಗುತ್ತಾನೆಂಬ ಯೋಚನೆ ಹಾದು ಶುದ್ಧೋದನ ಮಹಾರಾಜನಿಗೆ ಸಮಾಧಾನವಾಯಿತು. ಅನತಿ ಕಾಲದಲ್ಲೇ ಸಿದ್ಧಾರ್ಥನಿಗೆ ರಾಜಕುಮಾರನ ಪಟ್ಟಕಟ್ಟಿ ರಾಜ್ಯದ ಆಗುಹೋಗುಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮಾಡಿದನು.

ಮುಂದಿನ ಹದಿಮೂರು ವರ್ಷಗಳ ಕಾಲ ಸಿದ್ಧಾರ್ಥನು ರಾಜಕುಮಾರಿ ಯಶೋಧರೆಯೊಂದಿಗೆ ಸುಂದರವಾದ ಸಾಂಸಾರಿಕ ಜೀವನವನ್ನು ನಡೆಸಿದನು. ಇಪ್ಪತ್ತೊಂಭತ್ತು ವಯಸ್ಸು ಆಗುವ ಹೊತ್ತಿಗೆ ರಾಹುಲನ ಉದಯವಾಯಿತು. ಅದು ಅವನ ಬದುಕಿನ ತಿರುವೂ ಆಯಿತು. ಮಗನೊಡನೆ ಇರುವ ಗಾಢ ಪ್ರೀತಿ ಮತ್ತು ಸಂಬಂಧವೇ ಸಿದ್ಧಾರ್ಥನಿಗೆ ಮತ್ತೆ ಮತ್ತೆ ಘಟಿಸುವ ಈ ಸಾಂಸಾರಿಕ ಬಂಧನವನ್ನು ಕುರಿತು ದೀರ್ಘವಾಗಿ ಆಲೋಚಿಸುವಂತೆ ಮಾಡಿತು.

ಅಟ್ಠಕಥೆ ಪ್ರಕಾರ ಸಿದ್ಧಾರ್ಥನು ತುಸಿತ ದಿವ್ಯಲೋಕದ ದೊರೆಯಾಗಿದ್ದಾಗ ದೇವತೆಗಳು ಅವನನ್ನು ಭೇಟಿಯಾಗಿದ್ದರು. ಸಾಂಸಾರಿಕ ಬದುಕಿಗೆ ಅಂಟಿಕೊಂಡ ಈ ರಾಜಕುಮಾರ ಸಿದ್ಧಾರ್ಥನು ಪರಿವ್ರಾಜಕ ಸಂನ್ಯಾಸಿ ಬದುಕಿನತ್ತ ತಿರುಗಿಸಿ ಮಹತ್ತರ ಗುರಿಯನ್ನು ಸಾಧಿಸುವತ್ತ ಸೆಳೆಯಬೇಕೆಂದು ದೇವತೆಗಳು ಚಿಂತನೆ ನಡೆಸಿ ಪ್ರಾಪಂಚಿಕ ಬದುಕಿನ ವಾಸ್ತವ ಸಂಗತಿಗಳನ್ನು ಬಿಂಬಿಸುವ ನಾಲ್ಕು ದೃಶ್ಯಗಳನ್ನು ಅಥವಾ ಸೂಚನೆಗಳನ್ನು ಸೃಷ್ಟಿಸಿದರು. ಆ ಮೂಲಕ ಗಾರ್ಹಸ್ಥ್ಯ ಜೀವನವನ್ನು ತೊರೆದು ಎಲ್ಲ ಜೀವರಾಶಿಗಳಿಗೆ ಒಳಿತನ್ನು ತರುವ ಮಹತ್ತರವಾದ ಬೋಧಿ ಜ್ಞಾನ ಸ್ಫುರಣವಾಗಲೆಂದು ಆಶಿಸಿದರು. ಆ ನಾಲ್ಕು ದೃಶ್ಯಗಳು ಇವು:

### ಅ. ಮುದುಕ

ಒಂದುದಿನ ಸಿದ್ಧಾರ್ಥನು ಪ್ರಸಿದ್ಧ ರಾಜೋದ್ಯಾನವನ್ನು ನೋಡಿ ಮುದಗೊಳ್ಳಲು ಯೋಜಿಸಿದನು. ತನ್ನ ತಂದೆಗೆ ಉದ್ಯಾನವನ್ನು ದರ್ಶಿಸುವ ಇಂಗಿತವನ್ನು ವ್ಯಕ್ತಪಡಿಸಿದನು. ತನ್ನ ಜ್ಯೋತಿಷ್ಯಕಾರರು ಭವಿಷ್ಯ ನುಡಿದಂತೆ ವೃದ್ಧ, ರೋಗಿ, ಹೆಣ ಮತ್ತು ಸಂನ್ಯಾಸಿ



ಈ ನಾಲ್ಕು ದೃಶ್ಯಗಳು ಎದುರಾಗಬಾರದೆಂದು ತಂದೆ ವ್ಯಾಪಕವಾದ ವ್ಯವಸ್ಥೆಯನ್ನು ಮಾಡಿ ರಾಜೋದ್ಯಾನಕ್ಕೆ ಹೋಗುವ ರಸ್ತೆಗಳನ್ನು ಸಿಂಗಾರಗೊಳಿಸಿದನು. ಆನಂತರ ಮಗನಿಗೆ "ಮಗನೇ, ನೀನು ಹೋಗಿ ರಾಜೋದ್ಯಾನದಲ್ಲಿ ಅಡ್ಡಾಡಿಕೊಂಡು ಬರಬಹುದು" ಎಂದನು.

ಸಿದ್ಧಾರ್ಥನು ಸಿಂಗಾರಗೊಂಡ ನಗರದ ಬೀದಿಗಳಲ್ಲಿ ಹಾದು ಹೋಗುತ್ತಿದ್ದಂತೆ ಜನ ಎಷ್ಟು ಚೆನ್ನಾಗಿ ಬದುಕುತ್ತಿದ್ದಾರೆಂಬುದನ್ನು ಗಮನಿಸುತ್ತಲೇ ವಯಸ್ಸಿನಿಂದ ಬೆನ್ನು ಬಾಗಿದ, ಬೊಚ್ಚು ಬಾಯಿಯ, ಊರುಗೋಲಿನಿಂದ ನಡೆಯುವ ಒಬ್ಬ ಮುದುಕನನ್ನು ನೋಡಿದನು. ಸಿದ್ಧಾರ್ಥನು ಈ ಹಿಂದೆ ಅಂತಹ ವಯಸ್ಸಾದ ಮನುಷ್ಯನನ್ನು ಕಂಡಿರಲಿಲ್ಲ; ಕಂಡು ಗಾಬರಿಯಾಯಿತು. ತನ್ನ ರಥವನ್ನು ನಡೆಸುತ್ತಿದ್ದ ಸಾರಥಿ ಚನ್ನನನ್ನು ಕೇಳಿದ: "ಈ ಮನುಷ್ಯ ಯಾರು? ಇವನಿಗೆ ಹಲ್ಲುಗಳಿಲ್ಲ, ತಲೆ ಬೆಳ್ಳಗಾಗಿದೆ, ದೇಹ ಕೃಶವಾಗಿದೆ, ಬೆನ್ನು ಬಾಗಿ, ಕೋಲಿನಿಂದ ನಡೆಯುತ್ತಿದ್ದಾನೆ. ಈ ಮನುಷ್ಯನನ್ನು ಯಾವ ಹೆಸರಿನಿಂದ ಗುರುತಿಸುತ್ತಾರೆ? ನಾನು ಈ ಹಿಂದೆ ಇಂತಹ ವ್ಯಕ್ತಿಯನ್ನು ಕಂಡೇ ಇಲ್ಲ."

ಚನ್ನ ಹೀಗೆ ಉತ್ತರಿಸಿದನು: "ಇವನನ್ನು ಮುದುಕನೆಂದು ಕರೆಯುತ್ತಾರೆ. ಇವನಿಗೆ ಇನ್ನು ಉಳಿದಿರುವುದು ಸ್ವಲ್ಪವೇ ಆಯಸ್ಸು". ಬೋಧಿಸತ್ವ ಸಿದ್ಧಾರ್ಥನು "ಅದು ಹೇಗೆ? ನಾವು ಕೂಡ ವೃದ್ಧಾಪ್ಯಕ್ಕೆ ಒಳಗಾಗುತ್ತೇವೆಯೇ?" ಎಂದನು. ಅದಕ್ಕೆ ಚನ್ನನು "ನಾವೆಲ್ಲರೂ ವೃದ್ಧಾಪ್ಯಕ್ಕೆ ಒಳಗಾಗುವವರೇ. ವೃದ್ಧಾಪ್ಯದಿಂದ ಯಾರೂ ಹೊರತಾಗಿಲ್ಲ" ಎಂದನು. ಈ ಉತ್ತರದಿಂದ ಸಿದ್ಧಾರ್ಥನು ಯೋಚನಾಮಗ್ನನಾಗಿ ಚನ್ನನನ್ನು ಅರಮನೆಯತ್ತ ಮರಳುವಂತೆ ಹೇಳಿದನು. ಚನ್ನನು ರಥವನ್ನು ಅರಮನೆಯತ್ತ ತಿರುಗಿಸಿದನು.

ಬೋಧಿಸತ್ವ ಸಿದ್ಧಾರ್ಥನು ಎಲ್ಲರ ಬದುಕಿನಲ್ಲಿ ಸಹಜವಾಗಿ ಸ್ಥಿತವಾಗಿರುವ ಭಯ ಮೂಡಿಸುವ ದುಃಖ ಇದೆ ಎಂಬ ಪಾರಮಾರ್ಥಿಕ ಸಂವೇಗವನ್ನು ಅನುಭವಿಸಿದನು. ಮುಂದೆ ಬುದ್ಧನಾಗುವ ಲಕ್ಷಣಗಳಿರುವ ಸಿದ್ಧಾರ್ಥನು ವೃದ್ಧಾಪ್ಯ (ಜರಾ)ಕ್ಕೆ ಒಳಗಾಗುವುದರ ಹಿಂದಿನ ಸತ್ಯವನ್ನು ತನ್ನ ಸತ್ವಯುತವಾದ ವಿವೇಕದಿಂದ ಮನಗಂಡನು. ಚನ್ನನು ಜಗತ್ತಿನಲ್ಲಿ ನಡೆಯುತ್ತಿರುವ ಸಂಗತಿಯನ್ನು ಸರಳ ಮಾತುಗಳಲ್ಲಿ ಹೇಳಿದ್ದನು. ಬೋಧಿಸತ್ವನ ಈ ಸಂವೇಗವೇ ವೃದ್ಧಾಪ್ಯ ಸಮಸ್ಯೆಯಿಂದ ಮುಕ್ತವಾಗುವ ತೀವ್ರತೆಯನ್ನು ಮೂಡಿಸಿತು.

ಹಾಗೆಯೇ ವೃದ್ಧಾಪ್ಯ ಉಂಟಾಗಲು ಕಾರಣವೇನೆಂದು ಧ್ಯಾನಿಸಲು 'ಹುಟ್ಟು' ಕಾರಣವೆಂದು ಅರಿತನು. ಯೋಚಿಸಿದನು: 'ಓ ಹುಟ್ಟು ಭಯದಿಂದ ಕೂಡಿದುದು, ಇದರಲ್ಲಿ ವೇದನೆ ಇದೆ. ಅಂದರೆ ಯಾರೆಲ್ಲಾ ಹುಟ್ಟಿಗೆ ಒಳಗಾಗಿದ್ದಾರೋ ಅವರೆಲ್ಲಾ ವೃದ್ಧರಾಗುತ್ತಾರೆ, ಅದರಿಂದ ನೋವಿಗೂ ಒಳಗಾಗುತ್ತಾರೆ'. ಈ ಅರಿವಿನಿಂದ ಅಸಂತೋಷವೂ ಬೇಸರವೂ ಆಯಿತು.

ತಿಪಿಟಕದಲ್ಲಿ ಸಿಂಹದ ಉದಾಹರಣೆಯನ್ನು ಕೊಡಲಾಗಿದೆ. ಬೇಟೆಗಾರ ಸಿಂಹದತ್ತ ಬಾಣವನ್ನು ಬಿಟ್ಟರೆ, ಸಿಂಹವು ತನ್ನೆಡೆಗೆ ಬರುತ್ತಿರುವ ಬಾಣದತ್ತ ಗಮನಹರಿಸದೆ,

ಯಾವ ಬಿಲ್ಲನ್ನು ಹಿಡಿದು ಬಾಣ ಬಿಟ್ಟನೋ ಆ ಬೇಟೆಗಾರನನ್ನೇ ಗುರಿ ಮಾಡಿಕೊಂಡು ಹೋಗುತ್ತದೆ. ಹಾಗೆಯೇ ಬೋಧಿಸತ್ವನು ಯಾವುದು ಘಟಿಸಿದೆಯೋ ಅದನ್ನು ನಾಶ ಮಾಡಲು ಹೋಗಲಿಲ್ಲ. ಯಾವುದು ಸಂಭವಿಸಲು ಕಾರಣವಾಯಿತೋ ಅದನ್ನೇ ಮೂಲೋತ್ಪಾಟನೆ ಮಾಡಲು ಹೋದನು.

ವೃದ್ಧಾಪ್ಯ ಸಮಸ್ಯೆಯನ್ನು ಬಗೆಹರಿಸಲು ಅದನ್ನು ಮುಚ್ಚಿಟ್ಟುಕೊಳ್ಳುವ ಅಥವಾ ಅದನ್ನು ದೂರವಿಡುವ ಪ್ರಯತ್ನಗಳು ಉತ್ತರವಾಗಲಾರವು. ಯಾವ ಹುಟ್ಟಿನ ದೆಸೆಯಿಂದಾಗಿ ವೃದ್ಧಾಪ್ಯ ಬರುತ್ತದೋ ಅದನ್ನೇ ಘಟಿಸದಂತೆ ನೋಡಿಕೊಳ್ಳುವುದರಲ್ಲಿ ಉತ್ತರವಿದೆ. ಯಾವುದೆಲ್ಲವೂ ಈ ಪ್ರಪಂಚದಲ್ಲಿ ಮತ್ತೆ ಮತ್ತೆ ಹುಟ್ಟಿಬರುವಂತೆ ಮಾಡುವ ಪ್ರಾಪಂಚಿಕ ಸುಖವನ್ನನುಭವಿಸಬೇಕೆನ್ನುವ, ಈ ಪ್ರಾಪಂಚಿಕ ಸುಖದಲ್ಲೇ ಮುಂದುವರಿಯಬೇಕೆನ್ನುವ ಆಸೆಯನ್ನೇ (ತನ್ಹಾ) ನಿರ್ಮೂಲಗೊಳಿಸಲು ಬೋಧಿಸತ್ವ ಸಿದ್ಧಾರ್ಥನು ಮನಸ್ಸು ಮಾಡಿದನು.

ರಾಜ ಶುದ್ಧೋದನನು ಏನೆಲ್ಲ ಆಯಿತೆಂಬುದನ್ನು ಚನ್ನನಿಂದ ತಿಳಿದುಕೊಂಡನು. ಆತಂಕಕ್ಕೊಳಗಾಗಿ ಅರಮನೆಯಲ್ಲಿ ಮತ್ತಷ್ಟು ಮೋಜು ಅಲಂಕಾರಗಳನ್ನು ಹೆಚ್ಚಿಸಿದನು. ತನ್ನ ಮಗ ಅರಮನೆಯಿಂದ ತಪ್ಪಿಸಿಕೊಂಡು ಹೋಗಬಾರದೆಂದು ಇನ್ನಷ್ಟು ಹೆಚ್ಚಿನ ಭಟರನ್ನು ನೇಮಿಸಿದನು. ಸಮಯ ಸಂದಂತೆ ಸಿದ್ಧಾರ್ಥನು ಅರಮನೆಯ ವೈಭವ, ಮೋಜುಗಳಿಗೆ ಹೊಂದಿಕೊಳ್ಳಲು ಬೇಸರವೂ ಕ್ರಮೇಣ ಕಡಿಮೆಯಾಯಿತು.

## ಆ. ರೋಗಿ

ನಾಲ್ಕು ತಿಂಗಳು ಕಳೆದಿತ್ತು. ಸಿದ್ಧಾರ್ಥನಿಗೆ ರಾಜೋದ್ಯಾನಕ್ಕೆ ಹೋಗಲು ಮನಸ್ಸಾಯಿತು. ರಾಜ ಶುದ್ಧೋದನನು ಇಷ್ಟವಿಲ್ಲದಿದ್ದರೂ ಮಗನಿಗೆ ಉದ್ಯಾನವನ್ನು ವೀಕ್ಷಿಸಲು ಅನುಮತಿ ಕೊಟ್ಟನು. ಚನ್ನನು ರಥವನ್ನು ನಗರದಲ್ಲಿ ಸಾಗಿಸುತ್ತಿದ್ದಂತೆ ರಾಜಕುಮಾರ ಸಿದ್ಧಾರ್ಥನು ಒಬ್ಬ ಮನುಷ್ಯನು ನೆಲದಮೇಲೆ ಮಲಗಿ ನೋವಿನಿಂದ ಅರಚಿಕೊಳ್ಳುತ್ತಿರುವುದನ್ನು ಕಂಡನು. ಅವನು ಕಾಯಿಲೆಯಿಂದ ಜರ್ಜರಿತನಾಗಿದ್ದನು. ತನ್ನ ಮಲಮೂತ್ರಗಳ ಹೊಲಸಲ್ಲೇ ಬಿದ್ದುಕೊಂಡಿದ್ದನು.

ರಾಜಕುಮಾರ ಸಿದ್ಧಾರ್ಥ ಅವನ ನರಳಾಟವನ್ನು ಕಂಡು ಮರುಕಗೊಂಡನು. ಆ ವ್ಯಕ್ತಿ ಸರಿಯಾಗಿ ಕಣ್ಣುಬಿಡಲೂ ಆಗದೆ ಅವನ ದನಿಯೂ ಎಲ್ಲರಂತಿರಲಿಲ್ಲ. ಅವನ ದೇಹ ಬೇರೊಬ್ಬರಂತೆ ಇರಲಿಲ್ಲ. ತನ್ನ ಸಾರಥಿ ಚನ್ನನಿಗೆ "ಇವನು ಯಾರು? ಇವನನ್ನು ಜನ ಏನೆಂದು ಕರೆಯುತ್ತಾರೆ?" ಎಂದು ಕೇಳಿದನು. ಚನ್ನನು "ಇವನಿಗೆ ರೋಗ ಬಂದಿರುವುದರಿಂದ ಇವನನ್ನು ರೋಗಿ ಎನ್ನುತ್ತಾರೆ. ನೋವಿನಿಂದ ನರಳುತ್ತಿದ್ದಾನೆ, ತಾನು ಈ ರೋಗದಿಂದ ವಾಸಿಯಾಗುವನೇ ಎಂಬುದು ಅವನಿಗೆ ಗೊತ್ತಿಲ್ಲ" ಎಂದನು. ಮತ್ತೆ ಬೋಧಿಸತ್ವ ಸಿದ್ಧಾರ್ಥನು "ಅದು ಹೇಗೆ? ನಾವೆಲ್ಲರೂ ರೋಗಕ್ಕೆ ಒಳಗಾಗುವೆವೇ? ಅದಕ್ಕೆ ಚನ್ನನು "ಹೌದು, ನಾವೆಲ್ಲರೂ ರೋಗಕ್ಕೆ ಒಳಗಾಗುವವರೇ, ಯಾರೂ ರೋಗ ಸಂಭವಿಸುವ ಸಾಧ್ಯತೆಗಳಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ" ಎಂದನು.



ಬೋಧಿಸತ್ವ ಸಿದ್ಧಾರ್ಥನು ಚನ್ನನ ಮಾತುಗಳನ್ನು ಕೇಳಿ ದುಃಖಿತನಾಗಿ ರಥವನ್ನು ಅರಮನೆಯತ್ತ ತಿರುಗಿಸುವಂತೆ ಹೇಳಿದನು. ಪುನಃ ಬೋಧಿಸತ್ವನು ಎಲ್ಲರ ಬದುಕಿನಲ್ಲಿ ಸಹಜವಾಗಿ ಸ್ಥಿತವಾಗಿರುವ ಭಯವನ್ನುಂಟುಮಾಡಿ ದುಃಖ ತರಿಸುವ ರೋಗ ಉಂಟೆಂಬ ಪಾರಮಾರ್ಥಿಕ ಸಂವೇಗವನ್ನನುಭವಿಸಿದನು. ಮತ್ತೆ ಹಿಂದಿನಂತೆಯೇ ರೋಗ ಉಂಟಾಗಲು ಕಾರಣವೇನೆಂದು ಧ್ಯಾನಿಸಲು ಹುಟ್ಟು ಕಾರಣವೆಂದೂ, ಎಲ್ಲಿಯವರೆಗೂ ಹುಟ್ಟು ಇದೆಯೋ ಅಲ್ಲಿಯವರೆಗೂ ರೋಗ, ರೋಗದಿಂದ ಸಂಭವಿಸುವ ನೋವು ಇವನ್ನು ತಪ್ಪಿಸಿಕೊಳ್ಳಲಾಗುವುದಿಲ್ಲವೆಂದು ಅರಿತು ಅಸಂತೋಷಗೊಂಡನು ಮತ್ತು ಸ್ವಲ್ಪಕಾಲ ಬೇಸರ ಆವರಿಸಿತು. ರಾಜ ಶುದ್ಧೋದನನು ಈ ಸಂಗತಿಯನ್ನು ಕೇಳಿ ತಿಳಿದು ಇನ್ನಷ್ಟು ಮೋದವನ್ನುಂಟು ಮಾಡಲು ಸಂಗೀತ ನೃತ್ಯಾದಿ ಆಮೋದಗಳ ವ್ಯವಸ್ಥೆ ಮಾಡಿದನು.

## ಇ. ಹೆಣ

ಸ್ವಲ್ಪ ಕಾಲದ ನಂತರ ಬೋಧಿಸತ್ವ ಸಿದ್ಧಾರ್ಥನು ಕ್ಷಣಿಕ ಸುಖಕೊಡುವ ಜೀವನಕ್ಕೆ ಹೊಂದಿಕೊಂಡನು. ಹೀಗೆ ನಾಲ್ಕು ತಿಂಗಳು ಕಳೆಯಲು ತನ್ನ ಅಂತರಂಗದಲ್ಲಿ ರಾಜೋದ್ಯಾನವನ್ನು ಸಂದರ್ಶಿಸಬೇಕೆಂಬ ಅಭೀಪ್ಸೆ ಮೊಳೆಯಿತು.

ಈ ಹಿಂದಿನ ಎರಡು ಸಂದರ್ಭಗಳಲ್ಲಿ ದೇವತೆಗಳು ಸೃಷ್ಟಿಸಿದಂತೆ ಮೂರನೇ ಬಾರಿಯೂ ಒಂದು ದೃಶ್ಯ ಅಥವಾ ಸೂಚಕವನ್ನು ಸೃಷ್ಟಿಸಿದರು. ಅದರಲ್ಲಿ ಒಂದು ಗುಂಪಿನ ಜನರು ಹೆಣವನ್ನು ಚಟ್ಟದಲ್ಲಿ ಹೊತ್ತುಕೊಂಡು ಹೋಗುತ್ತಿರುವ ದೃಶ್ಯ. ಅದರಲ್ಲಿ ಶರೀರವು ಮರದ ದಿಮ್ಮಿಯಂತೆ ಚಲನರಹಿತಾಗಿತ್ತು. ಜನ ಆ ಸತ್ತ ಹೆಣವನ್ನು ಹೊತ್ತುಕೊಂಡು ಹೋಗಿ ಜೋಡಿಸಿದ ಸೌದೆಯ ಮೇಲೆ ಮಲಗಿಸಿ ಬೆಂಕಿ ಹಚ್ಚಿದರು. ಸುತ್ತಲಿದ್ದ ಜನರೆಲ್ಲಾ ಗೊಳೋ ಎಂದು ಅಳುತ್ತಿದ್ದರು.

ಬೋಧಿಸತ್ವ ಸಿದ್ಧಾರ್ಥನು ಚನ್ನನಿಗೆ "ಚೆನ್ನ, ಇದೇನಿದು? ಇದನ್ನೇನೆಂದು ಕರೆಯುತ್ತಾರೆ? ಜನ ಯಾಕೆ ಅಳುತ್ತಿದ್ದಾರೆ? ಈ ಹಿಂದೆ ಬೋಧಿಸತ್ವ ಸತ್ತ ಹೆಣವನ್ನು ನೋಡಿರಲಿಲ್ಲ ಮತ್ತು ಆ ಬಗ್ಗೆ ಕೇಳಿರಲಿಲ್ಲ. ಚನ್ನನು "ರಾಜಕುಮಾರ, ಇದನ್ನು ಸತ್ತ ಹೆಣವೆಂದು ಕರೆಯುತ್ತಾರೆ, ಮತ್ತೆ ಪ್ರತಿಯೊಬ್ಬರೂ ಸಾಯುತ್ತಾರೆ. ಯಾರೆಲ್ಲಾ ಬದುಕಿದ್ದಾರೋ ಅವರೆಲ್ಲಾ ಸಾಯಲೇಬೇಕು" ಎಂದನು. ಬೋಧಿಸತ್ವನು "ಅಂದರೆ ನಾವೆಲ್ಲರೂ ಸಾಯುತ್ತೇವೆಯೇ?" "ಹೌದು ರಾಜಕುಮಾರ, ನೀವೂ ನಾವೂ ಎಲ್ಲರೂ ಸಾವಿಗೆ ಒಳಗಾಗುವವರೇ. ಯಾರೂ ಇದನ್ನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ" ಎಂದನು ಚೆನ್ನ.

ತನ್ನ ರಥವನ್ನು ಅರಮನೆಯತ್ತ ಹಿಂತಿರುಗಿಸುವಂತೆ ಹೇಳಿದನು. ಬೋಧಿಸತ್ವನು ಅರಮನೆಯಲ್ಲಿ ಇನ್ನೊಂದು ಸಂವೇಗಕ್ಕೆ ಒಳಗಾದನು: 'ಸಾವು ಮನುಷ್ಯನ ಬದುಕಿನ ಕೊನೆಯಾದರೆ, ಬದುಕಿನ ಅರ್ಥವೇನು? ನನ್ನ ಪೂಜ್ಯ ತಂದೆ–ತಾಯಿಗಳು, ನನ್ನ

ಮಡದಿ ಮತ್ತು ನಾನು ಮತ್ತೆ ನಾವೆಲ್ಲರೂ ಸಾಯುವುದಾದರೆ ಬದುಕಿಗೆ ಅರ್ಥವೇನಿದೆ? ಈ ಅನಿವಾರ್ಯವಾದ ದುಃಖಕ್ಕೆ ಪರಿಹಾರವಂತೂ ಇರಲೇಬೇಕು'. ಸ್ವಲ್ಪ ಸಮಯ ಈ ಅಸಂತೋಷದಲ್ಲೇ ಇದ್ದು ಯಥಾಪ್ರಕಾರ ಗಾರ್ಹಸ್ಥ್ಯ ಜೀವನಕ್ಕೆ ಹೊಂದಿಕೊಂಡನು. ತಂದೆ ಶುದ್ಧೋಧನನು ತನ್ನ ಮಗ ಎಲ್ಲ ವೈಭವ ಆನಂದ ಆಮೋದಗಳಲ್ಲಿರುವಂತೆ ನೋಡಿಕೊಂಡನು. ಹೀಗೆ ಸ್ವಲ್ಪ ಸಮಯ ಸಾಮಾನ್ಯ ಜೀವನವನ್ನು ನಡೆಸಿದನು.

### ಈ. ಸಂನ್ಯಾಸಿ

ನಾಲ್ಕು ತಿಂಗಳು ಕಳೆಯಿತು. ರಾಜಕುಮಾರ ಸಿದ್ಧಾರ್ಥನು ರಾಜೋದ್ಯಾನಕ್ಕೆ ತೆರಳಿದನು. ನಗರದ ಬೀದಿಗಳಲ್ಲಿ ಸಾಗುತ್ತಿರಲು ಸಂನ್ಯಾಸಿಯೊಬ್ಬನು ಶಾಂತ ಮುಖಮುದ್ರೆಯಲ್ಲಿರುವುದನ್ನು ಕಂಡನು. ಇವನನ್ನು ನೋಡಿ ಬೋಧಿಸತ್ವನಿಗೆ ಬಹಳ ಸಂತೋಷವಾಯಿತು. ತಾನು ಒಬ್ಬ ಸಂನ್ಯಾಸಿಯ ಬದುಕನ್ನು ನಡೆಸಬೇಕೆಂಬ ತುಡಿತ ಉಂಟಾಯಿತು.

ಬೋಧಿಸತ್ವ ಸಿದ್ಧಾರ್ಥನು ಚನ್ನನತ್ತ ತಿರುಗಿ ಕೇಳಿದನು: "ಈ ವ್ಯಕ್ತಿ ಯಾರು? ಇವನನ್ನು ಯಾವ ಹೆಸರಿನಿಂದ ಕರೆಯುತ್ತಾರೆ? ಇವನು ಹೇಗೆ ಜೀವಿಸುತ್ತಾನೆ?" ಅದಕ್ಕೆ ಚನ್ನ ಹೇಳಿದನು: "ಇವನನ್ನು ಸಂನ್ಯಾಸಿ ಎಂದು ಕರೆಯುತ್ತಾರೆ. ಶೀಲಪಥದಲ್ಲಿ ನಡೆಯುತ್ತ ಅಂತರಂಗದ ಶಾಂತಿಯನ್ನು ಬಯಸುವವನು. ಎಲ್ಲ ಕೆಟ್ಟುದನ್ನು ದೂರೀಕರಿಸುತ್ತ ಒಳ್ಳೆಯ ಕೆಲಸಗಳಲ್ಲೇ ನಿರತನಾಗಿರುವವನು. ತನ್ನ ಬದುಕಿಗಾಗಿ ಮನೆಮನೆಗೆ ಹೋಗಿ ಭಿಕ್ಷೆಯನ್ನು ಬೇಡಿ ಊಟವನ್ನು ಸಂಪಾದಿಸುತ್ತಾನೆ. ಆ ದಿನಕ್ಕೆ ಆಗುವಷ್ಟು ದೊರೆತ ಮೇಲೆ ತನ್ನ ಜಾಗಕ್ಕೆ ಹಿಂತಿರುಗುತ್ತಾನೆ."

ಸಿದ್ಧಾರ್ಥನು ಮತ್ತೆ ಕೇಳಿದನು: "ಅನ್ನವನ್ನು ಸಂಗ್ರಹಿಸುವಾಗ ಏನನ್ನು ಮಾಡುತ್ತಾನೆ?" ಅದಕ್ಕೆ ಚನ್ನನು "ತನ್ನ ಬವನಾಸಿಯಲ್ಲಿ ಊಟವನ್ನು ತೆಗೆದುಕೊಂಡ ಮೇಲೆ ಅದಕ್ಕೆ ಪ್ರತಿಯಾಗಿ ಅವರಿಗೆ ಮಂಗಳವನ್ನು ಹರಸುತ್ತಾನೆ, ನೀತಿವಂತರಾಗಿ ಸುಖದಿಂದ ಬದುಕಿರೆಂದು ಹೇಳುತ್ತಾನೆ" ಎಂದನು.

ಮತ್ತೆ ಸಿದ್ಧಾರ್ಥನು "ಯಾವರೀತಿಯ ನೀತಿಯುತವಾದ ಬದುಕನ್ನು ಬಾಳುತ್ತಾನೆ?" ಚೆನ್ನನು ಹೇಳಿದನು: "ಅವನು ದಶಕುಶಲ ಕಮ್ಮಪಥವನ್ನು ಅನುಸರಿಸುತ್ತಾನೆ. ಪ್ರಾಣಿ ಹಿಂಸೆಯನ್ನು ಮಾಡುವುದಿಲ್ಲ ಬದಲಾಗಿ ಎಲ್ಲ ಜೀವಿಗಳನ್ನು ಕಾಪಾಡುತ್ತಾನೆ, ರಕ್ಷಿಸುತ್ತಾನೆ. ಕಳ್ಳತನವನ್ನು ಮಾಡುವುದಿಲ್ಲ ಬದಲಾಗಿ ಕೊಡುತ್ತಾನೆ. ಅವನು ಬ್ರಹ್ಮಚಾರಿ, ಪವಿತ್ರ ಜೀವನವನ್ನು ನಡೆಸುತ್ತಾನೆ. ಮದ್ಯಪಾನ ಮಾಡುವುದಿಲ್ಲ, ಅಫೀಮು ಇತ್ಯಾದಿಗಳಿಗೆ ಗುಲಾಮನಲ್ಲ. ಸುಳ್ಳನ್ನು ಹೇಳುವುದಿಲ್ಲ, ಯಾವಾಗಲೂ ನಿಜವನ್ನೇ ಹೇಳುತ್ತಾನೆ. ನಿಂದಿಸುವುದಿಲ್ಲ, ಯಾವಾಗಲೂ ಜನರಲ್ಲಿ ಒಳ್ಳೆಯದನ್ನೇ ಬಯಸುತ್ತಾನೆ; ಇನ್ನೊಬ್ಬರನ್ನು ದೂರುವುದಿಲ್ಲ, ಆದರೆ ನಯವಾಗಿ ಪ್ರೀತಿಯಿಂದ ಮಾತನಾಡಿಸುತ್ತಾನೆ. ಚಾಡಿ ಹೇಳದೆ ಮೌನದಿಂದಿರುತ್ತಾನೆ. ಅವಶ್ಯವಿದ್ದಾಗ ಮಾತನಾಡುತ್ತಾನೆ, ನೀತಿ ಮಾರ್ಗದ ಬಗ್ಗೆ



ಮಾತನಾಡುತ್ತಾನೆ. ಅವನು ಲೋಭಿಯಲ್ಲ, ದ್ವೇಷಿಸುವುದಿಲ್ಲ, ತಪ್ಪು ಅಭಿಪ್ರಾಯಗಳನ್ನಾಗಲಿ ನಂಬಿಕೆಗಳನ್ನಾಗಲಿ ಇಟ್ಟುಕೊಂಡಿರುವುದಿಲ್ಲ. ಆದ್ದರಿಂದ ಅವನು ಕಾಂತಿಯುತವಾಗಿ ಹಸನ್ಮುಖಿಯಾಗಿ ಇರುವುದು". ಸಿದ್ಧಾರ್ಥನು ಚನ್ನನ ಮಾತುಗಳಿಂದ ಪ್ರಭಾವಿತನಾಗಿ ಹೀಗೆ ಯೋಚಿಸಿದನು: 'ನಾನು ಇನ್ನುಮುಂದೆ ಇಂತಹ ಜೀವನವನ್ನೇ ನಡೆಸಬೇಕು.'

ಬುದ್ಧವಂಶ ಅಟ್ಠಕಥೆ ಮತ್ತು ಜಿನಲಂಕಾರ ಟೀಕಾ ಮುಂತಾದ ಟೀಕಾ ಸಾಹಿತ್ಯದಲ್ಲಿ ಈ ಕೆಳಗೆ ಕಾಣಿಸಿದ ಹತ್ತು ಬಗೆಯ ಕುಶಲ ಕಮ್ಮಗಳೇ (ಕಮ್ಮಪಥ) ಒಬ್ಬನ ಭವಿಷ್ಯವನ್ನು ನಿರ್ಧರಿಸುವ ಗುಣಗಳಾಗಿರುತ್ತವೆ. ಹತ್ತು ಬಗೆಯ ಕಮ್ಮಪಥಗಳು ಈ ಕೆಳಗಿನ ನಾಲ್ಕು ಪದಗಳಲ್ಲಿ ಮಿಳಿತಗೊಂಡಿವೆ:

1. ಧಮ್ಮ ಕಮ್ಮಪಥ
2. ಸಮ ಕಮ್ಮಪಥ
3. ಕುಶಲ ಕಮ್ಮಪಥ
4. ಪುಣ್ಯ ಕಮ್ಮಪಥ

ಧಮ್ಮವೆಂದರೆ ಹತ್ತು ರೀತಿಯ ಪಾರಮಾರ್ಥಿಕ ಕಮ್ಮಗಳು. ಅವೇ ಒಬ್ಬನನ್ನು ಅಂತಿಮ ಸತ್ಯ ಅಥವಾ ನಿಬ್ಬಾಣದತ್ತ ಕೊಂಡೊಯ್ಯುವಂತಹವು.

ಸಮ ಎಂದರೆ ಶಾಂತಿಯುತವಾದ ಕಮ್ಮ. ಈ ಬಗೆಯ ಕಮ್ಮಗಳ ಮೂಲಕವೇ ಒಬ್ಬನು ಬದುಕಿನಲ್ಲಿ ಆಂತರಿಕ ಶಾಂತಿಯನ್ನು ಇಲ್ಲಿಯೇ ಈಗಲೇ ಮತ್ತು ಮುಂದೆಯೂ ಹೊಂದಬಹುದು.

ಕುಶಲ ಎಂದರೆ ಕಳಂಕರಹಿತವಾದ ನೀತಿಯುತವಾದ ಕುಶಲ ಕಮ್ಮ. ಇಂತಹ ಕುಶಲ ಕಮ್ಮಗಳ ಮೂಲಕವೇ ಒಬ್ಬನು ನಿಜವಾಗಿಯೂ ಕಳಂಕರಹಿತವಾದ ಸತ್ವಯುತವಾದ ಬದುಕನ್ನು ಸಾಗಿಸುತ್ತಲೇ ಇಲ್ಲೇ ಈಗಲೇ ಮತ್ತು ಮುಂದೆಯೂ ನಿಬ್ಬಾಣ ಹೊಂದಬಹುದು.

ಪುಣ್ಯವೆಂದರೆ ಒಬ್ಬನು ಪ್ರಶಂಸನಾರ್ಹವಾದ ಅಥವಾ ಒಳ್ಳೆಯ ಕಮ್ಮಗಳನ್ನು ಮಾಡುತ್ತಾ ಸಾರ್ಥಕವಾದ ಬದುಕನ್ನು ಸಾಗಿಸುತ್ತಾ ಎಲ್ಲ ಒಳ್ಳೆಯ ಸಂಗತಿಗಳನ್ನು ಇಲ್ಲಿಯೇ ಈಗಲೇ ಮತ್ತು ಮುಂದೆಯೂ ಹೊಂದುವಂತಹುದು. ಹೀಗೆ ಹತ್ತು ರೀತಿಯ ಕಮ್ಮಪಥಗಳು ಗಂಭೀರವೂ ಮತ್ತು ಅರ್ಥಪೂರ್ಣವಾಗಿಯೂ ಇವೆ.

### ಆರು ವರ್ಷಗಳ ನೋವಿನ ದೇಹದಂಡನೆ

ಪಾರಮಾರ್ಥಿಕ ಸಾಧನೆಗಾಗಿ ಕುಲೀನ ಮನೆತನದವರಿಗೆ ಇದು ಪ್ರಶಸ್ತವಾದ ಜಾಗವೆಂದು ಸಿದ್ಧಾರ್ಥನು ಉರುವೇಲ ಅರಣ್ಯದಲ್ಲಿ ನೆಲೆಸಿದನು. ಅಲ್ಲಿ ಸಿಗುವ ರೆಂಬೆ ಎಲೆಗಳಿಂದಲೇ ಒಂದು ಸಣ್ಣ ಗುಡಿಸಲನ್ನು ನಿರ್ಮಿಸಿಕೊಂಡು ಧ್ಯಾನದಲ್ಲಿ ತೊಡಗಿದನು.

ಎಂಟು ಜ್ಯೋತಿಷಿಗಳಲ್ಲಿ ಅತಿ ಚಿಕ್ಕವನಾದ ಕೊಂಡನ್ನನು ಬೋಧಿಸತ್ವ ಸಿದ್ಧಾರ್ಥನು ತನ್ನ ಇಪ್ಪತ್ತೊಂಬತ್ತನೆಯ ವಯಸ್ಸಿನಲ್ಲಿ ಮನೆಯನ್ನು ತೊರೆದನೆಂದು ತಿಳಿದನು. ಇದೇ ಕೊಂಡನ್ನನೇ ರಾಜಕುಮಾರ ಸಿದ್ಧಾರ್ಥನ ನಾಮಕರಣ ದಿನದಂದು ಬೆರಳನ್ನೆತ್ತಿ

ಭವಿಷ್ಯವನ್ನು ನುಡಿಯುವೆನೆಂದು ಹೇಳಿ ಮುಂದೊಂದು ದಿನ ಇವನು ಬುದ್ಧನಾಗುತ್ತಾನೆ, ಚಕ್ರವರ್ತಿ ಮಹಾರಾಜನಾಗುವುದಿಲ್ಲವೆಂದು ಹೇಳಿದ್ದನು. ಬೇರೆಯವರು ಈ ಬಗ್ಗೆ ಖಚಿತವಿಲ್ಲದುದರಿಂದ ಎರಡು ಬೆರಳನ್ನೆತ್ತಿದ್ದರು.

ಬುದ್ಧವಂಶ ಅಟ್ಠಕಥೆ ಮತ್ತು ಜಾತಕ ನಿದಾನದ ಪ್ರಕಾರ ಈಗ ವಿರಾಗಿಯಾದ ಕೊಂಡನ್ನನು ಮತ್ತು ಇನ್ನಿತರ ಜ್ಯೋತಿಷ್ಯಗಾರರ ನಾಲ್ಕು ಪುತ್ರರು ಒಟ್ಟು ಐದುಜನ ವಿರಾಗಿಗಳಾಗಿದ್ದರು. ಅವರೆಂದರೆ: ಕೊಂಡನ್ನ, ಭದ್ದಿಯ, ವಪ್ಪ, ಮಹಾನಾಮ ಮತ್ತು ಅಸ್ಸಾಜಿ. ಇವರೆಲ್ಲಾ ಬೋಧಿಸತ್ವನು ಮನೆ ತೊರೆಯುವುದನ್ನೇ ಕಾಯುತ್ತಿದ್ದು ಪರಿವ್ರಾಜಕರಾಗಿ ನಡೆಯುತ್ತಿದ್ದರು. ಬೋಧಿಸತ್ವನು ಉದ್ದಕ ರಾಮಪುತ್ತನ ಆಶ್ರಮಕ್ಕೆ ಬಂದಾಗ ಇವರೆಲ್ಲಾ ಉದ್ದಕನ ಅಡಿಯಲ್ಲಿ ಸಂನ್ಯಾಸ ಜೀವನವನ್ನು ನಡೆಸುತ್ತಿದ್ದರು. ಬೋಧಿಸತ್ವ ಗೌತಮನೂ ಕೂಡ ಉದ್ದಕನ ಆಶ್ರಮದಲ್ಲಿ ಧ್ಯಾನ ಸಾಧನೆಯಲ್ಲಿ ತೊಡಗಿದನು. ಅಲ್ಲಿ ಬೋಧಿಸತ್ವನು ಅತ್ಯಂತ ತುರೀಯ ಅರೂಪಜ್ಝಾನವಾದ ನೇವಸಞ್ಞಾನಾಸಞ್ಞಾಯತನ ಧ್ಯಾನ ಹಂತವನ್ನು ತನ್ನ ಗುರುವಿನಂತೆಯೇ ಸಾಧಿಸಿ ಹೊಂದಿದನು. ಆಲಾರಕಾಲಾಮ ಗುರುಗಳ ಬಳಿ ಆದಂತೆಯೇ ಉದ್ದಕ ರಾಮಪುತ್ತರ ಬಳಿ ಏನು ಸಾಧಿಸಿದನೋ ಅದು ತೃಪ್ತಿತರಲಿಲ್ಲ. ಹೀಗೆ ಬೋಧಿಸತ್ವ ಸಿದ್ಧಾರ್ಥನು ಉದ್ದಕ ರಾಮಪುತ್ತರನ್ನು ಬಿಟ್ಟಮೇಲೆ ಈ ಐದುಜನ ಸಾಧಕ ವಿರಾಗಿಗಳೂ ಬೋಧಿಸತ್ವನನ್ನು ಹಿಂಬಾಲಿಸಿ ಉರುವೇಲದ ಗರಿ ಗುಡಿಸಿಲವರೆಗೂ ಬಂದು ತಮ್ಮನ್ನು ಶಿಷ್ಯರನ್ನಾಗಿ ಸ್ವೀಕರಿಸಲು ವಿನಂತಿಸಿದರು. ಇವರೆಲ್ಲರ ಆಲೋಚನೆ 'ಮುಂದೆ ಕೂಡಲೇ ಈತನು ಬುದ್ಧನಾಗುವವನಿದ್ದಾನೆ' ಎಂಬುದಾಗಿತ್ತು. ಆ ದಿನಕ್ಕಾಗಿ ಕಾಯಲು ಅಲ್ಲಿ ಕಸ ಗುಡಿಸುವ, ನೀರು ತರುವ ಮುಂತಾದ ಕಾರ್ಯಗಳನ್ನು ತುಂಬಾ ಶ್ರದ್ಧೆಯಿಂದ ಮಾಡುತ್ತಿದ್ದರು.

ಬೋಧಿಸತ್ವನು ತನ್ನ ನಿತ್ಯ ಭಿಕ್ಷೆಗಾಗಿ ಸೇನಾನಿಗಾಮಕ್ಕೆ ಹೋಗುತ್ತಾ ಮೈತ್ರಿ ಧ್ಯಾನವನ್ನು ಮಾಡುತ್ತಾ ದಿನಗಳನ್ನು ಕಳೆದನು. ಹೀಗಿರಲು ಅವನಿಗೊಂದು ಆಲೋಚನೆ ಅಂಕುರಿಸಿತು. ಮಹಾಸಚ್ಚಕ ಸುತ್ತದ (ಮಜ್ಝಿಮನಿಕಾಯ-36) ಪ್ರಕಾರ ಮೂರು ಉಪಮೆಗಳು ಸ್ಪಷ್ಟ ಸಂದೇಶಗಳನ್ನು ಹೇಳುವಂತಿದ್ದವು. ಮೊದಲನೇ ಉಪಮೆಯಲ್ಲಿ ಬೋಧಿಸತ್ವನು ಅರಣ್ಯದ ಕೊಳವೊಂದರಲ್ಲಿ ಸಣ್ಣ ಮರದ ತುಂಡೊಂದು ತೇಲುತ್ತಿರುವುದನ್ನು ಭಾವಿಸಿದನು. ಈ ದೃಶ್ಯ ಈ ಸಂದೇಶವನ್ನು ಕೊಟ್ಟಿತು: ಜನ ನೀಡುವ ಭಿಕ್ಷೆಯಿಂದ ಬದುಕುವ, ಹೆಂಡತಿ ಮಕ್ಕಳನ್ನು ಹೊಂದಿರುವ ಒಬ್ಬ ಪರಿವ್ರಾಜಕನನ್ನು ಮೇಲಿನ ದೃಶ್ಯಕ್ಕೆ ಹೋಲಿಸಬಹುದು. ತೇವಗೊಂಡ ಮರದ ತುಂಡನ್ನು ಬೆಂಕಿ ಸೃಷ್ಟಿಸುವ ಮರದ ತುಂಡಿಗೆ ಉಜ್ಜಿದರೂ ಹೇಗೆ ಬೆಂಕಿ ಸೃಷ್ಟಿಯಾಗುವುದಿಲ್ಲವೋ ಹಾಗೇ ಇಂದ್ರಿಯಗಳಲ್ಲಿ ಮುಳುಗಿರುವ ವ್ಯಕ್ತಿ ಎಷ್ಟೇ ಶ್ರಮದಿಂದ ಪ್ರಯತ್ನಪಟ್ಟರೂ ನಿಬ್ಬಾಣವನ್ನು ಹೊಂದಲಾರ. ಇದನ್ನು ಸಪುತ್ತಭರಿಯಾ ಪಬ್ಬಜ್ಜ ಎನ್ನುತ್ತಾರೆ.

ಎರಡನೇ ಉಪಮೆಯಲ್ಲಿ ಬೋಧಿಸತ್ವನು ನೀರಿನಲ್ಲಿದ್ದ ಮರದ ತುಂಡೊಂದನ್ನು ಹೊರತೆಗೆದು ಅದನ್ನು ಒಣಗಿದ ಕೊಳದ ದಡದಲ್ಲಿ ಹಾಕಿರುವ ದೃಶ್ಯವನ್ನು ಕಂಡುದು.



ಈ ದೃಶ್ಯವು ಮನೆಯನ್ನು ತೊರೆದ ಬೈರಾಗಿಗಳು, ಸಂನ್ಯಾಸಿಗಳು ಇನ್ನೂ ಪ್ರಾಪಂಚಿಕ ವ್ಯವಸ್ಥೆಗೆ ಅಂಟಿಕೊಂಡು, ಯಜ್ಞ ಯಾಗಾದಿಗಳನ್ನು ಮಾಡಿಕೊಂಡಿರುವುದನ್ನು ಸೂಚಿಸಿತು. ಅವರು ತಮ್ಮ ಇಂದ್ರಿಯ ಭೋಗಲಾಲಸೆಗಳಿಂದ ದೂರವಾಗಿಲ್ಲ. ಧಾರ್ಮಿಕ ಗುರುಗಳಾಗಿ ಅವರು ಗ್ರಾಮ ನಗರಗಳಿಂದ ದೂರವಾದ ಒಣ ಭೂಮಿಗಳಲ್ಲಿ ಆಶ್ರಮಗಳನ್ನು ಕಟ್ಟಿಕೊಂಡಿದ್ದರೂ ಅನುಕೂಲವಾದ ವ್ಯವಸ್ಥೆಯಲ್ಲಿದ್ದುಕೊಂಡು ಇಂದ್ರಿಯ ಭೋಗಗಳಲ್ಲೇ ಮುಳುಗಿರುತ್ತಾರೆ. ಈ ರೀತಿಯ ವಿರಾಗಿಗಳನ್ನು ಜಾತಿಯ ಧಾರ್ಮಿಕ ಗುರುಗಳಿಗೆ ಹೋಲಿಸುವಂತಿದ್ದು ಅವರು ಧಮ್ಮವನ್ನು ತಪ್ಪಾಗಿ ಅರ್ಥೈಸಿಕೊಂಡು ಪಾರಮಾರ್ಥಿಕ ಜೀವನವನ್ನು ನಡೆಸುತ್ತಿದ್ದರು.

ಇನ್ನುಮುಂದಿನ ಉಪಮೆಯಲ್ಲಿ ಮರದ ತುಂಡೊಂದು ಅರಣ್ಯದ ಒಣಗಿದ ನೆಲದ ಮೇಲೆ ಬಿದ್ದಿತ್ತು. ಇದು ಈ ರೀತಿಯ ಸಂದೇಶವನ್ನು ನೀಡಿತು: 'ಮನೆಯನ್ನು ತೊರೆದು ಇಂದ್ರಿಯ ಭೋಗಗಳಿಂದ ದೂರವಿರುವ ಸಂನ್ಯಾಸಿಗೆ ಈ ದೃಶ್ಯವನ್ನು ಹೋಲಿಸುವಂತಿತ್ತು. ಈ ಮೂರನೇ ಉಪಮೆಗೆ ತನ್ನನ್ನು ಹೋಲಿಸಿಕೊಳ್ಳಬಹುದೆಂದು ತೃಪ್ತಿಗೊಂಡು ಮುಂದಿನ ತಪಸ್ಸಿಗೆ ಸಿದ್ಧನಾಗಲು ತೀರ್ಮಾನಿಸಿದನು.

ಮಹಾಸಚ್ಚಕ ಸುತ್ತ (ಮಜ್ಝಿಮನಿಕಾಯ-36) ಮತ್ತು ಭಯಭೇರವ ಸುತ್ತ (ಮಜ್ಝಿಮನಿಕಾಯ-4) ಗಳು ಬೋಧಿಸತ್ವನು ಆರು ವರ್ಷಗಳ ಕಾಲ ಉರುವೇಲ ಅರಣ್ಯದಲ್ಲಿದ್ದುಕೊಂಡು ಹೇಗೆ ಹಿಂಸಾತ್ಮಕವಾದ ದೇಹದಂಡನೆಯಲ್ಲಿ ತೊಡಗಿದ್ದನೆಂಬ ವಿವರಗಳನ್ನು ನೀಡುತ್ತವೆ. ಹಲವು ರೀತಿಯ ತಪಸ್ಸು ಅಥವಾ ದೇಹದಂಡನೆಯ ರೂಪಗಳನ್ನು ವಿಶಾಲವಾಗಿ ಈ ಕೆಳಗಿನಂತೆ ವರ್ಗೀಕರಿಸಬಹುದು:

1. ಕೇವಲ ದೇಹದಂಡನೆಯಿಂದಲೇ ಆಲೋಚನೆಗಳನ್ನು ನಿಯಂತ್ರಿಸುವ ಹಿಂಸಾತ್ಮಕ ವಿಧಾನಗಳು.
2. ಉಸಿರಾಟವನ್ನು ನಿಲ್ಲಿಸುವ ಹಲವಾರು ಹಿಂಸಾತ್ಮಕ ಪ್ರಾಣಾಯಾಮ ವಿಧಾನಗಳು.
3. ಉಪವಾಸ ಅಥವಾ ಆಹಾರ ನಿಯಂತ್ರಿಸುವ ಹಿಂಸಾತ್ಮಕ ವಿಧಾನಗಳು.

ಸಾವತ್ಥಿಯ ಬಳಿ ಇರುವ ಅನಾಥಪಿಂಡಿಕಾರಾಮದಲ್ಲಿರುವ ಸಂದರ್ಭದಲ್ಲಿ ಭಗವಾನ್ ಬುದ್ಧರು ಬ್ರಾಹ್ಮಣ ಜಾನುಸ್ಸೋನಿಯೊಂದಿಗೆ ತನ್ನ ಹಿಂದಿನ ಜೀವನದ ಬಗ್ಗೆ ಮಾತನಾಡುತ್ತಿದ್ದರು. ಜಾನುಸ್ಸೋನಿಯು ವೇದಪಾರಂಗತನು ಮತ್ತು ಒಂದು ಬ್ರಾಹ್ಮಣ ಗುಂಪಿನ ಮುಖ್ಯಸ್ಥನಾಗಿದ್ದು, ದೊಡ್ಡ ಶಿಷ್ಯ ಸಮೂಹವೇ ಅವನ ಹಿಂದಿತ್ತು. ಜಾನುಸ್ಸೋನಿಯು ಕೇಳುತ್ತಾನೆ: "ನಿಮ್ಮ ಮುಂದೆ ಯಾರೆಲ್ಲಾ ಭಿಕ್ಷುಗಳಿದ್ದಾರೆ, ಅವರೆಲ್ಲಾ ನೀವು ನಡೆದುಕೊಂಡಂತೆಯೇ ಅನುಸರಿಸುವರೇ?"

ಬುದ್ಧರು ಹೌದೆಂದರು. ಜಾನುಸ್ಸೋನಿ ಕೇಳಿದನು: 'ಈ ದೂರ ಅರಣ್ಯದ ಬದುಕನ್ನು ಸಹಿಸಿಕೊಳ್ಳಲು ಮತ್ತು ಏಕಾಗ್ರತೆ ಇಲ್ಲದವರು ಏಕಾಂಗಿಯಾಗಿ ಇಂತಹ ಸ್ಥಳದಲ್ಲಿ ಧ್ಯಾನಸಾಧನೆ ಮಾಡಲು ಕಷ್ಟವಾಗುತ್ತದೆ."

"ನಿಜ, ಬ್ರಾಹ್ಮಣ, ಯಾರಿಗೆ ಏಕಾಗ್ರತೆ ಇಲ್ಲವೋ ಅವರಿಗೆ ಕಷ್ಟವೇ" ಎಂದು ಬುದ್ಧರು ಹೇಳಿದರು. ಭಗವಾನರು ತಾವು ಉರುವೇಲ ಅರಣ್ಯದಲ್ಲಿದ್ದಾಗ ಹೇಗೆ ಧ್ಯಾನ ಸಾಧನೆ ಗೈಯುತ್ತಿದ್ದರೆಂಬ ವಿವರಗಳು ನೀಡಿದರು.

"ನಾನು ಇನ್ನೂ ಬೋಧಿಜ್ಞಾನವನ್ನು ಪಡೆಯದಿರದ ಬೋಧಿಸತ್ವನಾಗಿದ್ದಾಗ ಆಂತರಿಕ ಶಾಂತಿಯನ್ನು ಮತ್ತು ಏಕಾಗ್ರತೆಯನ್ನು ಪಡೆಯದಿರುವ ಭಿಕ್ಷುವಿಗೆ ದೂರದ ಕಾನನದಲ್ಲಿರುವುದು ಕಷ್ಟವೆಂಬುದನ್ನು ನಾನೂ ಯೋಚಿಸಿದ್ದೆ. ಯಾವ ಅರಣ್ಯವಾಸಿಯ ಮನಸ್ಸು ಅಪರಿಶುದ್ಧವೋ ಅವನು ಭಯಕ್ಕೆ ಒಳಗಾಗುವವನೇ. ಅಲ್ಲಿ ನಾನು ಹೀಗೆ ಚಿಂತನೆ ಮಾಡಿದೆ: "ನಾನು ಜನ ನಿವಾಸದಿಂದ ದೂರವಿರುವ ಕಾನನದಲ್ಲಿದ್ದೇನೆ. ಆದರೆ ನಾನು ಪರಿಶುದ್ಧವಾದ ಜೀವನವನ್ನು ನಡೆಸುವವನು. ನನ್ನ ಬದುಕು ಪರಿಶುದ್ಧವಾಗಿರುವುದರಿಂದ ನಾನು ಯಾವುದಕ್ಕೂ ಭಯಪಡಬೇಕಾದುದಿಲ್ಲ." ಈ ಸತ್ಯದ ಸಂಕಲ್ಪದಿಂದಲೇ ನನಗೆ ಸಮಾಧಾನ ದೊರೆಯಿತು.

"ಇದೇರೀತಿಯಲ್ಲೇ ಯಾರು ಮಾನಸಿಕ ಕ್ಲೇಶ, ಲೋಭ ಮೋಹ ದ್ವೇಷ, ಅಪನಂಬಿಕೆ, ಸೋಮಾರಿತನ, ಅಶಾಂತಿ, ಸ್ವಯಂ ಪ್ರಶಂಸೆ, ಬೇರೆಯವರನ್ನು ತೆಗಳುವುದು ಮುಂತಾದ ಆಚರಣೆಗಳನ್ನು ಗೆದ್ದಿಲ್ಲವೋ ಅವರು ತಮ್ಮ ಧಾರ್ಮಿಕ ಬದುಕಿನಿಂದ ಗೌರವ ಸಮ್ಮಾನಗಳು ದೊರಕುತ್ತಿಲ್ಲವೆಂಬ ಏಕಾಗ್ರ ಹೀನತೆಯಿಂದ ಮತ್ತು ಅಕುಶಲ ಚಿತ್ತದಿಂದ ನರಳುತ್ತಾರೆ. ನನ್ನ ಬದುಕಿನ ರೀತಿಯನ್ನು ಪರಿಶುದ್ಧಿಗೊಳಿಸಿಕೊಂಡಿರುವುದರಿಂದ ಈ ಎಲ್ಲ ರಾಗ ಕ್ಲೇಶಗಳನ್ನು ಗೆದ್ದಿರುವುದರಿಂದ ನಾನು ಯಾವುದೇ ರೀತಿಯ ಭಯ ಅಡಚಣೆಗಳಿಂದ ತೊಂದರೆಗೊಳಗಾಗಿಲ್ಲ. ನನ್ನಲ್ಲಿ ಆಂತರಿಕ ಶಾಂತಿ ಮತ್ತು ಏಕಾಗ್ರತೆ ಇದೆ.

"ಹೀಗೆ ನನ್ನನ್ನು ನಾನೇ ಸಮರ್ಥಿಸಿಕೊಂಡು ಯೋಚಿಸಿದೆ: 'ನನ್ನಲ್ಲಿ ಭಯ ತೊಡಕುಗಳಿವೆಯೇ ಎಂಬುದನ್ನು ಪರೀಕ್ಷಿಸಿಕೊಳ್ಳಲು, ಹುಣ್ಣಿಮೆ ಅಮವಾಸ್ಯೆ ಎಂಟನೆಯದಿನ ಇಂತಹ ವಿಶೇಷ ರಾತ್ರಿಗಳಲ್ಲಿ ಅರಣ್ಯ ದೇಗುಲಗಳಲ್ಲಿ, ಭೂತಗಳಿರುವ ಜಾಗಗಳಲ್ಲಿ, ಮರದ ಗೋರಿಗಳಲ್ಲಿ, ಸ್ಮಶಾನ ಮುಂತಾದ ಭಯಾನಕ ಸ್ಥಳಗಳಲ್ಲಿ ಏಕೆ ಉಳಿಯಬಾರದೆಂದು ಯೋಚಿಸಿದೆ.

"ಹಾಗೆಯೇ ನಾನು ಅಂತಹ ಭಯಾನಕ ಜಾಗಗಳಲ್ಲಿ ಉಳಿಯಲು ಪ್ರಾರಂಭಿಸಿದೆ. ಹೀಗೆ ಉಳಿಯುತ್ತಿರಲು ಕೆಲವೊಮ್ಮೆ ಕ್ರೂರ ಪ್ರಾಣಿಯೊಂದು ನನ್ನ ಬಳಿ ಬರುವುದು ಅಥವಾ ನವಿಲು ಮರದ ಸಣ್ಣ ರೆಂಬೆಯನ್ನು ಕೆಳಗೆ ಹಾಕುವುದು ಅಥವಾ ಗಾಳಿಗೆ ಮರದ ಎಲೆಗಳು ಅಲ್ಲಾಡುವುದು ಆದಾಗ ನಾನು ನನ್ನಲ್ಲೇ ಯೋಚಿಸಿ ಆಶ್ಚರ್ಯಗೊಳ್ಳುತ್ತಿದೆ; 'ಏನು ಭಯ ಬರುತ್ತಿದೆಯೇ?' ಹೀಗೆ ಭಯ ಬರುತ್ತಿರುವುದನ್ನು ಎದುರು ನೋಡುತ್ತಾ ಅಲ್ಲಿಯೇ ನಿಲ್ಲುತ್ತಿದ್ದೆ, ಮತ್ತೆ ಹೀಗೆ ಯೋಚನೆ ಬರುತ್ತಿತ್ತು: 'ನಾನೇಕೆ ಭಯವನ್ನು ಭಯದ ನಿರೀಕ್ಷೆಯನ್ನು ಹತ್ತಿಕ್ಕಬಾರದು?' ನಾನು ಈ ವಿಧಾನವನ್ನೇ ನಡೆಯುವಾಗಲೂ, ಕುಳಿತಾಗಲೂ ಮತ್ತು ಮಲಗಿಕೊಂಡ ಸಂದರ್ಭಗಳಲ್ಲೂ



ಆಚರಿಸುತ್ತಿದ್ದೆ. ಯಾವ ರೂಪವೇ ನನ್ನ ಮುಂದೆ ಬರಲಿ, ನಾನು ಆ ಭಯವನ್ನು ಯಾವ ಸ್ಥಿತಿಯಲ್ಲಿ ಇರುತ್ತಿದ್ದೆನೋ ಆ ಸ್ಥಿತಿಯಿಂದಲೇ ಅದನ್ನು ಎದುರಿಸುತ್ತಿದ್ದೆ. ಆದರೆ ಇರುವ ಭಂಗಿಯನ್ನು (Posture) ಮಾತ್ರ ಬದಲಿಸುತ್ತಿರಲಿಲ್ಲ.

"ಅರಣ್ಯದಲ್ಲಿ ವಿರಾಗಿಗಳು ಸಮಣರು ವಾಸಿಸುತ್ತಿದ್ದ ಅವರು ರಾತ್ರಿಯನ್ನು ದಿನವೆಂದೂ, ದಿನವನ್ನು ರಾತ್ರಿಯೆಂದು ಭಾವಿಸಿ ಭ್ರಮೆಯಲ್ಲಿ ಬದುಕುತ್ತಿದ್ದರು. ಆದರೆ ನನಗೆ ದಿನವು ದಿನವೇ, ರಾತ್ರಿಯು ರಾತ್ರಿಯೇ. ನನ್ನಲ್ಲಿ ಭ್ರಮೆಗೆ ಅವಕಾಶವಿರಲಿಲ್ಲ. ನಾನು ಅವಿರತ ಪ್ರಯತ್ನವನ್ನು ಮತ್ತು ಚದುರಿಹೋಗದ ಮನಸ್ಸನ್ನು ಬೆಳೆಸಿಕೊಂಡೆ. ನನ್ನ ದೇಹವು ಶಾಂತವಾಗಿಯೂ ಮನಸ್ಸು ಏಕಾಗ್ರತೆಯಿಂದಲೂ ಮುಕ್ತವಾಗಿಯೂ ಇತ್ತು. ಹೀಗೆ ನಾನು ಎಲ್ಲ ಝಾನಗಳನ್ನೂ, ಲೋಕುತ್ತರ ನೇರಜ್ಞಾನವನ್ನು ಮತ್ತು ಶಕ್ತಿಗಳನ್ನು ಪಡೆದೆ."

ಮಹಾಸಚ್ಚಕ ಸುತ್ತದಲ್ಲಿ ಬುದ್ಧರು ಈ ಕೆಳಗೆ ಕಾಣಿಸಿದ ದೇಹದಂಡನೆಯ ರೀತಿಗಳನ್ನು ವಿವರಿಸುತ್ತಾರೆ: "ನನಗೆ ಹೀಗೆನ್ನಿಸಿತು: 'ನಾನೇಕೆ ಹಲ್ಲುಗಳನ್ನು ಬಿಗಿಹಿಡಿದು ನಾಲಗೆಯನ್ನು ಅಂಗಳಕ್ಕೆ ಒತ್ತಿಹಿಡಿದು ಅಕುಶಲ ಆಲೋಚನೆಗಳನ್ನು ಕುಶಲ ಆಲೋಚನೆಗಳಿಂದ ಬಲವಂತದಿಂದ ಹತ್ತಿಕ್ಕಬಾರದು?' ಹೀಗೆ ನಾನು ಅಕುಶಲ ಆಲೋಚನೆಗಳನ್ನು ಕುಶಲ ಆಲೋಚನೆಗಳಿಂದ ಹತ್ತಿಕ್ಕಿದೆ. ಹೀಗೆ ಮಾಡಲು ನನ್ನ ಕಂಕುಳಿನಿಂದ ಬೆವರು ಸುರಿಯಿತು. ಹೇಗೆ ಒಬ್ಬ ಬಲಶಾಲಿಯು ಬಲಹೀನನನ್ನು ತಲೆಯಿಂದಲೋ, ಭುಜದಿಂದಲೋ ಮೇಲಕ್ಕೆತ್ತಿ ಕೆಳಗೆ ಅಪ್ಪಳಿಸುವನೋ ಹಾಗೆ ಬಿಗಿ ಹಲ್ಲುಗಳಿಂದ ನಾಲಗೆಯನ್ನು ಅಂಗಳಕ್ಕೆ ಒತ್ತುತ್ತಾ ಬಲವಂತದಿಂದ ನನ್ನಲ್ಲೇಳುತ್ತಿದ್ದ ಅಕುಶಲ ಆಲೋಚನೆಗಳನ್ನು, ಕುಶಲ ಆಲೋಚನೆಗಳಿಂದ ಹತ್ತಿಕ್ಕುತ್ತಿರಲು ಕಂಕುಳಿನಲ್ಲಿ ಬೆವರು ಸುರಿಯಿತು.

"ದುರ್ದಮ್ಯವಾದ ಪ್ರಯತ್ನ ಮತ್ತು ಏಕ ಪ್ರಕಾರವಾದ ಮನಸ್ಸಿನಿಂದ ಮಾಡುತ್ತಿರಲು ದೇಹ ದಣಿದು ಮನಸ್ಸು ಅಶಾಂತವಾಯಿತು, ವೇದನೆಗಳಿಂದ ಕುಗ್ಗಿಹೋದೆ. ದೈಹಿಕವಾಗಿ ಎಷ್ಟೇ ನೋವಾದರೂ ನನ್ನ ಮನಸ್ಸು ಸ್ವ–ದೇಹದಂಡನೆಯಿಂದ ವಿಚಲಿತವಾಗಲಿಲ್ಲ.

"ಆಗ ಹೀಗೊಂದು ಆಲೋಚನೆ ಹೊಳೆಯಿತು: 'ನಾನೇಕೆ ಅಪ್ಪಾನಕ ಝಾನವನ್ನು (ಉಸಿರಾಟವಿರದ ಧ್ಯಾನಸ್ಥಿತಿ) ಅಭ್ಯಾಸ ಮಾಡಬಾರದು?' ಹೀಗೆ ನಾನು ಒಳ ಉಸಿರನ್ನು ಹೊರ ಉಸಿರನ್ನು ಮೂಗು ಬಾಯಿಗಳಿಂದ ನಿಲ್ಲಿಸಿದೆ. ಹೀಗೆ ಮಾಡುತ್ತಿರಲು ಗಾಳಿಯ ಶಬ್ದವೊಂದು ನನ್ನ ಕಿವಿಗಳಿಂದ ಹೊಮ್ಮಿತು. ಕಮ್ಮಾರನು ತಿದಿಯನ್ನು ಒತ್ತಿದರೆ ಹೇಗೆ ಬುಸ್ ಎಂಬ ಶಬ್ದ ಬರುತ್ತದೋ ಹಾಗೆ ನಾನು ಒಳ–ಹೊರ ಉಸಿರುಗಳನ್ನು ಬಾಯಿ ಮೂಗುಗಳಿಂದ ನಿಲ್ಲಿಸಲು ನನ್ನ ಕರ್ಣ ರಂಧ್ರಗಳಿಂದ ಗಾಳಿಯ ಶಬ್ದ ಹೊರಹೊಮ್ಮಿತು.

"ದುರ್ದಮ್ಯವಾದ ಪ್ರಯತ್ನ ಮತ್ತು ಏಕ ಪ್ರಕಾರವಾದ ಮನಸ್ಸಿನಿಂದ ಮಾಡುತ್ತಿರಲು ದೇಹ ದಣಿಯಿತು, ಮನಸ್ಸು ಅಶಾಂತವಾಯಿತು, ವೇದನೆಗಳ ಭಾರಕ್ಕೆ ಕುಸಿದರೂ, ದೈಹಿಕವಾಗಿ ಎಷ್ಟೇ ನೋವಾದರೂ ನನ್ನ ಮನಸ್ಸು ನನ್ನ ದೇಹದಂಡನೆಯಿಂದ ವಿಚಲಿತವಾಗಲಿಲ್ಲ.

“ಮತ್ತೆ ನನ್ನಲ್ಲಿ ಈ ರೀತಿಯಾದ ಆಲೋಚನೆಯೊಂದು ಹೊಳೆಯಿತು: ‘ನಾನು ಏಕೆ ಈ ಅಪ್ಪಾನಕ ಝಾನವನ್ನು ಮುಂದುವರಿಸುತ್ತಾ ಹೋಗಬಾರದು?’ ಹೀಗೆ ನಾನು ಬಾಯಿ ಮೂಗು ಕಿವಿ ಮೂರು ದ್ವಾರಗಳ ಮೂಲಕ ಉಸಿರು ನಿಲ್ಲಿಸುವ ಧ್ಯಾನವನ್ನು ಮಾಡಿದೆನು. ಹೀಗೆ ಮಾಡಲು ತಲೆ ಭಾರವಾಗಿ ತಡೆಯಲಾರದಷ್ಟು ನೋವಾಯಿತು. ಒಬ್ಬ ಬಲಯುತವಾದ ವ್ಯಕ್ತಿ ನನ್ನ ತಲೆಗೆ ಚರ್ಮದ ಪಟ್ಟಿಯನ್ನು ಬಿಗಿದರೆ ಹೇಗೋ ಹಾಗೆ ಬಾಯಿ ಮೂಗು ಕಿವಿಗಳಿಂದ ಉಸಿರು ನಿಲ್ಲಿಸಿದ್ದರಿಂದಾಗಿ ತಡೆಯಲಾರದಷ್ಟು ನೋವಾಯಿತು.”

“ದುರ್ದಮ್ಯವಾದ ಪ್ರಯತ್ನ ಮತ್ತು ಏಕ ಪ್ರಕಾರವಾದ ಮನಸ್ಸಿನಿಂದ ಮಾಡುತ್ತಿರಲು ದೇಹ ದಣಿದು ಅಶಾಂತವಾಯಿತು. ವೇದನೆಯ ಭಾರಕ್ಕೆ ಕುಸಿದರೂ ದೈಹಿಕವಾಗಿ ಎಷ್ಟೇ ನೋವಾದರೂ ನನ್ನ ಮನಸ್ಸು ದೇಹದಂಡನೆಯಿಂದ ವಿಚಲಿತವಾಗಲಿಲ್ಲ.

“ಮತ್ತೆ ನನ್ನಲ್ಲಿ ಹೀಗೊಂದು ಆಲೋಚನೆ ಹೊಳೆಯಿತು: ‘ಅಪ್ಪಾನಕ ಝಾನವನ್ನು ನಾನು ಏಕೆ ಮುಂದುವರಿಸಬಾರದು?’ ಆದ್ದರಿಂದ ಬಾಯಿ ಮೂಗು ಕಿವಿಗಳಿಂದ ಉಸಿರನ್ನು ನಿಲ್ಲಿಸಿದೆನು. ಹೀಗೆ ಮಾಡಲು ಬಲವಾದ ಗಾಳಿ ನನ್ನ ಹೊಟ್ಟೆಯನ್ನು ಚುಚ್ಚಿತು. ಹೇಗೆ ಒಬ್ಬ ಚತುರ ಕಟುಕ ಅಥವಾ ಅವನ ಸಹಾಯಕ ತನ್ನ ಹರಿತವಾದ ಚಾಕುವಿನಿಂದ ದನದ ಹೊಟ್ಟೆಯೊಳಗೆ ಹಿರಿಯುತ್ತಾನೋ ಹಾಗೆ ನಾನು ಉಸಿರನ್ನು ಬಾಯಿ ಮೂಗು ಕಿವಿಗಳಿಂದ ನಿಲ್ಲಿಸಿದೆನೋ ಆಗ ಬಲವಾದ ಗಾಳಿಯು ನನ್ನ ಹೊಟ್ಟೆಯನ್ನು ಹಿರಿಯಿತು.

“ದುರ್ದಮ್ಯವಾದ ಪ್ರಯತ್ನ ಮತ್ತು ಏಕ ಪ್ರಕಾರವಾದ ಮನಸ್ಸಿನಿಂದ ಮಾಡುತ್ತಿರಲು ದೇಹ ದಣಿದು ಮನಸ್ಸು ಅಶಾಂತವಾಯಿತು. ವೇದನೆಗಳಿಂದ ಕುಗ್ಗಿಹೋದೆ. ದೈಹಿಕವಾಗಿ ಎಷ್ಟೇ ನೋವಾದರೂ ನನ್ನ ಮನಸ್ಸು ಸ್ವ–ದೇಹದಂಡನೆಯಿಂದ ವಿಚಲಿತವಾಗಲಿಲ್ಲ.

“ಮತ್ತೆ ನನ್ನಲ್ಲಿ ಹೀಗೊಂದು ಆಲೋಚನೆ ಹೊಳೆಯಿತು: ‘ಈ ಅಪ್ಪಾನಕ ಝಾನವನ್ನು ಇನ್ನಷ್ಟು ಏಕೆ ಮುಂದುವರಿಸಬಾರದು?’ ಆದ್ದರಿಂದ ನಾನು ಬಾಯಿ ಮೂಗು ಕಿವಿಗಳಿಂದ ಉಸಿರಾಡುವುದನ್ನು ನಿಲ್ಲಿಸಿದೆನು. ಹೀಗೆ ಮಾಡಲು ಇಡೀ ದೇಹದಲ್ಲಿ ಉರಿವ ವೇದನೆಯಾಯಿತು. ಅದು ಹೇಗೆಂದರೆ ಒಬ್ಬ ಬಲಶಾಲಿಯು ಬಲಹೀನನನ್ನು ರೆಟ್ಟೆಗಳಿಂದ ಹಿಡಿದೆತ್ತಿ ನಿಗಿನಿಗಿ ಉರಿವ ಕೆಂಪು ಇದ್ದಲಿನ ಮೇಲೆ ಇಟ್ಟಾಗ ಹೇಗಾಗುತ್ತದೋ ಹಾಗೆ ಬಾಯಿ ಮೂಗು ಕಿವಿಗಳಿಂದ ಉಸಿರಾಟ ನಿಲ್ಲಿಸಿದಾಗ ಸಹಿಸಲಸಾಧ್ಯವಾದ ಉರಿ ದೇಹವನ್ನೆಲ್ಲಾ ಪಸರಿಸಿ ವೇದನೆ ತಂದಿತು.

“ದುರ್ದಮ್ಯವಾದ ಪ್ರಯತ್ನ ಮತ್ತು ಏಕ ಪ್ರಕಾರವಾದ ಮನಸ್ಸಿನಿಂದ ಮಾಡುತ್ತಿರಲು ದೇಹ ದಣಿದು ಮನಸ್ಸು ಅಶಾಂತವಾಯಿತು. ವೇದನೆಯಿಂದ ಕುಗ್ಗಿಹೋದೆ. ಎಷ್ಟೇ ನೋವಾದರೂ ನನ್ನ ಮನಸ್ಸು ಸ್ವ–ದೇಹದಂಡನೆಯಿಂದ ವಿಚಲಿತವಾಗಲಿಲ್ಲ.



“ನಾನು ಈ ಸ್ಥಿತಿಯಲ್ಲಿರುವುದನ್ನು ಕಂಡು ಅರಣ್ಯವಾಸಿ ದೇವತೆಗಳು ತಮ್ಮ ತಮ್ಮಲ್ಲೇ ಮಾತನಾಡಿಕೊಂಡರು: ‘ಸಮಣ ಗೌತಮನು ಸತ್ತ’. ಇನ್ನೊಬ್ಬ ದೇವತೆ ಅದನ್ನು ಅಲ್ಲಗಳೆದು ‘ಅವನಿನ್ನೂ ಸತ್ತಿಲ್ಲ, ಸಾಯುವುದರಲ್ಲಿದ್ದಾನೆ’. ಮತ್ತೊಬ್ಬ ದೇವತೆ ಆ ಮಾತನ್ನು ಅಲ್ಲಗಳೆದು ‘ಅವನು ಸತ್ತಿಲ್ಲ, ಸಾಯುತ್ತಲೂ ಇಲ್ಲ. ಅವನು ಅರ್ಹತ, ಅರ್ಹತರು ಇರುವುದು ಹೀಗೆ.’

“ಮತ್ತೊಂದು ಆಲೋಚನೆ ಹೊಳೆಯಿತು: ‘ನಾನು ಸ್ವ–ದೇಹದಂಡನೆಯ ಬಗೆಯನ್ನು ಉಪವಾಸಕ್ಕೆ ಬದಲಿಸಿದರೆ ಹೇಗೆ?’ ಆಗ ಅರಣ್ಯ ದೇವತೆಗಳು ನನ್ನ ಮುಂದೆ ಪ್ರತ್ಯಕ್ಷವಾಗಿ ಹೇಳಿದರು: ‘ಪೂಜ್ಯರೇ, ಉಪವಾಸ ಮಾಡಬೇಡಿ, ನೀವು ಹಾಗೆ ಮಾಡಿದರೆ ನಾವು ನಿಮ್ಮ ಚರ್ಮ ರಂಧ್ರಗಳ ಮೂಲಕ ದಿವ್ಯ ಸತ್ವಗಳನ್ನು ತೂರಿಸುತ್ತೇವೆ, ನೀವು ಇನ್ನೂ ಬದುಕಬೇಕು’. ಆಗ ನಾನು ಯೋಚಿಸಿದೆ: ‘ನಾನು ಪೂರ್ತಿಯಾಗಿ ಉಪವಾಸ ಮಾಡಿದರೆ ಆಗ ಈ ದೇವತೆಗಳು ನನ್ನ ಚರ್ಮ ರಂಧ್ರಗಳ ಮೂಲಕ ದಿವ್ಯರಸಗಳನ್ನು ಸೇರಿಸುತ್ತಾ ನನ್ನನ್ನು ಉಳಿಯುವಂತೆ ಮಾಡುತ್ತಾರೆ, ಆಗ ನಾನು ಮೋಸಕ್ಕೆ ಒಳಗಾಗುತ್ತೇನೆ’. ಆಗ ನಾನು ಆ ದೇವತೆಗಳಿಗೆ ಹೇಳಿದೆ: ‘ನೀವು ಹಾಗೆ ಮಾಡಬೇಕಾದುದಿಲ್ಲ’. ನನ್ನ ವಿಧಾನವನ್ನು ಸ್ವಲ್ಪ ಸ್ವಲ್ಪವಾಗಿ ಬದಲು ಮಾಡುತ್ತಾ ಹೋದೆ.

“ಈ ಆಲೋಚನೆ ಹೊಳೆಯಿತು: ‘ನಾನು ಸ್ವಲ್ಪ ಆಹಾರದಿಂದಲೇ ಅಂದರೆ ಬೇಳೆ ಸೂಪುಗಳಿಂದ ಶುರು ಮಾಡಬಾರದು?’ ಹೀಗೆ ಮಾಡಲು ನನ್ನ ದೇಹ ಪೂರ್ತಿ ಕೃಶವಾಯಿತು. ಸ್ವಲ್ಪ ಊಟ ಮಾಡುತ್ತಿದ್ದುದರಿಂದ ನನ್ನ ಮೂಳೆಗಳು ಬಿದಿರಿನಿಂದ ಗಂಟುಗಳಂತೆ ಕಂಡವು. ತೀರ ಕಮ್ಮಿ ತಿನ್ನುತ್ತಿದ್ದರಿಂದ ನನ್ನ ಬೆನ್ನು ಒಂಟೆಯ ಗೂನಿನಂತೆ ಆಯಿತು. ನನ್ನ ಬೆನ್ನು ಮೂಳೆಗಳು ದಾರಕ್ಕೆ ಪೋಣಿಸಿದಂತಹ ಮಣಿಗಳಂತೆ ಕಂಡವು. ನನ್ನ ಪಕ್ಕೆಲುಬುಗಳು ಪಾಳುಬಿದ್ದ ಮನೆಯ ಹಳೆಯ ಜಂತಿಗಳಂತೆ ಆದವು. ನನ್ನ ಕಣ್ಣುಗಳು ಪೂರ್ತಿ ಒಳಕ್ಕೆ ಹೋಗಿ ಆಳ ಬಾವಿಯಲ್ಲಿನ ನೀರೇನೋ ಅನ್ನುವಂತಿದ್ದವು. ನನ್ನ ತಲೆಬುರುಡೆ ಗಾಳಿ ಮಳೆಗೆ ಚದುರಿಹೋದಂತೆ ಇತ್ತು. ನನ್ನ ಹೊಟ್ಟೆಯ ಚರ್ಮ ಬೆನ್ನುಮೂಳೆ ಮುಟ್ಟಿದಂತಾಗುತ್ತಿತ್ತು. ಉಪವಾಸಾದಿಗಳಿಂದ ತುಂಬ ಬಲಹೀನನಾಗಿದ್ದೆ. ಪ್ರಕೃತಿ ಕರೆಗೆ ಹೋದರೆ ಮುಖ ನೆಲದ ಮೇಲೆ ಕುಸಿಯುತ್ತಿತ್ತು. ಸ್ವಲ್ಪ ಸಮಾಧಾನವಾಗಲೆಂದು ಮೈಯನ್ನು ಕೈಯಿಂದ ಉಜ್ಜಿಕೊಂಡರೆ ಕೂದಲುಗಳೇ ಉದುರಿ ಹೋಗುತ್ತಿದ್ದವು.

“ನಾನು ಹೀಗಿರುವುದನ್ನು ನೋಡಿ ಕಾಡಿಗೆ ಸೌದೆ ಆರಿಸಲು ಬಂದ ಜನ ‘ಸಮಣ ಗೌತಮನು ಕಪ್ಪಾಗಿದ್ದಾನೆಂದು’ ಕೆಲವರೆಂದರೆ ಇನ್ನು ಕೆಲವರು ‘ಕಪ್ಪಲ್ಲ, ಕಂದಾಗಿದೆ’ ಎನ್ನುತ್ತಿದ್ದರು. ಮತ್ತೆ ಕೆಲವರು ‘ಕಪ್ಪು ಅಲ್ಲ, ಕಂದು ಅಲ್ಲ. ಬಾಡಿಹೋಗಿ ಹಳದಿಯಾಗಿದೆ’ ಎನ್ನುತ್ತಿದ್ದರು. ಹೊಳೆವ ಸುವರ್ಣ ಬಣ್ಣವಿದ್ದ ಚರ್ಮ ಹಸಿವಿನಿಂದ ಸೊರಗಿಹೋಗಿತ್ತು.”

ಟೀಕಾ ಸಾಹಿತ್ಯ ಈ ಘಟನೆಯನ್ನು ಹೇಳುತ್ತದೆ: ಒಂದು ದಿನ ಸಮಣ ಗೌತಮನು ಪ್ರಕೃತಿ ಕರೆಗೆಂದು ಆಡುಗಳು ನಡೆದ ಜಾಡಿನಲ್ಲಿ ಕಷ್ಟಪಟ್ಟು ಹೋಗುತ್ತಿದ್ದಾಗ ಎಚ್ಚರತಪ್ಪಿ

ನೆಲದಮೇಲೆ ಬಿದ್ದನು; ಅಸಹಾಯಕನಾಗಿ ಹಾಗೇ ನೆಲದ ಮೇಲೆ ಇದ್ದನು. ಅರಣ್ಯದಲ್ಲಿ ಮೇಯುತ್ತಿದ್ದ ದೊಡ್ಡ ಆಡಿನ ಹಿಂಡು ಅಲ್ಲಿಗೆ ಬಂದಿತು. ತಾಯಿ ಆಡು ಮುಂಚೂಣಿಯಲ್ಲಿತ್ತು. ಹಾದಿಯಲ್ಲಿ ನೆಲದಮೇಲೆ ಎಚ್ಚರತಪ್ಪಿ ಬಿದ್ದ ಸಮಣ ಗೌತಮನನ್ನು ರಕ್ಷಿಸಲು ತನ್ನ ನಾಲ್ಕು ಕಾಲುಗಳನ್ನೂ ದೇಹದ ಎರಡುಕಡೆ ಇಟ್ಟು ನಿಂತಿತು. ಹಾಲು ತುಂಬಿದ ತನ್ನ ಕೆಚ್ಚಲಿನ ಮೊಲೆಯೊಂದನ್ನು ಗೌತಮನ ಬಾಯಿಗೆ ಊಡಿಸಿ ಬಿಸಿ ಹಾಲನ್ನು ಸುರಿಸಿತು.

ಸ್ವಲ್ಪಹೊತ್ತಾದ ಮೇಲೆ ಆಡಿನ ಹಿಂಡು ತಾಯಿ ಆಡಿನ ಎರಡೂ ಬದಿಗಳಿಂದ ಹಾದುಹೋಗಿ ಕೂಡಲೇ ಮಾಯವಾಯಿತು. ಹೀಗೆ ಸಮಣ ಗೌತಮನು ಚೈತನ್ಯಗೊಂಡು ಕೃತಜ್ಞತಾ ಭಾವದಿಂದ ಮೇಲೆದ್ದನು. ಆನಂತರ ತಾಯಿ ಆಡು ಮುಂದಕ್ಕೆ ಚಲಿಸಿ ತನ್ನ ಮಂದೆಯನ್ನು ಸೇರಿಕೊಂಡಿತು.

ಇದ್ದಕ್ಕಿದ್ದ ಹಾಗೆ ಗೌತಮನ ಮನಸ್ಸಿನಲ್ಲಿ ದೇಹವನ್ನು ಸುಮ್ಮನೆ ದಂಡಿಸುವುದರಲ್ಲಿ ಅರ್ಥವಿಲ್ಲವೆಂಬ ಅಂತರ್ದನಿ ಹರಿಯಿತು. ಪಾರಂಪಾರಿಕವಾಗಿ ಮಾಡುತ್ತಿರುವ ಪಾರಮಾರ್ಥಿಕ ಬಿಡುಗಡೆಯನ್ನು ಕೊಡುತ್ತವೆಂಬ ಈ ಎಲ್ಲ ಸಾಧನೆಗಳು ಮೂಢನಂಬಿಕೆಯಲ್ಲಿ ನೆಲೆಸಿರುವಂತಹವು.

ಅಲ್ಲಿಂದ ಎದ್ದು ತನ್ನ ಜಾಗಕ್ಕೆ ಹೋಗಿ ಈ ಹಿಂದಿನ ಎಲ್ಲ ಅನುಭವಗಳ ಹಿನ್ನಲೆಯಲ್ಲಿ ಹೊಸ ದಿಕ್ಕಿನತ್ತ ನಡೆಯಲು ಗಂಭೀರ ಚಿಂತನೆಯನ್ನು ಮಾಡಿದನು.

"ಈಗ ನನಗೆ ಹೀಗೆ ಅನ್ನಿಸಿತು: 'ಈ ಹಿಂದೆ ಎಷ್ಟು ಜನ ಸಮಣರು ಮತ್ತು ದೇಹದಂಡನೆಯಲ್ಲಿ ಇದ್ದವರು ಇಂತಹ ಯಾತನಾಮಯ ದುಃಖವನ್ನು ಅನುಭವಿಸಿದ್ದಾರೆ?' ದೇಹದಂಡನೆಯ ಪರಾಕಾಷ್ಠತೆ ಇದು. ಇದಕ್ಕಿಂತ ಹೆಚ್ಚಾಗಿ ಯಾರೂ ಹೋಗಲಾರರು. ಇಷ್ಟೆಲ್ಲಾ ದೇಹದಂಡನೆ ಮಾಡಿದಾಗ್ಯೂ ಆರ್‍ಯರೂ ಬುದ್ಧರೂ ಹೊಂದುವ ಲೋಕೋತ್ತರ ಸ್ಥಿತಿಯನ್ನು ಹೊಂದಲಿಲ್ಲ. ಬೋಧಿ ಜ್ಞಾನವನ್ನು ಪಡೆಯಲು ಬೇರೆ ದಾರಿ ಏನಾದರೂ ಇರಬಹುದೇ?

"ಹೀಗೆ ನಾನು ಚಿಂತೆನೆ ಮಾಡಲು ನನಗೊಂದು ಘಟನೆ ನೆನಪಿಗೆ ಬಂದಿತು. ನನ್ನ ತಂದೆಯವರು ನೇಗಿಲ ಪೂಜೆಯನ್ನು ನೆರವೇರಿಸುತ್ತಿರುವ ಸಂದರ್ಭದಲ್ಲಿ ನಾನು ಜನನಿಬಿಡತೆಯಿಂದ ಅಕುಶಲ ಧಮ್ಮಗಳಿಂದ ದೂರವಾದ ಸ್ಥಳವೊಂದರಲ್ಲಿ ಜಂಬೂ ವೃಕ್ಷದ ನೆರಳಲ್ಲಿ ಕುಳಿತೆನು. ಆಗ ನಾನು ಪ್ರಥಮ ಝಾನ ಪ್ರವೇಶಿಸಿ ಆ ಸ್ಥಿತಿಯಲ್ಲಿ ಸ್ವಲ್ಪಕಾಲವಿದ್ದೆ. ಏಕಾಂತದಿಂದ ಉದಯವಾದ ಅಪಾರ ಶಾಂತಿಯನ್ನನುಭವಿಸಿದೆ. ಇದು ಬೋಧಿ ಜ್ಞಾನದ ಮಾರ್ಗವಾಗಬಹುದೆ? ನನ್ನ ಈ ಸ್ಮರಣ ಶಕ್ತಿಯ ಆಧಾರದ ಮೇಲೆ ನಾನು ದೀರ್ಘವಾಗಿ ಚಿಂತನೆ ನಡೆಸಿ ಬೋಧಿಜ್ಞಾನ ಹೊಂದಲು ಇದೇ ದಾರಿ ಎಂದು ಕಂಡುಕೊಂಡೆನು."



## ಸುವರ್ಣ ಮಾಧ್ಯಮ

ವೈಭವದಲ್ಲಿ ಹುಟ್ಟಿ ಬೆಳೆದ ಸಿದ್ಧಾರ್ಥ ಗೌತಮನು ಎಲ್ಲರೀತಿಯ ಇಂದ್ರಿಯ ಬೋಗಗಳನ್ನು ಆಡಂಬರವನ್ನು ಪ್ರಭುತ್ವವನ್ನು ಅನುಭವಿಸಿದವನು. ಆದರೆ ಇವೆಲ್ಲವೂ ಕ್ಷಣಿಕವೂ, ನೋವನ್ನು ತರುವಂತಹವೂ ಆಗಿದ್ದವು.

ಇಬ್ಬರು ಋಷಿಗಳೊಡನೆ (ಆಲಾರಕಾಲಾಮ ಮತ್ತು ಉದ್ದಕರಾಮಪುತ್ರ) ಇದ್ದ ಸಂದರ್ಭದಲ್ಲಿ ಲೋಕೋತ್ತರ ಜ್ಞಾನವನ್ನೂ ಶಕ್ತಿಯನ್ನೂ ಬೆಳೆಸಿಕೊಂಡಿದ್ದನು. ಆ ಇಬ್ಬರು ಋಷಿಗಳು ಈ ಜ್ಞಾನವನ್ನು ಸಂಪಾದಿಸಿಕೊಂಡಿದ್ದರು. ಈ ಇಬ್ಬರೂ ಋಷಿಗಳು ಸಮಣ ಗೌತಮನನ್ನು ತಮ್ಮೊಡನೆ ಸಹ ಬೋಧಕನಾಗಿ ತಮ್ಮ ಪಂಥದ ಮುಖಂಡನಾಗಬೇಕೆಂದು ವಿನಂತಿಸಿದ್ದರು. ತನ್ನ ಜಾತ ವಿವೇಕದಿಂದ ಪರೀಕ್ಷಿಸಿ ನೋಡಲು ಅವರನ್ನು ಅನುಸರಿಸಿದರೆ ಅದೂ ಕೂಡ ಬ್ರಹ್ಮದೇವತೆಗಳ ಉತ್ತಮೋತ್ತಮವಾದ ಅರೂಪ ಲೋಕದಲ್ಲಿ ಪುನರ್ಜನ್ಮಕ್ಕೆ ಎಡೆಮಾಡಿಕೊಡುತ್ತದೆಂಬುದನ್ನು ಅರಿತನು.

ಎಲ್ಲೆಲ್ಲಿ ಆರಂಭವಿದೆಯೋ ಅಲ್ಲೆಲ್ಲಾ ಕೊನೆ ಇರಲು ಹುಟ್ಟು ಇರುವ ಕಡೆ ಸಾವು ಇದ್ದೇ ಇರುತ್ತದೆಂಬ ವಿವೇಕದಿಂದಲೇ ಈ ಇಬ್ಬರು ಋಷಿಗಳ ಸಾಧನೆ ಎಷ್ಟೇ ಎತ್ತರದವಾದರೂ ಅವೂ ಕೂಡ ಹುಟ್ಟು-ಸಾವು ಚಕ್ರದಲ್ಲಿನ ಭಾಗಗಳಾಗಿ ಕರ್ಮ ಮತ್ತು ಪುನರ್ಜನ್ಮಕ್ಕೆ ಒಳಗಾಗಿದ್ದವು. ಹೀಗಿರಲು ಅವು ಉನ್ನತೋನ್ನತವಾದ ನಿಬ್ಬಾಣವನ್ನು ಪ್ರತಿಪಾದಿಸುತ್ತಿರಲಿಲ್ಲ. ಅಂದರೆ ಪುನಃ ಪುನಃ ಸಂಸಾರಕ್ಕೆ ಬರುವುದನ್ನು ತಪ್ಪಿಸುತ್ತಿರಲಿಲ್ಲ.

ಆರು ವರ್ಷಗಳ ಗಂಭೀರ ಧಾರ್ಮಿಕ ತಪಸ್ಸು ಮತ್ತು ದೇಹದಂಡನೆಯನ್ನಾಚರಿಸಿದ ಮೇಲೆ ಅನಾವಶ್ಯಕವಾಗಿ ನೋವನ್ನನುಭವಿಸಿ ಈಗಾಗಲೇ ಇರುವ ದುಃಖವನ್ನು ಇನ್ನೂ ಹೆಚ್ಚು ಮಾಡುವುದರಲ್ಲಿ ಅರ್ಥವಿಲ್ಲವೆಂದು ಗ್ರಹಿಸಿದನು.

ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ಬದುಕಿನ ಸಂಕಷ್ಟಗಳನ್ನು ಅಂದರೆ ಒಂದು ಜೀವಿಯು ನಲಿವಿನಿಂದ ನೋವಿಗೆ ಅಂದರೆ ಒಂದು ಅತಿರೇಕದಿಂದ ಇನ್ನೊಂದು ಅತಿರೇಕಕ್ಕೆ ಹೇಗೆ ಹೋಗುತ್ತಾನೆಂಬುದನ್ನು ಅಂತರ್‌ದೃಷ್ಟಿಯಿಂದಲೇ ಅನುಭವಿಸಿದನು. ಈ ಸತ್ಯದ ಸ್ಪಷ್ಟ ತಿಳುವಳಿಕೆಯಿಂದಲೇ ಬದುಕಿ ಎಲ್ಲಾ ಸಂಕಷ್ಟಗಳಿಗೆ ಒಂದು ಹೊಸ ವಿಧಾನ ಸುವರ್ಣ ಮಾಧ್ಯಮವನ್ನು ಕಂಡುಕೊಂಡನು.

ಬೋಧಿಸತ್ವನಲ್ಲಿ ಆದ ಈ ಬದಲಾವಣೆಗಳನ್ನು ಕಂಡು ಐದುಜನ ವಿರಾಗಿ ಶಿಷ್ಯರು ಆಲೋಚಿಸಿದರು: 'ಸಮಣ ಗೌತಮನು ಎಲ್ಲಾ ಧಾರ್ಮಿಕ ತಪಸ್ಸುಗಳನ್ನು ತ್ಯಜಿಸಿ ಸ್ವಧರ್ಮ ತ್ಯಾಗಿಯಾಗಿದ್ದಾನೆ. ಹೇಗೂ ತುಂಬ ಕೆಟ್ಟು ಹೋಗಿದ್ದಾನಾದ್ದರಿಂದ ಇವನು ನಮ್ಮ ಗುರುವಲ್ಲ'. ಇಷ್ಟೆಲ್ಲವನ್ನೂ ಬೋಧಿಸತ್ವನಿಗೆ ಹೇಳದೆ ಆ ಜಾಗವನ್ನು ಬಿಟ್ಟು ಸ್ವಲ್ಪ ಕಾಲದ ನಂತರ ವಾರಾಣಸಿ ಬಳಿ ಇರುವ ಇಸಿಪಟಣದ ಮೃಗಧಾಮಕ್ಕೆ ಬಂದರು.

ಸಮಣ ಗೌತಮನು ದೈಹಿಕ ಆರೋಗ್ಯವನ್ನು ಮರಳಿ ಪಡೆದು ತನ್ನ ಧ್ಯಾನ ಸಾಧನೆಯ ಪ್ರಯತ್ನಗಳನ್ನು ಹೆಚ್ಚಿಸಿದನು. ಅಭಿಜ್ಞಾದಿಂದ ಕೂಡಿದ ಹಲವಾರು

ಲೋಕೋತ್ತರ ಝಾನಗಳನ್ನು ಮತ್ತು ಪಾರಮಾರ್ಥಿಕ ಶಕ್ತಿಗಳನ್ನು ಪಡೆಯಲು ಇದು ಅತ್ಯವಶ್ಯವಾಗಿತ್ತು. ಬಾಹ್ಯ ಮತ್ತು ಆಂತರಿಕ ಶಕ್ತಿಗಳ ಈ ವಿಧಾನ ಸಮ್ಮಾಸಂಬೋಧಿಯನ್ನು ಪಡೆಯುವ ಹಿಂದಿನ ಹದಿನೈದು ದಿನಗಳ ಕಾಲ ಅಂದರೆ ಚೈತ್ರದ ಅಮಾವಾಸ್ಯೆಯಿಂದ ವೈಶಾಖ ಮಾಸದ ಹುಣ್ಣಿಮೆಯವರೆಗೆ (ಕ್ರಿ.ಪೂ. 588) ತೀವ್ರವಾಯಿತು. ಸಂಬೋಧಿಜ್ಞಾನ ಪಡೆಯುವ ದಿನದ ಹಿಂದಿನ ರಾತ್ರಿಯಂದು ಭವಿಷ್ಯದಲ್ಲಿ ಸಂಭವಿಸುವ ಸಿದ್ಧಿ ಮತ್ತು ಧರ್ಮ ಕಾರ್ಯಗಳನ್ನು ಬಿಂಬಿಸುವ ಸ್ಪಷ್ಟವಾದ ಮತ್ತು ಅಸಾಧಾರಣವಾದ ಕನಸು ಬಿತ್ತು.

## ಸಂಬೋಧಿ ಪ್ರಾಪ್ತಿಯ ದಿನ

ಸಂಬೋಧಿ ಪ್ರಾಪ್ತಿಯ (ಜ್ಞಾನೋದಯದ) ಹಿಂದಿನ ದಿನ ಬೋಧಿಸತ್ವನು ಮಧ್ಯರಾತ್ರಿಯ ಮತ್ತು ಮುಂಜಾನೆಯ ನಡುವೆ ಐದು ಕನಸುಗಳನ್ನು ಕಂಡನು. ಮೊದಲು, ಭೂಮಿಯನ್ನೇ ಹಾಸಿಗೆಯನ್ನಾಗಿ, ಹಿಮಾಲಯವನ್ನೇ ದಿಂಬಾಗಿ, ಎಡಗೈಯನ್ನು ಪೂರ್ವ ಸಾಗರದತ್ತ ಮತ್ತು ಬಲಗೈಯನ್ನು ಪಶ್ಚಿಮ ಸಾಗರದತ್ತ ಬೀಸಿ ಕಾಲುಗಳನ್ನು ದಕ್ಷಿಣ ಸಮುದ್ರದತ್ತ ಚಾಚಿರುವಂತೆ ಕನಸುಬಿತ್ತು. ಈ ಕನಸು ತಾನು ಮುಂದೆ ಸಮ್ಮಾಸಂಬೋಧಿಯನ್ನು ಪಡೆದು ಮಾನವರಿಗೂ ದೇವತೆಗಳಿಗೂ ಆಧ್ಯಾತ್ಮಿಕ ಗುರುವಾದ ಸರ್ವಜ್ಞ ಬುದ್ಧನಾಗುವುದನ್ನು ಸೂಚಿಸಿತು.

ಎರಡನೇ ಕನಸಿನಲ್ಲಿ ಹೊಕ್ಕಳಿನಿಂದ ತಿರಿಯ ಹುಲ್ಲು ಹುಟ್ಟಿ, ಅದು ಎತ್ತರೆತ್ತರಕ್ಕೆ ಬೆಳೆದು ಆಕಾಶದ ತುಂಬೆಲ್ಲಾ ಹರಡಿ ಎಲ್ಲ ದಿಕ್ಕುಗಳಿಗೂ ಅದರ ವಿಶಾಲ ಎಲೆಗಳು ಹೋದವು. ಈ ಕನಸು ಮುಂದೆ ತಾನು ಅಷ್ಟಾಂಗ ಮಾರ್ಗವನ್ನು (ಮಧ್ಯಮ ಮಾರ್ಗ) ದೇವತೆಗಳಿಗೂ ಮಾನವರಿಗೂ ಉಪದೇಶಿಸುವುದನ್ನು ಸೂಚಿಸುತ್ತಿತ್ತು.

ಮೂರನೇ ಕನಸಿನಲ್ಲಿ ಸಾಲು ಸಾಲು ಇರುವೆಗಳು ಬಿಳಿ ದೇಹವನ್ನು ಕರಿ ತಲೆಯನ್ನು ಹೊಂದಿದ್ದು, ಕಾಲುಗಳನ್ನು ಹತ್ತಿ ಮೊಳಕಾಲುಗಳವರೆಗೆ ಬಂದಿದ್ದವು. ಅಂದರೆ ಬಿಳಿ ಬಟ್ಟೆಯನ್ನು ಮತ್ತು ಕರಿತಲೆಗಳಿರುವ ಉಪಾಸಕ ಉಪಾಸಿಕೆಯರು ಬುದ್ಧನಲ್ಲಿ ಶರಣು ಹೋಗಿ ಹಿಂಬಾಲಿಸುವುದರ ಸಂಕೇತವನ್ನು ನುಡಿದಿತ್ತು.

ನಾಲ್ಕನೇ ಕನಸಿನಲ್ಲಿ ನಾಲ್ಕು ವಿವಿಧ ಬಣ್ಣದ ಹಕ್ಕಿಗಳು (ನೀಲಿ, ಹಳದಿ, ಕೆಂಪು ಮತ್ತು ಬೂದು ಬಣ್ಣದವು) ನಾಲ್ಕು ದಿಕ್ಕುಗಳಿಂದ ಬಂದು ಕಾಲಿಗೆ ಬಿದ್ದು ಎಲ್ಲವೂ ಬಿಳಿ ಬಣ್ಣವಾಗಿ ಹಾರಿಹೋದವು. ಈ ಕನಸು ನಾಲ್ಕು ವರ್ಣದವರು (ಕ್ಷತ್ರಿಯ, ಬ್ರಾಹ್ಮಣ, ವೈಶ್ಯ, ಶೂದ್ರ) ಬೌದ್ಧ ಸಂಘವನ್ನು ಸೇರಿ ಮುಂದೆ ಅರ್ಹತರಾಗುವ ಭವಿಷ್ಯವನ್ನು ಹೇಳಿತ್ತು.

ಐದನೇ ಕನಸಿನಲ್ಲಿ ತಾನು ಎತ್ತರದ ಸಗಣಿ ಪರ್ವತದ ಮೇಲೆ ಹೊಲಸು ಮಾಡಿಕೊಳ್ಳದೆ ಅತ್ತಿಂದಿತ್ತ ಓಡಾಡುವುದನ್ನು ಕಂಡನು. ಇದು ತನಗೆ ಬೇಕಾದ ನಾಲ್ಕು ಉಪಯೋಗಿ ವಸ್ತುಗಳನ್ನು (ಚೀವರ, ಭಿಕ್ಷಾನ್ನ, ವಿಹಾರ ಮತ್ತು ಔಷಧಿಗಳು) ಹೇರಳವಾಗಿ



ದೊರೆತು ಅವನ್ನು ತಾನು ಮತ್ತು ತನ್ನ ಶಿಷ್ಯರು ವಿರಕ್ತಿ ಭಾವದಿಂದ ಬಳಸುವುದರ ಭವಿಷ್ಯವಾಗಿತ್ತು.

ಬೋಧಿಸತ್ವನು ಈ ಎಲ್ಲ ಕನಸುಗಳ ಹಿಂದಿನ ಅರ್ಥವನ್ನು ತಿಳಿದನು. ತನಗೆತಾನೇ ಹೇಳಿಕೊಂಡನು: 'ಸರಿ, ನನ್ನ ಈ ಕನಸುಗಳನ್ನು ಮತ್ತು ಅವುಗಳ ಸಂದೇಶವನ್ನು ಹಂಚಿಕೊಳ್ಳಲು ನನ್ನ ಕುಟುಂಬದವರಾಗಲಿ, ಸ್ನೇಹಿತರಾಗಲಿ, ಶಿಷ್ಯರಾಗಲಿ ಯಾರೂ ಇಲ್ಲ. ಇವನ್ನು ನಾನೇ ಹೇಳಿಕೊಳ್ಳುತ್ತೇನೆ ಮತ್ತು ವಿಮರ್ಶಿಸಿಕೊಳ್ಳುತ್ತೇನೆ'.

## ಸುಜಾತಳು ನೀಡಿದ ಘನ ಪಾಯಸ

ರಾತ್ರಿ ಕಳೆದು ಬೆಳಗು ಹರಿದಾಗ ತಾನಿನ್ನು ಸಮ್ಮಾಸಂಬೋಧಿಯನ್ನು ಪಡೆಯುತ್ತೇನೆಂಬ ನಿರ್ಧಾರದಿಂದ ಸ್ನಾನಮಾಡಿ ಚಿಂತನೆಯಲ್ಲಿ ಮುಳುಗಿದನು. ಆನಂತರದಲ್ಲಿ ಪಿಂಡಪಾತಕ್ಕೆ ತೆರಳಿದನು. ಆನಂತರದಲ್ಲಿ ಸೇನಾನಿ ಗ್ರಾಮದಲ್ಲಿ ನ್ಯಗ್ರೋಧಮರ (ವಟವೃಕ್ಷ)ವನ್ನು ನೋಡಿ ಅದರ ಕೆಳಗೆ ಕುಳಿತನು.

ಆ ಸಮಯದಲ್ಲಿ ಸೇನಾನಿ ಗ್ರಾಮದ ಮುಖ್ಯಸ್ಥನ ಮಗಳು ಸುಜಾತ ನ್ಯಗ್ರೋಧ ವೃಕ್ಷದೇವತೆಗೆ ವಿಶೇಷವಾದ ಘನ ಪಾಯಸವನ್ನು ಮಾಡುವುದರಲ್ಲಿ ತೊಡಗಿದ್ದಳು. ಇಪ್ಪತ್ತು ವರ್ಷಗಳ ಹಿಂದೆ ವಿಶಾಲ ವೃಕ್ಷದೇವತೆಗೆ ತನ್ನದೇ ಕುಲೀನ ಮನೆತನದ ಒಳ್ಳೆಯ ಶ್ರೀಮಂತ ಗಂಡ ದೊರೆತು ಮೊದಲನೆಯ ಸಂತಾನವೇ ಗಂಡಾದರೆ ವಿಶೇಷವಾದ ಘನಪಾಯಸವನ್ನು ಅರ್ಪಿಸುವುದಾಗಿ ಹರಕೆ ಹೊತ್ತಿದ್ದಳು.

ಅವಳಿಗೆ ವಾರಾಣಸಿಯ ಶ್ರೀಮಂತ ಯುವಕನೊಂದಿಗೆ ಮದುವೆಯಾಗಿ ಯಸ ಎಂಬ ಮಗ ಹುಟ್ಟಿದನು. ಹೀಗೆ ಅವಳ ಆಸೆ ಈಡೇರಿದ್ದರಿಂದ ವೃಕ್ಷದೇವತೆಗೆ ಪ್ರತಿವರ್ಷ ವೈಶಾಖ ಹುಣ್ಣಿಮೆಯಂದು ಧಾರ್ಮಿಕ ಪದ್ಧತಿಯಲ್ಲಿಯೇ ಕಳೆದ ಇಪ್ಪತ್ತು ವರ್ಷಗಳಿಂದ ಸಾಂಪ್ರದಾಯಿಕ ಹರಕೆಯನ್ನು ಘನಪಾಯಸವನ್ನು ಅರ್ಪಿಸುವುದರ ಮೂಲಕ ತೀರಿಸುತ್ತಿದ್ದಳು. ಈ ವಿಶೇಷ ಘನ ಪಾಯಸಕ್ಕಾಗಿ ಸುಜಾತಳು ಹಲವು ತಿಂಗಳ ಹಿಂದೆ ಒಂದು ಸಾವಿರ ಹಸುಗಳನ್ನು ಆಯ್ದು ಶ್ರೇಷ್ಠಮಟ್ಟದ ಹಾಲನ್ನು ಹೊಂದಲು ಅವುಗಳಿಗೆ ಸಿಹಿ ವಲ್ಮಿ ಹುಲ್ಲನ್ನು ಒಂದುವಾರ ತಿನ್ನಿಸಿ ಐದುನೂರು ಹಸುಗಳಿಗೆ ಒಂದು ವಾರದ ಕಾಲ ಈ ಸಾವಿರ ಹಸುಗಳ ಹಾಲನ್ನು ಉಣಿಸಿದಳು. ಆನಂತರದಲ್ಲಿ ಇನ್ನೂರ ಐವತ್ತು ಹಸುಗಳಿಗೆ ಈ ಐದುನೂರು ಹಸುಗಳ ಹಾಲನ್ನು ಒಂದುವಾರ ಉಣಿಸಿದಳು. ಹೀಗೆ ಪ್ರತಿ ಹಂತದಲ್ಲಿ ಅರ್ಧದಷ್ಟು ಸಂಖ್ಯೆಯ ಹಸುಗಳಿಗೆ ಹಾಲನ್ನು ಕೊಡುತ್ತಾ ಹಾಲನ್ನು ಕರೆಯುತ್ತಾ ಹೋದಳು. ಅಂದರೆ ನೂರಇಪ್ಪತ್ತೈದು ಹಸುಗಳಿಗೆ ಇನ್ನೂರ ಐವತ್ತು ಹಸುಗಳ ಹಾಲನ್ನು ಉಣಿಸಿದಳು. ಮುಂದಿನ ಹಂತದಲ್ಲಿ ಅರವತ್ಮೂರು ಹಸುಗಳಿಗೆ ನೂರಿಪ್ಪತ್ತೈದು ಹಸುಗಳ ಹಾಲು, ಮೂವತ್ತೆರಡು ಹಸುಗಳಿಗೆ ಅರವತ್ಮೂರು ಹಸುಗಳ ಹಾಲು, ಹದಿನಾರು ಹಸುಗಳಿಗೆ ಮೂವತ್ತೆರಡು ಹಸುಗಳ ಹಾಲು ಒಂದು ವಾರ ಕಾಲ ಉಣಿಸಿ ಹಾಲು ಕರೆಯುತ್ತಿದ್ದಳು. ಕೊನೆಯಲ್ಲಿ ಎಂಟು ಹಸುಗಳಿಗೆ ಹದಿನಾರು ಹಸುಗಳ

ಹಾಲನ್ನು ಒಂದು ವಾರ ಕುಡಿಸಿ ಅವುಗಳಿಂದ ಬಂದ ಗಟ್ಟಿಯಾದ ಹಾಲನ್ನು ಪಡೆದು ವಿಶೇಷವಾದ ಘನಪಾಯಸವನ್ನು ತಯಾರಿಸಿದಳು.

ಹೀಗೆ ಮುಂಜಾನೆ ಮುಗಿದು ಮಧ್ಯಾಹ್ನ ಬರುವುದರೊಳಗೆ ಪಾಯಸ ತಯಾರಿಸಿದ ನಂತರ ತನ್ನ ಪರಿಚಾರಿಕೆಯನ್ನು ನ್ಯಗ್ರೋಧ ವೃಕ್ಷಕ್ಕೆ ಕಳುಹಿಸಿ ಅಲ್ಲಿ ಗುಡಿಸಿ ಸಾರಿಸಿ ಅಲಂಕರಿಸಿ ಬರುವಂತೆ ಸೂಚಿಸಿದಳು. ಪರಿಚಾರಿಕೆ ನ್ಯಗ್ರೋಧ ವೃಕ್ಷದ ಬಳಿ ಬರಲು ಆ ವೃಕ್ಷದ ಕೆಳಗೆ ಬೋಧಿಸತ್ವನು ಧ್ಯಾನಮಗ್ನನಾಗಿ ಕುಳಿತಿದ್ದನು. ಅವನನ್ನು ನೋಡಿ ವೃಕ್ಷದೇವತೆಯೇ ಮನುಷ್ಯ ರೂಪವನ್ನು ಧರಿಸಿ ಸುಜಾತಳು ನೀಡುವ ವಿಶೇಷ ಹರಕೆಯ ನೈವೇದ್ಯವನ್ನು ಸ್ವೀಕರಿಸಲು ಬಂದಿಹನೆಂದು ಭಾವಿಸಿದಳು. ಭಯಭಕ್ತಿ ಮಿಶ್ರಿತಳಾಗಿ ಅವಳು ಸುಜಾತಳ ಬಳಿ ಓಡಿಹೋಗಿ ತಾನು ಕೊಡುವ ದಾನವನ್ನು ಸ್ವೀಕರಿಸಲು ವೃಕ್ಷದೇವತೆಯು ಬಂದಿರುವುದೆಂದು ವರದಿ ಮಾಡಿದಳು.

ಈ ಮಾತನ್ನು ಕೇಳಿ ಉನ್ಮಾದಗೊಂಡು ಸುವರ್ಣ ಬಟ್ಟಲಿನಲ್ಲಿ ಪಾಯಸವನ್ನು ತೆಗೆದುಕೊಂಡು ಬೋಧಿಸತ್ವನೇ ಮಾನವ ರೂಪದಲ್ಲಿ ಬಂದು ಕಾಯುತ್ತಿದ್ದಾನೆಂದು ವೃಕ್ಷದ ಬಳಿಗೆ ತೆರಳಿದಳು. ವೃಕ್ಷದ ಬಳಿಬಂದು ಅದರ ಅಡಿಯಲ್ಲಿ ಧ್ಯಾನಮಗ್ನನಾಗಿದ್ದ ಬೋಧಿಸತ್ವನಿಗೆ "ಪೂಜ್ಯರೇ, ಈ ಬಟ್ಟಲಿನಲ್ಲಿರುವ ಪಾಯಸವನ್ನು ದಯಮಾಡಿ ಸ್ವೀಕರಿಸಿ. ನನ್ನ ಬಯಕೆಗಳು ಈಡೇರಿವೆ. ಆದ್ದರಿಂದ ಇದನ್ನು ಅರ್ಪಿಸುತ್ತಿದ್ದೇನೆ. ನಾನು ನಿಮ್ಮ ಆಶೀರ್ವಾದವನ್ನು ಬೇಡುತ್ತೇನೆ. ನನ್ನ ಮನದಾಳದ ಬಯಕೆಯನ್ನು ನೀವು ಈಡೇರಿಸಿರುವುದರಿಂದ ನಿಮ್ಮ ಮನೋ ಬಯಕೆಗಳೂ ಈಡೇರಲಿ" ಎಂದು ವಿನಮ್ರಳಾಗಿ ಹೇಳಿದಳು. ನೂರಾರು ಕಹಾಪಣ (ಬಂಗಾರದ ನಾಣ್ಯ) ಗಳಾಗುವ ಸುವರ್ಣ ಬಟ್ಟಲನ್ನು ಒಂದು ಬಾಳೆ ಎಲೆಯಂತೆ ಭಾವಿಸಿ ಅಲ್ಲಿಂದ ನಿರ್ಗಮಿಸಿದಳು.

ಈ ವರ್ಷದ ದಾನಕ್ಕೆ ವಿಶೇಷ ಮಹತ್ವವಿತ್ತು. ಕಾರಣ ಬೋಧಿಸತ್ವನು ಪಾಯಸವನ್ನು ಸುವರ್ಣ ಬಟ್ಟಲಿನಲ್ಲಿ ಪಡೆದಿದ್ದನು. ಯಾವಾಗ ಪಾಯಸವನ್ನು ಸುಜಾತ ತನಗೆ ಅರ್ಪಿಸಿದಳೋ ಆ ಸಮಯದಲ್ಲೇ ತನ್ನಲ್ಲಿದ್ದ ಪಿಂಡಪಾತ್ರೆ (ಬವನಾಸಿ)ಯು ಮಾಯವಾಯಿತು. ಈ ಪಿಂಡಪಾತ್ರೆಯನ್ನು ಘಟಿಕಾರ ಬ್ರಹ್ಮದೇವತೆಯು ಬೋಧಿಸತ್ವನಿಗೆ ಅವನು ಮನೆಯನ್ನು ಬಿಟ್ಟ ಮತ್ತು ಸಂನ್ಯಾಸಿಯಾದ ದಿನದಂದು ಕೊಟ್ಟಿತ್ತು.

ಸುಜಾತಳ ಮಗ ಯಸ ಈಗ ಮದುವೆಯಾಗಿದ್ದ. ವೈಭವ ಬದುಕನ್ನು ಸಾಗಿಸುತ್ತಿದ್ದ. ಕೆಲವು ತಿಂಗಳ ನಂತರ ಯಸ ಬುದ್ಧನನ್ನು ಸಂದರ್ಶಿಸಿದ, ಭಿಕ್ಖುವಾದ ನಂತರ ಅರಹತನಾದ. ಅವನ ತಂದೆ-ತಾಯಿಗಳು ಆರ್ಯರಾದರು (ಬೋಧಿಜ್ಞಾನ ಪಡೆದ ಶಿಷ್ಯರು).

## ನೇರಂಜರಾ ನದಿ

ಬೋಧಿಸತ್ವನು ಸುವರ್ಣ ಬಟ್ಟಲಿನಲ್ಲಿ ಪಾಯಸವನ್ನು ಸ್ವೀಕರಿಸಿದ ಮೇಲೆ ನೇರಂಜರಾ ನದಿಯ ತೀರಕ್ಕೆ ಹೋದನು. ಸೂಕ್ತವಾದ ಜಾಗದಲ್ಲಿ ತನ್ನ ಚೀವರವನ್ನಿಟ್ಟು ಅದರ



ಮೇಲೆ ಪಾಯಸದ ಬಟ್ಟಲನ್ನು ಇಟ್ಟನು. ಆನಂತರ ನದಿಯೊಳಗೆ ಹೋಗಿ ಸ್ನಾನಮಾಡಿ ಮೇಲೆ ಬಂದು ಮೈ ಒಣಗಿಸಿಕೊಂಡು ಭಿಕ್ಷಾಹಾರವನ್ನು ತಿನ್ನಲು ಕುಳಿತನು. ಘನಪಾಯಸವನ್ನು ನಲವತ್ತೊಂಬತ್ತು ತುತ್ತುಗಳನ್ನಾಗಿ ಮಾಡಿ ಎಲ್ಲವನ್ನೂ ತಿಂದನು.

ಹೀಗೆ ಊಟವಾದ ಮೇಲೆ ತಾನು ಇಂದು ಸಂಬೋಧಿಯನ್ನು (ಜ್ಞಾನೋದಯ) ಪಡೆಯುತ್ತೇನೆಯೇ ಎಂಬುದನ್ನು ಪರೀಕ್ಷಿಸಿಕೊಳ್ಳಲು ಹೀಗೊಂದು ನಿರ್ಧಾರ ಮಾಡಿದನು: 'ಇಂದು ನಾನು ಸಂಬೋಧಿಯನ್ನು ಹೊಂದುವುದೇ ಆದರೆ ಈ ಸುವರ್ಣ ಬಟ್ಟಲು ಈ ನದಿಯ ಪ್ರವಾಹವನ್ನು ಸೀಳಿಕೊಂಡು ನದಿಯ ಮಧ್ಯಭಾಗಕ್ಕೆ ಅಲ್ಲಿಂದ ಹರಿವಿನ ವಿರುದ್ಧ ಈಜಿ ಹೋಗಲಿ'. ಬೋಧಿಸತ್ವನು ಸುವರ್ಣ ಬಟ್ಟಲನ್ನು ನದಿಯಲ್ಲಿ ಎಸೆದನು. ಅದು ಆಗಿದ್ದ ಪೂರ್ಣ ಪ್ರವಾಹವನ್ನು ಸೀಳಿಕೊಂಡು ನದಿಯ ಮಧ್ಯಭಾಗಕ್ಕೆ ಹೋಗಿ ಅಲ್ಲಿಂದ ಜೋರಾಗಿ ಹರಿವಿನ ವಿರುದ್ಧ ಈಜಿ ಸ್ವಲ್ಪದೂರ ಹೋಗಿ ನದಿಯ ತಳಕ್ಕೆ ಮುಳುಗಿ ಅಲ್ಲಿಂದ ನದಿಯ ತಳದಲ್ಲಿರುವ ಕಾಳನಾಗರಾಜನ ಅರಮನೆ ಸೇರಿತು.

ಹೀಗೆ ಈ ತುಂಬು ಹುಣ್ಣಿಮೆಯ ದಿನದಂದು ಜ್ಞಾನೋದಯ ಹೊಂದುವೆನೆಂಬುದನ್ನು ಖಾತ್ರಿ ಮಾಡಿಕೊಂಡು ನೇರಂಜರಾ ತಟದಲ್ಲಿರುವ ಸುಂದರವಾದ ಋತುಕಾಲವಲ್ಲದಿದ್ದರೂ ಅರಳಿದ ಶಾಲ ವನದೊಳಗೆ ಪ್ರವೇಶಿಸುತ್ತಾನೆ. ಅಲ್ಲಿನ ಪುರಾತನ ಶಾಲ ಮರದ ಕೆಳಗೆ ಕುಳಿತು ಧ್ಯಾನವನ್ನಾರಂಭಿಸುತ್ತಾನೆ.

ಈಗಾಗಲೇ ಬೋಧಿಸತ್ವನು ಭಿಕ್ಖುವಾದ ಮೇಲೆ ಎಂಟು ಸಮಾಪತ್ತಿಗಳನ್ನು, ಐದು ಅಭಿಜ್ಞಾಗಳನ್ನು ಸಿದ್ಧಿಸಿಕೊಂಡಿದ್ದನು. ಆದರೆ ಆರು ವರ್ಷಗಳ ದೇಹದಂಡನೆಯ ತಪಸ್ಸಿನಲ್ಲಿ ಝಾನ ಮತ್ತು ಅಭಿಜ್ಞಾಗಳನ್ನು ಮಾಡಿರಲಿಲ್ಲ. ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ ಲೋಕೋತ್ತರ ಸಾಧನೆಗಳು ತುಕ್ಕು ಹಿಡಿದಿದ್ದವು ಅಥವಾ ಮಂಕಾಗಿದ್ದವು.

ಬೋಧಿಸತ್ವನು ದೇಹದಂಡನೆಯನ್ನು ತೊರೆದು ಧ್ಯಾನ ಮಾರ್ಗವನ್ನು ಹಿಡಿದ ಮೇಲೆ ಭಿಕ್ಷಾನ್ನವನ್ನು ಸಂಗ್ರಹಿಸಿ ಜೀವಿಸುತ್ತಾ ಹುಣ್ಣಿಮೆಯ ಹಿಂದಿನ ಹದಿನೈದು ದಿನಗಳವರೆಗೂ ಧ್ಯಾನ ಸಾಧನೆಯನ್ನು ಮಾಡುತ್ತಿದ್ದನು. ಇಂದು ಶಾಲವನದಲ್ಲಿ ಎಲ್ಲ ಸಮಾಪತ್ತಿಗಳನ್ನು ಅಭಿಜ್ಞಾಗಳನ್ನು ಪ್ರಯೋಗಿಸಿ ಅತ್ಯುನ್ನತ ಶಿಖರವಾದ ಸಮ್ಮಾಸಂಬೋಧಿಯನ್ನು ಪಡೆಯಲು ಸನ್ನದ್ಧನಾದನು.

## ಮಾರನೊಂದಿಗೆ ಯುದ್ಧ

ಆನಾಪಾನಸತಿ ಧ್ಯಾನ ಸಾಧನೆ ಮಾಡುತ್ತಾ ಬೋಧಿಸತ್ವನು ಝಾನಗಳನ್ನು ಅಭಿಜ್ಞಾಗಳನ್ನು ವೃದ್ಧಿಸಿಕೊಂಡನು. ಸಂಜೆಯ ವೇಳೆಗೆ ಧ್ಯಾನದಿಂದ ಎದ್ದು ನದಿಯ ಬಳಿ ಹೋಗಿ ಮುಖ ತೊಳೆದು ಬೋಧಿವೃಕ್ಷ (ಅರಳಿಮರ/ಅಶ್ವತ್ಥ ವೃಕ್ಷ) ದತ್ತ ತೆರಳಿದನು. ಬೋಧಿ ವೃಕ್ಷದ ಹಾದಿಯನ್ನು ದಿವ್ಯ ದೇವತೆಗಳು ಪರಿಮಳವಾದ ದಿವ್ಯ ಹೂವುಗಳಿಂದ ಸುಗಂಧಗಳಿಂದ ಸಿಂಗರಿಸಿದ್ದರು. ಹೀಗೆ ದಾರಿಯಲ್ಲಿ ಹೋಗುತ್ತಿರಲು ಹುಲ್ಲು ಕೊಯ್ಯುವ ಸೊತ್ಥಿಯನು ಎದುರಾಗಿ ಬರುತ್ತಿದ್ದನು. ದಿವ್ಯ ಲಕ್ಷಣಗಳುಳ್ಳ ವ್ಯಕ್ತಿ ಬರುತ್ತಿರುವುದನ್ನು

ಕಂಡ ಸೊತ್ಥಿಯನು ಎಂಟು ಸಿವುಡು ಹುಲ್ಲನ್ನು ಕೊಟ್ಟನು. ಬೋಧಿಸತ್ವನು ಹುಲ್ಲನ್ನು ಪಡೆದು ಬೋಧಿವೃಕ್ಷದ ಎತ್ತರದ ಭಾಗಕ್ಕೆ ಹೋದನು. ಬೋಧಿವೃಕ್ಷದ ದಕ್ಷಿಣ ಭಾಗದಿಂದ ನಿಂತು ಉತ್ತರ ದಿಕ್ಕನ್ನು ನೋಡಿದನು. ದಕ್ಷಿಣ ಭಾಗವು ಕುಸಿದು ಉತ್ತರ ಭಾಗದ ಭೂಮಿ ಮೇಲಾಯಿತು. ಒಂದು ಭಾಗದಲ್ಲಿ ನಿಂತರೆ ಇನ್ನೊಂದು ಭಾಗ ಮೇಲೇಳುವ ಹಿಂಬಂಡಿ ಮುಂಬಂಡಿಯಂತೆ ಆದುದನ್ನು ಕಂಡು ಸಂಬೋಧಿಗೆ ಇದು ಸರಿಯಾದ ಜಾಗವಲ್ಲವೆಂದು ಅರಿತನು. ಹೀಗೆ ಬೋಧಿಸತ್ವನು ಬೋಧಿ ವೃಕ್ಷವನ್ನು ಎಡಗಡೆಯಿಂದ ಪ್ರದಕ್ಷಿಣೆ ಮಾಡುತ್ತಾ ಪಶ್ಚಿಮಕ್ಕೆ ನಂತರ ಉತ್ತರಕ್ಕೆ ಬರಲು ಅಲ್ಲಿ ಏರುಪೇರುಗಳನ್ನು ನೋಡಿ ಪೂರ್ವದತ್ತ ಕಾಲಿಡಲು ಅಲ್ಲಿ ಭೂಮಿ ಸ್ಥಿರವಾಗಿರುವುದನ್ನು ಕಂಡು ಇದೇ ಸರಿಯಾದ ಜಾಗವೆಂದು ನಿರ್ಧರಿಸಿದನು.

ಬೋಧಿವೃಕ್ಷದ ಪೂರ್ವ ಭಾಗದಲ್ಲಿ ಹುಲ್ಲನ್ನು ಹರವಿ ಧ್ಯಾನ ಸಾಧನೆಗೆ ಜಾಗವನ್ನು ಸಿದ್ಧಪಡಿಸಿಕೊಂಡು ಬೆನ್ನು ಬೋಧಿವೃಕ್ಷದತ್ತ ಇರುವಂತೆ ಪೂರ್ವಾಭಿಮುಖವಾಗಿ ಪದ್ಮಾಸನದಲ್ಲಿ ಕುಳಿತು ಈ ರೀತಿಯ ಅದಿಟ್ಠಾಣವನ್ನು ಮಾಡಿಕೊಂಡನು. "ನನ್ನ ಚರ್ಮ, ಮಾಂಸಖಂಡಗಳು, ಮೂಳೆಗಳು ಉಡುಗಿಹೋಗಲಿ, ಮಾಂಸ ರಕ್ತಗಳು ಒಣಗಿಹೋಗಲಿ, ಸಂಬೋಧಿಯನ್ನು ಪಡೆಯುವವರೆಗೂ ನಾನು ಧ್ಯಾನಸ್ಥ ಸ್ಥಿತಿಯಿಂದ ಮೇಲೇಳುವುದಿಲ್ಲ. ಈ ದೃಢ ನಿರ್ಧಾರವನ್ನೇ 'ಚತುರಂಗ ವಿರಿಯ'ವೆಂದು ಕರೆಯುತ್ತಾರೆ. ಕುಳಿತುಕೊಂಡ ಧ್ಯಾನಸ್ಥಿತಿಯನ್ನು 'ಅಪರಾಜಿತ ಪಲ್ಲಂಕ'ವೆಂದು ಹೇಳುತ್ತಾರೆ. ಯಾವ ಜಾಗದಲ್ಲಿ ಕುಳಿತರೋ ಅದನ್ನು 'ಅವಿಜಹಿತ ಆಸನ'ವೆಂದು ಕರೆಯುತ್ತಾರೆ. ಅಂದರೆ ನೂರು ಸಿಡಿಲು ಗುಡುಗುಗಳನ್ನು ಬೋಧಿಸತ್ವನ ಮೇಲೆ ಮತ್ತು ಜಾಗದ ಮೇಲೆ ಎಸೆದುದರಿಂದ ಈ ಹೆಸರು.

ಯಾವ ಜೀವಿಗಳೆಲ್ಲ ಈ ಇಂದ್ರಿಯ ಜಗತ್ತಿನಲ್ಲಿ ವಾಸಿಸುತ್ತಿದ್ದಾರೊ, ಅವರ ಮೇಲೆಲ್ಲಾ ನಿಯಂತ್ರಣ ಹೊಂದಿರುವ 'ಮಾರ'ನು ಬೋಧಿಸತ್ವನ ದೃಢ ನಿರ್ಧಾರದ ಬಗ್ಗೆ ಎಚ್ಚರವಾದನು. ಬೋಧಿಸತ್ವನನ್ನು ಕಳೆದ ಆರು ವರ್ಷಗಳ ತೀವ್ರವಾದ ದೇಹದಂಡನೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಲೇ ಇದ್ದ. ಆದರೆ ಅವನಿಗೆ ಬೋಧಿಸತ್ವನ ಪರಿಶುದ್ಧ ಮನಸ್ಸಿನ ಮೇಲೆ ಪ್ರಭಾವವನ್ನು ಬೀರಲು ಆಗಲೇ ಇಲ್ಲ. ಮಾರನಿಗೆ ಹೀಗೆ ಅನ್ನಿಸಿತು: 'ಸಿದ್ಧಾರ್ಥನು ಈಗ ಬೋಧಿವೃಕ್ಷದ ಅಡಿಯಲ್ಲಿ 'ಸಮ್ಮಾಸಂಬೋಧಿ'ಗಾಗಿ ಕುಳಿತು ಈ ಲೋಕವನ್ನು ಮೀರಿ ಅಂದರೆ ಮಾನವ, ದೇವ, ಬ್ರಹ್ಮರ ಈ ಮೂರು ಲೋಕಗಳ ಮೇಲಿನ ನನ್ನ ನಿಯಂತ್ರಣದಿಂದ ದಾಟಿ ಹೋಗುತ್ತಿದ್ದಾನೆ. ನಾನೇನಾದರೂ ಇವನಿಗೆ ತನ್ನ ಗುರಿಯನ್ನು ಸಾಧಿಸಲು ಬಿಟ್ಟರೆ ಅವನೊಬ್ಬನಷ್ಟೇ ತಪ್ಪಿಸಿಕೊಳ್ಳುವುದಿಲ್ಲ, ಅಸಂಖ್ಯ ಜನರನ್ನು ಈ ಪ್ರಪಂಚದಿಂದಾಚೆ ಕರೆದುಕೊಂಡು ಹೋಗುತ್ತಾನೆ. ನಾನು ಅವನಿಗೆ ಹೀಗೆ ಮಾಡಲು ಬಿಡುವುದಿಲ್ಲ.'

ಮಾರ ಒಬ್ಬ ಶಕ್ತಿಶಾಲಿ ದೇವತೆ; ಪರನಿಮಿತ್ತ ವಸವತ್ತಿ ಎನ್ನುವ ಕಾಮಾವಚರ ದೇವಲೋಕಕ್ಕೆ ಸೇರಿದವನು. ಅವನು ಆ ಲೋಕದ ದೊರೆ ಏನಲ್ಲ, ಆದರೆ ಅಲ್ಲಿ



ವಾಸಿಸುವ ನಿಯಮಗಳನ್ನು ಬಿಟ್ಟ ದೇವತೆ. ಹೇಗೆ ಮನುಷ್ಯರಲ್ಲಿ ಒಬ್ಬ ದಂಗೆಕೋರ ನಾಯಕನು ಹೋರಾಟ ಮಾಡಿ, ತನ್ನ ದೇಶದ ಮೇಲೆಯೇ ಹರಿಹಾಯುವ, ಲೂಟಿ ಮಾಡುವ, ದೋಚುವ ಎಲ್ಲ ಅಪರಾಧಗಳನ್ನೆಸಗುತ್ತಾನೋ ಅಂತಹವನು ಈ ಮಾರ. ತನ್ನ ದಿವ್ಯಲೋಕದ ಮೇಲೆಯೇ ದಾಳಿ ಮಾಡುವ ಒಬ್ಬ ಬಹಿಷ್ಕೃತ ದೇವತೆ. ಇವನನ್ನು ಮತ್ತು ಇವನ ದುಷ್ಟ ಸೈನ್ಯವನ್ನು ಕಂಡರೆ ಭಯ. ಹಾಗಾಗಿ ಮೂರು ಲೋಕಗಳ ಮೇಲೂ ಹಿಡಿತ ಸಾಧಿಸಿದ್ದನು.

ಮಾರ ಹೀಗೆ ಯೋಚಿಸಿದ್ದ: 'ನಾನೇನಾದರೂ ಇವನಿಗೆ ಗುರಿಯನ್ನು ಸಾಧಿಸಲು ಬಿಟ್ಟರೆ ಅವನೊಬ್ಬನಷ್ಟೇ ನನ್ನ ಹಿಡಿತದಿಂದ ತಪ್ಪಿಸಿಕೊಳ್ಳುವುದಿಲ್ಲ, ಅಸಂಖ್ಯ ಜನರನ್ನೂ ಈ ಇಂದ್ರಿಯ ಪ್ರಪಂಚದಿಂದಾಚೆ ಸೆಳೆದುಕೊಂಡು ಹೋಗುತ್ತಾನೆ. ಆದ್ದರಿಂದ ನಾನು ಇವನಿಗೆ ಗುರಿಮುಟ್ಟಲು ಬಿಡುವುದಿಲ್ಲ.'

ಈ ಮಾನಸಿಕ ಸಿದ್ಧತೆಯಿಂದಲೇ ಮಾರನು ದಿವ್ಯಲೋಕಗಳಿಂದ ತನ್ನ ದುಷ್ಟ ಸೈನ್ಯವನ್ನು ಸೇರಿಸಿ, ಅವರೆಲ್ಲರಿಗೂ ಬೋಧಿಸತ್ವನನ್ನು ಮೂರುಕಡೆಗಳಿಂದ ಅಂದರೆ ಎಡ ಬಲ ಮತ್ತು ಹಿಂಬದಿಗಳಿಂದ ಎದುರಿಸುವಂತೆ ಆಜ್ಞೆ ಮಾಡಿದನು. ಅವನಿಗೆ ಬೋಧಿಸತ್ವನನ್ನು ಮುಖಾಮುಖಿಯಾಗಿ ಎದುರಿಸಲು ಸಾಧ್ಯವಿರಲಿಲ್ಲ, ಕಾರಣ ಬೋಧಿಸತ್ವನು ಶೀಲ ಪ್ರಜ್ಞೆಗಳ ಕುಂಭವೇ ಆಗಿದ್ದ. ಮಾರನು ತನ್ನ ಸೈನ್ಯಕ್ಕೆ ನಿರ್ದೇಶಿಸಿದ: "ನೀವೆಲ್ಲರೂ ಭಯಾನಕ ರೂಪಗಳನ್ನು ತಾಳಿ ಪ್ರತಿಯೊಬ್ಬರೂ ಒಂದೊಂದು ವಿಧವಾದ ಆಯುಧವನ್ನು ಹಿಡಿದು ಅವನ ಮೇಲೆ ಧಾಳಿ ಮಾಡಿ ಸಂಹರಿಸಿ. ಎಚ್ಚರವಿರಲಿ, ಅವನೊಬ್ಬ ಶಕ್ತಿಶಾಲಿ ಮಾನವ." ಹೀಗೆ ಹೇಳಿ ಅವನೇ ಸಾವಿರ ತೋಳುಗಳ ಭಯಾನಕ ಮತ್ತು ಮಾಯಾರೂಪವನ್ನು ತಾಳಿ ಒಂದೊಂದು ಕೈಗೂ ಒಂದೊಂದು ವಿಭಿನ್ನ ಅಸ್ತ್ರವನ್ನು ಹಿಡಿದ. ಗಿರಿಮೇಖಲವೆಂಬ ದಿವ್ಯ ಆನೆಯ ಮೇಲೆ ಭಯಂಕರ ಶಬ್ದವನ್ನು ಮಾಡುತ್ತಾ ನರಕವೇ ಮೇಲೆ ಬೀಳುವಂತೆ ಕೆಟ್ಟ ಬೈಗುಳನ್ನು ಸುರಿಸಿದ.

ಮೂರುಕಡೆಗಳಿಂದಲೂ ಮಾರನ ಸೈನ್ಯವು ಬೋಧಿಸತ್ವನನ್ನು ಮುಗಿಸಲು ಹವಣಿಸುತ್ತಿರುವುದನ್ನು ನೋಡಿ ದೇವತೆಗಳು, ಯಕ್ಷರು ಬಹುಸಂಖ್ಯೆಯಲ್ಲಿ ಬೋಧಿಸತ್ವನ ಬಳಿಬಂದು ನಮಸ್ಕರಿಸಲು ಮಾರನ ಸೈನ್ಯವು ದಿಕ್ಕಾಪಾಲಾಯಿತು. ಬೋಧಿಸತ್ವನು ಮಾರನ ಸೈನ್ಯವು ಕ್ರೂರಾಸ್ತ್ರಗಳಿಂದ ತನ್ನತ್ತ ಧಾವಿಸುತ್ತಿರುವುದನ್ನು ಗಮನಿಸಿದನು. ತನಗೆತಾನೇ ಹೇಳಿಕೊಂಡನು: 'ನಾನು ಇಲ್ಲಿ ಒಬ್ಬನೇ ಕುಳಿತಿದ್ದೇನೆ, ಮಾರನು ಮತ್ತು ಅವನ ಅಸಂಖ್ಯ ಸೈನ್ಯವು ನನ್ನ ಹತ್ತಿರ ಮೂರುಕಡೆಗಳಿಂದ ಬಂದು ನನ್ನನ್ನು ಈ ಜಾಗದಿಂದ ಉರುಳಿಸಲು, ನನ್ನೆಲ್ಲಾ ಪ್ರಯತ್ನಗಳನ್ನು ಮಣ್ಣುಮಾಡಲು ಸಂಬೋಧಿಯನ್ನು ಹೊಂದದಿರುವಂತೆ ಮಾಡಲು ಯತ್ನಿಸುತ್ತಿವೆ. ನನ್ನನ್ನು ರಕ್ಷಿಸಲು ನನ್ನ ತಂದೆ-ತಾಯಿಗಳಾಗಲಿ, ಬಂಧುಗಳಾಗಲಿ, ಸ್ನೇಹಿತರಾಗಲಿ, ಸೈನ್ಯವಾಗಲಿ ಯಾರೂ ಇಲ್ಲ. ನಿಜ, ಈ ಸಂದಿಗ್ಧ ಪರಿಸ್ಥಿತಿಯಲ್ಲಿ ನನ್ನ ಗೆಳೆಯರು, ರಕ್ಷಕರು ಎಂದರೆ ಮೂವತ್ತು

ಪಾರಮಿಗಳು. ಈ ಪಾರಮಿಗಳೇ ನನ್ನನ್ನು ಈ ಮಾರ ಮತ್ತು ಅವನ ಸೈನ್ಯದಿಂದ ರಕ್ಷಿಸುವ ಅಸ್ತ್ರಗಳು.'

ಹೀಗೆ ಮನಸ್ಸು ಮಾಡಿ ತುಲನೆಗೆ ನಿಲುಕದ ಶ್ರೇಷ್ಠ ಅಸ್ತ್ರದಿಂದ ಹೋರಾಡಲು ಬೋಧಿಸತ್ವನು ಸಿದ್ಧನಾಗಿ ಈ ಹಿಂದೆ ಮೂರು ದಶಪಾರಮಿಗಳ ಸಾರ್ಥಕ್ಯಕ್ಕಾಗಿ ಮಾಡಿದ ಅಸಂಖ್ಯ ಪುಣ್ಯ ಕರ್ಮಗಳನ್ನು ನೆನಪಿಸಿಕೊಂಡನು. ಈ ಪಾರಮಿಗಳ ಧ್ಯಾನದಲ್ಲಿಯೇ ಮುಳುಗಿರಲು ಮಾರನ ಭಯಬಿತ್ತುವ ಗದ್ದಲಗಳು ಶಕ್ತಿಯನ್ನು ಕಳೆದುಕೊಂಡವು. ಮಾರನ ಗೆಳೆಯರಿಗೆ ಇದು ತೇಜೋವಧೆಯಾಯಿತು. ಆದ್ದರಿಂದ ಮಾರನು ಪ್ರಬಲ ಮಾರಕಾಸ್ತ್ರಗಳನ್ನು ಪ್ರಯೋಗಿಸಲು ತೀರ್ಮಾನಿಸಿದನು. ಅದರಂತೆಯೇ ಬೋಧಿಸತ್ವನನ್ನು ತೂರಿ ಹೋಗುವಂತೆ, ಓಡಿಹೋಗುವಂತೆ ಮಾಡಲು ಪ್ರಕೃತಿಯ ಒಂಭತ್ತು ಭೀಕರ ಸುಗತಿಗಳನ್ನು ಪ್ರಯೋಗಿಸಿದನು.

1. ವಾತಮಂಡಲವನ್ನು ಪ್ರಯೋಗಿಸಿದನು-ಭಯಂಕರ ಬಿರುಗಾಳಿಯು ಎಲ್ಲ ದಿಕ್ಕುಗಳಿಂದ ಬೀಸುವಂತೆ ಮಾಡಿದನು. ಅದರ ಶಕ್ತಿ ಎಷ್ಟೆಂದರೆ ಪರ್ವತದ ಶಿಖರಗಳನ್ನು ಉರುಳಿಸುವ, ಬೃಹತ್ ಮರಗಳನ್ನು ಬುಡಮೇಲೆ ಮಾಡುವ, ಅರಣ್ಯಗಳನ್ನು ನಾಶಮಾಡುವ, ಮನುಷ್ಯ ಸಮೂಹವನ್ನೇ ಪುಡಿಪುಡಿ ಮಾಡುವ ಶಕ್ತಿ ಅದಕ್ಕಿತ್ತು. ಆದರೆ ಆ ಭಯಾನಕ ಬಿರುಗಾಳಿಯು ಬೋಧಿಸತ್ವನ ಹತ್ತಿರ ಬರುತ್ತಿದ್ದಂತೆ ಸತ್ವಹೀನವಾದುವಷ್ಟೇ ಅಲ್ಲ, ಬೋಧಿಸತ್ವನ ಚೀವರದ ಒಂದು ಕೊನೆಯನ್ನು ಅಲುಗಾಡಿಸಲೂ ಸಾಧ್ಯವಾಗಲಿಲ್ಲ. ಬೋಧಿಸತ್ವನ ಪಾರಮಿಗಳ ಶಕ್ತಿ ಅಷ್ಟೊಂದಿತ್ತು!
2. ವಾಯುಶಕ್ತಿಯ ಪತನದಿಂದ ಎದೆಗುಂದಿದ ಮಾರನು 'ನಾನು ಇವನನ್ನು ನೀರಿನ ಭಯಂಕರ ಪ್ರಹಾರದಿಂದ ಮಣಿಸುವೆನು' ಎಂದು ತೀರ್ಮಾನಿಸಿದನು. ಕೆಲವೇ ಕ್ಷಣದಲ್ಲಿ ಆಕಾಶದಲ್ಲಿ ಕಪ್ಪು ಮೋಡಗಳು ಸೇರಿ ದಬದಬ ಶಬ್ದದ ಮಳೆಯನ್ನು (ಮಹಾವಸ್ಸಂ) ಸುರಿಸಿದವು. ಈ ಮುಸಲಧಾರೆಯು ಅರಣ್ಯವನ್ನು ಮುಳುಗಿಸಿ ಬೆಟ್ಟದ ತಪ್ಪಲುಗಳನ್ನಾವರಿಸಿದವು. ಬೋಧಿಸತ್ವನ ಬಳಿಗೆ ಬರುವ ಹೊತ್ತಿಗೆ ಪ್ರವಾಹ ರೂಪವೇ ಇರದೆ ಬೋಧಿಸತ್ವನ ಚೀವರದ ಒಂದು ಎಳೆಯನ್ನೂ ನೆನೆಸಲಾಗಲಿಲ್ಲ. ಬೋಧಿಸತ್ವನ ಪಾರಮಿಯ ಶಕ್ತಿ ಅಷ್ಟೊಂದಿತ್ತು!
3. ಪ್ರವಾಹ ಅಸ್ತ್ರದ ಪತನದಿಂದ ಎದೆಗುಂದಿದ ಮಾರನು 'ನಾನು ಈ ಬೋಧಿಸತ್ವನನ್ನು ಕಲ್ಲುಗಳನ್ನು ಸುರಿಸಿ ಧೂಳೀಪಟ ಮಾಡುತ್ತೇನೆ' ಎಂದು ತೀರ್ಮಾನಿಸಿದನು. ಹೀಗೆ ಅವನು ಕಲ್ಲುಗಳ ಮಳೆ (ಪಾಸಾಣ ವಸ್ಸಂ)ಯನ್ನೇ ಸುರಿಸಿದನು. ದೊಡ್ಡ ದೊಡ್ಡ ಬಂಡೆಗಲ್ಲುಗಳನ್ನು ಪರ್ವತಗಳಿಂದ ಉರುಳಿಸಿ ಕಲ್ಲಿನ ಧೂಳು ಎಲ್ಲೆಡೆ ಆವೃತವಾಯಿತು. ಅವನು ಬೋಧಿಸತ್ವನ ಹತ್ತಿರ ಬರುವ ಹೊತ್ತಿಗೆ ದಿವ್ಯ



ಕುಸುಮಮಾಲೆ (ದಿವ್ಯ ಮಾಲೆ) ಗಳಾಗಿ ಪರಿವರ್ತಿತವಾದವು. ಪಾರಮಿಗಳ ಶಕ್ತಿ ಹಾಗಿತ್ತು.

4. ಮತ್ತೆ ಮಾರನು ಯೋಚಿಸಿದನು: 'ನಾನು ಇವನನ್ನು ತುಂಡು ತುಂಡು ಮಾಡಿ ನಾಶಗೊಳಿಸುತ್ತೇನೆ'. ಅಸ್ತ್ರಗಳ ವರ್ಷವನ್ನೇ (ಪಹಾರ ವಸ್ಸಂ) ಸುರಿಸಿದನು. ಎಲ್ಲರೀತಿಯ ಮಾರಕಾಸ್ತ್ರಗಳು ಅಂದರೆ ಒಂದುಕಡೆ ಚೂಪಿನ, ಎರಡುಕಡೆ ಚೂಪಿನ ಖಡ್ಗ, ಕತ್ತಿ, ಈಟಿಗಳು ಹೊಗೆಯನ್ನು ಸುರಿಸುತ್ತಾ ಆಗಸದ ಎಲ್ಲ ದಿಕ್ಕುಗಳಿಂದ ಮಳೆಗರೆಯಲು ಅವೆಲ್ಲಾ ಮಲ್ಲಿಗೆ ಹೂವುಗಳಾಗಿ ಬೋಧಿಸತ್ವನ ಸುತ್ತಲೂ ಬಿದ್ದವು. ಪಾರಮಿಗಳ ಶಕ್ತಿ ಹಾಗಿತ್ತು.
5. ಈ ಎಲ್ಲಾ ವೈಫಲ್ಯಗಳಿಂದ ಕೋಪೋದ್ರಿಕ್ತನಾಗಿ ಮಾರನು ಪ್ರತಿಜ್ಞೆಗೈದನು: 'ನಾನು ಇವನನ್ನು ಬೂದಿಯಾಗುವವರೆಗೆ ಸುಡುತ್ತೇನೆ'. ಬೆಂಕಿಯ ಕೆನ್ನಾಲಿಗೆಗಳು ಏಳುತ್ತಾ, ಹೊಗೆಯನ್ನು, ಪ್ರಖರ ಶಾಖವನ್ನು, ಉಗುಳುವ ಅಗ್ನಿಮಳೆಯನ್ನು (ಅಂಗಾರ ವಸ್ಸಂ) ಸುರಿಸಿದನು. ಬೋಧಿಸತ್ವನ ಪಾರಮಿಗಳ ಸತ್ವದಿಂದಾಗಿ ಅವೆಲ್ಲಾ ಸುಂದರ ಸುವಾಸನೆಯ ಹೂವುಗಳಾಗಿ ಪರಿವರ್ತಿತವಾದವು!
6. ಮತ್ತೆ ಕೋಪಗೊಂಡ ಮಾರನು ಬಿಸಿ ಬೂದಿಯ ಮಳೆ (ಕುಕ್ಕುಲ ವಸ್ಸಂ) ಸುರಿಸಿದನು. ಈ ಬೂದಿಗಳು ಎಷ್ಟು ಬಿಸಿ ಎಂದರೆ ಯಾವುದೇ ವಸ್ತುವಿನ ಮೇಲೆ ಬೀಳಲಿ ಅವು ಕೂಡಲೇ ಸುಟ್ಟು ಹೋಗುತ್ತವೆ. ಆದರೆ ಬೋಧಿಸತ್ವನನ್ನು ಸಮೀಪಿಸುತ್ತಿದ್ದಂತೆಯೇ ಅವನ ಪಾರಮಿಯ ಶಕ್ತಿಯಿಂದಾಗಿ ದಿವ್ಯಚಂದನ ಪುಡಿಗಳಾಗಿ ಪರಿಣಮಿಸಿದವು.
7. ಇನ್ನಷ್ಟೂ ಎದೆಗುಂದಿದ, ಕಳೆಗುಂದಿದ ಮಾರನು ಬಹಳ ಸೂಕ್ಷ್ಮವಾದ ಸಣ್ಣದಾದ ಪುಡಿಯನ್ನು, ಬಿಸಿ ಮರಳನ್ನು (ಬಾಲುಕಾ ವಸ್ಸಂ) ಸುರಿಸಿದನು. ಅದರ ಶಕ್ತಿ ಎಷ್ಟೆಂದರೆ ಯಾವುದೇ ವಸ್ತುವಿನ ಮೇಲೆ ಅದು ಬಿದ್ದರೆ ಪೂರ್ತಿ ಕರಕಾಗುವಂತೆ ಮಾಡುವುದು. ಬೋಧಿಸತ್ವನ ಮೇಲೆ ಅವು ಬೀಳಲು ಅವನ ಪಾರಮಿಯ ಶಕ್ತಿಯಿಂದ ಅವು ದಿವ್ಯ ಪರಿಮಳದ ಪುಡಿಯಾಗಿ ಪರಿವರ್ತಿತವಾದವು!
8. ಇನ್ನಷ್ಟು ಖೇದಗೊಂಡ ಮಾರನು ಬಿಸಿ ಮಣ್ಣಿನ ಮುದ್ದೆಗಳು ಹೊಗೆಯನ್ನು ಉಗುಳು (ಕಲಾಲ ವಸ್ಸಂ) ವಂತೆ ಮಾಡಿದನು. ಅವು ಬೋಧಿಸತ್ವನ ಬಳಿಗೆ ಸೇರುತ್ತಲೇ ಪಾರಮಿಗಳ ಪ್ರಭಾವದಿಂದ ಗಂಧದ ಮುದ್ದೆಗಳಾದವು.
9. ಈಗಂತೂ ತಲೆಕೆಟ್ಟವನಾಗಿ ಮಾರನು ಭಯಂಕರ ಕತ್ತಲನ್ನು, ಕುರುಡುಗಟ್ಟುವಂತೆ ಕಪ್ಪನ್ನು ನಿರ್ಮಿಸಿದನು. ಬೋಧಿಸತ್ವನು ತನ್ನ ರೋಮ ಕೂಪಗಳಿಂದ ಬೆಳಕಿನ ಕಿರಣಗಳನ್ನು ಬಿಟ್ಟನು. ಮಬ್ಬುಗೂಡಿಸುವ ಕತ್ತಲೆ ಬೋಧಿಸತ್ವನ ಬಳಿ ಬರುವ ಹೊತ್ತಿಗೆ ಸೂರ್ಯಕಿರಣಗಳು ಮೂಡುತ್ತಲೇ ರಾತ್ರಿಗತ್ತಲು ಇಲ್ಲವಾಗುವಂತೆ ಮಾಯವಾಯಿತು.

ಹೀಗೆ ಬೋಧಿಸತ್ವನನ್ನು ತನ್ನ ಒಂಭತ್ತು ಮಾರಕಾಸ್ತ್ರಗಳಿಂದ ಸೋಲಿಸಲು ವಿಫಲನಾದ ಮಾರನು ತನ್ನ ಸೈನ್ಯಕ್ಕೆ ಒಮ್ಮೆಲೇ ನುಗ್ಗಲು ಆದೇಶಿಸಿದನು. ಆನಂತರ ತನ್ನ ಗಿರಿಮೇಖಲವನ್ನು ಹತ್ತಿ ಅತ್ಯಂತ ಶಕ್ತಿಯುತವಾದ ಸರ್ವನಾಶ ಮಾಡುವ ಚಕ್ರಾಸ್ತ್ರವನ್ನು ಹಿಡಿದು ಹೇಳಿದನು: "ಸಿದ್ಧಾರ್ಥನೆ, ಕೂಡಲೇ ಈ ಜಾಗವನ್ನು ಖಾಲಿ ಮಾಡು, ಅದು ನಿನಗೆ ಸೇರಿದ್ದಲ್ಲ, ಅದು ನನಗೆ ಸೇರಿದ್ದು". ಮತ್ತೆ ಘರ್ಜಿಸಿದ: "ನೀನು ಈ ಜಾಗವನ್ನು ಖಾಲಿ ಮಾಡದಿದ್ದರೆ, ನಾನು ಈ ಚಕ್ರಾಸ್ತ್ರವನ್ನು ಪ್ರಯೋಗಿಸುತ್ತೇನೆ, ಅದು ನಿನ್ನನ್ನು ನಿರ್ನಾಮಗೊಳಿಸುತ್ತದೆ."

ಈಗ ಬೋಧಿಸತ್ವ ಮತ್ತು ಮಾರರ ಮಧ್ಯೆ ಈ ಸಂವಾದ ನಡೆಯಿತು:

ಬೋಧಿಸತ್ವ : "ಮಾರ ನೀನು ಹತ್ತು ಪಾರಮಿಗಳನ್ನಾಗಲೀ ಅಥವಾ ಉಪಪಾರಮಿಗಳನ್ನಾಗಲೀ ಅಥವಾ ಹತ್ತು ಪರಮಾರ್ಥ ಪಾರಮಿಗಳನ್ನಾಗಿ ಈಡೇರಿಸಿಲ್ಲ. ನೀನು ಯಾವುದೇ ರೀತಿಯ ವಿಶಿಷ್ಟವಾದ ಪುಣ್ಯಕರ್ಮಗಳು ಎಂದರೆ ಐದು ಮಹಾತ್ಯಾಗಗಳನ್ನಾಗಲಿ ಮಾಡಿಲ್ಲ. ಪ್ರಾಪಂಚಿಕ ಜನರ ಉಪಯೋಗಕ್ಕಾಗಿ ಯಾವ ಸತ್ಕಾರ್ಯಗಳನ್ನೂ ಮಾಡಿಲ್ಲ. ಇನ್ನೂ ಹೇಳಬೇಕೆಂದರೆ ನಿನ್ನ ಪ್ರಜ್ಞೆಯ ಬೆಳವಣಿಗೆಗಾಗಿ ಯಾವ ಪ್ರಯತ್ನವನ್ನೂ ಮಾಡಿಲ್ಲ. ಆದರೆ ನಾನು ಈ ಎಲ್ಲವನ್ನೂ ಸಾಧಿಸಿದ್ದೇನೆ ಮತ್ತು ಸಾರ್ಥಕ ಮಾಡಿಕೊಂಡಿದ್ದೇನೆ. ಅಪರಾಜಿತ ಆಸನ ಎಂದು ಕರೆಯಲ್ಪಡುವ ಈ ಸ್ಥಾನವು ನನಗೆ ತಕ್ಕುದಾದುದು, ನಿನಗೆ ಅಲ್ಲ."

ಈ ಮಾತುಗಳನ್ನು ಕೇಳಿದ ಮೇಲೆ ಮಾರನ ಕೋಪ ಇನ್ನಷ್ಟು ಜಾಸ್ತಿಯಾಗಿ ಮಾರಕವಾದ ಚಕ್ರಾಸ್ತ್ರವನ್ನು ಪ್ರಯೋಗಿಸಿದನು. ಬೋಧಿಸತ್ವನ ಮೂರು ದಸಪಾರಮಿಗಳ ಸತ್ಯದ ದೆಸೆಯಿಂದಾಗಿ ಅದರ ಶಕ್ತಿಯ ಫಲವಾಗಿ ಚಕ್ರಾಸ್ತ್ರವು ಬೋಧಿಸತ್ವನ ಮುಂದೆ ಹೂವಿನ ಹಾರವಾಗಿ ಆಕಾಶದಲ್ಲಿಯೇ ನಿಂತಿತು. ಹಿಂದೆಂದಿಗಿಂತಲೂ ಕೋಪಾವಿಷ್ಟನಾಗಿ ಮಾರನು ಪರ್ವತಗಳನ್ನೇ ಬೋಧಿಸತ್ವನ ಮೇಲೆ ಎಸೆದು ಪುಡಿಮಾಡಲು ಹೋದನು. ಜನ್ಮದಿಂದ ಜನ್ಮಕ್ಕೆ ಪಾರಮಿಗಳನ್ನು ನಡೆಸುತ್ತ ಬಂದ ಪ್ರಶಾಂತ ಬೋಧಿಸತ್ವನ ಮುಂದೆ ಇವೆಲ್ಲವೂ ದಿವ್ಯ ಹೂಗುಚ್ಛಗಳಾದವು.

ಗಿರಿಮೇಖಲದಿಂದ ಕೆಳಗೆ ಇಳಿದ ಮಾರನು ಬೋಧಿಸತ್ವನ ಮುಂದೆ ನಿಂತು ಉದ್ಧಟತನದ ವಾದವನ್ನು ಎತ್ತಿದನು. ಸಿದ್ಧಾರ್ಥನು ಆ ಜಾಗವನ್ನು ಪಡೆಯಲು ಅರ್ಹತೆಯಿದೆ ಎಂದು ಹೇಳಲು ಸಾಕ್ಷಿಯನ್ನು ತೋರಿಸುವಂತೆ ಮಾರನು ಕೇಳಿದನು. ಮುಂದೆ ಬುದ್ಧನಾಗುವ ಬೋಧಿಸತ್ವನು: "ಮಾರ, ಸಂಬೋಧಿಗಾಗಿ ಇರುವ ಈ ಅಪರಾಜಿತ ಆಸನ ನಿನ್ನ ಉತ್ತಮ ಪುಣ್ಯ ಕರ್ಮಗಳ ದೆಸೆಯಿಂದಾಗಿ ಎಂದು ಹೇಳಲು ನಿನ್ನ ಸಾಕ್ಷಿಗಳು ಯಾರು?" ಎಂದನು. ಅಲ್ಲೇ ಇರುವ ತನ್ನ ಅಪಾರ ಸೈನ್ಯವನ್ನು ತೋರಿಸಿ "ಇವರೇ ಸಾಕ್ಷಿಗಳು" ಎಂದು ಮಾರನು ಹೇಳಲು ಅವನ ಸ್ನೇಹಿತರೆಲ್ಲಾ "ನಾನು ಸಾಕ್ಷಿ, ನಾನು ಸಾಕ್ಷಿ" ಎಂದು ಒಕ್ಕೊರಲಿನಿಂದ ಹೇಳಿದರು.



ಮಾರನು ಈಗ ಬೋಧಿಸತ್ವನಿಗೆ ಆಹ್ವಾನ ಒಡ್ಡಿ "ಈಗ ನಿನ್ನ ಸಾಕ್ಷಿದಾರರನ್ನು ತೋರಿಸು" ಎಂದನು. ಮುಂದಿನ ಸಂವಾದದಲ್ಲಿ ಪ್ರಶಾಂತ ಚಿತ್ತದಿಂದ ಬೋಧಿಸತ್ವನು ನುಡಿದನು:

"ನೀನು ಇಂದ್ರಿಯ ಜ್ಞಾನವುಳ್ಳ ಜೀವಿಗಳನ್ನು ಸಾಕ್ಷಿಗಳಾಗಿ ತೋರಿಸಿದೆ. ನನಗೆ ಆ ರೀತಿಯ ಇಂದ್ರಿಯ ಜ್ಞಾನವುಳ್ಳ ಜೀವಿಗಳಿಲ್ಲ. ಆದರೆ ಯಾವುದೇ ಇಂದ್ರಿಯ ಜ್ಞಾನವಿರದ ಈ ಭೂಮಿಯನ್ನೇ ನಾನು ಈ ಹಿಂದೆ ಮಾಡಿದ ಅಸಂಖ್ಯಾತ ಶ್ರೇಷ್ಠ ಪುಣ್ಯಕರ್ಮಗಳ ಸಾಕ್ಷಿಯನ್ನಾಗಿ ಕೊಡುತ್ತೇನೆ. 'ಈ ಭೂಮಿ ನನ್ನ ಸಾಕ್ಷಿಯಾಗಲಿ' ಎಂದು ಹೇಳಿ ಕೈಯ ಮಧ್ಯ ಬೆರಳಿನಿಂದ ಭೂಮಿಯನ್ನು ಮುಟ್ಟಿದನು. ಏನದ್ಭುತ ! ಈ ಮಹಾ ಪೃಥ್ವಿಯು ಸಾವಿರಾರು ಗುಡುಗು-ಸಿಡಿಲುಗಳ ಸಮೇತ ಜೋರಾಗಿ ತಿರುಗಲು ಎಲ್ಲಾ ಲೋಕಗಳು ಕಂಪಿಸಿದವು.

ಈ ಅದ್ಭುತ ಘಟನೆಯಿಂದಾಗಿ ಮಾರನ ಸೈನ್ಯ ದಿಕ್ಕಾಪಾಲಾಗಿ ಓಡಿತು. ಗಿರಿಮೇಖಲವು ಭಯದಿಂದ ನಡುಗಿ ಮೊಳಕಾಲುಗಳ ಮೇಲೆ ಬಿದ್ದು, ಆನಂತರ ಮಾರನ ಸೈನ್ಯದಂತೆಯೇ ಓಡಿಹೋಯಿತು. ಮಾರನು ಭಯಾವೃತನಾಗಿ ಆಕಡೆ-ಈಕಡೆ ನೋಡದೆ ಕುಗ್ಗಿದವನಾಗಿ ಓಡಿಹೋದನು.

ಮಾರನು ಭಯದಿಂದ ಕಾಲ್ಕಿತ್ತಿದಂತೆ ಆಕಾಶವಾಸಿಗಳು ದೇವತೆಗಳು ಮತ್ತು ಬ್ರಹ್ಮರು ತಮ್ಮ ಅಡಗುದಾಣಗಳಿಂದ ಹೊರಬಂದು ಏಕಕಂಠದಿಂದ "ಬೋಧಿಸತ್ವ ಸಿದ್ಧಾರ್ಥನು ಮಾರನನ್ನು ಜಯಿಸಿದ, ಮಾರನು ಸೋತ" ಎಂದು ಕೂಗಿದರು. ಮಾರನ ಮೇಲಿನ ಈ ಮಹಾವಿಜಯವನ್ನು ಸಂಭ್ರಮಿಸಲು ಎಲ್ಲರೂ ಬೋಧಿಸತ್ವನ ಮುಂದೆ ಬಂದು ದಿವ್ಯ ಪುಷ್ಪಗಳನ್ನು ಹಿಡಿದು ವಂದಿಸಿದರು. ಎಲ್ಲರೂ ವಿಜಯದ ಹಾಡುಹಾಡಿ ಬೋಧಿಸತ್ವನನ್ನು ಹೊಗಳಿದರು. ಹೀಗೆ ಮಾರನನ್ನು ಪಶ್ಚಿಮ ದಿಗಂತದಲ್ಲಿ ಸೂರ್ಯಾಸ್ತವಾಗುವ ಮುನ್ನವೇ ಸೋಲಿಸಿ ದಿವ್ಯ ಝಾನದಲ್ಲಿ ಮುಳುಗಿದನು. ರಾತ್ರಿಯ ಮೊದಲ ಜಾವದಲ್ಲಿ ಅಂದರೆ ರಾತ್ರಿ ಆರರಿಂದ ಹತ್ತರವರೆಗೆ ನಾಲ್ಕು ಝಾನಗಳನ್ನು ಒಂದಾದಮೇಲೊಂದರಂತೆ ಸಾಧಿಸಿ ಸಮ್ಮಾಸಂಬುದ್ಧ ಶಿಖರವನ್ನು ಮುಟ್ಟುವ ಮುನ್ನ ಪೂರ್ವಭಾವಿಯಾಗಿ ಲೋಕೋತ್ತರ ಶಕ್ತಿಗಳನ್ನು ಪ್ರಯೋಗಿಸಿದನು.

## ಸಮ್ಮಾಸಂಬೋಧಿಯ ಸಾಕ್ಷಾತ್ಕಾರ

ಬೋಧಿಸತ್ವನು ಮೂರು ವಿದ್ಯೆಗಳ ಸಾಕ್ಷಾತ್ಕಾರಕ್ಕಾಗಿ ಲೋಕೋತ್ತರ ಜ್ಞಾನ ಮತ್ತು ಅಭಿಜ್ಞಾಗಳನ್ನು ಪೂರ್ಣ ಪ್ರಮಾಣದಲ್ಲಿ ವೃದ್ಧಿಸಿಕೊಂಡನು. ಮೊದಲಿಗೆ ಞಾನ ಮತ್ತು ಅಭಿಜ್ಞಾಗಳನ್ನು ಪ್ರಯೋಗಿಸಿ ತನ್ನ ಹಿಂದಿನ ಜನ್ಮಗಳನ್ನು ನೋಡಿದನು (ಪುಬ್ಬೇನಿವಾಸಾನುಸ್ಸತಿ). ಎರಡನೆಯದರಲ್ಲಿ ಞಾನ ಮತ್ತು ಅಭಿಜ್ಞಾಗಳನ್ನು ಪ್ರಯೋಗಿಸಿ ಬಹು ದೂರದಲ್ಲಿರುವ ನಿರ್ದಿಷ್ಟ ಸಂಗತಿಗಳನ್ನು ಅಥವಾ ವಸ್ತುವನ್ನು ನೋಡುವ ದಿವ್ಯಶಕ್ತಿಯನ್ನು ಪಡೆದನು (ದಿವ್ಯಚಕ್ಖು). ಮೂರನೆಯದರಲ್ಲಿ ನಿಬ್ಬಾಣವನ್ನು ಸಾಧಿಸಿ

ಅರಹಂತತ್ವವನ್ನು ಮುಟ್ಟಲು ಚತುರಾರ್ಯ ಸತ್ಯಗಳ ನಿಲುವನ್ನು ಸೇರಲು ಬೇಕಾದ ಮಾನಸಿಕ ಕ್ಲೇಶಗಳನ್ನು ನಾಶಮಾಡುವ ಜ್ಞಾನವನ್ನು ಪಡೆದನು (ಆಸವಕ್ಖಯಞ್ಞಾನ).

ಮೊದಲನೆ ವಿದ್ಯೆಯಾದ ಪುಬ್ಬೇನಿವಾಸಾನುಸ್ಸತಿಯಿಂದ ಒಬ್ಬನು ತನ್ನ ಹಿಂದಿನ ಜನ್ಮಗಳ ಎಲ್ಲ ಘಟನೆಗಳನ್ನು ಮತ್ತು ಅನುಭವಗಳನ್ನು ಸ್ಮರಿಸಿಕೊಳ್ಳುವ ಶಕ್ತಿಯನ್ನು ಪಡೆಯುತ್ತಾನೆ. ಇದರಲ್ಲಿ ಎರಡು ಲೋಕೋತ್ತರ ಶಕ್ತಿಗಳಾದ ಞಾನ (ಜ್ಞಾನ) ಮತ್ತು ಅಭಿಞ್ಞಾ (ಅಭಿಜ್ಞಾ) ಎಂಬ ಸಿದ್ಧಿಗಳು ಅಡಗಿವೆ. ಬೋಧಿಸತ್ವನು ಅಭಿಞ್ಞಾದ ಮೂಲಕ ಅವರೋಹಣ ಕ್ರಮದಲ್ಲಿ ತನ್ನ ಹಿಂದಿನ ಜನ್ಮವಾದ ದೀಪಂಕರ ಬುದ್ಧನಿಂದ ಬೋಧಿಸತ್ವನೆಂದು ಗುರುತಿಸಿಕೊಂಡ ಋಷಿ ಸುಮೇಧನ ಜನ್ಮದಿಂದ ಹಿಡಿದು ಆ ಹಿಂದಿನ ಎಲ್ಲ ಎಣಿಸಲಾಗದ ನಾಲ್ಕು ದಶಸಹಸ್ರ ಕಲ್ಪಗಳಲ್ಲಿ ತಳೆದ ಅಸಂಖ್ಯ ಜನ್ಮಗಳ ಎಲ್ಲಾ ಘಟನೆಗಳನ್ನು, ಕಾರ್ಯಗಳನ್ನು, ಅನುಭವಗಳನ್ನು ಸ್ಮರಣೆಗೆ ತಂದುಕೊಂಡು ಅವೆಲ್ಲವನ್ನೂ ಅವಲೋಕಿಸಿದನು. ಆನಂತರದಲ್ಲಿ ಆರೋಹಣ ಕ್ರಮದಲ್ಲಿ ಬೋಧಿಸತ್ವನು ಹಂತಹಂತವಾಗಿ ಹಲವಾರು ಜನ್ಮಗಳನ್ನು ತಳೆದು ವಿಕಾಸಹೊಂದಿ ಕೊನೆಗೆ ದಿವ್ಯ ತುಸಿತ ಲೋಕದ ದೊರೆ ಸೇತಕೇತು ದೇವನಾಗ ಉನ್ನತ ಸ್ಥಿತಿಯನ್ನು ಹೊಂದಿ ಇನ್ನು ರಾಜಕುಮಾರ ಸಿದ್ಧಾರ್ಥ ಗೌತಮ ಜನ್ಮವೇ ಕೊನೆ ಎಂಬ ಹಂತದವರೆಗಿನ ಜನ್ಮಗಳೆಲ್ಲವನ್ನು ಸ್ಮರಿಸಿಕೊಂಡನು.

ಈ ಮೊದಲ ವಿದ್ಯೆಯಲ್ಲಿನ ಎರಡು ಅಂಗಗಳು ಞಾನ ಮತ್ತು ಅಭಿಞ್ಞಾ ಇವೆರಡು ಒಂದರ ಹಿಂದೆ ಒಂದಿದ್ದು ಏಕಕಾಲದಲ್ಲಿ ಇವೆರಡೂ ಕೆಲಸ ಮಾಡುತ್ತವೆ. ಞಾನದಿಂದ ಬೋಧಿಸತ್ವನು ತನ್ನ ಹಿಂದಿನ ಎಲ್ಲ ಜನ್ಮಗಳನ್ನು ಅವರೋಹಣ ಆರೋಹಣ ಕ್ರಮದಲ್ಲಿ ನೋಡುವಂತೆ ಮತ್ತು ತಿಳಿಯುವಂತೆ ಮಾಡಿದರೆ ಅಭಿಞ್ಞಾವು ಆ ಜನ್ಮಗಳಲ್ಲಿನ ಎಲ್ಲ ವಿವರಗಳನ್ನು ಸ್ಮರಿಸಿಕೊಳ್ಳುವಂತೆ ಮಾಡಿತು. ಬೋಧಿಸತ್ವನು ಈ ಞಾನ ಮತ್ತು ಅಭಿಞ್ಞಾವನ್ನು ರಾತ್ರಿಯ ಮೊದಲ ಜಾವದಲ್ಲಿ ರಾತ್ರಿ ಆರರಿಂದ ಹತ್ತರವರೆಗೆ) ಸಿದ್ಧಿಸಿಕೊಂಡನು. ಈ ಸಿದ್ಧಿಯೇ ಸಮ್ಮಾಸಂಬೋಧಿಯು ಖಂಡಿತವಾಗಿಯೂ ಸಾಕ್ಷಾತ್ಕಾರವಾಗುತ್ತದೆಂಬ ಭರವಸೆಯನ್ನು ಮೂಡಿಸಿತು.

ರಾತ್ರಿಯ ಎರಡನೇ ಜಾವದಲ್ಲಿ (ರಾತ್ರಿ ಹತ್ತರಿಂದ ಎರಡರವರೆಗೆ) ಬೋಧಿಸತ್ವನಿಗೆ ಎರಡನೇ ವಿದ್ಯೆ ದಿವ್ಯಚಕ್ಷುವು ಪ್ರಾಪ್ತವಾಯಿತು. ಈ ದಿವ್ಯಚಕ್ಷುವಿನ ಮೂಲಕ ಬೇರೆಯವರು ಒಂದಾದ ಮೇಲೊಂದರಂತೆ ಜನ್ಮ ತಳೆಯುವ ಆ ರೀತಿಯ ಜನ್ಮಕ್ಕೆ ಕಾರಣಗಳೇನು ಎಂಬುದನ್ನು ಅರಿತನು.

ಞಾನ ಮತ್ತು ಅಭಿಞ್ಞಾದ ಎರಡು ಅಂಗಗಳು: 1. ಚುತೂಪಪಾತ ಅಭಿಞ್ಞಾ; ಅಂದರೆ ಬೇರೆ ಜೀವಿಗಳ ಸಾವು ಮತ್ತು ಮರುಹುಟ್ಟುಗಳನ್ನು ನೋಡುವ ಞಾನ ಮತ್ತು ಅಭಿಞ್ಞಾ. 2. ಯಥಾ ಕಮ್ಮೂಪಗ ಅಭಿಞ್ಞಾ; ಅಂದರೆ ಪುಣ್ಯ ಅಥವಾ ಅಪುಣ್ಯ ಕಮ್ಮಗಳ ಹಿಂದೆ ಅಡಗಿರುವ ಕಾರಣಗಳನ್ನು ನೋಡುವ ಞಾನ ಮತ್ತು ಅಭಿಞ್ಞಾ.



ಬೋಧಿಸತ್ವನು ಮಧ್ಯರಾತ್ರಿಯ ಹೊತ್ತಿಗೆ ದಿವ್ಯಚಕ್ಷುವನ್ನು ಹೊಂದಿ ಆ ಮೂಲಕ ಜೀವಿಗಳು ಹೇಗೆ ಸತ್ತು ಮತ್ತೆ ಹುಟ್ಟುತ್ತವೆಂಬುದನ್ನು; ಅಂದರೆ ಜೀವಿಗಳು ಸಾವಿನ ಅಂಚಿನಿಂದ ಇನ್ನೊಂದು ಅಸ್ತಿತ್ವಕ್ಕೆ ಹೋಗಿ ಮರುಹುಟ್ಟು ಪಡೆಯುತ್ತವೆಂಬುದನ್ನು ನೋಡಿದನು. ಚುತೂಪಪಾತ ಅಭಿಞ್ಞಾದ ಮೂಲಕ ಅವುಗಳ ವಂಶಾವಳಿಯನ್ನು ಅಂದರೆ ಅವು ಉತ್ತಮ ಕೀಳು ಕುಲಗಳಲ್ಲಿ, ಸುಂದರವಾಗಿ ಕುರೂಪಿಯಾಗಿ, ಸಿರಿವಂತರಾಗಿ ಬಡವರಾಗಿ, ಇತ್ಯಾದಿಯಾಗಿ ಹೇಗೆ ಮತ್ತು ಏಕೆ ಹುಟ್ಟುತ್ತಾರೆಂದು ಮತ್ತು ಅಂತಹ ಸ್ಥಿತಿಗಳ ಹಿಂದಿನ ಉತ್ತಮ ಅನುತ್ತಮ ಕರ್ಮಗಳು ಕಾರಣಗಳನ್ನು ನೋಡಿದನು.

ಪ್ರಬಲ ಒಳನೋಟದಿಂದ ದುರ್ಗತಿ ಸದ್ಗತಿಗಳ ಹಿಂದಿನ ಕಮ್ಮಗಳ ಹಿನ್ನೆಲೆಯನ್ನು ನೋಡಿದನು. ದುರ್ಗತಿಯಲ್ಲಿ ಹುಟ್ಟುವವರು ನರಕಗಳಲ್ಲಿ ಅಥವಾ ಪ್ರಾಣಿ ಅಥವಾ ಪ್ರೇತ ಅಥವಾ ದೆವ್ವದ ಲೋಕಗಳಲ್ಲಿ ಹುಟ್ಟುತ್ತಾರೆ. ಸದ್ಗತಿಯಲ್ಲಿ ಹುಟ್ಟುವವರು ಮಾನವ, ದೇವ ಮತ್ತು ಬ್ರಹ್ಮಲೋಕಗಳಲ್ಲಿ ಹುಟ್ಟುತ್ತಾರೆ. ಯಾವ ದಿವ್ಯಚಕ್ಷುವಿನ ಮೂಲಕ ಜೀವಿಗಳು ಕಮ್ಮಾನುಸಾರ ಹುಟ್ಟುತ್ತವೆಂಬುದನ್ನು ನೋಡಿದನೋ ಆ ಶಕ್ತಿಯಿಂದಲೇ ಬೋಧಿಸತ್ವನು ಇಂದ್ರಿಯ ಮೂಲದ ಜೀವಿಗಳು ಮುಂದೆ ಅಂದರೆ ಭವಿಷ್ಯದಲ್ಲಿ ಅವು ತಮ್ಮ ಹಿಂದಿನ ಮತ್ತು ಇಂದಿನ ಒಳ್ಳೆಯ ಮತ್ತು ಕೆಟ್ಟ ಕಮ್ಮಗಳ ದೆಸೆಯಿಂದ ಯಾವ ಸ್ಥಿತಿಯನ್ನು ಹೊಂದುತ್ತವೆಂಬುದನ್ನು ಅನಾಗತಂಸ ಞಾನದಿಂದ ಕಂಡುಕೊಂಡನು.

ಪುಬ್ಬೆನಿವಾಸಾನುಸ್ಸತಿ ಮತ್ತು ದಿವ್ಯಚಕ್ಷು ಎಂಬ ಈ ಎರಡು ವಿದ್ಯೆಗಳ ಸಾಕ್ಷಾತ್ಕಾರದಿಂದ ಬೋಧಿಸತ್ವನ ಮನಸ್ಸು ಪರಮೋಚ್ಚವಾದ ಆಸವಕ್ಖಯ ಜ್ಞಾನವನ್ನು ಹೊಂದಲು ಸೂಕ್ತವಾದ ಭೂಮಿಕೆಯಾಯಿತು. ಈ ಜ್ಞಾನದ ಮೂಲಕ ಎಲ್ಲ ಮಾನಸಿಕ ಕ್ಲೇಶಗಳನ್ನು ಅವಕ್ಕೆ ಸಂಬಂಧಿತವಾದ ಬಂಧನಗಳು, ಸಂಚಿತ ಕಮ್ಮಗಳು. ಆ ಕಮ್ಮಗಳಿಗೆ ಹೊಂದಿಕೊಂಡಂತೆ ಇರುವ ಪುನರ್ಜನ್ಮ ಉಪಾದಿಗಳು ಇವೆ. ಬೋಧಿಸತ್ವನು ಈ ರೀತಿಯ ಆಸವಕ್ಖಯಜ್ಞಾನವನ್ನು ರಾತ್ರಿಯ ಮೂರನೇ ಜಾವದಲ್ಲಿ (ರಾತ್ರಿ ಎರಡರಿಂದ ಮುಂಜಾನೆಯ ಆರರವರೆಗೆ) ಹೊಂದಿದನು.

ಆಸವಕ್ಖಯ ಜ್ಞಾನ : ಪಟಿಚ್ಚಾಸಮುಪ್ಪಾದದ ಮೇಲೆ ಆಧಾರಿತವಾದ ವಿಪಸ್ಸನಾ ಭಾವನಾ ಧ್ಯಾನವನ್ನು ಆರೋಹಣ ಅವರೋಹಣ ಕ್ರಮದಲ್ಲಿ (ರಾತ್ರಿ ಎರಡರಿಂದ ಮುಂಜಾನೆಯ ಆರರವರೆಗೆ) ಮಾಡುತ್ತಾ ಹೋದನು. ಮನಸ್ಸು ಪರಿಪಕ್ವಗೊಂಡಿದ್ದರಿಂದ ಹಂತಹಂತವಾಗಿ ಒಂದರಿಂದ ನಾಲ್ಕರವರೆಗಿನ ಝಾನಗಳನ್ನು ಮಾಡುತ್ತಾ ಲೋಕೋತ್ತರ ಞಾನ ಮತ್ತು ಅಭಿಞ್ಞಾದ ಮೂಲಕ ವಿಪಸ್ಸನಾ ಞಾನದ ಎಲ್ಲ ಹಂತಗಳನ್ನೂ ಮುಟ್ಟಿದನು.

ಬೋಧಿಸತ್ವನು ನಾಲ್ಕು ಹಂತದ ಲೋಕೋತ್ತರ ಜ್ಞಾನವನ್ನು ನಾಲ್ಕು ರೀತಿಯ ಇಂದ್ರಿಯಾತೀತ ಝಾನಗಳಿಂದ ಹೀಗೆ ವೃದ್ಧಿಸಿಕೊಂಡನು. ಮುಂಜಾನೆಯ ಎರಡರಿಂದ ಮೂರರವರೆಗೆ ಸೋತಾಪತ್ತಿ ಮಾರ್ಗ (ಮಗ್ಗ) ವನ್ನು ಮತ್ತು ಫಲಜ್ಞಾನವನ್ನು ಮೊದಲ ಝಾನದ ಭೂಮಿಕೆಯ ಮೇಲೆ ಪಡೆದನು. ಮೂರು ಮತ್ತು ನಾಲ್ಕರ ನಡುವಿನ

ಗಳಿಗೆಯಲ್ಲಿ ಸಕದಾಗಾಮಿ ಮಾರ್ಗವನ್ನು ಮತ್ತು ಫಲಜ್ಞಾನವನ್ನು ಎರಡನೇ ಝಾನದ ಭೂಮಿಕೆಯಿಂದ ಹೊಂದಿದನು. ನಾಲ್ಕು ಮತ್ತು ಐದರ ನಡುವಿನ ಜಾವದಲ್ಲಿ ಮೂರನೇ ಝಾನದ ಆಧಾರದ ಮೇಲೆ ಅನಾಗಾಮಿ ಮಾರ್ಗವನ್ನು ಮತ್ತು ಫಲಜ್ಞಾನವನ್ನು ಪಡೆದನು. ಐದರಿಂದ ಆರರವರೆಗಿನ ಬೆಳಕು ಹರಿಯುವ ಹೊತ್ತಿನಲ್ಲಿ ನಾಲ್ಕನೇ ಝಾನದ ಫಲದಿಂದ ಅರಹತ ಮಾರ್ಗವನ್ನು ಮತ್ತು ಫಲಜ್ಞಾನವನ್ನು ಪಡೆದನು.

ಅರಹತ ಮಾರ್ಗ (ಮಗ್ಗ) ಮತ್ತು ಫಲಜ್ಞಾನವನ್ನು ಆಸವಕ್ಖಯ ಜ್ಞಾನವೆಂತಲೂ ಕರೆಯುತ್ತಾರೆ. ಹೀಗೆ ಬೋಧಿಸತ್ವನು ಆಧ್ಯಾತ್ಮಿಕ ಶಿಖರವಾದ ಅರಹತತ್ವ ಪದವಿಯನ್ನು ರಾತ್ರಿಯ ಕೊನೆಯ ಜಾವದಲ್ಲಿ ಸಾಕ್ಷಾತ್ಕರಿಸಿಕೊಂಡು ಮುಂದೆ ಬರುವ ಎಲ್ಲ ಅರಹತರ ಆದಿಜನಕನಾದನು. ಅರಹತನಾದ ತಕ್ಷಣವೇ ಎಲ್ಲ ಪಾರಮಾರ್ಥಿಕ ಸಾಧನೆಗಳ ತುತ್ತತುದಿಯಾದ ಸಬ್ಬಞ್ಞುತಞಾನವನ್ನು ಸಿದ್ಧಿಸಿಕೊಂಡನು. ಹೀಗೆ ಸರ್ವಜ್ಞನಾದ ಬೋಧಿಸತ್ವನು ಸಮ್ಮಾಸಂಬುದ್ಧನಾಗಿ ಬೋಧಿಜ್ಞಾನ ಪರಂಪರೆಯ ಸೃಷ್ಟಿಕರ್ತನಾದನು.

ಬೋಧಿಸತ್ವನು ದಶಪಾರಮಿಗಳನ್ನು ಮೂರುಬಾರಿ ಅಂದರೆ ಮೂವತ್ತು ಪಾರಮಿಗಳು ಅಸಂಖ್ಯ ಜನ್ಮಗಳಲ್ಲಿ ತಾನೇ ಸ್ವತಃ ಸಾಧಿಸಿಕೊಂಡು ಅಂದರೆ ಯಾರ ಬೋಧನೆಯೂ ಇಲ್ಲದೆ ಸಿದ್ಧಿಸಿಕೊಂಡವನಾದ್ದರಿಂದ ಸ್ವಯಂಭುವಾಗಿ ದೇವಮಾನವರ ಅಪ್ರತಿಮ ಗುರುವಾಗಿ ಸಂಸಾರದಲ್ಲಿ ಸಿಲುಕಿಕೊಂಡ ಮೂರು ಲೋಕದ ಜೀವಿಗಳನ್ನು ಬಿಡುಗಡೆ ಮಾಡುವವನಾದ್ದರಿಂದ 'ಭಗವಾ' ಆದನು. ವೈಶಾಖ ಮಾಸದ ತುಂಬು ಹುಣ್ಣಿಮೆಯ ಚಂದ್ರನು ಪಶ್ಚಿಮ ದಿಗಂತದಲ್ಲಿ ಮುಳುಗುತ್ತಿದ್ದಂತೆ ಪೂರ್ವ ದಿಗಂತದಲ್ಲಿ ಕೆಂಪು ಗೋಲವಾಗಿ ಮೇಲೆ ಬರುತ್ತಿರುವ ಸೂರ್ಯೋದಯದ ಶುಭ ಮುಹೂರ್ತದಲ್ಲಿ ಬುದ್ಧನು ಅಸವಾನವಾದ ಅದ್ಭುತವಾದ ಸಾಧನೆಯುನ್ನು ಪೂರ್ಣಗೊಳಿಸಿದನು. ಸಮ್ಮಾಸಂಬುದ್ಧನಾದ ಈ ಸಮಯದಲ್ಲಿ ದಶಸಹಸ್ರ ಲೋಕಧಾತುಗಳು ಕಂಪಿಸಿ ಅಸಂಖ್ಯ ವರ್ಣಿಸಲಾಗದ ಪವಾಡಗಳಿಗೆ ಕಾರಣವಾದವು. ಈ ಮಹಾಮಂಗಳಗಳು ಘಟಿಸುತ್ತಿದ್ದಂತೆ ಆನಂದದ ಜಯದ ಈ ಎರಡು ಗಾಥೆಗಳು ಬುದ್ಧನ ಬಾಯಿಯಿಂದ ಹೊರಬಂದವು. ಇವು ಧಮ್ಮಪದದಲ್ಲಿ ಬಂದಿವೆ:

***ಅನೇಕಜಾತಿ ಸಂಸಾರಂ***
***ಸಂಧಾವಿಸಂ ಅನಿಬ್ಬಿಸಂ***
***ಗಹಕಾರಕಂ ಗವೇಸಂತೋ***
***ದುಕ್ಖಾ ಜಾತಿ ಪುನಪ್ಪುನಂ*** – ಧಮ್ಮಪದ 153

***ಗಹಕಾರಕ ದಿಟ್ಠೋಸಿ***
***ಪುನ ಗೇಹಂ ನ ಕಾಹಸಿ***
***ಸಬ್ಬಾತೇ ಫಾಸುಕಾ ಭಗ್ಗಾ***
***ಗಹಕೂಟಂ ವಿಸಂಖಿತಂ***



***ವಿಸಂಖಾರಗತಾ ಚಿತ್ತಂ***
***ತಣ್ಹಾನಂ ಖಯಮಜ್ಝಗಾ*** – ಧಮ್ಮಪದ 154

"ಈ ಸಂಸಾರ ಚಕ್ರದಲ್ಲಿ ಜಗತ್ತಿನಲ್ಲಿ ಹಲವುಬಾರಿ ಹುಟ್ಟಿ ಸಂಸಾರವೆಂಬ ಮನೆಯನ್ನು ಕಟ್ಟಿದ ಯಜಮಾನನನ್ನು ಹುಡುಕಲು ಅದು ವ್ಯರ್ಥ ಪ್ರಯತ್ನವಾಯಿತು. ಪುನಃ ಪುನಃ ಹುಟ್ಟುವುದಿದೆಯಲ್ಲ ಅದು ನಿಜವಾಗಿಯೂ ದುಃಖಕರ."

"(ಸಂಸಾರವೆಂಬ) ಮನೆಯನ್ನು ಕಟ್ಟಿದ ಓ ಯಜಮಾನನೆ, ನೋಡಿಯಾಯಿತು! ಇನ್ನು ನೀನು ಮನೆಯನ್ನು ಕಟ್ಟಲಾರೆ. ಕಾರಣ ನಿನಗೆ ಬೇಕಾದ ತೊಲೆಗಳು ಮುರಿದಿವೆ. ನನ್ನ ಮನಸ್ಸು ಈಗ ಕಾರಣಬದ್ಧವಲ್ಲದ ಸ್ಥಿತಿಯನ್ನು ಮುಟ್ಟಿದೆ. ನಾನು ತೃಷ್ಣೆ (ತನ್ಹಾ) ಯನ್ನು ನಾಶಮಾಡಿ ಜಯ ಸಾಧಿಸಿದ್ದೇನೆ."

## ತಥಾಗತರ (ಸತ್ಯವಾಹಕ) ಆಗಮನ

ಲೋಕವನ್ನು ರಕ್ಷಿಸುವವನೂ (ಲೋಕನಾಥ), ಲೋಕಗಳ ಎಲ್ಲವನ್ನು ತಿಳಿದವನು (ಸರ್ವಜ್ಞ) ಆದ ಬುದ್ಧನು ದೇವ ಮಾನವರ ಮೇಲಿನ ಕರುಣೆಯಿಂದಾಗಿ ಅವರ ಒಳಿತಿಗಾಗಿ ಮತ್ತು ಕಲ್ಯಾಣಕ್ಕಾಗಿ ಹುಟ್ಟಿದನು. ತಂಪನೆರೆವ ತುಂಬು ಹುಣ್ಣಿಮೆಯ ಚಂದ್ರ ಪಡುವಣ ದಿಗಂತದಲ್ಲಿ ಅಸ್ತಂಗತನಾಗುತ್ತಿದ್ದಂತೆ ಕೆಂಪು ಗೋಲದ ಅರುಣನು ಮೂಡಣ ದಿಗಂತದಿಂದ ಮೇಲೆ ಬರುವ ಶುಭ ಸಮಯಕ್ಕೆ ಬೋಧಿಸತ್ವ ಸಿದ್ಧಾರ್ಥ ಗೌತಮನು ಬುದ್ಧ ಗೌತಮರಾದರು!

**ಸತ್ತಸತ್ತಾಹ:** ಏಳು ವಾರಗಳ ಭವ್ಯ ಆನಂದ ಪರವಶತೆಯಲ್ಲಿ ಬುದ್ಧರು ಮಹಾಬೋಧಿ ವೃಕ್ಷದ ಸನಿಹದಲ್ಲಿಯ ಏಳು ವಿಭಿನ್ನ ಜಾಗಗಳಲ್ಲಿ ಪರಮೋನ್ನತ ಮಾನಸಿಕ ಧ್ಯಾನಸ್ಥಿತಿ (ಸಮಾಪತ್ತಿ)ಯಲ್ಲಿ ಕಳೆದರು. ಸಮ್ಮಾಸಂಬುದ್ಧರಾದ ಮೇಲೆ ಬುದ್ಧರು ಈ ನಲವತ್ತೊಂಬತ್ತು ದಿನಗಳ ಕಾಲ ಅನ್ನಪಾನಗಳನ್ನು ಸೇವಿಸಲಿಲ್ಲ, ಬಾಯಿ ಮುಕ್ಕಳಿಸಲಿಲ್ಲ ಸ್ನಾನ ಮಾಡಲಿಲ್ಲ ಮತ್ತು ಪ್ರಕೃತಿ ಕರೆಗೂ ಹೋಗಲಿಲ್ಲ. ಹಾಗೆಯೇ ವಿಶ್ರಾಂತಿಗೆಂದು ನೆಲದ ಮೇಲೆ ಮಲಗಲಿಲ್ಲ. ನಿದ್ದೆ ಮಾಡಲಿಲ್ಲ. ಆದರೆ ಬುದ್ಧರು ಕುಳಿತು ನಿಂತು ನಡೆದಾಡುತ್ತಾ ಧ್ಯಾನಸ್ಥಿತಿಯಲ್ಲಿದ್ದು ಝಾನಗಳಿಂದ ಉದ್ಭವವಾದ ಲೋಕೋತ್ತರ ಮಗ್ಗ ಮತ್ತು ಫಲಗಳ ದಿವ್ಯಾನಂದವನ್ನು ಅನುಭವಿಸಿದರು.

ವೈಶಾಖ ಮಾಸದ ಹುಣ್ಣಿಮೆಯ ಮುಂಜಾನೆಯಂದು ಸುಜಾತಳು ನಿವೇದಿಸಿದ ನಲವತ್ತೊಂಬತ್ತು ತುತ್ತುಗಳ ಪಾಯಸವೇ ಬುದ್ಧರಿಗೆ ದೇಹಕ್ಕೆ ಬೇಕಾದ ಶಕ್ತಿಯನ್ನು ಒದಗಿಸಿತ್ತು. ಆದ್ದರಿಂದಲೇ ಬುದ್ಧರು ಝಾನಗಳಲ್ಲಿ ಲೀನನಾಗಿ ಪರಮೋನ್ನತವಾದ ಞಾನ ಮತ್ತು ಅಭಿಞ್ಞಾದಲ್ಲಿಯೇ ಇದ್ದರು. ಈ ಸಬ್ಬಞ್ಞು (ಸರ್ವಜ್ಞ) ಮನಸ್ಸಿನಿಂದ ನಿಬ್ಬಾಣದ ಆನಂದದಲ್ಲಿ ಮುಳುಗಿ ಧಮ್ಮದ ಅನಂತ ವಿಸ್ತಾರವನ್ನು ನಿಲುಕೆಗೆ ಸಿಗದ ಆಳವನ್ನು ಅವಲೋಕಿಸಿದರು.

ಸಂಬೋಧಿಯಾದ (ಜ್ಞಾನೋದಯ) ತಕ್ಷಣವೇ ಬುದ್ಧನು ವಿಜಯ ಸ್ಥಾನದ ಮೇಲೆ ಪದ್ಮಾಸನದಲ್ಲಿ ಕುಳಿತು ಸಬ್ಬಞ್ಞು ಬುದ್ಧರು ಮಾನಸಿಕವಾಗಿ ಈ ಎರಡು ಗಾಥೆಗಳನ್ನು ಉಸುರಿದನು. ಇವನ್ನು ಮಾನಸಿಕ ಉದಾನವೆಂದು ಕರೆಯುತ್ತಾರೆ.

"ಈ ಸಂಸಾರ ಚಕ್ರದಲ್ಲಿ ಜಗತ್ತಿನಲ್ಲಿ ಹಲವುಬಾರಿ ಹುಟ್ಟಿ ಸಂಸಾರವೆಂಬ ಮನೆಯನ್ನು ಕಟ್ಟಿದ ಯಜಮಾನನನ್ನು ಹುಡುಕಲು ಅದು ವ್ಯರ್ಥ ಪ್ರಯತ್ನವಾಯಿತು. ಪುನಃ ಪುನಃ ಹುಟ್ಟುವುದಿದೆಯಲ್ಲ ಅದು ನಿಜವಾಗಿಯೂ ದುಃಖಕರ."

"(ಸಂಸಾರವೆಂಬ) ಮನೆಯನ್ನು ಕಟ್ಟಿದ ಓ ಯಜಮಾನನೆ, ನೋಡಿಯಾಯಿತು! ಇನ್ನು ನೀನು ಮನೆಯನ್ನು ಕಟ್ಟಲಾರೆ. ಕಾರಣ ನಿನಗೆ ಬೇಕಾದ ತೊಲೆಗಳು ಮುರಿದಿವೆ. ನನ್ನ ಮನಸ್ಸು ಈಗ ಕಾರಣಬದ್ಧವಲ್ಲದ ಸ್ಥಿತಿಯನ್ನು ಮುಟ್ಟಿದೆ. ನಾನು ತೃಷ್ಣೆ (ತನ್ಹಾ) ಯನ್ನು ನಾಶಮಾಡಿ ಜಯ ಸಾಧಿಸಿದ್ದೇನೆ."

**– ಧಮ್ಮಪದ 153–154**

## I. ಬೋಧಿ ಪಲ್ಲಂಕ ಸಪ್ತಾಹ :

### ಮಹಾಬೋಧಿ ವೃಕ್ಷದ ಅಡಿಯಲ್ಲಿ ಒಂದು ವಾರ ಕಾಲ ಝಾನದಲ್ಲಿ

ಸಮ್ಮಾಸಂಬೋಧಿಯನ್ನು ಪಡೆದಮೇಲೆ ಬುದ್ಧನು ಮಾನಸಿಕವಾಗಿ ಮೇಲಿನ ಎರಡು ಗಾಥೆಗಳನ್ನು ಉಸುರಿದರು. ಒಂದುವಾರ ಪೂರ್ತಿ ಅಪರಾಜಿತ ಆಸನದಲ್ಲಿ ಕುಳಿತು ನಾಲ್ಕನೇ ಝಾನಕ್ಕೆ ಹೋಗಿ ಮಾರನನ್ನು ಅವನ ದುಷ್ಟ ಸೈನ್ಯವನ್ನು ಸೋಲಿಸಿ ಜಯ ಸಾಧಿಸಿದ್ದರಿಂದ ಉಂಟಾದ ಅಮಿತವಾದ ನಿಬ್ಬಾಣದ ಆನಂದದಲ್ಲಿಯೇ ಇದ್ದರು.

ಬುದ್ಧರು ದಿನದ ಸಮಯದಲ್ಲಿ ಸಮಥಾ ಸಮಾಧಿಯಲ್ಲಿ ಕಳೆದರೆ ರಾತ್ರಿ ಸಮಯವನ್ನು ವಿಪಸ್ಸನಾ ಧ್ಯಾನದಲ್ಲಿ ತೊಡಗಿದರು. ರಾತ್ರಿಯ ಮೂರು ಯಾಮ (ತಿಯಾಮ)ಗಳಲ್ಲೂ ಅಂದರೆ ಮೊದಲನೇ ರಾತ್ರಿಯಿಂದ ಹಿಡಿದು ಆರನೇ ರಾತ್ರಿಯವರೆಗೂ ವಿಪಸ್ಸನಾ ಞಾನದಿಂದ ಪಟಿಚ್ಚಾಸಮುಪ್ಪಾದದ ಮೇಲೆ ಆರೋಹಣ ಅವರೋಹಣ ಕ್ರಮದಲ್ಲಿ ಧ್ಯಾನಿಸಿದರು. ಪ್ರತಿ ರಾತ್ರಿಯೂ ಹೀಗೆ ಗಂಭೀರ ಧ್ಯಾನದಲ್ಲಿ ತೊಡಗಲು ಧಮ್ಮ ಸೂಕ್ಷ್ಮಗಳು ಮತ್ತಷ್ಟು ಸ್ಪಷ್ಟವಾಗುತ್ತಾ ಹೋದವು.

ಪವಿತ್ರ ತಿಪಿಟಕ ಗ್ರಂಥವಾದ ಉದಾನಪಾಳಿಯಲ್ಲಿ ಉಲ್ಲೇಖವಾದಂತೆ ಏಳನೇ ರಾತ್ರಿ ಕ್ರಮವು ಬದಲಾಯಿತು. ಮೊದಲ ಸಪ್ತಾಹದ ಕೊನೆಯ ಆ ರಾತ್ರಿಯ ಮೊದಲ ಜಾವ (ಸಂಜೆ ಆರರಿಂದ ರಾತ್ರಿ ಹತ್ತರವರೆಗೆ) ಪೂರ್ತಿ ಪಟಿಚ್ಚಾಸಮುಪ್ಪಾದವನ್ನು ಆರೋಹಣ ಕ್ರಮದಲ್ಲಿ ಧ್ಯಾನಿಸಿದರು. ಮಧ್ಯ ಜಾವದಲ್ಲಿ (ರಾತ್ರಿ ಹತ್ತರಿಂದ ಎರಡರವರೆಗೆ) ಅವರೋಹಣ ಕ್ರಮದಲ್ಲಿ ಧ್ಯಾನಿಸಿದರು. ಕೊನೆಯ ಜಾವ (ರಾತ್ರಿ ಎರಡರಿಂದ ಆರು)ದಲ್ಲಿ ಆರೋಹಣ ಅವರೋಹಣ ಕ್ರಮಗಳಲ್ಲಿ ಧ್ಯಾನಿಸಿದರು. ಈ ಕ್ರಮ ಬದಲಾವಣೆ ಏನು ಸೂಚಿಸುತ್ತದೆಂದರೆ ಬುದ್ಧರು ಪಟಿಚ್ಚಾಸಮುಪ್ಪಾದ ನಿಯಮವನ್ನು ತಳಸ್ಪರ್ಶಿಯಾಗುವಂತೆ ತಿಳಿದರೆಂಬುದನ್ನು ಹೇಳುತ್ತದೆ.



ಹೇಗೆ ಹಣತೆಯ ಕಂಠದವರೆಗೂ ಎಣ್ಣೆ ತುಂಬಿದ ಮೇಲೆ ನೆಲಕ್ಕೆ ಜಾರುತ್ತದೋ ಹಾಗೆ ಬುದ್ಧರ ಪಟಿಚ್ಚಾಸಮುಪ್ಪಾದ ಜ್ಞಾನದ ಸ್ಪಷ್ಟ ಅರಿವಿನಿಂದ ಅಮಿತ ಆನಂದವು ಎದೆತುಂಬಿ ಹರಿಯಿತು. ಹೀಗೆ ರಾತ್ರಿಯ ಅಂತಿಮ ಜಾವದಲ್ಲಿ ಬುದ್ಧನೆದೆಯಿಂದ ಉದ್ಬೋಧಕವಾದ ಉದಾನವು ಹೊರಹೊಮ್ಮಿತು. ಎರಡು ರೀತಿಯ ಉದಾನಗಳಿವೆ: ಮಾನಸಿಕ ಮತ್ತು ವಾಚಸಿಕ ಉದಾನಗಳು. ಮೊದಲನೇ ಉದಾನವು ಮಾರನ ಮೇಲೆ ವಿಜಯ ಸಾಧಿಸಿದ್ದು ಮಾನಸಿಕವಾಗಿ ಹೊಮ್ಮಿದರೆ ಎರಡನೇ ಉದಾನವು ಏಳನೇ ರಾತ್ರಿಯ ಪ್ರತಿ ಜಾವದ ಕೊನೆಯಲ್ಲಿ ಮಾತಾಗಿ ಹೊಮ್ಮಿತು. ಆನಂತರದಲ್ಲಿ ಈ ಎರಡೂ ಉದಾನಗಳು ಧಮ್ಮವಾಹಕನಾದ ಆಯುಷ್ಮಾನ್ ಆನಂದನಿಗೆ ಹೇಳಲ್ಪಟ್ಟು ಅವು ಮುಂದೆ ಉದಾನಪಾಳಿ ಗ್ರಂಥದಲ್ಲಿ ಅಡಕವಾದವು.

ಪಾರಮಾರ್ಥಿಕ ಪರಮೋನ್ನತಿಯನ್ನು ಮುಟ್ಟಿದ್ದರಿಂದ ಸಮ್ಮಾಸಂಬೋಧಿಯನ್ನು ಹೊಂದಿ ಹಿಂದೆಂದೂ ಮಾನವರಿಗಾಗಲೀ ದೇವತೆಗಳಿಗಾಗಲಿ ತಿಳಿದಿರದ ಚತುರಾರ್ಯ ಸತ್ಯಗಳ ಸಂಶೋಧಕರಾದರು. ಯಾವ ಸುಮೇಧನು ಬುದ್ಧ ದೀಪಂಕರನ ಪಾದದಡಿಯಲ್ಲಿ ತನ್ನ ಅನ್ವೇಷಣೆಯನ್ನು ದೃಢೀಕರಿಸಿಕೊಂಡು ಬೋಧಿಸತ್ವನೆಂದು ಕರೆಸಿಕೊಂಡು ಪಯಣವನ್ನು ಆರಂಭಿಸಿದನೋ ಅದರ ಮೇರು ಗುರಿಯೇ ಸಮ್ಮಾಸಂಬೋಧಿ. ಈ ಸಮ್ಮಾಸಂಬೋಧಿಯ ಜೊತೆಗೆ ಸರ್ವಜ್ಞನು, ಸ್ವಯಂಭುವೂ, ಮಹಾಕಾರುಣಿಕನೂ, ಲೋಕನಾಥನೂ, ದೇವಮಾನವರ ಪರಮ ಗುರುವೂ ಆದರು.

## II. ಅನಿಮಿಷ ಸಪ್ತಾಹ :

### ಮಹಾಬೋಧಿ ವೃಕ್ಷವನ್ನು ಒಂದುವಾರ ಕಾಲ ದಿಟ್ಟಿಸಿ ನೋಡಿದ್ದು.

ಬುದ್ಧರು ಎರಡನೇ ವಾರ ಪೂರ್ತಿ ಅಪರಾಜಿತ ಪಲ್ಲಂಕ ಮತ್ತು ಮಹಾ ಬೋಧಿ ವೃಕ್ಷದ ನಡುವೆ ನಿಂತು ಯಾವ ಮರದ ಅಡಿಯಲ್ಲಿ ಜ್ಞಾನೋದಯವಾಗಿ ಸಮ್ಮಾಸಂಬುದ್ಧನಾದರೋ ಆ ಜ್ಞಾನೋದಯ ಬೋಧಿ ಮರವನ್ನು ತದೇಕಚಿತ್ತನಾಗಿ ನೋಡಿದರು. ಆಕಾಶದಲ್ಲಿ ದೇವತೆಗಳು ಮತ್ತು ಬ್ರಹ್ಮದೇವತೆಗಳು ಬುದ್ಧರು ಮೊದಲ ವಾರದಲ್ಲಿ ಬೋಧಿ ಮರದಡಿಯಲ್ಲಿ ಕುಳಿತಿದ್ದುದನ್ನು ನೋಡಿದ್ದರು, ಈಗ ನಿಂತುದನ್ನು ನೋಡಿ 'ನಿಜವಾಗಿಯೂ ಈತನು ಬುದ್ಧನಾಗಿದ್ದಾನೆಯೇ' ಎಂದು ತಮ್ಮ ತಮ್ಮಲ್ಲಿಯೇ ಪ್ರಶ್ನಿಸಿಕೊಂಡರು ಎಂದು ತಿಪಿಟಕ ಗ್ರಂಥಗಳು ಹೇಳುತ್ತವೆ.

ಬುದ್ಧರಿಗೆ ದಿವ್ಯಜೀವಿಗಳ ಅನುಮಾನವು ತಿಳಿದು ಅದನ್ನು ದೂರಮಾಡಲು ಆಕಾಶದೆತ್ತರಕ್ಕೆ ನಿಂತು ಮೊದಲ ಪವಾಡ 'ಯಮಕ ಪಾಟಿಹಾರಿಯಂ' (ಎರಡು ಪವಾಡಗಳು) ಮಾಡಿದರು. ಅಂದರೆ ಏಕಕಾಲಕ್ಕೆ ತನ್ನ ದೇಹದಿಂದ ಬೆಂಕಿ ಮತ್ತು ನೀರನ್ನು ಎರಡೂ ಕಡೆಗಳಿಂದ ಎಡ–ಬಲ, ಮೇಲೆ–ಕೆಳಗೆ, ಹಿಂದೆ–ಮುಂದೆ ಚಿಮ್ಮಿಸಿದರು. ಆನಂತರ ನೆಲಕ್ಕೆ ವಾಪಸ್ಸಾಗಿ ಯಥಾಪ್ರಕಾರ ಅಪರಾಜಿತ ಪಲ್ಲಂಕ ಮತ್ತು ಬೋಧಿವೃಕ್ಷದ ನಡುವೆ ಪವಿತ್ರ ಮರವನ್ನು ಎವೆಯಿಕ್ಕದೆ ದಿವ್ಯ ಸುವರ್ಣ ಸ್ತಂಭದಂತೆ ನಿಂತು ನೋಡಿದರು.

ಯಾವ ಮಹಾಬೋಧಿ ಮರದ ಅಡಿಯಲ್ಲಿ ಸರ್ವಜ್ಞನಾದನೋ ಆ ಮರವನ್ನು ಪವಿತ್ರಗೊಳಿಸುವ ಮತ್ತು ಅದನ್ನು ಪಾರಮಾರ್ಥಿಕವಾಗಿ ಗಟ್ಟಿಗೊಳಿಸಿ ಮುಂದಿನ ಜನಾಂಗಕ್ಕೆ ಭಕ್ತಿ ಭಾವದಿಂದ ಅದಕ್ಕೆ ಗೌರವ ಸಲ್ಲಿಸಲು ಬುದ್ಧರು ಅನಿಮಿಷನಾಗಿ ನೋಡಿದ್ದು. ಎರಡು ಸಾವಿರದ ಆರುನೂರು ವರ್ಷಗಳಿಂದ ಪ್ರಪಂಚದಾದ್ಯಂತ ಇರುವ ಅಸಂಖ್ಯಾತ ಬೌದ್ಧರಿಗೆ ಈ ಮಹಾಬೋಧಿ ಮರವು ಅತ್ಯಂತ ಪವಿತ್ರವಾದ ಚೈತ್ಯವು.

### III. ಚಂಕಮಣ ಸಪ್ತಾಹ :

#### ಒಂದು ವಾರದ ಕಾಲ ಧ್ಯಾನಯುಕ್ತ ನಡಿಗೆ

ದೇವತೆಗಳಿಂದ ಸೃಷ್ಟಿಸಲ್ಪಟ್ಟ 'ರತನ ಚಂಕಮಣ' ಎಂದು ಕರೆಯಲ್ಪಡುವ ದಾರಿಯಲ್ಲಿ ಬುದ್ಧರು ಮುಂದಕ್ಕೆ ಹಿಂದಕ್ಕೆ ನಡೆದಾಡಿ ಮೂರನೇ ವಾರವನ್ನು ಕಳೆದರು. ಪೂರ್ವದಿಂದ ಪಶ್ಚಿಮಕ್ಕೆ ಅಂದರೆ ಅಪರಾಜಿತ ಪಲ್ಲಂಕದಿಂದ ಯಾವ ಜಾಗದಿಂದ ಮಹಾಬೋಧಿ ಮರವನ್ನು ಅನಿಮಿಷನಾಗಿ ನೋಡಿದರೋ ಆ ಜಾಗದವರೆಗೆ ಆ ಸಂಚಾರ ದಾರಿಯಾಗಿತ್ತು. ಈ ರೀತಿಯ ಧ್ಯಾನಯುಕ್ತ ನಡಿಗೆಯಲ್ಲಿ ತೊಡಗಿ ಫಲ ಸಮಾಪತ್ತಿಯನ್ನು ಅನುಭವಿಸಿದರು.

ಮೂರು ವಾರಗಳಲ್ಲಿ ಬುದ್ಧರು ಮೂರು ಭಿನ್ನ ಅಂಗವಿನ್ಯಾಸ ಅಥವಾ ಸ್ಥಿತಿಗಳಲ್ಲಿದ್ದರು. ಮೊದಲಿಗೆ ಕುಳಿತು, ಎರಡನೆಯದರಲ್ಲಿ ನಿಂತು ಮೂರನೆಯದರಲ್ಲಿ ಮುಂದಕ್ಕೆ ಹಿಂದಕ್ಕೆ ನಡೆದು ಹೀಗೆ ಮೂರು ಭಿನ್ನಬಗೆಯಲ್ಲಿ ವಿಪಸ್ಸನ ಧ್ಯಾನದಲ್ಲಿ ತೊಡಗಿದ್ದರು.

### IV. ರತನಘರ ಸಪ್ತಾಹ :

#### ಒಂದು ವಾರದ ಕಾಲ ರತ್ನಗೃಹದಲ್ಲಿ ಧ್ಯಾನಸ್ಥ ಸ್ಥಿತಿಯಲ್ಲಿ

ಒಂದು ವಾರದ ಕಾಲ ಧ್ಯಾನಯುಕ್ತ ನಡಿಗೆಯಲ್ಲಿ ಕಳೆದಮೇಲೆ ಬುದ್ಧರು ಮಹಾಬೋಧಿ ವೃಕ್ಷದ ವಾಯುವ್ಯ ದಿಕ್ಕಿನಲ್ಲಿಯ ಸ್ಥಳವೊಂದಕ್ಕೆ ತೆರಳಿದರು. ಅಲ್ಲಿ ಪದ್ಮಾಸನದಲ್ಲಿ ಕುಳಿತು ತಾವು ಕಂಡುಕೊಂಡ ಚತುರಾರ್ಯ ಸತ್ಯಗಳನ್ನು ರೂಪಿಸಿ ನಿರೂಪಿಸುವ ಪರಿಗಳ ಮೇಲೆ ಧ್ಯಾನಿಸಿದರು. ಯಾರು ನಿಬ್ಬಾಣಕ್ಕಾಗಿ ತನ್ನನ್ನು ಹಿಂಬಾಲಿಸುತ್ತಾರೊ ಅವರಿಗೆ ಸ್ಪಷ್ಟ ಅರಿವು ಮೂಡಲು ಈ ಪ್ರಯತ್ನವನ್ನು ಮಾಡಿದರು. ನಿಬ್ಬಾಣಕ್ಕೆ ಸೋಪಾನವಾದ ಶೀಲ, ಸಮಾಧಿ, ಪ್ರಜ್ಞೆಗಳಿಂದ ಕೂಡಿದ ಚತುರಾರ್ಯ ಸತ್ಯವೆ ಮೂರು ಹಂತದ ಪಾರಮಾರ್ಥಿಕ ಅಭ್ಯಾಸವನ್ನು, ಭಾವನಾ ಮತ್ತು ವಿಶುದ್ಧಿಯನ್ನೂ ರೂಪಿಸಿದರು.

ಹೀಗೆ ಧಮ್ಮವನ್ನು ತಿಪಿಟಕ (ಮೂರು ಬುಟ್ಟಿಗಳು) ಗಳಲ್ಲಿ ಇಡಲಾಗಿದೆ. ತಿಪಿಟಕಗಳು: 1. **ವಿನಯ** ನೀತಿಯನ್ನು ವೃದ್ಧಿ ಮಾಡಿ ಪರಿಶುದ್ಧಿಗೊಳಿಸುವ ಶೀಲದ ವಿವರಗಳು ಇಲ್ಲಿವೆ. 2. **ಸುತ್ತ** – ಮನಸ್ಸನ್ನು ಪರಿಶುದ್ಧಿಗೊಳಿಸುವ ಸಮಾಧಿಯ ಬಗೆಗಿನ ವಿವರಗಳು ಇಲ್ಲಿವೆ. 3. **ಅಭಿಧಮ್ಮ** – ಪ್ರಜ್ಞೆಯನ್ನು ಪ್ರಾಂಜಲ ವಿಪಸ್ಸನ ಧ್ಯಾನದ ಮೂಲಕ ವೃದ್ಧಿಮಾಡಿ ಪರಿಶುದ್ಧಿಗೊಳಿಸುವ ವಿವರಗಳು ಇಲ್ಲಿವೆ. ಈ ಮೂರು ಹಂತಗಳು ಮುಂದೆ ಒಂದಾಗಿ



ಧಮ್ಮವನ್ನು ಮತ್ತೆ ಮೂರು ಹಂತದಲ್ಲಿ ಸಾಧಿಸುವುದು; ಆ ಮೂರು: 1. ಪರಿಯತ್ತಿ (ಧಮ್ಮವನ್ನು ತಿಳಿದುಕೊಳ್ಳುವುದು). ಪಟಿಪತ್ತಿ (ಧಮ್ಮವನ್ನು ಅಭ್ಯಸಿಸುವುದು ಅಥವಾ ಅನುಭವಿಸುವುದು). 3. ಪಟಿವೇಧ (ಧಮ್ಮದ ಹೃದಯವೇ ಆದ ಚತುರಾರ್ಯ ಸತ್ಯಗಳನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದು).

ಹೀಗೆ ಭಗವಾನ್ ಬುದ್ಧರು ಅಭಿಧಮ್ಮದ ಮೇಲೆ ಗಂಭೀರವಾಗಿ ವಿಶೇಷವಾಗಿ ಅದರ ಕೊನೆಯ ಭಾಗವಾದ ಪಟ್ಠಾನದ ಮೇಲೆ ಧ್ಯಾನಿಸುತ್ತಿರಲು ಅವರ ಮೈಯಿಂದ ಆರು ಪ್ರಕಾಶಮಾನವಾದ ಬಣ್ಣಗಳು ಹೊರಬಂದು ಆರು ಬಣ್ಣಗಳ ಪ್ರಭಾವಳಿಯನ್ನು ಮೂಡಿಸಿದವು. ಈ ಪ್ರಭಾವಳಿಯ ವಲಯಕ್ಕೆ ರತನಘರ ಎಂದು ಕರೆಯುತ್ತಾರೆ. ಈ ಪ್ರಭಾವಳಿಯಲ್ಲಿ ಕುಳಿತೇ ಬುದ್ಧರು ಅನಾವರಣ ಸರ್ವಜ್ಞ ಪ್ರಜ್ಞೆಯನ್ನು ಇಡೀ ನಾಲ್ಕನೇ ವಾರ ಪ್ರಯೋಗಿಸಿದರು. ಈ ವಿಶೇಷ ಕ್ರಿಯೆಯನ್ನು ವಿಶಾಲ ಸಾಗರದ ಆಳದಲ್ಲಿ ಮೈಚೆಲ್ಲಿಕೊಂಡು ಇರುವ ಬೃಹತ್ ತಿಮಿಂಗಲದ ಈಜಿಗೆ ಹೋಲಿಸಲಾಗುತ್ತದೆ. ತಿಮಿಂಗಲವು ಚಿಕ್ಕ ಅಥವಾ ಆಳವಿರದ ನೀರಿನಲ್ಲಿ ಈಜಲಾರದು. ಹಾಗೆಯೇ ಬುದ್ಧರು ಮೇರೆಯಿಂದ ವಿಸ್ತಾರವಾದ ಧಮ್ಮಾಂಬುಧಿಯಲ್ಲಿ ತಮ್ಮ ಅಗಾಧ ಪ್ರಜ್ಞೆಯನ್ನು ಪ್ರಯೋಗಿಸಿದರು. ಹೀಗೆ ಮಾಡಲು ತಮ್ಮ ವಿಶ್ವ ವ್ಯಾಪ್ತವಾದ ಪ್ರಜ್ಞೆಯಿಂದ ವಿವಿಧ ವರ್ಣಗಳ ಕಿರಣಗಳು ಸಮ್ಮಿಳಿತವಾಗಿ ಹೊರಹೊಮ್ಮಿ ರತ್ನ ಪ್ರಭಾವಳಿಯನ್ನು ರೂಪಿಸಿದವು. ಬುದ್ಧರ ದೇಹದ ಸುತ್ತಲೂ ಸುವರ್ಣ ಪ್ರಭಾವಳಿ ಆವರಿಸಿತು. ಅದು ನಲವತ್ತೈದು ವರ್ಷಗಳ ಕಾಲ ಹಾಗೇ ಇತ್ತು. ಆದ್ದರಿಂದಲೇ ಬುದ್ಧರಿಗೆ 'ಅಂಗೀರಸ' (ಬಹುವರ್ಣ ಕಿರಣಗಳ ಉದ್ಭವಕಾರ) ನೆಂಬ ಗುಣವಾಚಕ ಸೇರಿಕೊಂಡಿತು.

### V. ಅಜಪಾಲ ಸಪ್ತಾಹ :

#### ಒಂದು ವಾರದ ಕಾಲ ಅಜಪಾಲ ಆಲದ ಮರದ ಕೆಳಗೆ ಧ್ಯಾನ ಸ್ಥಿತಿಯಲ್ಲಿ

ಬುದ್ಧರು ರತ್ನಪ್ರಭಾವಳಿಯಿಂದ ಮೇಲೆದ್ದು ಅಜಪಾಲ ಆಲದಮರದ ಅಡಿ ಹೋಗಿ ಐದನೇ ವಾರವನ್ನು ಕಳೆದನು. ಮರದ ಕೆಳಗೆ ಪದ್ಮಾಸನದಲ್ಲಿ ಕುಳಿತು ಯಾವ ಧರ್ಮವನ್ನು ತಾವು ಕಂಡುಕೊಂಡರೋ ಆ ಧಮ್ಮದ ಮೇಲೆ ಧ್ಯಾನಿಸುತ್ತಾ ಫಲ ಸಮಾಪತ್ತಿಯ ಮೂಲಕ ನಿಬ್ಬಾಣದ ಆನಂದವನ್ನು ಅನುಭವಿಸಿದರು.

ಮೇಲಿನ ಹೆಸರೇ ಹೇಳುವಂತೆ ಈ ಪುರಾತನ ವಿಶಾಲ ಆಲದ ಮರದ ಕೆಳಗೆ ಮಧ್ಯಾಹ್ನದ ಹೊತ್ತಿನಲ್ಲಿ ಕುರಿಪಾಲಕರು ಅವರ ಕುರಿ–ಮೇಕೆಗಳೂ ತಂಪಿನ ಆಶ್ರಯವನ್ನು ಪಡೆಯುತ್ತಿದ್ದವು. ಬೇರೆಯವರೂ ಕೂಡ ಈ ಶಾಂತವಾದ ವಾತಾವರಣಕ್ಕಾಗಿ ಬರುತ್ತಿದ್ದರು. ಈ ಮರದ ಕೆಳಗೆ ಬುದ್ಧರು ಆಳವಾದ ಧ್ಯಾನದಲ್ಲಿ ಲೀನನಾಗಿ ಧಮ್ಮ ಕುರಿತಾಗಿ ಚಿಂತನೆ ಮಾಡುತ್ತಿದ್ದರು.

ಈ ಸಂದರ್ಭದಲ್ಲಿಯೇ ಹುನುಂಕಾರ (ಕಪಟಿ) ನೆಂಬ ಬ್ರಾಹ್ಮಣನೊಬ್ಬನು ಬಂದನು. ತಾನು ಶ್ರೇಷ್ಠ ಕುಲಕ್ಕೆ ಸೇರಿದವನೆಂದು ಭಾವಿಸಿ ಬುದ್ಧರ ಮುಂದೆ ತನ್ನ ಊರುಗೋಲಿಗೆ

ಗದ್ದವನ್ನು ಆನಿಸಿ ಮುಂದಕ್ಕೆ ಬಾಗಿ ನಿಂತ. ಬುದ್ಧರಿಗೆ ಪ್ರಶ್ನೆಯೊಂದನ್ನು ಹಾಕಿದ: "ಆಯುಷ್ಮಂತ ಗೌತಮ, ಒಬ್ಬನು ಬ್ರಾಹ್ಮಣ ಹೇಗೆ ಆಗುತ್ತಾನೆ?" ಬುದ್ಧರು ಅವನ ಮನಸ್ಸನ್ನು ಪ್ರವೇಶಿಸಿ ಚತುರಾರ್ಯ ಸತ್ಯಗಳನ್ನು ಅರಿತುಕೊಳ್ಳಲು ಅವನು ಶಕ್ತನಿಲ್ಲವೆಂಬುದನ್ನು ಮನಗಂಡು ಹೀಗೆ ಉತ್ತರಿಸಿದನು: "ಯಾರು ಎಲ್ಲ ಪಾಪಗಳನ್ನು ತೊಡೆದು ಹಾಕಿ (ಬಾಹಿತ ಪಾಪಾತಿ ಬ್ರಾಹ್ಮಣ) ಅಹಂಕಾರದಿಂದ ಮುಕ್ತನಾಗಿ ನಿಬ್ಬಾಣವನ್ನು ಸಾಧಿಸಿರುವನೋ ಅವನು ಅರ್ಹತನಾದ ಬ್ರಾಹ್ಮಣನೆಂದು ಕರೆಯಲ್ಪಡುತ್ತಾನೆ". ಈ ಉತ್ತರದೊಳಗಿರುವ ಸತ್ಯವೇ ಆ ಬ್ರಾಹ್ಮಣನ ಗರ್ವವನ್ನು ಇಳಿಸಿತು; ಅವನು ಅಲ್ಲಿಂದ ಕಾಲ್ಕಿತ್ತನು.

ಮಾರನು ಆರು ವರ್ಷಗಳಿಂದ ಬುದ್ಧರನ್ನು ಒಂದು ಸಣ್ಣ ತಪ್ಪಾದರೂ ದೊರೆತೀತೆಂದು ಹಿಂಬಾಲಿಸುತ್ತಿದ್ದನು. ಒಂದೂ ಸಿಗದೆ ವಿಫಲನಾಗಿ ಮತ್ತೆ ಬುದ್ಧರ ಬಳಿ ಹೋಗಿ ಅವನ ಮನಸ್ಸಿನಲ್ಲಿ ಅನುಮಾನ ಶಂಕೆ ಅತೃಪ್ತಿಯ ಬೀಜ ಬಿತ್ತಲು ಹೀಗೆ ಹೇಳಿದನು: "ಓ ಸಮಣನೆ, ಯಾವೆಲ್ಲ ಒಳ್ಳೆಯ ಸಂಗತಿಗಳಿವೆಯೋ ರಾಜವೈಭವ, ಸಂಪತ್ತು, ಮೋಜು ಇತ್ಯಾದಿಗಳ ಮೇಲೆಲ್ಲ ನಿನ್ನ ಮನಸ್ಸು ಹೋಗುತ್ತಿದೆಯೋ, ಅವೆಲ್ಲಾ ಈ ಅರಣ್ಯದಲ್ಲಿ ಇಲ್ಲ ಮತ್ತು ತಪ್ಪುಗಳನ್ನೆಸಗಿರುವುದರಿಂದ ಜನರನ್ನು ಎದುರಿಸಲು ನಿನಗೆ ಆಗುತ್ತಿಲ್ಲ. ಆದ್ದರಿಂದ ಜನರ ಗೆಳೆತನ ಮಾಡಿಕೊಂಡು ಬದುಕನ್ನು ಏಕೆ ಅನುಭವಿಸಬಾರದು?" ಅದಕ್ಕೆ ಬುದ್ಧರು ಉತ್ತರಿಸಿದರು: "ನಾನು ಎಲ್ಲ ಪಾಪಗಳನ್ನು ನಾಶ ಮಾಡಿದ್ದೇನೆ. ಆಸೆ, ದುಃಖ, ದುಮ್ಮಾನ ಬಂಧನಗಳಿಂದ ಮುಕ್ತನಾಗಿದ್ದೇನೆ. ನೀನು ಏನೆಲ್ಲ ಹೇಳುತ್ತಿರುವೆಯೋ ಅವು ಸತ್ಯಕ್ಕೆ ದೂರವಾದವು ಮತ್ತು ಕುತಂತ್ರದಿಂದ ಕೂಡಿದ್ದು."

ಕೋಪಗೊಂಡ ಮಾರನು: "ಬಹಳಷ್ಟು ಯೋಗಿಗಳು, ಸಂನ್ಯಾಸಿಗಳು ಗೃಹತ್ಯಾಗ ಮಾಡಿದ್ದಾಗ್ಯೂ ಬೆಳ್ಳಿ–ಬಂಗಾರ, ಆಸ್ತಿ ಸಂನ್ಯಾಸಿಗಳ ಸಂಗತಿಗಳಾದ ಚೀವರ ವಿಹಾರ ಮುಂತಾದ ಒಳ್ಳೆಯ ವಸ್ತುಗಳಿಗೆ ಅಂಟಿಕೊಂಡು 'ಇದು ನನ್ನದು' ಎಂಬ ಧೋರಣೆಯುಳ್ಳವರಾಗಿದ್ದಾರೆ. ನಿನಗೇನಾದರೂ ಅಂತಹ ಆಸೆಗಳಿದ್ದರೆ ನೀನು ನನ್ನ ಕಪಿಮುಷ್ಠಿಯಿಂದ ಈ ಮೂರು ಲೋಕಗಳಿಂದಲೂ ಪಾರಾಗಲಾರೆ!" ಎಂದನು.

ಅದಕ್ಕೆ ಉತ್ತರವಾಗಿ ಬುದ್ಧರು: "ಬೇರೆಯವರಂತೆ ನನಗೆ ಯಾವ ಮೋಹಗಳಿಲ್ಲ. ನಾನು, ನನ್ನದೆಂಬ ಭ್ರಮೆಯೂ ಸೇರಿದಂತೆ ಎಲ್ಲ ಮಾನಸಿಕ ಕ್ಲೇಶಗಳನ್ನು ನಾಶ ಮಾಡಿದ್ದೇನೆ. ಆದ್ದರಿಂದ ನಿನ್ನ ವ್ಯಾಪ್ತಿಯಲ್ಲಿ ನನ್ನ ದಾರಿಯನ್ನೆಂದೂ ಕಾಣಲಾರೆ". ಒಂದುರೀತಿಯ ಸ್ನೇಹಭಾವದ ಮಾತಿನಲ್ಲಿ ಮಾರನು "ಓ ಪೂಜ್ಯ ಗೌತಮ, ನಿಬ್ಬಾಣದ ಹಾದಿಯು ನಿನಗೆ ಗೊತ್ತಿದ್ದರೆ ನೀನೊಬ್ಬನೇ ಹೋಗು, ನೀನದನ್ನು ಇನ್ನೊಬ್ಬರಿಗೆ ಯಾಕೆ ಬೋಧಿಸಿ ಪರಿವರ್ತಿಸಬೇಕು?" ಬುದ್ಧರು: "ಸರಿ ಮಾರ, ನೀನು ನನ್ನನ್ನೆಷ್ಟೇ ತಡೆದರೂ ನಾನು ಆ ನಿಬ್ಬಾಣವನ್ನು ತಲುಪಿಸುವ ಆರ್ಯ ಮಾರ್ಗವನ್ನು ಉಪದೇಶಿಸದೆ ಇರಲಾರೆ. ಜೀವಿಗಳನ್ನು ಅಮರತ್ವಕ್ಕೆ ಮತ್ತು ಅಂತಿಮ ಶಾಂತಿಗೆ ಸೇರಿಸಿಯೇ ತೀರುತ್ತೇನೆ" ಎಂದರು.



ಆನಂತರದಲ್ಲಿ ಮಾರನು ತನ್ನೆಲ್ಲಾ ತಂತ್ರೋಪಾಯಗಳ ವೈಫಲ್ಯವನ್ನು ಒಪ್ಪಿಕೊಂಡು "ಓ ಗೋತಮ ವಂಶದ ಸಮ್ಮಾಸಂಬುದ್ಧನೇ ನಾನು ದುಃಖಗೊಂಡರೂ, ಖಿನ್ನರಾದರೂ ಇನ್ನು ಕೈಬಿಡುತ್ತೇನೆ. ಭಗವಾನರೆ, ನಿಮ್ಮನ್ನು ತಡೆಯಲು ಎಷ್ಟು ಪ್ರಯತ್ನಗಳನ್ನು ನಡೆಸಿದರೂ ನಾನು ಸೋತಿದ್ದೇನೆ". ಹೀಗೆಂದು ಸೋತು ಅಲ್ಲಿಂದ ಮಾಯವಾದನು. ಆನಂತರದಲ್ಲಿ ಮಾರನು ಮಹಾಬೋಧಿ ವೃಕ್ಷದ ಉತ್ತರದ ದಾರಿಯಲ್ಲಿ ಕುಳಿತು ಆತ್ಮಾವಲೋಕನ ಮಾಡಿಕೊಂಡನು. ನೆಲದಮೇಲೆ ಹದಿನಾರು ಗೆರೆಗಳನ್ನು ಎಳೆದನು. ಅವು ಅವನ ಸಾಧನೆಗಳ ಕುರುಹುಗಳಾಗಿದ್ದವು. ತಾನೇ ಒದರಿಕೊಂಡನು: 'ಬುದ್ಧನಾದರೋ ದಸಪಾರಮಿಗಳನ್ನು ಮೂರುಬಾರಿ ಪೂರೈಸಿದವನು; ನಾನಾದರೋ ಏನಿಲ್ಲ. ದಸಪಾರಮಿಗಳನ್ನು ಮೂರುಬಾರಿ ಪೂರೈಸಿ ಞಾನ ಮತ್ತು ಅಭಿಞ್ಞಾಗಳ ಮೂಲಕ ನಲವತ್ತೆಂಟು ಅರಹತರೂ ಸಂಪಾದಿಸದ ಆರು ಅನನ್ಯ ಸ್ಥಿತಿಗಳನ್ನು ಹೊಂದಿದ್ದಾರೆ. ನನ್ನಲ್ಲಿ ಈ ಆರೂ ಇಲ್ಲ: 1) **ಇಂದ್ರಿಯ ಪರೋಪರಿಯ ಞಾನ :** ಬೇರೆಯವರಲ್ಲಿನ ಪಾರಮಾರ್ಥಿಕ ಮತ್ತು ಜ್ಞಾನೇಂದ್ರಿಯಗಳ ಸಂಪೂರ್ಣ ಜ್ಞಾನವನ್ನು ಹೊಂದಿರುವುದು. ಈ ಜನ್ಮವು ಜನ್ಮಜಾತವಾಗಿಯೇ ಒಬ್ಬನ ಪಾರಮಾರ್ಥಿಕ ಪ್ರೌಢಿಮೆಯನ್ನು ಮತ್ತು ಒಬ್ಬನು ತೆಗೆದುಕೊಳ್ಳುವ ತೀರ್ಮಾನ, ಇಂಗಿತ, ಆಲೋಚನೆಗಳು, ಭಾವನೆಗಳು, ಭಾವಗಳ ಮೇಲಿನ ನಿಯಂತ್ರಣದ ನೈತಿಕ ಶಕ್ತಿಯನ್ನು ಸೂಚಿಸುತ್ತದೆ. 2) **ಆಸಯಾನುಸಯ ಞಾನ:** ಬೇರೆಯವರ ಮನಸ್ಸಿನಲ್ಲಿರುವ ಒಲವುಗಳನ್ನು, ಅವರಲ್ಲಿ ಸುಪ್ತವಾಗಿರುವ ಅಕುಶಲ ಪ್ರವೃತ್ತಿಗಳನ್ನು ಅರಿಯುವ ಸಂಪೂರ್ಣ ಜ್ಞಾನ. 3) **ಮಹಾಕರುಣಾ ಸಮಾಪತ್ತಿ:** ಮೇರೆಯಿರದ ಕರುಣೆಯ ಸಿದ್ಧಿಯ ಮೇಲಿನ ಸಂಪೂರ್ಣ ಜ್ಞಾನ; 4) **ಯಮಕ ಪಾಟಿಹಾರಿಯ ಞಾನ:** ಜೋಡಿ ಪವಾಡಗಳ ಮೇಲಿನ ಸಂಪೂರ್ಣ ಜ್ಞಾನ. 5) **ಅನಾವರಣ ಞಾನ:** ಅಡೆತಡೆಯಿರದ ನಿರಂತರ ದೃಷ್ಟಿಯ ಮೇಲಿನ ಸಂಪೂರ್ಣ ಜ್ಞಾನ. 6) **ಸಬ್ಬಞ್ಞುತ ಞಾನ:** ಎಲ್ಲವನ್ನು ತಿಳಿದಿರುವದರ ಮೇಲಿನ ಸಂಪೂರ್ಣ ಜ್ಞಾನ. ಈ ಅನುಪಮವಾದ ಯಾವ ಸಿದ್ಧಿಗಳೂ ನನ್ನಲ್ಲಿಲ್ಲ. ಈ ಲೋಕೋತ್ತರವಾದ ವಿಶೇಷ ಜ್ಞಾನ ಶಕ್ತಿಗಳು ಒಳನೋಟಗಳು ನನ್ನಲ್ಲಿಲ್ಲದ ಕಾರಣ ನಾನು ಬುದ್ಧನಿಗೆ ಸಮನಾಗಿ ಇರಲಾರೆ. ಬುದ್ಧನು ಖಂಡಿತವಾಗಿಯೂ ಸರ್ವಶ್ರೇಷ್ಠನು.

ಹೀಗೆ ಮಾರನು ಚಿಂತನೆ ನಡೆಸಿರಲು ಅವನ ಮೂವರು ಕುವರಿಯರು ತನ್ಹಾ (ಆಸೆ), ಅರತಿ (ದ್ವೇಷ) ಮತ್ತು ರಾಗ (ಮೋಹ) 'ನಮ್ಮ ತಂದೆ ಸ್ವಲ್ಪಕಾಲದಿಂದ ಕಾಣುತ್ತಿಲ್ಲ, ಎಲ್ಲಿರಬಹುದು?' ಎಂದು ಯೋಚಿಸಿ ತಮ್ಮ ದಿವ್ಯ ದೃಷ್ಟಿಯಿಂದ ನೋಡಲು ತಮ್ಮ ತಂದೆ ರಸ್ತೆ ಪಕ್ಕದಲ್ಲಿ ಕುಳಿತು ಏನೋ ಯೋಚಿಸುತ್ತಾ ನೆಲದಮೇಲೆ ಗೆರೆಗಳನ್ನು ಎಳೆಯುತ್ತಾ ಇದ್ದನು. ಕೂಡಲೇ ಅವರು ಅವನ ಮುಂದೆ ಪ್ರತ್ಯಕ್ಷರಾಗಿ, "ಅಪ್ಪ, ನೀವು ಏಕೆ ಖಿನ್ನರಾಗಿರುವಂತೆ, ಬಳಲಿರುವವರಂತೆ ಕಾಣುತ್ತೀರಿ?" ಎಂದರು. ಅದಕ್ಕೆ ಮಾರನು "ಮಕ್ಕಳೆ, ಈ ಸಮಣ ಗೌತಮನು ಮಾನವ ದೇವ ಬ್ರಹ್ಮ ಈ ನನ್ನ ಮೂರು ಲೋಕಗಳಿಂದ ಎಲ್ಲ ಕಾಲಕ್ಕೂ ತಪ್ಪಿಸಿಕೊಂಡು ಹೋಗಿದ್ದಾನೆ. ಇಷ್ಟೇ ಅಲ್ಲ, ಅಸಂಖ್ಯ ಜನರನ್ನೂ ತನ್ನ

ಜೊತೆಗೆ ಕರೆದುಕೊಂಡು ಹೋಗುವೆನೆಂದು ಬೇರೆ ಹೆದರಿಸಿದ್ದಾನೆ. ನಾನು ಇಷ್ಟು ವರ್ಷಗಳ ಕಾಲ ಅವನ ಹಿಂದೆಯೇ ಬಿದ್ದಿದೆ. ಏನಾದರೂ ತಪ್ಪು ಮಾಡಿ ನನ್ನ ಬಲೆಗೆ ಸಿಕ್ಕುತ್ತಾನೆಂದು ಆಶಿಸಿದ್ದೆ. ಆದರೆ ನಾನು ಸೋತೆ, ಒಂದು ಸೂಜಿ ಗಾತ್ರದಷ್ಟೂ ತಪ್ಪು ಮಾಡಲಿಲ್ಲ. ಅವನ ಜೊತೆ ಯುದ್ಧ ಮಾಡಿದೆ, ಆದರೆ ಸೋತೆ. ಆದ್ದರಿಂದ ಮನಸ್ಸು ತಳಮಳವಾಗಿ ಖಿನ್ನನಾಗಿದ್ದೇನೆ."

ಆಗ ಅವನ ಕುವರಿಯರು ಹೇಳಿದರು: "ತಂದೆಯೇ, ನೀವೇನೂ ಯೋಚನೆ ಮಾಡಬೇಡಿ. ನಾವು ಹೆಣ್ಣುಗಳು, ಹೆಣ್ಣಿನ ವೈಯಾರಗಳು, ಚೇಷ್ಟೆಗಳು ನಮಗೆಲ್ಲಾ ಗೊತ್ತು. ಈ ಶೀಲ ಪುರುಷ ಸಮಣನನ್ನು ನಮ್ಮ ದಿವ್ಯಾತಿದಿವ್ಯ ಮೋಹಕ ಶಕ್ತಿಗಳಿಂದ ಮಾರುಗೊಳಿಸುತ್ತೇವೆ. ಯೋಚಿಸಬೇಡಿ. ಅವನನ್ನು ನಿಮ್ಮ ಕಣ್ಣಮುಂದೆಯೇ ತಂದು ಬಿಡುತ್ತೇವೆ." ಅದಕ್ಕೆ ಮಾರನು "ಮಕ್ಕಳೇ, ಈ ಮೂರು ಲೋಕಗಳಲ್ಲೂ ಈ ಸಮಣ ಗೌತಮನನ್ನು ಮೋಹಗೊಳಿಸಲಾರರು. ಆತನು ಕದಲಿಸಲಾಗದ ನಿಬ್ಬಾಣ ರಕ್ಷೆಯಲ್ಲಿ ಭದ್ರವಾಗಿ ಸ್ಥಾಪಿತನಾಗಿದ್ದಾನೆ. ಅವನು ನಿಮ್ಮ ಬಲೆಗೆ ಸಿಕ್ಕಲಾರ" ಎಂದನು. "ತಂದೆ ಯೋಚಿಸಬೇಡಿ, ನಾವು ನಮ್ಮ ಕಾಮ ಪ್ರಚೋದನೆಗಳಿಂದ ಮೋಹಗೊಳಿಸುತ್ತೇವೆ" ಎಂದು ಮೂವರು ಕುವರಿಯರು ಹೇಳಿದರು.

ಈ ಮೂವರು ಸ್ತ್ರೀ ದೇವತೆಗಳು ಆನಂತರದಲ್ಲಿ ಬುದ್ಧನ ಮುಂದೆ ಪ್ರತ್ಯಕ್ಷವಾಗಿ ವಯ್ಯಾರದಿಂದ ನುಡಿದರು. "ಆಯುಷ್ಮಂತ ಸಮಣನೆ, ದಯಮಾಡಿ ನಮಗೆ ನಿಮ್ಮ ಪಾದದಡಿಯಲ್ಲಿ ಕುಳಿತು ನಿಮ್ಮ ಎಲ್ಲ ಬಯಕೆಗಳನ್ನೂ ಈಡೇರಿಸಲು ಅವಕಾಶ ಕೊಡಿ."

ಬುದ್ಧನು ಕಣ್ಣು ತೆರೆಯದೆ ಅವರನ್ನು ಕಡೆಗಣಿಸಿ ಫಲಸಮಾಪತ್ತಿಯ ಮೂಲಕ ನಿಬ್ಬಾಣ ಸ್ಥಿತಿಯಲ್ಲಿ ಆನಂದಿಂದ ಇದ್ದನು. ಈ ಮೂರು ದೇವತೆಗಳು ತಮ್ಮತಮ್ಮಲ್ಲೇ ಹೀಗೆ ಮಾತನಾಡಿಕೊಂಡರು: "ಈ ಪುರುಷರಿಗೆ ಭಿನ್ನಭಿನ್ನವಾದ ರುಚಿಗಳಿವೆ. ಕೆಲವರು ಹುಡುಗಿಯರನ್ನು ಇಷ್ಟಪಟ್ಟರೆ, ಇನ್ನು ಕೆಲವರು ಬೇರೆ ಬೇರೆ ವಯಸ್ಸಿನ ಬೇರೆ ಬೇರೆ ಸುಂದರ ಮುಖಗಳ ಸ್ತ್ರೀಯರನ್ನು ಇಷ್ಟಪಡುತ್ತಾರೆ. ಆದ್ದರಿಂದ ನಾವು ಬೇರೆ ಬೇರೆ ವಯಸ್ಸಿನ, ಬೇರೆ ಬೇರೆ ಸುಂದರ ಮುಖಗಳ ವೇಷಗಳನ್ನು ಧರಿಸಿ ನಾವು ಪ್ರತಿಯೊಬ್ಬರೂ ನೂರು ಹೆಣ್ಣುಗಳಾಗಿ ನೂರು ಭಂಗಿಗಳಲ್ಲಿ ಅವನ ಮುಂದೆ ನಿಂತು ಮೋಹಕಗೊಳಿಸೋಣ". ಹೀಗೆ ಅವರು ಮೂರುನೂರು ಸ್ತ್ರೀಯರಾಗಿ ಆರು ಗುಂಪಿನ ಭಿನ್ನ ವಯೋಮಾನದ ಮುಖದವರಾಗಿ ಅಜಪಾಲ ಮೈದಾನದಲ್ಲಿ ಅಲೆ ಅಲೆಯಾಗಿ ಹರಡಿಕೊಂಡು ತಮ್ಮನ್ನು ಬಳಸಿಕೊಳ್ಳಬೇಕೆಂದು ಪರಿಪರಿಯಾಗಿ ಮೋಹಕತೆಯಿಂದ ಬುದ್ಧನನ್ನು ಪ್ರಚೋದಿಸಲು ಹೋದರು. ಬುದ್ಧನು ಲೋಕೋತ್ತರ ಫಲ ಸಮಾಪತ್ತಿಯಲ್ಲಿ ಲೀನವಾಗಿ ಈ ದಿವ್ಯಸ್ತ್ರೀಯರನ್ನು ಕಡೆಗಣಿಸಿದನು. ಕಡೆಗಣಿಸಿದಷ್ಟೂ ಅವರು ತಮ್ಮ ಮೋಹಕತೆಯನ್ನು ಮತ್ತಷ್ಟು ಹೆಚ್ಚಿನ ಶಕ್ತಿಯಲ್ಲಿ ಬೀಸಿದರು.

ಆನಂತರದಲ್ಲಿ ಬುದ್ಧ ಹೀಗೆ ಹೇಳಿದರು: "ದೇವತೆಗಳೇ, ಇನ್ನು ನೀವು ಹೊರಟುಹೋಗಿ. ನನ್ನನ್ನು ಆಕರ್ಷಿಸಲು ಮಾಡಿದ ನಿಮ್ಮೆಲ್ಲಾ ಪ್ರಯತ್ನಗಳು ವಿಫಲವಾದವು.



ನಾನು ಎಲ್ಲ ಪ್ರಲೋಭನೆಗಳನ್ನು ದಾಟಿ ಆಚೆ ಹೋದವನು! ಆಗ ಈ ಎರಡು ಗಾಥೆಗಳನ್ನು ಹೇಳಿದರು. ಇವು ಧಮ್ಮಪದದಲ್ಲಿ ಬಂದಿವೆ:

***ಯಸ್ಸ ಜಿತಂ ನಾವಜೀಯತಿ***
***ಜಿತಂವೂಸ್ಸ ನೋ ಯಾತಿ ಕೋಚಿ ಲೋಕೇ***
***ತಂ ಬುದ್ಧಂ ಅನಂತಗೋಚರಂ***
***ಅಪದಂ ಕೇನ ಪದೇನ ನೇಸ್ಸಥ ?*** – ಧಮ್ಮಪದ 179

***ಯಸ್ಸ ಜಾಲಿನೀ ವಿಸತ್ತಿಕಾ***
***ತಣ್ಹಾ ನತ್ಥಿ ಕುಹಿಂಚಿನೆತವೇ***
***ತಂ ಬುದ್ಧಂ ಅನಂತಗೋಚರಂ***
***ಅಪದಂ ಕೇನ ಪದ್ದೇನ ನೇಸ್ಸಥ ?*** – ಧಮ್ಮಪದ 180

[ಯಾರ ಜಯವನ್ನು ಬೇರೆ ಯಾವುದರಿಂದಲೂ ಅಪಜಯ ಮಾಡಲಾಗುವುದಿಲ್ಲವೋ, ಗೆದ್ದುಹೋದ ಈ ಲೋಕದ ಯಾವ ಕಲ್ಮಶಗಳು ಮತ್ತೆ ಹಿಡಿಯಲಾರವೋ ಅಂತಹವರು ಬುದ್ಧರು, ಅನಂತವಾದ ಸಾಮರ್ಥ್ಯ ಉಳ್ಳವರು. ದಾರಿಯೇ ಇರದಿರುವಾಗ ಅವರ ದಾರಿಯನ್ನು ಹೇಗೆ ಯಾವುದರಿಂದ ಕಂಡಿಹಿಡಿಯಲು ಸಾಧ್ಯ?

ಯಾರಲ್ಲಿ ಬಲೆಯಲ್ಲಿ ಸಿಕ್ಕಿಕೊಳ್ಳುವ ಮತ್ತು ಗೊಂದಲದಲ್ಲಿ ತಳ್ಳುವ ಮತ್ತೆ ಮತ್ತೆ ಹುಟ್ಟು ಬರುವಿಕೆಗೆ ಕಾರಣವಾದ ತೃಷ್ಣೆಯು ಇಲ್ಲವಾಗಿದೆಯೋ ಅಂತಹವರು ಬುದ್ಧರು, ಅನಂತವಾದ ಸಾಮರ್ಥ್ಯ ಉಳ್ಳವರು. ದಾರಿಯೇ ಇರದಿರುವಾಗ ಅವರ ದಾರಿಯನ್ನು ಹೇಗೆ ಯಾವುದರಿಂದ ಕಂಡುಹಿಡಿಯಲು ಸಾಧ್ಯ?]

ಮಾರನ ಕುವರಿಯರು ಬುದ್ಧನನ್ನು ಹೊಗಳುತ್ತ ತಮ್ಮ ತಮ್ಮಲ್ಲೇ ಹೀಗೆ ಮಾತನಾಡಿಕೊಂಡರು: "ನಮ್ಮ ತಂದೆ ಸತ್ಯವನ್ನೇ ನುಡಿದರು. ಸಮ್ಮಾಸಂಬೋಧಿಯನ್ನು ಪಡೆದಮೇಲೆ ಬುದ್ಧನು ಎಲ್ಲ ಮೋಹಗಳನ್ನು ದಾಟಿ ಹೋಗಿದ್ದಾನೆ". ಹೀಗೆಂದುಕೊಂಡು ತಮ್ಮ ತಂದೆಯ ಬಳಿಗೆ ಹೋದರು.

ಐದನೇ ವಾರ ಪೂರ ಬುದ್ಧರು ಅಜಪಾಲ ಆಲದಮರದ ಕೆಳಗಿದ್ದು ಹೇಗೆ ಒಬ್ಬನು ತನ್ನ ಗುರು, ತಂದೆ-ತಾಯಿ, ಹಿರಿಯರನ್ನು ಗೌರವಿಸುತ್ತಾನೋ ಹಾಗೆ ತಾನು ಯಾರನ್ನು ಗೌರವಿಸಲಿ ಎಂಬುದರ ಬಗ್ಗೆ ಧ್ಯಾನಿಸಿದನು. ತಮಗೆ ತಾವೇ ಪ್ರಶ್ನೆ ಮಾಡಿಕೊಂಡರು: "ಶೀಲ ಸಮಾಧಿ ಪ್ರಜ್ಞೆಗಳ ಶೃಂಗವನ್ನು ಮುಟ್ಟಿ ಬಿಡುಗಡೆಯನ್ನನುಭವಿಸಿದ ನಾನು ಯಾರನ್ನು ಗೌರವಿಸಲಿ?" ದಿವ್ಯದೃಷ್ಟಿಯಿಂದ ಮೂರು ಲೋಕಗಳನ್ನು ಸರ್ವೇಕ್ಷಿಸಲು ತನಗಿಂತ ಶ್ರೇಷ್ಠರಾದವರು ಯಾರೂ ಇಲ್ಲವೆಂಬುದನ್ನು ತಿಳಿದನು. ಯಾವ ಧಮ್ಮವನ್ನು ತಾನು ಸಂಶೋಧಿಸಿದೆನೋ ಅದನ್ನೇ ಗೌರವಿಸುವೆನೆಂದು ತೀರ್ಮಾನಿಸಿದನು.

ತೇಜೋಮಯ ಬ್ರಹ್ಮದೇವತೆಗಳ ದೊರೆಯಾದ ಬ್ರಹ್ಮಸಹಂಪತಿಯು ಬುದ್ಧನ ಚಿಂತನೆಗಳ ಅರಿವಾಗಿ ಕೂಡಲೇ ಪ್ರತ್ಯಕ್ಷನಾಗಿ ಹೀಗೆ ನುಡಿದನು: "ಭಗವಾನ್ ಬುದ್ಧನೆ,

ದೇವತೆಗಳ ದೇವನೆ, ನೀನೇನನ್ನು ಯೋಚಿಸಿರುವೆಯೋ ಅದು ಖಂಡಿತವಾಗಿಯೂ ಸರಿ. ಹಿಂದಿನ ಎಲ್ಲ ಬುದ್ಧರುಗಳು ಧಮ್ಮವನ್ನೇ ಗೌರವಿಸಿದರು. ಇಷ್ಟು ಹೇಳಿ ಬ್ರಹ್ಮಸಹಂಪತಿಯು ಬುದ್ಧನಿಗೆ ಪ್ರದಕ್ಷಿಣೆ ಹಾಕಿ ನಮಸ್ಕರಿಸಿ ಅಂತರ್ಧಾನನಾದನು.

ಮಹಾಬ್ರಹ್ಮನಾದ ಬ್ರಹ್ಮಸಹಂಪತಿಯು ಒಂದು ಕಲ್ಪ ಪೂರ್ತಿ ಜೀವಿಸುತ್ತಾನೆ. ಮನುಷ್ಯನ ಲೆಕ್ಕಾಚಾರದ ವರ್ಷಗಳಲ್ಲಿ ಊಹಿಸಲಾಗದಷ್ಟು ದೀರ್ಘಕಾಲ ಎಂದರೆ ವಾಸ್ತವದಲ್ಲಿ ಅನಂತಕಾಲ ಬಾಳುತ್ತಾನೆ. ಪ್ರಸ್ತುತದ ಭದ್ದಕಲ್ಪ (ಶ್ರೇಷ್ಠವಾದ ಯುಗ)ದಲ್ಲಿ ಐದುಜನ ಬುದ್ಧರಿದ್ದಾರೆ. ನಾಲ್ಕುಜನ ಬುದ್ಧರು ಈಗಾಗಲೇ ಉದಯಿಸಿದ್ದಾರೆ. ಇನ್ನು ಐದನೆಯ ಬುದ್ಧ, ಮೈತ್ರೇಯ ಬುದ್ಧ ಮುಂದೆ ಹುಟ್ಟುತ್ತಾರೆ. ಬ್ರಹ್ಮಲೋಕದ ಮಹಾಬ್ರಹ್ಮನ ಜೀವಿತಾವಧಿಯು ಮುಂದೆ ಬರುವ ಬುದ್ಧನ ಶಾಸನ ಕೊನೆಯಾಗುವವರೆಗೂ ಇರುತ್ತದೆ. ದೇವತೆಗಳೊಲ್ಲೊಬ್ಬನಾದ ಈ ಮಹಾಬ್ರಹ್ಮನು ಸರ್ವಜ್ಞ ಬುದ್ಧನ ಶಿಷ್ಯನಾಗಿದ್ದು 'ಸಾಸನ ರಕ್ಖಕ ದೇವ'ನೆಂದು ಪರಿಗಣಿಸಲ್ಪಟ್ಟು ಬುದ್ಧ ಶಾಸನವನ್ನು ರಕ್ಷಿಸುತ್ತಾನೆ. ಮಹಾಬ್ರಹ್ಮನು ಅಂತರ್ಧಾನನಾದ ಮೇಲೆ ಬುದ್ಧರು ತಮ್ಮ ದಿವ್ಯಚಕ್ಖುವಿನಿಂದ ಈ ಮಹಾದೇವನು ಹೇಳಿದ ಮಾತು ಸರಿಯೇ ಎಂಬುದನ್ನು ಪರೀಕ್ಷಿಸಿ ಸರಿ ಎಂದುಕೊಂಡು ಅದನ್ನು ಒಪ್ಪಿಕೊಂಡನು.

## VI. ಮುಚಲಿಂದ ಸತ್ತಾಹ

**ಒಂದು ವಾರ ಕಾಲ ಮುಚಲಿಂದ ಮರದ ಕೆಳಗೆ ಧ್ಯಾನದಲ್ಲಿ.**

ಆರನೇ ವಾರದಲ್ಲಿ ಬುದ್ಧರು ಅಜ್ಜಪಾಲ ಆಲದ ಮರದಿಂದ ಮಹಾಬೋಧಿ ಮರದ ಪೂರ್ವಕ್ಕಿರುವ ಮುಚಲಿಂದ ಸರೋವರದ ಮೇಲಿರುವ ಮುಚಲಿಂದ ಮರದತ್ತ ನಡೆದರು. ಆ ಮರದ ಅಡಿಯಲ್ಲಿ ಏಳು ದಿನಗಳ ಕಾಲ ನಿಬ್ಬಾಣ ಮುಕ್ತಿಯ ಆನಂದದಲ್ಲಿ ಮಗ್ನನಾದನು. ಬುದ್ಧರು ಹೀಗೆ ಸಮಾಧಿ ಸ್ಥಿತಿಯಲ್ಲಿ ಕುಳಿತುಕೊಳ್ಳಲು ಅಕಾಲ ಮಳೆಗರೆಯಿತು. ಏಳು ದಿನಗಳ ಎಡೆಬಿಡದ ವರ್ಷಧಾರೆಯಾಯಿತು. ವಾಸ್ತವವಾಗಿ ಈ ಮಳೆಯು ಎರಡು ತಿಂಗಳ ನಂತರ ಅಂದರೆ ವೈಶಾಖ ಮಾಸ ಹುಣ್ಣಿಮೆಯ ಬುದ್ಧೋದಯದ ನಂತರದ ಎರಡು ತಿಂಗಳ ಮೇಲೆ ಬರಬೇಕಿತ್ತು. ಇಂತಹ ನಿರಂತರ ವರ್ಷಧಾರೆಯು ಎರಡು ಸಂದರ್ಭಗಳಲ್ಲಿ ಮಾತ್ರ: ಒಂದು, ಇಡೀ ಪ್ರಪಂಚಕ್ಕೆ ಚಕ್ರವರ್ತಿ ಮಹಾರಾಜನೊಬ್ಬ ಬಂದಾಗ; ಎರಡು, ಧಮ್ಮ ಚಕ್ರವರ್ತಿ ಎಂದರೆ ಬುದ್ಧನುದಯವಾದಾಗ.

ಸರೋವರದ ಕೆಳಗೆ ನಾಗಲೋಕದ ದೊರೆ ಮುಚಲಿಂದ ದಿವ್ಯ ನಿವಾಸವಿತ್ತು. ದಟ್ಟ ಮೋಡಗಳು ಕವಿದು ಗುಡುಗು ಮಿಂಚುಗಳು ಅದಾಗಲೇ ನಾಗರಾಜನಿಗೆ ಅಕಾಲ ಮಳೆಯು ಬುದ್ಧನುದಯವಾಗಿದೆ ಎಂಬ ಅರಿವಾಯಿತು. ಅವನು ಯೋಚಿಸಿದನು: 'ಬುದ್ಧನು ನನ್ನ ನಿವಾಸಕ್ಕೆ ಬಂದುದರಿಂದಲೇ ಋತುಕಾಲವಲ್ಲದ ಮಳೆಯು ಬಂದಿದೆ. ನಾನು ಬುದ್ಧನಿಗೆ ಸೂಕ್ತವಾದ ಆಶ್ರಯವನ್ನು ಕೊಟ್ಟರೆ ಒಳ್ಳೆಯದು!' ನಾಗರಾಜ ಮುಚಲಿಂದನಿಗೆ ತನ್ನ ಮಾಂತ್ರಿಕ ಶಕ್ತಿಯಿಂದ ಕೂಡಲೇ ಒಂದು ಭವ್ಯ ಭವನವನ್ನೇ



ಸೃಷ್ಟಿಸಬಹುದಿತ್ತು. ಆದರೆ ಆ ರೀತಿ ಮಾಡುವುದು ಅಸಭ್ಯತನವೆಂದು ಮತ್ತು ತಾನೇ ಸ್ವತಃ ದೈಹಿಕವಾಗಿ ಭಗವಾನರಿಗೆ ಆಶ್ರಯವನ್ನು ಸಲ್ಲಿಸುವುದು ಉತ್ತಮವೆಂದು ಭಾವಿಸಿದನು.

ನಾಗರಾಜನು ತನ್ನ ದೇಹವನ್ನು ಹಿಗ್ಗಿಸಿಕೊಂಡು ಏಳು ಹೆಡೆಗಳನ್ನು ಭಗವಾನರ ತಲೆಯ ಮೇಲೆ ಹರಡಿ ಧಾರಾಕಾರ ಮಳೆಯಿಂದ ರಕ್ಷಿಸಿದನು. ಕುಂಭದ್ರೋಣ ಮಳೆ ಶೀತಲಗಾಳಿ, ಒಮ್ಮೊಮ್ಮೆ ಬಿರುಗಾಳಿ ನಿರಂತರವಾಗಿ ಏಳು ದಿನಗಳ ಪರ್ಯಂತ ಸುರಿಯಿತು. ಮುಚಲಿಂದನು ಆಕಾಶವನ್ನೊಮ್ಮೆ ದಿಟ್ಟಿಸಿ ನೋಡಿದನು. ಮೋಡಗಳಿಲ್ಲದ ಬಾನನ್ನು ನೋಡಿ ಭಗವಾನರ ಮೇಲೆ ಏಳು ಹೆಡೆಗಳನ್ನು ಇನ್ನೂ ಹರಡಿರುವುದು ಅವಶ್ಯಕತೆ ಇಲ್ಲವೆಂದು ತನ್ನ ಬೃಹತ್ ಸರ್ಪ ರೂಪವನ್ನು ತೊರೆದು ಸುಂದರ ಯುವಕನಾಗಿ ಬುದ್ಧನ ಮುಂದೆ ಕೈಜೋಡಿಸಿ ನಿಂತನು. ನಾಗರಾಜನ ಭಕ್ತಿಪೂರ್ವಕವಾದ ಸೇವೆಯನ್ನು ಮೆಚ್ಚಿ ಅವನಿಗೆ ಹರಸಿ ಈ ಕೆಳಗಿನಂತೆ ಉದಾನವನ್ನು ಉಸುರಿದರು:

***ಸುಖೋ ವಿವೇಕೋ ತುಟ್ಠಸ್ಸ***
***ಸುತಧಮ್ಮಸ್ಸ ಪಸ್ಸತೊ***
***ಅವ್ಯಾಪಜ್ಜಂ ಸುಖಂ ಲೋಕೇ***
***ಪಾಣಭೂತೇಸು ಸಂಯಮೋ***

ಯಾರು ಈ ಲೋಕದಲ್ಲಿ ಸಂತೃಪ್ತಿ ಹೊಂದಿ ಏಕಾಂಗಿಯಾಗಿ ಬದುಕುತ್ತಾ ತಾನು ಅರಿತ ಧಮ್ಮದ ನಿಜವಾದ ರೂಪವನ್ನು ವಿವೇಕದಿಂದ ನೋಡುತ್ತಾರೋ, ಅವನು ಸುಖಿ. ಯಾರು ಎಲ್ಲ ಪ್ರಾಣಭೂತಗಳಲ್ಲಿ ಮೈತ್ರಿಯನ್ನು ತೋರಿಸುತ್ತಾರೋ ಅವರು ಸುಖಿ.

***ಸುಖಾ ವಿರಾಗತಾ ಲೋಕೆ***
***ಕಾಮನಂ ಸಮತಿಕ್ಕಮೋ***
***ಅಸ್ಮಿಮಾನಸ್ಸ ಯೊ ವಿನಯೊ***
***ಏತಂ ವೆ ಪರಮಂ ಸುಖಂ***

ಈ ಲೋಕದಲ್ಲಿ ವಿರಾಗಿಗಳಾಗಿ ಮತ್ತು ಇಂದ್ರಿಯ ಕಾಮಗಳಿಂದ ದೂರವಾಗಿ ಬದುಕುವುದು ಸುಖವನ್ನು ನೀಡುತ್ತದೆ. 'ನಾನು, ನನ್ನದು' ಎಂಬುದನ್ನು ಕಿತ್ತುಹಾಕುವುದು ಪರಮಸುಖವನ್ನು ತರುತ್ತದೆ.

## VII. ರಾಜಾಯತನ ಸತ್ತಾಹ

**ಒಂದು ವಾರದ ಕಾಲ ರಾಜಾಯತನ ಮರದಡಿಯಲ್ಲಿ ಧ್ಯಾನಿಸುವುದು.**

ಬುದ್ಧನು ಏಳನೇ ವಾರದಲ್ಲಿ ಮುಚಲಿಂದ ಮರದಿಂದ ಮಹಾಬೋಧಿ ಮರದ ದಕ್ಷಿಣಕ್ಕಿರುವ ರಾಜಾಯತನ ಮರದತ್ತ ಚಲಿಸಿದನು. ಈ ವಿಶಾಲ ವೃಕ್ಷದ ಕೆಳಗೆ ಒಂದು ವಾರ ಪೂರ ಕುಳಿತು ಫಲಸಮಾಪತ್ತಿಯ ಝಾನದಲ್ಲಿ ತಲ್ಲೀನನಾಗಿ ಬಿಡುಗಡೆಯ ಆನಂದದಲ್ಲಿ ಮುಳುಗಿದ್ದನು.

ಬುದ್ಧರು ಧ್ಯಾನದಿಂದ ಹೊರಬಂದ ಮೇಲೆ ಶಕ್ರನು ಹಲ್ಲುಜ್ಜಲು ಒಂದು ಕಡ್ಡಿಯನ್ನು, ಮುಖ ತೊಳೆಯಲು ನೀರನ್ನು, ಪ್ರಕೃತಿ ಕರೆಯಾಗಲು ಅಳಲೆಕಾಯಿಯನ್ನು ಕೊಟ್ಟನು. ಬುದ್ಧರು ಇವನ್ನೆಲ್ಲಾ ಮಾಡಿ ಮರದ ಅಡಿ ಕುಳಿತನು. ಆ ಸಂದರ್ಭದಲ್ಲಿ ತಪುಸ್ಸಾ ಮತ್ತು ಭಲ್ಲಿಕ ಎಂಬ ಇಬ್ಬರು ಸೋದರ ವರ್ತಕರು ಉಕ್ಕಲದಿಂದ ತಮ್ಮ ಸ್ವಂತ ದೇಶವಾದ ಮಜ್ಝಿಮದೇಶದತ್ತ ತಮ್ಮ ಐದುನೂರು ಸರಕು ಬಂಡಿಗಳೊಡನೆ ಸಾಗುತ್ತಿದ್ದರು. ಮುಖ್ಯರಸ್ತೆಯಲ್ಲಿ ಸಾಗುತ್ತ ಬರುತ್ತಿದ್ದಂತೆ ರಾಜಾಯತನ ವೃಕ್ಷ ಹತ್ತಿರ ಬರುತ್ತಿರಲು ಅವರೆಲ್ಲಾ ಬಂಡಿಗಳು ಕೆಸರಿನಲ್ಲಿ ಸಿಕ್ಕಿಹಾಕಿಕೊಂಡವೇನೋ ಅನ್ನುವಂತೆ ನಿಂತುಬಿಟ್ಟವು. ವಾಸ್ತವದಲ್ಲಿ ರಸ್ತೆ ಒಣಗಿ ಚೆನ್ನಾಗಿಯೇ ಇತ್ತು. ಈ ಸೋದರರು ಏಕೆ ಹೀಗೆ ನಿಂತವು ಎನ್ನುವ ಕಾರಣದ ಬಗ್ಗೆ ಯೋಚಿಸುತ್ತಿರಲು ಮರದ ಕೊಂಬೆಯಿಂದ ದೇವನೊಬ್ಬನು ಪ್ರತ್ಯಕ್ಷವಾಗಿ ತನ್ನ ಹಿಂದಿನ ಜನ್ಮದ ಬಗ್ಗೆ ಹೇಳಿ, "ಬುದ್ಧನು ಸಮ್ಮಾಸಂಬುದ್ಧನಾದ ಮೇಲೆ ಮಹಾಬೋಧಿ ವೃಕ್ಷದ ಸುತ್ತಮುತ್ತ ಏಳು ವಾರಗಳ ಕಾಲ ನಿಬ್ಬಾಣ ಸುಖವನ್ನನುಭವಿಸಿದ್ದಾನೆ. ಧ್ಯಾನದಿಂದ ಎದ್ದುಬಂದು ರಾಜಾಯತನ ವೃಕ್ಷದಡಿಯಲ್ಲಿ ಕುಳಿತಿದ್ದಾನೆ. ಈ ನಲವತ್ತೊಂಭತ್ತು ದಿನಗಳಲ್ಲಿ ಯಾವ ಆಹಾರವನ್ನೂ ಸ್ವೀಕರಿಸಿಲ್ಲ. ಯುವಕರಾದ ನೀವು ಭಕ್ತಿಭಾವದಿಂದ ಅವರಲ್ಲಿ ಹೋಗಿ ಅನ್ನದಾನ ಮಾಡಿ. ಅದು ನಿಮಗೆ ಬಹುಕಾಲ ಸಂಪತ್ತನ್ನು, ಸುಖವನ್ನು ತರುತ್ತದೆ" ಎಂದು ನುಡಿದು ಆ ದೇವನು ಮಾಯವಾದನು.

ಈ ಮಾತುಗಳನ್ನು ಕೇಳಿದ ಸೋದರರು ಬಹು ಸಂತೋಷಗೊಂಡು ಚೆನ್ನಾಗಿ ಕಡೆದ ಮಜ್ಜಿಗೆ (ಮಂಥ)ಯನ್ನು ಮತ್ತು ಮಧುಪಿಂಡಿಕಾ (ಹುರಿದ ಪುಡಿ ಮಾಡಿದ ಹಿಟ್ಟಿಗೆ ಜೇನುತುಪ್ಪವನ್ನು ಬೆರೆಸಿ ಮುದ್ದೆ ಮಾಡಿದ ಉಂಡೆಗಳು) ಗಳನ್ನು ತೆಗೆದುಕೊಂಡು ಬುದ್ಧನ ಬಳಿಹೋಗಿ ಭಕ್ತಿ ಗೌರವದಿಂದ ನಮಿಸಿ ತಾವು ತಂದ ಆಹಾರವನ್ನು ಕೊಡುತ್ತಾ ಹೀಗೆ ಹೇಳಿದರು: "ಭಗವಾನ್, ಅರಹಂತರಾದ ತಾವು ಈ ಆಹಾರವನ್ನು ದಯಮಾಡಿ ಸ್ವೀಕರಿಸಿ, ಇದು ನಮಗೆ ಬಹುಕಾಲ ಒಳಿತನ್ನು ಮತ್ತು ಸುಖವನ್ನು ತರುತ್ತದೆ".

ಆಗ ಬುದ್ಧರು ಯೋಚಿಸಿದರು: 'ಘಟಿಕಾರ ಬ್ರಹ್ಮನು ಅಂದು ನಾನು ಗೃಹತ್ಯಾಗ ಮಾಡಿ ಬಂದಾಗ ಕೊಟ್ಟ ಮಣ್ಣಿನ ಪಿಂಡಪಾತ್ರೆಯು ಸುಜಾತಲೂ ಸುವರ್ಣ ಬಟ್ಟಲಿನಲ್ಲಿ ಪಾಯಸವನ್ನು ಕೊಟ್ಟ ದಿನದಂದು ಮಾಯವಾಯಿತು. ಪೂರ್ವ ತಥಾಗತರ್ಯಾರೂ ಭಿಕ್ಷೆಯನ್ನು ತಮ್ಮ ಕೈಗಳಲ್ಲಿ ಸ್ವೀಕರಿಸಲಿಲ್ಲ. ಅವರೆಲ್ಲಾ ಭಿಕ್ಷಾನ್ನವನ್ನು ಪಿಂಡಪಾತ್ರೆಯಲ್ಲೇ ಸ್ವೀಕರಿಸಿದ್ದರು'. ಬುದ್ಧರ ಈ ಆಲೋಚನೆಯನ್ನು ಗ್ರಹಿಸಿದ ನಾಲ್ಕು ದಿಕ್ಕುಗಳ ಚಾತುಮ್ಮಹಾರಾಜಿಕ ದೇವತೆಗಳು ನಾಲ್ಕು ಶಿಲಾ ಪಿಂಡಪಾತ್ರೆಗಳನ್ನು ಒಂದರ ಮೇಲೊಂದರಂತೆ ಇಟ್ಟು ಬುದ್ಧನಿಗೆ ಅರ್ಪಿಸಿದರು. ಬುದ್ಧರು ಅವನ್ನು ಸ್ವೀಕರಿಸಿ ತನ್ನ ಮನಸ್ಸಿನಲ್ಲಿ 'ಇವೆಲ್ಲಾ ಸೇರಿ ಒಂದೇ ಪಿಂಡಪಾತ್ರೆಯಾಗಲಿ' ಎಂದು ಸಂಕಲ್ಪಿಸಿದರು. ತಕ್ಷಣವೇ ಆ ನಾಲ್ಕು ಪಾತ್ರೆಗಳೂ ನಾಲ್ಕು ಅಂಚುಕಟ್ಟುಗಳಿಂದ ಕೂಡಿದ ಒಂದೇ ಪಾತ್ರೆಯಾಯಿತು.



ಆನಂತರದಲ್ಲಿ ಬುದ್ಧರು ಆ ಪಿಂಡಪಾತ್ರೆಯಲ್ಲಿ ಮಂಥವನ್ನು ಮಧುಪಿಂಡಿಕಾವನ್ನು ಸ್ವೀಕರಿಸಿ ಊಟ ಮಾಡಿದ ಮೇಲೆ ಆ ಇಬ್ಬರು ಸೋದರ ವರ್ತಕರಿಗೆ ಸೂಕ್ತವಾದ ಧಮ್ಮದೇಸನವನ್ನು ನೀಡಿದರು.

ತಪುಸ್ಸ ಮತ್ತು ಭಲ್ಲಿಕ ಇಬ್ಬರು ಬುದ್ಧ ಮತ್ತು ಧಮ್ಮಕ್ಕೆ ಶರಣು ಹೋಗಲು "ಪೂಜ್ಯರೇ, ನಾವು ಭಗವಾನರಾದ ತಮ್ಮಲ್ಲಿ ಮತ್ತು ಅವರ ಧಮ್ಮದಲ್ಲಿ ಶರಣು ಹೋಗುತ್ತೇವೆ". ಹೀಗೆ ಇವರು ದ್ವೇ ವಾಚಿಕಾ ಸರಣು (ಎರಡು ಪದಗಳ ಶರಣು) ಹೊಂದಿದ ಮೊದಲ ಉಪಾಸಕರಾದರು. ಕಾರಣ ಸಂಘಕ್ಕೆ ಶರಣು ಹೋಗಲು ಆಗಿನ್ನೂ ಸಂಘವು ಅಸ್ತಿತ್ವಕ್ಕೆ ಬಂದಿರಲಿಲ್ಲ. ಆಗ ಈ ಉಪಾಸಕರಿಬ್ಬರು ವಿನಯದಿಂದ "ಭಗವಾನರೆ, ಮುಂದೆ ನಮಗೆ ಪೂಜಿಸಲು ಏನಾದರೂ ಕೊಡುವ ಕೃಪೆ ಮಾಡಿ" ಎಂದು ಪ್ರಾರ್ಥಿಸಿದರು.

ಅವರ ಭಕ್ತಿ ಭಾವನೆಗೆ ಸ್ಪಂದಿಸಿ ಬುದ್ಧರು ಕೈಯಿಂದ ತಮ್ಮ ತಲೆಯನ್ನು ಉಜ್ಜಿ ಕೇಶವನ್ನು ಕುರುಹಿಗಾಗಿ ಕೊಟ್ಟರು. ಬುದ್ಧರಿಂದ ಕೇಶ ಚೈತ್ಯವನ್ನು ಪಡೆದು ಬಹು ಆನಂದಪಟ್ಟರು. ಆನಂತರದಲ್ಲಿ ತಮ್ಮ ವ್ಯಾಪಾರ ಮುಗಿಸಿ ಮನೆಗೆ ತೆರಳಿ ಸುವರ್ಣ ಕರಂಡದಲ್ಲಿ ಕೇಶವನ್ನಿಟ್ಟು ಚೈತ್ಯವೊಂದನ್ನು ನಿರ್ಮಿಸಿದರು.

## ಬ್ರಹ್ಮಯಾಚನ – ಬ್ರಹ್ಮನು ಧಮ್ಮವನ್ನು ಉಪದೇಶಿಸುವಂತೆ ಪ್ರಾರ್ಥಿಸಿದ್ದು

ಬುದ್ಧರು ನಲವತ್ತೊಂಬತ್ತು ದಿನಗಳ ಧ್ಯಾನ ಸಮಾಧಿಯ ನಂತರ ವರ್ತಕ ಸಹೋದರರಿಂದ ಪಡೆದ ಭಿಕ್ಷಾನ್ನವನ್ನು ಭುಂಜಿಸಿಯಾದ ಮೇಲೆ ರಾಜಾಯತನ ವೃಕ್ಷ ಮೂಲದಿಂದ ಎದ್ದು ಅಜಪಾಲ ವೃಕ್ಷ ಮೂಲಕ್ಕೆ ಹೋದರು. ಈ ವಿಶಾಲ ಪ್ರಶಾಂತವಾದ ಮರದ ಕೆಳಗೆ ಪದ್ಮಾಸನದಲ್ಲಿ ಕುಳಿತು ಮುಂದೆ ಏನು ಮಾಡಬೇಕೆಂಬುದರ ಬಗ್ಗೆ ಮನನ ಮಾಡಿದರು. ತಮ್ಮ ಸರ್ವಜ್ಞ ಚಕ್ಖುವಿನಿಂದ ತಾವೇ ಸಂಶೋದಿಸಿದ ಚತುರಾರ್ಯ ಸತ್ಯಗಳ ಘನತೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದರು.

ಬುದ್ಧರು ಹೀಗೆ ಯೋಚಿಸಿದರು: "ವಿಶಾಲವಾದ ಆಳವನ್ನಳೆಯಲಾರದ ನೀರು ಹೇಗೆ ಘನ ಭೂಮಿಯ ಅಡಿಯಿಂದ ಮೇಲಿನವರೆಗೆ ಬಂದು ಒಂದು ರೂಪ ತಳೆದು ನಿಲ್ಲುತ್ತದೋ ಹಾಗೆ ಈ ಧಮ್ಮವು ನಿಜವಾಗಿಯೂ ಸೀಮಾತೀತವಾದುದು, ಅಗಾಧವಾದುದು. ಇದು ಮೇರು ಪರ್ವತದ ಅಡಿಯಲ್ಲಿ ಕಾಣದಿರುವ ಸಾಸಿವೆ ಕಾಳಿನಂತೆ ಸೂಕ್ಷ್ಮಾತಿ ಸೂಕ್ಷ್ಮವೂ ಹೌದು. ಇನ್ನೂ ಹೇಳಬೇಕೆಂದರೆ ಈ ದಮ್ಮವು ಒಬ್ಬನನ್ನು ಪರಮಶಂತಿ ಸುಖ ಪರಿತ್ರಾಣ ಅಮರತ್ವದತ್ತ ಕೊಂಡೊಯ್ಯುವಷ್ಟು ವ್ಯಾಪ್ತಿ ಇರುವ ಈ ಧಮ್ಮವನ್ನು ತರ್ಕಕ್ಕೆ ಒಳಪಡಿಸಲಾಗದು. ಇದು ಬುದ್ಧಿಮತ್ತೆಯನ್ನು ಮೀರಿದುದು. ಇದನ್ನು ಕೇವಲ ಲೋಕೋತ್ತರ ವಿಪಸ್ಸನ ಪ್ರಜ್ಞೆಯಿಂದ ಮಾತ್ರ ಅರಿಯಬಹುದು."

"ಇನ್ನೊಂದು ಬಗೆಯಲ್ಲಿ ನೋಡಿದರೆ ಎಲ್ಲ ಇಂದ್ರಿಯ ಸಂಬಂಧ ಜೀವಿಗಳು ಆಸೆ ಬಂಧನಗಳ ಬಲೆಯಲ್ಲಿ ಸಿಲುಕಿಕೊಂಡು ನಲುಗುತ್ತಿವೆ. ಅವು ಇಂದ್ರಿಯ ಭೋಗದಲ್ಲಿ ಪ್ರಾಪಂಚಿಕ ಇರವಿನಲ್ಲಿಯೇ ಸುಖವನನ್ನನುಭವಿಸುತ್ತಾ ಕಾರ್ಯ-ಕಾರಣಗಳ

ದೆಸೆಯಿಂದಲೇ ಈ ಲೋಕದಲ್ಲಿ ಗುರಿಯಿಲ್ಲದೆ ನಿಖರತೆಯಿಲ್ಲದೆ ಹುಟ್ಟುವುದರ ಬಗೆಗಿನ ಲೋಕ ನಿಯಮವಾದ ಪಟಿಚ್ಚ ಸಮುಪ್ಪಾದವನ್ನು ಅರಿಯಲಾರದವರಾಗಿದ್ದಾರೆ. ತನ್ಹಾ ಮತ್ತು ಮೋಹಗಳ ದೆಸೆಯಿಂದಾಗಿಯೇ ಮತ್ತೆ ಮತ್ತೆ ಹುಟ್ಟುವುದು ನಿಜವಾಗಿಯೂ ದುಃಖವೇ ಆಗಿದೆ. ನಿಬ್ಬಾಣದ ಞಾನದಸ್ಸನವು ಮಾತ್ರ ಮತ್ತೆ ಮತ್ತೆ ಹುಟ್ಟುವುದನ್ನು (ಸಂಸಾರ) ನಿಲ್ಲಿಸುತ್ತದೆ. ಘನಗಂಭೀರವಾದ ಈ ಧಮ್ಮವನ್ನು ಪಾರಮಾರ್ಥಿಕವಾಗಿ ಪಕ್ವಗೊಂಡಿರದ ಪ್ರಾಪಂಚಿಕ ಬಂಧನಗಳಿಂದ ಹೊರಬರಲು ಸಿದ್ಧರಿರದ ಮಾನವ ದೇವ ಜೀವಿಗಳಿಗೆ ಹೇಳಿದರೆ ಅವರು ಪವಿತ್ರವಾದ ಈ ಆರ್ಯ ಧರ್ಮವನ್ನು ತಿಳಿಯಲಾರರು. ಅವರಿಗೆ ಧಮ್ಮೋಪದೇಶ ಮಾಡುವುದು ವ್ಯರ್ಥಪ್ರಯತ್ನವೂ, ಆಯಾಸವೂ ಆಗುತ್ತದೆ."

ತಾವು ಬಹುಕಾಲದ ಮಹಾ ಪ್ರಯತ್ನ ಮತ್ತು ತ್ಯಾಗಗಳಿಂದ ಕಂಡುಕೊಂಡ ಚತುರಾರ್ಯ ಸತ್ಯಗಳ ಧಮ್ಮವನ್ನು ಉಪದೇಶಿಸಲು ಇದು ಸೂಕ್ತ ಸಮಯವೇ ಎಂದು ಯೋಚಿಸಿದರು. ಈ ಕಾರಣಗಳಿಂದಾಗಿ ಧಮ್ಮವನ್ನು ಉಪದೇಶಿಸಲು ಇದು ಸೂಕ್ತ ಸಮಯವಲ್ಲವೆಂದು ತಿಳಿದರು: 1. ಇಂದ್ರಿಯಯುಕ್ತವಾದ ಜೀವಿಗಳ ಮನಸ್ಸುಗಳು ಕ್ಲೇಶಗಳಿಂದ ಕೂಡಿರುವುದರಿಂದ ಸಿದ್ಧರಿಲ್ಲ. 2. ಈ ಆರ್ಯ ಧರ್ಮವು ಘನ ಗಂಭೀರವೂ ಸೂಕ್ಷ್ಮವೂ ಆಗಿದೆ. 3. ತಥಾಗತರು ಧಮ್ಮವನ್ನು ಮಹತ್ತಾಗಿ ಗೌರವಿಸುವುದರಿಂದ ಅದರ ಸಡಿಲಿಕೆಯನ್ನು ಸಹಿಸುವುದಿಲ್ಲ. 4. ಎರಡು ಅತಿಮುಖ್ಯವಾದ ಸಂಗತಿಗಳು ಒಂದು: ಆಂತರಿಕ ಸ್ಥಿತಿ (ಅಜ್ಝತ್ತಿಕ ನಿದಾನ) ಮತ್ತು ಬಾಹ್ಯಸ್ಥಿತಿ (ಬಾಹಿರಿಕ ನಿದಾನ) ಗಳು ಇನ್ನೂ ಘಟಿಸಬೇಕಾಗಿವೆ. ಮೊದಲಿನದು, ಬುದ್ಧನಲ್ಲಿ ಮಹಾಕರುಣ ಞಾನದ ಉದಯ, ಇದು ಘಟಿಸಿದೆ. ಎರಡನೆಯದು, ಹಲವರು ಪೂರ್ವ ಬುದ್ಧರನ್ನು ನೋಡಿದ ಮತ್ತು ತಾನೇ ಬುದ್ಧ ಸಂಪತ್ತನ್ನು ಹೊಂದಿರುವವನಾದ ಮತ್ತು ಈ ಲೋಕದಲ್ಲಿ ಬಹು ಆದರಕ್ಕೆ ಪಾತ್ರನಾದ ಮಹಾಬ್ರಹ್ಮನು ವಿನಂತಿಸುವುದು. ಎರಡನೇ ಸಂಗತಿಯು ಇನ್ನೂ ಘಟಿಸಿಲ್ಲ.

ಇನ್ನೂ ಈ ಎರಡು ಸಂಗತಿಗಳು ಆಗಬೇಕಾದ್ದರಿಂದ ಬುದ್ಧನು ಅವುಗಳ ಮೇಲೆ ಧ್ಯಾನಿಸಿದನು. ಬುದ್ಧನ ಮಾನಸಿಕ ಸ್ಥಿತಿಯನ್ನು ಒಬ್ಬ ನುರಿತ ವೈದ್ಯನಿಗೆ ಹೋಲಿಸಬಹುದು. ವೈದ್ಯನು ರೋಗಿಯ ಉಲ್ಬಣ ಸ್ಥಿತಿಯನ್ನು ಪರೀಕ್ಷಿಸಿದ ಮೇಲೆ ಅವನನ್ನು ಗುಣಪಡಿಸಲು ಏನೆಲ್ಲಾ ಮಾಡಬಹುದೆಂಬುದನ್ನು ಯೋಚಿಸುತ್ತಾನೆ.

ಕೆಲವು ವಿದ್ವಾಂಸರು ಬುದ್ಧನ ಈ ಮಾನಸಿಕ ಸ್ಥಿತಿಯನ್ನು ತೀರ್ಮಾನ ತೆಗೆದುಕೊಳ್ಳಲಾರದ ಮತ್ತು ಸಂಶಯದಿಂದೊಡಗೂಡಿದ ಗೊಂದಲದ ಸ್ಥಿತಿಯೆಂದು ಬಿಂಬಿಸುತ್ತಾರೆ. ಇದು ಕೇವಲ ತಪ್ಪು ಅಭಿಪ್ರಾಯ ಮತ್ತು ಜನರನ್ನು ತಪ್ಪು ದಾರಿಯತ್ತ ಎಳೆಯಲು ಮಾಡಿದ ಪ್ರಯತ್ನ. ಬುದ್ಧರು ಸರ್ವಜ್ಞರು. ಹಾಗಾಗಿ ಬುದ್ಧರಿಗೆ ಸಂಶಯಗಳೇ ಇಲ್ಲ. ಅರಹತರಾಗುವ ಬಹು ಮುನ್ನವೇ ಅಂದರೆ ಸೋತಾಪನ್ನರಾಗಿರುವಾಗಲೇ ಎಲ್ಲ ಸಂಶಯ ಗೊಂದಲಗಳನ್ನು ಬುಡಮೇಲು ಮಾಡಿದ್ದರು.



ಸೂಕ್ತವಾದ ಸಂದರ್ಭದ ಮೇಲೆ ಬುದ್ಧರು ಮನನ ಮಾಡುತ್ತಿರುವಂತೆ ಬ್ರಹ್ಮಸಹಂಪತಿಗೆ ಬುದ್ಧನ ಆಲೋಚನೆಗಳು ತನ್ನ ಅರಿವಿಗೆ ಬಂದವು. ಬುದ್ಧನು ಧಮ್ಮೋಪದೇಶವನ್ನು ನೀಡಲು ಇಂಗಿತವಿಲ್ಲದಿರುವುದರ ಬಗ್ಗೆ ಹೀಗೆ ಚಿಂತನೆ ಮಾಡಿದನು: "ಬುದ್ಧನು ಧಮ್ಮೋಪದೇಶವನ್ನು ನೀಡದಿದ್ದರೆ ಅದು ದೇವತೆಗಳು ಮತ್ತು ಮಾನವರಿಗೆ ದುರಾದೃಷ್ಟವೂ ಮತ್ತು ನಷ್ಟವೂ ಹೌದು. ಕೆಲವು ಇಂದ್ರಿಯಯುಕ್ತ ಜೀವಿಗಳ ಕಣ್ಣುಗಳು ಕಳಂಕಗಳ ಧೂಳಿನಿಂದ ಕೂಡಿವೆ. ಅಂತಹವರು ಧಮ್ಮವನ್ನು ಕೇಳಿದ ಮೇಲೆ ಚತುರಾರ್ಯ ಸತ್ಯಗಳನ್ನರಿತು ಸಂಸಾರ ಬಂಧನದಿಂದ ಮುಕ್ತರಾಗುತ್ತಾರೆ. ಇಂತಹ ಮಾನವ ದೇವ ಜೀವಿಗಳು ಧಮ್ಮವನ್ನು ಕೇಳುವ ಅವಕಾಶವನ್ನು ತಪ್ಪಿಸಿಕೊಂಡರೆ ಅವರು ಬಹುಕಾಲದವರೆಗೂ ಸಂಸಾರ ಬಂಧನದಲ್ಲಿಯೇ ಉಳಿಯಬೇಕಾಗುತ್ತದೆ".

ಹೀಗೆ ಚಿಂತನೆ ಮಾಡಿದ ಮಹಾಬ್ರಹ್ಮನು ಕೂಡಲೇ ಬ್ರಹ್ಮಲೋಕದಿಂದ ಮಾಯವಾಗಿ ಬುದ್ಧರ ಮುಂದೆ ಬಂದು ನಿಂತು ಗೌರವವನ್ನು ಸಲ್ಲಿಸಿ ಹೀಗೆ ಹೇಳಿದನು: "ಭಗವಾನರೇ, ದಯಮಾಡಿ ಧಮ್ಮದೇಸನವನ್ನು ನೀಡಿ. ಚತುರಾರ್ಯ ಸತ್ಯಗಳನ್ನು ಅರ್ಥಮಾಡಿ ಕೊಳ್ಳುವವರು ಇದ್ದು, ಅವರು ಧಮ್ಮವನ್ನು ಕೇಳಿ ಬಿಡುಗಡೆ ಹೊಂದುತ್ತಾರೆ. ಓ ಭಗವಾ, ಕಣ್ಣುಗಳಲ್ಲಿ ಕಳಂಕವೆಂಬ ಧೂಳು ಮುಸುಕಿರುವ ಜೀವಿಗಳಿದ್ದಾರೆ. ಅಂತಹವರು ಧಮ್ಮವನ್ನು ಕೇಳುವ ಅವಕಾಶವನ್ನು ತಪ್ಪಿಸಿಕೊಂಡರೆ ನಿಬ್ಬಾಣವನ್ನು ಪಡೆಯದೇ ಸಂಸಾರ ಬಂಧನದಲ್ಲೇ ಬಹುಕಾಲ ಇರಬೇಕಾಗುತ್ತದೆ. ಈ ಮಗಧದಲ್ಲಿ ಜನರನ್ನು ತಪ್ಪುದಾರಿಗೆಳೆಯುವ ಧಮ್ಮವಿರೋಧಿ ಪಾಖಂಡಿಗಳಿದ್ದಾರೆ. ನಿಜವಾದ ಧಮ್ಮವು ಎಲ್ಲ ಮಾನವ ದೇವ ಜೀವಿಗಳ ಉಳಿವಿಗಾಗಿ, ಒಳಿತಿಗಾಗಿ ಹೊರಹೊಮ್ಮಲಿ."

ಮಹಾಬ್ರಹ್ಮನ ಮಾತುಗಳನ್ನು ಕೇಳಿದ ಮೇಲೆ ಬುದ್ಧರು ಪ್ರಪಂಚದಲ್ಲಿಯ ಎಲ್ಲ ಇಂದ್ರಿಯಯುಕ್ತ ಜೀವಿಗಳನ್ನು ತನ್ನ ದಿವ್ಯಚಕ್ಷುಗಳಿಂದ ಸರ್ವೇಕ್ಷಿಸಿ ಕಮಲ ಪುಷ್ಪಗಳಿಗೆ ಹೋಲಿಸಬಹುದಾದ ಭಿನ್ನ ಭಿನ್ನ ಪಾರಮಾರ್ಥಿಕ ಹಂತದ ಜೀವಿಗಳಿರುವುದನ್ನು ಕಂಡರು. 1. ಒಂದುರೀತಿಯ ಕಮಲವು ಹುಟ್ಟಿ ಕೊಳದ ತಳದಲ್ಲೇ ಬೆಳೆಯುವಂತಹುದು. 2. ಕಮಲವು ಹುಟ್ಟಿ ಕೊಳದ ಮಧ್ಯ ಭಾಗದಲ್ಲಿ ಬೆಳೆಯುವಂತಹುದು. 3. ಕಮಲವು ಹುಟ್ಟಿ ಕೊಳದ ಮೇಲ್ಭಾಗದವರೆಗೂ ಬೆಳೆಯುವಂತಹುದು. 4. ಕಮಲವು ಹುಟ್ಟಿ ಕೊಳದ ಮೇಲ್ಭಾಗಕ್ಕೆ ಬಂದು ಅದರ ಮೇಲೆ ನಿಂತು ಬೆಳೆದು ನೀರಿಗೆ ತಾಕದೆ ಇರುವಂತಹುದು.

ಬುದ್ಧರು ನಾಲ್ಕು ಕಮಲಗಳ ತೆರನಾದ ನಾಲ್ಕು ರೀತಿಯ ವ್ಯಕ್ತಿಗಳನ್ನು ಗುರುತಿಸಿದರು:

1. ವ್ಯಕ್ತಿಗಳು ಧಮ್ಮವನ್ನು ಎಷ್ಟೇ ಕೇಳಿ ಸಾಧನೆ ಮಾಡಿದರೂ ನಿಬ್ಬಾಣವನ್ನು ಪ್ರಸ್ತುತ ಜೀವಿತಾವಧಿಯಲ್ಲಿ ಸಾಕ್ಷಾತ್ಕರಿಸಿಕೊಳ್ಳದೆ ಇರುವಂತಹುದು. ಆದರೂ ಅವರ ವಾಸನೆಗಳು ಧಮ್ಮವನ್ನು ಮುಂದಿನ ಜನ್ಮಗಳಲ್ಲಿಯಾದರೂ ಸಾಧಿಸುವಂತದ್ದಾಗಿರುತ್ತವೆ. ಇವರು ಮೊದಲನೇ ರೀತಿಯ ಕಮಲದ ಹೂವಿಗೆ ಹೋಲುವಂತಹವರು.
2. ವ್ಯಕ್ತಿಗಳು ಧಮ್ಮವನ್ನು ಎಷ್ಟೇ ಕೇಳಿದರೂ ಓದಿದರೂ ಸಾಧನೆ ಮಾಡಿದರೂ ಅವರ ಮನಸ್ಸುಗಳು ಬದಲಾಗದೇ ಇರುವಂತಹುದು. ಆದರೆ ಅವರು

ಕಾಲಾಂತರದಲ್ಲಿ ಚತುರಾರ್ಯ ಸತ್ಯಗಳನ್ನು ಅರಿತು ನಿರಂತರ ಸಾಧನೆಗೈಯುವುದರಿಂದ ಧಮ್ಮವನ್ನು ಅರಿತುಕೊಳ್ಳಬಹುದು. ಇವರು ಎರಡನೇ ರೀತಿಯ ಕಮಲದ ಹೂವಿಗೆ ಹೋಲುವಂತಹವರು.

3. ವ್ಯಕ್ತಿಗಳು ಧಮ್ಮದ ಮುಖ್ಯಾಂಶಗಳನ್ನು ಕೇಳಿ ಪರಿವರ್ತಿತರಾಗುವುದಿಲ್ಲ. ಆದರೆ ಅವರಿಗೆ ಚತುರಾರ್ಯ ಸತ್ಯಗಳನ್ನು ವಿವರವಾಗಿ ಉಪದೇಶಿಸಿದಲ್ಲಿ ಅರ್ಥಮಾಡಿಕೊಳ್ಳುತ್ತಾರೆ. ಶ್ರದ್ಧಾಪೂರ್ವಕವಾದ ಸಾಧನೆಯಿಂದ ಧಮ್ಮವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾರೆ. ಇವರು ಮೂರನೇ ರೀತಿಯ ಕಮಲದ ಹೂವಿಗೆ ಹೋಲುವಂತಹವರು.
4. ವ್ಯಕ್ತಿಗಳು ಧಮ್ಮದ ಮುಖ್ಯಾಂಶಗಳನ್ನು ಕೇಳಿದ ಮಾತ್ರಕ್ಕೆ ಚತುರಾರ್ಯ ಸತ್ಯಗಳನ್ನು ಅರ್ಥಮಾಡಿಕೊಳ್ಳುತ್ತಾರೆ. ಸೂಕ್ಷ್ಮ ಉಪದೇಶ, ಸಾಧನೆ ಮೂಲಕ ಲೋಕೋತ್ತರ ಧಮ್ಮವನ್ನು ಸಾಕ್ಷಾತ್ಕಾರ ಮಾಡಿಕೊಂಡು ಪಾರಮಾರ್ಥಿಕವಾಗಿ ಸದಾ ಪರಿವರ್ತನೆ ಹೊಂದಿದವರಾಗುತ್ತಾರೆ. ಇವರು ನಾಲ್ಕನೇ ರೀತಿಯ ಕಮಲದ ಹೂವಿಗೆ ಹೋಲುವಂತಹವರು.

ಹೀಗೆ ನಾಲ್ಕು ಬಗೆಯ ವ್ಯಕ್ತಿಗಳನ್ನು ವಿಶ್ಲೇಷಿಸಿದ ಮೇಲೆ ಇವರಿಗೆ ಅನ್ವಯಿಸುವ ರೀತಿಯಲ್ಲಿ ಧಮ್ಮವನ್ನು ಉಪದೇಶಿಸುವ ಬಗೆಗೆ ಚಿಂತನೆ ನಡೆಸಿ ಬುದ್ಧರು ಧರ್ಮವನ್ನು ವೈದಾನಿಕವಾಗಿ ಹಂತ ಹಂತಗಳಲ್ಲಿ ಬೋಧಿಸಲು ತೀರ್ಮಾನಿಸಿದರು. ಆನಂತರದಲ್ಲಿ ಎಲ್ಲ ಜನರನ್ನು ಎರಡು ವರ್ಗಗಳಲ್ಲಿ ಹೀಗೆ ವಿಂಗಡಿಸಿದರು:

1. ಲೋಕೋತ್ತರ ಸತ್ಯಗಳನ್ನು ಅರ್ಥಮಾಡಿಕೊಂಡು ಬಂಧಮುಕ್ತತೆಯೆಡೆಗೆ ಹೋಗುವಷ್ಟು ಪಕ್ವಗೊಂಡು ಸಿದ್ಧರಾಗಿರುವವರು (ಭಬ್ಬ ಪುಗ್ಗಲ).
2. ಲೋಕೋತ್ತರ ಸತ್ಯಗಳನ್ನು ಅರ್ಥಮಾಡಿಕೊಂಡು ಬಂಧಮುಕ್ತರಾಗಲು ಇನ್ನೂ ಪಕ್ವವಾಗಬೇಕಿರುವವರು (ಅಭಬ್ಬ ಪುಗ್ಗಲ).

ಈ ಎರಡು ವರ್ಗಗಳಲ್ಲಿ ಇನ್ನೂ ಪಕ್ವಗೊಳ್ಳದವರನ್ನು ಪಕ್ಕಕ್ಕಿಟ್ಟು, ಪಕ್ವವಾಗಿರುವವರನ್ನು ತನ್ನ ಸಬ್ಬಞ್ಞುತ ಞಾನದೊಳಗೆ ಇರುವವರನ್ನು ಪರಿಗಣಿಸಿದನು. ಮುಂದೆ ಅವರನ್ನು ಆರು ವರ್ಗಗಳಲ್ಲಿ ವಿಶೇಷ ಗುಣಗಳ ಆಧಾರದ ಮೇಲೆ ವಿಭಜಿಸಿದನು. ಹೀಗೆ ಚಿಂತನೆ ಮಾಡಿದನು. ಈ ವ್ಯಕ್ತಿಗಳು ರಾಗ ಚಾರಿತ್ರ್ಯವುಳ್ಳವರು, ಇವರು ದ್ವೇಷ ಚಾರಿತ್ರ್ಯವುಳ್ಳವರು, ಇವರು ಮೋಹ ಚಾರಿತ್ರ್ಯವುಳ್ಳವರು, ಇವರು ಶ್ರದ್ಧಾ ಚಾರಿತ್ರ್ಯವುಳ್ಳವರು, ಇವರು ಬುದ್ಧಿ ಚಾರಿತ್ರ್ಯವುಳ್ಳವರು ಮತ್ತು ಇವರು ವಿತರ್ಕ ಚಾರಿತ್ರ್ಯವುಳ್ಳವರು. ಆನಂತರದಲ್ಲಿ ಧಮ್ಮವನ್ನು ಹೀಗೆ ವ್ಯಕ್ತಿಗಳಿಗೆ ಅನ್ವಯಿಸುವ ರೀತಿಯಲ್ಲಿ ಬೋಧಿಸಲು ತೀರ್ಮಾನಿಸಿದರು. ಹೀಗೆ ನಿರ್ಧರಿಸಿದ ಮೇಲೆ ಮಹಾಬ್ರಹ್ಮನಿಗೆ ಕೆಳಗಿನ ಗಾಥೆಯ ಮೂಲಕ ಉತ್ತರಿಸಿದರು:

***"ಅಪರೂತ ತೇಸಂ ಅಮತಸ್ಸ ದ್ವಾರಾ***
***ಯೇ ಸೋತಾವಂತೋ ಪಮುಚ್ಚಂತು ಸದ್ಧಂ***
***ವಿಹಿಂಸಞ್ಞೀ ಪಗುಣಂ ನ ಭಾಸಿಂ***
***ಧಮ್ಮ ಪನೀತಂ ಮನುಜೇಸು ಬ್ರಹ್ಮೇ."***



"ಓ ಸಹಂಪತಿ ಮಹಾಬ್ರಹ್ಮನೇ!
ಅಮರತ್ವದ ದಾರಿಗಳು ಈಗ ತೆರೆದಿವೆ.
ಘನಗಂಭೀರವೂ ಪವಿತ್ರವಾದ
ಧಮ್ಮವನ್ನು ಶ್ರದ್ಧೆಯಿಟ್ಟು ಕೇಳಲಿ
ಹುರುಳಿಲ್ಲದ ಬರ ಶ್ರಮದ ಧರ್ಮವನ್ನೆಂದೂ
ನಾನು ಮನುಜರಿಗೆ ಬೋಧಿಸಲಿಲ್ಲ."

ಇಷ್ಟು ಮಾತುಗಳನ್ನು ಕೇಳಿದ ಸಹಂಪತಿ ಮಹಾಬ್ರಹ್ಮನು ವಿಜಯ ಸಾಧಿಸಿದವನಂತೆ ಕುಣಿದಾಡಿ ಹೇಳಿದ: "ಬುದ್ಧ ಭಗವಾನರು ಧಮ್ಮವನ್ನು ಬೋಧಿಸಲು ಈಗ ಒಪ್ಪಿದ್ದಾರೆ." ಆನಂತರ ಸಮ್ಮಾಸಂಬುದ್ಧರಿಗೆ ವಂದಿಸಿ ಪ್ರದಕ್ಷಿಣೆಯನ್ನು ಹಾಕಿ ಅಲ್ಲಿಂದ ಮಾಯವಾಗಿ ಮಹಾಬ್ರಹ್ಮನ ಲೋಕಕ್ಕೆ ಮರಳಿದನು.

## ಧಮ್ಮವನ್ನು ಯಾರಿಗೆ ಮೊದಲು ಹೇಳಬೇಕು

ಮಹಾಬ್ರಹ್ಮನು ನಿರ್ಗಮಿಸಿದ ಮೇಲೆ ಬುದ್ಧರು ಯೋಚಿಸಿದರು: "ನಾನು ಧಮ್ಮವನ್ನು ಮೊದಲು ಯಾರಿಗೆ ಹೇಳಲಿ? ಯಾರು ಧಮ್ಮವನ್ನು ಬೇಗನೆ ಗ್ರಹಿಸುತ್ತಾರೆ." ಆಗ ಹೀಗೆ ಎನಿಸಿತು: 'ಕಾಲಾಮ ವಂಶದ ಋಷಿ ಆಲಾರನು ಕಳಂಕವೆಂಬ ಧೂಳಿನಿಂದ ಮುಕ್ತನಾದ ಪ್ರಜ್ಞಾದೃಷ್ಟಿಯುಳ್ಳವನು (ಅಪ್ಪರಾಜಕ್ಖೋ ಪುಗ್ಗಲೋ). ನಾನು ಈತನಿಗೆ ಮೊದಲ ಧಮ್ಮೋಪದೇಶವನ್ನು ಮಾಡಿದರೆ ಒಳ್ಳೆಯದು. ಆತನು ಚತುರಾರ್ಯ ಸತ್ಯಗಳನ್ನು ಗ್ರಹಿಸುತ್ತಾನೆ. ಆ ಕೂಡಲೇ ದೇವನೊಬ್ಬ ಬಂದು ಋಷಿ ಆಲಾರರು ಒಂದು ವಾರದ ಹಿಂದೆ ತೀರಿಹೋದರೆಂದು ಮಾಹಿತಿ ನೀಡಿದನು. ಬುದ್ಧರು ಈ ಮಾತು ಸರಿಯೇ ಎಂಬುದನ್ನು ಪರೀಕ್ಷಿಸಲು ತಮ್ಮ ದಿವ್ಯಚಕ್ಷುವಿನಿಂದ ನೋಡಿ ಋಷಿ ಆಲಾರ ಕಲಾಮರು ಒಂದು ವಾರದ ಹಿಂದೆ ತೀರಿಹೋಗಿ ಅರೂಪ ಬ್ರಹ್ಮಲೋಕದಲ್ಲಿ ಪುನರ್ಜನ್ಮ ತಳೆದಿರುವುದು ಕಂಡುಬಂದಿತು. ಬುದ್ಧರ ಲಹರಿ ಹೀಗೆ ಹರಿಯಿತು: 'ನಿಬ್ಬಾಣದ ಅವಕಾಶವನ್ನು ಪಡೆಯದೇ ಹೋಗಿರುವುದು ಆಲಾರ ಕಲಾಮರಿಗೆ ಒಂದು ದೊಡ್ಡ ನಷ್ಟ.'

ಬುದ್ಧರು ಮತ್ತೆ ಚಿಂತನೆಯನ್ನು ನಡೆಸಿದರು: "ನಾನು ಈಗ ಯಾರಿಗೆ ಮೊದಲು ಧಮ್ಮವನ್ನು ಬೋಧಿಸಬೇಕು?" ಆಗ ಅನಿಸಿತು: "ಋಷಿ ಉದ್ದಕ ರಾಮಪುತ್ತರು ಆಲಾರ ಕಲಾಮರಂತೆ ಕಳಂಕ ಧೂಳಿನಿಂದ ಹೊರತಾದ ಪ್ರಜ್ಞಾದೃಷ್ಟಿಯುಳ್ಳವರು. ಅವರು ಧಮ್ಮವನ್ನು ಚೆನ್ನಾಗಿ ಗ್ರಹಿಸಬಲ್ಲರು." ಪುನಃ ದೇವನೊಬ್ಬ ಪ್ರತ್ಯಕ್ಷನಾಗಿ ಋಷಿ ಉದ್ದಕನು ನೆನ್ನೆ ಮಧ್ಯರಾತ್ರಿಯಷ್ಟೇ ಕಾಲವಾದನೆಂಬ ಸಂಗತಿಯನ್ನು ತಿಳಿಸಿದನು. ಈ ಮಾತನ್ನು ಬುದ್ಧರು ತಮ್ಮ ದಿವ್ಯಚಕ್ಷುವಿನಿಂದ ದೃಢೀಪಡಿಸಿಕೊಂಡು ನೆನ್ನೆ ರಾತ್ರಿ ಕಾಲವಾಗಿ ಅರೂಪ ಬ್ರಹ್ಮಲೋಕದಲ್ಲಿ ಮರುಜನ್ಮ ಪಡೆದಿರುವುದು ತಿಳಿದುಬಂದಿತು. ಬುದ್ಧರ ಯೋಚನಾ ಲಹರಿ ಹೀಗೆ ಹೀಗೆ ಹರಿಯಿತು: "ನಿಬ್ಬಾಣದ ಅವಕಾಶವನ್ನು ಪಡೆಯದೇ ಕಾಲವಾಗಿರುವುದು ಉದ್ದಕರಿಗೆ ಒಂದು ದೊಡ್ಡ ನಷ್ಟ. ಒಂದುವೇಳೆ ಧಮ್ಮವನ್ನು ಕೇಳಿದ್ದರೆ ಕೂಡಲೇ ಚತುರಾರ್ಯ ಸತ್ಯಗಳನ್ನು ಅರಿತು ನಿಬ್ಬಾಣವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುತ್ತಿದ್ದರು.

ಬುದ್ಧರು ಮತ್ತೆ ಮುಂದೆ ಚಿಂತನೆ ಹರಿಸಿದರು: "ನಾನೀಗ ಯಾರಿಗೆ ಮೊದಲು ಧಮ್ಮವನ್ನು ಉಪದೇಶಿಸಬೇಕು?" ಆಗ ಅನ್ನಿಸಿತು: "ಪಂಚವಗ್ಗೀಯ ಭಿಕ್ಖುಗಳು ನಾನು ಉರುವೇಲ ಅರಣ್ಯದಲ್ಲಿದ್ದಾಗ ಆರು ವರ್ಷಗಳ ಕಾಲ ಕಠಿಣ ತಪಸ್ಸನ್ನಾಚರಿಸಿದಾಗ ನನ್ನೊಡನಿದ್ದರು. ಇವರಿಗೆ ನಾನು ಮೊದಲು ಧಮ್ಮವನ್ನು ಉಪದೇಶಿಸಿದರೆ ಒಳ್ಳೆಯದು." ತಮ್ಮ ದಿವ್ಯಚಕ್ಷು ಅಭಿಜ್ಞಾದಿಂದ ದಿಟ್ಟಿಸಲು ಅವರು ವಾರಾಣಸಿ ಬಳಿಯ ಇಸಿಪಟಣದ ಮಿಗದಾಯಿ ವನದಲ್ಲಿ (ಈಗಿನ ಸಾರನಾಥ) ನಿವಸಿಸುತ್ತಿರುವುದು ಕಂಡುಬಂದಿತು.

ಬುದ್ಧರುಗಳು ಯಾವಾಗಲೂ ಕೃತಜ್ಞರು. ಅವರು ಯಾರೇ ಆಗಲಿ ಯಾವುದೇ ಸೇವೆ ಸಲ್ಲಿಸಿದರೂ ಅದನ್ನು ಬುದ್ಧರು ಎಂದಿಗೂ ಮರೆಯುವುದಿಲ್ಲ. ಇನ್ನೆಲ್ಲೋ ಹೋಗುವುದಕ್ಕಿಂತ ಇಸಿಪಟಣಕ್ಕೆ ಹೋಗಿ ತನ್ನ ಕೃತಜ್ಞತೆಯನ್ನು ತಿಳಿಸಲು ಹೋದರು. ಮೊದಲು ಪಂಚವಗ್ಗೀಯ ಭಿಕ್ಖುಗಳಿಗೆ ಧಮ್ಮವನ್ನು ಉಪದೇಶಿಸಬೇಕೆಂದು ತೀರ್ಮಾನಿಸಿದ ಮೇಲೆ ಭಿಕ್ಷೆಗೆ ಹೋಗಿ ಆನಂತರದಲ್ಲಿ ಮಹಾಬೋಧಿ ವೃಕ್ಷ ಮಂಡಲದಲ್ಲಿ ಆರು ದಿನಗಳ ನಿಬ್ಬಾಣ ಸುಖದಲ್ಲಿ ತಲ್ಲೀನನಾದರು.

ಆಷಾಢ ಮಾಸದ ಹುಣ್ಣಿಮೆಯ ದಿನ ಅಂದರೆ ನಲವತ್ತೊಂಭತ್ತು ದಿನಗಳ ಝಾನ ಸಮಾಧಿಯ ನಂತರದ ಏಳು ದಿನಗಳ ಮೇಲೆ, ಸಮ್ಮಾಸಂಬುದ್ಧರಾಗಿ ಎರಡು ತಿಂಗಳಾದ ಮೇಲೆ ಬುದ್ಧರು ಇಸಿಪಟಣಕ್ಕೆ ತೆರಳಿದರು. ಪೂರ್ವ ಬುದ್ಧರುಗಳು ಮಿಗದಾಯಿ ವನಕ್ಕೆ ಅಂತರಿಕ್ಷದ ಮೂಲಕ ವಾಯುಮಾರ್ಗದಲ್ಲಿ ಹೋದರೆ ನಮ್ಮ ಕಾಲದ ಗೌತಮ ಬುದ್ಧರು ಕಾಲ್ನಡಿಗೆಯಲ್ಲಿ ಹೋದರು. ಯಾಕೆ ಹೀಗೆ ಪ್ರಯಾಣದಲ್ಲಿ ಬದಲು ಮಾಡಿದರೆಂದರೆ ಪಾರಮಿತಗಳ ಬಲದಿಂದ ಕೂಡಿದ ಮುಂದೆ ಅನಾಗಾಮಿಯಾಗುವ ತಾಪಸಿ ಉಪಕನು ಆ ದಾರಿಯಲ್ಲಿ ನಡೆದು ಹೋಗುತ್ತಿದ್ದ. ಮಹಾಬೋಧಿ ಮತ್ತು ಇಸಿಪಟಣದ ನಡುವಿನ ನೂರಿಪ್ಪತ್ತೈದು ಮೈಲಿಗಳ ದೂರವನ್ನು (ಹದಿನೆಂಟು ಯೋಜನಗಳು) ತನ್ನ ಮನೋಶಕ್ತಿಯಿಂದ ಸಂಜೆಯ ಹೊತ್ತಿಗೆ ಮುಗಿಸಿ ಮಿಗದಾಯಿ ವನವನ್ನು ಸೇರಿದರು.

ಈ ಪಂಚವಗ್ಗೀಯ ಭಿಕ್ಖುಗಳು ಆರು ವರ್ಷಗಳ ಕಾಲ ಬೋಧಿಸತ್ವ ಸಿದ್ಧಾರ್ಥನ ಕಠಿಣ ದೇಹದಂಡನೆಯ ಸಾಧನೆಯ ಸಮಯದಲ್ಲಿ ಸೇವೆ ಸಲ್ಲಿಸಿ ಆನಂತರ ಬೋಧಿಸತ್ವನು ಮಜ್ಝಿಮ ಮಗ್ಗವನ್ನು ಹಿಡಿದಮೇಲೆ ಬಿಟ್ಟುಹೋಗಿದ್ದರು. ಇಸಿಪಟಣದ ಮಿಗದಾಯಿಯಲ್ಲಿದ್ದ ಈ ಭಿಕ್ಖುಗಳು ದೂರದಿಂದಲೇ ಬುದ್ಧ ಬರುತ್ತಿರುವುದನ್ನು ನೋಡಿ ಹೀಗೆ ಹೇಳಿಕೊಂಡರು: "ಗೆಳೆಯರೆ, ಮತಭ್ರಷ್ಟನಾದ ಗೌತಮನು ಇಲ್ಲಿಗೆ ಬರುತ್ತಿದ್ದಾನೆ. ತಪಸ್ಸಿನ ಹಾದಿಯನ್ನು ತೊರೆದು ಸುಲಭ ಜೀವನದ ಹಾದಿಯನ್ನು ಹಿಡಿದಿದ್ದಾನೆ. ಇವನು ಧ್ಯಾನವನ್ನು ತೊರೆದು ಸಂನ್ಯಾಸಿಗೆ ಬೇಕಾದ ನಾಲ್ಕು ಪರಿಕರಗಳ ಸಂಗ್ರಹಣೆಯಲ್ಲಿ ತೊಡಗಿದ್ದಾನೆ. ಅವನು ನಮ್ಮಲ್ಲಿ ಬಂದಾಗ ನಾವು ಅವನನ್ನು ಕಡೆಗಣಿಸೋಣ. ನಾವು ಮುಂಚೆ ತೋರಿಸುತ್ತಿದ್ದಂತೆ ಅಂದರೆ ನತಮಸ್ತಕರಾಗಿ ನಮಸ್ಕರಿಸುವುದು, ಅವನ ಚೀವರವನ್ನು ಕೈಗೆ ತೆಗೆದುಕೊಳ್ಳುವುದು, ಕಾಲ್ತೊಳೆಯಲು ನೀರನ್ನು ಕೊಡುವುದು ಇತ್ಯಾದಿ ಗೌರವವನ್ನು ತೋರಿಸುವುದು ಬೇಡ. ಅವನನ್ನು ನಾವು ಗೆಳೆಯ ಎಂದು ಸಂಬೋಧಿಸೋಣ, ಗುರು ಎಂದಲ್ಲ!"



ಆದರೆ ಬುದ್ಧರು ಹತ್ತಿರ ಹತ್ತಿರ ಬರುತ್ತಿದ್ದಂತೆ ಅವರ ಮುಖದಲ್ಲಿನ ತೇಜಸ್ಸು ಗಾಂಭೀರ್ಯದಿಂದ (ಬುದ್ಧಾನುಭಾವ) ಪ್ರಭಾವಿತರಾದರು. ಬುದ್ಧರಲ್ಲಿನ ಮಹಾ ಮೈತ್ರಿಭಾವದ ಕಿರಣಗಳು ಚಿಮ್ಮಿ ಅವರ ನಿರ್ಧಾರಗಳೆಲ್ಲವನ್ನೂ ತಲೆಕೆಳಗೆ ಮಾಡಿದವು. ಒಬ್ಬೊಬ್ಬರಾಗಿಯೇ ಎದ್ದು ಮುಂದೆ ಹೋಗಿ ಭಕ್ತಿ ಗೌರವಗಳಿಂದ ಬರಮಾಡಿಕೊಂಡರು. ಬವನಾಸಿಯನ್ನು, ಚೀವರವನ್ನು ಕೈಗೆ ತೆಗೆದುಕೊಂಡು ಉನ್ನತಾಸನವನ್ನು ನೀಡಿ ಕಾಲ್ತೊಳೆಯಲು ನೀರು ಕೊಟ್ಟರು. ಆದರೆ ಒಬ್ಬ ಸಮಾನನನ್ನು ಕಾಣುವಂತೆ ಕಂಡರು. ಗುರುವಿನಂತೆಯಾಗಲಿ, ಹಿರಿಯನಂತೆಯಾಗಲಿ ಕಾಣಲಿಲ್ಲ. ಆಗ ಬುದ್ಧರು ಅವರ ನಡತೆಯನ್ನು ಸರಿಮಾಡಲು ಹೀಗೆ ಹೇಳಿದರು: "ಭಿಕ್ಖುಗಳೇ, ತಥಾಗತನನ್ನು ಗೌತಮ ಎಂಬ ಹೆಸರಿನಿಂದ ಕರೆಯಬೇಡಿ, ನಾನು ಸಮ್ಮಾಸಂಬುದ್ಧನಾಗಿದ್ದೇನೆ; ನಿಮ್ಮನ್ನು ನಿಬ್ಬಾಣದ ಹಾದಿಗೆ ಒಯ್ಯುವ ಧಮ್ಮವನ್ನು ಹೇಳಲು ಬಂದಿದ್ದೇನೆ. ಚತುರಾರ್ಯ ಸತ್ಯಗಳ ಧಮ್ಮವನ್ನು ಕಿವಿಗೊಟ್ಟು ಕೇಳಿ."

ಅನುಮಾನದಲ್ಲಿದ್ದ ಅವರು ಹೀಗೆ ಹೇಳಿದರು: "ಕಠಿಣತಮವಾದ ಪ್ರಯತ್ನ ಮತ್ತು ತಪಸ್ಸಿನ ಮೂಲಕ ನೀನು ಜ್ಞಾನೋದಯವನ್ನು ಹೊಂದಲಾಗಲಿಲ್ಲ. ಆದ್ದರಿಂದ ನೀನು ಬದುಕನ್ನು ತುಂಬ ಸರಳವಾಗಿ ತೆಗೆದುಕೊಂಡು ಧ್ಯಾನವನ್ನು ತೊರೆದು ಸಂನ್ಯಾಸಿಗೆ ಬೇಕಾದ ನಾಲ್ಕು ಪರಿಕರಗಳಲ್ಲಿ ತೊಡಗಿದೆ. ಇಂತಹ ಸರಳಗೊಂಡ ಜೀವನ ಶೈಲಿಯಿಂದ ಸಮ್ಮಾಸಂಬುದ್ಧನಾದೆನೆಂದು ಈಗ ಹೇಳುತ್ತಿರುವೆ."

ಬುದ್ಧರು ಅವರ ಸುಳ್ಳು ಆಪಾದನೆಗಳನ್ನು ಅಲ್ಲಗಳೆದು ಹೀಗೆ ಹೇಳಿದರು: "ಧಮ್ಮವನ್ನು ಶ್ರದ್ಧೆಯಿಂದ ಕಿವಿಗೊಟ್ಟು ಕೇಳಿ. ನಾನು ನಿಮಗೆ ಬೋಧಿ ಜ್ಞಾನದ ಮಾರ್ಗವನ್ನು ತಿಳಿಸುತ್ತೇನೆ." ಎರಡನೇ ಬಾರಿ ಅವರು ತಮ್ಮ ತಪ್ಪು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಬುದ್ಧನು ಎರಡನೇಬಾರಿ ತಮ್ಮ ಅದೇ ಮಾತನ್ನು ಹೇಳಿದರು. ಮೂರನೇಬಾರಿಯೀ ಈ ಅನುಮಾನದ ತಾಪಸಿಗಳು ಅದನ್ನೇ ಹೇಳಲು ಬುದ್ಧರು ಮತ್ತೆ ಅಲ್ಲಗಳೆದರು. ಬುದ್ಧರು ನಾಲ್ಕನೇ ಬಾರಿ ಸಕಾರಾತ್ಮಕವಾಗಿ ತಾನು ಕ್ಲೇಶರಹಿತನಾಗಿ ಅರಹತನಾಗಿ ಸಮ್ಮಾಸಂಬುದ್ಧನಾಗಿದ್ದೇನೆಂದು ಹೇಳಲು ಅವರು ಸುಮ್ಮನಾದರು. ಬುದ್ಧ ಹೀಗೆ ಹೇಳಿದರು: "ಭಿಕ್ಷುಗಳೇ, ಎಂದಾದರೂ ನಾನು ಈ ರೀತಿಯಲ್ಲಿ ಹಿಂದೆ ಸಿದ್ಧಿಸಿಕೊಂಡಿರುವುದನ್ನು ಹೇಳಿದ್ದೆನೆ?" ಈ ಪ್ರಶ್ನೆಯಿಂದ ಆ ತಾಪಸಿಗಳು ಉತ್ತರ ಪಡೆದವರಾಗಿ ಹೇಳಿದರು. "ಇಲ್ಲ ಭಂತೆ." ಆನಂತರದಲ್ಲಿ ಬುದ್ಧರು ತಾವು ಏನನ್ನು ಕಂಡುಹಿಡಿದಿರುವುದಾಗಿ ಮತ್ತು ಸಂಬೋಧಿಯ ವಾಸ್ತವತೆಯನ್ನು ವಿವರಿಸಿದರು. ಯಾವಾಗ ಅವರು ಬುದ್ಧರ ಮಾತುಗಳನ್ನು ತುಂಬ ಕುತೂಹಲದಿಂದ ಆಲಿಸಲು ಆರಂಭಿಸಿದರೋ ಆಗ ಬುದ್ಧರು ತಮ್ಮ ಮೊದಲ ಧಮ್ಮೋಪದೇಶವನ್ನು (ಧಮ್ಮಚಕ್ಕಪವತ್ತನ ಸುತ್ತ) "ಭಿಕ್ಖುಗಳೇ, ಎರಡು ಅತಿರೇಕಗಳಿವೆ (ದ್ವೆ ಮೆ ಭಿಕ್ಖವೇ ಅಂತಾ...) ಎಂಬ ಮೊದಲ ಮಾತುಗಳಿಂದ ಆರಂಭಿಸಿದರು.

– ೦೦೦ – ೦೦೦ – ೦೦೦ –

# ಅಧ್ಯಾಯ–2

# ಧಮ್ಮರತನ

## ಬುದ್ಧರ ಕರುಣೆಯ ಹೊನಲು

### ಮೊದಲ ಧಮ್ಮೋಪದೇಶ

ಭಗವಾನ್ ಬುದ್ಧರು ತಮ್ಮ ಐತಿಹಾಸಿಕ ಧಮ್ಮೋಪದೇಶಗಳ 'ಧಮ್ಮಚಕ್ಕಪವತ್ತನ ಸುತ್ತ'ವನ್ನು ಆಷಾಢಮಾಸದ ಹುಣ್ಣಿಮೆಯಂದು ಅಂದರೆ ವೈಶಾಖ ಮಾಸದ ಹುಣ್ಣಿಮೆಯಂದು ಜ್ಞಾನೋದಯವಾದ ಎರಡು ತಿಂಗಳಿಗೆ ಸರಿಯಾಗಿ ತಂಪು ಸಂಜೆಯಲ್ಲಿ ಪಶ್ಚಿಮ ದಿಗಂತದಲ್ಲಿ ಸೂರ್ಯ ಮುಳುಗಿ ಪೂರ್ವ ದಿಗಂತದಲ್ಲಿ ಚಂದ್ರೋದಯವಾಗುವ ವೇಳೆಗೆ ನೀಡಿದರು.

ಈ ಧಮ್ಮೋಪದೇಶದಲ್ಲಿ ಕೆಳಗಿನ ವಿಚಾರ ಸರಣಿಯು ಅಡಗಿದೆ:

1. ಈ ಜಗತ್ತಿನಲ್ಲಿ ಎರಡು ಅತಿರೇಕಗಳಿವೆ.
2. ಮಧ್ಯಮ ಮಾರ್ಗವು ಎರಡು ಅತಿರೇಕಗಳಿಂದ ಹೊರತಾದದ್ದು.
3. ಅಷ್ಟಾಂಗ ಮಾರ್ಗವೇ ಮಧ್ಯಮ ಮಾರ್ಗ.
4. ಚತುರಾರ್ಯ ಸತ್ಯಗಳನ್ನು ಹನ್ನೆರಡು ಬಗೆಗಳಿಂದ ನೋಡುವುದು.
5. ಈ ಸುತ್ತವನ್ನು ಕೇಳಿ ಅನುಸರಿಸಿ ಆಧ್ಯಾತ್ಮಿಕ ಪರಿವರ್ತನೆಯಾಗುವುದು ಮತ್ತು ಲೋಕೋತ್ತರ ಮಗ್ಗಫಲ ಇಾನವನ್ನು ಪಡೆಯುವುದು.

ಈ ಧಮ್ಮ ಸುತ್ತವನ್ನು ಪೂರ್ತಿ ಕೇಳಿದ ಮೇಲೆ ಅತ್ಯಂತ ಹಿರಿಯ ವಿರಾಗಿಯಾದ ಆಯುಷ್ಮಂತ ಕೊಂಡಞ್ಞನು ಸೋತಾಪನ್ನನಾದರು. ಅಂದರೆ ಹಿಂದಕ್ಕೆ ಬರದಿರುವ ನಿಬ್ಬಾಣ ಸ್ರೋತದಲ್ಲಿ ಸೇರಿಹೋದನು. ಜ್ಞಾನೋದಯ ಹೊಂದುವಲ್ಲಿ ಈತನೇ ಬುದ್ಧ ಶಿಷ್ಯರಲ್ಲಿ ಮೊದಲನೆಯವನು.

ಆನಂತರದ ಪ್ರತಿದಿನವೂ ಒಬ್ಬೊಬ್ಬ ವಿರಾಗಿಯು ಬುದ್ಧರ ಧಮ್ಮೋಪದೇಶವನ್ನು ಕೇಳಿ ಸೋತಾಪನ್ನರಾದರು. ಹೀಗೆ ಆಷಾಢ ಮಾಸದ ಹುಣ್ಣಿಮೆ ಕಳೆದ ಐದು ದಿನಗಳ ಹೊತ್ತಿಗೆ ಐದೂ ಜನ ಶಿಷ್ಯರು ಆರ್ಯರಾದರು.



ಈ ಐದುಜನ ಶಿಷ್ಯರು ಬುದ್ಧರಿಂದ "ಏಹಿ ಭಿಕ್ಖು" ಎನ್ನುವ ಅಪರೂಪದ ಉಪಸಂಪದ (ದೀಕ್ಷೆ) ವನ್ನು ಪಡೆದಮೇಲೆ ಬುದ್ಧರು ಎರಡನೇ ಧಮ್ಮೋಪದೇಶ 'ಅನತ್ತಲಕ್ಖಣ ಸುತ್ತ'ವನ್ನು ಉಪದೇಶಿಸಿದರು. ಈ ಐದೂ ಜನ ಸೋತಾಪನ್ನ ಭಿಕ್ಖುಗಳು ಅರಹತರಾದರು.

### ಅನತ್ತಲಕ್ಖಣ ಸುತ್ತ

ಭಗವಾನ್ ಬುದ್ಧರು ನೀಡಿದ ಎರಡನೇ ಸುತ್ತವೇ 'ಅನತ್ತಲಕ್ಖಣ ಸುತ್ತ'. ಇದನ್ನು ಕೇಳಿದ ಮೊದಲ ಐದು ಶಿಷ್ಯರು ಅರಹಂತರಾದರು. ಈ ಐದೂ ಜನರು ಮೊದಲ ಹಂತದ ಮಗ್ಗ ಮತ್ತು ಫಲವನ್ನು ಸಿದ್ಧಿಸಿಕೊಂಡರು. ಈ ಸುತ್ತವು ಅನತ್ತ (ಅನಾತ್ಮ)ದ ಗುಣ ಲಕ್ಷಣಗಳನ್ನು ಹೇಳುತ್ತದೆ. ಅನತ್ತವು ಬುದ್ಧರು ಬೋಧಿಸಿದ ಅತ್ಯಂತ ಘನವಾದ ಅನನ್ಯವಾದ ಮತ್ತು ಬೌದ್ಧ ಧರ್ಮಕ್ಕೆ ಮಾತ್ರವೇ ಅನ್ವಯವಾಗುವ ತತ್ತ್ವ. ಜಗತ್ತಿನ ಎಲ್ಲ ಧಾರ್ಮಿಕ ಪಂಥಗಳು ದರ್ಶನಗಳು ಆತ್ಮ 'ನಾನು' ಪರಿಕಲ್ಪನೆಗಳ ಬಗ್ಗೆ ತಮ್ಮ ಸಿದ್ಧಾಂತಗಳನ್ನು ಹೇಳಿವೆ. ಬುದ್ಧರು ಇದೊಂದು ಮಾನಸಿಕ ಪರಿಕಲ್ಪನೆ ಎಂಬ ಯಾವುದೇ ಅನುಮಾನವಿಲ್ಲದೆ ತಳ್ಳಿಹಾಕಿದ್ದಾರೆ. ಕಾರಣ ಅನಾತ್ಮ ಅಥವಾ 'ನಾನು–ಇಲ್ಲ' ಎಂಬುದು ಎಲ್ಲ ಅಸ್ತಿತ್ವಗಳ ಪ್ರಕೃತಿಯೇ ಆಗಿದೆ, ಅದು ಪರಿಕಲ್ಪನೆಯಲ್ಲ, ಅದೊಂದು ವಾಸ್ತವ. ದೌರ್ಭಾಗ್ಯವೆಂದರೆ ಮೂಢನಂಬಿಕೆ ತಪ್ಪು ಕಲ್ಪನೆಗಳು ಈ ಜಗತ್ತಿನಲ್ಲಿ ವಾಸ್ತವಕ್ಕೆ ಕೊಡಲಿ ಪೆಟ್ಟು 'ಆತ್ಮ' ಎಂಬುದನ್ನು ಯಾವುದೇ ವಿವೇಚನೆಯಿಲ್ಲದೆ ಒಪ್ಪಿಕೊಂಡ ಅಭಿಪ್ರಾಯವಾಗಿದೆ.

ಹಾಗಾದರೆ 'ಅನಾತ್ಮ' ಎಂದರೆ ಏನು? ನಾವು ನೋಡುವ ಈ ಅಸ್ತಿತ್ವ ಅಥವಾ ಸಂಸಾರ ಏನಿದೆ ಅದು ಮೂಲತಃ ಕಾರಣಬದ್ಧವಾದದ್ದು. ಅಂದರೆ ಹಲವು ಕಾರಣಗಳ ಮೇಲೆ ಸ್ಥಿತಿಗಳ ಮೇಲೆ ಅವಲಂಬಿತವಾದುದು. ಏನೆಲ್ಲ ಅಸ್ತಿತ್ವದಲ್ಲಿ ಇದೆಯೋ ಅದೆಲ್ಲವೂ ಅನಿತ್ಯವಾದುದು ಮತ್ತು ದುಃಖಕ್ಕೆ ಒಳಪಟ್ಟಿರುವುದು. ಬದಲಾವಣೆಗಳಿಗೆ ತೊಂದರೆ ಸಂಕಟಗಳಿಗೆ ಒಳಗಾಗದೆ ಇರುವ ಮತ್ತು ನಮಗೆ ಗೊತ್ತಾಗದಂತೆ ಯಾವುದೋ ಒಂದು ಮೂಲಧಾತು ಅಥವಾ ಸಂಗತಿ ಇದೆ ಎಂಬುದು ಇಲ್ಲವೇ ಇಲ್ಲ. 'ಆತ್ಮ', 'ನಾನು' ಎಂದರೆ ಅದೊಂದು ಗಟ್ಟಿಯಾದುದು, ಸ್ವತಂತ್ರವಾದುದು, ದೃಢವಾದುದು ಎಂಬ ಅರ್ಥ ಕೊಡುತ್ತದೆ. ಆದರೆ ಪ್ರತಿಯೊಂದೂ ಇಂದ್ರಿಯ ಸಂಬಂಧ ಜೀವಿಯಾಗಿರಲಿ, ಇಂದ್ರಿಯ ಸಂಬಂಧವಿರದವುಗಳಾಗಿರಲಿ ಅವು ಸ್ವತಂತ್ರ ಅಸ್ತಿತ್ವಗಳಾಗಿರದೆ ಕಾರ್ಯ=ಕಾರಣ ತತ್ವದ ಮೇಲೆ ನಿಂತಿವೆ.

ಪುನಃ 'ಆತ್ಮ' (ಅತ್ತ) ಎಂದರೆ ಅದೊಂದು ನಿರಂತರವಾದುದು ಶಾಶ್ವತವಾದುದು, ತನ್ನ ಸ್ವಂತ ಶಕ್ತಿಯಿಂದಲೇ ಇರುವಂಥದ್ದು, ಎಲ್ಲ ಅದ್ಭುತಗಳನ್ನು ಒಳಗೊಂಡಿರುವಂಥದ್ದು ಮತ್ತು ಒಬ್ಬನ ವ್ಯಕ್ತಿತ್ವವನ್ನೂ ಒಳಗೊಂಡಿರುವಂತೆ ಪ್ರತಿಯೊಂದರ ಒಡೆಯನೂ ಸ್ವಾಮಿಯೂ ಆಗಿರುವಂಥದ್ದು. ಹೀಗೆ ತಾನೇ ಪರಮ ಸ್ವಾಮ್ಯವಾದುದರಿಂದ ಒದಲಾವಣೆಗೆ

ದುಃಖಕ್ಕೆ ಈಡಾಗುವಂಥದ್ದಲ್ಲ. ಇದರೊಳಗಿನ ಸತ್ಯವೇನೆಂದರೆ ಯಾವ ಶರೀರ ಮತ್ತು ಮನಸ್ಸುಗಳು ಬದಲಾವಣೆಗೆ ಒಳಗಾಗಿ ಸಂಕಟ–ಸಾವುಗಳಿಗೆ ತುತ್ತಾಗುವಂಥದ್ದಾಗಿದ್ದರೂ ಅವನ್ನೂ ಸೇರಿದಂತೆ ಯಾರೂ ಏನನ್ನೂ ಹೊಂದಿರುವಂಥವರಲ್ಲ, ಯಜಮಾನರಲ್ಲ.

ಬುದ್ಧರು ಈ 'ಆತ್ಮ' ಎನ್ನುವ ಅಭಿಪ್ರಾಯವನ್ನು ಗಂಭೀರವಾದ ಮತ್ತು ವಾಸ್ತವ ಆಧಾರಗಳ ಮೇಲೆ ಅಲ್ಲಗಳೆದಿದ್ದಾರೆ. ಅನತ್ತಲಕ್ಖಣ ಸುತ್ತವು ಪ್ರತಿಯೊಂದೂ ಸಹ ಅನತ್ತ (ಅನಾತ್ಮ = ಆತ್ಮವಿಲ್ಲ) ವಾದುದಾಗಿದೆ ಎಂದು ವಿಶ್ಲೇಷಿಸುತ್ತದೆ. 'ಜೀವನ'ವನ್ನು ಅದರ ಮೂಲಕ್ಕೆ ತೆಗೆದುಕೊಂಡು ಹೋದಾಗ ಅದು ನಾಮ–ರೂಪಗಳಿಂದ ಮಿಶ್ರಣವಷ್ಟೇ ಆಗಿದೆ. ಈ ಮಿಶ್ರಣ ಅಥವಾ ಮೊತ್ತ ಏನೋ (ನಿರಂಕುಶ) ಅಲ್ಲ ಅಥವಾ ಒಂದು ಪರಿಕಲ್ಪನೆಯಲ್ಲ. ವಾಸ್ತವವಾಗಿ ಅದು ಇದೆ. ಇದು ಐದು ಖಂಧಗಳಿಂದ (ಪಂಚಖಂಧಾ) ಕೂಡಿದ್ದು ಅವು ದೃಶ್ಯ ಗೋಚರವೂ ಮತ್ತು ಪರೀಕ್ಷೆಗೆ ಒಳಗಾಗಲು ಅರ್ಹವೂ ಆದ ವಾಸ್ತವ ಸಂಗತಿಗಳು. ಆದರೆ 'ಆತ್ಮ' (ಅತ್ತ) ಎನ್ನುವುದು ಒಂದು ಪರಿಕಲ್ಪನೆ, ಅದು ವಾಸ್ತವವೂ ಅಲ್ಲ, ಪರೀಕ್ಷಾರ್ಹವೂ ಅಲ್ಲ.

ಬುದ್ಧರು ಹೇಳಿದ ಐದು ಖಂಧಗಳು: ರೂಪ (ಶರೀರ), ವೇದನಾ (ಅನುಭವ), ಸಞ್ಞಾ (ಗ್ರಹಿಕೆ), ಸಂಖಾರಾ (ಮಾನಸಿಕ ರೂಪಗಳು) ಮತ್ತು ವಿಞ್ಞಾಣ (ಚಿತ್ತ). ರೂಪ ಎಂದರೆ ಘನ ಸೂಕ್ಷ್ಮದ ವಸ್ತುಗಳು. ನಾವು ಚರ್ಚಿಸುತ್ತಿರುವ ಈ ಸಂದರ್ಭದಲ್ಲಿ ಶರೀರ ಮತ್ತು ಉಳಿದವು ನಾಲ್ಕು ಮನಸ್ಸಿಗೆ ಸಂಬಂಧಪಟ್ಟವುಗಳಾಗಿವೆ. ಮನಸ್ಸು ಮತ್ತು ಶರೀರ ಒಂದಕ್ಕೊಂದು ಅವಲಂಬಿತವಾಗಿರುವಂಥವು ಮತ್ತು ಒಂದು ಜೀವಿಯಲ್ಲಿ ಅವಿನಾಭಾವವಾಗಿ ಅಂದರೆ ಒಂದನ್ನೊಂದು ಬೇರ್ಪಡಿಸದಂತೆ ಪರಸ್ಪರ ಪೂರಕವಾಗಿ ಇರುವಂಥವು.

ಅನತ್ತಲಕ್ಖಣ ಸುತ್ತದಲ್ಲಿ ಬುದ್ಧರು ಹೀಗೆ ಬೋಧಿಸಿದ್ದಾರೆ: "ಶರೀರವು ಅನಾತ್ಮ. ಶರೀರವು ಆತ್ಮವಾಗಿದ್ದರೆ, ಈ ಶರೀರವು ದುಃಖಕ್ಕೆ ಸಂಕಟಕ್ಕೆ ಒಳಗಾಗುತ್ತಿರಲಿಲ್ಲ ಮತ್ತು ಆಗ ಒಬ್ಬನು ಹೀಗೆ ಹೇಳಲು ಸಾಧ್ಯವಿತ್ತು: "ನನ್ನ ಶರೀರವು ಹೀಗೆ ಇರಲಿ, ನನ್ನ ಶರೀರವು ಹೀಗೆ ಇಲ್ಲದಿರಲಿ". ಆದರೆ ಶರೀರವು ಅನಾತ್ಮವಾದುದರಿಂದ ಶರೀರಕ್ಕೆ ದುಃಖ ಸಂಕಟಗಳಿಗೆ ಒಳಗಾಗುತ್ತದೆ ಮತ್ತು ಒಬ್ಬನಿಗೆ ಹೀಗೆ ಹೇಳಲು ಸಾಧ್ಯವಿಲ್ಲ: "ನನ್ನ ಶರೀರವು ಹೀಗೆ ಇರಲಿ, ನನ್ನ ಶರೀರವು ಹೀಗೆ ಇಲ್ಲದಿರಲಿ". ಇದೇ ತರ್ಕವು ಉಳಿದ ನಾಲ್ಕು ಖಂಧಗಳಿಗೆ ಅನ್ವಯವಾಗುತ್ತದೆ. ಇದೊಂದು ಖಂಡಿಸಲಾಗದ ಸತ್ಯ!

### ಅನತ್ತಲಕ್ಖಣ ಸುತ್ತ (ಸಂಯುಕ್ತ ನಿಕಾಯ 2.3.59)

ಒಮ್ಮೆ ಭಗವಾನರು ವಾರಾಣಸಿಯ ಬಳಿಯ ಇಸಿಪಟಣದ ಮಿಗದಾಯಿ ವನದಲ್ಲಿ ತಂಗಿದ್ದರು. ಅಲ್ಲಿ ಭಗವಾನರು ಪಂಚವಗ್ಗೀಯ ಭಿಕ್ಖುಗಳನ್ನುದ್ದೇಶಿಸಿ 'ಭಿಕ್ಖುಗಳೇ' ಎನ್ನಲು ಅವರು 'ಪರಮಪೂಜ್ಯರೇ' ಎಂದರು. ಆಗ ಭಗವಾನರು ಹೀಗೆ ನುಡಿದರು:



"ಭಿಕ್ಖುಗಳೇ, ಶರೀರವು (ಘನರೂಪವು) ಅನಾತ್ಮವಾದುದು. ಯಾಕೆಂದರೆ ಶರೀರವು ಆತ್ಮವಾಗಿದ್ದರೆ, ಈ ಶರೀರವು ಸಂಕಟಕ್ಕೆ ಒಳಗಾಗುತ್ತಿರಲಿಲ್ಲ ಮತ್ತು ಒಬ್ಬನು ಅದರ ಬಗ್ಗೆ ಹೀಗೆ ಹೇಳಬಹುದಿತ್ತು: 'ನನ್ನ ಶರೀರವು ಹೀಗೆ ಇರಲಿ, ನನ್ನ ಶರೀರವು ಹೀಗೆ ಆಗದಿರಲಿ'. ಆದರೆ ಶರೀರವು ಅನಾತ್ಮವಾದುದರಿಂದ ಸಂಕಟ ದುಃಖಕ್ಕೆ ಒಳಗಾಗುತ್ತದೆ ಮತ್ತು ಒಬ್ಬನು ಹೀಗೆ ಹೇಳಲು ಸಾಧ್ಯವಾಗುವುದಿಲ್ಲ: 'ನನ್ನ ಶರೀರವು ಹೀಗೆ ಇರಲಿ, ನನ್ನ ಶರೀರವು ಹೀಗೆ ಆಗದಿರಲಿ'.

"ಭಿಕ್ಖುಗಳೇ, ವೇದನೆಯು ಅನಾತ್ಮ. ಏಕೆಂದರೆ ವೇದನೆಯು ಆತ್ಮವಾಗಿದ್ದರೆ ಈ ವೇದನೆಯು ಸಂಕಟಕ್ಕೆ ಒಳಗಾಗುತ್ತಿರಲಿಲ್ಲ ಮತ್ತು ಒಬ್ಬನು ಅದರ ಬಗ್ಗೆ ಹೀಗೆ ಹೇಳಲು ಸಾಧ್ಯವಾಗುತ್ತಿತ್ತು: 'ನನ್ನ ವೇದನೆಯು ಹೀಗೆ ಇರಲಿ, ನನ್ನ ವೇದನೆಯು ಹೀಗೆ ಆಗದಿರಲಿ'. ಆದರೆ ವೇದನೆಯು ಅನಾತ್ಮವಾದುದರಿಂದ ಅದು ಸಂಕಟಕ್ಕೆ ಒಳಗಾಗುತ್ತದೆ ಮತ್ತು ಒಬ್ಬನು ಅದರ ಬಗ್ಗೆ ಹೀಗೆ ಹೇಳಲು ಸಾಧ್ಯವಾಗುವುದಿಲ್ಲ: 'ನನ್ನ ವೇದನೆಯು ಹೀಗೆ ಇರಲಿ, ನನ್ನ ವೇದನೆಯು ಹೀಗೆ ಆಗದಿರಲಿ'.

"ಭಿಕ್ಖುಗಳೇ, ಸಞ್ಞಾವು (ಗ್ರಹಿಕೆ) ಅನಾತ್ಮ. ಏಕೆಂದರೆ ಆತ್ಮವಾಗಿದ್ದರೆ ಈ ಸಞ್ಞಾವು ಸಂಕಟಕ್ಕೆ ಒಳಗಾಗುತ್ತಿರಲಿಲ್ಲ ಮತ್ತು ಒಬ್ಬನು ಅದರ ಬಗ್ಗೆ ಹೀಗೆ ಹೇಳಬಹುದಿತ್ತು: 'ನನ್ನ ಸಞ್ಞಾವು ಹೀಗೆಯೇ ಇರಲಿ, ನನ್ನ ಸಞ್ಞಾವು ಹೀಗೆ ಇಲ್ಲದಿರಲಿ'. ಆದರೆ ಸಞ್ಞಾವು ಅನಾತ್ಮವಾದುದರಿಂದ ಅದು ಸಂಕಟಕ್ಕೆ ಒಳಗಾಗುತ್ತದೆ. ಮತ್ತು ಒಬ್ಬನು ಅದರ ಬಗ್ಗೆ ಹೀಗೆ ಹೇಳಲು ಸಾಧ್ಯವಾಗುವುದಿಲ್ಲ: 'ನನ್ನ ಸಞ್ಞಾವು ಹೀಗೆಯೇ ಇರಲಿ, ನನ್ನ ಸಞ್ಞಾವು ಹೀಗೆ ಇಲ್ಲದಿರಲಿ'.

"ಭಿಕ್ಖುಗಳೇ, ಸಂಖಾರಗಳು (ಮನೋ ನಿರ್ಮಿತಿಗಳು) ಅನಾತ್ಮವಾದುವು. ಏಕೆಂದರೆ ಸಂಖಾರಗಳು ಆತ್ಮವಾಗಿದ್ದರೆ, ಈ ಸಂಖಾರಗಳು ಸಂಕಟಕ್ಕೆ ದುಃಖಕ್ಕೆ ಒಳಗಾಗುತ್ತಿರಲಿಲ್ಲ. ಮತ್ತು ಒಬ್ಬನು ಹೀಗೆ ಹೇಳಲು ಸಾಧ್ಯವಾಗುತ್ತಿತ್ತು: 'ನನ್ನ ಸಂಖಾರವು ಹೀಗೆಯೇ ಇರಲಿ, ನನ್ನ ಸಂಖಾರವು ಹೀಗೆ ಇಲ್ಲದಿರಲಿ'. ಆದರೆ ಸಂಖಾರವು ಅನಾತ್ಮವಾದುದರಿಂದ ಅದು ಸಂಕಟಕ್ಕೆ ಒಳಗಾಗುತ್ತದೆ. ಮತ್ತು ಒಬ್ಬನು ಅದರ ಬಗ್ಗೆ ಹೀಗೆ ಹೇಳಲು ಸಾಧ್ಯವಾಗುವುದಿಲ್ಲ: 'ನನ್ನ ಸಂಖಾರಗಳು ಹೀಗೆಯೇ ಇರಲಿ, ನನ್ನ ಸಂಖಾರಗಳು ಹೀಗೆ ಇಲ್ಲದಿರಲಿ'.

"ಭಿಕ್ಖುಗಳೇ, ಚಿತ್ತ (ವಿಞ್ಞಾಣ) ವು ಅನಾತ್ಮವಾದುದು. ಏಕೆಂದರೆ ಚಿತ್ತವು ಆತ್ಮವಾಗಿದ್ದರೆ ಚಿತ್ತವು ಸಂಕಟಕ್ಕೆ ದುಃಖಕ್ಕೆ ಒಳಗಾಗುತ್ತಿರಲಿಲ್ಲ. ಮತ್ತು ಒಬ್ಬನು ಹೀಗೆ ಅದರ ಬಗ್ಗೆ ಹೇಳಲು ಸಾಧ್ಯವಾಗುತ್ತಿತ್ತು: 'ನನ್ನ ಚಿತ್ತವು ಹೀಗೆಯೇ ಇರಲಿ, ನನ್ನ ಚಿತ್ತವು ಹೀಗೆ ಇಲ್ಲದಿರಲಿ'. ಆದರೆ ಚಿತ್ತವು ಅನಾತ್ಮವಾದುದರಿಮದ ಅದು ಸಂಕಟಕ್ಕೆ ದುಃಖಕ್ಕೆ ಒಳಗಾಗುತ್ತದೆ. ಮತ್ತು ಒಬ್ಬನು ಅದರ ಬಗ್ಗೆ ಹೀಗೆ ಹೇಳಲು ಸಾಧ್ಯವಾಗುವುದಿಲ್ಲ: 'ನನ್ನ ಚಿತ್ತವು ಹೀಗೆಯೇ ಇರಲಿ, ನನ್ನ ಚಿತ್ತವು ಹೀಗೆ ಇಲ್ಲದಿರಲಿ'.

"ಭಿಕ್ಖುಗಳೇ, ಈ ಬಗ್ಗೆ ನೀವು ಏನು ಯೋಚಿಸುತ್ತೀರಿ: 'ಶರೀರವು ನಿತ್ಯವೇ (ಶಾಶ್ವತವೇ) ಅನಿತ್ಯವೇ (ಅಶಾಶ್ವತವೇ)?" "ಪರಮಪೂಜ್ಯರೇ, ಅದು ಅನಿತ್ಯ." "ಯಾವುದು ಅನಿತ್ಯ, ಅದು ದುಃಖವೋ, ಸುಖವೋ?" "ದುಃಖವು, ಪರಮಪೂಜ್ಯರೇ." "ಯಾವುದು ಅನಿತ್ಯವೂ, ದುಃಖವೂ, ಬದಲಾವಣೆಗೆ ಒಳಗಾಗುವಂಥದು ಆಗಿದೆಯೋ ಅಂತಹುದನ್ನು ಹೀಗೆ ಪರಿಗಣಿಸಲು ಅರ್ಹವೇ: 'ಇದು ನನ್ನದು, ನಾನು ಇದು, ಇದು ಎಂಬುದು ನಾನೇ." "ಇಲ್ಲ, ಪರಮಪೂಜ್ಯರೇ."

"ಭಿಕ್ಖುಗಳೇ, ಈ ಬಗ್ಗೆ ನೀವು ಏನು ಯೋಚಿಸುತ್ತೀರಿ: 'ವೇದನಾವು ನಿತ್ಯವೇ, ಅನಿತ್ಯವೇ?" "ಪರಮಪೂಜ್ಯರೇ, ಅದು ಅನಿತ್ಯ." "ಯಾವುದು ಅನಿತ್ಯವೋ ಅದು ದುಃಖವೋ ಸುಖವೋ?" "ದುಃಖವು, ಪರಮಪೂಜ್ಯರೇ." "ಯಾವುದು ಅನಿತ್ಯವೂ, ದುಃಖವೂ, ಬದಲಾವಣೆಗೆ ಒಳಗಾಗುವಂತಹುದೂ ಆಗಿದೆಯೋ ಅಂತಹುದನ್ನು ಹೀಗೆ ಪರಿಗಣಿಸಲು ಅರ್ಹವೇ: 'ಇದು ನನ್ನದು, ನಾನು ಇದು, ಇದು ಎಂಬುದು ನಾನೇ." "ಇಲ್ಲ, ಪರಮಪೂಜ್ಯರೇ."

"ಭಿಕ್ಖುಗಳೇ, ಈ ಬಗ್ಗೆ ನೀವು ಏನು ಯೋಚಿಸುತ್ತೀರಿ: 'ಸಞ್ಞಾವು ನಿತ್ಯವೇ, ಅನಿತ್ಯವೇ?" "ಪರಮಪೂಜ್ಯರೇ, ಅದು ಅನಿತ್ಯ." "ಯಾವುದು ಅನಿತ್ಯವೋ ಅದು ದುಃಖವೋ ಸುಖವೋ?" "ದುಃಖವು, ಪರಮಪೂಜ್ಯರೇ." "ಯಾವುದು ಅನಿತ್ಯವೂ, ದುಃಖವೂ, ಬದಲಾವಣೆಗೆ ಒಳಗಾಗುವಂತಹುದೂ ಆಗಿದೆಯೋ ಅಂತಹುದನ್ನು ಹೀಗೆ ಪರಿಗಣಿಸಲು ಅರ್ಹವೇ: 'ಇದು ನನ್ನದು, ನಾನು ಇದು, ಇದು ಎಂಬುದು ನಾನೇ." "ಇಲ್ಲ, ಪರಮಪೂಜ್ಯರೇ."

"ಭಿಕ್ಖುಗಳೇ, ಈ ಬಗ್ಗೆ ನೀವು ಏನು ಯೋಚಿಸುತ್ತೀರಿ: 'ಸಂಖಾರಗಳು ನಿತ್ಯವೇ, ಅನಿತ್ಯವೇ?" "ಪರಮಪೂಜ್ಯರೇ, ಅದು ಅನಿತ್ಯ." "ಯಾವುದು ಅನಿತ್ಯವೋ ಅದು ದುಃಖವೋ ಸುಖವೋ?" "ದುಃಖವು, ಪರಮಪೂಜ್ಯರೇ." "ಯಾವುದು ಅನಿತ್ಯವೂ, ದುಃಖವೂ, ಬದಲಾವಣೆಗೆ ಒಳಗಾಗುವಂತಹುದೂ ಆಗಿದೆಯೋ ಅಂತಹುದನ್ನು ಹೀಗೆ ಪರಿಗಣಿಸಲು ಅರ್ಹವೇ: 'ಇದು ನನ್ನದು, ನಾನು ಇದು, ಇದು ಎಂಬುದು ನಾನೇ." "ಇಲ್ಲ, ಪರಮಪೂಜ್ಯರೇ."

"ಭಿಕ್ಖುಗಳೇ, ಈ ಬಗ್ಗೆ ನೀವು ಏನು ಯೋಚಿಸುತ್ತೀರಿ: 'ವಿಞ್ಞಾಣವು ನಿತ್ಯವೇ, ಅನಿತ್ಯವೇ?" "ಪರಮಪೂಜ್ಯರೇ, ಅದು ಅನಿತ್ಯ." "ಯಾವುದು ಅನಿತ್ಯವೋ ಅದು ದುಃಖವೋ ಸುಖವೋ?" "ದುಃಖವು, ಪರಮಪೂಜ್ಯರೇ." "ಯಾವುದು ಅನಿತ್ಯವೂ, ದುಃಖವೂ, ಬದಲಾವಣೆಗೆ ಒಳಗಾಗುವಂತಹುದೂ ಆಗಿದೆಯೋ ಅಂತಹುದನ್ನು ಹೀಗೆ ಪರಿಗಣಿಸಲು ಅರ್ಹವೇ: 'ಇದು ನನ್ನದು, ನಾನು ಇದು, ಇದು ಎಂಬುದು ನಾನೇ." "ಇಲ್ಲ, ಪರಮಪೂಜ್ಯರೇ."



"ಆದ್ದರಿಂದ ಭಿಕ್ಖುಗಳೇ, ಯಾವುದೇ ರೀತಿಯ ಶರೀರವಾಗಲಿ, ಅದು ಭೂತ ಭವಿಷ್ಯತ್ ಅಥವಾ ವರ್ತಮಾನಕ್ಕೆ ಸೇರಿದ್ದಾಗಲಿ, ಆಂತರಿಕವಾಗಿರಲಿ ಬಾಹ್ಯವಾಗಿರಲಿ, ಸ್ಥೂಲವಾಗಿರಲಿ ಸೂಕ್ಷ್ಮವಾಗಿರಲಿ, ನೀಚವಾಗಿರಲಿ ಉಚ್ಚವಾಗಿರಲಿ, ದೂರವಿರಲಿ ಹತ್ತಿರವಿರಲಿ – ಎಲ್ಲ ರೀತಿಯ ಶರೀರಗಳನ್ನು ಆಳವಾದ ವಿಪಸ್ಸನದಿಂದ ಅವು ಇರುವ ವಾಸ್ತವ ಸ್ಥಿತಿಯಲ್ಲಿಯೇ ಹೀಗೆ ನೋಡಬೇಕು: 'ಇದು ನನ್ನದಲ್ಲ, ನಾನು ಇದಲ್ಲ, ಇದು ಎಂಬುದು ನಾನಲ್ಲ.'

"ಆದ್ದರಿಂದ ಭಿಕ್ಖುಗಳೇ, ಯಾವುದೇ ರೀತಿಯ ವೇದನಾ ಆಗಿರಲಿ, ಅದು ಭೂತ ಭವಿಷ್ಯತ್ ಅಥವಾ ವರ್ತಮಾನಕ್ಕೆ ಸೇರಿದ್ದಾಗಲಿ, ಆಂತರಿಕವಾಗಿರಲಿ ಬಾಹ್ಯವಾಗಿರಲಿ, ಸ್ಥೂಲವಾಗಿರಲಿ ಸೂಕ್ಷ್ಮವಾಗಿರಲಿ, ನೀಚವಾಗಿರಲಿ ಉಚ್ಚವಾಗಿರಲಿ, ದೂರವಿರಲಿ ಹತ್ತಿರವಿರಲಿ – ಎಲ್ಲ ರೀತಿಯ ಶರೀರಗಳನ್ನು ಆಳವಾದ ವಿಪಸ್ಸನದಿಂದ ಅವು ಇರುವ ವಾಸ್ತವ ಸ್ಥಿತಿಯಲ್ಲಿಯೇ ಹೀಗೆ ನೋಡಬೇಕು: 'ಇವು ನನ್ನದಲ್ಲ, ನಾನು ಇವಲ್ಲ, ಇವು ಎಂಬುದು ನಾನಲ್ಲ.'

"ಆದ್ದರಿಂದ ಭಿಕ್ಖುಗಳೇ, ಯಾವುದೇ ರೀತಿಯ ಸಞ್ಞಾ ಆಗಿರಲಿ, ಅದು ಭೂತ ಭವಿಷ್ಯತ್ ಅಥವಾ ವರ್ತಮಾನಕ್ಕೆ ಸೇರಿದ್ದಾಗಲಿ, ಆಂತರಿಕವಾಗಿರಲಿ ಬಾಹ್ಯವಾಗಿರಲಿ, ಸ್ಥೂಲವಾಗಿರಲಿ ಸೂಕ್ಷ್ಮವಾಗಿರಲಿ, ನೀಚವಾಗಿರಲಿ ಉಚ್ಚವಾಗಿರಲಿ, ದೂರವಿರಲಿ ಹತ್ತಿರವಿರಲಿ – ಎಲ್ಲ ರೀತಿಯ ಶರೀರಗಳನ್ನು ಆಳವಾದ ವಿಪಸ್ಸನದಿಂದ ಅವು ಇರುವ ವಾಸ್ತವ ಸ್ಥಿತಿಯಲ್ಲಿಯೇ ಹೀಗೆ ನೋಡಬೇಕು: 'ಇವು ನನ್ನದಲ್ಲ, ನಾನು ಇವಲ್ಲ, ಇವು ಎಂಬುದು ನಾನಲ್ಲ.'

"ಆದ್ದರಿಂದ ಭಿಕ್ಖುಗಳೇ, ಯಾವುದೇ ರೀತಿಯ ಸಂಖಾರಗಳಾಗಿರಲಿ, ಅದು ಭೂತ ಭವಿಷ್ಯತ್ ಅಥವಾ ವರ್ತಮಾನಕ್ಕೆ ಸೇರಿದ್ದಾಗಲಿ, ಆಂತರಿಕವಾಗಿರಲಿ ಬಾಹ್ಯವಾಗಿರಲಿ, ಸ್ಥೂಲವಾಗಿರಲಿ ಸೂಕ್ಷ್ಮವಾಗಿರಲಿ, ನೀಚವಾಗಿರಲಿ ಉಚ್ಚವಾಗಿರಲಿ, ದೂರವಿರಲಿ ಹತ್ತಿರವಿರಲಿ – ಎಲ್ಲ ರೀತಿಯ ಶರೀರಗಳನ್ನು ಆಳವಾದ ವಿಪಸ್ಸನದಿಂದ ಅವು ಇರುವ ವಾಸ್ತವ ಸ್ಥಿತಿಯಲ್ಲಿಯೇ ಹೀಗೆ ನೋಡಬೇಕು: 'ಇವು ನನ್ನದಲ್ಲ, ನಾನು ಇವಲ್ಲ, ಇವು ಎಂಬುದು ನಾನಲ್ಲ.'

"ಆದ್ದರಿಂದ ಭಿಕ್ಖುಗಳೇ, ಯಾವುದೇ ರೀತಿಯ ವಿಞ್ಞಾಣವಾಗಲಿ, ಅದು ಭೂತ ಭವಿಷ್ಯತ್ ಅಥವಾ ವರ್ತಮಾನಕ್ಕೆ ಸೇರಿದ್ದಾಗಲಿ, ಆಂತರಿಕವಾಗಿರಲಿ ಬಾಹ್ಯವಾಗಿರಲಿ, ಸ್ಥೂಲವಾಗಿರಲಿ ಸೂಕ್ಷ್ಮವಾಗಿರಲಿ, ನೀಚವಾಗಿರಲಿ ಉಚ್ಚವಾಗಿರಲಿ, ದೂರವಿರಲಿ ಹತ್ತಿರವಿರಲಿ – ಎಲ್ಲ ರೀತಿಯ ಶರೀರಗಳನ್ನು ಆಳವಾದ ವಿಪಸ್ಸನದಿಂದ ಅವು ಇರುವ ವಾಸ್ತವ ಸ್ಥಿತಿಯಲ್ಲಿಯೇ ಹೀಗೆ ನೋಡಬೇಕು: 'ಇವು ನನ್ನದಲ್ಲ, ನಾನು ಇವಲ್ಲ, ಇವು ಎಂಬುದು ನಾನಲ್ಲ.'

"ಭಿಕ್ಖುಗಳೇ, ಹೀಗೆ ಬೋಧನೆಗೆ ಒಳಗಾದ ಆರ್ಯ ಶಿಷ್ಯನು ರೂಪ, ವೇದನಾ, ಸಞ್ಞಾ, ಸಂಖಾರ, ವಿಞ್ಞಾಣಗಳ ಮೇಲೆ ರುಚಿ ಕಾಣದಾಗುತ್ತಾನೆ. ಹೀಗೆ ರುಚಿ ಕಾಣದವನಾಗಿ ಅವನು ನಿರ್ಲಿಪ್ತನಗುತ್ತಾನೆ. ನಿರ್ಲಿಪ್ತತೆಯಿಂದ ಅವನು (ಅವನ ಮನಸ್ಸು) ಮುಕ್ತನಾಗುತ್ತಾನೆ. ಹಾಗೆ ಮುಕ್ತಗೊಂಡು ಸಮ್ಯಕ್ ದೃಷ್ಟಿಯಿಂದ ಉದಯಗೊಂಡ ಜ್ಞಾನದಿಂದ 'ಮುಕ್ತಗೊಂಡಿದ್ದೇನೆ' ಎಂದು ಅರಿಯುತ್ತಾನೆ. ಜ್ಞಾನದಿಂದಲೇ ಹೀಗೆ ಅರಿಯುತ್ತಾನೆ: 'ಹುಟ್ಟು ನಾಶವಾಯಿತು, ಬ್ರಹ್ಮಚರಿಯ ಜೀವನವನ್ನು ನಡೆಸಿಯಾಯಿತು, ಏನನ್ನ ಮಾಡಬೇಕೋ ಅದನ್ನು ಮಾಡಿಯಾಯಿತು, ಈಗಿನ ಸ್ಥಿತಿಯಲ್ಲಿ ಮಾಡಲು ಏನೂ ಉಳಿದಿಲ್ಲ."

ಭಗವಾನರು ಹೀಗೆಯೇ ಹೇಳಿದ್ದು. ಭಗವಾನರ ಧರ್ಮೋಪದೇಶದಿಂದ ಆನಂದಗೊಂಡ ಭಿಕ್ಖುಗಳು ಉತ್ಸಾಹಿತರಾದರು. ಈ ಧರ್ಮೋಪದೇಶವನ್ನು ಕೇಳಿದ ಪಂಚವಗ್ಗೀಯ ಭಿಕ್ಖುಗಳ ಮನಸ್ಸುಗಳು ಆಸವಗಳಿಂದ ಮುಕ್ತವಾದವು.

## ಮೊದಲ ವರ್ಷಾವಾಸ

ಧಮ್ಮಚಕ್ಕಪವತ್ತನ ಸುತ್ತವನ್ನು ಉಪದೇಶಿಸಿದ ಮಾರನೆದಿನ ಭಗವಾನ್ ಬುದ್ಧರು ಮತ್ತು ಅವರ ಶಿಷ್ಯರು ಮೊದಲ ವರ್ಷಾವಾಸವನ್ನು ಆಚರಿಸಲು ತೊಡಗಿದರು. ಈ ದಿನವನ್ನು 'ವಸ್ಸೂಪನಾಯಕ' ಎಂದು ಕರೆಯುತ್ತಾರೆ. ಮೊದಲ ವರ್ಷಾವಾಸವಾದ್ದರಿಂದ ಬುದ್ಧ ಕಥೆಗಳಲ್ಲಿ ಇದಕ್ಕೆ ವಿಶೇಷ ಸ್ಥಾನವಿದೆ. ಹೀಗಾಗಿ ಪ್ರಪಂಚದಾದ್ಯಂತ ಇರುವ ಬೌದ್ಧರು ಇದನ್ನು ಸಂಭ್ರಮದಿಂದ ಆಚರಿಸುತ್ತಾರೆ.

ಬೌದ್ಧರು ವಿಶೇಷತಃ ಮೂರು ದಿನಗಳನ್ನು ಐತಿಹಾಸಿಕವಾದ ಮತ್ತು ಪವಿತ್ರವಾದ ದಿನಗಳೆಂದು ಪರಿಗಣಿಸುತ್ತಾರೆ. ಏಕೆಂದರೆ ಆ ದಿನಗಳಲ್ಲಿ ಬುದ್ಧರತನ ಮತ್ತು ಧಮ್ಮರತನ ಮತ್ತು ಸಂಘರತನಗಳು ಅಸ್ತಿತ್ವಕ್ಕೆ ಬಂದವು. ಆ ದಿನಗಳೆಂದರೆ: ವೈಶಾಖ ಮಾಸದ ಹುಣ್ಣಿಮೆಯ ದಿನ; ಆಷಾಢ ಮಾಸದ ಹುಣ್ಣಿಮೆಯ ದಿನ ಮತ್ತು ಆಷಾಢ ಹುಣ್ಣಿಮೆ ಕಳೆದ ಐದನೇ ದಿನ. ಈ ಕೊನೆಯ ದಿನದಂದು ಪಂಚವಗ್ಗೀಯ ಭಿಕ್ಖುಗಳು ಅರಹತರಾಗಿ ಭಿಕ್ಖು ಸಂಘವು ಅಸ್ತಿತ್ವಕ್ಕೆ ಬಂದಿತು.

ಇಸಿಪತನದಲ್ಲಿ ನಡೆದ ಮೊದಲ ವರ್ಷಾವಾಸವು ಹಲವು ರೀತಿಯಲ್ಲಿ ವಿಶೇಷವಾದುದು. ಈ ಮೂರು ತಿಂಗಳ ವರ್ಷಾವಾಸದ ಅವಧಿಯಲ್ಲಿ ಬುದ್ಧರ ಅರಹತ ಶಿಷ್ಯರ ಸಂಖ್ಯೆಯು ಅರವತ್ತಕ್ಕೆ ಏರಿತು. ಈ ಭಿಕ್ಖುಗಳೇ ಧಮ್ಮದ ವ್ಯಾಪಕ ಪ್ರಚಾರಕರಾಗಿ ಧಮ್ಮದ ಪ್ರಬಲ ಮುಂದಾಳುಗಳಾದರು. ಬುದ್ಧರು ಇವರನ್ನು ದೇಶದ ಎಲ್ಲೆಡೆ ಧಮ್ಮದೂತರನ್ನಾಗಿ ಕಳುಹಿಸಿ ಈ ರೀತಿಯ ಐತಿಹಾಸಿಕ ಕರೆಯನ್ನು ಕೊಟ್ಟರು:

"ಭಿಕ್ಖುಗಳೇ, ನಾನು ದಿವ್ಯ ಅಥವಾ ಮಾನವ ಬಂಧನಗಳಿಂದ ಬಿಡಿಸಿಕೊಂಡಿದ್ದೇನೆ. ನೀವೂ ಕೂಡ ದಿವ್ಯ ಅಥವಾ ಮಾನವ ಬಂಧನಗಳಿಂದ ಮುಕ್ತರಾಗಿದ್ದೀರಿ".



"ಭಿಕ್ಖುಗಳೇ, ಬಹುಜನರ ಹಿತಕ್ಕಾಗಿ ಬಹುಜನರ ಸುಖಕ್ಕಾಗಿ ಲೋಕಾನುಕಂಪದಿಂದ ದೇವ ಮಾನವರೀರ್ವರ ಒಳಿತಿಗಾಗಿ ಸುಖಕ್ಕಾಗಿ ಮುನ್ನಡೆಯಿರಿ. ಭಿಕ್ಖುಗಳೇ, ಇಬ್ಬರು ಒಂದೇ ಮಾರ್ಗದಲ್ಲಿ ಹೋಗದಿರಿ.

"ಭಿಕ್ಖುಗಳೇ, ಶಬ್ದದಲ್ಲಾಗಲಿ, ಭಾವದಲ್ಲಾಗಲಿ ಆರಂಭದಲ್ಲಿ ಅತ್ಯುತ್ತಮವಾಗಿರುವ, ಮಧ್ಯದಲ್ಲಿ ಅತ್ಯುತ್ತಮವಾಗಿರುವ ಮತ್ತು ಅಂತ್ಯದಲ್ಲಿ ಅತ್ಯುತ್ತಮವಾಗಿರುವ ಈ ಧಮ್ಮವನ್ನು ಪ್ರಚಾರ ಮಾಡಿ. ಪರಿಶುದ್ಧವೂ ಪಾವನವೂ ಆದ ಈ ಬ್ರಹ್ಮಚರಿಯ ಜೀವನವನ್ನು ಜಗತ್ತಿಗೆ ಸಾರಿ.

"ಭಿಕ್ಖುಗಳೇ, ಕಣ್ಣೊಳಗೆ ಸ್ವಲ್ಪ ಧೂಳು ತುಂಬಿಕೊಂಡಿರುವ ಜೀವಿಗಳಿವೆ. ಈ ಧಮ್ಮವನ್ನು ಕೇಳದಿದ್ದರೆ ಅವರು ಪತನರಾಗುತ್ತಾರೆ. ಧಮ್ಮವನ್ನು ಅರ್ಥಮಾಡಿ ಕೊಳ್ಳುವವರಿದ್ದಾರೆ."

"ನಿಮ್ಮ ಕಾಯಕವನ್ನು ಪೂರ್ತಿಗೊಳಿಸಿಕೊಂಡ ನೀವು ಈ ತಥಾಗತನ ಧ್ವಜವನ್ನು ಉತ್ತುಂಗಕ್ಕೆ ಹಾರಿಸಿ, ಭವ್ಯವಾದ ಧಮ್ಮವನ್ನು ಬೋಧಿಸಿ, ಇನ್ನೊಬ್ಬರ ಒಳಿತಿಗಾಗಿ ಕಾರ್ಯಪ್ರವೃತ್ತರಾಗಿ."

## ಮೂವತ್ತು ರಾಜಕುಮಾರರು

ಅರವತ್ತು ಧಮ್ಮದೂತ ಅರಹತರು ಬೇರೆ ಬೇರೆ ಮಾರ್ಗಗಳಲ್ಲಿ ನಿರ್ಗಮಿಸಲು ಭಗವಾನ್ ಬುದ್ಧರು ಮಿಗದಾಯಿಯನ್ನು ಬಿಟ್ಟು ಉರುವೇಲದತ್ತ ತೆರಳಿದರು. ಮುಂದೆ ಸಂಭವಿಸುವ ಅದ್ಭುತ ಘಟನೆಯೊಂದರಲ್ಲಿ ಮೂವತ್ತು ರಾಜಕುಮಾರರು ದಿವ್ಯಚಕ್ಷುವನ್ನು ಹೊಂದಿ ಆರ್ಯರಾಗುವುದನ್ನು ದಿವ್ಯದೃಷ್ಟಿಯಿಂದ ಅರಿತು ಭಗವಾನರು ದಾರಿಯಲ್ಲಿ ಸಾಗುವಾಗ ಕಪ್ಪಾಸಿಕ ಅರಣ್ಯದಲ್ಲಿ ನಿಂತರು.

ಕೋಸಲದ ದೊರೆ ಪಸೇನದಿಯ ದಾಯಾದಿಗಳಾದ ಮೂವತ್ತು ಯುವ ರಾಜಕುಮಾರರು ತಮ್ಮ ಹೆಂಡಂದಿರೊಂದಿಗೆ ಅರಣ್ಯದ ಬಳಿಯ ಸರೋವರದಲ್ಲಿ ಜಲಕ್ರೀಡೆಯಲ್ಲಿ ತೊಡಗಿದ್ದರು. ಅದರಲ್ಲಿ ಒಬ್ಬ ಯುವ ರಾಜಕುಮಾರನಿಗೆ ಹೆಂಡತಿ ಇರಲಿಲ್ಲ. ಅವನು ರಾಜನರ್ತಕಿಯೊಬ್ಬಳನ್ನು ತನ್ನ ಸಂಗಾತಿಯಾಗಿ ಕರೆತಂದಿದ್ದನು. ಈ ಪುರುಷ ಸ್ತ್ರೀಯರೆಲ್ಲ ಜಲಕ್ರೀಡೆಯಲ್ಲಿ ಆನಂದದಿಂದ ತೊಡಗಿರಲು ರಾಜನರ್ತಕಿ ಮಾತ್ರ ನೀರಿಗಿಳಿಯದೆ ದಡದ ಮೇಲಿದ್ದು, ಆ ನೀರೆಯರ ಆಭರಣಗಳನ್ನೆಲ್ಲ ಗಂಟುಕಟ್ಟಿ ಸಪ್ಪಳವಿಲ್ಲದೆ ಅಲ್ಲಿಂದ ಮರೆಯಾದಳು.

ಜಲಕ್ರೀಡೆ ಮುಗಿದ ಮೇಲೆ ಬಂದು ನೋಡುತ್ತಾರೆ, ತಮ್ಮ ಅಮೂಲ್ಯ ಒಡವೆಗಳೆಲ್ಲ ಕಳುವಾಗಿವೆ. ಅವಳನ್ನು ಹಿಡಿದು ತರಲು ಓಡುತ್ತಾರೆ. ಹೀಗೆ ಹುಡುಕಾಟದಲ್ಲಿರಲು ಅವರು ಕಪ್ಪಾಸಿಕ ಅರಣ್ಯದ ತಂಪು ಮರಗಳ ತೋಪಿನಲ್ಲಿ ಬುದ್ಧರು ಪ್ರಸನ್ನಚಿತ್ತರಾಗಿ ಕುಳಿತಿರುವುದನ್ನು ಕಾಣುತ್ತಾರೆ. ಅವರು ಬುದ್ಧರಿಗೆ "ಪೂಜ್ಯರೆ, ಈ ಹಾದಿಯಲ್ಲಿ ಒಬ್ಬ ಹೆಂಗಸು ಹಾದು ಹೋದುದನ್ನು ನೀವು ನೋಡಿದಿರೇನು?" ಅದಕ್ಕೆ ಬುದ್ಧರು "ಯುವಕರೆ,

ಯಾವುದು ಉತ್ತಮ, ಒಬ್ಬ ಹೆಂಗಸನ್ನು ಹುಡುಕುವುದೋ ಅಥವಾ ನಿಮ್ಮನ್ನು ನೀವೇ ಹುಡುಕಿಕೊಳ್ಳುವುದೋ?" ಎಂದರು. ಬುದ್ಧರ ಈ ಪ್ರಶ್ನೆಯಿಂದ ಪ್ರಭಾವಿತರಾಗಿ "ಪೂಜ್ಯರೆ, ಒಬ್ಬನು ತನ್ನನ್ನು ತಾನೇ ಹುಡುಕಿಕೊಳ್ಳುವುದು ಉತ್ತಮ". "ಹಾಗಾದರೆ, ಕುಳಿತುಕೊಳ್ಳಿ. ನಾನು ನಿಮಗೆ ಧಮ್ಮವನ್ನು ಬೋಧಿಸುತ್ತೇನೆ. (ಒಬ್ಬನು ತನ್ನನ್ನು ತಾನೇ ಅರ್ಥಮಾಡಿಕೊಳ್ಳುವ ಬಗೆಗಿನ ಉಪದೇಶ.)

ಬುದ್ಧರು ಹಂತ ಹಂತವಾಗಿ ಲೌಕಿಕದಿಂದ ಲೋಕೋತ್ತರ ಸ್ಥಿತಿಗೆ ಕ್ರಮ ಕ್ರಮವಾಗಿ ಉತ್ಕರ್ಷ ಹೊಂದುವ ಮಾರ್ಗವನ್ನು ಬೋಧಿಸಿದರು. ಮೂವತ್ತು ರಾಜಕುಮಾರರೂ ಆಧ್ಯಾತ್ಮಿಕ ಪ್ರಗತಿಯನ್ನು ಸಾಧಿಸಿ ಅವರೆಲ್ಲಾ ಆರ್ಯರಾದರು.

ಆನಂತರದಲ್ಲಿ ಅವರೆಲ್ಲರೂ 'ಏಹಿ ಭಿಕ್ಖು' ಉಪಸಂಪದವನ್ನು ಪಡೆದು ಸಂಘವನ್ನು ಸೇರಿದರು. ಮುಂದೆ ಇವರೆಲ್ಲರೂ ಪಾವೇಯ್ಯಕ ಥೇರರೆಂದು ಕರೆಯಲ್ಪಟ್ಟರು (ಕೋಸಲ ದೇಶದ ಪಾವೇಯ್ಯಕದಿಂದ ಬಂದವರಾದುದರಿಂದ) ಮತ್ತು ಅರಹತರಾದರು.

ಈ ಮೂವತ್ತು ರಾಜಕುಮಾರರನ್ನು ಮತ್ತೆ ಮರಳಿ ಬಾರದ ಲೋಕೋತ್ತರ ಆಧ್ಯಾತ್ಮ ಸ್ಥಿತಿಯಲ್ಲಿ ಸ್ಥಾಪಿಸಿದ ನಂತರ ಬುದ್ಧರು ಅವರನ್ನು ಕೋಸಲದ ರಾಜಧಾನಿಗೆ ಕಳುಹಿಸಿ ತಾವು ಉರುವೇಲದತ್ತ ನಡೆದರು.

## ಮೂವರು ವಿರಕ್ತ ಸೋದರರು

ಭಗವಾನರು ಉರುವೇಲಕ್ಕೆ ಬಂದಮೇಲೆ ಅಗ್ನಿ ಆರಾಧಕನಾದ (ಜಟಿಲ) ಉರುವೇಲ ಕಸ್ಸಪನ ಅರಣ್ಯದಲ್ಲಿನ ಆಶ್ರಮಕ್ಕೆ ಹೋಗಿ ಒಂದು ರಾತ್ರಿ ಆತನ ಯಜ್ಞ ಶಾಲೆಯಲ್ಲಿ ಕಳೆಯಲು ಅನುಮತಿಯನ್ನು ಕೇಳಿದರು. ಈ ಯಜ್ಞ ಶಾಲೆಯಲ್ಲಿ ಒಂದು ಶಕ್ತಿವಂತ ನಾಗರಾಜನು (ಒಂದು ದಿವ್ಯ ದೇವತೆ) ನಿವಾಸಿಸುವುದರಿಂದ ಉಳಿದುಕೊಳ್ಳದಿರುವಂತೆ ನಿರುತ್ಸಾಹಗೊಳಿಸಿದನು. ಬುದ್ಧರು ಎರಡನೇಸಾರಿ ಮೂರನೇಸಾರಿ ಕೇಳಲು ಕಸ್ಸಪನು ಅದೇ ಉತ್ತರವನ್ನು ಕೊಟ್ಟನು. ಬುದ್ಧರು ನಾಲ್ಕನೇಸಾರಿ ಕೇಳಿ ನಾಗರಾಜನು ತನ್ನನ್ನು ಏನು ಮಾಡುವುದಿಲ್ಲವೆಂದು ಆ ಬಗ್ಗೆ ಯೋಚನೆ ಮಾಡಬಾರದೆಂದು ಹೇಳಿದ ಮೇಲೆ ಕಸ್ಸಪನು ಆ ರಾತ್ರಿಯಲ್ಲಿ ಶಾಲೆಯಲ್ಲಿ ಕಳೆಯಲು ಅನುಮತಿಯನ್ನಿತ್ತನು.

ಬುದ್ಧರು ಆಶ್ರಮವನ್ನು ಹೊಕ್ಕು ಚಾಪೆಯನ್ನು ಹಾಸಿ ಧ್ಯಾನಕ್ಕಾಗಿ ಕುಳಿತರು. ಬುದ್ಧರನ್ನು ನೋಡಿ ನಾಗರಾಜನು ಕೋಪದಿಂದ ಬುಸುಗುಟ್ಟುತ್ತಾ ಬುದ್ಧರನ್ನು ಕೊಲ್ಲಲು ವಿಷಪೂರಿತ ಹೊಗೆಯನ್ನು ಚೆಲ್ಲಿದನು. ನಾಗನ ದುಷ್ಟ ಗುಪ್ತ ಶಕ್ತಿಯನ್ನು ಶಮನಗೊಳಿಸಲು ಬುದ್ಧರು ತಮ್ಮ ದಿವ್ಯ ಲೋಕೋತ್ತರ ಶಕ್ತಿಯನ್ನು ಪ್ರಯೋಗಿಸಿ ಅದಕ್ಕಿಂತಲೂ ಹೆಚ್ಚಿನ ಶಕ್ತಿಯುಳ್ಳ ವಿಷಾನಿಲವನ್ನು ಚೆಲ್ಲಿದರು. ಸಿಡಿಲಿನಂತೆ ಬಂದ ವಿಷಾನಿಲವನ್ನು ನಿಯಂತ್ರಿಸಲು ನಾಗನು ಜ್ವಾಲೆಯನ್ನು ಉಗುಳಿದನು. ಬುದ್ಧರು ಅದಕ್ಕಿಂತಲೂ ಪ್ರಖರವಾದ ಜ್ವಾಲೆಯನ್ನು ಬೀಸಿ ನಾಗನನ್ನು ಪಳಗಿಸಿ ಅವನನ್ನು ತಮ್ಮ ಪಿಂಡಪಾತ್ರೆಯಲ್ಲಿ ಹಾಕಿ ಮುಚ್ಚಿದರು.



ಜ್ವಾಲೆಯ ಕೆನ್ನಾಲಿಗೆಯಿಂದ ಇಡೀ ಆಶ್ರಮವೆಲ್ಲಾ ಬೆಳಗಲು ಕಸ್ಸಪನು ಮತ್ತು ಅವನ ಐದುನೂರು ಜನ ಶಿಷ್ಯರು ಹೊರಗೆಬಂದು ಶೋಕಿಸಿದರು: "ಅಯ್ಯೋ ಪಾಪ, ಒಳ್ಳೆಯ ಸಂನ್ಯಾಸಿ, ನಾಗನಿಂದ ಸತ್ತುಹೋದನಲ್ಲ." ಹೊತ್ತು ಮೂಡುವ ಮುನ್ನವೇ ಕಸ್ಸಪನು ಯಜ್ಞಶಾಲಿಗೆ ಹೋಗಿ ನೋಡಲು ಬುದ್ಧರು ಗಂಭೀರ ಧ್ಯಾನಮುದ್ರೆಯಲ್ಲಿದ್ದರು. ಕಸ್ಸಪನು ಬುದ್ಧರನ್ನು ಊಟಕ್ಕೆ ಆಮಂತ್ರಿಸಿ ಕಳೆದ ರಾತ್ರಿ ಏನಾಯಿತೆಂದು ಕೇಳಿದನು. ಬುದ್ಧರು ನಾಗನು ತಮ್ಮ ಬವನಾಸಿಯಲ್ಲಿರುವುದನ್ನು ತೋರಿಸಿದರು. ಕಸ್ಸಪನಿಗೆ ಮಹದಾಶ್ಚರ್ಯವಾಗಿ ತನ್ನಲ್ಲಿ ತಾನೇ ಹೀಗೆ ಆಲೋಚಿಸಿದನು: "ಇವನಿಗೆ ಖಂಡಿತವಾಗಿ ಲೋಕೋತ್ತರ ಶಕ್ತಿ ಇದೆ, ಆದರೆ ಇವನು ನನ್ನಂತೆ ಅರಹತನಲ್ಲ." ಈಗಾಗಲೇ ತಮ್ಮಿಂದ ಪ್ರಭಾವಕ್ಕೊಳಗಾದ ಜಟಿಲರಿಗೆ ಸಂದೇಶವನ್ನು ತೋರಲು ಇದು ಬುದ್ಧರು ತೋರಿಸಿದ ಮೊದಲ ಪವಾಡ.

ಅಗ್ನಿ ಆರಾಧಕರಾದ ಜಟಿಲರಿಗೆ ಆಧ್ಯಾತ್ಮ ಬದುಕಿನ ಅಂತಿಮ ಗುರಿ ಎಂದರೆ ಪವಾಡಗಳನ್ನು ಮೆರೆಯುವುದು. ತಮ್ಮ ದಿವ್ಯಶಕ್ತಿಯಿಂದ ಮುಂದೆ ಘಟಿಸುವ ಎಲ್ಲ ಸಂಗತಿಗಳನ್ನು ಕಂಡು ಜಟಿಲರನ್ನು ಲೋಕೋತ್ತರ ಸ್ಥಿತಿಯಾದ ಅಭಿಜ್ಞಾದಲ್ಲಿ ಸಂಸ್ಥಾಪಿಸಲೋಸುಗವೇ ತಮ್ಮ ಅಸಾಧಾರಣ ಶಕ್ತಿಯನ್ನು ಪ್ರಯೋಗಿಸಿ ಪವಾಡಗಳನ್ನು ಮಾಡಿದರು. ಆದ್ದರಿಂದಲೇ ಕಸ್ಸಪನು ತಮ್ಮಲ್ಲಿಯೇ ಉಳಿದುಕೊಳ್ಳುವಂತೆ ಅವರ ಎಲ್ಲ ಅವಶ್ಯಕತೆಗಳನ್ನು ನೋಡಿಕೊಳ್ಳುವಂತೆ ಹೇಳಿದಾಗ ಅದಕ್ಕೆ ಸಮ್ಮತಿಸಿ ಕಸ್ಸಪರ ಆಶ್ರಮಕ್ಕೆ ಹತ್ತಿರವೇ ಇರುವ ಅರಣ್ಯದಲ್ಲಿ ಉಳಿದುಕೊಂಡರು.

ಕಸ್ಸಪನಾಗಲಿ, ಅವನ ವಿರಕ್ತ ಸಂನ್ಯಾಸಿಗಳಾಗಲಿ ಸಾಕಷ್ಟು ಪುಣ್ಯ ಸಂಪಾದನೆ ಮಾಡಿಕೊಂಡಿದ್ದರು. ಆದರೆ ನಿಬ್ಬಾಣಕ್ಕೆ ಅಗತ್ಯವಾದ ಪಾರಮಾರ್ಥಿಕ ಸಂಸ್ಕಾರವನ್ನು ಹೊಂದಿರಲಿಲ್ಲ. ಕಸ್ಸಪನಲ್ಲಿ ಮತ್ತು ಅವನ ಶಿಷ್ಯರಲ್ಲಿ ಉತ್ತಮೋತ್ತಮ ಸಾಧ್ಯತೆಗಳು ಇರುವುದನ್ನು ಕಂಡಿದ್ದರಿಂದ ಬುದ್ಧರು ಅಂತಹ ಸೂಕ್ತ ವಾತಾವರಣವನ್ನು ಸೃಷ್ಟಿಸಲು ತೀರ್ಮಾನಿಸಿದರು.

ಎರಡನೇದಿನ ಚಾತಮ್ಮಹಾರಾಜಿಕರು ದಿವ್ಯಲೋಕಗಳಿಂದ ಮಧ್ಯರಾತ್ರಿ ಬಂದು ಇಡೀ ವನವನ್ನೆಲ್ಲ ಬೆಳಗು ಮಾಡಿದರು. ಕಸ್ಸಪ ಮತ್ತು ಅವನ ಶಿಷ್ಯರು ಮಿಂಚುವ ಈ ದಿವ್ಯ ಜೀವಿಗಳನ್ನು ನೋಡಿದರು. ಮಾರನೇದಿನ ಕಸ್ಸಪನು ಬುದ್ಧರನ್ನು ಊಟಕ್ಕೆ ಕರೆಯಲು ಹೋದಾಗ 'ಆ ದಿವ್ಯ ಶರೀರಗಳು ಯಾರು' ಎಂದು ಕೇಳಿದನು. ಬುದ್ಧರು 'ಅವರೆಲ್ಲ ನಾಲ್ಕು ಚಾತುಮ್ಮಹಾರಾಜಿಕ ದೇವತೆಗಳು. ತಮಗೆ ಗೌರವವನ್ನು ಸೂಸಲು ಮತ್ತು ಧಮ್ಮವನ್ನು ಕೇಳಲು ಬಂದಿದ್ದರು' ಎಂದು ಹೇಳಿದರು. ಕಸ್ಸಪನು 'ಎಂತಹ ಪ್ರಭಾವಿ ಭಿಕ್ಖುವೀತನು, ಆದರೆ ಈತನಿನ್ನೂ ನನ್ನಂತೆ ಅರಹತನಲ್ಲ ಬಿಡು' ಎಂದು ತಾನೇ ಭಾವಿಸಿಕೊಂಡನು. ಬುದ್ಧರಿಗೆ ಇವನ ಮನಸ್ಸಿನೊಳಗಾದ ತಪ್ಪು ಭ್ರಮೆಗಳನ್ನು ಅರಿತು ಇವನನ್ನು ಸರಿಯಾದ ಕಾಲದಲ್ಲಿ ತಿದ್ದಲು ತೀರ್ಮಾನಿಸಿದರು. ಇದು ಬುದ್ಧರ ಎರಡನೇ ಪವಾಡ.

ಮೂರನೇದಿನ ರಾತ್ರಿ ತಾವತಿಂಸ ದೇವಲೋಕದ ದೇವರಾಜನಾದ ಸಕ್ಕನು ಬುದ್ಧರನ್ನು ಕಾಣಲು ಬಂದಾಗ ಇಡೀ ವನವೆಲ್ಲ ಇನ್ನೂ ಹೆಚ್ಚಿನ ಬೆಳಕಿನಿಂದ ಕಂಗೊಳಿಸಿತು. ಸಕ್ಕನು ಬುದ್ಧರಿಗೆ ವಂದಿಸಿ ಧಮ್ಮವನ್ನು ಆಲಿಸಲು ಒಂದೆಡೆ ಕುಳಿತನು. ಯಥಾಪ್ರಕಾರ ಕಸ್ಸಪನು ಮಾರನೆದಿನ ಮುಂಜಾನೆ ಊಟಕ್ಕೆ ಬರಲು ಆಹ್ವಾನಿಸಿ 'ರಾತ್ರಿ ಪ್ರಕಾಶಮಾನವಾಗಿ ಬಂದವರು ಯಾರು?' ಎಂದು ಕೇಳಿದನು. 'ಬಂದವನು ದೇವರಾಜ ಸಕ್ಕ'ನೆಂದು ಕಸ್ಸಪನಿಗೆ ಹೇಳಲು ಅವನು ದಿಙ್ಮೂಢನಾದರೂ ತನ್ನ ಹಳೆಯ ಮಾನಸಿಕ ಭ್ರಮಾ ಸ್ಥಿತಿಯಲ್ಲೇ ಉಳಿದನು. ಇದು ಬುದ್ಧರು ನಡೆಸಿದ ಮೂರನೇ ಪವಾಡ.

ಇನ್ನೊಂದು ದಿನ ಮಧ್ಯರಾತ್ರಿ ಬ್ರಹ್ಮಸಹಂಪತಿಯು ತನ್ನೆಲ್ಲ ದಿವ್ಯ ಪ್ರಕಾಶದಿಂದ ಅಡವಿಯನ್ನೆಲ್ಲ ಕಣ್ಣುಕೋರೈಸುವಂತೆ ಮಿಂಚಿಸಿ ಬುದ್ಧರ ಮುಂದೆ ಪ್ರತ್ಯಕ್ಷನಾಗಿ ಅವರಿಗೆ ನಮಿಸಿ ಧಮ್ಮವನ್ನು ಕೇಳಲು ನಿಂತನು. ಮಾರನೆಯದಿನ ಮುಂಜಾನೆ ಕಸ್ಸಪನು ಊಟಕ್ಕೆ ಆಮಂತ್ರಿಸಲು ಬಂದು 'ರಾತ್ರಿ ಮಹಾಜ್ವಲೆಯಂತೆ ಬಂದವರು ಯಾರು?' ಎಂದು ಕೇಳಿದನು. ರಾತ್ರಿ ಧಮ್ಮವನ್ನು ಕೇಳಲು ಹಾಗೆ ಬಂದವರು ಬ್ರಹ್ಮಸಹಂಪತಿ' ಎಂದು ಬುದ್ಧರು ಹೇಳಿದರು. ಕಸ್ಸಪನು ಚಕಿತನಾದರೂ ತನ್ನ ಹಳೆಯ ತಪ್ಪು ಭ್ರಮಾ ಕಲ್ಪನೆಯಲ್ಲಿ ಉಳಿದನು. ಇದು ಬುದ್ಧರು ತೋರಿದ ನಾಲ್ಕನೇ ಪವಾಡ.

ತಿಂಗಳಿಗೊಮ್ಮೆ ಕಸ್ಸಪನ ಅಪಾರ ಭಕ್ತ ಸಮೂಹವು ಬಂದು ಅವನಿಗೆ ಗೌರವವನ್ನು ಸಮರ್ಪಿಸಿ ಭಿಕ್ಷೆಯನ್ನು ನೀಡಿ ಒಂದು ತಿಂಗಳಿಗಾಗುವಷ್ಟು ಧಾನ್ಯವನ್ನು, ಅಗತ್ಯತೆಗಳನ್ನು ಪೂರೈಸುತ್ತಿದ್ದರು. ಅಂತಹ ಒಂದುದಿನ ಕಸ್ಸಪನು ಹೀಗೆ ಯೋಚಿಸಿದನು: 'ಇಂದು ಈ ಮಹಾ ಭಿಕ್ಖುವು ನನ್ನ ಬಳಿ ಬಾರದಿರಲಿ, ಬಂದರೆ ನನ್ನ ಶಿಷ್ಯರೆಲ್ಲಾ ಇವನ ಶಿಷ್ಯರಾಗುತ್ತಾರೆ.' ಹೀಗೆ ಅವನ ಮನಸ್ಸು ಯೋಚಿಸುತ್ತಿರಲು ಬುದ್ಧರು ಅವನ ಮನಸ್ಸನ್ನು ಅರಿತು ಆ ವನದಿಂದ ಮಾಯವಾಗಿ ಹಿಮಾಲಯದ ಉತ್ತರ ಕುರುವಿನ ಕಡೆ ಒಂದುದಿನ ರಾತ್ರಿಯನ್ನು ಕಳೆಯಲು ಹೋದರು.

ಬುದ್ಧರು ಮಾರನೇದಿನ ಮುಂಜಾನೆ ಉರುವೇಲ ಅರಣ್ಯಕ್ಕೆ ಕಸ್ಸಪನು ಕರೆಯುವ ಮುಂಚೆಯೇ ತಮ್ಮ ಕುಟೀರದಲ್ಲಿದ್ದರು. ಕಸ್ಸಪನು ಆಶ್ಚರ್ಯದಿಂದ "ನಾನು ತಮ್ಮನ್ನು ಹಿಂದಿನ ದಿನ ಕಾಣಲಿಲ್ಲ, ತಾವು ಎಲ್ಲಿಯೋ ಹೋಗಿರಬೇಕಲ್ಲ" ಎಂದನು. ಬುದ್ಧರು ಪ್ರಶಾಂತತೆಯಿಂದ "ಕಸ್ಸಪ, ನಾನು ಊಟಕ್ಕೆ ಬಾರದಿದ್ದರೆ ಒಳ್ಳೆಯದು, ಬಂದರೆ ನಿನ್ನ ಶಿಷ್ಯರು ನನ್ನ ಶಿಷ್ಯರಾಗುತ್ತಾರೆಂದು ನೀನು ಆಲೋಚಿಸಿದೆಯಲ್ಲವೇ?" ಕಸ್ಸಪನಿಗೆ ಈ ಮಾತುಗಳನ್ನು ಕೇಳಿ ಆಶ್ಚರ್ಯವಾಯಿತು. ಆದರೂ ತನ್ನ ತಪ್ಪು ಭ್ರಮೆಯಲ್ಲೇ ತೇಲಾಡುತ್ತಿದ್ದನು. ಇದು ಬುದ್ಧರ ಐದನೆಯ ಪವಾಡ.

ಬುದ್ಧರು ಸಾವಧಾನದಿಂದ ತಮ್ಮ ಪಾರಮಾರ್ಥಿಕ ಶಕ್ತಿಗಳು ಫಲಿತಗೊಳ್ಳುವವರೆಗೂ ಕಾದರು. ತಮ್ಮ ಅಸಾಮಾನ್ಯ ಶಕ್ತಿಗಳನ್ನು ಬಹಳಷ್ಟುಸಾರಿ ವಿವಿಧ ಸಂದರ್ಭಗಳಲ್ಲಿ ಪ್ರಯೋಗಿಸುತ್ತಲೇ ಹೋದರು. ಕಸ್ಸಪನು ಅವುಗಳೆಲ್ಲವುಗಳಿಂದ ಚಕಿತಗೊಂಡರೂ ತನ್ನ ಭ್ರಮಾಧೀನ ಸ್ಥಿತಿಯಿಂದ ಬಿಡುಗಡೆಯಾಗಲೇ ಇಲ್ಲ.



ಕಸ್ಸಪನ ಪಾರಮಾರ್ಥಿಕ ಸಂಸ್ಕಾರವು ಹಣ್ಣಾಗಲು ಬುದ್ಧರು ತಮ್ಮ ಹದಿನಾರನೇ ಮಹಾಪವಾಡವನ್ನು ಮತ್ತು ಹಲವಾರು ಅನುಷಂಗಿಕ ಕಿರಿಯ ಪವಾಡಗಳನ್ನೆಸಗಲು ಹಲವಾರು ವಾರಗಳನ್ನೇ ತೆಗೆದುಕೊಂಡರು. ಕಸ್ಸಪನನ್ನು ಸಾಂಸಾರಿಕ ಬಂಧನದಿಂದ ಲೋಕೋತ್ತರವಾದ ನಿಬ್ಬಾಣದ ಹಾದಿಗೆ ಕೊಂಡೊಯ್ಯಲು ಬುದ್ಧರಿಗೆ ಇಷ್ಟು ಅವಶ್ಯವಾಗಿತ್ತು.

ಹೀಗೆ ಒಂದುದಿನ ಮುಂಜಾನೆ ಕಸ್ಸಪನು ಬುದ್ಧರನ್ನು ಊಟಕ್ಕೆ ಆಹ್ವಾನಿಸಲು ಬಂದಾಗ ಕರುಣಾಮಯಿ ಬುದ್ಧರು ಹೀಗೆ ಕೇಳಿದರು: "ಕಸ್ಸಪ, ಆಸವಗಳನ್ನು ಕಳೆದುಕೊಳ್ಳದ ನೀನು ಅರಹತನಲ್ಲ, ಅರಹತತ್ವದೆಡೆಗೆ ಹೋಗುವ ಭವ್ಯ ಮಾರ್ಗದಲ್ಲಿಯೂ ನೀನಿಲ್ಲ." ಈ ರೀತಿಯ ಸತ್ಯ ವಾಕ್ಯವನ್ನು ಕೇಳಿದ ಕಸ್ಸಪನಿಗೆ ಪ್ರಬಲವಾದ ಸಂವೇಗ ಉಂಟಾಯಿತು. ಅವನು ಬುದ್ಧನ ಪಾದಗಳಿಗೆ ಬಿದ್ದು "ಪೂಜ್ಯರೆ, ನಾನು ನಿಮ್ಮಲ್ಲಿ ಶರಣಾಗುತ್ತೇನೆ. ಪರಮಪೂಜ್ಯರ ಧಮ್ಮದಲ್ಲಿ ನನ್ನನ್ನು ಸೇರಿಸಿಕೊಂಡು ನನಗೆ ಉಪಸಂಪದವನ್ನು ನೀಡಿ" ಎಂದು ಬೇಡಿಕೊಂಡನು. ಆಗ ಬುದ್ಧರು: "ಕಸ್ಸಪ, ನೀನು ಐದುನೂರು ಜಟಿಲರ ನಾಯಕ. ನೀನು ಅವರಿಗೆ ಹೇಳದೆ ಇರುವುದು ಸರಿಯಲ್ಲ. ಅವರ ಅನುಮತಿಯನ್ನು ಕೇಳು ಮತ್ತು ಅವರು ಮುಂದೇನು ಮಾಡಿಕೊಳ್ಳಬೇಕೋ ಅದಕ್ಕೆ ಅವರಿಗೆ ಅವಕಾಶ ಕೊಡು."

ಉರುವೇಲ ಕಸ್ಸಪನಿಗೆ ಇಬ್ಬರು ಸೋದರರಿದ್ದರು. ಮೂರುನೂರು ಶಿಷ್ಯರಿರುವ ನಾದಿಕಸ್ಸಪ ಮತ್ತು ಎರಡುನೂರು ಶಿಷ್ಯರಿರುವ ಗಯಾ ಕಸ್ಸಪ. ಈ ಮೂವರು ಸೋದರರ ಬಳಿ ಒಟ್ಟು ಒಂದು ಸಾವಿರ ಶಿಷ್ಯರಿದ್ದು, ಮೂರು ಧಾರ್ಮಿಕ ಪಂಥಗಳೂ ಕಠಿಣ ದೇಹದಂಡನೆಯನ್ನು, ಅಗ್ನಿ ಆರಾಧನೆಯನ್ನು ಮಾಡುತ್ತಿದ್ದರು.

ಬುದ್ಧರ ಸೂಚನೆಯಂತೆ ಉರುವೇಲ ಕಸ್ಸಪನು ತನ್ನ ಐದುನೂರು ಜನ ಶಿಷ್ಯರ ಬಳಿ ಹೋಗಿ "ನಾನು ಬುದ್ಧರ ಬಳಿ ಬ್ರಹ್ಮಚರಿಯ ಜೀವನವನ್ನು ನಡೆಸಲು ಇಚ್ಛಿಸಿದ್ದೇನೆ. ನೀವು ನಿಮ್ಮ ದಾರಿಯನ್ನು ಆಯ್ಕೆ ಮಾಡಿಕೊಳ್ಳಲು ಮುಕ್ತರು" ಎಂದನು. ಆಗ ಅವರೆಲ್ಲಾ ಒಂದೇ ಧನಿಯಲ್ಲಿ "ಪೂಜ್ಯರೆ, ನಾವೆಲ್ಲ ನಿಮ್ಮನ್ನು ಅನುಸರಿಸುತ್ತೇವೆ. ಯಾವಾಗ ನಾಗರಾಜನನ್ನು ಪಳಗಿಸಿದರೋ ಅಂದಿನಿಂದ ಆ ಮಹಾಭಿಕ್ಖುವಿನ ಮೇಲೆ ನಮಗೆ ಗೌರವ ಭಕ್ತಿಗಳಿವೆ" ಎಂದರು.

ಆಗ ಕಸ್ಸಪನು ಮತ್ತು ಅವನು ಶಿಷ್ಯರು ತಮ್ಮ ಜಟೆಗಳನ್ನು ಕತ್ತರಿಸಿ ಗಡ್ಡ–ಮೀಸೆಗಳನ್ನು ತೆಗೆಸಿ ಅಗ್ನಿ ಆರಾಧನೆಯ ಎಲ್ಲ ಪರಿಕರಗಳನ್ನು ತೊರೆದು ನೇರಂಜರಾ ನದಿಯಲ್ಲಿ ಮುಳುಗಿ ಬುದ್ಧರ ಬಳಿ ಹೋದರು. ಬುದ್ಧರು ಅವರಿಗೆ 'ಏಹಿ ಭಿಕ್ಖು' ಉಪಸಂಪದ ದೀಕ್ಷೆಯನ್ನು ನೀಡಲು ಅವರೆಲ್ಲರೂ ಅಟ್ಠಪರಿಕರಗಳಿಂದ ಕೂಡಿದ ಪೂರ್ಣ ಪ್ರಮಾಣದ ಭಿಕ್ಖುಗಳಾದರು.

ನದಿಯ ಕೆಳ ಹರಿವಿನಲ್ಲೇ ಇದ್ದ ನಾದಿ ಕಸ್ಸಪನು ನದಿಯಲ್ಲಿ ತೇಲುತ್ತಿದ್ದ ಉದ್ದುದ್ದದ ಜಟೆಗಳನ್ನು ಕಂಡನು. ತನ್ನ ಸೋದರನಿಗೆ ಮತ್ತು ಅವನ ಶಿಷ್ಯರಿಗೆ ಏನೋ ಆಪತ್ತು ಸಂಭವಿಸಿದೆಯೆಂದು ಅನುಮಾನಪಟ್ಟನು. ಕೂಡಲೇ ಅವನು ಉರುವೇಲ ಆಶ್ರಮಕ್ಕೆ ತೆರಳಿ ಸೋದರನಲ್ಲಾದ ಮಹತ್ತರ ಬದಲಾವಣೆಯನ್ನು ಕಂಡನು, ಆನಂತರದಲ್ಲಿ ವಿಚಾರಿಸಿ ಎಲ್ಲಾ ಕಥೆಯನ್ನು ತಿಳಿದುಕೊಂಡನು. ಆನಂತರದಲ್ಲಿ ಅವನೂ ಮತ್ತು ಅವನ ಶಿಷ್ಯರೆಲ್ಲಾ ತನ್ನ ಅಣ್ಣ ಹಿಡಿದ ದಾರಿಯನ್ನೇ ತುಳಿಯಲು ಮುಂದಾದರು. ಅವರೂ ಕೇಶಮುಂಡನಾದಿಗಳನ್ನು ಮಾಡಿಕೊಂಡು ಬುದ್ಧರ ಬಳಿ ಹೋಗಿ 'ಏಹಿ ಭಿಕ್ಖು' ಉಪಸಂಪದವನ್ನು ಕೇಳಿದ ಪಡೆದರು.

ಕೊನೆಯ ತಮ್ಮನಾದ ಗಯಾ ಕಸ್ಸಪನು ಇನ್ನೂ ಮುಂದಿನ ನದಿಯ ಕೆಳ ಹರಿವಿನಲ್ಲಿ ತನ್ನ ಇನ್ನೂರು ಶಿಷ್ಯರೊಂದಿಗೆ ವಾಸಿಸುತ್ತಿದ್ದರು. ಅವನೂ ನದಿಯಲ್ಲಿ ತೇಲಿಹೋಗುತ್ತಿದ್ದ ಕತ್ತರಿಸಿದ ಜಟೆಗಳನ್ನು ನೋಡಿ ಉರುವೇಲ ಕಸ್ಸಪನ ಆಶ್ರಮಕ್ಕೆ ತೆರಳಿದನು. ಅಲ್ಲಿ ಅವನ ಇಬ್ಬರು ಸೋದರರು ತಮ್ಮ ಎಂಟುನೂರು ಶಿಷ್ಯರೊಂದಿಗೆ ಬುದ್ಧರ ಶಿಷ್ಯರಾಗಿ ಪರಿವರ್ತಿತರಾದುದನ್ನು ಕಂಡನು. ಆನಂತರ ಅವರ ಕಥೆಯನ್ನೆಲ್ಲಾ ಕೇಳಿ ತಾನು ಮತ್ತು ತನ್ನ ಶಿಷ್ಯರೆಲ್ಲಾ ಕೂಡಲೇ ಬುದ್ಧರ ಶ್ರೇಷ್ಠವಾದ ಆರ್ಯವಾದ ಪಾರಮಾರ್ಥಿಕ ಪಥವನ್ನು ತುಳಿಯಲು ತೀರ್ಮಾನಿಸಿದನು. ತಾನು ಮತ್ತು ಶಿಷ್ಯರು ತನ್ನ ಇಬ್ಬರು ಸೋದರರಂತೆ ಬುದ್ಧರ ಬಳಿಹೋಗಿ 'ಏಹಿ ಭಿಕ್ಖು' ಉಪಸಂಪದವನ್ನು ಕೇಳಿ ಪಡೆದರು.

ಆನಂತರದಲ್ಲಿ ಬುದ್ಧರು ಪರಿವರ್ತಿತರಾದ ಒಂದು ಸಾವಿರದ ಮೂರು ಅಗ್ನಿ ಆರಾಧಕರನ್ನು ಅರ್ಥಾತ್ ಭಿಕ್ಖುಗಳ ಸಮೇತ ಗಯಾಸೀಸದತ್ತ ತೆರಳಿದರು. ಗಯಾಸೀಸದ ಬಳಿ ಬಂದು ಗುಡ್ಡವೊಂದರ ಚಪ್ಪಟೆ ಕಲ್ಲಿನ ಮೇಲೆ ಕುಳಿತರು. ಧ್ಯಾನಸ್ಥ ಸ್ಥಿತಿಯಿಂದ ಬುದ್ಧರು ಹೊಸದಾಗಿ ಸೇರಿದ ಭಿಕ್ಖುಗಳೆಲ್ಲರ ಚಿತ್ತವನ್ನು ಹೊಕ್ಕು ಅವರ ಪಾರಮಾರ್ಥಿಕ ಎಲ್ಲೆಗಳನ್ನು, ಶಕ್ತಿಗಳನ್ನು ಗುರುತಿಸಿ ಇವರೆಲ್ಲರಿಗೆ ಯಾವ ಧಮ್ಮೋಪದೇಶವನ್ನು ನೀಡಿದರೆ ಅವರು ಸಾಂಸಾರಿಕ ಬಂಧನಗಳಿಂದ ಮುಕ್ತರಾಗುತ್ತಾರೆಂದು ಚಿಂತನೆ ಮಾಡಿದರು. ಅವರಿಗೆ ತಮ್ಮ ಮೂರನೇ ಸುತ್ತ 'ಆದಿತ್ತ ಪರಿಯಾಯ' (ಎಲ್ಲವೂ ಸುಡುವಂತಹುದು) ವನ್ನು ಬೋಧಿಸಿದರು. ಯಾಕೆಂದರೆ ಇವರೆಲ್ಲರೂ ಈ ಹಿಂದೆ ಅಗ್ನಿ ಆರಾಧಕರಾಗಿದ್ದರು. ಬುದ್ಧರು 'ಸುಡು' ಎಂಬ ರೂಪಕಾಲಂಕಾರವನ್ನು ಬಳಸಿ ಇಂದ್ರಿಯಗಳು ಮತ್ತು ಅವುಗಳ ಭೋಗವಸ್ತುಗಳಿಂದ ಉಂಟಾಗುವ ಲೋಭ, ದ್ವೇಷ, ಮೋಹಗಳೆಂಬ ಬೆಂಕಿ ನಿರಂತರವಾಗಿ ಸುಡುತ್ತದೆಂಬ ಸಂಗತಿಯನ್ನು ಹೇಳಿದ್ದಾರೆ.

ಈ ಮಹತ್ತರವಾದ ಧಮ್ಮೋಪದೇಶವು ಈ ಇಂದ್ರಿಯಗಳು, ಇಂದ್ರಿಯ ಸಂಬಂಧ ವಸ್ತುಗಳು ಮತ್ತು ಅವುಗಳಿಂದ ಸಂಭವಿಸುವ ಚಿತ್ತ, ಮಾನಸಿಕ ಪ್ರಭಾವ, ವೇದನೆಗಳು, ಸಂಕಲ್ಪಗಳು ಹೇಗೆ ಕಾಮ, ಕ್ರೋಧ, ಮೋಹ, ಹುಟ್ಟು, ವಾರ್ದಕ್ಯ, ಸಾವು, ದುಃಖ, ನೋವು, ಖಿನ್ನತೆ, ಹತಾಶೆ ಎಂಬ ಬೆಂಕಿಯಿಂದ ಹೇಗೆ ಸುಡುತ್ತವೆ ಎಂಬುದನ್ನು ಹೇಳುತ್ತದೆ.



ಈ ಧಮ್ಮೋಪದೇಶವು ಹೀಗೆ ವಾಸ್ತವ ಸಂಗತಿಗಳನ್ನು ಕುರಿತಾಗಿ ಮುಂದುವರಿಯುತ್ತಿದ್ದಂತೆ ಈ ಮೂರುಜನ ಕಸ್ಸಪ ಸೋದರರು ಮತ್ತು ಅವರ ಸಾವಿರ ಜನ ಶಿಷ್ಯರು ತಮ್ಮ ಮಾನಸಿಕ ಆಸವಗಳೆಂಬ ಸಂಯೋಜನೆಗಳನ್ನು ನಾಶಮಾಡಿಕೊಂಡು ಅರಹತರಾದರು. ಸಮ್ಮಾಸಂಬುದ್ಧರ ಜ್ಞಾನೋದಯ ಹೊಂದಿದ ಶಿಷ್ಯರಾದರು.

## ಆದಿತ್ತ ಪರಿಯಾಯ ಸುತ್ತ

'ಸುಡುವುದು' ಎಂಬುದು ಒಂದು ರೂಪಕಾಲಂಕಾರ. ಇದು ಹಲವಾರು ಪಾರಮಾರ್ಥಿಕ ಅಭಿಪ್ರಾಯಗಳನ್ನು ಮತ್ತು ದಿನನಿತ್ಯದ ವಾಸ್ತವ ಸಂಗತಿಗಳನ್ನು ಅನಾವರಣಗೊಳಿಸುತ್ತದೆ. ಸುಡುವುದು ಎಂದರೆ ಇಲ್ಲದಂತೆ ಮಾಡುವುದು, ಉಪಯೋಗಿತವಾಗುವುದು ಅಥವಾ ನಾಶವಾಗುವುದು. ಸುಡುವುದರಿಂದ ಉಂಟಾಗುವ ನೋವು, ಅದರಿಂದ ಉತ್ಪನ್ನವಾದ ದುಃಖವೆಂದೂ ಅರ್ಥವಾಗುತ್ತದೆ. ಇನ್ನೂ ಮುಂದೆ ಹೇಳುವುದಾದರೆ ಅದು ಅಗ್ನಿಧಾತುವನ್ನು ಪ್ರತಿಪಾದಿಸುತ್ತಾ ಬಿಸಿ ಮತ್ತು ಬೆಳಕುಗಳ ಚೈತನ್ಯವನ್ನು ತಾಪ–ಮಿಂಚುಗಳ ಮೂಲವನ್ನು ಹೇಳುತ್ತದೆ. ಈ ಭಿನ್ನ ಅರ್ಥಗಳೆಲ್ಲವನ್ನೂ ಕಲೆಹಾಕಿದಲ್ಲಿ ಅಸ್ತಿತ್ವದ ತ್ರಿಲಕ್ಷಣಗಳನ್ನು, ಚತುರಾರ್ಯ ಸತ್ಯಗಳನ್ನು ಹೇಳುತ್ತದೆ.

ಒಟ್ಟಿನಲ್ಲಿ ಹೇಳುವುದಾದರೆ ಈ ಧಮ್ಮೋಪದೇಶದ ಅಂತರಂಗದಲ್ಲಿ ಹನ್ನೊಂದು ಬಗೆ ಅಗ್ನಿಗಳಿಂದ ಉತ್ಪನ್ನವಾಗುವ ಹನ್ನೆರಡು ಆಯತನಗಳಿವೆ. ಈ ಆದಿತ್ತ ಪರಿಯಾಯ ಸುತ್ತವು ಹೇಗೆ ಆಂತರಿಕ ಸಳಾಯತನಗಳು ಅವುಗಳ ಬಾಹ್ಯ ಸಳಾಯತನಗಳೊಂದಿಗೆ ನಿರಂತರವಾಗಿ ಸಂಘರ್ಷಕ್ಕೊಳಗಾಗಿ ಆರು ಸ್ತರದ ಚಿತ್ತಗಳನ್ನು, ಆರು ಬಗೆಯ ಸ್ಪರ್ಶ ಅಥವಾ ಇಂದ್ರಿಯ ಮತ್ತು ಮಾನಸಿಕ ಚಿತ್ತಗಳನ್ನು ಮತ್ತು ಹದಿನೆಂಟು ಬಗೆಯ ವೇದನೆಗಳನ್ನು ಇತ್ಯಾದಿ ಮತ್ತು ಹೇಗೆ ಈ ಎಲ್ಲ ಅಂಶಗಳು ಎಡೆಬಿಡದೆ ಕಾಮ, ಕ್ರೋಧ, ಮೋಹ, ಹುಟ್ಟು, ವಾರ್ದಕ್ಯ, ಸಾವು, ದುಃಖ, ಶೋಕ, ಖಿನ್ನತೆ, ಹತಾಶೆಗಳಿಂದ ಉರಿಯುತ್ತವೆ ಎಂಬುದನ್ನು ತೋರಿಸುತ್ತವೆ. ಪರಿಣಾಮವಾಗಿ ಕ್ಷಣಕ್ಷಣಕ್ಕೂ ಇಂದ್ರಿಯ ಅಸ್ತಿತ್ವವು ಉರಿದು ನಾಶವಾಗಿ ಏನೂ ಇಲ್ಲದಂತಾಗುತ್ತದೆ. ಹೀಗೆ ಅಗ್ನಿಯು ತನ್ನನ್ನು ತಾನೇ ಪ್ರವಾಹಕ್ಕೆ ತಳ್ಳಿಕೊಂಡು ಅಥವಾ ಓತಪ್ರೋತವಾದ ಬದಲಾವಣೆಗೆ (ಅನಿಚ್ಚ) ಒಳಗಾಗುತ್ತದೆ. ಇದನ್ನೇ ಅಸ್ಥಿರವೆನ್ನುವುದು. ಅಂದರೆ ಅಸ್ತಿತ್ವವೇ ಸ್ಥಿರವಿಲ್ಲದಿರಲು ಅದು ವಾಸ್ತವವಾಗಿ ದುಃಖವೇ ಆಗಿರುತ್ತದೆ. ಇಡೀ ಯಂತ್ರ ರಚನೆಯೇ ವ್ಯಕ್ತಿ ಸಂಬಂಧವಲ್ಲದ ವಿಧಾನದಲ್ಲಿದೆ. ಅಂದರೆ ಇದರಲ್ಲಿ ಕಾರಣ ಕಾರ್ಯ ವಿಧಾನವು ಅಡಗಿದ್ದು ಇದರೊಳಗೆ ನಾನು, ಆತ್ಮ ಎಂಬ ದ್ರವ್ಯ ಇರುವುದಿಲ್ಲ.

ಹೀಗೆ ಅಸ್ತಿತ್ವದ ಮೂರು ಲಕ್ಷಣಗಳಾದ ಅನಿತ್ಯ (ಬದಲಾಗುವಂತಹುದು) ದುಃಖ ಮತ್ತು ಅನಾತ್ಮ. ಇವೇ ಇಡೀ ಪ್ರಪಂಚವನ್ನು ಆಳುತ್ತಿವೆ. ಹೀಗೆ ಸಂಸಾರವು ಅದರ ಮೂಲ ಪ್ರಕೃತಿ ಅಥವಾ ಗುಣ ಅಪರಿಶುದ್ಧವಾದುದು ಮತ್ತು ದುಃಖಕ್ಕೆ ಒಳಪಡುವಂತಹುದು. ಇದನ್ನೇ ಬೌದ್ಧ ಧರ್ಮದಲ್ಲಿ ದುಃಖ ಆರ್ಯಸತ್ಯ ಎಂದು ಕರೆಯುವುದು.

ದುಃಖಕ್ಕೆ ಕಾರಣವೆಂದರೆ ಪ್ರಾಪಂಚಿಕ ಅಸ್ತಿತ್ವದ ಮುಂದುವರಿಕೆಗಾಗಿ ಹಂಬಲಿಸುವುದು ಮತ್ತು ಅದನ್ನು ನಾಮ-ರೂಪಗಳಿಂದ ಅನುಭವಿಸುವುದು. ಆದ್ದರಿಂದ ಈ ನಾಮ-ರೂಪಗಳ ಸಮ್ಮಿಶ್ರಣವಾದ ಈ ಬದುಕೇ ದುಃಖಾನುಭವದ ವಿಧಾನ. ಹೀಗೆ ದುಃಖ ಎನ್ನುವುದು ತನ್ನಿಂದ ತಾನೇ ಮುಂದುವರೆಯುವ ವಿಧಾನವಾಗಿದ್ದು, ಅದರಲ್ಲಿ ಕಾರಣವು ಕಾರ್ಯಕ್ಕೆ ಎಡೆಮಾಡಿಕೊಟ್ಟರೆ, ಆ ಕಾರಣವು ಇನ್ನೊಂದು ಹೊಸ ಕಾರಣವನ್ನು ಸೃಷ್ಟಿಸುತ್ತದೆ. ಹೀಗೆ ಇದು ಮೊಟ್ಟೆ-ಕೋಳಿ ನಂತರ ಮೊಟ್ಟೆ-ಕೋಳಿಯ ನಿರಂತರತೆಯಂತೆ ಸಾಗುತ್ತದೆ.

'ಸುಡು' (ಉರಿಯುವ) ರೂಪಕಾಲಂಕಾರವು ನಿರಂತರವಾಗಿ ನಾಶಮಾಡುವ ಮತ್ತು ಮರುಸೃಷ್ಟಿಯಾಗುವ ಅರ್ಥವನ್ನು ಕೊಡುವುದರಿಂದ ಅದು ವಿಶ್ವಕ್ಕೆ ಅನ್ವಯವಾಗುವ 'ಅನಿತ್ಯ' ತತ್ವವನ್ನು ಸಾರುತ್ತದೆ. 'ಸುಡುವುದು' ಎನ್ನುವುದು ನೋವು, ಸಂಕಟಗಳಿಗೂ ಅನ್ವಯಿಸುತ್ತದೆ. ಬದುಕಿನ ಸಾರವೇ 'ದುಃಖ' ಸತ್ಯವಲ್ಲವೆ? ಈ ದುಃಖದ ಜೊತೆಗೆ ದುಃಖಕ್ಕೆ ಕಾರಣವಾದ ತನ್ಹಾ ಸೇರಿಕೊಂಡು ಸಾರ್ವತ್ರಿಕ ಸತ್ಯವಾದ 'ದುಃಖ'ವನ್ನು ಹೇಳುತ್ತದೆ. ಈ ಎರಡೂ ನಿಯಮಗಳು (ಅನಿತ್ಯ, ದುಃಖ) ಅನತ್ತ (ಕಾರಣ-ಕಾರ್ಯ ಸಂಬಂಧ)ದ ಮೇಲೆ ನಡೆಯುವಂಥಹವು.

ಈ ತಿಲಕ್ಖಣಗಳು (ಅನಿಚ್ಚ, ದುಃಖ, ಅನತ್ತ) ಹೊರತಾಗಿ ಈ ಜಗತ್ತನ್ನು ಆಳುವ ಪರಸ್ಪರ ವೈರುಧ್ಯಗಳ ಜೋಡಿಗಳಿವೆ. ಇವನ್ನು 'ಲೋಕ ಧಮ್ಮಗಳು' ಎಂದು ಕರೆಯುತ್ತಾರೆ. ಲಾಭ-ನಷ್ಟ, ಕೀರ್ತಿ-ಅಪಕೀರ್ತಿ, ಹೊಗಳಿಕೆ-ತೆಗಳಿಕೆ, ಸುಖ-ದುಃಖ ಎಂಬಿತ್ಯಾದಿ ಒಂದೇ ನಾಣ್ಯದ ಎರಡು ಮುಖಗಳು ಈ ಜಗತ್ತಿನಲ್ಲಿವೆ. ಮೊದಲೆರಡು ಆರ್ಯಸತ್ಯಗಳಾದ ದುಃಖ ಮತ್ತು ದುಃಖ ಸಮುದಯ ಲೋಕಧಮ್ಮದ ಕರಿಛಾಯೆಯನ್ನು ವರ್ಣಿಸಿದರೆ ಆನಂತರದ ಎರಡು ಸತ್ಯಗಳಾದ ದುಃಖ ನಿರೋಧ (ನಿಬ್ಬಾಣ) ಮತ್ತು ದುಃಖ ನಿರೋಧ ಗಮನ (ಅಷ್ಟಾಂಗ ಮಾರ್ಗ)ಗಳು ಲೋಕಧಮ್ಮದ ಬೆಳಕಿನ ಭಾಗವನ್ನು ವರ್ಣಿಸುತ್ತವೆ.

'ಸುಡು' ಎನ್ನುವ ರೂಪಕಾಲಂಕಾರದಲ್ಲಿ ಬೆಳಕು ಮತ್ತು ಬಿಸಿ ಎಂಬ ಮೂಲಧಾತುಗಳೂ ಸೇರಿವೆ. ಬೆಳಕು ಅವಿದ್ಯೆ ಎನ್ನುವ ಕತ್ತಲೆಯನ್ನು ಹೋಗಲಾಡಿಸಿದರೆ ಬಿಸಿ ಎನ್ನುವುದು ಪ್ರೀತಿ ಮತ್ತು ಸುಖ ಎನ್ನುವ ಪಾರಮಾರ್ಥಿಕ ಬಿಸಿಯಿಂದ ಸ್ವಾರ್ಥಕೇಂದ್ರಿತ ಬದುಕಿನ ಚಳಿಯನ್ನು ನಾಶಮಾಡುತ್ತದೆ. ಹೀಗೆ ಬೆಳಕು-ಬಿಸಿಗಳು ಮೂರು ಮತ್ತು ನಾಲ್ಕನೇ ಆರ್ಯಸತ್ಯಗಳನ್ನು ಪ್ರತಿಪಾದಿಸುತ್ತವೆ.

ಬುದ್ಧರು ಹೀಗೆ ಹೇಳಿದ್ದಾರೆ: "ದುಃಖಞ್ಚೇವ ಪಞಾಪೇಮಿ, ದುಃಖಸ್ಸ ಚ ನಿರೋಧೋ - ಈ ಎರಡು ಸಂಗತಿಗಳನ್ನು ನಾನು ಹೇಳುತ್ತೇನೆ: ದುಃಖವಿದೆ ಮತ್ತು ದುಃಖಕ್ಕೆ ಅಂತ್ಯವಿದೆ." ಅಂದರೆ ನಾನು ನಾಲ್ಕು ಆರ್ಯಸತ್ಯಗಳನ್ನಷ್ಟೇ ಬೋಧಿಸುವುದು. ಹೇಗೆ ಬೆಳಕು ಬಿಸಿಗಳೆಂಬ ಧಾತುಗಳು ಸೂರ್ಯನಿಂದ ಬಂದಿವೆಯೋ, ಈ ಚತುರಾರ್ಯ ಸತ್ಯಗಳು ಪಾರಮಾರ್ಥಿಕ ಸೂರ್ಯನಾದ ಬುದ್ಧ ಮೂಲವಾದವು. ಆತನು ಸಾಂಸಾರಿಕ ಬಂಧನದ ಕತ್ತಲನ್ನು ಹೋಗಲಾಡಿಸುವವನು. ಖಂಡಿತವಾಗಿಯೂ ಬುದ್ಧನ ಈ ಮೂರನೇ



ಸುತ್ತ 'ಆದಿತ್ತ ಪರಿಯಾಯ ಸುತ್ತ'ವು ಮೊದಲನೆಯ ಮತ್ತು ಎರಡನೆಯ ಸುತ್ತಗಳಂತೆ ಅನನ್ಯವಾದುದು ಮತ್ತು ಗಂಭೀರವಾದುದು.

## ತಿರೋಕುಡ್ಡ ಸುತ್ತ

ವೇಳುವನ ವಿಹಾರವನ್ನು ದಾನ ಮಾಡಿದ ದಿನದ ರಾತ್ರಿಯಂದೇ ದೊರೆ ಬಿಂಬಿಸಾರನಿಗೆ ಒಂದು ಭಯಾನಕ ಅನುಭವವಾಯಿತು. ತನ್ನ ಅರಮನೆಯ ಆವರಣದ ಹೊರಗಡೆ ಪ್ರೇತಗಳು ಜೋರಾಗಿ ಅರಚುತ್ತಿರುವುದನ್ನು ನೋಡಿದನು. ಅವು ನೋಡಲು ಭಯಾನಕ ರೂಪತಳೆದು ಕರ್ಕಶ ಶಬ್ದ ಮಾಡುತ್ತಿದ್ದವು. ಮಾರನೆದಿನ ದೊರೆಯು ಬುದ್ಧರ ಬಳಿ ಹೋಗಿ ಹಿಂದಿನ ರಾತ್ರಿಯ ಭಯ ಮೂಡಿಸಿದ ಅನುಭವವನ್ನು ಹೇಳಿ ಈ ರೀತಿಯ ದೃಶ್ಯಾವಳಿಗಳು ಮುಂದೆ ತನಗೇನಾದರೂ ಆಪತ್ತು ಸಂಭವಿಸುವುದನ್ನು ಸೂಚಿಸುತ್ತವೆಯೇ ಎಂದು ಕೇಳಿದನು.

ಬುದ್ಧರು ಅವನನ್ನು ಶಾಂತಗೊಳಿಸಿ ಹೀಗೆ ಹೇಳಿದರು: "ಮಹಾರಾಜನೆ, ಭಯಪಡಬೇಡ. ಈ ಘಟನೆಯಿಂದ ನಿನಗಾಗಲಿ, ನಿನ್ನ ರಾಜ್ಯಕ್ಕಾಗಲಿ ಯಾವ ಕೇಡು ಸಂಭವಿಸದು." ಆಗ ರಾಜನು "ಇಂತಹ ಘಟನೆ ಯಾಕಾದರೂ ಸಂಭವಿಸಬೇಕು?" ಎಂದು ಕೇಳಿದನು. ಆಗ ಬುದ್ಧರು: "ಈ ಪ್ರೇತಗಳೆಲ್ಲವೂ ನಿನ್ನ ಹಿಂದಿನ ಜನ್ಮಗಳ ಬಂಧುಗಳು" ಎಂದು ಹೇಳಿ ಹಿಂದಿನ ವೃತ್ತಾಂತಗಳ ವಿವರಗಳನ್ನೆಲ್ಲವನ್ನೂ ಅನಾವರಣ ಮಾಡಿದರು.

ಬುದ್ಧ ಭಗವಾನರು ಹೀಗೆ ಹೇಳಿದರು: "ಫುಸ್ಸ ಬುದ್ಧರು ತೊಂಭತ್ತೆರಡು ಕಲ್ಪಗಳ ಹಿಂದೆ ಇದ್ದರು. ಆಗ ಅವರ ತಂದೆ ಜಯಸೇನನು ಕಾಶಿಯ ರಾಜ. ಆಗ ನೀನು ಅವರ ಪ್ರಧಾನಮಂತ್ರಿಯಾಗಿದ್ದೆ. ಫುಸ್ಸ ಬುದ್ಧರಿಗೆ ಅರಹತ ಭಿಕ್ಖುಗಳ ಒಂದು ದೊಡ್ಡ ಪರಿವಾರವೇ ಇತ್ತು. ರಾಜನಿಗೆ ತನ್ನ ಮಗ ಬುದ್ಧನ ಮೇಲೆ ಅಪಾರ ಪ್ರೀತಿ ಇತ್ತು. ಅವನು ತ್ರಿರತ್ನಗಳನ್ನು ಕುರಿತು ಹೀಗೆ ಹೇಳುತ್ತಿದ್ದ: 'ಇದು ನನ್ನ ಬುದ್ಧ, ಇದು ನನ್ನ ಧಮ್ಮ, ಇದು ನನ್ನ ಸಂಘ'. ಅವನಿಗೆ ಮೂರುಜನ ಬೇರೆ ಗಂಡು ಮಕ್ಕಳೂ ಇದ್ದರು. ಅವರಿಗೆ ರಾಜ್ಯಾಡಳಿತವನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಕೊಟ್ಟಿದ್ದನು ಮತ್ತು ತಾನು ಬುದ್ಧರ ಮತ್ತು ಅವರ ವಿಶಾಲ ಭಿಕ್ಖು ಪರಿವಾರವನ್ನು ನೋಡಿಕೊಳ್ಳುತ್ತಿದ್ದರು. ತನ್ನ ಅರಮನೆಗೆ ಅಂಟಿಕೊಂಡಂತೆಯೇ ಒಂದು ವಿಹಾರವನ್ನು ಕಟ್ಟಿಸಿ ಅರಮನೆ ಮತ್ತು ವಿಹಾರದ ನಡುವಿನ ದಾರಿಯ ಇಕ್ಕೆಲದಲ್ಲೂ ಗೋಡೆಗಳನ್ನು ಕಟ್ಟಿಸಿ ಬುದ್ಧರು ಮತ್ತು ಅವರ ಶಿಷ್ಯರು ಆ ದಾರಿಯಲ್ಲಿ ಭಿಕ್ಷೆಗಾಗಿ ಬಂದು, ಅದೇ ದಾರಿಯಲ್ಲಿ ಹಿಂದಿರುಗುವಂತೆ ಮಾಡಲಾಗಿತ್ತು. ಆ ವ್ಯವಸ್ಥೆ ಹೇಗಿತ್ತೆಂದರೆ ಅವನ ಮಕ್ಕಳಾಗಲಿ ಅಥವಾ ಊರ ನಾಗರಿಕರಾಗಲಿ, ಬಂಧುಗಳಾಗಲಿ ಬುದ್ಧ ಮತ್ತು ಅವರ ಸಂಘಕ್ಕೆ ಸೇವೆ ಸಲ್ಲಿಸಲು ಅವಕಾಶ ದೊರೆಯದಂತೆ ಮಾಡಿದ್ದನು. ಈ ರೀತಿಯ ವ್ಯವಸ್ಥೆಯಿಂದ ಮಕ್ಕಳಿಗೆ ಮತ್ತು ನಾಗರಿಕರಿಗೆ ಅಸಂತೋಷವಾಗಿತ್ತು. ಅದಕ್ಕೆ ಅವರು ಸಂಚೊಂದನ್ನು ಹೂಡಿ ರಾಜ್ಯದ ಎಲ್ಲೆಗಳಲ್ಲಿ ಜನ ದಂಗೆ ಏಳುತ್ತಿದ್ದಾರೆಂಬ ಸುಳ್ಳು ವರದಿ ಮಾಡಿದರು.

ರಾಜನು ದಂಗೆಯನ್ನು ಹತ್ತಿಕ್ಕಲು ಯಾರಾದರೊಬ್ಬರನ್ನು ಕಳುಹಿಸಬೇಕಾಯಿತು. ಮಕ್ಕಳು ಈ ಕಾರ್ಯವನ್ನು ಕೈಗೆತ್ತಿಕೊಂಡು ಅದು ಜಯಪ್ರದವಾಯಿತೆಂಬಂತೆ ನಾಟಕವಾಡಿದರು.

ರಾಜ ಜಯಸೇನನಿಗೆ ಸಂತೋಷವಾಗಿ ತನ್ನ ಪುತ್ರರಿಗೆ ಏನಾದರೂ ಬಹುಮಾನ ಕೇಳಬಹುದೆಂದು ಹೇಳಿದನು. ಈ ಪುತ್ರರಿಗೆ ಒಂದೇ ಒಂದು ವಿನಂತಿ ಇತ್ತು. ಅದೇನೆಂದರೆ 'ಬುದ್ಧ ಮತ್ತು ಭಿಕ್ಖುಗಳ ಬಳಿ ಇದ್ದು ಅವರಿಗೆ ಗೌರವದಿಂದ ಸೇವೆಯನ್ನು ಸಲ್ಲಿಸುವುದು.' ಅದಕ್ಕೆ ರಾಜನು 'ಬೇರೆ ಏನನ್ನಾದರೂ ಆಯ್ಕೆಮಾಡಿಕೊಳ್ಳಿ' ಎಂದನು. ಈ ರಾಜಕುಮಾರರು ಬೇರೆ ಯಾವುದೂ ತಮಗೆ ಬೇಕಿಲ್ಲವೆನ್ನಲು ಪೇಚಿಗೆ ಸಿಕ್ಕಂತಾಯಿತು.

ಆಗ ನಾಗರಿಕರು ರಂಗಕ್ಕೆ ಇಳಿದು ರಾಜಕುಮಾರರಿಗೆ ಬುದ್ಧರ ಸೇವೆ ಸಲ್ಲಿಸುವ ಅವಧಿಯನ್ನು ಏಳು ವರ್ಷಕ್ಕೆ ಇಳಿಸುವಂತೆ ಕೇಳಿಕೊಂಡರು. ಅದರಂತೆಯೇ ರಾಜಕುಮಾರರು ಏಳು ವರ್ಷಗಳ ಸೇವೆ ಸಲ್ಲಿಸಲು ರಾಜನಿಗೆ ಬೇಡಿಕೆ ಇಟ್ಟರು. ಇದನ್ನು ರಾಜನು ಸಮ್ಮತಿಸದಿರಲು ರಾಜಕುಮಾರರು ಅವಧಿಯನ್ನು ರಾಜತಾಂತ್ರಿಕ ಬುದ್ಧಿಯಿಂದ ಏಳರಿಂದ ಆರು, ಐದು, ನಾಲ್ಕು, ಮೂರು, ಎರಡು, ಒಂದಕ್ಕೆ ಇಳಿಸಿ ಮಂಡಿಸಲು ಅದಕ್ಕೂ ಮಣಿಯದೆ ಹನ್ನೆರಡು ತಿಂಗಳಿನಿಂದ ಮೂರಕ್ಕೆ ಬರಲು ಅದನ್ನು ರಾಜನು ಒಂದು ವಿಶೇಷ ಬಹುಮಾನವೆಂಬಂತೆ ಸಮ್ಮತಿಸಿದನು.

ಈಗ ಕಾರ್ಯಗಳು ಗರಿಗೆದರಿದವು. ರಾಜ್ಯದ ಪ್ರತಿನಿಧಿಗಳಾದ ರಾಜಕುಮಾರರು ಪ್ರಧಾನಮಂತ್ರಿಯನ್ನು ಬುದ್ಧರ ಮತ್ತು ಅವರ ಶಿಷ್ಯರ ವರ್ಷಾವಾಸಕ್ಕಾಗಿ ಭವ್ಯವಾದ ಧಾರ್ಮಿಕ ಸೇವೆಯನ್ನು ವ್ಯವಸ್ಥೆ ಮಾಡುವಂತೆ ಹೇಳಿದರು. ಪ್ರಧಾನಮಂತ್ರಿಯು ಹಾಗೆಯೇ ಫುಸ್ಸ ಬುದ್ಧರಿಗೂ ಮತ್ತು ಅವರ ಅರಹತ ಶಿಷ್ಯರಿಗೂ ರಾಜಧಾನಿಯ ಹೊರಗಿನ ವನದಲ್ಲಿ ಮೂರು ತಿಂಗಳ ಕಾಲ ಉಳಿದುಕೊಳ್ಳಲು ವಸತಿ ಸೌಕರ್ಯಕ್ಕಾಗಿ ಸೂಕ್ತವಾದ ವಿಹಾರಗಳನ್ನು ಕಟ್ಟಿಸಿದರು.

ಪ್ರಧಾಮಂತ್ರಿಯು ಬುದ್ಧರನ್ನು ಮತ್ತು ಶಿಷ್ಯರನ್ನು ನೋಡಿಕೊಳ್ಳಲು ಎರಡೂವರೆ ಸಾವಿರ ಅಧಿಕಾರಿಗಳನ್ನು ನೇಮಿಸಿ ಉತ್ತಮವಾದ ಭಿಕ್ಷೆಗಾಗಿ ಆಹಾರವನ್ನು ತಯಾರಿಸಿ ಸರಿಯಾದ ಸಮಯಕ್ಕೆ ದಾನ ಮಾಡುವಂತೆ ವ್ಯವಸ್ಥೆ ಮಾಡಿದನು. ಇನ್ನೂ ಹನ್ನೊಂದು ಸಾವಿರ ಅಧಿಕಾರಿಗಳನ್ನು ಭಿಕ್ಷೆಗೆ ಬೇಕಾದ ದವಸಧಾನ್ಯ ಮತ್ತು ಭಿಕ್ಖುಗಳಿಗೆ ಬೇರೆ ಬೇರೆ ಪರಿಕರಗಳನ್ನು ಒದಗಿಸಲು ವ್ಯವಸ್ಥೆ ಮಾಡಿದನು. ಸುಮಾರು ಹದಿನೈದು ಸಾವಿರ ಅಧಿಕಾರಿಗಳೆಲ್ಲರೂ ಪ್ರಧಾನಮಂತ್ರಿಯ ಸಂಬಂಧಿಗಳ ಸಮೂಹದಿಂದಲೇ ಬಂದವರು.

ಭಿಕ್ಷೆ ದಾನ ವ್ಯವಸ್ಥೆಯು ರಾಜನ, ರಾಜ ಪ್ರತಿನಿಧಿಗಳ, ಪ್ರಧಾನಮಂತ್ರಿಯ ಮತ್ತು ಕೋಶಾಧಿಕಾರಿಗಳ ಇಚ್ಛೆ ಮತ್ತು ತೃಪ್ತಿಗೆ ತಕ್ಕಂತೆ ಆಗಿತ್ತು. ಇಷ್ಟಾದಾಗ್ಯೂ ಯಾವ ಪ್ರಧಾನಮಂತ್ರಿಯ ಅಧಿಕಾರಿಗಳೆಲ್ಲರೂ ಧವಸಧಾನ್ಯಾದಿಗಳನ್ನು ಸಂಗ್ರಹಿಸುತ್ತಿದ್ದರೋ ಅವರು ಭಿಕ್ಷಾ ದಾನದ ಅವಶ್ಯಕತೆಗಿಂತ ಹೆಚ್ಚು ಸಂಗ್ರಹಿಸಿದ್ದರು. ಅವರು ವಂಚಕರು ಮತ್ತು ದುಷ್ಟ ಮನಸ್ಸಿನವರಾಗಿದ್ದರು. ಅವರು ಬುದ್ಧರು ಮತ್ತು ಶಿಷ್ಯರಿಗಾಗಿ ಸಂಗ್ರಹಿಸಿದ ಹೇರಳ ದಸ್ತಾನನ್ನು ಗೊತ್ತಾಗದಂತೆ ಅಪಹರಿಸಿ ತಮ್ಮ ಕುಟುಂಬಗಳಿಗೆ ಸಾಗಿಸುತ್ತಿದ್ದರು.



ಹಾಗೆಯೇ ಬುದ್ಧರು ಮತ್ತು ಸಂಘಕ್ಕಾಗಿ ತಯಾರಿಸಿದ ಆಹಾರವನ್ನು ದಾನ ನೀಡುವ ಮುನ್ನವೇ ತಿನ್ನುತ್ತಿದ್ದರು. ಇಂತಹ ವೃತ್ತಿಯನ್ನು ಕೆಲವರು ಪ್ರಶ್ನಿಸಿದಾಗ ಭಿಕ್ಷಾದಾನವಾಗುತ್ತಿರುವಾಗಲೇ ಗೊಂದಲವೆಬ್ಬಿಸುತ್ತಿದ್ದರು. ಇಲ್ಲವೇ ಜನರು ಬುದ್ಧರನ್ನು ಕಂಡು ಗೌರವಿಸಿ ನಮಸ್ಕರಿಸಲು ಬಂದಾಗ ಖಾಸಗಿಯಾಗಿ ಉಡುಗೊರೆಗಳನ್ನು ಕೊಡುವಾಗ, ಧಮ್ಮಪ್ರವಚನವಾಗುತ್ತಿದ್ದಾಗ ಗಲಾಟೆ ಎಬ್ಬಿಸುತ್ತಿದ್ದರು. ಖಾಸಗಿ ಉಡುಗೊರೆಗಳು ಬುದ್ಧರಿಗೆ ಬರುತ್ತಿರುವುದನ್ನು ಈ ಲಂಚಕೋರ ಅಧಿಕಾರಿಗಳು ಲಪಟಾಯಿಸುತ್ತಿದ್ದರು.

ಮೂರು ತಿಂಗಳ ವರ್ಷಾವಾಸ ಮುಗಿದ ನಂತರ ಬುದ್ಧರನ್ನು ಮತ್ತು ಅವರ ಅರಹತ ಶಿಷ್ಯರನ್ನು ಕಾಶಿ ರಾಜಧಾನಿಯಲ್ಲಿರುವ ವಿಹಾರಕ್ಕೆ ಕರೆದುಕೊಂಡು ಹೋದರು. ಕಾಲಾಂತರದಲ್ಲಿ ಬುದ್ಧರು ಮಹಾ ಪರಿನಿಬ್ಬಾಣವನ್ನು ಹೊಂದಿದರು. ಹಾಗೆಯೇ ಬುದ್ಧರ ಬಹುಸಂಖ್ಯೆಯ ಅರಹತರೂ ಪರಿನಿಬ್ಬುತರಾದರು. ರಾಜ ಜಯಸೇನನು, ರಾಜಪ್ರತಿನಿಧಿಗಳು, ಪ್ರಧಾನಮಂತ್ರಿ ಮತ್ತು ಕೋಶಾಧಿಪತಿ ಮತ್ತು ಅವರ ಪರಿವಾರಗಳೆಲ್ಲವೂ ಕಾಲಾಂತರದಲ್ಲಿ ಗತಿಸಿದರು. ಅವರೆಲ್ಲರೂ ದಿವ್ಯಲೋಕಗಳಲ್ಲಿ ಪುನರ್ಜನ್ಮ ಪಡೆದು ಬುದ್ಧರನ್ನು ಮತ್ತು ಸಂಘವನ್ನು ಭಕ್ತಿಯಿಂದ ಸೇವಿಸುತ್ತಿದ್ದರು.

ಪ್ರಧಾನಮಂತ್ರಿಯ ಸಂಬಂಧಿಗಳಾದ ಯಾರೆಲ್ಲಾ ವಂಚಕ ಲಂಚಕೋರ ಅಧಿಕಾರಿಗಳಿದ್ದರೋ ಅವರೆಲ್ಲಾ ನಿರಯದಲ್ಲಿ ಹುಟ್ಟಿದರು. ಅಲ್ಲಿ ಅವರು ಬಹಳ ವರ್ಷಗಳ ಕಾಲ ತೀವ್ರ ಶಿಕ್ಷೆಯನ್ನನುಭವಿಸಿದರು. ಆ ಸಂದರ್ಭದಲ್ಲೇ ಐದುಜನ ಬುದ್ಧರು ಬುದ್ಧ ಫುಸ್ಸರ ನಂತರ ಬಂದ ಆರನೇ ಕಸ್ಸಪ ಬುದ್ಧರ ಕಾಲದಲ್ಲಿ ಈ ಪ್ರಧಾನಮಂತ್ರಿ ಸಂಬಂಧಿಗಳೆಲ್ಲಾ ನಿರಯದಿಂದ ನಿರ್ಗಮಿಸಿ ಪ್ರೇತಲೋಕದಲ್ಲಿ ಪುನರ್ಜನ್ಮ ಪಡೆದರು.

ಒಂದುದಿನ ಈ ಎಲ್ಲ ಪ್ರೇತಗಳು ಕಸ್ಸಪ ಬುದ್ಧರ ಬಳಿ ಹೋಗಿ ತಮಗೆ ಈ ಯಾತನೆಯಿಂದ ಬಿಡುಗಡೆ ಯಾವಾಗ ಆಗುವುದೆಂದು ಕೇಳಿದರು. ಆಗ ಕಸ್ಸಪ ಬುದ್ಧರು ಹೇಳಿದರು: "ನನ್ನ ಈ ಶಾಸನ ಕಾಲದಲ್ಲಿ ನಿಮಗೆ ಮುಕ್ತಿ ದೊರೆಯುವುದಿಲ್ಲ. ಆದರೆ ಬುದ್ಧ ಗೌತಮರು ಈ ಲೋಕದಲ್ಲಿ ಜನ್ಮ ತಳೆದಾಗ, ಅವರ ಹಿಂದಿನ ಪ್ರಧಾನಮಂತ್ರಿಯು ಬಿಂಬಿಸಾರನಾಗಿ ಹುಟ್ಟುತ್ತಾನೆ. ಬುದ್ಧನ ಪರಮೋತ್ತಮ ಶಿಷ್ಯನಾದ ಬಿಂಬಿಸಾರನು ವೇಳುವನ ವಿಹಾರವನ್ನು ಬುದ್ಧರಿಗೆ ದಾನಮಾಡಿ ಆ ದಾನ ಸಂದರ್ಭದಲ್ಲಿ ಆ ದಾನ ಪುಣ್ಯವನ್ನು ನಿಮ್ಮೊಂದಿಗೆ ಹಚ್ಚಿಕೊಳ್ಳುತ್ತಾನೆ, ಆಗ ನೀವೆಲ್ಲಾ ಸಂಕಟದಿಂದ ಮುಕ್ತರಾಗುವಿರಿ" ಎಂದು ನುಡಿದರು. ಹೀಗೆ ಈ ಪ್ರೇತಗಳು ರಾಜನ ಬಳಿ ಹೋಗಿ ಅವನಿಗೆ ಭಯ ಹುಟ್ಟಿಸಿದ್ದವು. ಆದ್ದರಿಂದ ರಾಜನು ಬುದ್ಧರ ಬಳಿ ಹೋಗಿ ತನ್ನನ್ನು ಪ್ರೇತಗಳು ಏಕೆ ತೊಂದರೆ ಕೊಡುತ್ತಿವೆ ಎನ್ನುವುದಕ್ಕೆ ಕಾರಣವನ್ನು ಕೇಳಲು ಅದಕ್ಕೆ ಕಾರಣವನ್ನು ಮತ್ತು ಉಪಶಮನವನ್ನು ಹೇಳಿದರು. ಆ ಪ್ರಕಾರವಾಗಿ ರಾಜನು ಬುದ್ಧರಿಗೆ ತಾನು ಇಂದೇ ಭಿಕ್ಷೆಯನ್ನು ದಾನ ಮಾಡಬಹುದೇ ಎಂದು ವಿನಂತಿಸಿಕೊಳ್ಳಲು ಬುದ್ಧರು ಅದಕ್ಕೆ ಸಮ್ಮತಿಸುತ್ತಾರೆ. ರಾಜನು ಕೂಡಲೇ ತನ್ನ ಅರಮನೆಗೆ ಹೋಗಿ ಹಿಂದಿನ ದಿನ ಯಾವ ರೀತಿಯಲ್ಲಿ ಭಿಕ್ಷಾ ದಾನವನ್ನು ಮಾಡಿದನೋ ಅದೇರೀತಿ ಭಿಕ್ಷೆ ವ್ಯವಸ್ಥೆಯನ್ನು

ಮಾಡಿದನು. ಭಿಕ್ಷಾಹಾರವು ತಯಾರಾದ ಮೇಲೆ ರಾಜನು ಹೋಗಿ ಬುದ್ಧರಿಗೆ ಭಿಕ್ಷೆ ಸಿದ್ಧವಿದೆ ಎಂದು ತಿಳಿಸಿದನು. ಬುದ್ಧರು ತಮ್ಮ ಅರಹತ ಶಿಷ್ಯರೊಂದಿಗೆ ಅರಮನೆಗೆ ಹೋಗಿ ತಮ್ಮ ಸಿದ್ಧಪಡಿಸಿದ ಆಸನದ ಮೇಲೆ ಕುಳಿತರು. ಭಿಕ್ಷಾಹಾರವನ್ನು ತಮಗೆ ಅರ್ಪಿಸುವ ಮುನ್ನ ತಮ್ಮ ಅತಿಮಾನುಷ ಶಕ್ತಿಯಿಂದ ಸಂಕಟಗಳಿಗೆ ತುತ್ತಾಗಿ ದಯನೀಯ ಸ್ಥಿತಿಯಿಂದ ಅರಚುತ್ತಾ ಅಡಗಿ ಕುಳಿತಿರುವ ಪ್ರೇತಗಳು ರಾಜನಿಗೆ ಕಾಣುವಂತೆ ಮಾಡಿದರು. ಬುದ್ಧರು ಮತ್ತು ಭಿಕ್ಖುಗಳು ಭಿಕ್ಷಾಹಾರವನ್ನು ಸ್ವೀಕರಿಸಿದ ಮೇಲೆ ಪುಣ್ಯಾನುಮೋದನೆ ಸಮಾರಂಭವು ಜರುಗಿತು.

ರಾಜನು ಭಿಕ್ಷಾಹಾರ ದಾನವನ್ನು ಮತ್ತು ವೇಳುವನ ವಿಹಾರ ದಾನ ಇವೆರಡರಿಂದ ಗಳಿಸಿದ ಪುಣ್ಯವನ್ನು ಪ್ರೇತಗಳೊಂದಿಗೆ ಹಂಚಿಕೊಂಡನು. ಬುದ್ಧರು ಆಗ ತಿರೋಕುಡ್ಡ ಸುತ್ತವನ್ನು (ಗೋಡೆಯಾಚೆಗಿನ ಸುತ್ತ) ಉಪದೇಶಿಸಿದರು. ಈ ಸುತ್ತದಲ್ಲಿ ಪ್ರೇತಗಳ ಬಹುಕಾಲದ ಸಂಕಟ, ಅಸಹಾಯಕತೆ ಮತ್ತು ದಯನೀಯ ಪರಿಸ್ಥಿತಿಯ ವರ್ಣನೆ ಇದೆ. ಈ ಸುತ್ತದ ಮುಖ್ಯಾಂಶವೆಂದರೆ ಒಬ್ಬನು ತಾನು ಮಾಡಿದ ಉತ್ತಮ ಕಾರ್ಯದ ಪುಣ್ಯವನ್ನು ಗತಿಸಿದ ತಂದೆ-ತಾಯಿಗಳಿಗೆ, ರಕ್ತಬಂಧುಗಳೊಂದಿಗೆ ಹಂಚಿಕೊಳ್ಳುವುದು. ಇದನ್ನು ಕೃತಜ್ಞತಾ ಭಾವದಿಂದ ಗತಿಸಿದವರಿಗೆ ಹಂಚಬೇಕು. ಅವರಿಗೆ ಹೀಗೆ ಹೇಳಬೇಕು: "ಅವರು (ಅವನು, ಅವಳು, ಅವರು) ಈ ಪುಣ್ಯ ದಾನದಿಂದ ಸಂಕಟದ ಸ್ಥಿತಿಯಿಂದ ಮುಕ್ತರಾಗಲಿ". ಒಳ್ಳೆಯ ಕರ್ಮಗಳಿಂದ ಆರ್ಜಿಸಿದ ಪುಣ್ಯವನ್ನು ಗತಿಸಿದವರಿಗೆ ಹಂಚುವುದು ಒಂದು ನೈತಿಕ ಕರ್ತವ್ಯ. ಒಬ್ಬನು ತನ್ನ ಉತ್ತಮ ಭವಿಷ್ಯಕ್ಕಾಗಿಯೂ ತಾನು ಗಳಿಸಿದ ಪುಣ್ಯ ಕರ್ಮಗಳೆಲ್ಲದರ ಫಲವನ್ನು ಗತಿಸಿದವರೊಂದಿಗೆ ಹಂಚಿಕೊಳ್ಳಬೇಕು. ಮುಂದೊಂದು ದಿನ ತಾನೇ ಗತಿಸಿ ಹೋದಮೇಲೆ ಅವನು ಈ ರೀತಿಯ ಪುಣ್ಯಾನುಮೋದನೆಯನ್ನು ನಿರೀಕ್ಷಿಸಲು ಅರ್ಹನಾಗುತ್ತಾನೆ.

ಧಮ್ಮೋಪದೇಶ ಮುಗಿದಮೇಲೆ ಬುದ್ಧರು ತಮ್ಮ ಅತಿಮಾನುಷ ಶಕ್ತಿಯನ್ನು ಪ್ರಯೋಗಿಸಿ ಈ ರಾಜ ಸಂಬಂಧಿಗಳಿಗೆಲ್ಲ ಏನಾಯಿತೆಂಬುದನ್ನು ತೋರಿಸಿದರು. ಪುಣ್ಯದಾನ ಪಡೆದ ಆ ಪ್ರೇತಗಳೆಲ್ಲವೂ ಕೂಡಲೇ ಪ್ರೇತಲೋಕದಿಂದ ಮುಕ್ತರಾಗಿ ಆಹ್ಲಾದಮಯ ಚಾತುಮ್ಮಹಾರಾಜಿಕ ದಿವ್ಯಲೋಕಕ್ಕೆ ಹೋದರು. ಬುದ್ಧರು ತಮ್ಮ ನಲವತ್ತೈದು ವರ್ಷಗಳ ಪಾರಮಾರ್ಥಿಕ ಧಮ್ಮ ಪ್ರಚಾರದಲ್ಲಿ ಹಲವಾರುಬಾರಿ ಈ ಸುತ್ತವನ್ನು ಹೇಳಿ ಶ್ರಾವಕರಲ್ಲಿ ಸಂವೇಗವನ್ನು ಸೃಷ್ಟಿಸಿದರು.

ಈ ಪುಣ್ಯಾನುಮೋದನೆಯ ಕ್ರಿಯೆಯು ಜಗತ್ತಿನಾದ್ಯಂತ ಇರುವ ಬೌದ್ಧರ ಮನೆಗಳಲ್ಲಿ ಪ್ರಚಲಿತವಿದೆ. ಬೌದ್ಧರು ಗತಿಸಿದ ಹಿರಿಯ ಕಿರಿಯರಿಗೆ ಮತ್ತು ಬದುಕಿರುವವರಿಗೆ ಪುಣ್ಯಾನುಮೋದನೆಯನ್ನು ಮಾಡಲು ಇಷ್ಟಪಡುತ್ತಾರೆ. ಒಂದು ಸಾಧಾರಣ ಅಥವಾ ನಗಣ್ಯವಾದ ಪುಣ್ಯಕರ್ಮವನ್ನು ಮಾಡಿದಾಗಲೂ ಅದರ ಪುಣ್ಯವನ್ನು ಹಂಚಿಕೊಳ್ಳಬೇಕು. ಈ ಪುಣ್ಯಾನುಮೋದನಾ ಕ್ರಿಯೆಯು ಮತ್ತಷ್ಟು ಪುಣ್ಯವನ್ನು ಉತ್ತಮ ಫಲಿತಾಂಶವನ್ನು ನೀಡುತ್ತದೆ.

– ೦0೦ – ೦0೦ – ೦0೦ –

## ಅಧ್ಯಾಯ-3

# ಧಮ್ಮ ಪ್ರಚಾರದ ಮೊದಲ ವರ್ಷಗಳು

**ಘಟನಾವಳಿ**

ರಾಜಕುಮಾರ ಸಿದ್ಧಾರ್ಥ ಗೋತಮರು (ನಂತರದಲ್ಲಿ ಬುದ್ಧ ಗೋತಮ) ವೈಶಾಖ ಮಾಸದ ಹುಣ್ಣಿಮೆಯ ದಿನ ಶಾಕ್ಯ ಸಂಸ್ಥಾನದ ರಾಜಧಾನಿ ಕಪಿಲವಸ್ತುವಿನ ಬಳಿ ಇರುವ ಲುಂಬಿನಿಯ ಶಾಲವೃಕ್ಷದ ತೋಪಿನಲ್ಲಿ ಕ್ರಿ.ಪೂ. 623ರಂದು ಜನ್ಮ ತಳೆದರು.

ರಾಜಕುಮಾರ ಸಿದ್ಧಾರ್ಥ ಗೋತಮರು ಇದೇ ಕೊನೆಯ ಜನ್ಮವಾಗಿ ಬೋಧಿಸತ್ವರಾಗಿ ಬಂದವರು. ಇವರು ಶಾಕ್ಯ ರಾಜ ಸಿಂಹಾಸನವನ್ನು ಮತ್ತು ಗೃಹಸ್ಥ ಜೀವನವನ್ನು ತಮ್ಮ ಇಪ್ಪತ್ತೊಂಭತ್ತನೆಯ ವಯಸ್ಸಿನಲ್ಲಿ ಅಂದರೆ ಕ್ರಿ.ಪೂ. 594ರಲ್ಲಿ ತೊರೆದರು.

ಬೋಧಿಸತ್ತ ಗೋತಮರು ಆರು ವರ್ಷಗಳ ಕಠಿಣತಮ ತಪಶ್ಚರ್ಯೆಯ ನಂತರ ಕ್ರಿ.ಪೂ. 588ರ ವೈಶಾಖ ಮಾಸದ ಹುಣ್ಣಿಮೆಯ ದಿನ ಭಾರತದ ಬಿಹಾರದ ಬುದ್ಧಗಯೆಯಲ್ಲಿ ಸಮ್ಮಾಸಂಬುದ್ಧರಾದರು.

ಭಗವಾನ್ ಬುದ್ಧ ಗೌತಮರ ಆಗಮನದಿಂದ 'ಬುದ್ಧರತನ'ವು ಅಸ್ತಿತ್ವಕ್ಕೆ ಬಂದಿತು. ಸಮ್ಮಾಸಂಬುದ್ಧರಾದ ಎರಡು ತಿಂಗಳ ನಂತರ ಬುದ್ಧ ಗೌತಮರು ಮೊತ್ತಮೊದಲ ಧಮ್ಮೋಪದೇಶ 'ಧಮ್ಮಚಕ್ಕಪವತ್ತನ ಸುತ್ತ'ವನ್ನು ನೀಡಿದರು. ವಾರಾಣಸಿಯ ಇಸಿಪತನದ ಮಿಗದಾಯಿ ವನದಲ್ಲಿ ಆಷಾಢ ಮಾಸದ ಹುಣ್ಣಿಮೆಯ ದಿನ ಈ ಧಮ್ಮೋಪದೇಶವನ್ನು ನೀಡಲು ಬುದ್ಧ ಶಾಸನವು ಅಸ್ತಿತ್ವಕ್ಕೆ ಬಂದಿತು. ಈ ಐತಿಹಾಸಿಕ ಘಟನೆಯಿಂದಲೇ 'ಧಮ್ಮರತನ'ವು ಉದಯವಾಯಿತು. ಐದು ದಿನಗಳ ನಂತರ ಎರಡನೇ ಧಮ್ಮೋಪದೇಶ 'ತಿಲಕ್ಖಣ ಸುತ್ತ'ವನ್ನು ಅಗ್ಗಸಾವಕರಿಗೆ ನೀಡಲು 'ಸಂಘರತನ'ವು ಅಸ್ತಿತ್ವಕ್ಕೆ ಬಂದಿತು.

ಬುದ್ಧರು ಮೊದಲ ವರ್ಷಾವಾಸವನ್ನು ಮಿಗದಾಯಿ ವನದಲ್ಲಿ ತಮ್ಮ ಮೊದಲ ಅರವತ್ತು ಅರಹಂತ ಶಿಷ್ಯರೊಡನೆ ಕಳೆದರು. ಮೊದಲ ವರ್ಷಾವಾಸವು ಮುಗಿದಮೇಲೆ ಬುದ್ಧರು ತಮ್ಮ ಅರವತ್ತು ಅರಹತ ಶಿಷ್ಯರನ್ನು ಈ ಆರ್ಯ ಧರ್ಮವನ್ನು ಎಲ್ಲಕಡೆ ಪ್ರಚಾರಗೊಳಿಸಲು ಕಳುಹಿಸಿದರು. ಧಮ್ಮ ಪ್ರಚಾರವನ್ನು ಕೈಗೊಂಡ ಧಮ್ಮದೂತರಾದ ಈ ಅರಹತ ಶಿಷ್ಯರು ಬುದ್ಧರಿಂದ 'ಏಹಿ ಭಿಕ್ಖು' ಎಂಬ ವಿಶೇಷ ಉಪಸಂಪದವನ್ನು ಪಡೆದು 'ಬಹುಜನ ಹಿತಕ್ಕಾಗಿ ಬಹುಜನ ಸುಖಕ್ಕಾಗಿ' ಹೊರಟರು.

ಬೋಧಿಸತ್ತ ಗೌತಮರು ಸತ್ಯಶೋಧನೆಗಾಗಿ ಮಹಾಭಿನಿಷ್ಕ್ರಮಣವನ್ನು ಮಾಡಿ ಮಗಧದ ದೊರೆ ಬಿಂಬಿಸಾರನ ರಾಜಧಾನಿ ರಾಜಗಹದ ಮೂಲಕ ಹಾದುಹೋದರು. ದೊರೆಯು ಬೋಧಿಸತ್ತರನ್ನು ಭೇಟಿಮಾಡಿ ಜ್ಞಾನೋದಯ ಹೊಂದಿದಮೇಲೆ ಧಮ್ಮವನ್ನು ಮೊದಲು ತಮಗೂ ತನ್ನ ಪ್ರಜೆಗಳಿಗೂ ಬೋಧಿಸಬೇಕೆಂದು ವಿನಂತಿಸಿದನು. ಬೋಧಿಸತ್ತರು ಅದಕ್ಕೆ ಒಪ್ಪಿಕೊಂಡರು. ಹಾಗೆಯೇ ಅಂತಿಮ ಸತ್ಯವನ್ನು ಕಂಡುಕೊಂಡು ಸರ್ವಜ್ಞನೂ ಮಹಾಕಾರುಣಿಕನೂ ಆದ ಬುದ್ಧರು ಪುಷ್ಯ ಮಾಸದ (ಡಿಸೆಂಬರ್-ಜನವರಿ) ಹುಣ್ಣಿಮೆಯ ದಿನದಂದು ಅಂದರೆ ಧಮ್ಮಚಕ್ಕಪವತ್ತನನೆಯನ್ನು ಮಾಡಿದ ಆರು ತಿಂಗಳ ನಂತರ ರಾಜಗಹಕ್ಕೆ ಬಂದರು. ಕ್ರಿ.ಪೂ. 588ರಲ್ಲಿ ನಡೆದ ಈ ಘಟನೆಯು ಕರುಣಾಯುಕ್ತವಾದ ಧಮ್ಮಪ್ರಚಾರದ ಆರಂಭವಾಯಿತು.

ಬುದ್ಧರು ಧಮ್ಮವನ್ನು ನಲವತ್ತೈದು ವರ್ಷಗಳ ಕಾಲ ಒಬ್ಬ ಸಮಣರಾಗಿ ಕಠಿಣವಾದ ಮತ್ತು ಸರಳವಾದ ಬದುಕನ್ನು ನಡೆಸುತ್ತಾ ಪ್ರಚಾರ ಮಾಡಿದರು. ತಮ್ಮ ಪವಿತ್ರ ಭಿಕ್ಖು ಸಂಘದ ಜೊತೆಗೆ ಊರಿಂದ ಊರಿಗೆ ನಡೆದು ಆರ್ಯ ಧರ್ಮವನ್ನು ಎಲ್ಲರ ಒಳಿತಿಗಾಗಿ ಮತ್ತು ಸುಖಕ್ಕಾಗಿ ಪ್ರಚಾರ ಮಾಡಿದರು.

ತಮ್ಮ ಎಂಭತ್ತನೇ ವಯಸ್ಸಿನಲ್ಲಿ ಕುಸಿನಾರದ ಶಾಲವೃಕ್ಷದ ತೋಪಿನಲ್ಲಿ ಕ್ರಿ.ಪೂ. 543ರಲ್ಲಿ ವೈಶಾಖ ಮಾಸದ ಹುಣ್ಣಿಮೆಯಂದು ಮಹಾಪರಿನಿಬ್ಬಾಣವನ್ನು ಪಡೆದರು. ಆರು ತಿಂಗಳ ಮುಂಚೆಯೇ ಮಹಾಪರಿನಿಬ್ಬಾಣವನ್ನು ಹೊಂದುವುದಾಗಿ ಅವರೇ ಭವಿಷ್ಯ ನುಡಿದಿದ್ದರು.

ಹೀಗೆ ಬುದ್ಧರ ಮೂರು ಮಹಾ ಘಟನೆಗಳು – ಜನ್ಮ, ಜ್ಞಾನೋದಯ, ಮಹಾಪರಿನಿಬ್ಬಾಣ ಪವಿತ್ತ ವೈಶಾಖ ಮಾಸದ ಹುಣ್ಣಿಮೆಯ ದಿನಗಳಂದು ಮರದ ಕೆಳಗೆ ಘಟಿಸಿದವು.

ಮರವು ಕೊಡುವುದರ ಸಂಕೇತ. ಹಾಗೆಯೇ ಬುದ್ಧರ ಜೀವನವು ಅಸಮಾನವಾದ, ಕೊಡುವುದರ (ವರದೋ) ಪಾತ್ರವನ್ನು ಬಿಂಬಿಸುತ್ತದೆ. ಬುದ್ಧರು ಹೀಗೆ ಹೇಳಿದ್ದಾರೆ: "ಎಲ್ಲ ದಾನಗಳಲ್ಲಿ ಧಮ್ಮದಾನವು ಶ್ರೇಷ್ಠವಾದದ್ದು". ಕಾರಣ ಧಮ್ಮವೊಂದೇ ಚಿತ್ತವನ್ನು ಸತ್ಯದ ಬೆಳಕಿನಿಂದ ಮಿಂಚಿಸಿ ಅದನ್ನು ಸಾಂಸಾರಿಕ ಸ್ಥಿತಿಯಿಂದ ಸಂಸಾರೋತ್ತರ ಸ್ಥಿತಿಗೆ ಕೊಂಡೊಯ್ದು ಮಹದಾನಂದವನ್ನು ಅನುಭವಿಸುವ ನಿಬ್ಬಾಣದತ್ತ ಸೆಳೆಯುತ್ತದೆ.

## ವೇಳುವನ ವಿಹಾರ

ಗಯಾಸೀಸದಲ್ಲಿ ಸ್ವಲ್ಪಕಾಲ ಕಳೆದಮೇಲೆ ಬುದ್ಧರು ತಮ್ಮ ಒಂದು ಸಾವಿರದ ಮೂರು ಅರಹತ ಶಿಷ್ಯರೊಂದಿಗೆ ರಾಜಗಹದತ್ತ ತೆರಳುತ್ತಾರೆ. ಮಗಧ ರಾಜಧಾನಿಯ ಈ ನಗರಕ್ಕೆ ತಾವು ದೊರೆ ಬಿಂಬಿಸಾರನಿಗೆ ಪರಿವ್ರಾಜಿಕ ಸಂನ್ಯಾಸಿಯಾಗಿದ್ದಾಗ ಕೊಟ್ಟ ಮಾತನ್ನು ಉಳಿಸಿಕೊಳ್ಳಲು ಬರುತ್ತಾರೆ.



ರಾಜಗಹದ ಹೊರವಲಯಕ್ಕೆ ಪುಷ್ಯ ಮಾಸದ ಹುಣ್ಣಿಮೆಯಂದು ಬಂದು ಅಲ್ಲಿನ ಬೃಹತ್ ಮತ್ತು ವಿಶಾಲವಾದ ಸುಪ್ಪತಿಟ್ಠ ದೇಗುಲ ಎಂದು ಹೆಸರು ಪಡೆದ ಆಲದ ಮರದ ಕೆಳಗೆ ಉಳಿದುಕೊಳ್ಳುತ್ತಾರೆ. ಆ ಮರದ ಪರಿಚಾರಕ ರಾಜನ ಬಳಿ ಹೋಗಿ ಬುದ್ಧರು ಮತ್ತು ಅವರ ಶಿಷ್ಯರು ಬಂದಿರುವರೆಂದು ವಿಷಯವನ್ನು ತಿಳಿಸುವನು.

ಈ ಸುವಾರ್ತೆಯನ್ನು ಕೇಳಿದ ರಾಜನು ಕೂಡಲೇ ಪವಿತ್ರ ಮರದತ್ತ ತನ್ನ ಪುರಶ್ರೇಷ್ಠರೂ ಮತ್ತು ಪ್ರಜೆಗಳೊಡನೆ ಹೋಗುತ್ತಾನೆ. ಅಲ್ಲಿಗೆ ಕುತೂಹಲದ ಬ್ರಾಹ್ಮಣರ ಗುಂಪೂ ಸೇರಿತು. ಬುದ್ಧರ ಬಳಿಗೆ ಹೋದನಂತರ ರಾಜನು ಮತ್ತು ಅವನ ಬೃಹತ್ ಪ್ರಜಾಪರಿವಾರವು ಶಿರಬಾಗಿ ನಮಸ್ಕರಿಸಿ ಗೌರವ ಸಲ್ಲಿಸಿದರು. ಆನಂತರ ಒಂದು ಪಕ್ಕದಲ್ಲಿ ಕುಳಿತು ಉಭಯ ಕುಶಲೋಪರಿಯ ಬಳಿಕ ಬುದ್ಧರಿಂದ ಧಮ್ಮ ಪ್ರವಚನವನ್ನು ಕೇಳಲು ಸಿದ್ಧರಾದರು.

ಬುದ್ಧರು ಒಂದು ಲಕ್ಷಕ್ಕೂ ಮೀರಿದ ಬೃಹತ್ ಸಭಾಸದರ ಮೇಲೆ ಕಣ್ಣು ಹಾಯಿಸಿ ಅವರ ಮಾನಸಿಕ ಸ್ಥಿತಿಯ ಮತ್ತು ಅವರ ಪಾರಮಾರ್ಥಿಕ ಸಾಮರ್ಥ್ಯವನ್ನು ಅಳೆದರು. ಆನಂತರ ಅವರೆಲ್ಲರಿಗೂ ಅನುಕೂಲವಾಗುವಂತೆ ಉನ್ನತ ಸ್ತರಕ್ಕೆ ಕೊಂಡೊಯ್ಯುವಂತಹ ಧಮ್ಮವನ್ನುಪದೇಶಿಸಿದರು. ರಾಜನೂ, ಜನರೂ ಹಂತಹಂತವಾಗಿ ಅರಿಯುವ ರೀತಿಯಲ್ಲಿ ವಿಷಯವನ್ನು ಪ್ರಸ್ತಾಪಿಸಿ ಅವರ ಮನಸ್ಸು ಉನ್ನತ ಸಂಗತಿಗಳನ್ನು ಅರಿಯುವಂತೆ ಮಾಡಿ ಅವರೆಲ್ಲರೂ ಚತುರಾರ್ಯ ಸತ್ಯಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವಂತೆ ಉಪದೇಶಿಸಿದರು. ಧಮ್ಮೋಪದೇಶವು ಶಿಖರ ಸ್ಥಿತಿಯನ್ನು ತಲುಪಿದಂತೆ ಬಹುಮಂದಿ ಶ್ರಾವಕರು ನಿಬ್ಬಾಣ ದೃಶ್ಯವನ್ನು ಗ್ರಹಿಸುವಷ್ಟು ಪಾರಮಾರ್ಥಿಕವಾಗಿ ಪರಿವರ್ತಿತರಾದರು. ಅವರಲ್ಲಿ ಧಮ್ಮಚಕ್ಕುವು ಉದಯವಾಯಿತು. ದೊರೆ ಬಿಂಬಿಸಾರನು ಮತ್ತು ಸುಮಾರು ಹತ್ತು ಸಾವಿರ ಗೃಹಸ್ಥರು ನಿಬ್ಬಾಣ ಸ್ರೋತದಲ್ಲಿ ಪ್ರವೇಶಿಸಿ ಸೋತಾಪನ್ನರಾದರು ಮತ್ತು ಲೋಕೋತ್ತರ ತಿಸರಣದಲ್ಲಿ ದೃಢವಾಗಿ ಸ್ಥಾಪಿತರಾದರು.

ಈಗ ದೊರೆ ಬಿಂಬಿಸಾರನು ಸಮ್ಮಾಸಂಬುದ್ಧರಿಗೆ ಹೀಗೆ ಹೇಳಿದನು: ಭಗವಾನರೆ, ನಾನು ಬಹಳ ಕಾಲದಿಂದಲೂ ಅಂದರೆ ಚಿಕ್ಕ ರಾಜಕುಮಾರನಾಗಿದ್ದಾಗಿನಿಂದಲೂ ಈ ಐದು ಬಯಕೆಗಳನ್ನು ಉಳಿಸಿಕೊಂಡು ಬಂದಿದ್ದೇನೆ: 1. ನಾನು ಮುಂದೆ ಮಗಧ ದೇಶದ ದೊರೆಯಾಗುತ್ತೇನೆ; 2. ನಾನು ರಾಜನಾಗಿದ್ದಾಗಲೇ ಭಗವಾನ್ ಬುದ್ಧರು ನನಗೆ ದರ್ಶನವನ್ನು ಕೊಡುತ್ತಾರೆ; 3. ಬುದ್ಧರು ನನ್ನ ರಾಜಧಾನಿಗೆ ಬಂದಾಗ ನಾನು ಅವರನ್ನು ಗೌರವಿಸಿ ಪೂಜಿಸುತ್ತೇನೆ; 4. ಬುದ್ಧರು ನನಗೆ ನಿಬ್ಬಾಣದತ್ತ ಕೊಂಡೊಯ್ಯುವ ಧಮ್ಮವನ್ನು ಉಪದೇಶಿಸುತ್ತಾರೆ; 5. ನಾನು ಬುದ್ಧರ ಧಮ್ಮವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಂಡು ಅದರ ಫಲದ ಅನುಭವವನ್ನು ಪಡೆಯುತ್ತೇನೆ."

"ಭಗವಾನರೆ, ನನ್ನ ಈ ಐದೂ ಬಯಕೆಗಳು ಪೂರ್ಣಗೊಂಡಿವೆ. ಭಗವಾನರು ನನ್ನ 'ಧಮ್ಮಚಕ್ಖು'ವನ್ನು ತೆರೆಸಿದ್ದಾರೆ. ಆದ್ದರಿಂದ ನಾನು ಬುದ್ಧರಿಗೆ, ಅವರ ಧಮ್ಮಕ್ಕೆ

ಮತ್ತು ಸಂಘಕ್ಕೆ ಶರಣು ಹೋಗುತ್ತೇನೆ. ಭಗವಾನರು ನನ್ನನ್ನು ನನ್ನ ಬದುಕಿನ ಕೊನೆಯವರೆಗೂ ಶಿಷ್ಯನಂತೆ ಸ್ವೀಕರಿಸಿ ಮತ್ತು ಭಗವಾನರು ಮತ್ತು ಭಿಕ್ಖುಗಳು ಮುಂಜಾನೆಯ ಭಿಕ್ಷೆಯನ್ನು ಸ್ವೀಕರಿಸಿ."

ಮಾರನೆಯ ದಿನ ಬುದ್ಧರು ಮತ್ತು ಅರಹತ ಭಿಕ್ಖುಗಳು ಭಿಕ್ಷೆಗಾಗಿ ರಾಜಗಹವನ್ನು ಪ್ರವೇಶಿಸಿದರು. ದಾರಿಯ ಇಕ್ಕೆಲಗಳಲ್ಲೂ ಸಾವಿರಾರು ಜನ ನಿಂತು ಭಗವಾನರನ್ನು ಕುರಿತು ಭಕ್ತಿಗೀತೆಗಳನ್ನು ಪಠಿಸಿದರು. ದೇವರಾಜನಾದ ಸಕ್ಕನು ಒಬ್ಬ ಯುವಕನ ವೇಷವನ್ನು ಧರಿಸಿ ಆ ಮೆರವಣಿಗೆಯ ಮುಂಭಾಗದಲ್ಲಿ ನಡೆಯುತ್ತಾ "ನಮೋ ತಸ್ಸ ಭಗವತೋ ಅರಹತೋ ಸಮ್ಮಾಸಂಬುದ್ಧಸ್ಸ" ಎಂಬ ಬುದ್ಧಸ್ತುತಿಯನ್ನು ಹೇಳುತ್ತಾ ಹೋದನು.

ಬುದ್ಧರು ಪವಿತ್ರ ಸುಪ್ಪತಿಟ್ಠ ಆಲದಮರದ ಬಳಿ ಬಂದಾಗ ಮಂತ್ರಿಗಳು, ಹಿರಿಯ ಅಧಿಕಾರಿಗಳು, ಜಮೀನ್ದಾರರು, ವಿವಿಧ ಧಾರ್ಮಿಕ ಮುಖಂಡರು, ವರ್ತಕರು, ಸಾಮಾನ್ಯ ಪ್ರಜೆಗಳೂ ಸೇರಿದಂತೆ ಅಪಾರ ಜನಸಮೂಹವು ಅವರನ್ನು ಸ್ವಾಗತಿಸಿತು. ಗೃಹಸ್ಥರ ಪೈಕಿ ಎರಡು ವರ್ಗದ ಬ್ರಾಹ್ಮಣರು ಅಲ್ಲಿ ಸೇರಿದ್ದರು. ಒಂದು ಸರಿಯಾದ ಮತ್ತು ಪುರೋಗಾಮಿಯಾದ ದೃಷ್ಟಿಯನ್ನು ಹೊಂದಿದವರಾಗಿದ್ದರೆ, ಇನ್ನೊಂದು ವರ್ಗವು ತಪ್ಪು ಮೂಢನಂಬಿಕೆಗಳಿಗೆ ಅಂಟಿಕೊಂಡವರಾಗಿದ್ದರು. ಮೊದಲ ಗುಂಪಿನ ಜನ ಬುದ್ಧರಿಗೆ ಭಕ್ತಿ ಗೌರವದಿಂದ ನಮಿಸಿದರೆ ಎರಡನೇ ವರ್ಗದವರು ತಮ್ಮ ಕುಲನಾಮಧೇಯವನ್ನು "ನಾನು ವಾಸೆಟ್ಠ ಗೋತ್ರದವನು" ಇತ್ಯಾದಿಯಾಗಿ ಹೇಳಿಕೊಂಡು ಕುಳಿತುಕೊಳ್ಳುತ್ತಿದ್ದರು. ಈ ಬ್ರಾಹ್ಮಣರಲ್ಲಿ ಕೆಲವರು ಬಡವರು ಮತ್ತು ಶ್ರೀಮಂತರು ಇದ್ದರು. ಶ್ರೀಮಂತರಾದ ಕೆಲವರು ಮೂಢನಂಬಿಕೆಗಳಿಗೆ ಅಂಟಿಕೊಂಡವರು ಬುದ್ಧರಿಗೆ ಗೌರವ ತೋರಿಸಲಿಲ್ಲ. ಕಾರಣ ಅವರು ಜಾತಿಯಿಂದ ಉತ್ತಮರಾದವರೆಂದು. ಅವರು ತಮ್ಮತಮ್ಮಲ್ಲಿ ಮಾತನಾಡಿಕೊಳ್ಳುತ್ತಿದ್ದರು: "ನೋಡಿ ಈ ಮಹಾಸಮಣನ ಮಾತಿಗೆ ಮರುಳಾಗಬೇಡಿ, ಒಂದುವೇಳೆ ಅವರ ಮಾತನ್ನು ಒಪ್ಪಿಕೊಂಡಿರುವಿರೆಂದರೆ ಅವರ ಅಪಾರ ಸಂಖ್ಯೆಯ ಭಿಕ್ಖುಗಳಿಗೆ ಭಿಕ್ಷೆಯನ್ನು ಹಾಕಬೇಕಾಗುತ್ತದೆ."

ಮತ್ತೆ ಅನುಮಾನವಿಲ್ಲದೆ ಅವರು ನುಡಿಯುತ್ತಿದ್ದರು: "ಇದರಲ್ಲಿ ಯಾರು ಗುರುವು ಮತ್ತು ಯಾರು ಶಿಷ್ಯರು? ಶಾಕ್ಯ ಮುನಿಯು ಗುರುವೇ ಅಥವಾ ಉರುವೇಲ ಕಸ್ಸಪರೇ? ನಾವು ಯಾರನ್ನು ಅನುಸರಿಸುವುದು?" ಜನರ ಚಿಂತನೆಯನ್ನು ತಿಳಿದ ಬುದ್ಧರು ಆಯುಷ್ಮಂತ ಕಸ್ಸಪನಿಗೆ ಗಾಥೆಯ ಮೂಲಕ ಪ್ರಶ್ನೆಯನ್ನು ಕೇಳಿದರು: "ಯಾವುದನ್ನು ನೋಡಿ ನೀನು ಅಗ್ನಿ ಆರಾಧನೆಯನ್ನು ತೊರೆದೆ?" ಆಯುಷ್ಮಂತ ಕಸ್ಸಪನು ಗಾಥೆಯ ಮೂಲಕವೇ ಉತ್ತರವನ್ನು ಕೊಟ್ಟನು: "ಇಂದ್ರಿಯ ಸುಖಗಳು ಮತ್ತು ಈ ಯಜ್ಞ ಕಾರ್ಯಗಳ ಸೇವೆಯಲ್ಲಿ ತೊಡಗಿರುವ ಸ್ತ್ರೀಯರು ಇವುಗಳಲ್ಲಿನ ಅಪಾಯವನ್ನು ಕಂಡು ಮತ್ತು ಅನುಭವಿಸಿ ಈ ಅಗ್ನಿ ಆರಾಧನೆಯನ್ನು ತೊರೆದೆನು."



ಬುದ್ಧರು ಮತ್ತೆ ಪ್ರಶ್ನಿಸಿದರು: "ಇಂದ್ರಿಯ ಸುಖಗಳಾಗಲಿ ಮತ್ತು ಸ್ತ್ರೀಯರಾಗಲಿ ನಿನಗೆ ಸುಖವನ್ನು ಕೊಡದಿದ್ದರೆ ಯಾವ ದೇವ ಮಾನವ ಸಂಗತಿಗಳು ನಿನ್ನನ್ನು ರಮಿಸುತ್ತವೆ ಅಥವಾ ಸುಖವನ್ನು ಕೊಡುತ್ತಿವೆ?"

ಅದಕ್ಕೆ ಆಯುಷ್ಮಂತ ಕಸ್ಸಪನು ಹೀಗೆ ಉತ್ತರಿಸಿದನು: "ಯಾವ ನಿಬ್ಬಾಣವು ಸಾಂಸಾರಿಕ ಬಂಧನದಿಂದ ಮುಕ್ತಮಾಡಿ ಪರಮಶಾಂತಿ ಕೊಡುತ್ತದೋ ಅದರಲ್ಲಿ ನನಗೆ ಆನಂದವಿದೆ. ಅಗ್ನಿಯ ಮೂಲಕ ನಡೆದ ಯಜ್ಞಕಾರ್ಯಗಳಲ್ಲಿ ಮತ್ತು ಪ್ರಾಪಂಚಿಕ ವಿಷಯಗಳಲ್ಲಿ ನನಗೆ ಆನಂದವಿಲ್ಲ."

ಆಯುಷ್ಮಂತ ಕಸ್ಸಪನು ತಾನು ಬುದ್ಧರ ಶಿಷ್ಯ ಮತ್ತು ಬುದ್ಧರು ನನ್ನ ಗುರುಗಳು ಎಂದು ಲೋಕಕ್ಕೆ ಪ್ರಚುರಪಡಿಸಲು ಚೀವರನ್ನು ಸರಿಮಾಡಿಕೊಂಡು ಬುದ್ಧರ ಪಾದಪದ್ಮಗಳಿಗೆರಗಿ "ಸಮ್ಮಾಸಂಬುದ್ಧರಾದ ಭಗವಾನ್ ಬುದ್ಧರು ನನ್ನ ಗುರುಗಳು, ನಾನು ಕೇವಲ ಅವರ ಶಿಷ್ಯನಷ್ಟೇ" ಎಂದನು. ತಾಳೆಮರದಷ್ಟು ಎತ್ತರಕ್ಕೆ ಬೆಳೆದು ಮತ್ತು ಯಥಾಸ್ಥಿತಿಗೆ ಬಂದು ಮತ್ತೆ ಬುದ್ಧರ ಪಾದಗಳಿಗೆ ಎರಗಿದನು. ಹೀಗೆ ಏಳುಸಾರಿ ಮಾಡಿ ಪ್ರತಿಸಾರಿಯೂ ಎತ್ತರೆತ್ತರಕ್ಕೆ ಬೆಳೆದು ಏಳು ತಾಳೆಮರಗಳಷ್ಟು ಬೆಳೆದು ನಂತರ ಕರಗಿ ಬುದ್ಧರ ಪಾದಗಳಿಗೆ ವಂದಿಸಿದನು.

ಈ ಪವಾಡವನ್ನು ನೋಡಿದ ಗರ್ವಿಷ್ಠ ಮೂಢನಂಬಿಕೆಯ ದಾಸರಾದ ಬ್ರಾಹ್ಮಣರು: "ಓ ಬುದ್ಧರೆಷ್ಟು ಮಹಾತ್ಮರು! ತಾನು ಅರಹತನೆಂದುಕೊಂಡು ಜಟಿಲ ಸಂನ್ಯಾಸಿಗಳ ಮುಖ್ಯಸ್ಥನಾದ ಉರುವೇಲ ಕಸ್ಸಪನು ಬುದ್ಧರಿಂದ ಮಣಿದಿದ್ದಾನೆ, ಸಂಸಾರ ಬಂಧನದಿಂದ ಮುಕ್ತನಾಗಿದ್ದಾನೆ" ಎಂದು ಕೊಂಡಾಡಿದರು.

ತನ್ನ ಐದು ಇಚ್ಛೆಗಳನ್ನು ಪ್ರಕಟಗೊಳಿಸಿದ ದೊರೆ ಬಿಂಬಿಸಾರನು ಆನಂತರದಲ್ಲಿ ಬುದ್ಧರ ವಿನಮ್ರ ಶಿಷ್ಯನಾದನು. ಬುದ್ಧರು ಪರಮಗುರುವೆಂದು ಸಾರಲು ಬೇರೆ ಬೇರೆ ಕಥೆಗಳೇ ಇವೆ.

ಈ ಘಟನೆಗಳೆಲ್ಲವೂ ಕಾಳ್ಗಿಚ್ಚಿನಂತೆ ಎಲ್ಲಕಡೆ ಸುದ್ದಿಯಾದವು. ಮಾರನೇದಿನ ಮುಂಜಾನೆ ಬುದ್ಧರು ಮತ್ತು ಭಿಕ್ಖುಗಳು ರಾಜಗಹ ನಗರವನ್ನು ಪ್ರವೇಶಿಸಿದಾಗ ಇಡೀ ನಗರವೆಲ್ಲಾ ಆನಂದೋತ್ಸಾಹದಿಂದ ಮುಳುಗಿತ್ತು. ನಗರದ ಪ್ರತಿ ರಸ್ತೆಯಲ್ಲೂ ಜನ ಕಿಕ್ಕಿರಿದು ತುಂಬಿ ಸಮ್ಮಾಸಂಬುದ್ಧರ ದರ್ಶನವನ್ನು ಪಡೆಯಲು ಹಾತೊರೆಯುತ್ತಿತ್ತು.

ದೊರೆ ಬಿಂಬಿಸಾರನು ಬುದ್ಧರನ್ನು ಮತ್ತು ಭಿಕ್ಖುಗಳನ್ನು ತನ್ನ ಅರಮನೆಗೆ ಕರೆದೊಯ್ದು ತಾನೇ ರುಚಿರುಚಿಯಾದ ಭಿಕ್ಷೆಯನ್ನು ಬಡಿಸಿದನು. ಬುದ್ಧರು ಮತ್ತು ಅವರ ಅರಹತ ಶಿಷ್ಯರಿಗೆ ಊಟವನ್ನು ಬಡಿಸುತ್ತಿದ್ದಾಗ ಒಂದು ಸರಿಯಾದ ವಾತಾವರಣದಲ್ಲಿ ಎಲ್ಲ ಸೌಕರ್ಯಗಳಿರುವ ವಿಹಾರವನ್ನು ಒದಗಿಸುವ ಬಗ್ಗೆ ಹೀಗೆ ಚಿಂತನೆ ಮಾಡುತ್ತಿದ್ದನು: 'ಬಹಳ ದೂರವೂ ಇರದ ಮತ್ತು ತೀರ ಹತ್ತಿರವೂ ಇರದಂತೆ ಹೋಗಿಬರಲು ಅನುಕೂಲವಾಗುವಂತೆ, ನಗರದ ನಿಬಿಡತೆಯ ಸದ್ದಿನಿಂದ ದೂರವಾಗಿ ಇರುವಂತೆ ವಿಹಾರವಿರಬೇಕು.;

ಊಟ ಮುಗಿದಮೇಲೆ ರಾಜನು ಭಗವಾನ್ ಬುದ್ಧರಿಗೆ ಮೇಲೆ ಹೇಳಿದಂತೆ ಎಲ್ಲಾ ಸೌಕರ್ಯಗಳಿರುವ ವೇಳುವನ ವಿಹಾರವನ್ನು ದಾನ ಮಾಡಿದನು. ತಕ್ಷಣಕ್ಕೆ ಆ ವೇಳುವನದಲ್ಲಿ ಬುದ್ಧರಿಗೂ ಮತ್ತು ಭಿಕ್ಖುಗಳಿಗೂ ವಸತಿ ಸೌಕರ್ಯವನ್ನೇರ್ಪಡಿಸಿದನು. ರಾಜನು ದಾಖಲೆ ಸಮಯದಲ್ಲಿ ಒಂದು ಭವ್ಯ ವಿಹಾರವನ್ನು ನಿರ್ಮಿಸಿ ಅದನ್ನು ಅತ್ಯಂತ ಸಂಭ್ರಮದಿಂದ ಉತ್ಸಾಹದಿಂದ ಉದ್ಘಾಟಿಸಿದನು. ಬುದ್ಧರು ಈ ವೇಳುವನ ವಿಹಾರವನ್ನು ವಿಹಾರ ದಾನ ಸಂಪ್ರದಾಯದಂತೆ ಮೂಲಕ ಸ್ವೀಕರಿಸಿದರು.

### ಜೇತವನ ವಿಹಾರ, ಅನಾಥಪಿಂಡಿಕಾರಾಮ

ಈ ಅವಧಿಯಲ್ಲಿ ಐತಿಹಾಸಿಕ ಪ್ರಸಿದ್ಧ ವ್ಯಕ್ತಿಯ ಆಗಮನವೆಂದರೆ ಅನಾಥಪಿಂಡಿಕನದು (ಅನಾಥರಿಗೆ ಅನ್ನವನ್ನು ಕೊಡುವವನು ಎಂಬ ಅರ್ಥ). ಅವನ ನಿಜವಾದ ಹೆಸರು ಸುದತ್ತ, ಅಂದರೆ ಚೆನ್ನಾಗಿ ಕೊಡುವವನು ದಾನ ಮಾಡುವವನು ಎಂದು. ಅವನು ಶ್ರೇಷ್ಠಿ (ಶೆಟ್ಟಿ) ಕುಲಕ್ಕೆ ಸೇರಿದ ಸಾವತ್ಥಿಯ ಕೋಟ್ಯಾಧಿಪತಿ. ಸಾವತ್ಥಿಯು ಕೋಸಲ ದೇಶದ ರಾಜಧಾನಿ. ಅನಾಥಪಿಂಡಿಕನಿಗೆ ರಾಜಗಹ ಸೆಟ್ಠಿ ಎಂಬ ರಾಜಗಹ ನಗರದ ಕೋಟ್ಯಾಧಿಪತಿ ಗೆಳೆಯನಿದ್ದ. ಇಬ್ಬರೂ ಸಂಬಂಧಿಗಳೇ; ಒಬ್ಬರು ಇನ್ನೊಬ್ಬರ ಸೋದರಿಯರನ್ನು ಮದುವೆಯಾಗಿದ್ದರು. ಇಬ್ಬರೂ ಶ್ರೀಮಂತ ವರ್ತಕರಾದ್ದರಿಂದ ಇಬ್ಬರಿಗೂ ವಾಣಿಜ್ಯ ಸಂಬಂಧವಿತ್ತು. ರಾಜಗಹ ಸೆಟ್ಠಿಯು ಸಾವತ್ಥಿಗೆ ಬಂದರೆ ಐನೂರು ಗಾಡಿಗಳಷ್ಟು ವಾಣಿಜ್ಯ ಸರಕನ್ನು ತನ್ನ ರಾಜ್ಯದಿಂದ ತೆಗೆದುಕೊಂಡು ಹೋಗುತ್ತಿದ್ದ. ನಗರವನ್ನು ಪ್ರವೇಶಿಸುವ ಮುನ್ನ ತನ್ನ ಭಾವನಾದ ಸಾವತ್ಥಿಯ ಸೆಟ್ಠಿ ಅನಾಥಪಿಂಡಿಕನಿಗೆ ತಾನು ಬಂದಿರುವ ನಿರೂಪವನ್ನು ಕಳಿಸುತ್ತಿದ್ದ. ಅನಾಥಪಿಂಡಿಕನು ತುಂಬ ವೈಭವದಿಂದ ಅವನನ್ನು ಸಾವತ್ಥಿನಗರಕ್ಕೆ ಬರಮಾಡಿಕೊಳ್ಳುತ್ತಿದ್ದ. ರಾಜಗಹ ಸೆಟ್ಠಿಗೆ ಅಲ್ಲಿ ಸ್ಥಿರವಾದ ಮಾರುಕಟ್ಟೆ ಸಿಕ್ಕರೆ ತನ್ನೆಲ್ಲಾ ಸರಕನ್ನು ಒಳ್ಳೆಯ ಲಾಭಕ್ಕೆ ಮಾರುತ್ತಿದ್ದ. ಒಂದುವೇಳೆ ತನ್ನ ಸರಕಿಗೆ ಒಳ್ಳೆಯ ಲಾಭ ಸಿಗಲಿಲ್ಲವೆಂದರೆ ಅನಾಥಪಿಂಡಿಕನ ಗೋದಾಮಿನಲ್ಲಿ ಬಿಟ್ಟು ತನ್ನ ಊರಿಗೆ ಮರಳುತ್ತಿದ್ದ. ಅನಾಥಪಿಂಡಿಕನೂ ಮಗಧ ದೇಶಕ್ಕೆ ವ್ಯಾಪಾರ ಸಂಬಂಧ ಹೋದಾಗ ಅವನೂ ಹೀಗೇ ಮಾಡುತ್ತಿದ್ದ.

ಭಗವಾನ್ ಬುದ್ಧರು ವೇಳುವನಕ್ಕೆ ಬಂದು ಉಳಿದ ಸಂದರ್ಭದಲ್ಲಿ ಅನಾಥಪಿಂಡಿಕನು ತನ್ನ ಕೋಸಲದ ರಾಜಧಾನಿ ಸಾವತ್ಥಿಯಿಂದ ಐದುನೂರು ಬಂಡಿಗಳಲ್ಲಿ ವಾಣಿಜ್ಯ ಸರಕನ್ನು ತೆಗೆದುಕೊಂಡು ರಾಜಗಹದತ್ತ ನಡೆದ. ಎಂದಿನಂತೆ ಇನ್ನು ಕೆಲವೇ ಮೈಲುಗಳ ದೂರದಲ್ಲಿ ರಾಜಗಹ ಇದೆ ಎನ್ನುವಾಗ ಎಂದಿನಂತೆ ತಾನು ಬಂದಿರುವ ಮಾಹಿತಿಯನ್ನು ತನ್ನ ಭಾವನಿಗೆ ಕಳುಹಿಸಿದ. ಈಸಾರಿ ಏನಾಯಿತೆಂದರೆ ಭಾವ ರಾಜಗಹ ಸೆಟ್ಠಿಯು ಸ್ವಾಗತವನ್ನು ಕೋರಲು ವ್ಯವಸ್ಥೆಯನ್ನು ಮಾಡಲಿಲ್ಲ ಮತ್ತು ಬರಲೂ ಇಲ್ಲ, ಯಾವ ಪ್ರತಿಸ್ಪಂದನೆಯನ್ನೂ ತೋರಲಿಲ್ಲ. ಇದು ಅನಾಥಪಿಂಡಿಕನಿಗೆ ಆಶ್ಚರ್ಯ ತಂದಿತು. ಆದರೂ ಪ್ರವೇಶ ಮಾಡಿ ತಂಗಿಯ ಮನೆಗೆ ಹೋಗಿ ನೋಡಲು ತನ್ನ ಭಾವ ಎಂದೂ



ಇಲ್ಲದಂತೆ ಬುದ್ಧರು ಮತ್ತು ಭಿಕ್ಖುಗಳಿಗೆ ಭಿಕ್ಷೆಯನ್ನು ಕೊಡುವ ವ್ಯವಸ್ಥೆಯಲ್ಲಿ ಮುಳುಗಿಹೋಗಿದ್ದ.

ರಾಜಗಹಸೆಟ್ಠಿಯು ಈಗಾಗಲೇ ಬುದ್ಧರ ಪರಮ ಉಪಾಸಕನಾಗಿದ್ದ. ಆ ಕಾಲಘಟ್ಟದಲ್ಲಿ ಭಿಕ್ಖುಗಳಿಗೆ ಇಂತಹ ಕಡೆಯೇ ವಾಸ್ತವ್ಯ ಮಾಡಬೇಕೆಂಬ ನಿಯಮಗಳು ರೂಪಿತವಾಗಿರಲಿಲ್ಲ. ಅವರು ಅರಣ್ಯದಲ್ಲಿ, ಮರದ ಕೆಳಗಡೆ, ಗವಿಗಳಲ್ಲಿ, ಸ್ಮಶಾನಗಳಲ್ಲಿ ಉಳಿದುಕೊಳ್ಳುತ್ತಿದ್ದರು. ರಾಜಗಹಸೆಟ್ಠಿಯು ನಿಷ್ಠಾವಂತ ಉಪಾಸಕನಾದ ಮೇಲೆ ಭಿಕ್ಖುಗಳು ಹೇಗೆ ವಾಸ ಮಾಡುತ್ತಾರೆಂಬುದೆಲ್ಲಾವನ್ನು ನೋಡಿ ಸೂಕ್ತ ಆವಾಸಗಳನ್ನು ವಿಹಾರಗಳನ್ನು ಕಟ್ಟಿಸುವ ಯೋಚನೆಯನ್ನು ಮಾಡಿ ಅವನ್ನು ಕಟ್ಟಿಸಿದ. ಭಿಕ್ಖುಗಳ ಬಳಿ ಹೋಗಿ ತಾನು ಕಟ್ಟಿಸಿದ ಆವಾಸಗಳನ್ನು ತಾವು ಒಪ್ಪಿಕೊಳ್ಳಬಹುದೇ ಎಂದು ಕೇಳಿದ. ಅವರು ಬುದ್ಧರ ಬಳಿ ಹೋಗಿ ಅನುಮತಿಯನ್ನು ಪಡೆದರು. ಹಾಗೆಯೇ ರಾಜಗಹಸೆಟ್ಠಿಯು ಸೂಕ್ತವಾದ ಸ್ಥಳಗಳಲ್ಲಿ ವಿಹಾರಗಳನ್ನು ಕಟ್ಟಿಸುತ್ತಾ ಹೋದ. ಅಂತಹ ಸುಮಾರು ಅರವತ್ತು ಆವಾಸಗಳನ್ನು ಪಾರಮಾರ್ಥಿಕ ಪುಣ್ಯಪ್ರಾಪ್ತಿಗಾಗಿಯೇ ಕಟ್ಟಿಸಿದ. ಇಂತಹ ಸುಮಾರು ಸಂಖ್ಯೆಯ ವಿಹಾರಗಳು ಮತ್ತು ರಾಜನು ಕಟ್ಟಿಸಿದ ಭವ್ಯ ವೇಳುವನ ವಿಹಾರ ಇವೆಲ್ಲ ಪ್ರಮುಖ ಪಾರಮಾರ್ಥಿಕ ತರಬೇತಿ ಕೇಂದ್ರಗಳಾಗಿ ವೃದ್ಧಿಯಾದವು.

ಒಂದುದಿನ ರಾಜಗಹಸೆಟ್ಠಿಯು ಬುದ್ಧರ ಬಳಿ ಹೋಗಿ ನಾಳೆಯ ದಿನ ತಾವು ಮತ್ತು ಭಿಕ್ಖು ಸಂಘವು ತನ್ನಿಂದ ಭಿಕ್ಷೆಯನ್ನು ಸ್ವೀಕರಿಸಬೇಕೆಂದು ವಿನಂತಿಸಿದ. ಹೀಗೆ ವೇಳುವನ ವಿಹಾರದಿಂದ ವಾಪಸ್ಸು ಬಂದ ರಾಜಗಹಸೆಟ್ಠಿಯು ಮನೆಗೆ ಬಂದು ನಾಳೆಯ ಭಿಕ್ಷೆಯ ವ್ಯವಸ್ಥೆಯ ಕಾರ್ಯಭಾರದಲ್ಲಿ ಮುಳುಗಿಹೋದ ಸಂದರ್ಭದಲ್ಲೇ ಅನಾಥಪಿಂಡಿಕನು ರಾಜಗಹಸೆಟ್ಠಿಯ ಮನೆಗೆ ಬಂದದ್ದು.

ಅನಾಥಪಿಂಡಿಕನಿಗೆ ಆಶ್ಚರ್ಯವೆಂದರೆ ಭಾವ ರಾಜಗಹಸೆಟ್ಠಿಯು ಕಾರ್ಯಭಾರದಿಂದ ತನ್ನನ್ನು ಗಮನಿಸಲೇ ಇಲ್ಲ. ಮುಂಚೆಯೇ ಹೇಳಿದಂತೆ ಒಬ್ಬರು ಮತ್ತೊಬ್ಬರು ತಮ್ಮ ಊರುಗಳಿಗೆ ಬಂದಾಗ ಪರಸ್ಪರ ಭವ್ಯ ಸ್ವಾಗತವನ್ನು ಕೋರುತ್ತಿದ್ದರು. ತನ್ನ ಭಾವ ನಾಳಿನ ಭಿಕ್ಷೆಯ ವ್ಯವಸ್ಥೆಗಾಗಿ ನಡೆಸುತ್ತಿರುವ ಹಬ್ಬಕ್ಕಾಗಿ ಎಷ್ಟೊಂದು ತನ್ಮಯನಾಗಿರುವನೆಂದು ಅನಾಥಪಿಂಡಿಕನು ಭಾವಿಸಿ ಕೇಳಿದ: "ಭಾವ, ಏನು ಎಷ್ಟೊಂದು ಕಾರ್ಯತನ್ಮಯರಾಗಿರುವಿರಿ? ಏನಾದರೂ ಮದುವೆಯ ವ್ಯವಸ್ಥೆಯನ್ನು ಮಾಡುತ್ತಿದ್ದೀರೇನು? ಅಥವಾ ರಾಜನೇನಾದರೂ ಬರುತ್ತಿರುವನೇ?" ಅದಕ್ಕೆ ರಾಜಗಹಸೆಟ್ಠಿಯು "ಯಾರಿಗೇನು ಔತಣವನ್ನು ಕೊಡುತ್ತಿಲ್ಲ, ಆದರೆ ನಾನು ತಥಾಗತರನ್ನು ನಾಳಿನ ಊಟಕ್ಕೆ ತಮ್ಮ ಭಿಕ್ಖು ಸಂಘದೊಡನೆ ಬರುವಂತೆ ಆಹ್ವಾನಿಸಿದ್ದೇನೆ."

'ತಥಾಗತ' ಅನ್ನುವ ಶಬ್ದವೇ ಅನಾಥಪಿಂಡಿಕನಿಗೆ ಅತ್ಯಂತ ಮಧುರವಾಗಿ ಕಂಡಿತು. "ಏನು 'ತಥಾಗತ' ಎಂದು ಹೇಳಿದೆಯೇ?" ಎಂದು ಮೂರುಸಾರಿ ಕೇಳಲು ಭಾವನು ಮೂರುಸಾರಿ "ಹೌದು, ತಥಾಗತರು" ಎಂದನು. ಅನಾಥಪಿಂಡಿಕನಿಗೆ ಆ ಶಬ್ದವೇ ಆ

ನಾಮವೇ ಅವನ ಕಿವಿಗಳಿಗೆ ಆಹ್ಲಾದಕರವಾಗಿ ಅತ್ಯಾಶ್ಚರ್ಯದಿಂದ: "ನಿಜವಾಗಿಯೂ ಈ ಜಗತ್ತಿನಲ್ಲಿ ತಥಾಗತ ಎನ್ನುವ ಶಬ್ದವೇ ನಾಮವೇ ಅಪರೂಪವಾಗಿ ಕೇಳಿಬರುವಂತಹುದು" ಎಂದನು. "ನಾನೀಗಲೇ ಅವರನ್ನು ನೋಡಬಹುದೇ" ಎಂದು ಅನಾಥಪಿಂಡಿಕನು ಕೇಳಿದನು. ಆಗಲೇ ಸಂಜೆ ಮುಸುಕಿ ಕತ್ತಲು ಬೀಳುವ ಸಮಯ. "ಈ ಹೊತ್ತಲ್ಲಿ ಹೋಗುವುದು ಸರಿಯಲ್ಲ, ನಾಳೆ ಮುಂಜಾನೆ ಹೋಗಬಹುದು" ಎಂದು ರಾಜಗಹಸೆಟ್ಠಿಯು ಹೇಳಿದನು.

ಅನಾಥಪಿಂಡಿಕನು ಎಷ್ಟೊಂದು ಸಂತೋಷಭರಿತನಾಗಿದ್ದನೆಂದರೆ ಇಡೀ ರಾತ್ರಿ ನಿದ್ದೆಯನ್ನೇ ಮಾಡಿರಲಿಲ್ಲ. ಏಕೆಂದರೆ ಅವನಿಗೆ ಅದು ಹಿತವಾಗಿತ್ತು! ಅಂತಿಮವಾಗಿ ಇನ್ನೂ ಮುಂಜಾನೆಯಾಗಲು ಬಹಳ ಹೊತ್ತು ಇದ್ದು, ಕತ್ತಲೆ ಇರುವಾಗಲೇ ನಗರವನ್ನು ಬಿಟ್ಟು ವೇಳುವನದತ್ತ ನಡೆದ. ತಥಾಗತರ ಆವಾಸವನ್ನು ಮುಟ್ಟಲು ಸ್ಮಶಾನವನ್ನು ಹಾದು ಹೋಗಬೇಕಿತ್ತು. ಅದು ಸ್ಮಶಾನವಾದ್ದರಿಂದ ಭಯವೂ ಇತ್ತು, ಕತ್ತಲಲ್ಲಿ ಹೆಜ್ಜೆ ಇಡಲು ಕಷ್ಟವಾಗುತ್ತಿತ್ತು, ಎಲ್ಲಿ ಕಲ್ಲು-ಮುಳ್ಳುಗಳಿವೆಯೋ ಎಂದು. ಮುಂದಕ್ಕೆ ಹೋಗಬೇಕೋ ಹಿಂದಕ್ಕೆ ಹೋಗಬೇಕೋ ಅನ್ನುವ ಅನುಮಾನವಿದ್ದ ಆ ಸಂದರ್ಭದಲ್ಲಿ ಸೀವಕ ಎನ್ನುವ ಒಬ್ಬ ಯಕ್ಷ ಬಂದು ಸಹಾಯ ಮಾಡಿದ. ಅನಾಥಪಿಂಡಿಕ ಹಿಂದಕ್ಕೆ ಹೋಗಬೇಕೋ ಮುಂದಕ್ಕೆ ಹೋಗಬೇಕೋ ಎಂದು ಭಯದಿಂದ ಅನುಮಾನ ಪಡುತ್ತಿದ್ದಾಗ ಅದೃಶ್ಯರೂಪದ ಸೀವಕನು ಸ್ಪಷ್ಟ ಧನಿಯಿಂದ ಹೀಗೆ ಹೇಳಿದ:

*"ಸತಂ ಹತ್ಥಿ ಸತಂ ಅಸ್ಸ ಸತಂ ಅಸ್ಸಕಾರಿ ರಥಾ,*
*ತಸಂ ಕಞ್ಞಾ ಸಹಸ್ಸಾನಿ ಆಮುಕ್ಕಾ ಮಣಿಕುಂಡಲಾ,*
*ಏಕಸ್ಸ ಪದವೀತಿಹಾರಸ್ಸ ಕಲಂ ನಾಗ್ಘಹಂತಿ ಸೋಲಸಿಂ."*

"ಒಂದುನೂರು ಸಹಸ್ರ ಆನೆಗಳು, ಒಂದುನೂರು ಸಹಸ್ರ ಅಶ್ವಗಳು, ಒಂದುನೂರು ಸಹಸ್ರ ಒಂಟೆಗಳು, ರಥಗಳು ಕರ್ಣಕುಂಡಲಗಳನ್ನು ಆಭರಣಗಳನ್ನು ಧರಿಸಿದ ಒಂದುನೂರು ಸಹಸ್ರ ಕನ್ಯೆಯರು - ಇವೆಲ್ಲವೂ ಸೇರಿದರೂ ನೀನು ಹಾಕುವ ಒಂದು ಹೆಜ್ಜೆಯ ಹದಿನಾರನೆಯ ಒಂದು ಭಾಗಕ್ಕೂ ಅವು ಸಮವಲ್ಲ."

ಸೀವಕನು ಉತ್ತೇಜಿಸುತ್ತಾ ಈ ಮಾತುಗಳನ್ನು ಹೇಳಿದ: "ಮುಂದೆ ಹೋಗು, ನಿನ್ನ ದಾರಿಯಲ್ಲಿಯೇ ಹೋಗು, ಹಿಂದಕ್ಕೆ ಹೋಗುವುದಕ್ಕಿಂತ ಮುಂದೆ ಹೋಗುವುದೇ ಮೇಲು."

ಆದ್ದರಿಂದ ಅನಾಥಪಿಂಡಿಕನು ಅತ್ಯಂತ ದೃಢತೆಯಿಂದ ಬೆಳಕು ಹರಿಯುವವರೆಗೂ ನಡೆದ. ಒಮ್ಮೆಲೆ 'ಬಾ ಸುದತ್ತ' ಎನ್ನುವ ಧ್ವನಿಯು ಕೇಳಿತು. ಅದೊಂದು ಸ್ಫೂರ್ತಿ ತುಂಬುವ ಅನುಭವವಾಗಿತ್ತು. ಯಾಕೆಂದರೆ ಈ ಹಿಂದೆ ಯಾರೂ ಅವನನ್ನು ಹೆಸರಿನಿಂದ ಕರೆದಿರಲಿಲ್ಲ. ಅವನ ತಂದೆ-ತಾಯಿಗಳು ಮಾತ್ರ ಹೆಸರು ಹಿಡಿದು ಕರೆಯುತ್ತಿದ್ದರು. ಅವನು ಮುಂಚೆ ಹೀಗೆ ಯೋಚಿಸಿದ್ದ: 'ನಾನು ಬುದ್ಧರಿಗೆ ಗೊತ್ತಿಲ್ಲ, ಅವರು



ಬುದ್ಧರೆಂಬುದು ನನಗೆ ಹೇಗೆ ಗೊತ್ತು. ಯಾಕೆಂದರೆ ಪೂರಣ ಕಸ್ಸಪರಂತಹ ಹಲವಾರು ಪಂಥದ ನಾಯಕರಿದ್ದಾರೆ, ಅವರೆಲ್ಲಾ ಅರಹತರೆಂದು ಹೇಳಿಕೊಂಡಿದ್ದಾರೆ. ಆದ್ದರಿಂದ ನಾನು ಬುದ್ಧರನ್ನು ಕಂಡಾಗ 'ತಥಾಗತ ಬುದ್ಧ'ರೆಂದು ಸರಿಯಾಗಿಯೇ ಸಂಬೋಧಿಸಿ, ನನ್ನನ್ನು 'ಸುದತ್ತ' ಎಂಬ ನನ್ನ ನಿಜವಾದ ಹೆಸರಿನಿಂದಲೇ ಪರಿಚಯ ಮಾಡಿಕೊಳ್ಳುತ್ತೇನೆ."

ಕೂಡಲೇ ಆಕೃತಿಯೊಂದು ನಡೆದು ಬಂದು ಆಸನವೊಂದರ ಮೇಲೆ ಕುಳಿತುಕೊಳ್ಳುವುದನ್ನು ಕಂಡನು. ತಾನು ಕಂಡ ಆಕೃತಿ ಸಮ್ಮಾಸಂಬುದ್ಧರೇ ಇರಬೇಕೆಂದು ಅನಾಥಪಿಂಡಿಕನು ಬುದ್ಧರ ಪಾದಪದ್ಮಗಳಿಗೆ ಎರಗಿ ಏನು ಹೇಳಬೇಕು ಎಂಬುದನ್ನು ಅರಿಯದೆ ಸೌಜನ್ಯದಿಂದ: "ಭಗವಾನರಿಗೆ ನಿದ್ದೆ ಚೆನ್ನಾಗಿ ಬಂದಿತೆ?" ಎಂದು ಕೇಳಿದನು. ಆಗ ಬುದ್ಧರು ಎರಡು ಗಾಥೆಗಳಲ್ಲಿ ಬುದ್ಧರ ನಿಜಸ್ಥಿತಿ ಏನೆಂಬುದನ್ನು ಹೀಗೆ ಹೇಳಿದ್ದಾರೆ:

*ಸಬ್ಬದಾ ವೆ ಸುಖಂ ಸೇತಿ, ಬ್ರಾಹ್ಮಣೊ ಪರಿನಿಬ್ಬುತೋ*
*ಯೋ ನ ಲಿಂಪತಿ ಕಾಮೇಸು, ಸೀತಿಭೂತೋ ನಿರೂಪದಿ*.*

ಯಾವುದೇ ಸಾಂಸಾರಿಕ ಸುಖಗಳಿಗೆ ಅಂಟಿಕೊಂಡಿರದ ಮತ್ತು ಕಾಮಗಳಿಂದ ಮುಕ್ತನಾದ ಬ್ರಾಹ್ಮಣನು (ಬುದ್ಧನು) ಯಾವಾಗಲೂ ಚೆನ್ನಾಗಿಯೇ ನಿದ್ದೆ ಮಾಡುತ್ತಾನೆ. ಆದ್ದರಿಂದ ಅವನು ಹೃದಯದಲ್ಲಿ ಶಾಂತವಾಗಿರುತ್ತಾನೆ ಮತ್ತು ಎಲ್ಲ ಉಪಾಧಿಗಳಿಂದ ಬಿಡುಗಡೆ ಹೊಂದಿದವನಾಗಿರುತ್ತಾನೆ.

*ಸಬ್ಬಾ ಆಸತ್ತಿಯೊ ಸೆತ್ತಾ, ವಿನೆಯ್ಯ ಹದಯೇ ದರಂ*
*ಉಪಸಂತೋ ಸುಖಂ ಸೇತಿ, ಸಂತಿಂ ಪಾಪ್ಪುಯ್ಯ ಚೇತಸಾ.*

ಎಲ್ಲ ರೀತಿಯ ಆಸಕ್ತಿಗಳನ್ನು ಕಡಿದುಕೊಂಡು ಹೃದಯದೊಳಗಿನ ಎಲ್ಲ ಕಾತರಗಳನ್ನು ಹೊರತೂರಿ ಪ್ರಶಾಂತನಾದವನು (ಬುದ್ಧನು) ಚೆನ್ನಾಗಿಯೇ ನಿದ್ದೆ ಮಾಡುತ್ತಾನೆ, ಯಾಕೆಂದರೆ ಅವನು ಶಾಂತಚಿತ್ತವನ್ನು ಗೆದ್ದಿದ್ದಾನೆ.

ಆನಂತರದಲ್ಲಿ ಭಗವಾನ್ ಬುದ್ಧರು ನವಾಂಗ ಬುದ್ಧ ಶಾಸನದ ಮೇಲೆ 'ಆನುಪುಬ್ಬಿ ಕಥಾ' ಎನ್ನುವ ಧಮ್ಮೋಪದೇಶವನ್ನು ಮಾಡುತ್ತಾರೆ. ಅದರಲ್ಲಿ ಕ್ರಮವಾಗಿ ನಿಬ್ಬಾಣವನ್ನು ಪಡೆಯುವ ಪಾರಮಾರ್ಥಿಕ ತತ್ವಗಳಿವೆ. ಅವು ಯಾವುವೆಂದರೆ:

1. ದಾನ ಕಥಾ
2. ಶೀಲ ಕಥಾ
3. ಸ್ವರ್ಗ ಕಥಾ
4. ಕಾಮಾನಂ ಆದೀನವ ಕಥಾ
5. ನೇಕ್ಖಮ್ಮೇ ಆನಿಸಂಸಾ ಕಥಾ

6 ರಿಂದ 9 - ಚಾತುರಾರ್ಯ ಸತ್ಯಗಳು.

* ನಾಲ್ಕುರೀತಿಯ ಉಪಾಧಿಗಳಿವೆ; ಕಿಲೇಶ, ಅಭಿಸಂಖಾರ, ಕಾಮಗುಣ ಮತ್ತು ಪಂಚಕ್ಖಂಧ.

ಹೀಗೆ ಕ್ರಮಾನುಸಾರವಾದ ಧಮ್ಮೋಪದೇಶದಿಂದ ಅನಾಥಪಿಂಡಿಕನ ಮನಸ್ಸು ಸಿದ್ಧವಾಗಿ ಹೃದಯವು ಹಣ್ಣಾಗಿರುವುದನ್ನು ಕಂಡು ಎಲ್ಲ ಬುದ್ಧರುಗಳ ಅನನ್ಯ ಧಮ್ಮೋಪದೇಶವಾದ ಚತುರಾರ್ಯ ಸತ್ಯವನ್ನು ಬೋಧಿಸಿದರು.

ಬುದ್ಧರ ಈ ಅನನ್ಯ ಧಮ್ಮೋಪದೇಶದಿಂದ ಅನಾಥಪಿಂಡಿಕನ ಮನಸ್ಸು ನಿಷ್ಕಲ್ಮಶವಾಗಿ ಧಮ್ಮಚಕ್ಷುವು ತೆರೆಯಲು ಆ ಮೂಲಕ 'ಯಾವುದೆಲ್ಲವೂ ಉದಯವಾಗುತ್ತದೆ ಅದೆಲ್ಲವೂ ಅಂತ್ಯಗೊಳ್ಳುತ್ತದೆ' (ಯಂ ಕಿಂಚಿ ಸಮುದಯೋ ಧಮ್ಮೋ, ಸಬ್ಬಂ ತಂ ನಿರೋಧೋ ಧಮ್ಮೋ) ಎಂಬ ಸತ್ಯವನ್ನು ಅರಿತನು. ಅನಾಥಪಿಂಡಿಕನು ಪಾರಮಾರ್ಥಿಕವಾಗಿ ಪರಿವರ್ತಿತನಾಗಿ ನಿಬ್ಬಾಣವನ್ನು ಸೇರುವ ಸ್ರೋತಾಪನ್ನನಾಗಿ ಸೋತಾಪತ್ತಿ ಫಲವನ್ನು ಪಡೆದನು.

ಈ ಪರಿವರ್ತನೆಯಿಂದ ಎಲ್ಲ ಊಹಾಪೋಹಗಳು, ಅನುಮಾನಗಳು, ಚಾಂಚಲ್ಯಗಳು ಮಾಯವಾದವು. ಧಮ್ಮದ ಆಳಕ್ಕೆ ಹೋಗಿ ತಥಾಗತನ ಶಾಸನದಲ್ಲಿ ಸ್ಥಾಪಿತನಾದನು. ಭಕ್ತಿಭಾವದಿಂದ ತುಂಬಿದ ಅನಾಥಪಿಂಡಿಕನು ಬುದ್ಧರನ್ನು ಮತ್ತು ಸಂಘವನ್ನು ಮಾರನೆಯದಿನ ಭಿಕ್ಷೆ ಸ್ವೀಕರಿಸಲು ತನ್ನ ಭಾವನ ಮನೆಗೆ ಬರಬೇಕೆಂದು ಪ್ರಾರ್ಥಿಸಿದನು. ಬುದ್ಧರು ಆಹ್ವಾನವನ್ನು ಸ್ವೀಕರಿಸಿದರು.

ಅನಾಥಪಿಂಡಿಕನು ಕೂಡಲೇ ತನ್ನ ಭಾವನ ಮನೆಗೆ ಹೋಗಿ ತನ್ನ ವ್ಯವಸ್ಥಾಪಕನನ್ನು ಮತ್ತು ಸಿಬ್ಬಂದಿಯನ್ನು ಕರೆದು ನಾಳೆ ತಥಾಗತ ಬುದ್ಧರು ಭಿಕ್ಷೆಯನ್ನು ಸ್ವೀಕರಿಸಲು ಬರುತ್ತಿರುವುದಾಗಿ ತಿಳಿಸಿ ಎಲ್ಲರೀತಿಯ ಉತ್ತಮ ವ್ಯವಸ್ಥೆಯನ್ನು ಮಾಡಿ ವೈಭವದ ಪಿಂಡಪಾತ ದಾನವನ್ನು ಭಾವನ ಮನೆಯಲ್ಲಿಯೇ ಆಗುವುದಾಗಿ ಹೇಳಿದನು. ಬುದ್ಧರು ಅನಾಥಪಿಂಡಿಕನಿಂದ ಭಿಕ್ಷೆ ಸ್ವೀಕರಿಸುವ ಸಂಗತಿ ಕೂಡಲೇ ಎಲ್ಲಕಡೆ ಹರಿದಾಡಿತು.

ಅನಾಥಪಿಂಡಿಕನ ಸಿಬ್ಬಂದಿಯು ವೈಭವದ ಪಿಂಡಪಾತ ದಾನವನ್ನು ಮಾಡಲು ಚುರುಕಾದಂತೆ, ಇತ್ತ ಭಾವನು ಆ ದಿನ ಮುಂಜಾನೆ ಬುದ್ಧರನ್ನು ಮತ್ತು ಭಿಕ್ಖು ಸಂಘವನ್ನು ಗೌರವಾದರಗಳಿಂದ ಸ್ವಾಗತಿಸಲು ಕಾರ್ಯೋನ್ಮುಖನಾದನು. ಆದರೆ ಯಾವಾಗ ತನ್ನ ಭಾವನಾದ ಅನಾಥಪಿಂಡಿಕನು ಪಿಂಡಪಾತ ದಾನವನ್ನು ನಾಳೆ ಮಾಡುತ್ತಿರುವುದು ಗೊತ್ತಾಯಿತೋ ಆಗ ಅವನು "ಸೋದರ, ನಾಳಿನ ಪಿಂಡಪಾತಕ್ಕೆ ಎಲ್ಲ ವ್ಯವಸ್ಥೆಯನ್ನು ನಾನೇ ಮಾಡುತ್ತೇನೆ, ನೀನು ನನ್ನ ಅತಿಥಿಯಾಗಿರುವುದರಿಂದ ನಾನೇ ಎಲ್ಲವನ್ನೂ ಮಾಡುತ್ತೇನೆ". ಅನಾಥಪಿಂಡಿಕನು ತನ್ನ ಸಿಬ್ಬಂದಿಗೆ ಸೂಕ್ತ ನಿರ್ದೇಶನವನ್ನು ಆಗಲೇ ನೀಡಿಯಾಗಿದ್ದರಿಂದ ವಿನಯದಿಂದಲೇ ರಾಜಗಹಸೆಟ್ಠಿಯ ವಿನಂತಿಯನ್ನು ಒಪ್ಪಿಕೊಳ್ಳಲಿಲ್ಲ.

ರಾಜಗಹ ಶೆಟ್ಟಿಯು ಶ್ರೀಮಂತ ವರ್ತಕರನ್ನು ಮತ್ತು ರಾಜ ಬಿಂಬಿಸಾರನನ್ನೂ ಆಹ್ವಾನಿಸಿದ್ದ. ಈ ಎಲ್ಲ ಗಣ್ಯರೂ ಬಂದು ನಾಳಿನ ಪಿಂಡಪಾತದ ಸುದ್ದಿ ತಿಳಿದಾಗ ಪ್ರತಿಯೊಬ್ಬರೂ ಅನಾಥಪಿಂಡಿಕನ ಬಳಿ ಹೋಗಿ ತಾವು ಧವಸ ಧಾನ್ಯಗಳನ್ನು ಕೊಡುತ್ತೇವೆ,



ಹಣ ಕೊಡುತ್ತೇವೆ, ಬೇಕಾದ ಸೇವೆಯನ್ನೆಲ್ಲ ಕೊಟ್ಟು ವೈಭವದಿಂದ ಪಿಂಡಪಾತ ದಾನವನ್ನು ಮಾಡುತ್ತೇವೆ ಎಂದರು. ಸ್ವತಃ ರಾಜ ಬಿಂಬಿಸಾರನೇ ತನ್ನ ಸೇವೆಯನ್ನು ಕೊಡುವುದಾಗಿ ಹೇಳಿದ. ಅನಾಥಪಿಂಡಿಕನು ವಿನಯದಿಂದಲೇ ಎಲ್ಲರ ಸೇವೆಯನ್ನು ಒಲ್ಲೆನೆಂದು ತನ್ನ ಸಾಮರ್ಥ್ಯದಿಂದಲೇ ದಾನವನ್ನು ನೀಡುವುದಾಗಿ ಹೇಳಿದನು.

ಮಾರನೆದಿನ ಅನಾಥಪಿಂಡಿಕನು ಭವ್ಯ ಭಿಕ್ಷಾ ಸಮಾರಂಭವನ್ನು ಏರ್ಪಡಿಸಿದನು. ಊಟವಾದ ಮೇಲೆ ಬುದ್ಧರು ಸೂಕ್ತವಾದ ಧಮ್ಮೋಪದೇಶವನ್ನು ನೀಡಿದರು. ಅದರಿಂದ ಪ್ರಭಾವಿತನಾಗಿ ತನ್ನಿಂದ ಸಾವತ್ಥಿಯ ಒಂದು ವಿಹಾರವನ್ನು ದಾನವಾಗಿ ಪಡೆಯಬೇಕೆಂದು ವಿನಂತಿಸಿದನು. ಬುದ್ಧರು ಸಮ್ಮತಿಸಿ ಹೀಗೆಂದರು: "ಸಮ್ಮಾಸಂಬುದ್ಧರು ಪ್ರಶಾಂತ ವಾತಾವರಣವನ್ನು ಇಷ್ಟಪಡುತ್ತಾರೆ". ಅನಾಥಪಿಂಡಿಕನು "ಭಗವಾನರೇ, ನಾನದನ್ನು ಅರ್ಥಮಾಡಿಕೊಳ್ಳುತ್ತೇನೆ" ಎಂದನು.

ಆನಂತರದಲ್ಲಿ ತನ್ನ ಸರಕನ್ನೆಲ್ಲ ಮಾರಿದನು; ಅವನಿಗೆ ಬಂದ ಲಾಭವು ತಾನು ದಾನಕ್ಕಾಗಿ ಮಾಡಿದ ಖರ್ಚಿಗಿಂತ ಜಾಸ್ತಿ ಬಂದಿತ್ತು. ನಲವತ್ತೈದು ಯೋಜನ (ಸುಮಾರು ಮುನ್ನೂರು ಮೈಲಿ) ದೂರ ಇರುವ ಸಾವತ್ಥಿಗೆ ಹಿಂದಿರುಗುವಾಗ ತನ್ನ ವ್ಯಾಪಾರಿ ಅಧಿಕಾರಿಗಳನ್ನು ಬೇರೆಯವರನ್ನು ಪ್ರತಿ ಹಳ್ಳಿ ನಗರಗಳಲ್ಲಿ ಭೇಟಿಯಾಗಿ ಬುದ್ಧರನ್ನು ಕಂಡು ಮಾತನಾಡಿ ಉಪಚರಿಸಿದ, ಧಮ್ಮವನ್ನು ಕೇಳಿದ ಅನುಭವವನ್ನು ಹಂಚಿಕೊಂಡನು. ಬುದ್ಧರು ಸಾವತ್ಥಿಯ ಕಡೆ ಚಾರಿಕಾದಲ್ಲಿದ್ದಾಗ (ಧಮ್ಮ ಪ್ರಚಾರಕ್ಕಾಗಿ ನಡಿಗೆ) ಅವರನ್ನು ಭವ್ಯವಾಗಿ ಸ್ವಾಗತಿಸುವಂತೆ ಉತ್ತೇಜಿಸಿದನು. ಅವರಿಗೆ ಸಾಕಷ್ಟು ಹಣವನ್ನು ಕೊಟ್ಟು ಬುದ್ಧರ ಚಾರಿಕಾವನ್ನು ಊಟ, ವಸತಿಗಳನ್ನು ಒದಗಿಸುವುದರ ಮೂಲಕ ಆನಂದದಾಯಕವಾಗಿರುವಂತೆ ವಿನಂತಿಸಿದನು.

ಅಲ್ಲಿನ ಜನಗಳಿಗೆ ಗಿಡಗಳನ್ನು ನೆಡುವಂತೆ, ಉದ್ಯಾನಗಳನ್ನು ನಿರ್ಮಿಸುವಂತೆ, ಭಿಕ್ಖುಗಳಿಂದ ವಸತಿಗಳನ್ನು ದಾನ ಧರ್ಮದ ಧವಸ ಧಾನ್ಯಗಳನ್ನು ಸಂಗ್ರಹಿಸಿಡಲು ಉಗ್ರಾಣಗಳನ್ನು ಕಟ್ಟಿಸುವಂತೆ ಹಣವನ್ನು ಕೊಟ್ಟನು. ಅವನು ಸಾರ್ವಜನಿಕವಾಗಿ ಘೋಷಿಸಿದ: "ಬುದ್ಧ ಗೌತಮರು ಈ ಜಗತ್ತಿಗೆ ಅರಳಿ ಬಂದಿದ್ದಾರೆ. ಪುಣ್ಯಕರ್ಮಗಳನ್ನು ಮಾಡಿ, ವಿಶೇಷವಾಗಿ ಅವರ ಧಮ್ಮನ್ನು ಕೇಳಿ, ಅದು ಪಾರಮಾರ್ಥಿಕ ಮುಕ್ತಿಯನ್ನು ಕೊಡುತ್ತದೆ." ಅವನ ಶ್ರೀಮಂತ ಗೆಳೆಯರು ಬುದ್ಧರನ್ನು ಸ್ವಾಗತಿಸಲು, ಅವರಿಗೆ ಸೇವೆ ಸಲ್ಲಿಸಲು ಎಲ್ಲ ವ್ಯವಸ್ಥೆಗಳನ್ನು ಮಾಡುವುದಾಗಿ ವಾಗ್ದಾನ ಮಾಡಿದರು. ಹೀಗೆ ಬುದ್ಧರ ಪ್ರಯಾಣ ವ್ಯವಸ್ಥೆಗೆ ಸಿದ್ಧಗೊಳಿಸಿ ತನ್ನ ನಗರಕ್ಕೆ ಹಿಂದಿರುಗಿದನು. ನಗರಕ್ಕೆ ಬಂದ ಕೂಡಲೇ ವಿಹಾರವನ್ನು ಕಟ್ಟಿಸಲು ಸುತ್ತಮುತ್ತಲಿನ ಪ್ರದೇಶವನ್ನು ಸರ್ವೇಕ್ಷಿಸಿದನು. ನಗರದಿಂದ ದೂರವೂ ಅಲ್ಲದ, ತೀರ ಹತ್ತಿರವೂ ಅಲ್ಲದ ಜಾಗವನ್ನು ಕಂಡನು. ಅದು ವನಪ್ರದೇಶವಾಗಿ ಸಣ್ಣ ಸಣ್ಣ ಗುಡ್ಡಗಳಿಂದ ಆವೃತವಾಗಿತ್ತು.

ಅನಾಥಪಿಂಡಿಕನು ರಾಜಕುಮಾರನನ್ನು ಅವನ ಅರಮನೆಯಲ್ಲಿ ಭೇಟಿಮಾಡಿ ಆ ಜಾಗವನ್ನು ತಾನು ಖರೀದಿಸುವ ಇಂಗಿತವನ್ನು ವ್ಯಕ್ತಪಡಿಸಿದನು. ರಾಜಕುಮಾರ ಜೇತನು

ಮೊದಲಿಗೆ ತಿರಸ್ಕರಿಸಿದರೂ ಆನಂತರ ಒಂದು ಷರತ್ತಿನ ಮೇಲೆ ಮಾರಲು ಒಪ್ಪಿದ. ಆ ಷರತ್ತು ಎಂದರೆ: 'ಆ ಇಡೀ ಜಾಗವನ್ನೆಲ್ಲ ಬಂಗಾರದ ನಾಣ್ಯಗಳಿಂದ ಹರವಿದರೆ'. ಒಬ್ಬ ಮಧ್ಯಸ್ಥನ ಮೂಲಕ ವ್ಯಾಪಾರ ಕುದುರಿತು. ಅನಾಥಪಿಂಡಿಕನು ಹಲವಾರು ಬಂಡಿಗಳಲ್ಲಿ ಬಂಗಾರದ ನಾಣ್ಯಗಳನ್ನು ತುಂಬಿಸಿ ತಂದು ಒಂದು ತುದಿಯಿಂದ ಇನ್ನೊಂದು ತುದಿಯವರೆಗೆ ಹರವಿದ, ಆದರೆ ಒಂದು ಪುಟ್ಟ ಜಾಗವನ್ನು ಬಿಟ್ಟು. ಆ ಪುಟ್ಟ ಜಾಗವನ್ನು ಮಾತ್ರ ಗೋಪುರದ ದ್ವಾರ ಮಾರ್ಗವನ್ನು ಕಟ್ಟಲು ಬಿಟ್ಟಿದ್ದ.

ಅನಾಥಪಿಂಡಿಕನು ಹದಿನೆಂಟು ಕೋಟಿ ಕಹಾಪಣ ಮೌಲ್ಯದ ಬಂಗಾರದ ನಾಣ್ಯಗಳನ್ನು ಖರ್ಚು ಮಾಡಿದ್ದ. ಇನ್ನೂ ಹರವದೇ ಉಳಿದ ಖಾಲಿ ಪುಟ್ಟ ಜಾಗವನ್ನು ತುಂಬಲು ಇನ್ನಷ್ಟು ಬಂಗಾರದ ನಾಣ್ಯಗಳನ್ನು ತರಲು ತನ್ನ ಜನರಿಗೆ ಹೇಳಿದ. ಜೇತ ರಾಜಕುಮಾರ ಅನಾಥಪಿಂಡಿಕನ ಈ ಅನನ್ಯ ಪ್ರೀತಿ-ಭಕ್ತಿಯನ್ನು ನೋಡಿ ದಿಙ್ಮೂಢನಾಗಿ ಹೇಳಿದ: "ಸಾಕು, ಶೆಟ್ಟರೆ ಸಾಕು! ಆ ಜಾಗವನ್ನು ತುಂಬಲು ಇನ್ನು ಬಂಗಾರದ ನಾಣ್ಯಗಳನ್ನು ಹರವಬೇಡಿ. ನಾನೂ ಕೂಡ ಆ ಜಾಗವನ್ನು ಗೋಪುರದ ದ್ವಾರ ಮಾರ್ಗವನ್ನು ಕಟ್ಟಲಿಕ್ಕಾಗಿ ದಾನ ಮಾಡುತ್ತೇನೆ." ಅನಾಥಪಿಂಡಿಕನು ಹೀಗೆ ಯೋಚಿಸುತ್ತಲೇ ಅವನ ದಾನವನ್ನು ಒಪ್ಪಿದ: "ರಾಜಕುಮಾರ ಜೇತನು ಬುದ್ಧರನ್ನು ಸಂದರ್ಶಿಸಿ ಅವರ ಧರ್ಮವನ್ನು ಕೇಳದಮೇಲೆ ಅವನು ಪಾರಮಾರ್ಥಿಕವಾಗಿ ವೃದ್ಧಿಹೊಂದುತ್ತಾನೆ. ಇದರಿಂದ ಎಲ್ಲರಿಗೂ ಅನುಕೂಲವಾಗುತ್ತದೆ". ಹೀಗೆ ಜಾಗವನ್ನು ಖರೀದಿಸಿದ ನಂತರ ಮತ್ತೆ ಹದಿನೆಂಟು ಕೋಟಿ ಕಹಾಪಣ ಮೌಲ್ಯದ ಬಂಗಾರದ ನಾಣ್ಯಗಳನ್ನು ಖರ್ಚುಮಾಡಿ ವಿಹಾರಗಳನ್ನು, ಧ್ಯಾನಕೋಶಗಳನ್ನು, ಧಮ್ಮಸಭಾ ಭವನಗಳನ್ನು, ಭೋಜನ ಶಾಲೆಯನ್ನು, ಧ್ಯಾನಯುಕ್ತ ನಡಿಗೆ ಮಾರ್ಗಗಳನ್ನು, ಬಚ್ಚಲುಮನೆ ಶೌಚಾಲಯಗಳನ್ನು, ಸ್ನಾನದ ಕೊಳಗಳನ್ನು, ಬಾವಿಗಳನ್ನು ನಿರ್ಮಿಸಿದ. ಹೀಗೆ ಜೇತವನಾರಾಮವು ಭವ್ಯವಾದ ವಿಹಾರವಾಗಿ ಮಾರ್ಪಾಟಾಯಿತು. ಅದಕ್ಕೊಂದು ಮಹಾ ಆಧ್ಯಾತ್ಮಿಕ ಕೇಂದ್ರವೆಂಬ ಕಳೆಯೂ ಬಂದಿತು. ಮುಂದೆ ಬುದ್ಧರು ಅಲ್ಲಿ ಧಮ್ಮೋಪದೇಶ ಮಾಡಿದರು. ಅಲ್ಲಿ ನೀಡಿದ ಸುತ್ತಗಳೆಲ್ಲವೂ ಹೀಗೆ ಆರಂಭವಾಗುತ್ತವೆ: 'ಏವಂ ಮೇ ಸುತಂ – ಏಕಂ ಸಮಯಂ ಭಗವಾ ಸಾವತ್ಥಿಯಂ ವಿಹರತಿ ಜೇತವನೇ ಅನಾಥಪಿಣ್ಡಿಕಸ್ಸ ಆರಾಮೆ..."

ಜೇತವನ ವಿಹಾರವನ್ನು ನಿರ್ಮಿಸುವ ಕಾಯಕವು ಸಂಪೂರ್ಣವಾಗಿ ಮುಗಿದಮೇಲೆ ಒಬ್ಬ ವಿಶೇಷ ವ್ಯಕ್ತಿಯನ್ನು ಬುದ್ಧರ ಬಳಿ ಕಳುಹಿಸಿ ಸಾವತ್ಥಿಗೆ ಬಂದು ತಾನು ನಿರ್ಮಿಸಿದ ವಿಹಾರವನ್ನು ಸ್ವೀಕರಿಸುವಂತೆ ಆಹ್ವಾನವನ್ನು ಕಳುಹಿಸಿದನು. ಆಹ್ವಾನದ ನಿರೂಪವು ಬಂದಕೂಡಲೇ ಬುದ್ಧರು ಮತ್ತು ಭಿಕ್ಖು ಸಂಘವು ಸಾವತ್ಥಿಯತ್ತ ನಡೆದರು.

ದಾರಿಯುದ್ದಕ್ಕೂ ಪ್ರತಿಯೋಜನಕ್ಕೊಂದರಂತೆ ನಿರ್ಮಿಸಿದ ನಲವತ್ತೈದು ವಿಹಾರಗಳಲ್ಲಿ ಬುದ್ಧರು ತಂಗಿದರು. ಬುದ್ಧರು ಸಾವತ್ಥಿಗೆ ಬಂದಾಗ ಭವ್ಯವಾದ ಸ್ವಾಗತವನ್ನು ಏರ್ಪಡಿಸಿದನು. ಅದರಲ್ಲಿ ರಾಜ ಪ್ರಮುಖರು, ಪುರಪ್ರಮುಖರು ಮುಂತಾದವರು ಇದ್ದರು. ಅಷ್ಟೇ ವಿಜೃಂಭಣೆಯಿಂದ ಭಿಕ್ಷೆ ದಾನವನ್ನು ಏರ್ಪಡಿಸಿದ್ದನು.



ಭಿಕ್ಷೆ ಸ್ವೀಕರಿಸಿಯಾದ ಮೇಲೆ ಅವನು ವಿನಯದಿಂದ ಬುದ್ಧರಿಗೆ ಕೇಳಿದನು: "ಭಗವಾನರೆ, ಈ ಜೇತವನ ವಿಹಾರವನ್ನು ಯಾವರೀತಿಯಲ್ಲಿ ಅರ್ಪಿಸಬೇಕು?" ಆಗ ಬುದ್ಧರು ಹೇಳಿದರು: "ನೀನು ಈ ವಿಹಾರವನ್ನು ನಾಲ್ದೆಸೆಗಳಿಂದ ಬರುವ ಈಗಿನ ಹಾಗು ಮುಂದಿನ ಭಿಕ್ಖು ಸಂಘಕ್ಕೆ ಅರ್ಪಿಸು" (ಆಗತಾಂಗತಾ ಚತುದಿಸ್ಸಾ ಸಾಂಘಿಕ).

ವಿಹಾರವನ್ನು ದಾನವಾಗಿ ಅರ್ಪಿಸಲಾಗಿದೆ ಎಂಬುದನ್ನು ಸಂಕೇತಿಸುವಂತೆ ಸಾಂಪ್ರದಾಯಿಕವಾಗಿ ಭೂಮಿಯ ಮೇಲೆ ಜಲವನ್ನು ಸುರಿದು ಭಗವಾನರು ಈ ಐದು ಗಾಥೆಗಳನ್ನೊಳಗೊಂಡ ಒಂದು ಪ್ರಭಾವಿ ಧಮ್ಮೋಪದೇಶವನ್ನು ನೀಡಿದರು.

1. ***ಸೀತಂ ಉನ್‌ಹಂ ಪಟಿಹನತಿ***
   ***ತತೋ ವಾಲಮಿಗಾನಿ ಚ***
   ***ಸರೀಸಪೇ ಚ ಮಕಸೆ***
   ***ಸಿಸಿರೇ ಚಾಪಿ ವಿರಿಯೋ***

ಭಿಕ್ಖು ವಿಹಾರಗಳು ಅತಿ ಶೀತೋಷ್ಣಗಳಿಮದ, ಕ್ರೂರ ಮೃಗಗಳಿಂದ ಸರೀಸೃಪಗಳಿಂದ ವರ್ಷಕಾಲದ ಮಳೆಯಿಂದ ರಕ್ಷಣೆಯನ್ನು ಕೊಡುತ್ತವೆ.

2. ***ತತೋ ವಾತಾತಪೋ ಘೋರೋ***
   ***ಸಂಜಾತೋ ಪರಿಹನತಿ***
   ***ಲೇನತ್ಥಂಚ ಸುಖತ್ಥಂಚ***
   ***ಝಾಯಿತುಂಚಾ ವಿಪಸ್ಸಿತುಮ್***
   ***ವಿಹಾರದಾನಂ ಸಂಘಸ್ಸ***
   ***ಅಗ್ಗಂ ಬುದ್ಧೇನ ವನ್ನಿತಂ***

ಅವು ಬಿಸಿ ಹವೆಯನ್ನು ದೂರಮಾಡಿ ಧ್ಯಾನ ಮಾಡಲು ಮತ್ತು ವಿಪಸ್ಸನ ಜ್ಞಾನವನ್ನು ದೊರಕುವಂತೆ ಮಾಡಲು ಸುಖ ವಾತಾವರಣವನ್ನು ಕೊಡುತ್ತವೆ. ಹೀಗೆ ಭಿಕ್ಖು ವಿಹಾರಗಳನ್ನು ಪವಿತ್ರ ಸಂಘಕ್ಕೆ ದಾನ ಮಾಡುವುದು ಶ್ರೇಷ್ಠವೆಂದು ಭಗವಾನರು ವರ್ಣಿಸಿದ್ದಾರೆ.

3. ***ತಸ್ಮಾಹಿ ಪಂಡಿತೋ ಪೋಸೋ***
   ***ಸಂಪಸ್ಸಂ ಅತ್ಥಮತ್ತಾನೊ***
   ***ವಿಹಾರೇ ಕಾರಯೇ ರಮ್ಮೇ***
   ***ವಾಸಯೆತ್ಥಾ ಬಹುಸ್ಸುತೇ***

ಆದ್ದರಿಂದ ತನ್ನ ಪಾರಮಾರ್ಥಿಕ ಉನ್ನತಿಯನ್ನು ನಿಬ್ಬಾಣವನ್ನು ಸಾಧಿಸುವ ಸಲುವಾಗಿ ಸಂಘಕ್ಕಾಗಿ ವಿಹಾರಗಳನ್ನು ನಿರ್ಮಿಸಿ, ಆನಂತರದಲ್ಲಿ ಅವನ್ನು ಬಹುಶೃತರಾದ ಭಿಕ್ಖುಗಳ ವಾಸಕ್ಕಾಗಿ ಅರ್ಪಿಸಬೇಕು.

4. ***ತೇಸಂ ಅನ್ನಂಚ ಪಾನಂಚ***
***ವತ್ಥಾ ಸೇನಾಸನಾನಿ ಚ***
***ದದೇಯ್ಯ ಉಜುಭೂತೇಸು***
***ವಿಪ್ಪಸನ್ನೇನ ಚೇತಸಾ***

ಅಲ್ಲಿ ವಾಸಿಸುವ ಶುದ್ಧ ವಾಸಿಗಳಿಗೆ ಅನ್ನ, ನೀರು, ವಸ್ತ್ರ, ನಿರ್ವಹಿಸಲು ಬೇಕಾದ ಸಂಗತಿಗಳನ್ನೂ ದಾನ ಮಾಡಬೇಕು.

5. ***ತೇ ಅಸ್ಸ ಧಮ್ಮಂ ದೇಸೇಂತಿ***
***ಸಬ್ಬ ದುಕ್ಖಪನೂದನಂ***
***ಯಂಸ ಸೊ ಧಮ್ಮಂ ಇಧ ಇಞ್ಞಾಯ***
***ಪರಿನಿಬ್ಬಾತಿ ಅನಾಸವೊ.***

ಆಗ ಅವರು ಸರ್ವ ದುಃಖವನ್ನು ನಾಶಮಾಡುವ ಶ್ರೇಷ್ಠವಾದ ಧಮ್ಮವನ್ನು ಬೋಧಿಸುತ್ತಾರೆ ಮತ್ತು ಶ್ರೇಷ್ಠ ಧಮ್ಮವನ್ನು ತಿಳಿದ ಅವರು ಕ್ಲೇಶಮುಕ್ತರಾಗಿ ನಿಬ್ಬಾಣವನ್ನು ಪಡೆದು ಪಾರಮಾರ್ಥಿಕ ಆನಂದವನ್ನು ಇಲ್ಲೇ ಈಗಲೇ ಅನುಭವಿಸುತ್ತಾರೆ.

ಈ ಧಮ್ಮೋಪದೇಶವನ್ನು ನೀಡಿದ ಮೇಲೆ ಬುದ್ಧರು ತಮ್ಮ ಭಿಕ್ಖುಗಳ ಸಮೇತ ಹೊಸ ವಿಹಾರದಲ್ಲಿ ತಂಗಿದರು. ಈ ಜೇತವನವನ್ನು ಕಟ್ಟಲು ಅನಾಥಪಿಂಡಿಕನು ಭೂಮಿಗೆ-18, ಕಟ್ಟಡ ಕಟ್ಟಲು-18, ಒಂಭತ್ತು ತಿಂಗಳ ಕಾಲ ವಿಹಾರದ ಲೋಕಾರ್ಪಣೆಯ ಸಂಭ್ರಮದ ಕಾರ್ಯಕ್ರಮಕ್ಕೆ-18; ಹೀಗೆ ಒಟ್ಟು 54 ಕೋಟಿ ಕಹಾಪಣಗಳನ್ನು ಖರ್ಚು ಮಾಡಿದನು.

## ನಿರಂತರ ಬೆಂಬಲ

ಹೀಗೆ ಅನಾಥಪಿಂಡಿಕನು ಜೇತವನದಲ್ಲಿ ವಿಹಾರವನ್ನು ಸ್ಥಾಪಿಸಿದುದರಿಂದ ಮಹಾ ಸಂಘದ ಶ್ರೇಷ್ಠದಾನಿ ಎನ್ನಿಸಿಕೊಂಡನು. ಅಲ್ಲಿಗೇ ಅವನ ಕಾರ್ಯ ನಿಲ್ಲಲಿಲ್ಲ. ಪವಿತ್ರ ಭಿಕ್ಖುಸಂಘಕ್ಕೆ ಅತ್ಯಂತ ಶ್ರದ್ಧಾಭಕ್ತಿಗಳಿಂದ ಆಸರೆಯಾಗಿ ನಿಂತನು. ವಿಹಾರಕ್ಕೆ ಮುಂಜಾನೆಯೇ ಅಕ್ಕಿಗಂಜಿಯನ್ನು ಕಳುಹಿಸಿ ಭಿಕ್ಖುಗಳ ಹಿಂದಿನ ದಿನದ ದೀರ್ಘ ಉಪವಾಸದ ನಂತರ ಬೇಕಾದ ಚೈತನ್ಯಕ್ಕೆ ನೆರವಾಗಿದ್ದನು.

ಆಗ ನೂರಾರು ಜನ ಭಿಕ್ಖುಗಳು ಈ ಏಳು ಅಂತಸ್ತಿನ ವಿಹಾರಕ್ಕೆ ಮುಂಜಾನೆಯೇ ಬಂದು ಅವರ ಪ್ರಮುಖವಾದ ಈ ಊಟವನ್ನು ಹೊಟ್ಟೆ ತುಂಬ ಮಾಡುತ್ತಿದ್ದರು. ಈಗಲು ಬೌದ್ಧ ಭಿಕ್ಖುಗಳು ಮುಂಜಾನೆ ತಮ್ಮ ಆಹಾರವನ್ನು ಮುಗಿಸಿದ ಮೇಲೆ ಯಾವ ಘನ ಆಹಾರವನ್ನೂ ತೆಗೆದುಕೊಳ್ಳುವುದಿಲ್ಲ. ಮುಂಜಾನೆ ಈ ಬಹು ಮಹಡಿಯ ವಿಹಾರವು ನೂರಾರು ಕಾವಿಬಣ್ಣದ ಚೀವರಗಳಿಂದ ಕಂಗೊಳಿಸಿ ಒಂದು ಪವಿತ್ರ ವಾತಾವರಣವೇ ಅಲ್ಲಿ ಸೃಷ್ಟಿಯಾಗುತ್ತಿತ್ತು.



ಹಾಗೆಯೇ ಪ್ರತಿ ಸಂಜೆ ಅನಾಥಪಿಂಡಿಕನು ನಿವಾಸಿ ಭಿಕ್ಖುಗಳಿಗೆ ಚೀವರಕ್ಕೆ ಬೇಕಾದ ಬಟ್ಟೆ, ಪಿಂಡಪಾತ್ರೆಗಳು, ಔಷಧಿಗಳನ್ನು ಒದಗಿಸುತ್ತಿದ್ದನು. ಜೇತವನ ವಿಹಾರವನ್ನು ಅಂದವಾಗಿಡುವ, ದುರಸ್ತಿ ಮಾಡುವ ಕೆಲಸಗಳನ್ನು ಮಾಡುತ್ತಿದ್ದನು. ಅವನ ನೆರವನ್ನು ಎಲ್ಲರೂ ಯಾವಾಗಲೂ ಪಡೆಯುತ್ತಿದ್ದರು. ಈ ರೀತಿಯ ಔದಾರ್ಯದ ಮತ್ತು ಅದ್ಭುತ ಸೇವೆಯನ್ನು ಮಾಡುತ್ತಿದ್ದ ಅನಾಥಪಿಂಡಿಕನನ್ನು ಸಂಘದ ಸರ್ವಶ್ರೇಷ್ಠ ದಾತನೆಂದು ಬುದ್ಧರು ಘೋಷಿಸಿದರು.

***"ಏತದಗ್ಗಂ ಭಿಕ್ಖವೇ, ಮಮಸಾವಕಾನಂ ಉಪಾಸಕಾನಂ***
***ದಾಯಕಾನಂ ಯದಿದಂ ಸುದತ್ತೋ ಗಹಪತಿ ಅನಾಥಪಿಂಡಿಕೋ."***

"ಭಿಕ್ಖುಗಳೇ, ನನ್ನೆಲ್ಲ ಶಿಷ್ಯರ ಪೈಕಿ ಗೃಹಪತಿಯಾದ ಸುದತ್ತ ಅನಾಥಪಿಂಡಿಕನು ಸರ್ವಶ್ರೇಷ್ಠ ಉಪಾಸಕ ದಾಯಕನು." – ಅಂಗುತ್ತರ ನಿಕಾಯ – 1.14

ಮುಂದಿನ ದಿನಗಳಲ್ಲಿ ಅನಾಥಪಿಂಡಿಕಾರಾಮವು ಬುದ್ಧನ ಧಮ್ಮೋಪದೇಶಗಳ ಸಿಂಚನದ ಕೇಂದ್ರವಾಯಿತು. ಬುದ್ಧರು ತಮ್ಮ ನಲವತ್ತೈದು ವರ್ಷಗಳ ಭವ್ಯ ಧಮ್ಮ ಪ್ರಚಾರದ ಬದುಕಿನಲ್ಲಿ ಇಪ್ಪತ್ತೈದು ವರ್ಷಗಳನ್ನು ಸಾವತ್ಥಿಯ ಅನಾಥಪಿಂಡಿಕಾರಾಮದಲ್ಲೇ ಕಳೆದರು. ಅಂದರೆ ಬುದ್ಧರು ಇಪ್ಪತ್ತೈದು ವರ್ಷಗಳು ನಿರಂತರವಾಗಿ ಸಾವತ್ಥಿಯಲ್ಲಿ ಕಳೆಯಲಿಲ್ಲ. ಧಮ್ಮ ಸಂದೇಶವನ್ನು ಚಾರಿಕಾ ಅಂದರೆ ಧಮ್ಮಯಾತ್ರೆ ಮಾಡುತ್ತಾ ಭಾರತದ ಉದ್ದಗಲದಲ್ಲಿ ಹಲವಾರು ಕಡೆ ವರ್ಷಾವಾಸ ಮಾಡುತ್ತಾ ಸಾರಿದರು. ಚಾರಿಕಾ ಮುಗಿದ ನಂತರ ತಮ್ಮ ಕೇಂದ್ರ ಸ್ಥಾನವಾದ ಸಾವತ್ಥಿಗೆ ಬರುತ್ತಿದ್ದರು.

## ರಾಜ ಶುದ್ಧೋಧನನು ತನ್ನ ರಾಯಬಾರಿಗಳನ್ನು ಕಳುಹಿಸುವುದು

ರಾಜಗಹದ ವೇಳುವನದ ವಿಹಾರದಲ್ಲಿ ನೆಲೆಗೊಂಡ ಮೇಲೆ ಬುದ್ಧರ ದಿನಚರಿ ಕಾರ್ಯಕ್ರಮದಿಂದ ಕೂಡಿತ್ತು. ಅಲ್ಲಿ ಅಂಗ ಮಗಧ ದೇಶಗಳಿಂದ ವಿಭಿನ್ನ ಕೃಷಿಗಳಲ್ಲಿ ನೆಲೆಗೊಂಡಿರುವ ಸಾವಿರಾರು ಜನರಿಗೆ ಧಮ್ಮೋಪದೇಶವನ್ನು ಮಾಡುತ್ತಿದ್ದರು. ಜನರು ಸಾಂಸಾರಿಕ ತಾಪತ್ರಯಗಳಿಂದ ಬಿಡುಗಡೆಗಾಗಿ ತಂಡೋಪತಂಡವಾಗಿ ಬರುತ್ತಿದ್ದರು. ಬುದ್ಧರು ತಮ್ಮ ಅಮೃತವಾಣಿಯಿಂದ ಧಮ್ಮಸಿಂಚನ ಮಾಡುತ್ತಿದ್ದರು. ಸಾವಿರಾರು ಜನ ಧಮ್ಮವನ್ನು ಕೇಳಿ ಲೋಕೋತ್ತರ ಮಗ್ಗ ಮತ್ತು ಫಲವನ್ನು ಸಿದ್ಧಿಸಿಕೊಂಡು ನಿಬ್ಬಾಣವನ್ನನುಭವಿಸುತ್ತಿದ್ದರು.

ಹತ್ತು ಸಾವಿರ ಅರಹತರು ರೂಪುಗೊಂಡರು. ಜನ ತಮ್ಮ ಪೂರ್ವ ಪರಿಟ್ಠಾಣ (ಸಂಕಲ್ಪ) ಮತ್ತು ಅಧಿಟ್ಠಾಣ (ನಿರ್ಧಾರ) ಗಳ ಅನುಸಾರ ನಿಬ್ಬಾಣವನ್ನು ಪಡೆದರು. ಬುದ್ಧರ ಇರವಿನಲ್ಲಿ ವೇಳುವನವು ಸಾಂಸಾರಿಕ ಬಂಧನದ ಬಿಡುಗಡೆಯ ಮಹಾ ಸಂಭ್ರಮವಾಗಿ ಮಾರ್ಪಟ್ಟಿತು. ಪಾಳಿ ತಿಪಿಟಕಗಳು ಏನು ಹೇಳುತ್ತವೆಂದರೆ ಬುದ್ಧರು ಅರ್ಹತ ತಾರೆಗಳ ನಡುವೆ ಪೂರ್ಣ ಚಂದ್ರನಂತೆ ಶೋಭಾಯಮಾನವಾಗಿದ್ದರು.

ಇದೇ ಸಮಯಕ್ಕೆ ರಾಜ ಶುದ್ಧೋಧನನಿಗೆ ಅಧಿಕೃತ ಮೂಲಗಳಿಂದ ತನ್ನ ಮಗ ರಾಜಕುಮಾರ ಸಿದ್ಧಾರ್ಥ ಗೌತಮನು ದೇವಮಾನವರ ಗುರುವಾಗಿ ಸಮ್ಮಾಸಂಬುದ್ಧನಾದನೆಂಬ ಸಮಾಚಾರ ತಿಳಿಯಿತು. ಆರು ವರ್ಷಗಳ ಕಠಿ ತಪಸ್ಸಿನ ಮೂಲಕ ಬುದ್ಧನಾಗಿ ವಾರಾಣಸಿ ಬಳಿ ಇರುವ ಸಾರನಾಥದಲ್ಲಿ ಪಂಚವಗ್ಗೀಯ ಭಿಕ್ಖುಗಳಿಗೆ ಧಮ್ಮಚಕ್ಕಪವತ್ತನ ಸುತ್ತವನ್ನು ಬೋಧಿಸದನೆಂಬುದನ್ನೂ ತಿಳಿದನು. ಬುದ್ಧರು ಸಾರಾನಾಥದಲ್ಲಿ ವರ್ಷಾವಾಸವನ್ನು ಮುಗಿಸಿ ಅರವತ್ತು ಅರಹಂತರಿಂದ ಭಿಕ್ಖು ಸಂಘವನ್ನು ಸ್ಥಾಪಿಸಿ ಅವರಿಗೆಲ್ಲ "ಚರಥ ಭಿಕ್ಖವೇ, ನಡೆಯಿರಿ... ಬಹುಜನರ ಹಿತಕ್ಕಾಗಿ...) ಸಂದೇಶವನ್ನು ನೀಡಿ ಅಲ್ಲಿಂದ ಪ್ರಿಯ ಶಿಷ್ಯ ದೊರೆ ಬಿಂಬಿಸಾರನಿಂದ ದಾನವಾಗಿ ಪಡೆದ ವೇಳುವನದಲ್ಲಿ ತಂಗಿದ್ದರು.

ರಾಜ ಶುದ್ಧೋಧನನು ಮಗನ ಶುಭವಾರ್ತೆಯನ್ನು ತಿಳಿದು ಆನಂದ ತುಂದಿಲನಾಗಿ ಬುದ್ಧಿವಂತ ಮಂತ್ರಿಯನ್ನು ಬುದ್ಧರ ಬಳಿಗೆ ಕಳಿಸಲು ತೀರ್ಮಾನಿಸಿದನು. ಅವನಿಗೆ ಹೀಗೆ ಸೂಚನೆ ನೀಡಿದನು: "ಪ್ರಿಯ ಮಂತ್ರಿಯೇ, ನೀನು ಒಂದು ಸಾವಿರ ಶಾಕ್ಯ ಮುಖ್ಯಸ್ಥರನ್ನು ಜೊತೆ ಮಾಡಿಕೊಂಡು ರಾಜಗಹ ನಗರಕ್ಕೆ ಹೋಗಿ ಬುದ್ಧರನ್ನು ನಮ್ಮ ಪರವಾಗಿ ಆಹ್ವಾನಿಸು". ಅದರಂತೆಯೇ ಮಂತ್ರಿಯು ವೇಳುವನಕ್ಕೆ ಹೋದ. ಆದರೆ ರಾಜ ನೀಡಿದ "ಪರಮ ಪೂಜ್ಯರೆ, ತಮ್ಮ ತಂದೆ ರಾಜ ಶುದ್ಧೋಧನರು ತಮಗೆ ಗೌರವವನ್ನು ಸಲ್ಲಿಸಿದ್ದಾರೆ ಮತ್ತು ತಾವು ಕಪಿಲವತ್ಥುವಿಗೆ ದಯಮಾಡಿ ಬಂದು ಎಲ್ಲರ ಒಳಿತಿಗಾಗಿ ಧಮ್ಮವನ್ನು ಉಪದೇಶಿಸಬೇಕು" ಎಂಬ ಸಂದೇಶವನ್ನು ಹೇಳುವುದೇ ಮರೆತ.

ಮಂತ್ರಿ ಮತ್ತು ಅವನ ಪರಿವಾರ ಕಪಿಲವತ್ಥುವಿನಿಂದ ರಾಜಗಹದವರೆಗಿನ ಅರವತ್ತು ಯೋಜನ (ಒಂದು ಯೋಜನ = ಏಳು ಮೈಲಿ) ದಾರಿ ಸವೆಸಿದ್ದರು. ಊರು ಊರುಗಳಲ್ಲಿ ವೇಗದ ರಥಗಳನ್ನು ಬದಲು ಮಾಡಿಕೊಂಡು ಅಂತಿಮವಾಗಿ ರಾಜಗಹಕ್ಕೆ ಬಂದಿದ್ದರು. ಮೊದಲು ಅವರು ದೊರೆ ಬಿಂಬಿಸಾರನನ್ನು ಕಂಡು ಅವನ ಸಹಾಯವನ್ನು, ಅನುಮತಿಯನ್ನು ಪಡೆದರು. ದೊರೆ ಬಿಂಬಿಸಾರನು ತಾನು ಒಬ್ಬ ವಿನಮ್ರ ಸೇವಕ, ಭಗವಾನರನ್ನು ನೀವೇ ಹೋಗಿ ನೋಡಿ, ಆಶೀರ್ವಾದವನ್ನು ಪಡೆಯಬಹುದೆಂದು ಹೇಳಿದನು. ಮಂತ್ರಿಮಿತ್ರರಿಂದೊಡಗೂಡಿದ ಶಾಕ್ಯ ಪರಿವಾರ ವೇಳುವನವನ್ನು ಸೇರಿದಾಗ ತೇಜೋಮಯ ಭಗವಾನ್ ಬುದ್ಧರು ಭಿಕ್ಖುಗಳು, ಮುಖ್ಯ ಪುರಜನರು ಮತ್ತು ಸಾಮಾನ್ಯ ಉಪಾಸಕರ ನಡುವೆ ಕುಳಿತು ಧಮ್ಮೋಪದೇಶವನ್ನು ನೀಡುತ್ತಿದ್ದರು. ಮಂತ್ರಿಯು ಹೀಗೆ ಯೋಚಿಸಿದ: 'ರಾಜನ ಸಂದೇಶವನ್ನು ಭಗವಾನರಿಗೆ ಮುಟ್ಟಿಸುವ ಮುನ್ನ ಧಮ್ಮೋಪದೇಶವನ್ನು ಕೇಳೋಣ'. ಹೀಗೆ ಸಭಿಕರ ಹೊರ ಆವರಣದಲ್ಲಿ ಮಂತ್ರಿ, ಅವನ ಶಾಕ್ಯ ಪುರಜನರು ಧಮ್ಮವನ್ನು ತುಂಬಾ ಗಂಭೀರವಾಗಿ ಕೇಳುತ್ತಿದ್ದರು. ಮಂತ್ರಿ ಮತ್ತು ಅವನ ಸಹಚರರೆಲ್ಲರೂ ಧಮ್ಮೋಪದೇಶವನ್ನು ಕೇಳಿ ಮುದಗೊಂಡರು, ಉತ್ಸಾಹಗೊಂಡರು. ಅಷ್ಟೇ ಅಲ್ಲ, ಪಾರಮಾರ್ಥಿಕವಾಗಿ ಬದಲಾವಣೆಗೊಂಡು



ಅರಹತರಾದರು. ಆನಂತರದಲ್ಲಿ ಅವರು ಭಗವಾನರ ಪಾದಕ್ಕೆ ನಮಸ್ಕರಿಸಿ, "ಪೂಜ್ಯ ಭಗವಾನರೆ, ನಾವು ತಮ್ಮಿಂದ ಸಾಮಣೇರ ಮತ್ತು ಉಪಸಂಪದ ಎರಡು ದೀಕ್ಷೆಗಳನ್ನು ಪಡೆದು ಪವಿತ್ರ ಭಿಕ್ಖು ಸಂಘಕ್ಕೆ ಸೇರಿಕೊಳ್ಳಬಹುದೇ?"

ಬುದ್ಧರು ತಮ್ಮ ವಿಶಿಷ್ಟ ಶೈಲಿಯಲ್ಲಿ ಬಲಗೈಯನ್ನು ಮುಂದೆ ಚಾಚಿ "ಏಥ ಭಿಕ್ಖವೇ..." (ಬನ್ನಿ ಭಿಕ್ಖುಗಳೇ...") ಧಮ್ಮವನ್ನು ಪರಿಪೂರ್ಣತೆಯಿಂದ ಪ್ರತಿಪಾದಿಸಲಾಗಿದೆ. ಬ್ರಹ್ಮಚರ್ಯ ಜೀವನವನ್ನು ನಡೆಸಿ ಎಲ್ಲ ದುಃಖಗಳಿಂದ ಬಿಡುಗಡೆ ಹೊಂದಿರಿ." ಭಗವಾನ್ ಬುದ್ಧರು "ಏಹಿ ಭಿಕ್ಖು" ಸೂತ್ರವನ್ನು ಹೇಳಿದ ಕೂಡಲೇ ಮಂತ್ರಿ ಮತ್ತು ಅವನೊಂದಿಗಿನ ಸಾವಿರ ಶಾಕ್ಯ ಪ್ರಜೆಗಳು ಭಿಕ್ಖುಗಳಿಗೆ ಬೇಕಾದ ಎಲ್ಲಾ ಪರಿಕರಗಳನ್ನು ಹೊಂದಿ ಪೂರ್ಣ ಪ್ರಮಾಣದ ಭಿಕ್ಖುಗಳಾಗಿ ಪರಿವರ್ತಿತರಾದರು. ಮತ್ತೆ ಅವರೆಲ್ಲರೂ ಹಿರಿಯ ಭಿಕ್ಖುಗಳಾಗಿ ಕಂಡರು. ಅವರೆಲ್ಲರೂ ಜ್ಞಾನ ಕುಂಭವಾದ ಬುದ್ಧನ ಮುಂದೆ ವಿನಯದಿಂದ ತಲೆಬಾಗಿ ಗೌರವ ಸಲ್ಲಿಸಿದರು. ಸಾಮಾನ್ಯ ಉಪಾಸಕರಂತೆ ಕಾಣುತ್ತಿದ್ದ ಮಂತ್ರಿ ಮತ್ತು ಅವನ ಅನುಚರರು ಹೊದ್ದಿದ್ದ ವಸ್ತ್ರಗಳು ಪವಾಡವೋ ಎಂಬಂತೆ ಮಾಯವಾಗಿ ಸಂನ್ಯಾಸಿ ಉಡುಪುಗಳು ಅವರ ಮೇಲಿದ್ದವು. ಈ ಆಶ್ಚರ್ಯಕರ ದೃಶ್ಯವು ಅಲ್ಲಿದ್ದ ಭಕ್ತರೆಲ್ಲರನ್ನು ಬೆರಗುಗೊಳಿಸಿದವು.

ಒಬ್ಬ ವ್ಯಕ್ತಿಯು ಸಾವಕ ಬೋಧಿಯನ್ನು ಪಡೆದು ಅರಹಂತನಾದಮೇಲೆ ಅವನ ಮನಸ್ಸು ಪರಿಪೂರ್ಣವಾಗಿ ಸಮತ್ವಕ್ಕೆ ಬಂದು ಪ್ರಾಪಂಚಿಕ ಸಂಗತಿಗಳಲ್ಲೇ ಅವನು ನಿರಾಸಕ್ತನಾಗುತ್ತಾನೆ. ಈ ಹಿನ್ನೆಲೆಯಲ್ಲಿ ಮಂತ್ರಿ ಮತ್ತು ಅವನ ಅನುಚರರು ಬುದ್ಧರಿಗೆ ರಾಜ ಶುದ್ಧೋಧನನ ಸಂದೇಶವನ್ನು ಮುಟ್ಟಿಸಲಿಲ್ಲ; ಬದಲಿಗೆ ಅವರು ನಿಬ್ಬಾಣ ಸುಖದಲ್ಲಿ ಲೀನವಾಗಿದ್ದರು.

ದಿನಗಳು, ವಾರಗಳು ಕಳೆದವು. ರಾಜ ಶುದ್ಧೋಧನನಿಗೆ ಇವರೇಕೆ ಸಂದೇಶವನ್ನು ಮುಟ್ಟಿಸಿ ವಾಪಸ್ಸು ಬರಲಿಲ್ಲವೆಂದು ಆತಂಕಗೊಂಡನು. ಆದ್ದರಿಂದ ರಾಜನು ಮುಂಚಿನ ರೀತಿಯಲ್ಲಿ ಕಳಿಸಿದಂತೆ ಮತ್ತೊಬ್ಬ ಮಂತ್ರಿಯನ್ನು ಸಾವಿರ ಶಾಕ್ಯ ಶ್ರೇಷ್ಠರನ್ನು ಕಳುಹಿಸಿದನು. ಎರಡನೇ ತಂಡಕ್ಕೂ ಮೊದಲಿನ ತಂಡಕ್ಕೆ ಆದ ಗತಿಯೇ ಆಯಿತು. ಈ ಮಂತ್ರಿಯು ಮತ್ತು ಅವನ ಶಾಕ್ಯ ಶ್ರೇಷ್ಠರು ರಾಜಗಹವನ್ನು ಮುಟ್ಟಿದ ಮೇಲೆ ಭಗವಾನರ ಪ್ರಭಾವಿ ಧಮ್ಮೋಪದೇಶವನ್ನು ಕೇಳಿ ಅರಹತರಾದರು ಮತ್ತು ಆ ನಿಬ್ಬಾಣ ಸುಖದಲ್ಲಿ ಅಲ್ಲೇ ಉಳಿದರು.

ರಾಜ ಶುದ್ಧೋಧನನಿಗೆ ಮತ್ತಷ್ಟು ಗಾಬರಿಯಾಯಿತು. ಇನ್ನೊಂದು ನಿಯೋಗವನ್ನು ಕಳಿಸಲು ತೀರ್ಮಾನಿಸಿ ಅವರು ಹೋಗಲು, ಆ ನಿಯೋಗದ್ದೂ ಅದೇ ಗತಿಯಾಯಿತು. ಹೀಗೆ ರಾಜನು ಒಟ್ಟು ಒಂಬತ್ತು ನಿಯೋಗಗಳನ್ನು ಕಳಿಸಲು ಅವುಗಳೆಲ್ಲದರ ಫಲಿತಾಂಶ ಒಂದೇ ಆಗಿತ್ತು. ಆಗ ರಾಜನು ತನ್ನ ಮನಸ್ಸನ್ನು ಎಲ್ಲ ನಿಯೋಗಗಳ ಸ್ಥಿತಿ ಹೀಗೆ ಆಗುತ್ತಿದೆ ಎಂಬುದರತ್ತ ಹರಿಸಿ ತನ್ನ ಆಡಳಿತ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದ

ಸಿದ್ಧಾರ್ಥನ ಬಾಲ್ಯದ ಗೆಳೆಯ ಸಚಿವ ಕಾಲುದಾಯಿಯನ್ನು ಕಳುಹಿಸಲು ತೀರ್ಮಾನಿಸಿದ. ಕಾಲುದಾಯಿಯು ಮತ್ತು ಸಿದ್ಧಾರ್ಥ ಇಬ್ಬರೂ ಒಂದೇದಿನ ಜನ್ಮತಳೆದವರು. ಈ ವ್ಯಕ್ತಿಯೇ ಸರಿ ಎಂದು ರಾಜನು ಅವನಿಗೆ "ನನ್ನ ಕುಮಾರ ಕಾಲುದಾಯಿ, ತಥಾಗತರಿಗೆ ಗೌರವವನ್ನು ಸಲ್ಲಿಸಲು ನಾನು ಈಗಾಗಲೇ ಒಂಭತ್ತು ನಿಯೋಗಗಳನ್ನು ಕಳುಹಿಸಿದ್ದೆ, ಆದರೆ ಅವರ್‍ಯಾರೂ ವಾಪಸ್ಸು ಬರಲಿಲ್ಲ ಮತ್ತು ಸಂದೇಶಗಳನ್ನು ಕಳುಹಿಸಲಿಲ್ಲ. ಅವರಿಗೆಲ್ಲಾ ಏನಾಯಿತೆಂದು ತಿಳಿಯುವುದು ಕಷ್ಟವಾಗಿದೆ. ಅವರೇನಾದರೂ ಆಪತ್ತಿಗೆ ಸಿಲುಕಿ ಹಾಕಿಕೊಂಡರೆ? ನನ್ನ ಅರಹತ ಮಗನನ್ನು ನಾನು ಬದುಕಿರುವಾಗಲೇ ನೋಡಬೇಕೆಂದಿದ್ದೇನೆ ಮತ್ತು ಗೌರವಿಸಬೇಕೆಂದಿದ್ದೇನೆ. ಆದ್ದರಿಂದ ನನ್ನ ಪ್ರಿಯ ಕಾಲುದಾಯಿ, ನನ್ನ ಮಗನನ್ನು ಕಪಿಲವಸ್ತುವಿಗೆ ಕರೆತರುವ ಕೈಂಕರ್ಯವನ್ನು ಕೈಗೊಳ್ಳುವೆಯಾ?"

ಆಗ ಕಾಲುದಾಯಿಯು: "ಮಹಾರಾಜರೆ, ತಾವು ನನಗೆ ಭಗವಾನ್ ಬುದ್ಧರ ಸಂಘವನ್ನು ಸೇರಲು ಅವಕಾಶವನ್ನು ನೀಡುವುದಾದರೆ ತಾವು ಹೇಳಿದ ಕೆಲಸವನ್ನು ಮಾಡಲು ಸಾಧ್ಯವಿದೆ". ಸಂವಾದ ಹಾಗೆಯೇ ಮುಂದುವರಿಯಿತು.

ರಾಜ "ಪ್ರಿಯಕುಮಾರ ಕಾಲುದಾಯಿ, ನೀನು ಭಿಕ್ಖುವಾಗುವೆಯೋ ಅಥವಾ ಇಲ್ಲವೋ ಅದು ನನಗೆ ಸಂಬಂಧಪಟ್ಟುದಲ್ಲ. ಒಟ್ಟಿನಲ್ಲಿ ನೀನು ನನ್ನ ಮಗನನ್ನು ನೋಡುವಂತೆ ಮಾಡಬೇಕು ಅಷ್ಟೇ. ಇದು ಅತ್ಯಂತ ಮುಖ್ಯ ಕೆಲಸ." "ಹಾಗೆಯೇ ಆಗಲಿ" ಎಂದು ಕಾಲುದಾಯಿಯು ಒಂದು ಸಾವಿರ ಶಾಕ್ಯ ಶ್ರೇಷ್ಠರನ್ನು ಕರೆದುಕೊಂಡು ರಾಜನ ಪ್ರೀತಿಯ ಆಮಂತ್ರಣವನ್ನು ಹೊತ್ತು ರಾಜಗಹದತ್ತ ಪ್ರಯಾಣ ಬೆಳೆಸಿದನು. ಈ ಹಿಂದೆ ಹೋದ ನಿಯೋಗಗಳಂತೆ ಕಾಲುದಾಯಿಯು ಭಗವಾನ್ ಬುದ್ಧರು ಧಮ್ಮೋಪದೇಶ ಮಾಡುತ್ತಿದ್ದ ಜಾಗಕ್ಕೆ ಬಂದನು. ಸಭಾಂಗಣದ ಕೊನೆಯಲ್ಲಿ ಕುಳಿತು ಕಾಲುದಾಯಿಯು ಧಮ್ಮದೇಸನವನ್ನು ಕೇಳುತ್ತಿದ್ದನು. ಹೀಗೆ ಧಮ್ಮೋಪದೇಶವನ್ನು ಕೇಳುತ್ತಿರುವಂತೆಯೇ ಅರಹತನಾದನು. ಆನಂತರದಲ್ಲಿ ಬುದ್ಧರಿಂದ 'ಏಹಿ ಭಿಕ್ಖು' ಉಪಸಂಪದವನ್ನು ಪಡೆದಮೇಲೆ ಬುದ್ಧರಿಗೆ ರಾಜನಿಂದ ತಂದ ಆಮಂತ್ರಣವನ್ನು ತುಂಬ ಅನನ್ಯ ರೀತಿಯಲ್ಲಿ ಮಂಡಿಸಿದನು.

ಅರವತ್ತು ಮನೋಹರವಾದ ಗಾಥೆಗಳಲ್ಲಿ ರಮ್ಯನೋಟದಿಂದ ಕೂಡಿದ ವಿವಿಧ ಋತುಮಾನಗಳನ್ನು ಹಾದ ಬುದ್ಧರ ಯಾತ್ರೆಯನ್ನು ವರ್ಣಿಸಿದನು. ಬುದ್ಧರು ವಾರಾಣಸಿಯನ್ನು ಬಿಟ್ಟು ಆಗಲೇ ಐದು ತಿಂಗಳಾಗಿತ್ತು. ಚಳಿಗಾಲದ ಮಾಸಗಳು ಮುಗಿದಿದ್ದವು. ವಸಂತವು ಕಾಲಿಡುತ್ತಿತ್ತು; ಫಾಲ್ಗುಣದ ಹುಣ್ಣಿಮೆಯು ಹತ್ತಿರವೇ ಇತ್ತು. ಕಾಲುದಾಯಿಯು ಅರಹತನಾದ ಮೇಲೆ ತಥಾಗತ ಬುದ್ಧರನ್ನು ರಾಜಧಾನಿ ಕಪಿಲವಸ್ತುವಿಗೆ ಬರುವಂತೆ ತನ್ನ ಸಾಹಿತ್ಯ ಚಾತುರ್ಯವನ್ನು ಮೆರೆದು ಭಿನ್ನವಿಸಲು ಅಲ್ಲಿದ್ದವರೆಲ್ಲರ ಮನಸ್ಸು ಸೂರೆಗೊಂಡನು.



ಅವನು ನುಡಿದನು: "ಪೂಜ್ಯ ಭಗವಾನರೆ, ಲೋಕಕ್ಕೆ ಸುಖವನ್ನು ತರುವ ಮಹಾತ್ಮರೆ, ಮಹಾವೀರರೆ, ಅಸಮಾನ ದೃಢಚಿತ್ತವುಳ್ಳವರೇ, ಸುಂದರ ಶರೀರವುಳ್ಳವರೆ, ತಮ್ಮ ಹುಟ್ಟು ನಾಡಾದ ಕಪಿಲವಸ್ತುವಿಗೆ ಬರಲು ಈಗ ಸರಿಯಾದ ಸಮಯವಾಗಿದೆ. ಪೂಜ್ಯರೇ, ಚಳಿಗಾಲ ಕಳೆದು ವಸಂತವು ತನ್ನ ಸೌಂದರ್ಯದೊಂದಿಗೆ ಹೆಜ್ಜೆ ಇಡುತ್ತಿರುವ ಸಮಯವಿದು. ಮರಗಳು ತಮ್ಮ ತರಗೆಲೆಗಳನ್ನು ಕಳಚಿಕೊಂಡು ಮುಂದೆ ಹೂ-ಹಣ್ಣುಗಳನ್ನು ಬಿಡಲೋಸುಗ ಹಸಿರು ಚಿಗುರು ಮೂಡಿಕೊಂಡು ವಾತಾವರಣ ತಂಪಾಗಿ ನಿಸರ್ಗ ರಂಗುರಂಗಾಗಿದೆ. ಇದು ಕಪಿಲವಸ್ತುವಿಗೆ ಬರಲು ಸುಸಮಯ.

ಹೀಗೆ ಸುಂದರವಾದ ಮನಮುಟ್ಟುವ ಕಾಲುದಾಯಿಯ ಮಾತುಗಳಿಂದ ಮುದಗೊಂಡ ತಥಾಗತರು ಹೀಗೆ ನುಡಿದರು: "ಪ್ರಿಯ ಕಾಲುದಾಯಿ, ನೀನೇಕೆ ಮನಮುಟ್ಟುವ ಪ್ರೀತಿ ಹೊಗಳಿಕೆಯ ಸಿಹಿ ಮಾತುಗಳಿಂದ ನನ್ನನ್ನು ಕಪಿಲವಸ್ತುವಿಗೆ ಆಹ್ವಾನಿಸುತ್ತಿರುವೆ?" ಆಗ ಆಯುಷ್ಮಂತ ಕಾಲುದಾಯಿಯು "ಪರಮಪೂಜ್ಯರೆ, ತಮ್ಮ ತೀರ್ಥರೂಪ ತಂದೆ ರಾಜ ಶುದ್ಧೋಧನರು ತಮಗೂ ಮತ್ತು ಸಂಘಕ್ಕೂ ಗೌರವವನ್ನು ಸಮರ್ಪಿಸಲು ಇಚ್ಛಿಸಿದ್ದಾರೆ. ಆದ್ದರಿಂದ ನಾನು ಅತ್ಯಂತ ಗೌರವದಿಂದ ಭಗವಾನರಾದ ತಮ್ಮನ್ನು ಕಪಿಲವಸ್ತುವಿಗೆ ಆಹ್ವಾನಿಸಿ ಅಲ್ಲಿನ ರಾಜ ಕುಟುಂಬಕ್ಕೆ ಮಂಗಳವನ್ನು ಹರಸಬೇಕೆಂದು ಕೋರುತ್ತೇನೆ."

ತಥಾಗತರು ಸಮ್ಮತಿಯ ಈ ಮಾತುಗಳನ್ನಾಡಿದರು: "ಪ್ರಿಯ ಕಾಲುದಾಯಿ, ನಿನ್ನ ವಿನಂತಿಯನ್ನು ಅಂಗೀಕರಿಸಿದ್ದೇನೆ. ನೀನು ಸಂಘಕ್ಕೆ ಆಹ್ವಾನವನ್ನು ನೀಡಿ, ಕಪಿಲವಸ್ತುವಿಗೆ ನಾನು ಕೂಡಲೇ ಹೋಗುತ್ತಿದ್ದೇನೆಂಬುದನ್ನು ಅವರಿಗೆ ತಿಳಿಸು. ಅವರು ನನ್ನ ರಾಜ ಬಂಧುಗಳನ್ನು ಗೌರವಿಸಲಿ. ಈ ಯಾತ್ರೆಗೆ ಸಕಲ ಸಿದ್ಧತೆಗಳನ್ನು ಮಾಡು."

ಕಾಲುದಾಯಿಯು "ಹಾಗೆಯೆ ಆಗಲಿ ಪರಮಪೂಜ್ಯರೆ" ಎಂದು ಹೇಳಿ ಅಲ್ಲಿದ್ದ ಇಪ್ಪತ್ತು ಸಾವಿರ ಅರಹಂತ ಭಿಕ್ಖುಗಳಲ್ಲಿ ಮತ್ತು ಹತ್ತು ನಿಯೋಗಗಳಲ್ಲಿ ಬಂದ ಹತ್ತು ಸಾವಿರ ಶಾಕ್ಯ ಅರಹತ ಭಿಕ್ಖುಗಳಿಗೂ ಮತ್ತು ಅಂಗ ಮತ್ತು ಮಗಧ ದೇಶಗಳ ಹತ್ತು ಸಾವಿರ ಭಿಕ್ಖುಗಳಿಗೂ ವಿನಂತಿಯನ್ನು ಮಾಡಿದನು.

## ಬುದ್ಧರು ಕಪಿಲವಸ್ತುವಿಗೆ ನಡೆದು ಹೋದುದು

ತಥಾಗತರು ತಮ್ಮ ಇಪ್ಪತ್ತು ಸಾವಿರ ಅರಹತ ಪರಿವಾರದೊಡನೆ ವೇಣುವನ ವಿಹಾರವನ್ನು ಬಿಟ್ಟು ಕಪಿಲವಸ್ತುವಿನ ಕಡೆ ನಡೆದರು.

ಫಾಲ್ಗುಣ ಹುಣ್ಣಿಮೆಯ ಆಚರಣೆಯನ್ನು ಮುಗಿಸಿದ ಮಾರನೆ ದಿನದ ಮುಂಜಾನೆ ಬುದ್ಧರು ಮತ್ತು ಅವರ ಅರಹತ ಶಿಷ್ಯರು ಚಾರಿಕಾವನ್ನು (ಧಮ್ಮ ಪ್ರಚಾರ ಕಾರ್ಯ) ಆರಂಭಿಸಿದರು. ಭಗವಾನರು ಅತೂರಿತ (ಆತುರವಿಲ್ಲದ) ನಡಿಗೆ ಅಂದರೆ ಒಂದು ದಿನಕ್ಕೆ ಒಂದು ಯೋಜನೆ (ಏಳು ಮೈಲಿ) ಮಾತ್ರ ನಡೆಯುವ ಕ್ರಮವನ್ನು ನಡೆದು ಪ್ರತಿ ಹಳ್ಳಿಯಲ್ಲೂ ನಿಂತು ಬಹುಜನ ಹಿತಕ್ಕಾಗಿ ಬಹುಜನ ಸುಖಕ್ಕಾಗಿ ಬೇಕಿರುವ

ಆರ್ಯ ಧರ್ಮವನ್ನು ಬೋಧಿಸಿ ಮುಂದೆ ಹೋಗುತ್ತಿದ್ದರು. ಹೀಗೆ ಧಮ್ಮಪ್ರಚಾರ ಕಾರ್ಯವು ಎರಡು ತಿಂಗಳಲ್ಲಿ ರಾಜಗಹ ಮತ್ತು ಕಪಿಲವಸ್ತುವಿನ ಅರವತ್ತು ಯೋಜನಗಳ ಅಂತರ ಯಾತ್ರೆಯನ್ನು ಮಾಡುವುದಿತ್ತು. ಬುದ್ಧರು ಮತ್ತು ಅವರ ಅರಹತರು ತಮ್ಮ ದೈನಂದಿನ ಕಾರ್ಯಗಳನ್ನು ಮುಗಿಸಿ ಮುಂಜಾನೆ ಸಮಯದಲ್ಲಿ ಭಿಕ್ಷಾನಕ್ಕೆ ಹೋಗುತ್ತಿದ್ದರು. ಭಿಕ್ಷಾನ್ನವನ್ನು ಭುಂಜಿಸಿದ ಮೇಲೆ ಒಂದು ಯೋಜನ ನಡೆದು ಮುಂದಿನ ಹಳ್ಳಿಯಲ್ಲಿ ತಂಗುತ್ತಿದ್ದರು.

ಗ್ರಾಮಸ್ಥರು ಭಗವಾನರ ಈ ವಿಶಿಷ್ಟ ಧಮ್ಮಯಾತ್ರೆಯ ಬಗ್ಗೆ ಕೇಳಿ ಒಂದೆಡೆ ಸೇರಿ ಅವರನ್ನು ಬರಮಾಡಿಕೊಳ್ಳುತ್ತಿದ್ದರು. ಬುದ್ಧರು ಮತ್ತು ಅರಹತರು ಧ್ಯಾನಾಭ್ಯಾಸ ಮಾಡಿಯೇ ಸ್ವಲ್ಪಕಾಲ ವಿಶ್ರಮಿಸಿಕೊಳ್ಳುತ್ತಿದ್ದರು. ಮಧ್ಯಾಹ್ನ ಕಳೆದಮೇಲೆ ಬುದ್ಧರು ಧಮ್ಮೋಪದೇಶವನ್ನು ನೀಡುತ್ತಿದ್ದರು. ಸುತ್ತಮುತ್ತಲಿನ ಸಾವಿರಾರು ಜನರು ಧಮ್ಮವನ್ನು ಕೇಳಲು ಬರುತ್ತಿದ್ದರು. ಅದರಲ್ಲಿನ ಸುಮಾರು ಸಂಖ್ಯೆ ಸ್ತ್ರೀ-ಪುರುಷರು ಪಾರಮಾರ್ಥಿಕವಾಗಿ ಪರಿವರ್ತಿತರಾಗುತ್ತಿದ್ದರು. ಇದೇರೀತಿಯ ದಿನಚರಿ ಕಪಿಲವಸ್ತು ಸೇರುವವರೆಗೂ ಇತ್ತು.

ಹೀಗೆ ಅತೂರಿತ ಚಾರಿಕಾ ಕ್ರಮದಿಂದ ಕಪಿಲವಸ್ತುವಿಗೆ ತಥಾಗತರು ತೆರಳಲು ಆಯುಷ್ಮಂತ ಕಾಲುದಾಯಿಯು ತನಗೆ ತಾನೇ ಆಲೋಚಿಸಿದನು: 'ನಾನು ಮುಂಚೆಯೇ ಹೋಗಿ ರಾಜ ಶುದ್ಧೋಧನನಿಗೆ ಭಗವಾನರು ರಾಜಗಹವನ್ನು ಬಿಟ್ಟ ಸಂಗತಿಯನ್ನು ಮತ್ತು ಅವರು ಕಪಿಲವಸ್ತುವಿನ ಕಡೆ ಅತೂರಿತ ಚಾರಿಕಾ ಕ್ರಮದಿಂದ ಪ್ರಯಾಣ ಬೆಳೆಸಿದ್ದಾರೆ ಎಂಬುದನ್ನು ಹೇಳೋಣ'. ಹೀಗೆ ಯೋಚಿಸಿ ಕಾಲುದಾಯಿಯು ಇದ್ಧಿವಿಧ ಅಭಿಜ್ಞಾ (ಅಸಾಮಾನ್ಯ ಶಕ್ತಿ) ವನ್ನು ಪ್ರಯೋಗಿಸಿ ಆಕಾಶ ಮಾರ್ಗವಾಗಿ ತೆರಳಿ ರಾಜ ಶುದ್ಧೋಧನನ ಅರಮನೆಯಲ್ಲಿ ಇಳಿದನು.

ರಾಜನು ಆಕಾಶಮಾರ್ಗವಾಗಿ ಹಾರಿಬಂದು ಅರಮನೆಯಲ್ಲಿ ಇಳಿದ ಕಾಲುದಾಯಿಯನ್ನು ಕಂಡು ಪರಮ ಸಂತೋಷದಿಂದ ರೋಮಾಂಚನಗೊಂಡನು. ಅರಹತನನ್ನು ಗೌರವ ಸೂಚಕ "ಪೂಜ್ಯ ಕಾಲುದಾಯಿಯವರಿಗೆ ಸ್ವಾಗತ" ಎಂದು ವಿನಯದಿಂದ ಸ್ವಾಗತಿಸಿ ತನ್ನ ರಾಜ ಸಿಂಹಾಸನವನ್ನು ಕುಳಿತುಕೊಳ್ಳಲು ಬಿಟ್ಟನು. ಅನಂತರ ಅವರು ಇಷ್ಟಪಡುವ ಭಿಕ್ಷಾನ್ನವನ್ನೂ ನೀಡಿದನು.

ಊಟವಾದ ಮೇಲೆ ರಾಜನು ಬವನಾಸಿಯನ್ನು ಕೈಗೆ ತೆಗೆದುಕೊಂಡು ಅದರ ತುಂಬಾ ಪೌಷ್ಟಿಕ ಭಿಕ್ಷಾನ್ನವನ್ನು ತುಂಬಿ, "ದಯಮಾಡಿ ಈ ಭಿಕ್ಷಾನ್ನವನ್ನು ತಥಾಗತರಿಗೆ ಅರ್ಪಿಸಿ" ಎಂದು ವಿನಂತಿಸಿದನು. ಅನಂತರ ರಾಜನು "ತಥಾಗತರು ಈಗ ಎಲ್ಲಿದ್ದಾರೆ?" ಎಂದು ಕೇಳಿದನು. ಆಯುಷ್ಮಂತ ಕಾಲುದಾಯಿಯು ಅವರು ದಾರಿಯಲ್ಲಿ ಬರುತ್ತಿದ್ದಾರೆ ಎಂದು ಹೇಳಿದನು. ಆಗ ರಾಜನು ಒಂದು ವಿಶೇಷ ವಿನಂತಿಯನ್ನು ಸಲ್ಲಿಸಿದನು. "ಪೂಜ್ಯರೆ, ಪ್ರತಿನಿತ್ಯವೂ ತಥಾಗತರಿಗಾಗಿ ಇಲ್ಲಿಂದಲೇ ಭಿಕ್ಷೆಯನ್ನು ಪಡೆಯಿರಿ ಮತ್ತು ತಥಾಗತರು ಬರುವವರೆಗೆ ತಾವು ಇಲ್ಲಿಯೇ ಭಿಕ್ಷೆಯನ್ನು ಸ್ವೀಕರಿಸಿರಿ." ಆಯುಷ್ಮಂತ ಕಾಲುದಾಯಿಯು ಮೌನದ ಮೂಲಕವೇ ಸಮ್ಮತಿಯನ್ನು ಸೂಚಿಸಿದನು.



ಆಯುಷ್ಮಂತ ಕಾಲುದಾಯಿಯು ತನ್ನ ಅಸಾಮಾನ್ಯ ಶಕ್ತಿಯನ್ನು ಪ್ರಯೋಗಿಸಿ ಭಿಕ್ಷಾನ್ನ ತುಂಬಿದ ಪಿಂಡಪಾತ್ರೆಯನ್ನು ಗಾಳಿಯಲ್ಲಿ ಮೇಲಕ್ಕೆ ಕಳಿಸಿ, ಅದನ್ನು ಹಿಡಿದು ಹಾರಿಹೋದನು. ರಾಜನು ಮತ್ತು ರಾಜ ಪರಿವಾರದವರು ದಿಗ್ಭ್ರಮೆಯಿಂದ ಇದೆಲ್ಲವನ್ನು ನೋಡಿದರು. ತಥಾಗತರು ತಮ್ಮ ಮೊದಲ ಧಮ್ಮೋಪದೇಶಕ್ಕೆ ಯಾವ ಜಾಗಕ್ಕೆ ಬಂದಿದ್ದರೋ ಅಲ್ಲಿ ಇಳಿದು ಭಕ್ತಿಭಾವದಿಂದ ಭಗವಾನರಿಗೆ ಭಿಕ್ಷಾನ್ನ ತುಂಬಿದ ಪಿಂಡಪಾತ್ರೆಯನ್ನು ನಿವೇದಿಸಿ ಮತ್ತು ಅದನ್ನು ಅವರು ತೆಗೆದುಕೊಂಡ ಮೇಲೆ ಏನೆಲ್ಲಾ ನಡೆಯಿತೆಂಬುದನ್ನು ಹೇಳಿದನು.

ಆಯುಷ್ಮಂತ ಕಾಲುದಾಯಿಯು ತಥಾಗತರಿಗೆ ಪ್ರತಿನಿತ್ಯವೂ ರಾಜನಿಂದ ಅರ್ಪಿಸಲ್ಪಟ್ಟ ಭಿಕ್ಷಾನ್ನವನ್ನು ತಂದುಕೊಟ್ಟುದಲ್ಲದೆ ತನ್ನ ಭಿಕ್ಷಾನ್ನವನ್ನು ಅರಮನೆಯಲ್ಲಿಯೇ ಊಟ ಮಾಡಿ ಬರುತ್ತಿದ್ದನು. ಚಾರಿಕಾದ ಉದ್ದಗಲಕ್ಕೂ ಈ ಪದ್ಧತಿಯು ನಡೆಯಿತು. ಮುಂಚೆಯೇ ಹೇಳಿದಂತೆ ಇಪ್ಪತ್ತು ಸಾವಿರ ಅರಹತರು ವಿಶ್ರಮಿಸಿದ ನಂತರ ಭಿಕ್ಷಾಟನೆಗಾಗಿ ಸುತ್ತಮುತ್ತಲಿನ ಹಳ್ಳಿಗಳಿಗೆ ಹೋಗುತ್ತಿದ್ದರು. ಈ ಕಾರ್ಯಕ್ರಮವು ಚಾರಿಕಾದ ಉದ್ದಕ್ಕೂ ನಡೆಯಿತು. ಆಯುಷ್ಮಂತ ಕಾಲುದಾಯಿಯು ಪ್ರತಿನಿತ್ಯ ಭಿಕ್ಷಾನ್ನವನ್ನು ತಥಾಗತರಿಗಾಗಿ ಕಪಿಲವಸ್ತುವಿನಿಂದ ತಂದು, ತನ್ನ ಭಿಕ್ಷೆಯನ್ನು ಅರಮನೆಯಲ್ಲಿಯೇ ಸ್ವೀಕರಿಸುವ ಕಾರ್ಯ ನಡೆಯುತ್ತಿದ್ದಂತೆಯೇ ಪ್ರತಿದಿನವೂ ಅರಮನೆಯಲ್ಲಿ ವಿಶೇಷ ಧಮ್ಮೋಪದೇಶವನ್ನು ಕೊಡುತ್ತಿದ್ದನು. ಮೊದಲು ತಥಾಗತರು ಎಷ್ಟು ಅಂತರವನ್ನು ನಡೆದಿದ್ದಾರೆಂದು, ತಥಾಗತರು ಯಾವ ಧಮ್ಮದೇಸನವನ್ನು ನೀಡಿದರೆಂದು, ಆನಂತರದಲ್ಲಿ ಬಂದ ಜನರು ಎಷ್ಟು ಉತ್ಸಾಹದಲ್ಲಿ ಭಕ್ತಿಯಿಂದ ತಥಾಗತರು ನೀಡುತ್ತಿದ್ದ ಕರುಣಾಪೂರಿತ ಆರ್ಯಧರ್ಮವನ್ನು ಕೇಳುತ್ತಿದ್ದರೆಂದು ವರದಿ ಮಾಡುತ್ತಿದ್ದನು.

ಆಯುಷ್ಮಂತ ಕಾಲುದಾಯಿಯು ಭಗವಾನರ ಧಮ್ಮಪ್ರಚಾರ ಸಂಬಂಧದ ಯಾತ್ರೆಯ ಎಲ್ಲ ವಿವರಗಳನ್ನು ರಾಜನಿಗೆ ಮತ್ತು ರಾಜ ಪರಿವಾರಕ್ಕೆ ನೀಡುವಲ್ಲಿ ಶ್ರದ್ಧೆ ಎಂಬ ಬೀಜವನ್ನು ಅವರ ಮನಸಿನಲ್ಲಿ ಬಿತ್ತುವುದೇ ಆಗಿತ್ತು; ಹಾಗೆಯೇ ತಥಾಗತರ ಗುಣಗಳನ್ನು ಅವರಿಗೆ ತಿಳಿಸುವುದೇ ಉದ್ದೇಶವಾಗಿತ್ತು. ವರ್ಷಗಳ ನಂತರ ಆಯುಷ್ಮಂತ ಕಾಲುದಾಯಿಯ ಈ ಸೇವೆಯನ್ನು ಬುದ್ಧರು ಹೀಗೆ ಹೊಗಳಿದ್ದಾರೆ: "ಏತದಗ್ಗಮ್, ಭಿಕ್ಖವೇ, ಮಮ ಸಾವಕಾನಙಾ ಭಿಕ್ಖುನಙ್ ಕುಪ್ಪಸಾದಾನಙ್ ಯದಿದಮ್ ಕಾಲುದಾಯಿ." – "ಭಿಕ್ಖುಗಳೇ, ನನ್ನ ಶಿಷ್ಯರಲ್ಲೆಲ್ಲ ಕಾಲುದಾಯಿಯು ಅಗ್ರಗಣ್ಯನು. ನನ್ನ ರಾಜ ಸಂಬಂಧಿಕರಲ್ಲಿ ಪ್ರಜ್ಞಾ ಮೂಲವಾದ ಶ್ರದ್ಧೆಯನ್ನು ಬೆಳೆಸುವುದರಲ್ಲಿ ಮಿಂಚಿದವನು". ಒಂದು ವಿಶೇಷ ಸಮಾರಂಭದಲ್ಲಿ ಹೀಗೆ ಅರಹತ ಕಾಲುದಾಯಿಯನ್ನು ಬುದ್ಧರು ಹೊಗಳಿದರು.

ಆರು ದಿನಗಳ ನಂತರ ತಥಾಗತರು ಮತ್ತು ಇಪ್ಪತ್ತು ಸಾವಿರ ಅರಹತ ಶಿಷ್ಯರು ಅತೂರಿತ ಚಾರಿಕಾ ವಿಧಾನದಲ್ಲಿ ಕಪಿವಸ್ತುವನ್ನು ಸೇರಿದರು. ರಾಜ ಶುದ್ಧೋಧನನು ತಥಾಗತರನ್ನು ಮತ್ತು ಅರಹತರನ್ನು ಸ್ವಾಗತಿಸಲು ಊರನ್ನು ವೈಭವದಿಂದ ಸಿಂಗರಿಸಿ

ರಾಜ ಪರಿವಾರದವರನ್ನು, ಪುರಪ್ರಮುಖರನ್ನು ಸಾಮಾನ್ಯ ಜನರನ್ನು ಸೇರಿಸಿದನು. ಅವರ ವಾಸ್ತವ್ಯಕ್ಕಾಗಿ ಶಾಕ್ಯ ರಾಜಕುಮಾರನಿಗೆ ಸೇರಿದ ನ್ಯಗ್ರೋಧವನವನ್ನು ಸಿದ್ಧಗೊಳಿಸಿದನು. ಈ ಜಾಗವು ಸುಂದರವೂ ನಯನ ಮನೋಹರವೂ ಭಿಕ್ಷುಗಳ ಏಕಾಂತತೆಗೆ ಸೂಕ್ತವೂ ಆಗಿತ್ತು.

ತಥಾಗತರ ಆಗಮನದ ದಿನ ರಾಜನು ಮತ್ತು ಉಳಿದವರೆಲ್ಲರೂ ಶ್ವೇತ ಪೋಷಾಕುಗಳನ್ನು ಧರಿಸಿ ಕೈಗಳಲ್ಲಿ ಪರಿಮಳದ ಹೂವುಗಳನ್ನು ಚಂದನಾದಿಗಳನ್ನು ಹಿಡಿದು ತಥಾಗತ ಬುದ್ಧರನ್ನು ನ್ಯಗ್ರೋಧಾರಾಮಕ್ಕೆ ಮೆರವಣಿಗೆಯಲ್ಲಿ ಕರೆತಂದರು. ಆರಾಮವನ್ನು ತಲುಪಿದ ಮೇಲೆ ಬುದ್ಧರಿಗೆ ಎತ್ತರದ ಆಸನವನ್ನು ಉಳಿದ ಭಿಕ್ಷುಗಳಿಗೆ ಸೂಕ್ತ ಆಸನಗಳನ್ನು ಕೊಟ್ಟರು. ಶಾಕ್ಯ ಕ್ಷತ್ರಿಯ ಕುಲದವರು ಕೆಲವು ಸಂಪ್ರದಾಯದಿಂದ ಬಂದ ರೀತಿ ರಿವಾಜುಗಳನ್ನು ಅಂದರೆ ಯಾರನ್ನು ಹೇಗೆ ಕಾಣಬೇಕು, ಯಾವರೀತಿಯಲ್ಲಿ ವರ್ತಿಸಬೇಕು ಇತ್ಯಾದಿಗಳನ್ನು ತುಂಬ ಸೂಕ್ಷ್ಮವಾಗಿ ಆಚರಿಸಿದರು. ಇದು ಬುದ್ಧರ ಊರು ಎಂಬ ಸಂಗತಿ ಎಲ್ಲ ರಾಜ ಪರಿವಾರದವರಲ್ಲಿ ಮತ್ತು ಪುರಪ್ರಮುಖರ ಮುಖಗಳಲ್ಲಿ ಎದ್ದುಕಾಣುತ್ತಿತ್ತು.

ತಥಾಗತರನ್ನು ಹೇಗೆ ಗೌರವಿಸಬೇಕು ಎಂಬ ವ್ಯವಸ್ಥೆಯನ್ನು ಶಾಕ್ಯರು ಮಾಡಿಕೊಂಡಿದ್ದರು. ಯಾರು ಸಿದ್ಧಾರ್ಥನು ತಮಗಿಂತ ವಯಸ್ಸಿನಲ್ಲಿ ಚಿಕ್ಕವನು ಎಂದು ಭಾವಿಸಿದ್ದರೋ ಅವರು ತಮ್ಮ ಮಕ್ಕಳಿಗೆ "ನೀವು ಇನ್ನೂ ಚಿಕ್ಕ ರಾಜಕುಮಾರರು, ನೀವು ಮೊದಲ ಸಾಲಿನಲ್ಲಿ ಕುಳಿತು ಮೊದಲು ನಮಸ್ಕರಿಸಬೇಕು, ನಾವು ವಯಸ್ಸಿನಲ್ಲಿ ಹಿರಿಯರಾದ್ದರಿಂದ ಬಗ್ಗಿ ನಮಸ್ಕರಿಸಬಾರದು, ಆದ್ದರಿಂದ ನಾವು ಹಿಂದೆ ಕುಳಿತುಕೊಳ್ಳುತ್ತೇವೆ.

ಬುದ್ಧರು ಈ ವ್ಯವಸ್ಥೆಯನ್ನು ನೋಡಿ ಆಲೋಚಿಸಿದರು: "ನನ್ನ ಸಂಬಂಧಿಕರು ಒಣಜಂಭದಲ್ಲಿದ್ದು ಬೆಳೆದಿದ್ದಾರೆ. ನಾನು ಈ ವಿಕೃತ ಮನಸ್ಸಿನ ಈ ಸಂಬಂಧಿಕರಿಗೆ ಸೂಕ್ತವಾದ ಧಮ್ಮವನ್ನು ಬೋಧಿಸುವುದು ಅವಕಶ್ಯವಾಗಿದೆ. ಇವರಿಗೆ ತಥಾಗತರೆಂದರೆ ಏನು, ಯಾರು ಎಂಬ ಸ್ಪಷ್ಟ ಅರಿವಿಲ್ಲ. ನಾನು ಇವರಿಗೆ ಸಮ್ಮಾಸಂಬುದ್ಧರ ವೈಭವವನ್ನು ಯಮಕ ಪಾಟಿಹಾರಿಯ (ಎರಡು ಪವಾಡಗಳ) ಮೂಲಕ ತೋರಿಸಬೇಕಾಗಿದೆ". ಸಮ್ಮಾಸಂಬುದ್ಧರಿಗೆ ಮಾತ್ರ ಮಾಡಲು ಸಾಧ್ಯವಿರುವ ಮತ್ತು ಜನರಲ್ಲಿ ಪಾರಮಾರ್ಥಿಕ ಪರಿವರ್ತನೆಯನ್ನು ತಂದು ಬೋಧಿಜ್ಞಾನವನ್ನು ಪಡೆಯಲು ಸಹಾಯವಾಗುವ ಈ ಪವಾಡವನ್ನು ಮೆರೆದರು.

ಈ ಪವಾಡದಲ್ಲಿ ಬುದ್ಧರ ಮೈಯಿಂದ ಒಂದಾದ ಮೇಲೊಂದರಂತೆ ಪರಸ್ಪರ ವಿರುದ್ಧ ಶಕ್ತಿಗಳಾದ ನೀರು ಬೆಂಕಿಗಳು ಹೊರಚಿಮ್ಮಿದವು. ಆ ನೀರು-ಬೆಂಕಿಗಳ ಸೃಷ್ಟಿಯೇ ಚಂಕಮಣ (ಧ್ಯಾನ ಪಥ) ವನ್ನು ಸೃಷ್ಟಿಮಾಡಿತು. ಈ ಯಮಕ ಪಾಟಿಹಾರಿಯವನ್ನು ಬಹು ಲೋಕಗಳು ನೋಡಿ ಸಂಭ್ರಮಿಸಿದವು. ನೀರು-ಬೆಂಕಿಗಳು ಒಂದಾದ ಮೇಲೊಂದರಂತೆ ದೇಹದ ಹನ್ನೆರಡು ಭಾಗಗಳಿಂದ ದೇಹದ ಮೇಲಿಂದ ಕೆಳಗೆ,



ಹಿಂದೆ ಮುಂದೆ, ಎಡಬಲಗಳಿಂದ, ಕಣ್ಣು, ಕಿವಿ, ಮೂಗು, ಭುಜ, ಕೈಕಾಲು, ಬೆರಳು, ಕಾಲ ಹೆಬ್ಬೆರಳುಗಳು ಮತ್ತು ರೋಮ ರಂಧ್ರಗಳಿಂದ ಚಿಮ್ಮುವುದನ್ನು ನೋಡಲು ನಂಬಲಸಾಧ್ಯವಾದ ದೃಶ್ಯವಾಗಿತ್ತು.

## ರಾಜನು ಮೂರನೇಬಾರಿ ಗೌರವವನ್ನು ಸಲ್ಲಿಸಿದುದು

ರಾಜ ಶುದ್ಧೋಧನನು ಆಶ್ಚರ್ಯವೂ ಮತ್ತು ಅದ್ಭುತವೂ ಆದ ಯಮಕ ಪಾಟಿಹಾರಿಯವನ್ನು ನೋಡಿ ಅಚ್ಚರಿಗೊಂಡು ಸ್ತಂಭೀಭೂತನಾಗಿ ಅರಿವಿಲ್ಲದಂತೆಯೇ ತಲೆಬಾಗಿ ಬುದ್ಧರಿಗೆ, "ಭಗವಾನರೆ, ತಾವು ಹುಟ್ಟಿದ ದಿನ ನಾನು ತಮ್ಮ ಜೋಡಿಸಿದ ಕೈಗಳನ್ನು ಎತ್ತಿ ಮುನಿ ಕಾಲದೇವರಿಗೆ ಅರ್ಪಿಸಲು ಹೋದಾಗ ತಾವು ಕಾಲುಗಲ ಮೇಲೆ ನಿಂತು, ನಂತರ ಮುನಿಯ ತಲೆಯ ಮೇಲೆ ಇಟ್ಟಿರಿ. ಈ ಪವಾಡವನ್ನು ನೋಡಿ ನಾನು ತಮಗೆ ಮೊದಲ ಗೌರವವನ್ನು ಸಮರ್ಪಿಸಿದ್ದೆ."

"ರಾಜ ಮನೆತನದವರು ಅರಮನೆಗೆ ಸೇರಿದ ಭೂಮಿಯನ್ನು ಉಳುವ ವಾರ್ಷಿಕ ಸಮಾರಂಭದಲ್ಲಿ ಸಾವಿರಾರು ಜನರು ಸೇರಿದ್ದು, ಆ ಕಾರ್ಯದಲ್ಲಿ ನಾನು ನಿರತನಾಗಿದ್ದಾಗ ನಾವು ನಿಮ್ಮನ್ನು ಮರದ ತಂಪಾದ ನೆರಳಿನಲ್ಲಿ ಮಲಗಿಸಿದ್ದೆವು. ತಾವು ಅಲ್ಲಿ ನೇರವಾಗಿ ಕುಳಿತು ಧ್ಯಾನಮಗ್ನರಾದಿರಿ. ಮಧ್ಯಾಹ್ನವಾಗಿ ಸೂರ್ಯನು ಪಶ್ಚಿಮ ದಿಗಂತಕ್ಕೆ ಚಲಿಸಲು ಅಲ್ಲಿದ್ದ ಮರಗಳ ನೆರಳು ಚಲಿಸಿದರೂ ತಾವು ಕುಳಿತಿದ್ದ ಮರದ ನೆರಳು ಚಲಿಸದೆ ಸ್ಥಿರವಾಗಿ ನಿಂತಿತ್ತು, ಹಾಗೆಯೇ ಇದ್ದು ತಮ್ಮನ್ನು ನೆರಳಿನಿಂದ ಕಾಪಾಡಿತು. ಈ ಪವಾಡವನ್ನು ನೋಡಿ ನಾನು ತಮ್ಮ ಕಾಲಿಗೆ ತಲೆಬಾಗಿ ನಮಸ್ಕರಿಸಿದೆ."

"ಇಂದು ಈ ಅಸಾಮಾನ್ಯವೂ, ಅದ್ಭುತವೂ ಆದ ಯಮಕ ಪಾಟಿಹಾರಿಯ ಚಮತ್ಕಾರವನ್ನು ನೋಡಿ ಭಕ್ತಿಯಿಂದ ಮೂರನೆಯಬಾರಿಗೆ ತಮಗೆ ನಮಸ್ಕರಿಸುತ್ತಿದ್ದೇನೆ." ಯಾವಾಗ ರಾಜ ಶುದ್ಧೋಧನನು ತಥಾಗತರಿಗೆ ಭಕ್ತಿ-ಗೌರವಗಳಿಂದ ನಮಸ್ಕರಿಸಿದನೋ ಎಲ್ಲ ರಾಜ ಪರಿವಾರದವರು, ಬಂಧು-ಮಿತ್ರರೆಲ್ಲರೂ ಗರಬಡಿದವರಂತೆ ನಮಸ್ಕರಿಸಿದರು.

## ರತನ ಚಂಕಮಣದ ಮೇಲೆ ಧಮ್ಮದೇಸನ

ಹೀಗೆ ಶಾಕ್ಯ ಕುಲದವರಿಂದ ಬಿಂಕವನ್ನು ಯಮಕ ಪಾಟಿಹಾರಿಯಾದಿಂದ ಮಣಿಸಿದ ಮೇಲೆ ಬುದ್ಧರು ಅದರ ಅನುಸಾರ ಇವರನ್ನು ಪಾರಮಾರ್ಥಿಕವಾಗಿ ಪರಿವರ್ತಿಸಲು ಯಾವರೀತಿಯ ಧಮ್ಮದೇಸನವನ್ನು ನೀಡಬೇಕು ಎಂಬುದನ್ನು ರೂಪಿಸಿಕೊಳ್ಳಲು ಅಲ್ಲಿ ನೆರೆದಿದ್ದವರ ಮಾನಸಿಕ ಸ್ಥಿತಿಯನ್ನು ತಮ್ಮ ಮನಸ್ಸಿನ ದಿವ್ಯ ಶಕ್ತಿಯನ್ನು ಹರಿಸಿ ತಿಳಿದರು. ತಮ್ಮ ಅಸಾಮಾನ್ಯ ಶಕ್ತಿಯಿಂದ ಪೂರ್ವದಿಂದ ಪಶ್ಚಿಮಕ್ಕೆ ಹರಿಸಿದಂತೆ ರತನ ಚಂಕಮಣ (ರತ್ನಗಳ ಹಾಸಿನ ನಡೆವ ಹಾದಿ) ವನ್ನು ಸೃಷ್ಟಿಸಿದರು. ಭೌತಿಕವಾಗಿ ಸೃಷ್ಟಿಸಲ್ಪಟ್ಟ ರತ್ನಗಳ ಹಾಸಿನ ನಡೆವ ಹಾದಿಯನ್ನು ಕೇವಲ ಮಾನವರಷ್ಟೇ ಅಲ್ಲ, ದಿವ್ಯಲೋಕಗಳ ದೇವತೆಗಳು ಮತ್ತು ಬ್ರಹ್ಮರುಗಳು ನೋಡಿ ಬುದ್ಧರ ಪಾರಮಾರ್ಥಿಕ ವೈಭವವನ್ನು ನೇರವಾಗಿ ಅನುಭವಿಸಬಹುದಿತ್ತು.

ಆನಂತರದಲ್ಲಿ ಆರು ಬಣ್ಣಗಳ ಪ್ರಭಾವಳಿಯನ್ನು ಹೊತ್ತ ಸಮ್ಮಾಸಂಬುದ್ಧರು ಹೊಳೆವ ದೇವತೆಗಳು ಕಪಿಲವಸ್ತುವಿನ ನಾಗರಿಕರು ಈ ಅನನ್ಯವಾದ ಪವಾಡವನ್ನು ವೀಕ್ಷಿಸಿದರು. ಬುದ್ಧರು ತಮ್ಮ ಪಾರಮಾರ್ಥಿಕ ವೈಭವದ ರತನ ಚಂಕ್ರಮಣದಲ್ಲಿ ಮೇಲಿಂದ ಕೆಳಗೆ ನಡೆಯುತ್ತಲೇ ಧಮ್ಮೋಪದೇಶ ಮಾಡುತ್ತಿರುವುದನ್ನು ಭಕ್ತಿಭಾವದಿಂದ ಎಲ್ಲರೂ ಕೇಳುತ್ತಿದ್ದರು. ದೇವತೆಗಳು ಮತ್ತು ಬ್ರಹ್ಮರುಗಳು ದಿವ್ಯ ಮಂದಾರದ ಹೂಗಳನ್ನು ಚಂಕ್ರಮಣದ ಹಾದಿಗೆ ಚೆಲ್ಲಿದರು.

ಖುದ್ದಕ ನಿಕಾಯದ ಬುದ್ಧವಂಸ ಪಾಲಿಯಲ್ಲಿ ಈ ಮೇಲಿನ ಅನನ್ಯವಾದ ಘಟನೆಯನ್ನು ವರ್ಣಿಸುವ ಮತ್ತು ದೇವತೆಗಳು ಮತ್ತು ಬ್ರಹ್ಮರುಗಳು ತಮ್ಮ ದಿವ್ಯ ಲೋಕಗಳಿಂದಲೇ ಪೂಜಿಸುವ ಹಾಗು ಮಾನವ ಜೀವಿಗಳು ನ್ಯಗ್ರೋಧಾರಾಮ ಮತ್ತು ಇತರೆಡೆಗಳಿಂದ ಕುಳಿತೇ ಭಕ್ತಿಭಾವದಿಂದ ಪೂಜಿಸುವ ಇಪ್ಪತ್ತು ಸುಂದರ ಗಾಥೆಗಳಿವೆ.

ಹೀಗೆ ಧಮ್ಮದೇಸನವು ನಡೆಯುತ್ತಿರಲು ಗಿಜ್ಝಕೂಟದಲ್ಲಿ ತನ್ನ ಐದುನೂರು ಭಿಕ್ಖುಗಳೊಂದಿಗೆ ಇದ್ದ ಆಯುಷ್ಮಂತ ಸಾರಿಪುತ್ತನು ತನ್ನ ಲೋಕೋತ್ತರ ಶಕ್ತಿಯಿಂದ ತಥಾಗತರು ಆಕಾಶ ಮಾರ್ಗದಲ್ಲಿ ನಡೆಯುತ್ತಿರುವ ಚಂಕ್ರಮಣವನ್ನು ನೋಡಿದನು. ತುಂಬ ಆಶ್ಚರ್ಯದಿಂದ ಮತ್ತು ಭಕ್ತಿಭಾವದಿಂದ ಈ ದೃಶ್ಯವನ್ನು ನೋಡಿ ತನ್ನ ಸೋದರ ಭಿಕ್ಖುಗಳಿಗೆ ಹೀಗೆ ಹೇಳಿದನು: "ಆಯುಷ್ಮಂತರೆ, ಭಗವಾನರು ಯಮಕ ಪಾಟಿಹಾರಿಯವನ್ನೆಸಗಿ ಆಕಾಶದಲ್ಲಿ ರತನ ಚಂಕ್ರಮಣವನ್ನು ನಿರ್ಮಿಸಿ ಅಲ್ಲಿ ನಡೆದಾಡಿ ತಮ್ಮ ರಾಜ ಬಂಧುಗಳ ಅಹಂಕರವನ್ನು ಮಣಿಸಿದ್ದಾರೆ. ಬನ್ನಿ, ನಾವೆಲ್ಲ ನ್ಯಗ್ರೋಧಾರಾಮಕ್ಕೆ ಹೋಗೋಣ, ಅಲ್ಲಿ ಸಮ್ಮಾಸಂಬುದ್ಧರ ಸಮ್ಮುಖದಲ್ಲಿದ್ದು ತಾವು ಈ ಹಿಂದೆ ಬದುಕಿದ ಬೋಧಿಸತ್ವ ಜನ್ಮಗಳ ಬಗೆಗಿನ ಜಾತಕ ಕಥೆಗಳನ್ನು ಮತ್ತು ಈ ಹಿಂದಿನ ಬುದ್ಧರುಗಳ ಜೀವನ ಚರಿತ್ರೆಗಳನ್ನು ಹೇಳುವಂತೆ ವಿಶೇಷವಾದ ಪ್ರಾರ್ಥನೆಯನ್ನು ಸಲ್ಲಿಸೋಣ. ಒಬ್ಬ ಬುದ್ಧರು ಮಾತ್ರವೇ ಈ ರೀತಿಯಾಗಿ ಹಿಂದಿನದೆಲ್ಲವನ್ನೂ ಹೇಳಬಲ್ಲರು. ಒಬ್ಬ ಸರ್ವಜ್ಞ ಬುದ್ಧನು ಮಾತ್ರವೇ ಹಿಂದಿನ ಬುದ್ಧರುಗಳ ಜೀವನ ಚರಿತ್ರೆಗಳನ್ನು ಆಳವಾಗಿ ನೋಡಿ, ಅವರ ಎಲ್ಲ ಪಾರಮಾರ್ಥಿಕ ಉನ್ನತೋನ್ನತ ಸಾಧನೆಗಳನ್ನು ಗುರುತಿಸಬಲ್ಲರು."

ಆನಂತರದಲ್ಲಿ ಆಯುಷ್ಮಂತ ಸಾರಿಪುತ್ತನು ಮತ್ತು ಐದುನೂರು ಜನ ಅರಹತ ಭಿಕ್ಖುಗಳು ತಮ್ಮ ಅಸಮಾನ ಶಕ್ತಿಯಿಂದ ಬುದ್ಧನಿರುವೆಡೆ ಬಂದು ಆಕಾಶದಲ್ಲಿ ರತನ ಚಂಕ್ರಮಣದಲ್ಲಿರುವ ಬುದ್ಧರಿಗೆ ವಂದಿಸಿದರು. ಆಯುಷ್ಮಂತ ಸಾರಿಪುತ್ತನಲ್ಲದೆ ಇತರೆ ಹಿರಿಯರಾದ ಆಯುಷ್ಮಂತ ಮಹಾಮೊಗ್ಗಲ್ಲಾನ, ಮಹಾಕಸ್ಸಪ ಮುಂತಾದವರು ಆಕಾಶ ಮಾರ್ಗಕ್ಕೆ ಏರಿ ಬುದ್ಧರಿಗೆ ನಮಸ್ಕರಿಸಿದರು. ಬುದ್ಧರು ಆಯುಷ್ಮಂತ ಸಾರಿಪುತ್ತ ಮತ್ತು ಇತರ ಅಗ್ರ ಶಿಷ್ಯರ ಅದಮ್ಯ ಭಕ್ತಿ ಮತ್ತು ಉತ್ಸಾಹವನ್ನು ಕಂಡು ಇಪ್ಪತ್ನಾಲ್ಕು ಹಿಂದಿನ ಬುದ್ಧರುಗಳ ಇತಿಹಾಸವಾದ ಬುದ್ಧವಂಸದ ಮೇಲೆ ಮತ್ತು ತಾವು ಮಾಡಿದ ಸಾಧನೆಗಳ ಮೇಲೆಯೇ ಧಮ್ಮದೇಸನವನ್ನು ನೀಡಿದರು.



## ಬುದ್ಧವಂಸದ ಮೇಲೆ ಧಮ್ಮದೇಸನ

ಬುದ್ಧರು ರತನ ಚಂಕ್ರಮಣದ ಮೇಲೆ ನಡೆಯುತ್ತಲೇ ತಾನು ಬುದ್ಧ ದೀಪಂಕರರನ್ನು ಹೇಗೆ ಭೇಟಿ ಮಾಡಿದೆ ಮತ್ತು ಅವರು ನಡೆದಾಡಿದ ಹೆಜ್ಜೆಯಲ್ಲೇ ನಡೆದಾಡಲು ತೀರ್ಮಾನಿಸಿದೆ ಎಂಬ ವಿವರಗಳುಳ್ಳ ಧಮ್ಮದೇಸನವನ್ನು ನೀಡಿದರು. ಆನಂತರ ಅಲ್ಲಿ ನೆರೆದಿದ್ದ ಮಾನವರು, ದೇವತೆಗಳು ಮತ್ತು ಬ್ರಹ್ಮರಿಗೆ ಚತುರಾರ್ಯ ಸತ್ಯಗಳ ಮೇಲೆ ಧಮ್ಮದೇಸನವನ್ನು ನೀಡಿದರು. ಆಗ ಆಯುಷ್ಮಂತ ಸಾರಿಪುತ್ತನು ಹೀಗೆ ಯೋಚಿಸಿದನು: "ಬುದ್ಧವಂಸ ಮತ್ತು ಜಾತಕ ಕಥೆಗಳ ಮೇಲೆ ಧಮ್ಮದೇಸನವನ್ನು ನೀಡಿದಲ್ಲಿ ಮಾನವರಿಗೂ ದೇವತೆಗಳಿಗೂ ಅನುಕೂಲವಾಗಿ ಅವರಲ್ಲಿ ಪ್ರಜ್ಞೆಯು ಇನ್ನಷ್ಟೂ ಜಾಗೃತವಾಗುತ್ತಿದೆ." ಈ ಚಿಂತನೆಯಿಂದ ಸಾರಿಪುತ್ತನು ತಥಾಗತರಿಗೆ ತಮ್ಮ ಹಿಂದಿನ ಜನ್ಮಗಳ ವೃತ್ತಾಂತಗಳನ್ನು, ದಶಪಾರಮಿಗಳನ್ನು ಮೂರುಬಾರಿ ಪೂರೈಸಿದ್ದನ್ನು, ಬುದ್ಧ ದೀಪಂಕರರಿಂದ ಮುಂದೆ ಬುದ್ಧನಾಗುವೆನೆಂಬ ಭವಿಷ್ಯ ಕೇಳಿದ್ದನ್ನು ಮುಂತಾದ ಸಂಗತಿಗಳನ್ನು ಹೇಳುವಂತೆ ಕೋರಿದನು. ಆನಂತರದಲ್ಲಿ ಭಗವಾನ್ ಬುದ್ಧರು ಹಿಂದಿನ ಎಲ್ಲ ಬುದ್ಧರುಗಳ ಪ್ರಮುಖವಾದ ಗುಣಗಳನ್ನು ಅವರ ವಂಶಾವಳಿಗಳ ಮೇಲೆ ಧಮ್ಮೋಪದೇಶವನ್ನು ನೀಡಿದರು.

ದೀಪಂಕರರಿಂದ ಹಿಡಿದು ಕಸ್ಸಪ ಬುದ್ಧರವರೆಗಿನ ಹಿಂದಿನ ಇಪ್ಪತ್ನಾಲ್ಕು ಬುದ್ಧರ ಜೀವನ ವೃತ್ತಾಂತಗಳನ್ನು ಹೇಳಿದರು. ಆನಂತರ ತಾವು ಹೇಗೆ ಹಲವು ಜನ್ಮಗಳನ್ನು ಬೋಧಿಸತ್ವರಾಗಿ (ಜಾತಕ ಕಥೆಗಳ ಪ್ರಕಾರ 552 ಜನ್ಮಗಳು) ಹಾದು ದಶಪಾರಮಿಗಳನ್ನು ಮೂರುಸಾರಿ ಪೂರೈಸಿ ಪಾರಮಾರ್ಥಿಕ ವಿಕಾಸವನ್ನು ಹೊಂದಿ, ನಾಲ್ಕು ಅಂಸಖೇಯ್ಯಗಳನ್ನು ಮತ್ತು ಶತಸಹಸ್ರ ಕಲ್ಪಗಳನ್ನು ತೆಗೆದುಕೊಂಡರು. ತನ್ನ ಗತ ಜಾತಕ ಕಥೆಗಳನ್ನು ಹೇಳುತ್ತಿದ್ದಂತೆ ಈ ಕೆಳಗಿನ ಮೂರು ರೀತಿಯ ಪಾರಮಿಗಳ ಮೇಲೆ ಧಮ್ಮೋಪದೇಶವನ್ನು ನೀಡಿದರು:

1. ಸಮ್ಮಾಸಂಬುದ್ಧರ ಪರಮಾರ್ಥ ಸಾಧನೆಗಳು
2. ಪಚ್ಚೇಕ ಬುದ್ಧರ ಉಪಪಾರಮಿಗಳು
3. ಸಮ್ಮಾಸಂಬುದ್ಧ ಶಿಷ್ಯ ಅರಹತರ ಪಾರಮಿಗಳು

ಬೋಧಿಸತ್ತರಾಗಿ ಬದುಕನ್ನು ಆರಂಭಿಸಿ ಮೇಲಿನ ಮೂರುಬಗೆಯ ಪಾರಮಿಗಳನ್ನು ಪೂರೈಸುವ ಮುನ್ನ ಆಗಲೇ ಹತ್ತು ಪಾರಮಿಗಳಲ್ಲಿ ಸಿದ್ಧಿಯನ್ನು ಪಡೆದುಕೊಂಡಿದ್ದು, ದೀಪಂಕರ ಬುದ್ಧರ ಅಡಿಯಲ್ಲಿ ಅರಹತರಾಗಬಹುದಿತ್ತು. ಆದರೆ ಸಮ್ಮಾಸಂಬುದ್ಧ ದೀಪಂಕರ ಬುದ್ಧರ ತೇಜಸ್ಸನ್ನು ದಿವ್ಯ ವೈಭವವನ್ನು ನೋಡಿ ತನ್ನ ಪಾರಮಾರ್ಥಿಕ ಮುಕ್ತಿಯನ್ನು ಮುಂದಕ್ಕೆ ಹಾಕಿ ತಾನೂ ಅವರಂತೆಯೇ ನಡೆಯಬೇಕೆಂದು ತೀರ್ಮಾನಿಸಿದ. ಈ ಮಾನಸಿಕ ಸ್ಥಿತಿಯಿಂದ ಅವರ ಮುಂದೆ ಹೋಗಿ ತಾನೂ ಮುಂದೆ ಬುದ್ಧನಾಗಬಹುದೇ ಎಂಬುದನ್ನು ಹೇಳಬೇಕೆಂದು ವಿನಂತಿಸಿದ. ಬುದ್ಧ ದೀಪಂಕರರು ದಿವ್ಯಚಕ್ಷುವಿನಿಂದ

ಅವನ ಭವಿಷ್ಯವನ್ನು ನೋಡಿ ಮುಂದೆ ಖಂಡಿತವಾಗಿಯೂ ಬುದ್ಧ ಗೌತಮನ ಹೆಸರಿನಿಂದ ಗುರುತಿಸಲ್ಪಡುತ್ತಾನೆಂದು ನುಡಿದರು.

ಭಗವಾನರು ತಾವು ಹತ್ತು ಪಾರಮಿಗಳನ್ನು ಹೇಗೆ ಸಿದ್ಧಿಸಿಕೊಂಡರು ಎಂಬುದನ್ನು ಹತ್ತು ಜಾತಕ ಕಥೆಗಳಲ್ಲಿ (ಜಾತಕ ಮತ್ತು ಚರಿಯಾಪಿಟಿಕ ಸಾಹಿತ್ಯ) ನೋಡಬಹುದು. ಆನಂತರದಲ್ಲಿ ಈಗಿನ ಜನ್ಮದಿಂದ ಹಿಡಿದು ಈ ಕ್ಷಣದವರೆಗಿನ ವಿವರಗಳನ್ನು ನೀಡಿದರು. ಆನಂತರದಲ್ಲಿ ಮುಂದೆ ನಡೆಯುವ ಪ್ರಮುಖ ಘಟನೆಗಳನ್ನು ಒಂದೊಂದಾಗಿ ಹೇಳುತ್ತಾ ಹೋದರು. ಅಂದರೆ ಮುಂದಿನ ನಲವತ್ತೈದು ವರ್ಷಗಳ ಕರುಣೆ ತುಂಬಿದ ಧರ್ಮ ಬದುಕಿನಲ್ಲಿ ಸಂಭವಿಸುವ ಘಟನೆಗಳನ್ನು ಹೇಳಿದರು. ಬುದ್ಧರು ಏನೆಲ್ಲ ಭವಿಷ್ಯ ನುಡಿದರೋ ಅವೆಲ್ಲ ಘಟಿಸಿದವು. ಎಲ್ಲ ಕಥೆಗಳನ್ನು ಹೇಳಿ ತಮ್ಮ ಧಮ್ಮೋಪದೇಶವನ್ನು ಆಯುಷ್ಮಂತ ಸಾರಿಪುತ್ತ ಮತ್ತು ಭಿಕ್ಖುಗಳಿಗೆ ಸ್ಪಷ್ಟ ಸೂಚನೆಯೊಂದಿಗೆ ಹೀಗೆ ಮುಗಿಸಿದರು: "ಅಪ್ರಮಾದದಿಂದ ನಡೆಯಿರಿ; ಎಲ್ಲ ಬುದ್ಧರುಗಳು ಬೋಧಿಸಿದಂತೆ ಆಚರಿಸಿ ಬದುಕಿರಿ".

ಬುದ್ಧವಂಶದ ಮತ್ತು ಬೋಧಿಸತ್ತ ಚರಿಯಗಳ ಮೇಲಿನ ಧಮ್ಮ ವಿಶೇಷವು ಮುಗಿಯುತ್ತಿದ್ದಂತೆ ಮಂಗಳ ವರ್ಷವು ಸುರಿಯಿತು. ಆನಂತರದಲ್ಲಿ ಬುದ್ಧರು ಆಕಾಶದಲ್ಲಿನ ರತನಚಂಕ್ರಮಣದಿಂದ ಕೆಳಗಿಳಿದು ಬಹುಸಂಖ್ಯೆಯಲ್ಲಿ ಸೇರಿದ ರಾಜ ಪ್ರಮುಖರು ಮತ್ತು ಪ್ರಜೆಗಳಿರುವ ಕಡೆಬಂದು ಬುದ್ಧರಿಗಷ್ಟೇ ಮೀಸಲಾದ ಧಮ್ಮಾಸನದ ಮೇಲೆ ಕುಳಿತರು. ರಾಜಮನೆತನದ ಸಂಬಂಧಿಗಳ ಪೊಗರು ಅಣಗಿ ಅವರು ಮತ್ತು ಇತರರು ಪ್ರಶಾಂತರಾಗಿ ಭಕ್ತಿಯಿಂದ ಬುದ್ಧರ ಮುಂದೆ ಕುಳಿತರು.

ಮಂಗಳ ವರ್ಷವಾದುದು ಒಂದು ಸೋಜಿಗದ ಸಂಗತಿ. ಮಂಗಳ ವರ್ಷವಾದಾಗ ಕೆಲವರು ನೆನೆಯಲು ಇಷ್ಟಪಡಲಿಲ್ಲ, ಇನ್ನು ಕೆಲವರು ನೆನೆದರೂ ಬಾಧೆ ಪಡದವರಿದ್ದರು. ಅಂದರೆ ಜನರು ಏನೆಂದುಕೊಂಡರೆ ಅಂತೇ ಆಯಿತು. ರಾಜ ಮನೆತನದವರು, ರಾಜಕುಮಾರರು, ಸಾಮಾನ್ಯ ಪ್ರಜೆಗಳು ಎಲ್ಲರೂ ಈ ಪವಾಡವನ್ನು ನೋಡಿ ಸೋಜಿಗಪಟ್ಟರು. ಒಂದು ಧ್ವನಿಯಲ್ಲಿ ಅವರು: "ಓ ಎಂಥ ಮಂಗಳವಾದ ಮಳೆ! ಏನದ್ಭುತ! ಈ ಹಿಂದೆ ಎಂದೂ ಹೀಗೆ ಆಗಿರಲಿಲ್ಲ, ಯಾರೂ ಈ ಹಿಂದೆ ಹೀಗೆ ಇಂತಹುದನ್ನು ಕೇಳಿರಲಿಲ್ಲ !"

ಈ ಸೋಜಿಗದ ಮಾತುಗಳನ್ನು ಕೇಳಿದ ಬುದ್ಧರು: "ಧಮ್ಮವನ್ನು ಕೇಳುತ್ತಿರುವವ ಮೇಲೆ ಮಂಗಳ ವರ್ಷವಾಗುತ್ತಿರುವುದು ಇದೇ ಮೊದಲಲ್ಲ. ಇಂತಹುದೇ ಸಂದರ್ಭವೊಂದರಲ್ಲಿ ಮಂಗಳ ವರ್ಷಧಾರೆಯಾದ ಘಟನೆ ಹಿಂದೆ ನಡೆದಿದೆ. ಈ ಬಗ್ಗೆ ಶ್ರೋತೃಗಳು ಕೇಳಲು ಆಸಕ್ತರಾದ್ದರಿಂದ ಬುದ್ಧರು ವೆಸ್ಸಂತರ ಜಾತಕ ಕಥೆಯನ್ನು ಅಲ್ಲಿನ ಜನರ ಸಂತೋಷಕ್ಕಾಗಿ ಹೇಳಿದರು. ರಾತ್ರಿ ಸಮೀಪಿಸುತ್ತಿದ್ದುದರಿಂದ ಜನ ಬುದ್ಧರಿಗೆ ವಂದಿಸಿ ತಮ್ಮ ತಮ್ಮ ಮನೆಗಳಿಗೆ ತೆರಳಿದರು.



ಸಭೆಯಲ್ಲಿದ್ದ ಯಾರೊಬ್ಬರಾಗಲಿ ರಾಜನೇ ಆಗಲಿ ಬುದ್ಧರನ್ನು ಅರಹತರನ್ನು ನಾಳೆ ಮುಂಜಾನೆಯ ಭಿಕ್ಷೆಗೆ ಕರೆಯಲಿಲ್ಲ. ರಾಜ ಶುದ್ಧೋಧನನು ಮತ್ತು ರಾಜ ಪರಿವಾರದವರು 'ರಾಜನ ಅರಮನೆಯನ್ನು ಬಿಟ್ಟರೆ ಇವರಿಗೆ ಬೇರೆಡೆ ಇಲ್ಲ, ಆದ್ದರಿಂದ ನಾಳಿನ ಮುಂಜಾನೆಯ ಭಿಕ್ಷೆಗೆ ಬಂದೇ ಬರುತ್ತರೆಂದು' ಭಾವಿಸಿದರು. ಈ ಭಾವನೆ ಅಥವಾ ಊಹೆಯ ಮೇಲೆ ರಾಜನು ಬುದ್ಧರ ನಾಯಕತ್ವದಲ್ಲಿ ಬರುವ ಇಪ್ಪತ್ತು ಸಾವಿರ ಭಿಕ್ಖುಗಳಿಗೆ ಊಟದ ವ್ಯವಸ್ಥೆಯನ್ನು ಮತ್ತು ಆಸನದ ವ್ಯವಸ್ಥೆಗಳನ್ನು ಮಾಡುವಂತೆ ತನ್ನ ಸೇವಕರಿಗೆ ನಿರ್ದೇಶನ ಕೊಟ್ಟನು.

ಮಾರನೆದಿನ ಬುದ್ಧರು ತಮ್ಮ ಇಪ್ಪತ್ತು ಸಾವಿರ ಅರಹತರೊಂದಿಗೆ ಕಪಿಲವಸ್ತು ನಗರವನ್ನು ಭಿಕ್ಷೆಗಾಗಿ ಪ್ರವೇಶಿಸಿದರು. ನಗರ ಪ್ರವೇಶದ ಸಂದರ್ಭದಲ್ಲಿ ಮೊದಲಲ್ಲಿ ಬುದ್ಧರನ್ನು ಸ್ವಾಗತಿಸಲು ರಾಜಮನೆತನದವರಿಂದ ಯಾರೂ ಬಂದಿರಲಿಲ್ಲ. ಬುದ್ಧರು ಇಂತಹ ಸಂದರ್ಭದಲ್ಲಿ ಈ ಹಿಂದಿನ ಬುದ್ಧರುಗಳು ನಗರಗಳಲ್ಲಿ ಭಿಕ್ಷೆಗಾಗಿ ನಡೆದು ಹೋದ ಸಂದರ್ಭಗಳ ಮೇಲೆ ಮೆಲುಕು ಹಾಕಿದರು. ಆ ಬುದ್ಧರುಗಳು ಕೇವಲ ರಾಜ ಮನೆತನಗಳಿಂದ ಮತ್ತು ಶ್ರೀಮಂತರಿಂದ ಮಾತ್ರವಷ್ಟೇ ಭಿಕ್ಷೆ ಪಡೆಯುತ್ತಿರಲಿಲ್ಲ. ಮನೆಮನೆಗೂ ಹೋಗಿ ಭಿಕ್ಷೆ ಪಡೆಯುತ್ತಿದ್ದರು. ತಮ್ಮ ದಿವ್ಯಚಕ್ಷುವಿನಿಂದ ಹಿಂದಿನ ಎಲ್ಲ ಘಟನೆಗಳನ್ನು ನೋಡಿದರು. ಕೇವಲ ಆಯ್ಕೆ ಮಾಡಿದ ಮನೆಗಳಿಂದಷ್ಟೇ ಅಲ್ಲದೆ ಬೇರೆ ಬೇರೆ ಮನೆಗಳಿಂದ ಹಿಂದಿನ ಬುದ್ಧರು ಭಿಕ್ಷೆ ಸ್ವೀಕರಿಸಿದುದನ್ನು ಅರಿತು ತಾವೂ ಹಾಗೆಯೇ ಮಾಡಿದರು.

ಕಪಿಲವಸ್ತುವಿನ ಮಹಾದ್ವಾರವನ್ನು ಪ್ರವೇಶಿಸಿ ಯಾವುದೇ ಬೇಧವೆಣಿಸದೆ ಮನೆ ಮನೆಯಿಂದ ಭಿಕ್ಷೆಯನ್ನು ಬೇಡಲು ಆರಂಭಿಸಿದರು. ಆಗ ಹೀಗೊಂದು ಮನಸ್ಸು ಮಾಡಿದರು: "ನನ್ನ ಶಿಷ್ಯರು ಮುಂದೆಯೂ ಈ ರೀತಿಯಲ್ಲಿ ಮುಂದುವರಿದು ಭಿಕ್ಖುವಾದವನು ಹಿಂಜರಿಯದೆ ಮನೆಮನೆಗೂ ಹೋಗಿ ಭಿಕ್ಷೆಯನ್ನು ಸಂಗ್ರಹಿಸಲಿ."

ಮಜ್ಝಿಮನಿಕಾಯದ ಟೀಕಾದಲ್ಲಿ ಹೀಗೆ ಇದೆ: 'ಬುದ್ಧರು ಭಿಕ್ಷಾ ನಡಿಗೆಯನ್ನು ಮೊದಲನೇ ಮನೆಯಿಂದ ನಗರದ್ವಾರದ ಕೊನೆಯ ಮನೆಯವರೆಗೂ ಮನೆಯಿಂದ ಮನೆಗೆ ಹೋಗಿ ಭಿಕ್ಷೆ ಬೇಡಲು ಆರಂಭಿಸಿದಾಗ ಭೂಮಿ ನಿಧಾನವಾಗಿ ಕಂಪಿಸಿತು. ಅವರು ನಿಧಾನವಾಗಿ ನಡೆದರು, ಒಂದು ಚಿಕ್ಕ ಕ್ರಿಮಿಯೂ ಸಾಯದಂತೆ ನಡೆಯಲು ನೆಲವು ಕಾಣು ಕಾಣುತ್ತಿದ್ದಂತೆಯೇ ಸಮವಾಗಿ ಗುಂಡಿಗಳು ಇಲ್ಲದಂತಾದವರು.'

ಬುದ್ಧರು ಹೀಗೆ ಗಂಭೀರವಾಗಿ ನಡೆದುಬರುತ್ತಿರಲು ಸುತ್ತಮುತ್ತಲಿನ ಜನರೆಲ್ಲ ಭಕ್ತಿಭಾವದಿಂದ ನಮಿಸಿ "ನಮ್ಮ ಭಗವಾನರಾದ ರಾಜಕುಮಾರ ಸಿದ್ಧಾರ್ಥರು ಭಿಕ್ಷೆಗಾಗಿ ಬರುತ್ತಿದ್ದಾರೆ". ರಾಹುಲನ ತಾಯಿ ರಾಜಕುಮಾರಿ ಯಶೋಧರೆ ಬುದ್ಧರು ಮತ್ತು ಅರಹತರು ಪ್ರಶಾಂತ ಮುದ್ರೆಯಿಂದ ಗಂಭೀರವಾಗಿ ನಡೆದುಬರುತ್ತಿರುವುದನ್ನು ಕಂಡು ತನಗೆ ತಾನೇ ಹೇಳಿಕೊಂಡಳು: "ಈ ಮೊದಲು ನಮ್ಮ ಆರ್ಯಪುತ್ರನು ರಾಜವೈಭವದಿಂದ

ಬಂಗಾರದ ಪಲ್ಲಕ್ಕಿಯಲ್ಲಿ ಕುಳಿತು ಬರುತ್ತಿದ್ದರು. ಆದರೆ ಅಯ್ಯೋ, ಈಗ ಅವರು ನಗರವನ್ನು ಚೀವರವನ್ನು ಹೊದ್ದು, ಕೈಯಲ್ಲಿ ಬವನಾಸಿಯನ್ನು ಹಿಡಿದು ಭಿಕ್ಷೆಗಾಗಿ ಬರುತ್ತಿದ್ದಾರೆ. ಇದೇನು ನಿಜವೋ, ಸುಳ್ಳೋ? ಆನಂತರ ಆಕೆಯು ಬುದ್ಧರ ಸುತ್ತಲೂ ಆರು ಬಣ್ಣಗಳ ಪ್ರಭಾವಳಿ ಹರಡಿರುವುದನ್ನು ಕಂಡಳು. ಆನಂತರ ಮನದಲ್ಲಿಯೇ ಅಂದುಕೊಂಡಳು: 'ಬುದ್ಧರಿಗೆ ಮಾತ್ರ ಅನನ್ಯವಾಗಿರುವ ಮೂವತ್ತೆರಡು ಮಹಾಪುರುಷ ಲಕ್ಷಣಗಳನ್ನು ಎಂಭತ್ತು ಅನುಷಂಗಿಕ ಲಕ್ಷಣಗಳನ್ನು ಹೊಂದಿದವರಾಗಿ ಗಾಂಭೀರ್ಯದಿಂದ ನಡೆದುಬಂದರು'.

ಈ ದೃಶ್ಯದಿಂದ ವಿಚಲಿತಳಾಗಿ ಮುದಗೊಂಡು ತನ್ನ ಮಗ ರಾಹುಲನನ್ನು ಕರೆದು ಪುರುಷ ಸಿಂಹನಾದ ನಿನ್ನ ತಂದೆಯನ್ನು ನೋಡೆಂದು ಒಂಭತ್ತು ಪ್ರಭಾವಿ ಗಾಥೆಗಳನ್ನು ಹೇಳಿದಳು. ಇವೇ ಮುಂದೆ ನರಸೀಹಗಾಥೆಯಾಯಿತು.

## ರಾಜಕುಮಾರ ನಂದನ ಪಟ್ಟಾಭಿಷೇಕ

ಬುದ್ಧರು ಆಗಮಿಸಿದ ಮಾರನೆಯದಿನ, ರಾಜನು ಐದು ಪವಿತ್ರ ಘಟನೆಗಳ ಪ್ರಯುಕ್ತ ಒಂದು ದೊಡ್ಡ ಸಮಾರಂಭವನ್ನು ಏರ್ಪಡಿಸಿದನು: 1) ರಾಜಕುಮಾರ ನಂದನನ್ನು ಅಭಿಷಕ್ತ ರಾಜಕುಮಾರನೆಂದು ಪಟ್ಟ ಕಟ್ಟುವುದು; 2) ಅಭಿಷಕ್ತ ರಾಜಕುಮಾರನಿಗೆ ಶ್ವೇತಛತ್ರವನ್ನು 'ಅಭಿಷಕ್ತ ರಾಜಕುಮಾರ' ಎಂದು ಲೇಖಿತವಾದ ಸುವರ್ಣ ತಟ್ಟೆಯನ್ನು ಕೊಡುವುದು; 3) ಸಾಂಪ್ರದಾಯಿಕ ಅಭಿಷಕ್ತ ರಾಜಕುಮಾರನಿಗೆ ಚೌಲೋಪನಯನ ಮಾಡುವುದು; 4) ಅಭಿಷಕ್ತ ರಾಜಕುಮಾರನ ಅರಮನೆಯ ಗೃಹಪ್ರವೇಶ ಮಾಡುವುದು; 5) ಅಭಿಷಕ್ತ ರಾಜಕುಮಾರನನ್ನು ರಾಜಕುಮಾರಿ ಜನಪದ ಕಲ್ಯಾಣಿಯೊಂದಿಗೆ ವಿವಾಹ ಮಾಡುವುದು.

ರಾಜಕುಮಾರ ನಂದನ ಅರಮನೆಯು ಆರ್ಯರಿಂದ ಮತ್ತು ನಗರದ ಪ್ರಮುಖರಿಂದ ತುಂಬಿಹೋಗಿತ್ತು. ಪೂರ್ವಾಹ್ನದಲ್ಲಿ ಬುದ್ಧರು ತಮ್ಮ ಭಿಕ್ಷಾಟನೆಯಲ್ಲಿ ಅಲ್ಲಿಗೆ ಬಂದಿದ್ದರು. ಭಿಕ್ಷಾನ್ನವನ್ನು ಭುಂಜಿಸಿಯಾದ ಮೇಲೆ ರಾಜಕುಮಾರ ನಂದನಿಗೆ ಚೈತನ್ಯದಾಯಕವಾದ ಧಮ್ಮೋಪದೇಶವನ್ನು ನೀಡಿ ಹರಸಿದರು. ಆನಂತರ ತನ್ನ ಬವನಾಸಿಯನ್ನು ನಂದನನ ಕೈಗೆ ಕೊಟ್ಟು, ನ್ಯಗ್ರೋಧಾರಾಮದತ್ತ ನಡೆದರು. ಬುದ್ಧರು ಕೂಡಲೇ ಬವನಾಸಿಯನ್ನು ವಾಪಸ್ಸು ಪಡೆಯುವರೆಂದು ನಂದನು ಯೋಚಿಸಿದ. ಆದ್ದರಿಂದ ಅವರ ಹಿಂದೆಯೇ ಹೋದ. ಬುದ್ಧರು ವಾಪಸು ಪಡೆಯದ್ದರಿಂದ ನಂದನು ಬವನಾಸಿಯನ್ನು ಹಿಡಿದು ನ್ಯಗ್ರೋಧಾರಾಮದವರೆಗೂ ಹೋದನು. ಬುದ್ಧರು ತಮ್ಮ ನಿವಾಸದಲ್ಲಿ ಬವನಾಸಿಯನ್ನು ಪಡೆದು ನಂದನಿಗೆ ಭಿಕ್ಖುವಾಗಲು ಇಚ್ಛೆಯಿದೆಯೇನು ಎಂದು ಕೇಳಲು ಅವನು ಅವರು ತಮ್ಮ ಅಣ್ಣನು ಎಂಬ ಮೇಲಿನ ಗೌರವದಿಂದಾಗಿ 'ಆಗಲಿ' ಎಂದನು. ಅವನಿಗೆ ಭಿಕ್ಖುವನ್ನಾಗಿ ದೀಕ್ಷೆಯನ್ನು ನೀಡಿದರು.



## ರಾಜಕುಮಾರ ರಾಹುಲನಿಗೆ ದೀಕ್ಷೆ

ಬುದ್ಧರು ಕಪಿಲವಸ್ತುವಿಗೆ ಬಂದು ಏಳು ದಿನಗಳಾದ ಮೇಲೆ ಅವರನ್ನು ಇಪ್ಪತ್ತು ಸಾವಿರ ಅರಹತ ಭಿಕ್ಖುಗಳ ಸಮೇತ ಭಿಕ್ಷೆಗಾಗಿ ಅರಮನೆಗೆ ಆಹ್ವಾನಿಸಲಾಯಿತು. ರಾಜಕುಮಾರಿ ಯಶೋಧರೆ ಮತ್ತು ಅವಳ ಏಳುವರ್ಷದ ಮಗ ರಾಹುಲ ಆ ಸಂದರ್ಭಕ್ಕಾಗಿ ಒಳ್ಳೆಯ ಉಡುಗೆಗಳನ್ನು ತೊಟ್ಟರು. ಅವಳು ಮಗನಿಗೆ ಹೇಳಿದಳು: "ನಿನ್ನ ತಂದೆಯವರ ಊಟವಾದ ಮೇಲೆ ಅವರ ಬಳಿಹೋಗಿ ನಿನ್ನ ವಂಶಪಾರಂಪರ್ಯ ಆಸ್ತಿಯನ್ನು ಕೇಳು". ಅವಳು ತನ್ನ ಮಗನಿಗೆ ತನ್ನ ತಂದೆ ಗೃಹತ್ಯಾಗ ಮಾಡಿ ಸಂನ್ಯಾಸಿಯಾಗದೆ ಹೋಗಿದ್ದರೆ ಚಕ್ರವರ್ತಿ ಮಹಾರಾಜನಾಗುತ್ತಿದ್ದ ಎಂಬ ಸಂಗತಿಯನ್ನು ಹೇಳಿ "ಮಗನೆ, ಅವರು ಮಹಾಭಿನಿಷ್ಕ್ರಮಣ ಮಾಡುವ ಮುನ್ನ ನಮ್ಮಲ್ಲಿ ನಾಲ್ಕು ಕೊಳಗಗಳ ತುಂಬ ಸಂಪತ್ತು ಇತ್ತು. ಈ ಸಂಪತ್ತೆಲ್ಲವೂ ನಿಮ್ಮ ತಂದೆಯವರು ಗೃಹತ್ಯಾಗ ಮಾಡಿದ ಅನಗಾರಿಕರಾಗಿ ಪರಿವ್ರಾಜಕ ಸಮಣರಾದ ಮೇಲೆ ಕಾಣೆಯಾಯಿತು. ಆದ್ದರಿಂದ ಪರಂಪರೆಯಂತೆ ತಂದೆಯ ಆಸ್ತಿಯು ಮಗನಿಗೆ ಸೇರುತ್ತದೆಂದು ಹೇಳು."

ಎಳೆಯ ರಾಹುಲನು ಬುದ್ಧರ ಸಮ್ಮುಖದಲ್ಲಿ ಬಂದಾಗ ತಂದೆಯ ಪ್ರೀತಿ ಅವನಿಗೆ ತಾಕಿತು. ಆದ್ದರಿಂದ ಅವನು ಸಂತೋಷಗೊಂಡು "ಓ ಸಮಣ, ನಿಮ್ಮ ನೆರಳೂ ಕೂಡ ತುಂಬ ಆಹ್ಲಾದಕರವಾಗಿದೆ" (ಸುಖಾವಾತತೆ ಛಾಯಾ ಸಮಣ!)

ಭಿಕ್ಷಾನ್ನವನ್ನು ಭುಂಜಿಸಿದ ಮೇಲೆ ಬುದ್ಧರು ದಾನದಿಂದ ಬರುವ ಪುಣ್ಯಗಳ ಬಗ್ಗೆ ಧಮ್ಮೋಪದೇಶವನ್ನು ನೀಡಿ, ನ್ಯಗ್ರೋಧಾರಾಕ್ಕೆ ತೆರಳಲು ಸನ್ನದ್ಧರಾದರು. ಆಗಲೇ ಅವನು ತಾಯಿಯು ಹೇಳಿದಂತೆ ಅಮಾಯಕನಾದ ಎಳೆಯ ರಾಜಕುಮಾರ ರಾಹುಲನು "ನನಗೆ ವಂಶಪಾರಂಪರ್ಯವಾಗಿ ಬರಬೇಕಾದುದನ್ನು ಕೊಡಿ" ಎಂದು ತಂದೆಯನ್ನು ಕೇಳಿದನು.

ಆನಂತರ ಅವನು ತಾನು ಮುಂದೆ ಚಕ್ರವರ್ತಿ ಮಹಾರಾಜನಾಗುವುದರಿಂದ ಆ ಅಂತಸ್ತಿಗೆ ತಕ್ಕಂತೆ ಸಂಪತ್ತು ಬೇಕೆಂದು ಸಿಹಿಮಾತುಗಳಿಂದ ಹೇಳುತ್ತಾ ಹೋದ. ಆನಂತರ ಸ್ಪಷ್ಟವಾಗಿ ತನಗೆ ಏನು ಬೇಕೆಂಬುದನ್ನು ಹೀಗೆ ಕೇಳಿದ: "ಭಗವಾನರೆ, ನನಗೆ ಅನುವಂಶಿಕವಾದ ಆ ನಾಲ್ಕು ಕೊಳಗಗಳ ಸಂಪತ್ತನ್ನು ಸಂಪ್ರದಾಯದಂತೆ ದಯಪಾಲಿಸಿ."

ಬುದ್ಧರು ತಮ್ಮ ಇಪ್ಪತ್ತುಸಾವಿರ ಅರಹತ ಭಿಕ್ಖುಗಳೊಂದಿಗೆ ಅರಮನೆಯನ್ನು ಬಿಟ್ಟು ನ್ಯಗ್ರೋಧಾರಾಮದತ್ತ ಹೊರಟಾಗ ರಾಹುಲನೂ ಕೂಡ ಅವರ ಹಿಂದೆಯೇ ಹೋಗುತ್ತಾ "ಭಗವಾನರೆ, ನನಗೆ ಅನುವಂಶಿಕವಾದ ಆ ನಾಲ್ಕು ಕೊಳಗಳ ಸಂಪತ್ತನ್ನು ಸಂಪ್ರದಾಯದಂತೆ ದಯಪಾಲಿಸಿ" ಎಂದು ಕೇಳುತ್ತಲೇ ಇದ್ದ. ಬುದ್ಧರು ಒಂದು ಮಾತನ್ನೂ ಆಡದೆ ಮತ್ತು ರಾಜನ ಕಡೆಯವರು ಏನನ್ನೂ ಹೇಳು ಹೆದರುತ್ತಿದ್ದರು. ಹೀಗೆ ಕೊನೆಯಲ್ಲಿ ರಾಹುಲನು ಬುದ್ಧರ ಜೊತೆಗೆ ನ್ಯಗ್ರೋಧಾರಾಕ್ಕೆ ಬಂದನು.

ನ್ಯಗ್ರೋದ ತೋಪನ್ನು ಸೇರಿದ ಬುದ್ಧರು ಹೀಗೆ ಚಿಂತನೆ ಮಾಡಿದರು: "ರಾಜಕುಮಾರ ರಾಹುಲನು ತನ್ನ ಅನುವಂಶಿಕವಾದ ತಂದೆಯ ಸಂಪತ್ತನ್ನು ಕೇಳುತ್ತಿದ್ದಾನೆ. ಪ್ರಾಪಂಚಿಕ ಸಂಪತ್ತೆಲ್ಲವೂ ಪ್ರಾಪಂಚಿಕ ಅಸ್ತಿತ್ವಕ್ಕಾಗಿ ಬೇಕು ಮತ್ತು ಅದು ದುಃಖಗಳ ಮುಂದುವರಿಕೆಯೇ ಆಗಿರುತ್ತದೆ. ಆದ್ದರಿಂದ ಅವನಗೆ ಯಾವ ಬೋಧಿ ಮರದಡಿಯಲ್ಲಿ ಮಾರನನ್ನು ಸೋಲಿಸಿ ಮಹತ್ತರವಾದ ಏಳು ಸಂಪತ್ತುಗಳನ್ನು ಪಡೆದೆನೋ ಅವನ್ನು ಅವನಿಗೆ ಕೊಡುತ್ತೇನೆ". ಹೀಗೆ ತೀರ್ಮಾನಿಸಿ ಆಯುಷ್ಮಂತ ಸಾರಿಪುತ್ತನನ್ನು ಕರೆದು ರಾಹುಲನಿಗೆ ಸಾಮಣೇರನನ್ನಾಗಿ ದೀಕ್ಷೆ ನೀಡುವಂತೆ ಸೂಚಿಸಿದರು.

ಆಯುಷ್ಮಂತ ಸಾರಿಪುತ್ತನು "ಇವನಿಗೆ ಹೇಗೆ ದೀಕ್ಷೆಯನ್ನು ಕೊಡಲಿ" ಎಂದು ಕೇಳಿದರು. ಅದಕ್ಕೆ ಬುದ್ಧರು ಸಾಮಣೇರ ದೀಕ್ಷಾವಿಧಾನವನ್ನು ವಿವರಿಸುತ್ತಾ ತ್ರಿರತ್ನಗಳನ್ನು ಮೂರುಸಾರಿ ಸ್ವೀಕರಿಸುವಂತೆ ಹೇಳಿದರು. ರಾಹುಲನಿಗೆ ಈ ರೀತಿಯ ದೀಕ್ಷೆಯನ್ನು ನೀಡಿದರು. ಅಂಗುತ್ತರನಿಕಾಯದಲ್ಲಿ (2.398) ಆರ್ಯನಿಗೆ ಸಿಗುವ ಏಳು ಸಂಪತ್ತುಗಳು ಈ ಗಾಥೆಗಳಲ್ಲಿ ಅಡಗಿವೆ:

***ಸದ್ಧಾಧನಂ ಸೀಲಧನಂ, ಹಿರಿ ಓತಪ್ಪೀಯಂ ಧನಂ***
***ಸುತಧನಂಚ, ಚಾಗೋ ಚ ಪಞ್ಞಾವೇ ಸತ್ತಮಂ ಧನಂ***

ಶ್ರದ್ಧೆ ಧನ, ಶೀಲ ಧನ, ನಾಚಿಕೆ ಮತ್ತು ಭಯಗಳೆಂಬ ಧನಗಳು, ವಿದ್ಯೆ ಧನ, ತ್ಯಾಗ ಮತ್ತು ಪ್ರಜ್ಞೆ ಎಂಬ ಏಳನೆಯ ಧನ.

ರಾಹುಲನು ಒಬ್ಬ ಸಾಮಣೇರನಗಿ ದೀಕ್ಷೆಯನ್ನು ಪಡೆದನೆಂಬುದನ್ನು ರಾಜ ಶುದ್ಧೋಧನನು ತಿಳಿದು ವಿಚಲಿತನಾದನು. ಶಾಕ್ಯ ಕ್ಷತ್ರಿಯ ಕುಲದ ರಾಜನಾಗುವನೆಂಬ ಮಹದಾಸೆಯನ್ನಿಟ್ಟುಕೊಂಡಿದ್ದ. ತನ್ನ ರಾಜವಂಶವೇ ಕುಸಿದು ಬಿದ್ದುದು ನುಂಗಲಾರದ ತುತ್ತಾಗಿ ರಾಜನು ಬುದ್ಧರ ಬಳಿ ಹೋದ. ಗೌರವವನ್ನು ಸೂಚಿಸಿ ಒಂದು ಬದಿಯಲ್ಲಿ ಕುಳಿತು ಕೃಪೆಯನ್ನು ತೋರಬೇಕೆಂದು ಬೇಡಿಕೊಂಡನು. ಆಗ ಬುದ್ಧರು ಹೇಳಿದರು: "ಮಹಾರಾಜರೆ, ತಥಾಗತರು ಕೃಪೆಯನ್ನು ಕೊಡುವ ಹಂತವನ್ನು ದಾಟಿಹೋಗಿದ್ದಾರೆ". ಆಗ ರಾಜನು, "ಭಗವಾನರೇ, ನನ್ನ ವಿನಂತಿಯು ಸರಿಯಾಗಿ ಮತ್ತು ನ್ಯಾಯಯುತವಾಗಿದೆ" ಎಂದನು. ಆಗ ಬುದ್ಧರು ರಾಜನಿಗೆ ವಿನಂತಿಯನ್ನು ಮಂಡಿಸುವಂತೆ ಹೇಳಿದರು.

ರಾಜ ಹೇಳಿದನು: "ಭಗವಾನರೆ, ತಾವು ಗೃಹತ್ಯಾಗ ಮಾಡಿದಾಗ ನಾನು ತುಂಬ ನೊಂದೆನು ಮತ್ತು ದುಃಖಿತನಾದೆನು. ನನ್ನ ಎರಡನೇ ಮಗ ರಾಜಕುಮಾರ ನಂದನು ದೀಕ್ಷೆಯನ್ನು ಪಡೆದಾಗ ನನ್ನ ಭಾವನೆಗಳಿಗೆ ಧಕ್ಕೆ ಬಂದು ತೀವ್ರ ಅತೃಪ್ತಿಯನ್ನು ಅನುಭವಿಸಿದೆನು. ಆದರೆ ನನ್ನ ಮೊಮ್ಮಗ ಸಾಮಣೇರನಾದ ಮೇಲೆ ನನಗೆ ಆ ದುಃಖವನ್ನು ತಡೆದುಕೊಳ್ಳಲಾಗುತ್ತಿಲ್ಲ. ಭಗವಾನರೆ, ತಂದೆ-ತಾಯಿಗಳ ಮತ್ತು ಪಿತಾಮಹರ ಪ್ರೀತಿ ರಕ್ತಮಾಂಸ ಮಜ್ಜೆಗಳನ್ನು ಮೀರಿಕೊಂಡು ಹೋಗಿರುವಂತಹುದು. ಇಂತಹ



ಪ್ರೀತಿಪಾತ್ರರನ್ನು ಬೇರೆ ಮಾಡಿದಾಗ ಅವರಿಗೆ ನೋವಾಗುತ್ತದೆ. ಆದ್ದರಿಂದ ಆರ್ಯರಾದ ತಾವು ತಂದೆ-ತಾಯಿಗಳ ಅನುಮೋದನೆ ಇಲ್ಲದೆ ಮಗನಿಗೆ ದೀಕ್ಷೆ ಕೊಡಬಾರದೆಂದು ವಿನಂತಿಸುತ್ತೇನೆ."

ಭಗವಾನರು ರಾಜನ ವಿನಂತಿಯನ್ನು ಒಪ್ಪಿಕೊಂಡು ಆ ಸಂದರ್ಭಕ್ಕೆ ಸೂಕ್ತವಾದ ಧಮ್ಮೋಪದೇಶವನ್ನು ನೀಡಿ ಸಮಾಧಾನ ಪಡಿಸಿದರು. ರಾಜನು ನಿರ್ಗಮಿಸಿದ ಮೇಲೆ ಭಿಕ್ಖುಗಳ ಸಭೆಯನ್ನು ಕರೆದು ಮೇಲಿನ ಘಟನೆಗೆ ಸಂಬಂಧಪಟ್ಟಂತೆ ಭಿಕ್ಖುಗಳ ತರಬೇತಿಗೆ ಸಂಬಂಧಪಟ್ಟಂತೆ ಈ ಕೆಳಗಿನ ನಿಯಮವೊಂದನ್ನು ರೂಪಿಸಿದರು:

***"ನ ಭಿಕ್ಖವೆ, ಅನನುಞ್ಞತೊ ಮಾತಾಪಿತು ಹಿ ಪುತ್ತೋ***
***ಪಬ್ಬಾಜ್ಜೇತಬ್ಬೋ, ಯೊ ಪಬ್ಬಾಜ್ಜೇಯ್ಯ ಆಪತ್ತಿ ದುಕ್ಕಟಸ್ಸ."***

"ಭಿಕ್ಖುಗಳೇ, ಎಳೆಯ ಬಾಲಕನೊಬ್ಬನಿಗೆ ಅವನ ತಂದೆ-ತಾಯಿಗಳ ಅನುಮತಿಯಿಲ್ಲದೆ ದೀಕ್ಷೆ ಕೊಡಬಾರದು. ಯಾರು ಹಾಗೆ ದೀಕ್ಷೆಯನ್ನು ಕೊಡುತ್ತಾರೋ ಅವರು ತಪ್ಪು ಕೆಲಸ ಮಾಡಿದ ಅಪರಾಧವನ್ನೆಸಗುತ್ತಾರೆ."

## ರಾಜ ಶುದ್ಧೋಧನನು ಅನಾಗಾಮಿಯಾಗುವುದು

ಒಮ್ಮೆ ರಾಜನು ಬುದ್ಧರನ್ನು ಮತ್ತು ಅವರ ಇಪ್ಪತ್ತು ಸಾವಿರ ಅರಹತ ಶಿಷ್ಯರನ್ನು ಮುಂಜಾನೆಯ ಉಪಹಾರ ಮತ್ತು ಪೂರ್ವಾನ್ನದ ಭಿಕ್ಷೆಗಾಗಿ ಆಹ್ವಾನಿಸಿದನು. ಬುದ್ಧರು ಮತ್ತು ಅರಹತ ಶಿಷ್ಯರು ಮುಂಜಾನೆಯ ಭಿಕ್ಷೆಗಾಗಿ ಅರಮನೆಗೆ ತೆರಳಿದರು. ಮುಂಜಾನೆಯ ಉಪಾಹಾರವಾದ ಮೇಲೆ ಬುದ್ಧರು ಆರೋಗ್ಯವನ್ನು ಕಾಪಾಡುವ ಗಂಜಿ ಇತ್ಯಾದಿ ದಾನಗಳ ಪುಣ್ಯದ ಬಗ್ಗೆ ಹೇಳಿದರು.

ರಾಜನು ಪೂರ್ವಾಹ್ನದ ಭಿಕ್ಷೆಯನ್ನು ನೀಡುವ ಮುನ್ನ 'ದೇವ'ನೊಬ್ಬನೊಂದಿಗೆ ಆದ ಅನುಭವವನ್ನು ಹೇಳಿದನು: "ಭಗವಾನರು ಆರು ವರ್ಷಗಳ ಕಾಲ ಅಂದರೆ ಜ್ಞಾನೋದಯವಾಗುವುದಕ್ಕಿಂತ ಮುನ್ನ ಕಠಿಣ ತಪಶ್ಚರ್ಯವನ್ನು ಅನುಸರಿಸುತ್ತಿದ್ದ ಸಂದರ್ಭದಲ್ಲಿ ಆಕಾಶದಲ್ಲಿ ತಿರುಗುತ್ತಿದ್ದ ಒಬ್ಬ ದೇವತೆಯು ಹೇಳಿದ: 'ನಿನ್ನ ಮಗ ರಾಜಕುಮಾರ ಸಿದ್ಧಾರ್ಥನು ಕಠಿಣ ತಪಶ್ಚರ್ಯೆಯಿಂದಾಗಿ ಸತ್ತುಹೋದನು." ಎಂದು.

ಆಗ ಬುದ್ಧರು ರಾಜನಿಗೆ ಕೇಳಿದರು: "ನೀವು ಅವನನ್ನು ನಂಬಿದಿರೇ?" ರಾಜನು ನುಡಿದನು: "ಇಲ್ಲ ನಾನು ನಂಬಲಿಲ್ಲ, ಕೂಡಲೇ ನಾನು ಆ ದೇವತೆಯ ಮಾತನ್ನು ಅಲ್ಲಗಳೆದು 'ನನ್ನ ಮಗನು ಬೋಧಿಮರದಡಿಯಲ್ಲಿ ಸಬ್ಬಞ್ಞುತ (ಸರ್ವಜ್ಞ)ನಾಗದೆ ಸಾಯಲು ಸಾಧ್ಯವೇ ಇಲ್ಲ" ಎಂದು ಹೇಳಿದೆ.

ಆಗ ಬುದ್ಧರು ಹೇಳಿದರು: "ಮಹಾರಾಜರೆ, ಇದೊಂದೇಸಾರಿ ನೀವು ಅಂತಹ ವರದಿಯನ್ನು ತಿರಸ್ಕರಿಸಲಿಲ್ಲ, ಹಿಂದಿನ ಜನ್ಮದಲ್ಲಿಯೂ ನೀವು ಒಂದು ನಗಣ್ಯದ ಭೂಭಾಗದ ಮುಖ್ಯಸ್ಥರಾಗಿದ್ದಾಗಲೂ ಒಬ್ಬ ದಿಸಾಪಾಮೋಕ್ಖನು (ಪ್ರಸಿದ್ಧ ಗುರು) ನಿನ್ನ ಕಿರಿಯ ಮಗ ಧಮ್ಮಪಾಲನು ಸತ್ತುಹೋದನೆಂದಾಗಲೂ ಅದನ್ನು ನಂಬಲಿಲ್ಲ.

ಸತ್ತನೆಂದು ಮೇಕೆಯ ಮೂಳೆಗಳನ್ನು ಅವನು ತೋರಿಸಿದ್ದ. ಆಗಲೂ ನೀವು 'ನಮ್ಮ ಧಮ್ಮಪಾಲ ಕುಟುಂಬದಲ್ಲಿ ಎಂದೂ ಎಳವೆಯಲ್ಲಿ ಯಾರೂ ಸತ್ತಿಲ್ಲ' ಎಂದು ಹೇಳಿ ಅವನ ಮಾತನ್ನು ನಂಬಲಿಲ್ಲ. ಈಗಲೂ ವೃದ್ಧಾಪ್ಯದಲ್ಲಿರುವ ನೀವು ದೇವಲೋಕದ ವಾಣಿಯನ್ನೂ ನಂಬುವುದಿಲ್ಲ."

ಆನಂತರದಲ್ಲಿ ರಾಜನ ವಿನಂತಿಯ ಮೇರೆಗೆ ಬುದ್ಧರು ರಾಜನು ಈ ಹಿಂದೆ ಮಹಾಧಮ್ಮಪಾಲನಾಗಿದ್ದ ಕಥೆಯನ್ನು ಹೇಳಿ ಮಹಾಧಮ್ಮಪಾಲ ಜಾತಕ (447)ದ ಮೇಲೆ ಧಮ್ಮೋಪದೇಶವನ್ನು ಮಾಡಿದರು. (Buddha & his Dhamma Vol-II ಪುಟ 180 ನೋಡಿರಿ)

## ಸಾವಿರ ರಾಜಕುಮಾರರು ಭಿಕ್ಷುಗಳಾಗುವುದು

ಬುದ್ಧರು ತಮ್ಮ ತಂದೆ ರಾಜ ಶುದ್ಧೋಧನರನ್ನು ಅನಾಗಾಮಿ ಹಂತಕ್ಕೆ ಬರುವಂತೆ ಮಾಡಿದಮೇಲೆ ಕಪಿಲವಸ್ತುವನ್ನು ತಮ್ಮ ಧಮ್ಮಕ್ಕೆ ಸೇರಿದ ರಾಜಸಂಬಂಧಿಗಳನ್ನು ಮತ್ತು ಅರಹತರೊಂದಿಗೆ ನಿರ್ಗಮಿಸಿ ರಾಜಗಹದತ್ತ ನಡೆದರು. ಮಾರ್ಗ ಮಧ್ಯೆ ಮಲ್ಲರ ಕ್ಷಾತ್ರ ವಂಶಕ್ಕೆ ಸೇರಿದ ಅನೂಪಿಯ ಆಂಬವನದಲ್ಲಿ ತಂಗಿದರು.

ಬುದ್ಧರು ಮತ್ತು ಅರಹತರು ರಾಜಧಾನಿಯಿಂದ ನಿರ್ಗಮಿಸಿದ ಮೇಲೆ ರಾಜ ಶುದ್ಧೋಧನನು ತನ್ನ ಶಾಕ್ಯಕುಲದ ಶಾಸನದ ಸದಸ್ಯರನ್ನು ಕರೆಯಿಸಿ ಹೀಗೆ ಹೇಳಿದನು: "ಶಾಕ್ಯಕುಲದ ರಾಜವಂಶಸ್ಥರೆ, ರಾಜಕುಮಾರ ಸಿದ್ಧಾರ್ಥ ಗೌತಮನು ಚಕ್ರವರ್ತಿ ಮಹಾರಾಜನಾಗುತ್ತಿದ್ದ, ಆದರೆ ದೇವ-ಮಾನವರ ಮಹಾ ಗುರುವಾಗಲು ಧಮ್ಮರಾಜನಾಗ ಬಯಸಿದ. ಆದ್ದರಿಂದ ಜೀವಿಗಳನ್ನು ಸಂಸಾರ ಬಂಧನದಿಂದ ಮುಕ್ತಗೊಳಿಸಲು ಸಾಧ್ಯವಾಗಿದೆ."

"ನನ್ನ ಎರಡನೆಯ ಮಗ ರಾಜಕುಮಾರ ನಂದ ಮತ್ತು ಮೊಮ್ಮಗ ರಾಜಕುಮಾರ ರಾಹುಲ ಇವರಿಬ್ಬರೂ ಶಾಕ್ಯ ಕ್ಷತ್ರಿಯ ವಂಶದ ಮುಖ್ಯಸ್ಥರಾಗುವವರು. ಆದರೆ ಇವರು ಭಗವಾನರ ಭಿಕ್ಖು ಸಂಘವನ್ನು ಸೇರಿದ್ದಾರೆ. ನೀವೆಲ್ಲ ರಾಜಮನೆತನದ ಶಾಕ್ಯ ಕುಲದ ಆರ್ಯರು. ನಮಗೆ ಈ ಭಗವಾನರಿದ್ದಾರೆ, ಅವರ ಧಮ್ಮವಿದೆ ಮತ್ತು ಸಂಘವಿದೆ. ಇವರೆಲ್ಲರೂ ನಮ್ಮ ವಂಶದಿಂದಲೇ ಆದವರು. ಆದ್ದರಿಂದ ಬುದ್ಧರ ಸೇವೆಗೆ ರಾಜಮನೆತನದ ರಕ್ತವೇ ಹರಿಯಲಿ. ಆದ್ದರಿಂದ ನಾನು ನಿಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ ಪ್ರತಿ ರಾಜಕುಲದ ಶಾಕ್ಯ ಕುಟುಂಬದವರೊಬ್ಬರು ಒಬ್ಬ ಕುಮಾರನನ್ನು ದಾನ ಮಾಡಿದಲ್ಲಿ ಭಗವಾನರೇ ಅವರಿಗೆ ಭಿಕ್ಖು ದೀಕ್ಷೆಯನ್ನು ಕೊಡುತ್ತಾರೆ."

"ರಾಜ್ಯವಂಶಸ್ಥ ಶಾಕ್ಯಕುಲದ ಹಿರಿಯರು ತಮ್ಮ ಒಂದು ಸಾವಿರ ಕುಟುಂಬಗಳಿಂದ ಒಬ್ಬೊಬ್ಬ ರಾಜಕುಮಾರನನ್ನು ದಾನ ಮಾಡಲು ಸಮ್ಮತಿಸಿದರು. ಆಗ ರಾಜನು ತನ್ನ ಒಂದು ಸಾವಿರ ರಾಜಕುಮಾರರು ಮತ್ತು ಅವರ ಕುಟುಂಬದ ಬೃಹತ್ ಸಮೂಹದೊಡನೆ



ಅನೂಪಿಯ ಆಂಬವನಕ್ಕೆ ತೆರಳಿದರು. ಅಲ್ಲಿ ಮರಗಳ ಕೆಳಗೆ ವೈಭವದ ಉಪಸಂಪದವನ್ನು ಬುದ್ಧರಿಂದಲೇ ಪಡೆದರು.

## ಆರು ರಾಜಕುಮಾರರು ಮತ್ತು ನಾಪಿತ ಉಪಾಲಿ

ಒಂದುಸಾವಿರ ಶಾಕ್ಯ ರಾಜಕುಮಾರರು ಮಹಾ ಶಾಕ್ಯ ಗುರುವಾದ ಬುದ್ಧನನ್ನು ಅನುಸರಿಸಲು ಪವಿತ್ರ ಸಂಘವನ್ನು ಸೇರಿದರೂ ರಾಜವಂಶಕ್ಕೆ ಹತ್ತಿರವಾದ ಆರು ಪ್ರಮುಖ ರಾಜಕುಮಾರರು ಮಾತ್ರ ಸೇರಲಿಲ್ಲ. ಆದ್ದರಿಂದ ಶಾಕ್ಯ ಕುಲೀನರು ಈ ಆರುಜನ ಕುಟುಂಬದ ರಕ್ತಕ್ಕೆ ಸೇರದವರಂತೆ ಇರುವವರು ಎಂದು ಜರೆದರು. ವೃದ್ಧ ರಾಜ ಶುದ್ಧೋಧನನ ನಂತರ ರಾಜ ಸಿಂಹಾಸನವನ್ನೇರುವ ರಾಜಕುಮಾರ ಮಹಾನಾಮನು ಈ ಆರು ಜನ ರಾಜಕುಮಾರರಿಗೆ ಕುಲೀನರ ಸಿಟ್ಟನ್ನು ತಿಳಿಸಿದನು.

ಈ ಆರುಜನ ಯಾರೆಂದರೆ: 1. ರಾಜಕುಮಾರ ಭದ್ದಿಯ 2. ರಾಜಕುಮಾರ ಅನುರುದ್ಧ 3. ರಾಜಕುಮಾರ ಆನಂದ 4. ರಾಜಕುಮಾರ ಭಗು 5. ರಾಜಕುಮಾರ ಕಿಂಬಿಲ, 6. ರಾಜಕುಮಾರ ದೇವದತ್ತ. ಈ ಆರುಜನ ತಮ್ಮತಮ್ಮಲ್ಲೇ ಪವಿತ್ರ ಬುದ್ಧ ಶಾಸನದ ಆಗುಹೋಗುಗಳ ಬಗ್ಗೆ ಚರ್ಚೆ ಮಾಡಿಕೊಂಡರು. ರಾಜಕುಮಾರರು ಭೋಗಗಳಲ್ಲೇ ಆಸಕ್ತರಾಗಿದ್ದು, ಸಾಂಸಾರಿಕ ದುಃಖ ಆಗುಹೋಗುಗಳ ಬಗ್ಗೆ ತಿಳಿಯದವರಾಗಿದ್ದರು. ಇವರಿಗೆ ಸಾಂಸಾರಿಕ ಬದುಕಿನ ವಾಸ್ತವ ಸಂಗತಿಗಳನ್ನು ಮತ್ತು ಭಿಕ್ಖು ಸಂಘದ ಜಂಜಾಟರಹಿತ ಪವಿತ್ರ ಜೀವನದ ಬಗ್ಗೆ ತಿಳುವಳಿಕೆ ನೀಡಿದಾಗ ಅವರು ಸಂಘವನ್ನು ಸೇರಲು ತೀರ್ಮಾನಿಸಿದರು.

ಈ ಚಿಂತನೆಯಿಂದಲೇ ಇವರು ಪಕ್ಕದ ರಾಜ್ಯವಾದ ಮಲ್ಲರ ಆಳ್ವಿಕೆಯ ಪ್ರಾಂತ್ಯದಲ್ಲಿರುವ ಅನೂಪಿಯ ಆಂಬವನದತ್ತ ನಾಪಿತ ಉಪಾಲಿಯ ಸಂಗಡ ತೆರಳಿದರು. ಒಮ್ಮೆ ತಮ್ಮ ರಾಜ್ಯದ ಗಡಿಯನ್ನು ದಾಟಿದ ತಕ್ಷಣ ಮೈಮೇಲಿನ ಆಭರಣಗಳನ್ನು ತೆಗೆದು ತಮ್ಮ ಶಲ್ಯದಲ್ಲಿ ಹಾಕಿ ಮುಚ್ಚಿ ಉಪಾಲಿಗೆ ಉಡುಗೊರೆಯಾಗಿ ಕೊಟ್ಟು, "ಪ್ರಿಯ ಉಪಾಲಿ, ನೀನಿನ್ನು ಹಿಂತಿರುಗು, ಈ ಉಡುಗೊರೆಯಿಂದ ನಿನ್ನ ಬದುಕಿನ ಕೊನೆಯವರೆಗೂ ಜೀವಿಸಬಹುದು" ಎಂದರು. ಉಪಾಲಿಗೆ ದುಃಖ ಉಮ್ಮಳಿಸಿ ತನ್ನ ಯಜಮಾನರುಗಳ ಕಾಲಿಗೆ ಬಿದ್ದು ಅತ್ತನು. ಅವರ ಆಜ್ಞೆಯನ್ನು ತಿರಸ್ಕರಿಸಲಾಗದೆ ಉಡುಗೊರೆಯ ಗಂಟನ್ನು ಹೊತ್ತು ಕಪಿಲವಸ್ತುವಿನ ದಾರಿ ಹಿಡಿದನು.

ಸ್ವಲ್ಪದಾರಿ ಸವೆಸಿದ ಉಪಾಲಿ ನಿಂತು ಹೀಗೆಂದು ಯೋಚಿಸಿದನು: "ಶಾಕ್ಯ ರಾಜವಂಶದವರು ನಾನು ಒಬ್ಬನೇ ಆಭರಣದ ಗಂಟನ್ನು ಹೊತ್ತು ಹಿಂದಿರುಗುವುದನ್ನು ಕಂಡರೆ 'ಇವನೆಲ್ಲೋ ಆಭರಣಗಳ ಆಸೆಗಾಗಿ ಇವರನ್ನೆಲ್ಲಾ ಸಾಯಿಸಿ ಬಂದಿದ್ದಾನೆ' ಎಂದು ರಾಜ ವಂಶದವರು ಕುಪಿತರಾಗಿ ನನ್ನನ್ನು ಕೊಲ್ಲಿಸಲೂ ಬಹುದು'. ಅವನು ರಾಜಕುಮಾರರ ಔದಾರ್ಯವನ್ನು ಮತ್ತು ವಿಶಾಲ ಹೃದಯವನ್ನು ಮನನ ಮಾಡಿಕೊಂಡು, 'ನನ್ನ ಯಜಮಾನರುಗಳಾದ ಈ ರಾಜಕುಮಾರರು ತಮ್ಮ ರಾಜವೈಭವ

ಅನುಕೂಲಗಳೆಲ್ಲವನ್ನು ಬಾಯೊಳಗಿನ ಎಂಜಲನ್ನು ಉಗುಳುವಂತೆ ತೊರೆಯುವುದಾದರೆ ಹೀನಸ್ಥಿತಿಯಲ್ಲಿರುವ ನಾನಾದರೂ ಯಾಕೆ ಹಾಗೆ ಮಾಡಬಾರದು?" ಎಂದು ಯೋಚಿಸಿದನು. ಈ ಮಾನಸಿಕ ಸ್ಥಿತಿಯಿಂದ ಅವನು ಆಭರಣಗಳೆಲ್ಲವನ್ನೂ ಒಂದೊಂದಾಗಿ ತೆಗೆದು ಮರದ ಕೊಂಬೆಗಳಿಗೆ ನೇತುಹಾಕಿ "ನಾನು ಈ ಅಮೂಲ್ಯವಾದ ಒಡವೆಗಳನ್ನು ಕೊಡುತ್ತಿದ್ದೇನೆ, ಯಾರಾದರೂ ಬಂದು ತೆಗೆದುಕೊಳ್ಳಬಹುದು" ಎಂದು ಏರು ಧನಿಯಲ್ಲಿ ಕೂಗಿದನು. ಆನಂತರ ಅವನು ರಾಜಕುಮಾರರ ಬಳಿ ವಾಪಸಾದನು. ರಾಜಕುಮಾರರು "ಯಾಕೆ ಹೀಗೆ ನೀನು ಹಿಂದಿರುಗಿದೆ, ನಿನಗೆ ಏನಾಯಿತು?" ಎಂದು ಕೇಳಲು ಅವನು "ವಿನಯಪೂರಿತವಾದ ಈ ದಾನವನ್ನು ಎಲ್ಲ ಜೀವಿಗಳು ಹಂಚಿಕೊಳ್ಳಲಿ" ಎಂದು ಹೇಳಿ ಏನೆಲ್ಲಾ ನಡೆಯಿತೋ ಆ ವರದಿಯನ್ನೆಲ್ಲಾ ಮಂಡಿಸಿದನು. ಇವನ ಮಾತುಗಳನ್ನು ಕೇಳಿದ ರಾಜಕುಮಾರರು ಸ್ತಂಭೀಭೂತರಾಗಿ ಉಪಾಲಿಯನ್ನು ಅನೂಪಿಯ ಆಂಬವನಕ್ಕೆ ಕರೆದೊಯ್ದರು.

ಎಲ್ಲರೂ ಅನೂಪಿಯ ಆಂಬವನಕ್ಕೆ ಬಂದು ಭಗವಾನರ ಮುಂದೆ ಮಂಡಿಯೂರಿ ನಮಸ್ಕರಿಸಿ ಹೀಗೆ ಹೇಳಿದರು: "ಪೂಜ್ಯ ಭಗವಾನರೆ, ಶಾಕ್ಯ ರಾಜವಂಶದಲ್ಲಿ ಹುಟ್ಟಿದ ನಾವು ದುರಹಂಕಾರಿಗಳು, ಗರ್ವಿಷ್ಟರೂ ಆಗಿರಬಹುದು. ಈ ಮನುಷ್ಯ ಉಪಾಲಿಯು ನಮಗೆ ಬಹಳ ವರ್ಷಗಳಿಂದಲೂ ಸೇವಕನಾಗಿದ್ದ. ನಾವು ಪ್ರಾರ್ಥಿಸುವುದೇನೆಂದರೆ ನಮಗೆ ದೀಕ್ಷೆ ಕೊಡುವ ಮೊದಲು ಇವನಿಗೆ ಉಪಸಂಪದನವನ್ನು ಕೊಡಿ, ಆಗ ನಾವು ಅವನಿಗೆ ನಮಸ್ಕಾರ, ಗೌರವಗಳನ್ನು ಸಲ್ಲಿಸಬಹುದು. ಹೀಗೆ ಮಾಡುವುದರಿಂದ ನಮ್ಮ ಶಾಕ್ಯ ಬಿಗುಮಾನ ಹತೋಟಿಗೆ ಬಂದು ನಾಶವಾಗುತ್ತದೆ". ಭಗವಾನ್ ಬುದ್ಧರು ಹಾಗೆಯೇ ಮೊದಲು ಉಪಾಲಿಗೆ ನಂತರ ಆರು ರಾಜಕುಮಾರರಿಗೆ ದೀಕ್ಷೆಯನ್ನು ನೀಡಿದರು.

ಅನೂಪಿಯ ಆಂಬವನದಲ್ಲಿ ಸ್ವಲ್ಪಕಾಲವನ್ನು ಕಳೆದು ಬುದ್ಧರು ತಮ್ಮ ಬಹುಸಂಖ್ಯೆಯ ಭಿಕ್ಖು ಅನುಯಾಯಿಗಳೊಂದಿಗೆ ರಾಜಗಹದತ್ತ ಪಯಾಣ ಬೆಳೆಸಿದರು. ದಾರಿಯಲ್ಲಿ ಊರಿಂದ ಊರಿಗೆ ಹೋಗುತ್ತಿದ್ದಂತೆ ಚಾರಿಕಾದಲ್ಲಿ ಬುದ್ಧರು ಅಪಾರ ಜನಸ್ತೋಮಕ್ಕೆ ಆರ್ಯ ಧಮ್ಮವನ್ನು ಬೋಧಿಸಿದರು. ಬುದ್ಧರ ಶಿಷ್ಯರೂ ಕೂಡ ತಮ್ಮ ಭಿಕ್ಷಾಟನೆಯ ಬಳಿಕ ಜನಸಮೂಹಗಳಿಗೆ ಧಮ್ಮವನ್ನು ಬೋಧಿಸುತ್ತಿದ್ದರು.

ಮೊದಲಿನಿಂದಲೂ ಬುದ್ಧರಾಗಲಿ ಅವರ ಶಿಷ್ಯರಾಗಲೀ ಆಯಾ ಸಂದರ್ಭಗಳಿಗೆ ಮತ್ತು ಜನರ ಮಾನಸಿಕ ಸ್ಥಿತಿಗೆ ತಕ್ಕಂತೆ ಧಮ್ಮ ಬೋಧನೆ ಮಾಡುತ್ತಿದ್ದರು. ಥೇರವಾದ ಬೌದ್ಧ ಭಿಕ್ಖುಗಳಲ್ಲಿ ಈಗಲೂ ಈ ಪರಿಪಾಟವು ಹರಿದುಬಂದಿದೆ. ಉಪಾಸಕರು ಶರೀರದ ಉಳಿವಿಗಾಗಿ ಆಹಾರ ಮತ್ತು ಇತರೆ ಅವಶ್ಯಕತೆಗಳನ್ನು ಪೂರೈಸಿದರೆ, ಬೌದ್ಧ ಸಂನ್ಯಾಸಿಗಳು ಮಾನಸಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಗಾಗಿ ಧಮ್ಮವನ್ನು ಬೋಧಿಸುತ್ತಿದ್ದರು. ಭಿಕ್ಷಾಟನೆಯ ನಂತರ ಧಮ್ಮವನ್ನು ಬೋಧಿಸುವುದು ತುಂಬಾ ಶಿಸ್ತಿನಿಂದ ಮತ್ತು ಗೌರವದಿಂದ ಇಂದಿನ ದಿನದವರೆಗೂ ನಡೆದುಕೊಂಡು ಬಂದಿದೆ.



ಜನಗಳಿಗೆ ಉಪಯೋಗವಾಗಲಿ ಎನ್ನುವ ದೃಷ್ಟಿಯಿಂದ ರಾಜಗಹಕ್ಕೆ ವಾಪಸಾಗುವ ಮಾರ್ಗವು ಬೇರೆಯೇ ಆಗಿತ್ತು. ಭಗವಾನರು ತಮ್ಮ ಶಿಷ್ಯರೊಂದಿಗೆ ಎರಡನೇ ವರ್ಷಾವಾಸದ ಸಲುವಾಗಿ ಆಷಾಢ ಹುಣ್ಣಿಮೆಗೆ ಸರಿಯಾಗಿ ರಾಜಗಹವನ್ನು ಸೇರಿದರು.

ವೇಳುವನದಲ್ಲಿ ಆರು ರಾಜಕುಮಾರರ ದಿವ್ಯ ಸಾಧನೆಗಳು ಅನೂಪಿಯ ಆಂಬವನದಲ್ಲಿ ಉಪಸಂಪದವನ್ನು ಸ್ವೀಕರಿಸಿದರು. ಈ ಆರುಜನ ರಾಜಕುಮಾರರು ಎರಡನೇ ವರ್ಷಾವಾಸದ ಅವಧಿಯಲ್ಲಿ ಆಧ್ಯಾತ್ಮಿಕ ವೃದ್ಧಿಗಾಗಿ ಕಠಿಣ ಸಾಧನೆಯನ್ನು ಮಾಡಿದರು. ಆಯುಷ್ಮಂತ ಭದ್ದಿಯನು ಅರಹತನಾದನು. ಆಯುಷ್ಮಂತ ಅನುರುದ್ಧನು ದಿಬ್ಬಚಕ್ಕು (ದಿವ್ಯಚಕ್ಷು)ವನ್ನು ಪಡೆದನು. ಆಯುಷ್ಮಂತ ಆನಂದನು ಅರಹತ ಥೇರ ಪುಣ್ಣಮಂತಾನಿ ಪುತ್ತನ ಧಮ್ಮೋಪದೇಶವನ್ನು ಕೇಳಿ ಸೋತಾಪನ್ನನಾದರು. ಆಯುಷ್ಮಂತರಾದ ಭಗು ಮತ್ತು ಕಿಂಬಿಲರೂ ಕೂಡ ಅರಹತರಾದರು. ಆಯುಷ್ಮಂತ ದೇವದತ್ತನು ಪ್ರಾಪಂಚಿಕವಾದ ಅಭೌತ ಶಕ್ತಿಗಳನ್ನು ಪಡೆದನು. ಆದರೆ ಮುಂದೆ ಅವನ್ನು ದುರುಪಯೋಗ ಮಾಡಿಕೊಂಡು ಸಂಕಟಕ್ಕೆ ಒಳಗಾದನು.

– ০0০ – ০0০ – ০0০ –

# ಅಧ್ಯಾಯ–4

# ಪರಿತ್ತ ಸುತ್ತಗಳ ಕಥೆಗಳು

## ಮಹಾಮಂಗಳ ಸುತ್ತಕ್ಕೆ ಸಂಬಂಧಿಸಿದ ಕಥೆ

ಮಹಾಮಂಗಳ ಸುತ್ತವು ಒಂದು ಪರಿತ್ರಾಣ (ರಕ್ಷಣೆಯ) ಧಮ್ಮೋಪದೇಶ. ಇದು ಪರಿತ್ರಾಣವೇಕೆಂದರೆ: 1. ಎಲ್ಲ ಅಕುಶಲ ಮತ್ತು ದುಷ್ಟ ಸಂಗತಿಗಳಿಂದ ರಕ್ಷಿಸುತ್ತದೆ; 2. ಆಧ್ಯಾತ್ಮಿಕ ಸಾಧನೆಯಲ್ಲಿರುವವರನ್ನು ರಕ್ಷಿಸುತ್ತದೆ; 3. ಒಳ್ಳೆಯ ಭವಿಷ್ಯವನ್ನು ತರುತ್ತದೆ. ಈ ಜನಾನುರಾಗಿ ಸುತ್ತವನ್ನು ಭಿಕ್ಖುಗಳು ಮತ್ತು ಉಪಾಸಕರು ತಮ್ಮ ಉತ್ತಮ ಬದುಕಿಗಾಗಿ ಪಠಿಸುತ್ತಾರೆ ಮತ್ತು ಮನನ ಮಾಡುತ್ತಾರೆ.

ಇದರ ಹಿನ್ನೆಲೆ ಕಥೆಯು ತುಂಬ ಮನನೀಯವಾಗಿದೆ. ಒಬ್ಬ ದೇವತೆಯು ಇಡೀ ಜೀವನವನ್ನೆಲ್ಲ ಬೆಳಗಿ ಬುದ್ಧರನ್ನು ಕಂಡು, "ಪೂಜ್ಯ ಭಗವಾನರೆ, ಮನುಷ್ಯರೂ ಮತ್ತು ದಿವ್ಯಜೀವಿಗಳೂ ಯಾವುವು ಬದುಕಿಗೆ ಮಂಗಳವಾದುವುಗಳು ಎಂದು ಬಹುಕಾಲದಿಂದ ಚರ್ಚಿಸುತ್ತಿದ್ದಾರೆ. 'ಮಂಗಳ' ಎಂದರೆ ಶುಭ ಶಕುನ, ಅದೃಷ್ಟ ಇತ್ಯಾದಿ ಅರ್ಥಗಳು ಸೇರುತ್ತವೆ.

ಆ ಚರ್ಚೆ 'ಶುಭಶಕುನ ಅಂದರೆ ಏನು?' ಎಂಬುದರ ಬಗ್ಗೆ ಆಗಿತ್ತು. ಅದೇನು ಕಾಣುವಂತಹ ರೂಪವೇ, ಶಬ್ದವೇ ಅಥವಾ ಇಂದ್ರಿಯ ಸಂಬಂಧವಾದ ವಸ್ತುವೆ? ಕೆಲವರು ಶುಭಶಕುನವೆಂದರೆ ಅದು ಕಣ್ಣಿಗೆ ಕಾಣುವಂತಹದ್ದಾಗಿದೆ ಎಂದು ನಂಬಿದ್ದರು. ಉದಾಹರಣೆಗೆ: ಬೆಳಗಿನ ಹೊತ್ತಿನಲ್ಲಿ ಒಬ್ಬ ಗರ್ಭಿಣಿಯನ್ನೋ, ಮಗುವನ್ನೋ ಅಥವ ಒಂದು ನಿರ್ದಿಷ್ಟವಾದ ಪಕ್ಷಿಯನ್ನೋ, ಹಸುವನ್ನೋ ಇತ್ಯಾದಿಯನ್ನೋ ನೋಡಿದರೆ ಒಳ್ಳೆಯದಾಗುತ್ತದೆಂದು ನಂಬಿದ್ದರು. ಇದನ್ನು ಕೆಲವರು ತಿರಸ್ಕರಿಸಿ ನೋಡುವಂತಹುದಲ್ಲ, ಕೇಳುವಂತಹುದ್ದು ಎಂದರು. ಈ ರೀತಿ ಎಲ್ಲ ಮೂಢನಂಬಿಕೆಗಳು, ಭಯಗಳು ತುಂಬಿಕೊಂಡಿದ್ದವು.

ವಾಸ್ತವದಲ್ಲಿ ಯಾವುದು ಶುಭವನ್ನು ತರುವಂಥದ್ದು ಅಥವಾ ಮಂಗಳವನ್ನುಂಟು ಮಾಡುವಂಥದ್ದು, ಯಾವುದು ಮೂಢನಂಬಿಕೆ ಎಂಬುದನ್ನು ತೀರ್ಮಾನಿಸಲು ದೇವತೆಗಳಲ್ಲಿ ಬುದ್ಧಿವಂತನಾದವನೊಬ್ಬನು ಭೂತ, ಭವಿಷ್ಯತ್, ವರ್ತಮಾನಗಳೆಲ್ಲವನ್ನೂ ಅರಿತವರಾದ ಬುದ್ಧರನ್ನು ನೋಡಲು ಬಂದನು. ಆ ದೇವತೆಯು ಬುದ್ಧರನ್ನು ಬಂದು



ಕೇಳಲು, ಭಗವಾನ್ ಬುದ್ಧರು ಉತ್ತಮ ಬದುಕಿಗಾಗಿ ಮೂವತ್ತೆಂಟು ಗುಣಗಳನ್ನು ಗುರುತಿಸಿ ಹೇಳಿ, ಅವು ಇಲ್ಲಿಯೇ, ಈಗಲೇ ಮತ್ತು ಮುಂದಕ್ಕೂ ಮಂಗಳನ್ನುಂಟುಮಾಡಿ ನಿಬ್ಬಾಣದ ಮಾರ್ಗದೆಡೆ ಕೊಂಡೊಯ್ಯುತ್ತವೆಂದು ಹೇಳಿದರು.

## ರತನ ಸುತ್ತದ ಹಿಂದಿನ ಕಥೆ

ತ್ರಿರತ್ನಗಳ ಬಗೆಗಿನ ಈ ಪರಿತ್ತ ಸುತ್ತಕ್ಕೆ ಅದ್ಭುತವಾದ ಗೂಢ ಶಕ್ತಿ ಇದೆ. ಈ ಸುತ್ತವನ್ನು ದಶಬಲಗಳನ್ನು ಹೊಂದಿದ ಭಗವಾನರು ಕ್ಷಾಮಕ್ಕೆ ತುತ್ತಾದ ವಜ್ಜಿ ದೇಶದಲ್ಲಿ ಹೇಳಿದ್ದು. ಪ್ರಜಾಪ್ರಭುತ್ವವುಳ್ಳ, ಸುವ್ಯವಸ್ಥಿತ ಸರ್ಕಾರವನ್ನು ಹೊಂದಿದ ಎರಡು ಸಾವಿರದ ಆರುನೂರು ವರ್ಷಗಳ ಹಿಂದಿನ ಮುಂದುವರಿದ ವಜ್ಜಿಗಳ ನಾಗರಿಕ ಭಾರತದ ಬಗ್ಗೆ ನಾವು ಮಾತನಾಡುತ್ತಿರುವುದು. ಜನರು ರಾಜಕೀಯವಾಗಿ ಎಚ್ಚೆತ್ತವರು, ಸಾಂಸ್ಕೃತಿಕವಾಗಿ ಮುಂದುವರಿದವರು ಮತ್ತು ಹೊರ ರಾಜ್ಯಗಳೊಡನೆ ವಾಣಿಜ್ಯ ಸಂಪರ್ಕ ಹೊಂದಿದ್ದು, ಆರ್ಥಿಕವಾಗಿ ಸುಭದ್ರವಾಗಿದ್ದವರು. ವೈಶಾಲಿಯು ವಜ್ಜಿ ಪ್ರಭುತ್ವದ ರಾಜಧಾನಿ. ಬುದ್ಧನ ಕಾಲದಲ್ಲಿ ಜನನಿಬಿಡವಾಗಿ ಸಂಪದ್ಭರಿತವಾಗಿ ಎಲ್ಲ ನಾಗರಿಕ ಸೌಲಭ್ಯಗಳಿಂದ ಕೂಡಿದ ನಗರವಾಗಿತ್ತು. ಜನಗಳಲ್ಲಿ ಹೇರಳವಾದ ದವಸಧಾನ್ಯಗಳು, ವಸ್ತ್ರಗಳು ಮೂಲ ಅವಶ್ಯಕತೆಗಳು ಇದ್ದವು.

ಈ ರಾಜ್ಯವು ಕ್ಷತ್ರಿಯ ಕುಲದವರಿಂದ ಆಳಲ್ಪಡುತ್ತಿತ್ತು. ಈ ಕ್ಷತ್ರಿಯ ಕುಟುಂಬಗಳ ಮುಖ್ಯಸ್ಥರು ರಾಜ್ಯ ಶಾಸನ ಸಭೆಯ ಸದಸ್ಯರಾಗಿದ್ದರು. ಅದರಲ್ಲಿ ಏಳುಸಾವಿರದ ಏಳುನೂರು ಏಳು ಜನ ಸದಸ್ಯರಿದ್ದು ಅವರೆಲ್ಲರಿಗೂ ನೂರಾರು ಎಕರೆ ಜಮೀನು, ತೋಪುಗಳು, ದಾನ ಶಾಲೆಗಳು ಇದ್ದು ಅವೆಲ್ಲವೂ ಎಲ್ಲ ಕಾಲಕ್ಕೂ ಜನರ ಊಟ, ವಸತಿ, ಔಷಧಗಳಿಗಾಗಿ ತೆರೆದಿದ್ದವು. ಒಟ್ಟಿನಲ್ಲಿ ಹೇಳಬೇಕೆಂದರೆ ಇಲ್ಲಿನ ನಾಯಕರು ಜನಗಳ ಹಿತವನ್ನು ಕಾಪಾಡುವ ಮತ್ತು ತಮ್ಮ ಮಾತೃಭೂಮಿಯ ನಿಜವಾದ ಧರ್ಮದರ್ಶಿಗಳು.

ವಜ್ಜಿಯನ್ನು ಆಳುತ್ತಿದ್ದ ಲಿಚ್ಚವಿ ಕ್ಷತ್ರಿಯರು ಎಷ್ಟು ಪ್ರಭಾವಶಾಲಿಗಳೆಂದರೆ ತಮ್ಮ ರಾಜ್ಯದ ಎಲ್ಲೆಗಳನ್ನು ವಿಸ್ತರಿಸುವ ಹಂಬಲವಿರುವ ಪ್ರಬಲ ಮಗಧ ದೇಶದ ದೊರೆಗಳೂ ಕೂಡ ಈ ಪುಟ್ಟ ಪ್ರಭುತ್ವದ ಬಗ್ಗೆ ಎಚ್ಚರದಿಂದ ವರ್ತಿಸುತ್ತಿದ್ದರು. ಇವರ ಸಂಪತ್ತು ಮತ್ತು ಪ್ರಭುತ್ವ ಶಕ್ತಿಯ ಮೂಲವೆಂದರೆ ಇಲ್ಲಿನ ಚುನಾಯಿತ ರಾಜನ ಮತ್ತು ನಾಯಕರ ಸದ್ಗುಣಗಳು ಮತ್ತು ಔದಾರ್ಯ. ಲಿಚ್ಚವಿಗಳು ದಶಕಗಳ ಕಾಲ ಯಾವುದೇ ಕೊರತೆಯಿಂದಾಗಲಿ, ಪ್ರಕೃತಿ ವಿಕೋಪಗಳಿಂದಾಗಲಿ ಕೊರಗಲಿಲ್ಲ. ಆದರೆ ಈಗ ರಾಜ್ಯವು ಇದ್ದಕ್ಕಿದ್ದ ಹಾಗೆ ಆಪತ್ತಿಗೆ ತುತ್ತಾಯಿತು. ಮಳೆ ನಿಂತುಹೋಗಿ, ಕೆರೆಗಳು ಬತ್ತಿ, ತೆನೆಗಳು ಸೊರಗಿ ತೀವ್ರ ಕ್ಷಾಮ ಮುಸುಕಿತು. ಮೂರು ವರ್ಷಗಳ ಕಾಲ ಇದೇ ಪರಿಸ್ಥಿತಿಯಿಂದಾಗಿ ಜನ ಅನ್ನ ನೀರಿಲ್ಲದೆ ಇರುವ ಸ್ಥಿತಿ. ಇದಕ್ಕೆ ಹೊಂದಿಕೊಂಡಂತೆ ಸಾಂಕ್ರಾಮಿಕ ರೋಗ ನೆಲೆಚಾಚಿತು.

ಅಟ್ಠಕಥೆಯು ಈ ಮೂರು ವರ್ಷಗಳ ನಿರಂತರ ಕ್ಷಾಮ ಹೇಗೆ ಆರ್ಥಿಕ ಸ್ಥಿತಿಯನ್ನು ಹದಗೆಡಿಸಿತು, ಸಾವಿರಾರು ಜನ ಹೇಗೆ ಸತ್ತರು, ಜನರ ಮತ್ತು ಪ್ರಾಣಿಗಳ ಹೆಣಗಳು ನಗರ ಗ್ರಾಮಗಳಲ್ಲಿ ಎಲ್ಲೆಂದರಲ್ಲಿ ಬಿಸಾಡಲ್ಪಟ್ಟಿದ್ದವು ಎಂಬುದನ್ನು ವಿವರವಾಗಿ ಹೇಳುತ್ತವೆ. ಜನ ಭಯದ ಹಿಡಿತದಲ್ಲಿ ಬದುಕಿದ್ದರೆಂಬುದನ್ನು ತಿಳಿಸುತ್ತದೆ.

ರಾಜನು ಮತ್ತೆ ಮತ್ತೆ ಶಾಸನ ಸಭೆಯನ್ನು ಕರೆದು ಕಂಡು ಕೇಳರಿಯದ ಈ ಬರದ ಸ್ಥಿತಿಗೊಂದು ಉಪಾಯ ಕಂಡುಕೊಳ್ಳಬೇಕೆಂದು ಚರ್ಚಿಸಿದನು. ತನ್ನ ಸ್ಥಾನವನ್ನು ತೊರೆಯುವುದಾಗಿ ರಾಜ ಹೇಳಿದರೂ, ಸದಸ್ಯರು ರಾಜನಲ್ಲಿ ಯಾವ ದೋಷವನ್ನೂ ಕಾಣಲಾಗದೆಂದೂ, ಅವನೇ ಮುಂದುವರೆಯಬೇಕೆಂದು ವಿನಂತಿಸಿದರು ಮತ್ತು ಈ ಜಂಬೂದ್ವೀಪದಲ್ಲೇ (ಭರತ ಖಂಡದಲ್ಲಿ) ಯಾರು ಉತ್ತಮೋತ್ತಮ ಸಂತರೋ ಅವರನ್ನು ಈ ಪ್ರಾಂತ್ಯಕ್ಕೆ ಕರೆಯಿತಿ ತಮ್ಮ ತಪಃಶ್ಶಕ್ತಿಯಿಂದ ಇಲ್ಲಿನ ಆಪತ್ತನ್ನು ದೂರಮಾಡುವ ಬಗ್ಗೆ ಸಲಹೆಯನ್ನಿತ್ತರು.

ಸಲಹೆಯನ್ನನುಸರಿಸಿಯೇ ಆರು ಪ್ರಖ್ಯಾತ ಸಂತರನ್ನು ಕರೆಯಿಸಿ ಅವರನ್ನು ಸನ್ಮಾನಿಸಿದರು. ಆದರೆ ಜನರಿಗೆ ನಿರಾಶೆಯೇ ಆಯಿತು. ಯಾವ ಉಪಯೋಗವೂ ಆಗಲಿಲ್ಲ. ಇಂತಹ ಸಂಕಟಮಯ ಸಂದರ್ಭದಲ್ಲಿ ಆ ಸಭೆಯಲ್ಲಿದ್ದವರೊಬ್ಬರು ಹೀಗೆ ಹೇಳಿದರು: "ಈ ಜಗತ್ತಿನಲ್ಲಿ ಸಮ್ಮಾಸಂಬುದ್ಧರೊಬ್ಬರು ಅವತರಿಸಿದ್ದಾರೆ, ನಾವು ಅವರ ಆಶೀರ್ವಾದವನ್ನು ಪಡೆದಿಲ್ಲ. ಅವರು ನಮ್ಮ ಸಂಬಂಧಗಳು ಸರಿಯಿರದ ಪಕ್ಕದ ಮಗಧ ಪ್ರಾಂತ್ಯದಲ್ಲಿ ರಾಜಧಾನಿಯಲ್ಲಿಯೇ ಇರುವವರು. ಈಗಿನ ರಾಷ್ಟ್ರೀಯ ಆತಂಕದ ಸಂಧಿಗ್ಧ ಪರಿಸ್ಥಿತಿಯಲ್ಲಿ ಭಗವಾನ ಬುದ್ಧರ ಪರಮ ಶಿಷ್ಯನಾದ ಮಗಧದ ದೊರೆ ಬಿಂಬಿಸಾರನೊಡನೆ ಸಂಬಂಧ ಬೆಳೆಸಿ, ಬುದ್ಧರ ಆಶೀರ್ವಾದವನ್ನು ಪಡೆಯುವುದು ಸೂಕ್ತ" ಎಂದರು.

ಬೇರೆಯ ಸಂದರ್ಭಗಳಲ್ಲಾಗಿದ್ದರೆ ಇಂತಹ ಸೂಚನೆಯನ್ನು ಶಾಸನಸಭೆಯು ತಳ್ಳಿಹಾಕುತ್ತಿತ್ತು. ಆದರೆ ಈಗಿನದು ಸಂಕಟಮಯ ಸ್ಥಿತಿ. ಆದ್ದರಿಂದ ಬುದ್ಧರನ್ನು ಕರೆತರಲು ಇದು ಸೂಕ್ತ ಸಮಯವೆಂದು ಹಿರಿಯ ಮಂತ್ರಿಗಳನ್ನು ದೊರೆ ಬಿಂಬಿಸಾರನ ಆಸ್ಥಾನಕ್ಕೆ ಕಳಿಸಿತು. ಈ ಹಿರಿಯ ಮಂತ್ರಿಗಳು ಬುದ್ಧರನ್ನು ಕಳುಹಿಸುವಂತೆ ದೊರೆ ಬಿಂಬಿಸಾರನನ್ನು ವಿನಂತಿಸಿದರು. ಅವರು ವಿವರಿಸಿದ ಅವಸ್ಥೆಯನ್ನು ಕರುಣೆಯಿಂದ ಆಲಿಸಿ ತಾನು ಬುದ್ಧನ ವಿನಮ್ರ ಶಿಷ್ಯನೆಂದು ಬಿಂಬಿಸಾರನು ಹೇಳಿದನು. ಬುದ್ಧರು ಕರುಣಾಮಯಿಯು ಪರಮಶಕ್ತಿಯುಳ್ಳವರು ಮತ್ತು ಸರ್ವಜ್ಞ ಎಂದು ನಿವೇದಿಸಿದನು. ಆದ್ದರಿಂದ ಅವರೇ ನೇರವಾಗಿ ಬುದ್ಧರನ್ನು ಕಂಡು ತಮ್ಮ ಕೋರಿಕೆಯನ್ನು ಸಲ್ಲಿಸಬೇಕೆಂದು ಹೇಳಿದನು. ಅಂತೆಯೇ ಮಂತ್ರಿಗಳು ಬುದ್ಧರನ್ನು ಕಂಡು ತಮ್ಮ ದುಃಖವನ್ನು ತೋಡಿಕೊಳ್ಳಲು ಕರುಣಾಮಯಿ ಬುದ್ಧರು ತಾವು ಕೂಡಲೇ ಬರುವುದಾಗಿ ಹೇಳಿದರು.



ಬುದ್ಧರು ತಮ್ಮ ದಿವ್ಯಚಕ್ಷುವಿನಿಂದ ಮುಂದೆ ಏನಾಗಬಹುದೆಂದು ಹೀಗೆ ಮನಗಂಡರು: ತಾವು ರತನ ಸುತ್ತವನ್ನು ಬೋಧಿಸುತ್ತಾ ಅದು ಹೇಗೆ ಪರಿತ್ತ ಸುತ್ತವಾಗಿ ಕಲ್ಪಾಂತರಗಳವರೆಗೆ ಇರುವುದು; ಅಸಂಖ್ಯ ಲೋಕಗಳಲ್ಲಿ ಧ್ಯಾನಸ್ಥ ಸ್ಥಿತಿಯಿಂದ ಪಠಣವಾಗಿ ಮನನವಾಗಿ ಅದರ ಕಿರಣಗಳು ಹಬ್ಬುವುದನ್ನು ನೋಡಿದರು. ಮಗಧ ಮತ್ತು ವಜ್ಜಿ ದೇಶದ ರಾಜರುಗಳು ಭಗವಾನರನ್ನು ಮತ್ತು ಭಿಕ್ಖುಗಳನ್ನು ಗೌರವಿಸಲು ನಾಮುಂದು ತಾಮುಂದು ಎಂದು ಸ್ಪರ್ಧಿಸುವುದನ್ನು ನೋಡಿದರು. ಆಕಾಶದಿಂದ ಮಳೆಯು ಕುಂಭದ್ರೋಣವಾಗಿ ಸುರಿದು ಜನ ಉಲ್ಲಾಸಗೊಂಡುದು, ಭಗವಾನರನ್ನು ಅನುಸರಿಸಿದ ದಿವ್ಯಜೀವಿಗಳನ್ನು ಕಂಡು ದುಷ್ಟ ಶಕ್ತಿಗಳು ಮಾಯವಾದುದು; ರೋಗಿಗಳು ನಿರೋಗಿಯಾದುದು, ಅಂಧರು ದೃಷ್ಟಿ ಪಡೆದುದು, ಮೂಕರು ಮಾತನಾಡಿದುದು, ಕುಂಟರು ಎದ್ದುನಿಂತು ನಡೆಯಲು ಶುರು ಮಾಡಿದುದು, ಅಭಾಗ್ಯರು ಬೇಕಾದುದನ್ನು ಹೊಂದಿದುದು, ಮತಿಗೇಡಿಗಳು ಮತಿಯನ್ನು ಮರಳಿ ಪಡೆದುದು– ಹೀಗೆ ಮುಂತಾದ ಮಂಗಳಗಳು ಹೇಗೆ ಸಂಭವಿಸುತ್ತವೆ ಎಂಬುದನ್ನು ಕಂಡರು.

ರಾಜನಿಗೆ ಭಗವಾನರು ವೈಶಾಲಿಗೆ ಕೂಡಲೇ ಬರುತ್ತಿದ್ದಾರೆಂಬುದನ್ನು ತಿಳಿದು ರಾಜಗಹದಿಂದ ಭಗವಾನರನ್ನು ಸೂಕ್ತವಾಗಿ ಗೌರವಿಸಲು ಪಾಟಲಿಪುತ್ತ (ಪಟ್ನ)ದ ವರೆಗಿನ ಐವತ್ತು ಮೈಲಿಗಳ ಉದ್ದಕ್ಕೂ ಇರುವ ಜನರಿಗೆ ಸೂಚನೆಗಳನ್ನು ನೀಡಿದನು. ರಾಜನು ಗಂಗಾತಟದವರೆಗೂ ಬುದ್ಧರ ಹಿಂದೆಯೇ ಇರುವುದಾಗಿ ಮತ್ತು ಮರಳುವವರೆಗೂ ಅವರ ಜೊತೆಗೆ ಇರುವುದಾಗಿ ಹೇಳಿದನು.

ಭದಂತ ಆಚಾರ್ಯ ಬುದ್ಧಘೋಷರು ಬುದ್ಧರನ್ನು ಸ್ವಾಗತಿಸಿದ ಬಗ್ಗೆ ಒಂದು ಸುಂದರವಾದ ವರ್ಣನೆಯನ್ನೇ ಮಾಡಿದ್ದಾರೆ: ಪ್ರತಿ ಹತ್ತು ಮೈಲಿಗೆ ಸಾವಿರಾರು ಭಿಕ್ಷುಗಳನ್ನು ಆದರದಿಂದ ನೋಡಿಕೊಳ್ಳಲು ವ್ಯವಸ್ಥಿತವಾದ ವೈಭವದ ಶಿಬಿರಗಳನ್ನು ನಿರ್ಮಿಸಲಾಗಿತ್ತು. ದಾರಿಯುದ್ದಕ್ಕೂ ಹೂಚೆಲ್ಲಿ ಸಿಂಗರಿಸಿದ್ದರು. ಬುದ್ಧರು ಅಕ್ಷರಶಃ ಮೊಳಕಾಲೆತ್ತರದಷ್ಟು ಹಾಕಿದ್ದ ಹೂವುಗಳ ರಾಶಿಯನ್ನು ಹಾದು ಹೋದರೆಂಬ ವರ್ಣನೆ ಇದೆ. ರಾಜನು ಬುದ್ಧರಿಗೆ ಎರಡು ಶ್ರೇತ ಛತ್ರಿಗಳನ್ನು ಐನೂರು ಅರಹಂತ ಭಿಕ್ಖುಗಳಿಗೆ ಪ್ರತಿಯೊಬ್ಬರ ತಲೆಯ ಮೇಲೂ ಒಂದೊಂದು ಶ್ವೇತಛತ್ರಿಯನ್ನು ಹಿಡಿಯಲು ಆದೇಶಿಸಿದನು. ಐದು ದಿನಗಳಲ್ಲಿ ಬುದ್ಧರ ಪರಿವಾರ ಗಂಗಾನದಿಯನ್ನು ಮುಟ್ಟಲು ಅಲ್ಲಿ ರಾಜನು ಸಿಂಗಾರಗೊಂಡ ವಿಶಾಲ ದೋಣಿಯಲ್ಲಿ ಬುದ್ಧರನ್ನೂ, ಇತರರನ್ನೂ ಕುಳ್ಳಿರಿಸಿ ಹತ್ತು ಮೈಲುಗಳು ನದಿಯಲ್ಲಿ ಸಾಗಿ ಅಲ್ಲಿಂದ ವಜ್ಜಿ ದೇಶದ ಭೂಭಾಗವನ್ನು ಸೇರಬೇಕಾಗಿತ್ತು.

ಭಗವಾನರು ಮತ್ತು ಅವರ ಭಿಕ್ಖು ಪರಿವಾರವು ದೋಣಿಯು ಸೂಕ್ತ ಆಸನಗಳಲ್ಲಿ ಕುಳಿತುಕೊಳ್ಳಲು ಸ್ವತಃ ರಾಜನೇ ಗಂಗಾನದಿಯಲ್ಲಿ ಇಳಿದು ದೋಣಿಯನ್ನು ಕುತ್ತಿಗೆಯಷ್ಟು ನೀರು ಬರುವವರೆಗೂ ತಳ್ಳಿ ಬುದ್ಧರಿಗೆ ಭಕ್ತಿಯಿಂದ ಎರಡೂ ಕೈಗಳನ್ನು ಜೋಡಿಸಿ ನಮಸ್ಕರಿಸಿ, "ಪೂಜ್ಯರೆ, ತಾವು ವಾಪಸು ಬರುವವರೆಗೂ ನಾನು ಇಲ್ಲೇ ಇರುತ್ತೇನೆ. ತಾವು ಬಂದಮೇಲೆ ತಮ್ಮನ್ನು ಕೊಂಡೊಯ್ಯುತ್ತೇನೆ"

ವಜ್ಜಿಗಳೂ ಕೂಡ ಭಗವಾನರನ್ನು ವೈಭವದಿಂದ ಗೌರವಿಸಲು ಸಜ್ಜು ಮಾಡಿಕೊಂಡಿದ್ದರು. ಭಗವಾನರು ದೋಣಿಯಿಂದ ಇಳಿದು ವೈಶಾಲಿಗೆ ಬರುವ ಮೂವತ್ತು ಮೈಲುಗಳ ಉದ್ದಕ್ಕೂ ಹೂಗಳಿಂದ ಸಿಂಗರಿಸಿ, ಪ್ರತಿ ಹತ್ತು ಮೈಲಿಗೂ ಶಿಬಿರಗಳನ್ನು ಸ್ಥಾಪಿಸಿ, ಭಗವಾನರಿಗೆ ನಾಲ್ಕು ಶ್ವೇತಛತ್ರಿಗಳನ್ನು, ಭಿಕ್ಖುಗಳಿಗೆ ಎರಡು ಛತ್ರಿಗಳನ್ನು ಹೀಗೆ ವ್ಯಾಪಕವಾದ ವ್ಯವಸ್ಥೆಯನ್ನು ಮಾಡಿದ್ದರು. ರಾಜನು ಮತ್ತು ಅವನ ಮಂತ್ರಿಗಳು, ಉನ್ನತಾಧಿಕಾರಿಗಳು ಕುತ್ತಿಗೆಯಷ್ಟು ನೀರು ಬರುವವರೆಗೂ ನೀರಿನಲ್ಲಿ ಹೋಗಿ ಭಗವಾನರು ಕುಳಿತಿದ್ದ ದೋಣಿಗೆ ತಲೆತಾಗಿಸಿ ಭಗವಾನರನ್ನು ಸ್ವಾಗತಿಸಿದರು.

ದಾಖಲೆಗಳು ಎಷ್ಟೊಂದು ವಿವರಗಳನ್ನು ನೀಡುತ್ತವೆಂದರೆ ಭಗವಾನ್ ಬುದ್ಧರು ವಜ್ಜಿ ಪ್ರದೇಶವನ್ನು ಪ್ರವೇಶ ಮಾಡಿದ ತಕ್ಷಣವೇ ಆಕಾಶದ ತುಂಬೆಲ್ಲಾ ಎಲ್ಲ ದಿಕ್ಕಿನಿಂದ ಬಂದು ಕಾರ್ಮೋಡಗಳು ಮುಸುಕಿದವು ಎಂದು ಹೇಳುತ್ತವೆ. ವಿವರಣೆ ಹೀಗಿದೆ: "ಆ ಸಂದರ್ಭದಲ್ಲಿ ಅಂದರೆ ಆ ಕ್ಷಣದಲ್ಲಿ ವಿಶಾಲವಾದ ದೊಡ್ಡದೊಂದು ಮೋಡ, ಅದರ ತುದಿಯಲ್ಲಿ ಮಿಂಚುಗಳು ತುಂಬಿ ಭಾರವನ್ನು ತಡೆಯಲಾರದೆ ನಾಲ್ದೆಸೆಗಳಿಂದಲೂ ಧಾರಾಕಾರ ಮಳೆಯನ್ನು ಸುರಿಸಿದವು". (Path of Purification, Visuddhi Magga - Translated by Ven. Nanamoli Thera). ಆ ಮಳೆ ಹೇಗಿತ್ತೆಂದರೆ ಕಮಲಗಳೂ ಒದ್ದೆಯಾದವು. ಎಲ್ಲಕಡೆ ನೀರು ಮೊಳಕಾಲುದ್ದ, ತೊಡೆಮಟ್ಟ, ಸೊಂಟಮಟ್ಟ, ಕುತ್ತಿಗೆಮಟ್ಟ ಹರಿದು ಸತ್ತ ಹೆಣಗಳು ಕೊಚ್ಚಿಕೊಂಡು ಗಂಗಾನದಿಯನ್ನು ಸೇರಿದವು. ಊರು-ಕೇರಿಗಳೆಲ್ಲ ಸ್ನಾನಮಾಡಿ ಶುಭ್ರವಾದವು. ಮಗಧರು ಮಾಡಿದಂತೆಯೇ ಲಿಚ್ಚವಿಗಳು ಗಂಗಾತೀರದಿಂದ ವೈಶಾಲಿಯವರೆಗಿನ ಮೂವತ್ತು ಮೈಲಿಗಳ ಉದ್ದವನ್ನು ಹೂಗಂಬಳಿಯಿಂದ ಹಾಸಿದರು. ದಾರಿಯುದ್ದಕ್ಕೂ ಸಿಂಗಾರದ ಕಮಾನುಗಳು ಇಕ್ಕೆಲಗಳಲ್ಲೂ ಜನ ಸುಗಂಧಬತ್ತಿಗಳನ್ನು, ಹೂವುಗಳನ್ನು ಹಿಡಿದು ಶ್ರದ್ಧಾ-ಭಕ್ತಿಗಳಿಂದ ನಮಸ್ಕರಿಸಿದರು.

ಪ್ರತಿ ಹತ್ತು ಮೈಲಿಗೂ ಭಗವಾನರು ಮತ್ತು ಅವರ ಭಿಕ್ಖು ಸಂಘ ಹಾಗೂ ಜನರಿಗೆ ವಿಶ್ರಮಿಸಿಕೊಳ್ಳಲು ಶಿಬಿರಗಳನ್ನು ನಿರ್ಮಿಸಿದ್ದರು. ಲಿಚ್ಚವಿಗಳು ಬುದ್ಧರನ್ನು ಮತ್ತು ಭಿಕ್ಷುಗಳನ್ನು ವೈಭವದಿಂದ ಬರಮಾಡಿಕೊಂಡು ಮೂರು ದಿನಗಳಲ್ಲೇ ವೈಶಾಲಿಯನ್ನು ಸೇರಿದರು. ಭಗವಾನರು ಆಗಮಿಸಲು ದಿವ್ಯಲೋಕದ ಒಡೆಯ ಸಕ್ಕನು ತನ್ನ ದೇವತೆಗಳೊಡನೆ ಸೂಕ್ಷ್ಮವಾಗಿ ಪ್ರತ್ಯಕ್ಷವಾಗಲು, ಅಲ್ಲಿದ್ದ ದುಷ್ಟ ಚೈತನ್ಯಗಳೆಲ್ಲ ಚೆಲ್ಲಾಪಿಲ್ಲಿಯಾಗಿ ಓಡಿಹೋದವು. ಅವೇ ಇಲ್ಲಿ ಸಾಂಕ್ರಾಮಿಕ ರೋಗಗಳನ್ನು ಸಂಕಟವನ್ನು ತಂದಿದ್ದವು. ಲಿಚ್ಚವಿಗಳ ಸೌಭಾಗ್ಯವೋ ಎಂಬಂತೆ ಎಲ್ಲೆಡೆ ಆಹ್ಲಾದಕರವಾದ ಪರಿಸರವು ನಿರ್ಮಾಣವಾಯಿತು.

ಭಗವಾನರು ವೈಶಾಲಿಯ ಮಹಾದ್ವಾರ ಪ್ರವೇಶಕ್ಕೆ ಸನಿಹವಾಗಲು ಆಯುಷ್ಮಂತ ಆನಂದ ಥೇರನನ್ನು ಕರೆದು ಅದ್ಭುತ ಶಕ್ತಿಯುಳ್ಳ ರತನಸುತ್ತವನ್ನು ನಗರದ ಮೂರು ಕೋಟೆಗಳ ಸುತ್ತಲೂ ಮೆರವಣಿಗೆಯ ಮೂಲಕ ಹೋಗಿ ಭಕ್ತಿ ಶ್ರದ್ಧೆಗಳಿಂದ ಪರಿತ್ರಾಣ



(ರಕ್ಷಣೆ) ವಾಗಿ ಪಠಿಸಬೇಕೆಂದು ಸೂಚಿಸಿದರು. ರತನಸುತ್ತವನ್ನು ಕಲಿತ ಆಯುಷ್ಮಂತ ಆನಂದ ಥೇರನು ಭಗವಾನ್ ಬುದ್ಧರ ಬವನಾಸಿ (ಪಿಂಡಪಾತ್ರೆ)ಯನ್ನು ತೆಗೆದುಕೊಂಡು ಅದರಲ್ಲಿ ನೀರು ತುಂಬಿದನು. ರಾಜನು, ಪ್ರಮುಖ ಸಚಿವರು ಆನಂದ ಥೇರನನ್ನು ಹಿಂಬಾಲಿಸಿದರು. ಅವರ ಹಿಂದೆ ಭಿಕ್ಖುಗಳು, ಊರ ಜನರು ಮೆರವಣಿಗೆಯಲ್ಲಿ ಸೇರಿಕೊಂಡು ಎಲ್ಲರೂ ರತನಸುತ್ತವನ್ನು ಪಠಿಸುತ್ತಾ ಇಡೀ ನಗರವನ್ನು ಸುತ್ತುಹಾಕಲು ಆನಂದ ಥೇರನು ಬವನಾಸಿಯಲ್ಲಿದ್ದ ಪವಿತ್ರ ಜಲವನ್ನು ಎಲ್ಲೆಡೆ ಸಿಂಪಡಿಸುತ್ತಾ ಹೋದನು.

ಆಗ ಮಂಗಳಕರವಾದ ಮಳೆ ಹನಿಗಳು ಉದುರಿದವು. ದೇವತೆಗಳು ಇದ್ದುದರಿಂದ ದುಷ್ಟ ಚೈತ್ಯಗಳು ಓಡಿಹೋದವು. ಪವಾಡ ಸದೃಶದಂತೆ ರೋಗಿಗಳು ಆರೋಗ್ಯವಂತ ರಾದರು, ಕುರುಡರು ಕಣ್ಣುಗಳನ್ನು ಪಡೆದರು. ಮೂರು ವರ್ಷಗಳ ನಂತರ ಜನರ ಮನದಲ್ಲಿ ಉಲ್ಲಾಸ ಮೂಡಿ ಸಂತೋಷ ಉಕ್ಕಿಹರಿಯಿತು. ಲಿಚ್ಚವಿಯ ರಾಜನು ಮತ್ತು ಪುರಪ್ರಮುಖರು ಭಗವಾನರನ್ನು ನಗರದ ಮಧ್ಯಕ್ಕೆ ಕರೆದು ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಿದರು. ರಾಜನಿಂದ ಹಿಡಿದು ಪುರಜನರೆಲ್ಲಾ ವಿನಯದಿಂದ ಭಿಕ್ಷೆಯನ್ನು ನೀಡಿದರು. ವೈಶಾಲಿಯ ಜನರು ತಂಡೋಪತಂಡವಾಗಿ ದಿನ-ರಾತ್ರಿ ಎನ್ನದೆ ಭಗವಾನರಿಂದ ಅಪರೂಪದ ಅಮೂಲ್ಯ ಧಮ್ಮೋಪದೇಶಗಳನ್ನು ಕೇಳಿದರು.

ಸ್ವಲ್ಪಕಾಲದ ನಂತರ ಭಗವಾನರು ರಾಜಗಹಕ್ಕೆ ಮರಳಿದರು. ಇಂದಿಗೂ ಕೂಡ ಬೌದ್ಧ ದೇಶಗಳಲ್ಲಿ ರತನಸುತ್ತ ಪಠಣ ಸಮಾರಂಭಗಳನ್ನು ಅತ್ಯಂತ ಭಕ್ತಿ-ಶ್ರದ್ಧೆಗಳಿಂದ ಆಚರಿಸುತ್ತಾರೆ. ಕಷ್ಟಕಾಲದಲ್ಲಿ ಪ್ರಕೃತಿ ವಿಕೋಪಗಳ ಸಂದರ್ಭಗಳಲ್ಲಿ ಈ ರತನಸುತ್ತವನ್ನು ಪಠಿಸಿ ಅವುಗಳಿಂದ ಪಾರಾಗುವುದು ಸರ್ವೇ ಸಾಮಾನ್ಯ ಸಂಗತಿ ಎಂಬುದನ್ನು ಕಾಣಬಹುದು. ಬುದ್ಧ ಧಮ್ಮ ಸಂಘ ಎಂಬ ತ್ರಿರತ್ನಗಳಿಂದ ಕೂಡಿದ ಈ ರತನಸುತ್ತಕ್ಕೆ ಪರಿತ್ರಾಣ ಶಕ್ತಿ ಇರುವುದು ಒಂದು ಅನುಭವದ ಮಾತು.

## ಕರಣೀಯ ಮೆತ್ತಾ ಸುತ್ತದ ಹಿಂದಿನ ಕಥೆ

ಭದಂತ ಆಚಾರ್ಯ ಬುದ್ಧಘೋಷರು ತಮ್ಮ ಭಾಷ್ಯದಲ್ಲಿ ಭಗವಾನ್ ಬುದ್ಧರು ಈ ಸುತ್ತವನ್ನು ಹೇಳಲು ಇರುವ ಚಾರಿತ್ರಿಕ ಹಿನ್ನೆಲೆಯನ್ನು ಕೊಟ್ಟಿದ್ದಾರೆ. ಈ ಹಿರಿಯ ಆಚಾರ್ಯರು ಅವ್ಯಾಹತವಾಗಿ ಹಿಂದಿನಿಂದಲೂ ಥೇರ ಪರಂಪರೆಯಿಂದ ಬಂದ ಈ ಸಂಗತಿ ಎಂದು ಹೇಳಿದ್ದಾರೆ ಮತ್ತು ಸ್ವತಃ ಬುದ್ಧರಿಂದಲೇ ಆ ಥೇರರು ಕೇಳಿದ್ದಾರೆ ಎಂದಿದ್ದಾರೆ.

ಐದುನೂರು ಜನ ಭಿಕ್ಷುಗಳು ಬುದ್ಧರನ್ನು ನೋಡಿ ಅಲ್ಲಿಂದ ಹಿಮಾಲಯದ ತಪ್ಪಲಿಗೆ ವರ್ಷಾವಾಸ ಸಮಯದಲ್ಲಿ ತೀವ್ರ ಧ್ಯಾನ ಸಾಧನೆಗಾಗಿ ಹೋದರು. ಆಗಿನ ಕಾಲದಲ್ಲಿ ವರ್ಷಾವಾಸ ಆರಂಭವಾಗುವ ಒಂದೆರಡು ತಿಂಗಳು ಮುನ್ನ ಬುದ್ಧರು ಎಲ್ಲಿದ್ದಾರೆಯೋ ಅಲ್ಲಿ ಹೋಗಿ ಅವರಿಂದ ನೇರ ಸೂಚನೆಗಳನ್ನು ಪಡೆಯುತ್ತಿದ್ದರು. ಆನಂತರ ತಮ್ಮ ತಮ್ಮ ವನವಿಹಾರಗಳಿಗೆ ಅಥವಾ ವಸತಿಗಳಿಗೆ ತೆರಳಿ ಮುಕ್ತಿ ಸಾಧನೆಗಾಗಿ ತೀವ್ರ ಸಾಧನೆಗಳಲ್ಲಿ ತೊಡಗುತ್ತಿದ್ದರು. ಹೀಗೆ ಈ ಐದುನೂರು ಜನ ಭಿಕ್ಷುಗಳು ಸಾವತ್ಥಿ ಬಳಿ ಇರುವ ಅನಾಥಪಿಂಡಿಕಾರಾಮದಲ್ಲಿರುವ ತಥಾಗತ ಬುದ್ಧರನ್ನು ಕಾಣಲು ಹೋದರು.

ಹೀಗೆ ಭಗವಾನರಿಗೆ ಗೌರವವನ್ನು ಅರ್ಪಿಸಿಯಾದ ಮೇಲೆ ಅವರು ಸೂಕ್ತ ಜಾಗಕ್ಕಾಗಿ ವಿಹರಿಸುತ್ತಿರಲು ಹಿಮಾಲಯದ ತಪ್ಪಲಿನಲ್ಲಿ ಒಂದು ಸುಂದರ ಪುಟ್ಟ ಬೆಟ್ಟವನ್ನು ಕಂಡರು. ಅಟ್ಠಕಥೆಯಲ್ಲಿ ಇದರ ವಿವರ ಹೀಗಿದೆ: "ಅದೊಂದು ಹೊಳೆವ ನೀಲಮಣಿಯಂತೆ ಕಾಣಿಸಿತು. ಅದು ತಣ್ಣನೆಯ ದಟ್ಟವಾದ ಹಚ್ಚ ಹಸಿರು ಅಡವಿಯಿಂದ ಆವೃತವಾಗಿ ಒಂದು ಭಾಗದಲ್ಲಿ ಮಣಿಗಳ ಬಲೆಯಂತೆ ಬೆಳ್ಳಿ ರೇಖು ಹರವಿ ಅದರೊಳಗೆ ಸ್ಪಟಿಕ ಶುದ್ಧ ನೀರು ತುಂಬಿತ್ತು." ಭಿಕ್ಖುಗಳು ಈ ಮನಮೋಹಕ ಸೌಂದರ್ಯಕ್ಕೆ ಮಾರುಹೋದರು. ಅದರ ಸುತ್ತಮುತ್ತ ಕೆಲವು ಗ್ರಾಮಗಳು ಒಂದು ಪುಟ್ಟ ನಗರವೂ ಇದ್ದು ಭಿಕ್ಷುಗೆ ಅನುಕೂಲವಾದ ವಾತಾವರಣವಾಗಿತ್ತು. ಭಿಕ್ಖುಗಳು ಒಂದು ರಾತ್ರಿ ಆ ಸುಂದರ ತೋಪಿನಲ್ಲಿ ಕಳೆದು ಮಾರನೇದಿನ ಭಿಕ್ಷೆಗಾಗಿ ಪಕ್ಕದ ನಗರಕ್ಕೆ ಹೋದರು.

ಹಿಮಾಲಯದ ತಪ್ಪಲಲ್ಲಿನ ಅಲ್ಲಿನ ನಿವಾಸಿಗಳಿಗೆ ಈ ರೀತಿಯ ಅಪರೂಪದ ಬೌದ್ಧ ಭಿಕ್ಖುಗಳ ಸಮೂಹವು ವರ್ಷಾವಾಸದ ಏಕಾಂತ ಧ್ಯಾನಕ್ಕಾಗಿ ಬಂದಿರುವುದು ಅತೀವ ಸಂತೋಷ ತಂದಿತು. ಗೃಹಸ್ಥ ಭಕ್ತರು ಭಿಕ್ಖುಗಳಿಗೆ ಭಿಕ್ಷೆ ನೀಡಿದ್ದಲ್ಲದೆ ತಮ್ಮಲ್ಲೇ ಉಳಿದುಕೊಳ್ಳಬೇಕೆಂದು ಅವರಿಗಾಗಿ ಮರಳಿನ ಜಾಗದಲ್ಲಿ ಗುಡಿಸಲುಗಳನ್ನು ಹಾಕಿ ವಿಶಾಲ ಮರಗಳ ಅಡಿಯಲ್ಲಿ ದಿನ–ರಾತ್ರಿಗಳನ್ನು ಧ್ಯಾನಕ್ಕಾಗಿ ಕಳೆಯಬಹುದೆಂದು ವಿನಂತಿಸಿಕೊಂಡರು. ಭಿಕ್ಖುಗಳು ಅವರ ವಿನಂತಿಗೆ ಸಮ್ಮತಿಸಲು ಗೃಹಸ್ಥ ಭಕ್ತರು ಸಣ್ಣ ಸಣ್ಣ ಗುಡಿಸಲುಗಲನ್ನು ಕಟ್ಟಿಕೊಟ್ಟು ಪುಟ್ಟ ಮೇಜನ್ನು ನೀರಿನ ಗಡಿಗೆಗಳನ್ನು ಇಟ್ಟರು.

ಭಿಕ್ಖುಗಳು ಗುಡಿಸಲುಗಳಲ್ಲಿ ನೆಲೆಗೊಂಡು ಪ್ರತಿ ಭಿಕ್ಖುವೂ ಒಂದೊಂದು ವೃಕ್ಷ ಮೂಲವನ್ನು ತಮ್ಮ ದಿನ–ರಾತ್ರಿಗಳ ಧ್ಯಾನಕ್ಕಾಗಿ ಆಯ್ಕೆ ಮಾಡಿಕೊಂಡರು. ಈ ಎಲ್ಲ ವಿಶಾಲ ಮರಗಳಲ್ಲಿ ವೃಕ್ಷದೇವತೆಗಳು ದಿವ್ಯವಾದ ಸೂಕ್ಷ್ಮ ಮಹಲುಗಳನ್ನು ನಿರ್ಮಿಸಿಕೊಂಡು ಆ ಮರಗಳನ್ನು ಆಶ್ರಯಿಸಿಯೇ ಇದ್ದವು. ಈ ದೇವತೆಗಳು ಧ್ಯಾನನಿರತ ಭಿಕ್ಖುಗಳ ಮೇಲಿನ ಗೌರವದಿಂದಾಗಿ ತಮ್ಮ ಕುಟುಂಬ ಸಮೇತ ಮರದಿಂದ ಹೊರಗೆ ಉಳಿಯಬೇಕಾಯಿತು. ವಿಶೇಷವಾಗಿ ಭಿಕ್ಖುಗಳು ಮರಗಳ ಕೆಳಗಡೆ ಕುಳಿತು ಧ್ಯಾನ ಮಾಡುವಾಗ ಮರಗಳ ಮೇಲೆ ಕುಳಿತಿರದೆ, ಗೌರವದಿಂದ ದೂರ ಉಳಿಯುವ ಗುಣ ಮೆಚ್ಚುವಂತಹುದು. ಆ ವೃಕ್ಷದೇವತೆಗಳು ಏನು ಅಂದುಕೊಂಡವೆಂದರೆ ಈ ಭಿಕ್ಖುಗಳು ಒಂದೆರಡು ಪಕ್ಷಗಳಿದ್ದು ಹೋಗುತ್ತಾರೆಂದು ಭಾವಿಸಿ ಸಂತೋಷದಿಂದ ತಮಗಾದ ಅನನಾನುಕೂಲವನ್ನು ಸಹಿಸಿಕೊಂಡವು. ಆ ಭಿಕ್ಖುಗಳು ವೃಕ್ಷಮೂಲಗಳನ್ನು ಬಿಡದೆ, ದಿನಗಳು ಕಳೆಯುತ್ತಲೇ ಹೋದಂತೆ ವೃಕ್ಷದೇವತೆಗಳು ಇವರು ಎಂದು ಬಿಟ್ಟು ಹೋಗುವರೆಂಬ ಆತಂಕದಲ್ಲಿದ್ದರು. ಅವರ ಪರಿಸ್ಥಿತಿ ಹೇಗಾಗಿತ್ತೆಂದರೆ ರಾಜಭಟರಿಗಾಗಿ ಗ್ರಾಮದ ಜನ ತಮ್ಮ ಹಳ್ಳಿಯನ್ನು ಬಿಟ್ಟುಕೊಟ್ಟು ದೂರದಲ್ಲಿ ನಿಂತು ಅವರು ಎಂದು ಹೋಗುವರೋ, ನಾವು ಎಂದು ಅಲ್ಲಿಗೆ ಮರಳಬಹುದೋ ಎಂಬ ಆತಂಕದಲ್ಲಿ ಇದ್ದಂತೆ ಇತ್ತು.



ನೆಲೆ ಕಳೆದುಕೊಂಡ ದೇವತೆಗಳು ತಮ್ಮ ತಮ್ಮಲ್ಲೇ ಚರ್ಚೆ ಮಾಡಿಕೊಂಡು ಈ ಎಲ್ಲ ಭಿಕ್ಖುಗಳನ್ನು ಭಯಾನಕ ದೃಶ್ಯಗಳನ್ನು ಸೃಷ್ಟಿಸಿ ವಿಕಾರ ಶಬ್ದಗಳನ್ನು ಮಾಡಿ ದುರ್ವಾಸನೆಯನ್ನೆಬ್ಬಿಸಿ ಓಡಿಸಬೇಕೆಂದು ತೀರ್ಮಾನಿಸಿದವು. ಹಾಗೆಯೇ ವೃಕ್ಷದೇವತೆಗಳು ಈ ಎಲ್ಲ ಕೃತ್ಯಗಳನ್ನೆಸಗಿ ಭಿಕ್ಖುಗಳಿಗೆ ತೊಂದರೆಯನ್ನುಂಟುಮಾಡಿದವು. ಭಿಕ್ಖುಗಳ ಮುಖ ಪೇಲವವಾಗಿ ಧ್ಯಾನ ವಿಷಯಗಳ ಮೇಲೆ ಏಕಾಗ್ರತೆಯನ್ನು ಮಾಡಲಾಗಲಿಲ್ಲ. ವೃಕ್ಷದೇವತೆಗಳ ನಿರಂತರ ಕಾಟದಿಂದ ಅವರ ಮೂಲ ಸತಿ(ಸ್ಮೃತಿ)ಯೂ ಹಾಳಾಯಿತು. ಅವರ ಮನಸ್ಸು ದೃಶ್ಯ, ಗಲಾಟೆ, ವಾಸನೆಗಳಿಂದ ಕಲುಷಿತವಾಯಿತು. ಎಲ್ಲ ಭಿಕ್ಖುಗಳು ತಮ್ಮ ಹಿರಿಯ ಥೇರರ ಮುಂದೆ ಸಭೆ ಸೇರುವ ಸಂದರ್ಭ ಬಂದಾಗ ಪ್ರತಿಯೊಬ್ಬರೂ ತಮ್ಮ ಕೆಟ್ಟ ಅನುಭವಗಳನ್ನು ಹೇಳಿಕೊಂಡರು. ಆಗ ಹಿರಿಯ ಥೇರ ಹೀಗೆ ಸಲಹೆ ನೀಡಿದ: "ಸೋದರರೆ, ನಾವೆಲ್ಲ ಈಗ ಭಗವಾನರಲ್ಲಿ ಹೋಗಿ ಅವರ ಮುಂದೆ ನಮ್ಮ ಸಮಸ್ಯೆಯನ್ನು ಇಡೋಣ. ನಿಮಗೆ ಗೊತ್ತಿರುವಂತೆ ಎರಡುರೀತಿಯ ವರ್ಷಾವಾಸಗಳಿವೆ. ಒಂದು ಬಹು ಮುಂಚೆಯೇ ವರ್ಷಾವಾಸ ಆರಂಭಿಸುವುದು, ಇನ್ನೊಂದು ತಡವಾಗಿ ಆರಂಭಿಸುವುದು. ನಾವು ವರ್ಷಾವಾಸವನ್ನು ಬೇಗನೆ ಮುಗಿಸುತ್ತೇವೆಯಾದ್ದರಿಂದ ಭಗವಾನರನ್ನು ಕಂಡಾದ ಮೇಲೆ ವಿಳಂಬಿತ ವರ್ಷಾವಾಸವನ್ನು ಮಾಡಬಹುದು." ಎಲ್ಲ ಭಿಕ್ಖುಗಳು ಇದಕ್ಕೆ ಸಮ್ಮತಿಸಿ ಅಲ್ಲಿನ ಗೃಹಸ್ಥರಿಗೆ ಹೇಳದೆಯೇ ಆ ಸ್ಥಳವನ್ನು ತೊರೆದರು.

ಹಂತಹಂತವಾಗಿ ನಡೆದು ಅವರ ಸಾವತ್ಥಿಗೆ ಬಂದು ಅಲ್ಲಿ ಭಗವಾನರನ್ನು ಕಂಡು ಕಾಲಿಗೆ ಬಿದ್ದು ನಮಸ್ಕರಿಸಿ ತಮ್ಮ ಭಯಾನಕ ಅನುಭವಗಳನ್ನು ಕರುಣಾಜನಕ ಸ್ಥಿತಿಯನ್ನು ನಿವೇದಿಸಿಕೊಂಡು ಬೇರೊಂದು ಸ್ಥಳವನ್ನು ಸೂಚಿಸುವಂತೆ ವಿನಂತಿಸಿಕೊಂಡರು. ಭಗವಾನರು ತಮ್ಮ ದಿವ್ಯ ಲೋಕೋತ್ತರ ಶಕ್ತಿಯಿಂದ ಇಡೀ ಜಂಬೂದ್ವೀಪವನ್ನು ಸರ್ವೇಕ್ಷಿಸಿ ಆ ಜಾಗವನ್ನು ಬಿಟ್ಟು ಬೇರೆ ಯಾವ ಸ್ಥಳವೂ ಆಧ್ಯಾತ್ಮ ಸಾಧನೆಗೆ ಸೂಕ್ತವಲ್ಲವೆಂದು ಅರಿತು ಹೀಗೆ ಹೇಳಿದರು: "ಭಿಕ್ಖಗಳೇ ನೀವು ಮರಳಿ ಅದೇ ಜಾಗಕ್ಕೆ ಹೋಗಿ! ನೀವು ಅಲ್ಲಿಯೇ ಇದ್ದು ಸಾಧನೆ ಮಾಡುವುದರಿಂದ ನಿಮ್ಮ ಆಂತರಿಕ ಆಸವಗಳನ್ನು ನಿರ್ನಾಮ ಮಾಡಬಹುದು. ನೀವು ವೃಕ್ಷದೇವತೆಗಳು ನೀಡುವ ತೊಂದರೆಯಿಂದ ಪಾರಾಗಬೇಕಾದರೆ ಈ ಸುತ್ತವನ್ನು ಕಲಿಯಿರಿ. ಇದು ನಿಮಗೆ ಧ್ಯಾನದ ವಸ್ತುವಾಗಿ ಅಷ್ಟೇ ಅಲ್ಲ, ಒಂದು ಪರಿತ್ರಾಣ ತಂತ್ರವಾಗಿಯೂ ಅನುಕೂಲವಾಗುತ್ತದೆ. ಆಗ ಭಗವಾನರು ಕರಣೀಯ ಮೆತ್ತ ಸುತ್ತವನ್ನು ಪಠಿಸಿದರು. ಅದನ್ನು ಎಲ್ಲ ಭಿಕ್ಖುಗಳು ಕಂಠಸ್ಥ ಮಾಡಿಕೊಂಡರು. ಎಲ್ಲರೂ ಬುದ್ಧರ ಸಮ್ಮುಖದಲ್ಲೇ ಪುನಃ ಅದೇ ಜಾಗಕ್ಕೆ ಹೋದರು. ಭಿಕ್ಖುಗಳು ಸುತ್ತವನ್ನು ಜಪಿಸುತ್ತಾ ಸುತ್ತದ ಮೇಲೆ ಧ್ಯಾನಿಸುತ್ತ ಅದರೊಳಗಿನ ಅರ್ಥವನ್ನ ಗ್ರಹಿಸುತ್ತಾ ತಮ್ಮ ಅರಣ್ಯ ನಿವಾಸಗಳನ್ನು ಸಮೀಪಿಸುತ್ತಿದ್ದಂತೆ ವೃಕ್ಷದೇವತೆಗಳ ಸುಮಧುರ ಭಾವಕ್ಕೆ ಮನಸ್ಸುಗಳು ಪರಿವರ್ತಿತವಾಗಿ ಮನುಷ್ಯ ರೂಪವನ್ನು ತಳೆದು ಎಲ್ಲ ಭಿಕ್ಖುಗಳನ್ನು ಭಕ್ತಿಭಾವದಿಂದ ಬರಮಾಡಿಕೊಂಡರು. ದೇವತೆಗಳು ಅವರ

ಪಿಂಡಪಾತ್ರೆಗಳನ್ನು ಕೈಗೆ ತೆಗೆದುಕೊಂಡು ಗುಡಿಸಲುಗಳಿಗೆ ಕರೆದುಕೊಂಡು ಹೋಗಿ ನೀರು ಆಹಾರ ದೊರೆಯುವಂತೆ ಮಾಡಿ, ಯಥಾಪ್ರಕಾರ ತಮ್ಮ ವೃಕ್ಷದೇವತೆಯ ರೂಪವನ್ನು ತಳೆದು ವೃಕ್ಷ ಮೂಲಗಳಲ್ಲಿ ಯಾವುದೇ ಆತಂಕವಿಲ್ಲದೆ ಭಿಕ್ಷುಗಳಿಗೆ ಧ್ಯಾನ ಮಾಡುವಂತೆ ಆಹ್ವಾನಿಸಿದರು. ಮುಂದೆ ಮೂರು ತಿಂಗಳ ವರ್ಷಾವಾಸದಲ್ಲಿ ಈ ದೇವತೆಗಳು ಭಿಕ್ಖುಗಳನ್ನು ಎಲ್ಲ ಬಗೆಯಲ್ಲಿ ಚೆನ್ನಾಗಿ ನೋಡಿಕೊಂಡುದಲ್ಲದೆ ಯಾವುದೇ ಗದ್ದಲವಿಲ್ಲದಂತೆ ನೋಡಿಕೊಂಡವು. ನೀರವ ಮೌನವನ್ನು ಆನಂದಿಸುತ್ತಾ ವರ್ಷಾವಾಸದ ಕೊನೆಯ ಹೊತ್ತಿಗೆ ಎಲ್ಲ ಸಂನ್ಯಾಸಿಗಳು ಅರಹಂತರಾದರು. ಇದು ಮೆತ್ತಾ ಸುತ್ತದ ಶಕ್ತಿ!

ಯಾರೇ ಆಗಲಿ ಈ ಸುತ್ತವನ್ನು ಶ್ರದ್ಧಾ ಭಕ್ತಿಗಳಿಂದ ಪಠಿಸಿ ದೇವತೆಗಳ ರಕ್ಷಣೆಯನ್ನು ಬೇಡುತ್ತಾ ವಿಶ್ವಮೈತ್ರಿಯ ಮೇಲೆ ಧ್ಯಾನ ಮಾಡುತ್ತಾರೊ ಅವರು ತಮ್ಮನ್ನಷ್ಟೇ ರಕ್ಷಿಸಿಕೊಳ್ಳುವುದಲ್ಲದೆ ತಮ್ಮ ಸುತ್ತಮುತ್ತಲಿನ ಜನರೆಲ್ಲರನ್ನೂ ರಕ್ಷಿಸಬಹುದು. ಅಷ್ಟೇ ಅಲ್ಲ, ಆಧ್ಯಾತ್ಮಿಕ ಸಾಧನೆಯಲ್ಲಿ ಮುಂದುವರೆದಿರುವುದನ್ನು ಪ್ರತ್ಯಕ್ಷವಾಗಿಯೂ ಕಾಣಬಹುದು. ಯಾರು ಮೈತ್ರಿ ಹಾದಿಯನ್ನು ಹಿಡಿಯುತ್ತಾರೋ ಅವರಿಗೆ ಯಾವ ಆತಂಕಗಳು ಅಡ್ಡಬರಲಾರವು.

– o0o – o0o – o0o –

## ಅಧ್ಯಾಯ-5

# ಬುದ್ಧನ ಅಗ್ರ ಶ್ರಾವಕರು

### ಮೊದಲ ಐದು ಶಿಷ್ಯರು

ಬುದ್ಧನ ಮೊದಲ ಐದು ಜ್ಞಾನೋದಯ ಹೊಂದಿದ ಶಿಷ್ಯರೆಂದರೆ ಪೂಜ್ಯರಾದ ಅರ್ಹತ ಕೊಂಡಞ್ಞ, ವಪ್ಪ, ಭದ್ದಿಯ, ಮಹಾನಾಮ ಮತ್ತು ಅಸ್ಸಾಜಿ. ಇವರೆಲ್ಲರೂ ಕಪಿಲವಸ್ತುವಿನ ಬ್ರಾಹ್ಮಣ ಕುಟುಂಬಗಳಿಂದ ಬಂದವರು ಮತ್ತು ಜ್ಯೋತಿಷ್ಯ ಶಾಸ್ತ್ರದಲ್ಲಿ ಹೆಸರಾದವರು. ಈ ಎಲ್ಲ ಬ್ರಾಹ್ಮಣ ಪಂಡಿತರು ಮುಂದೆ ಬುದ್ಧ ಗೌತಮರಾಗುವ ಸಿದ್ಧಾರ್ಥನ ತಂದೆ ಸಾಕ್ಯ ದೊರೆ ಶುದ್ಧೋಧನನ ಆಸ್ಥಾನ ಜ್ಯೋತಿಷಿಗಳು.

ರಾಜಕುಮಾರ ಸಿದ್ಧಾರ್ಥ ಹುಟ್ಟಿದ ಐದನೇ ದಿನದ ಸಂಭ್ರಮದ ನಾಮಕರಣದಂದು ನೂರಎಂಟು ಜ್ಯೋತಿಷ್ಯ ಪಂಡಿತರನ್ನು ಕರೆಯಿಸಿ ರಾಜಕುಮಾರನ ಭವಿಷ್ಯವನ್ನು ನುಡಿಯುವಂತೆ ಕೋರಲಾಯಿತು. ರಾಜನು ಇಷ್ಟು ಮಂದಿ ಜ್ಯೋತಿಷಿಗಳಲ್ಲಿ ಎಂಟುಜನ ಮಹಾಪಂಡಿತರನ್ನು ಆಯ್ಕೆ ಮಾಡುವಂತೆ ಸೂಚಿಸಿದನು. ಇದಕ್ಕೂ ಮುಂಚೆ ರಾಜನು ಇವರೆಲ್ಲರಿಗೂ ಭೂರಿ ಭೋಜನವನ್ನು ಮತ್ತು ಬಹು ಮೌಲ್ಯದ ಉಡುಗೊರೆಗಳನ್ನು ನೀಡಿ ಸತ್ಕರಿಸಿದ್ದನು. ಈ ಎಂಟುಜನ ಮಹಾ ಪಂಡಿತರು ಮಗುವಿನ ಮೂವತ್ತೆರಡು ಮಹಾಪುರುಷ ಲಕ್ಷಣಗಳನ್ನು ಮತ್ತು ಎಂಭತ್ತು ಇತರೆ ಲಕ್ಷಣಗಳನ್ನು ಸೂಕ್ಷ್ಮವಾಗಿ ಗುರುತಿಸಿದರು. ಅದರಲ್ಲಿ ಏಳು ಜ್ಯೋತಿಷಿಗಳು ಮಗುವಿನ ಭವಿಷ್ಯದ ಎರಡು ಸಾಧ್ಯತೆಗಳ ಬಗ್ಗೆ ತಮ್ಮ ಒಮ್ಮತದ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅಲ್ಲಿದ್ದ ಸಭಾಸದರ ಮುಂದೆ ಕೈಯ ಮೊದಲೆರಡು ಬೆರಳುಗಳನ್ನೆತ್ತಿ ತೋರಿಸಿದರು. ಇದರ ಅರ್ಥ ಈ ರಾಜ ಶಿಶುವು ಮುಂದೆ ಈ ಪ್ರಪಂಚವನ್ನೇ ಆಳುವ ಚಕ್ರವರ್ತಿ ಮಹಾರಾಜನಾಗುತ್ತಾನೆ ಇಲ್ಲವೆ ಧಮ್ಮರಾಜನಾಗುತ್ತಾನೆ, ಅಂದರೆ ಸಮ್ಮಾಸಂಬುದ್ಧನಾಗುತ್ತಾನೆ ಎಂದು.

ಕೊಂಡಞ್ಞ ಎಂಬುವ ಎಂಟನೆಯ ಮತ್ತು ಅತ್ಯಂತ ಕಿರಿಯ ಬ್ರಾಹ್ಮಣ ಜ್ಯೋತಿಷಿ ಮಗುವಿನ ಎಲ್ಲ ಲಕ್ಷಣಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ ಒಂದೇ ಬೆರಳನ್ನು ತೋರಿಸಿದನು. ಕರಾರುವಾಕ್ಕಾಗಿ ಹೇಳಿದನು: “ ಈ ರಾಜಕುಮಾರ ಮಗುವಿಗೆ ‘ಅನ್ನಲೋಮ’ ಅಂದರೆ ಬಲಗಡೆಗೆ ಗುಂಗುರಾಗಿ ತಿರುಗಿದ ಬಿಳಿಗೂದಲು ಇರುವುದರಿಂದ ಮುಂದೆ ತಥಾಗತ ಬುದ್ಧನೇ ಆಗುತ್ತಾನೆ. ಇವನು ಸತ್ಯವನ್ನು ಎತ್ತಿಹಿಡಿಯುವ

ಧಮ್ಮರಾಜನಾಗುತ್ತಾನಾಗಲಿ, ಚಕ್ರವರ್ತಿ ಮಹಾರಾಜನಾಗುವುದಿಲ್ಲ. ಧಮ್ಮರಾಜನಾಗುವವನಿಗೆ ಬಲಗಡೆಗೆ ತಿರುಗಿದ ಬಿಳಿ ಗೂದಲಿದ್ದರೆ ಚಕ್ರವರ್ತಿ ಮಹಾರಾಜನಾಗುವವನಿಗೆ ಎಡಗಡೆಗೆ ಗುಂಗುರಾಗಿ ತಿರುಗಿದ ಕರಿಗೂದಲಿರುತ್ತದೆ. ಈ ಭವಿಷ್ಯವಾಣಿಯನ್ನು ಕೇಳಿದ ಎಲ್ಲ ನೂರಏಳು ಬ್ರಾಹ್ಮಣ ಜ್ಯೋತಿಷ್ಯ ಪಂಡಿತರು ಒಕ್ಕೊರಲಿನಿಂದ ಕೊಂಡಞ್ಞನು ಸರಿಯಾದ ವ್ಯಾಖ್ಯಾನವನ್ನು ಕೊಟ್ಟಿದ್ದರಿಂದ ಅಗ್ರಗಣ್ಯ ಜ್ಯೋತಿಷಿ ಎಂದು ಅವನನ್ನು ಕೊಂಡಾಡಿದರು.

ಈ ವ್ಯಾಖ್ಯಾನವನ್ನು ಆಧರಿಸಿಯೇ ನಾಮಕರಣ ದಿನದಂದು ಆ ಮಗುವಿಗೆ 'ಸಿದ್ಧಾರ್ಥ'ನೆಂದು ಹೆಸರಿಟ್ಟರು. ಎಲ್ಲ ಇಷ್ಟಾರ್ಥಗಳನ್ನು ಸಿದ್ಧಿಸಿಕೊಂಡವನು ಎಂದರ್ಥ. ಹೀಗಿರಲು ಯಾರೆಲ್ಲಾ ಜ್ಞಾನೋದಯವನ್ನು ಹೊಂದಲು ಇಚ್ಛಿಸುತ್ತಾರೋ ಅವರ ಇಷ್ಟಾರ್ಥಗಳನ್ನು ಪೂರೈಸುವವನು ಎಂದರ್ಥ.

ಏಳುಜನ ಪಂಡಿತೋತ್ತಮ ಜ್ಯೋತಿಷಿಗಳು ವಯಸ್ಸಾದ್ದರಿಂದ ತಮ್ಮ ಮಕ್ಕಳಿಗೆ, "ಮಕ್ಕಳೆ, ನಮಗೆ ವಯಸ್ಸಾದುದರಿಂದ ಸಿದ್ಧಾರ್ಥನು ಬುದ್ಧನಾಗುವುದನ್ನು ನಾವು ನೋಡಲಾರೆವು. ನೀವೆಲ್ಲ ಯೌವ್ವನದಲ್ಲಿರುವುದರಿಂದ ಬುದ್ಧ ಸ್ಥಾಪಿಸುವ ಪವಿತ್ರ ಸಂಘವನ್ನು ಸೇರಬೇಕು" ಎಂದರು.

"ರಾಜನು ಜ್ಯೋತಿಷ್ಯ ಪಂಡಿತೋತ್ತಮ ಕೊಂಡಞ್ಞನಿಗೆ ಹೀಗೆ ಕೇಳಿದನು: "ನನ್ನ ಮಗ ಸಂಸಾರವನ್ನು ತ್ಯಜಿಸುತ್ತಾನೆಂದು ಹೇಳಿದಿರಲ್ಲ, ಯಾವುದನ್ನು ನೋಡಿ ಹಾಗೆ ಮಾಡುತ್ತಾನೆ?" ಆಗ ಕೊಂಡಞ್ಞ ಹೇಳಿದನು: "ಪ್ರಭುಗಳೇ, ನಾಲ್ಕು ದೃಶ್ಯಗಳನ್ನು ನೋಡಿ, ಸತ್ಯವನ್ನು ಹುಡುಕಲು ಹೋಗುತ್ತಾನೆ."

"ಆ ನಾಲ್ಕು ಯಾವುವು?" ಎಂದು ರಾಜನು ಕೇಳಿದನು.

ಜಾತಕ ನಿದಾನ ಕಥೆಯ ಪ್ರಕಾರ ವಯಸ್ಸಿನಲ್ಲಿ ಬಾಗಿದ ಕೃಶನಾದ ವೃದ್ಧನನ್ನು, ತನ್ನ ಹೇಸಿಗೆಯನ್ನು ತಾನೇ ತಿನ್ನುವ ರೋಗಿಯನ್ನು, ಸತ್ತ ಹೆಣವನ್ನು ಮತ್ತು ಗೃಹತ್ಯಾಗ ಮಾಡಿದ ತೇಜಸ್ವಿ ಸಂನ್ಯಾಸಿಯನ್ನು. ಈ ನಾಲ್ಕು ದೃಶ್ಯಗಳನ್ನು ಕಂಡು ಸಂಸಾರವನ್ನು ತೊರೆದು ಮನೆ ತ್ಯಜಿಸಿದ ಅನಗಾರಿಕನಾಗಿ ಹೋಗುತ್ತಾನೆ ಎಂದು ಕೊಂಡಞ್ಞನು ಹೇಳಿದನು. ಈ ನಾಲ್ಕು ದೃಶ್ಯಗಳ ಹಿಂದಿರುವ ಸತ್ಯಾನ್ವೇಷಣೆಗಾಗಿ ಸಂನ್ಯಾಸಿ ಬದುಕನ್ನು ಸ್ವೀಕರಿಸುತ್ತಾನೆ.

ರಾಜಕುಮಾರನು ಎಂದೂ ಮೇಲಿನ ದೃಶ್ಯಗಳನ್ನು ನೋಡದಂತೆ ಬದುಕಿನ ಶೈಲಿಯನ್ನು ರೂಪಿಸಬೇಕೆಂದು ರಾಜನು ಮನಸ್ಸು ಮಾಡಿದನು. ಇಪ್ಪತ್ತೊಂಭತ್ತು ವರ್ಷಗಳ ನಂತರ ಕೊಂಡಞ್ಞ ಮತ್ತು ಯಾವ ಏಳುಜನ ಜ್ಯೋತಿಷಿಗಳು ರಾಜಕುಮಾರ ಸಿದ್ಧಾರ್ಥನು ಗೃಹತ್ಯಾಗ ಮಾಡುತ್ತಾನೆಂದು ಭವಿಷ್ಯ ನುಡಿದಿದ್ದರೋ ಕಾಲವಾದ ಆ ಜ್ಯೋತಿಷಿಗಳ ನಾಲ್ಕು ಜನ ಮಕ್ಕಳೂ ಕೂಡ ಗೃಹತ್ಯಾಗ ಮಾಡಿ ಉರುವೇಲದತ್ತ ಪ್ರಯಾಣ ಬೆಳೆಸಿ ಸಮಣ ಬೋಧಿಸತ್ವನನ್ನು ಸೇರಿಕೊಂಡರು. ಗಯಾದ ಬಳಿ ಇರುವ ಉರುವೇಲ



ಕಾನನದಲ್ಲಿ ಬೋಧಿಸತ್ವನನ್ನು ಸಂದರ್ಶಿಸಿ ತಮ್ಮನ್ನು ಶಿಷ್ಯರನ್ನಾಗಿ ಸ್ವೀಕರಿಸಿ ಸೇವೆ ಸಲ್ಲಿಸುವ ಅವಕಾಶ ಕೋರಿದರು. ಬೋಧಿಸತ್ವನು ಸಮ್ಮತಿಸಲು ಅವರು ದೇಹದಂಡನೆಯಾದಿಯಾಗಿ ಕಠಿಣತಮ ತಪಃಶ್ಚರ್ಯೆಯಲ್ಲಿ ತೊಡಗಿದ ಬೋಧಿಸತ್ವನನ್ನು ಸೇವಿಸತೊಡಗಿದರು. ಭಯಭೇರವ ಸುತ್ತ (ಮಜ್ಝಿಮನಿಕಾಯ-4) ಮತ್ತು ಮಹಾಸಚ್ಚಕ ಸುತ್ತ (ಮಜ್ಝಿಮನಿಕಾಯ-36) ಗಳಲ್ಲಿ ಬೋಧಿಸತ್ವನು ಅನುಷ್ಠಾನ ಮಾಡುತ್ತಿದ್ದ ಆರು ವರ್ಷಗಳ ಕಠಿಣತಮ ತಪಃಶ್ಚರ್ಯೆಯ ವಿವರಗಳಿವೆ. (ಬುದ್ಧ ಮತ್ತು ಧಮ್ಮ ಸಂಪುಟ-2ರ ಪು1-48ರಲ್ಲಿ ದೇಹದಂಡನೆ ಬಗ್ಗೆ ವಿವರಗಳಿವೆ.)

ಆರು ವರ್ಷಗಳ ಕಠಿಣ ತಪಃಶ್ಚರ್ಯೆಯಲ್ಲಿ ನಿರತನಾಗಿದ್ದ ಬೋಧಿಸತ್ವನು ಒಮ್ಮಿಂದೊಮ್ಮೆಲೆ ಈ ಕಠಿಣ ತಪಃಶ್ಚರ್ಯೆಯನ್ನು ತೊರೆದು ದೇಹ ಸ್ವಾಸ್ಥ್ಯಕ್ಕಾಗಿ ಭಿಕ್ಷೆಗೆ ಹೋಗುವುದನ್ನು ಈ ಐದುಜನ ತಾಪಸಿಗಳು ಗಮನಿಸಿದರು. ಊಟಮಾಡಲು ಶುರು ಮಾಡಿದ್ದರಿಂದ ಬೋಧಿಸತ್ವನು ಭಿನ್ನ ಮಾರ್ಗವನ್ನೇ ಆರಿಸಿಕೊಂಡಿದ್ದನ್ನು ಈ ತಾಪಸಿಗಳು ಗಮನಿಸಿ ಹೀಗೆ ಯೋಚಿಸಿದರು: "ಬೋಧಿಸತ್ವನು ಕಠಿಣ ತಪಃಶ್ಚರ್ಯೆಯನ್ನು ತೊರೆದು ಧರ್ಮಭ್ರಷ್ಟನಾಗಿದ್ದಾನೆ. ಸುಖದ ಸುಪತ್ತಿಗೆಯಲ್ಲಿ ಹುಟ್ಟಿ ಬೆಳೆದು ತನ್ನ ಹೋರಾಟವನ್ನು ಬಿಟ್ಟು ಅಧೋಗತಿಗೆ ಬರುತ್ತಿದ್ದಾನೆ, ಇವನು ಇನ್ನು ನಮಗೆ ಗುರುವಲ್ಲ". ಒಂದುದಿನ ಇವರೆಲ್ಲ ಬೋಧಿಸತ್ವನಿಗೆ ಹೇಳದೆ ಕೇಳದೆ ಉರುವೇಲ ಕಾನನವನ್ನು ತೊರೆದು ವಾರಾಣಸಿ ಬಳಿಸಿ ಇಸಿಪಟಣದ ಸಮೀಪ ಇರುವ ಮಿಗದಾಯಿ ವನಕ್ಕೆ ಬಂದು ಬ್ರಾಹ್ಮಣ ತಾಪಸಿಗಳಂತೆ ತಮ್ಮ ಸಾಧನೆಯನ್ನು ಮಾಡಲು ಆರಂಭಿಸಿದರು.

ಬೋಧಿಸತ್ವನು ತನ್ನ ದೇಹಸ್ವಾಸ್ಥ್ಯವನ್ನು ಮರಳಿ ಪಡೆದ ಮೇಲೆ ಧ್ಯಾನವನ್ನು ಹೆಚ್ಚಿಸಿ, ಲೋಕೋತ್ತರ ಸ್ಥಿತಿಗಳನ್ನು ಪಡೆದನು. ಜಾತಕ ನಿದಾನ ಕಥಾ ಪ್ರಕಾರ ಕ್ರಿ.ಪೂ. 588ರ ಚೈತ್ರಮಾಸ ಅಮಾವಾಸ್ಯೆ (ಏಪ್ರಿಲ್) ಯಿಂದ ವೈಶಾಖ ಮಾಸ (ಮೇ) ಹುಣ್ಣಿಮೆಯವರೆಗೆ ಈ ಹಿಂದೆ ಆಲಾರಕಾಲಾಮ ಮತ್ತು ಉದ್ದಕರಾಮಪುತ್ತ ಋಷಿಗಳ ಜೊತೆಯಲ್ಲಿದ್ದು ಸಿದ್ಧಿಸಿಕೊಂಡ ಲೋಕೋತ್ತರ ಶಕ್ತಿಗಳಿಂದೊಡಗೂಡಿದ ನೇರಜ್ಞಾನದ ಎಲ್ಲ ಅಭಿಞ್ಞಗಳನ್ನು ಮತ್ತೆ ಗಳಿಸಿಕೊಂಡನು.

ಸಂಬೋಧಿ (ಜ್ಞಾನೋದಯ) ಪ್ರಾಪ್ತಿಯಾಗುವ ಹಿಂದಿನ ದಿನ ಅಂದರೆ ವೈಶಾಖ ಮಾಸದ ಹುಣ್ಣಿಮೆ ಹಿಂದಿನ ದಿನ ಬೋಧಿಸತ್ವನಿಗೆ ಐದು ಸ್ಪಷ್ಟವಾದ ಮತ್ತು ವಿಶೇಷ ಕನಸುಗಳು ಬಿದ್ದವು. ಅವು ಮುಂದೆ ಸಿದ್ಧಿಗಳನ್ನು ಪಡೆಯುವ ಮತ್ತು ಧಮ್ಮಪ್ರಸಾರದ ಮುನ್ಸೂಚನೆಗಳಾಗಿದ್ದವು. ಮಜ್ಝಿಮ ನಿಕಾಯದ ಮಹಾಸುಪಿನ ಸುತ್ತದಲ್ಲಿ ವಿವರಗಳನ್ನು ನೋಡಬಹುದು.

ಜ್ಞಾನೋದಯದ ನಂತರ ಬುದ್ಧ ಗೌತಮರು ತಥಾಗತರೊಬ್ಬರೆ ಸಾಧಿಸಬಲ್ಲ ಜ್ಞಾನೋದಯದ ಆನಂದವನ್ನು ಅನುಭವಿಸುತ್ತ ಏಳು ವಾರಗಳ ಕಾಲ ಸಮಾಧಿ ಸ್ಥಿತಿಯಲ್ಲಿದ್ದರು.

ಆಷಾಢ ಮಾಸದ ಹುಣ್ಣಿಮೆಯ ದಿನದಂದು ಭಗವಾನರು ಬುದ್ಧಗಯೆಯ ಇಸಿಪಟಣದವರೆಗೆ ಕಾಲ್ನಡಿಗೆಯಲ್ಲೇ ನೂರಿಪ್ಪತ್ತೈದು ಮೈಲುಗಳನ್ನು ಒಂದೇದಿನದಲ್ಲಿ ನಡೆದರು. ಅಸಾಮಾನ್ಯ ಶಕ್ತಿಯನ್ನು ಪ್ರಯೋಗಿಸಿ ಈ ಪವಾಡವನ್ನು ಮೆರೆದರು. ಭಗವಾನ್ ಬುದ್ಧರು ಇಸಿಪಟಣದ ಮೃಗವನಕ್ಕೆ ಬಂದಾಗ ಅಲ್ಲಿದ್ದ ಐದು ತಾಪಸಿಗಳು ಬುದ್ಧರನ್ನು ನೋಡಿದರು. ಆಗ ಅವರ ನಡುವೆ ಸಂಭಾಷಣೆ ನಡೆಯಿತು.

ಬುದ್ಧ ಅವರನ್ನು ತಮ್ಮ ಧಮ್ಮವಾಣಿಯತ್ತ ಸೆಳೆದುಕೊಂಡು ತಾವು ಕಂಡುಕೊಂಡ ಸತ್ಯವನ್ನು ಈ ಐದುಜನ ತಾಪಸಿಗಳಿಗೆ ಬೋಧಿಸಿದರು. ಇದುವೆ ಭಗವಾನ್ ಬುದ್ಧರು ನೀಡಿದ ಮೊಟ್ಟಮೊದಲ ಧಮ್ಮೋಪದೇಶ "ಧಮ್ಮಚಕ್ಕಪವತ್ತನ ಸುತ್ತ."

ಈ ಪವಿತ್ರ ಸುತ್ತವನ್ನು ಬೋಧಿಸಿದ ಸಂದರ್ಭದಲ್ಲಿ ಹಲವು ಸಂಗತಿಗಳು ಏಕಕಾಲಕ್ಕೆ ಸಂಭವಿಸಿದವು: 1) ಬುದ್ಧನ ಧಮ್ಮೋಪದೇಶ ಇತಿಹಾಸವು ಬಂದಿತು. 2) ಧಮ್ಮರತ್ನವು (ಇದನ್ನು ಧಮ್ಮಕಾಯವೆಂದೂ ಕರೆಯುತ್ತಾರೆ) ಉದಿಸಿ ಮೂರು ಲೋಕಗಳಲ್ಲಿನ ಜೀವಿಗಳ ಹೃದಯವನ್ನು ಬೆಳಗಿಸಿತು. 3) ನಿಬ್ಬಾಣ ಸಿದ್ಧಿಗಾಗಿ ಯಾರೆಲ್ಲ ದಶಪಾರಮಿಗಳನ್ನು ಕರಗತಗೊಳಿಸಿಕೊಳ್ಳುವರೋ ಅವರಿಗೆಲ್ಲ ಬುದ್ಧಶಾಸನವು ಅಸ್ತಿತ್ವಕ್ಕೆ ಬಂದಿತು. 4) ಬುದ್ಧನು ಬೋಧಿಜ್ಞಾನವನ್ನು ಕೊಡುವವನಾಗಿ (ಬೋಧೇತ), ದೇವ ಮಾನವರ ಆಧ್ಯಾತ್ಮ ಗುರುವಾಗಿ (ಸತ್ಥಾ), ಬೋಧಿ ಪರಂಪರೆಯನ್ನು (ಬೋಧಿ ಪರಾಯಣ) ಅರ್ಥಪೂರ್ಣವಾಗಿ ಪಾರಮಾರ್ಥ ಬದುಕಿನಲ್ಲಿ ಮುಂದುವರಿಸಿಕೊಂಡು ಹೋಗುವುದು. 5) ಬುದ್ಧರು ಯಾವಾಗ "ದ್ವೇ ಮೆ ಭಿಕ್ಖವೇ ಅಂತಾ" (ಭಿಕ್ಖುಗಳೇ ಎರಡು ಅತಿರೇಕಗಳಿವೆ) ಎಂದು ಉದ್ಗರಿಸಿದರೋ ಆಗ ಧಮ್ಮದ ಪವಿತ್ರ ಧ್ವನಿಯು ಹತ್ತು ದಶಲೋಕಗಳಲ್ಲಿ ಮೊಳಗಿ ಯಾರು ಪಾರಮಾರ್ಥಿಕವಾಗಿ ಪರಿವರ್ತನೆ ಹೊಂದಲು ಸಿದ್ಧರಿದ್ದರೊ ಅವರ ಹೃದಯಗಳು ಮುದಗೊಂಡವು. ಆ ಮುದಗೊಂಡ ಹೃದಯದಲ್ಲಿ ಕೋಟ್ಯಂತರ ಬ್ರಹ್ಮದೇವತೆಗಳೂ ಇದ್ದರು. 6) ಗರ್ಭತಾಳುವ, ಹುಟ್ಟುವ ಮತ್ತು ಜ್ಞಾನೋದಯವಾಗುವ ಕ್ಷಣಗಳಲ್ಲಿ ಭಕ್ತಿಭಾವ ಮೂಡಿಸುವ ಮೂವತ್ತೆರಡು ಮಹಾಪುರುಷ ಲಕ್ಷಣಗಳು, ದೃಶ್ಯಗಳು ಪ್ರಕಟವಾಗಿ ಸತ್ಯಾನ್ವೇಷಿಗಳ ಮನಸ್ಸಿನ ಮೇಲೆ ಪರಿಣಾಮ ಬೀರಿದವು.

## ಬುದ್ಧನ ಸಂಶೋಧನೆಯ ಬಗೆಗಿನ ಪ್ರಮಾಣ ಅಥವಾ ಸಾಕ್ಷಿ

ಧಮ್ಮಚಕ್ಕಪವತ್ತನ ಸುತ್ತವೇ ಬುದ್ಧರು ಕಂಡುಹಿಡಿದ ಪಾರಮಾರ್ಥಿಕ ಸಂಶೋಧನೆಯ ಬಗೆಗಿನ ಅನನ್ಯವಾದ ಪ್ರಮಾಣ. ಈ ಸಂಕ್ಷಿಪ್ತ ಸುತ್ತವು ಸರ್ವಜ್ಞ ಬುದ್ಧನ ಧಮ್ಮೋಪದೇಶದ ಸಾರಸರ್ವಸ್ವವೆಲ್ಲವನ್ನು ಈ ಕೆಳಗಿನಂತೆ ಸಾರುತ್ತದೆ:

1. ಧರ್ಮದ ಹೆಸರಿನಲ್ಲಿ ಎರಡು ಅತಿರೇಕದ ಆಚರಣೆಗಳನ್ನು ಮಾಡುತ್ತಾರೆ.
2. ಆರ್ಯ ಅಷ್ಟಾಂಗ ಮಾರ್ಗ ಎಂದು ಕರೆಯಲ್ಪಡುವ (ಮಜ್ಝಿಮ ಪಟಿಪದಾ) ಈ ಎರಡು ಅತಿರೇಕಗಳನ್ನು ಮೀರಿರುವಂತಹುದು. ದಿನನಿತ್ಯದ ಪರಮಾರ್ಥ ಸಾಧನೆಯಲ್ಲಿ ಎಲ್ಲ ಸಂದರ್ಭಗಳಲ್ಲಿ ಬುದ್ಧ ಮಾರ್ಗವನ್ನು ಅನುಸರಿಸಬಹುದು.



3. ಚತುರಾರ್ಯ ಸತ್ಯಗಳು ಬುದ್ಧ ಸಂಶೋಧನೆಯ ತಿರುಳು. ಮೊದಲ ಎರಡು ಸತ್ಯಗಳು ಬದುಕಿನ ನೈಜತೆಯನ್ನು ಮತ್ತು ಸುತ್ತಮುತ್ತಲಿನ ಪ್ರಪಂಚವನ್ನು ಒಳಗೊಂಡಿದೆ. ಇವು ಮೂಲತಃ ಅಪರಿಶುದ್ಧವೂ, ಅಭದ್ರವೂ ಮತ್ತು ಅತೃಪ್ತಿಕರವೂ ಆಗಿರುವುದರಿಂದ ಇವನ್ನು ಹಾದು ಮುಂದೆ ಹೋಗಬೇಕಾಗಿದೆ. ಮೂರನೇ ಸತ್ಯವು ನಿಬ್ಬಾಣವಾಗಿದ್ದು, ಎಲ್ಲ ಬೌದ್ಧರೂ ಇದರ ಸಿದ್ಧಿಗಾಗಿಯೇ ಶ್ರಮಿಸುತ್ತಾರೆ. ನಾಲ್ಕನೇ ಸತ್ಯವು ಅಷ್ಟಾಂಗಮಾರ್ಗವಾಗಿದ್ದು, ಅದು ಶಿಕ್ಷಣ, ವೃದ್ಧಿ ಮತ್ತು ಪರಿಶುದ್ಧತೆಯ ಮುಪ್ಪುರಿಯಾಗಿದೆ. ಅವು ಯಾವುವೆಂದರೆ:
   1) ಶೀಲವನ್ನು ನೀತಿ ಸಂಹಿತೆಗಳನ್ನು ಆಚರಿಸುವುದರ ಮೂಲಕ ಬೆಳೆಸಿಕೊಳ್ಳಬೇಕು;
   2) ಸಮಾಧಿ ಅಥವಾ ಏಕಾಗ್ರತೆಯನ್ನು ಧ್ಯಾನದ ಮೂಲಕ ಸಾಧಿಸಿಕೊಂಡು ಬ್ರಹ್ಮಲೋಕಗಳಲ್ಲಿರುವ ದೇವತೆಗಳು ಹೊಂದಿರುವ ಚಿತ್ರವನ್ನು ಹೊಂದಿ ಮನಸ್ಸಿಗೂ ಅತೀತವಾದ ಸ್ಥಿತಿಯಲ್ಲಿ ದಿವ್ಯಾನಂದವನ್ನು ಅನುಭವಿಸುವುದು.
   3) ಪ್ರಜ್ಞೆ : ವಿಪಸ್ಸನ ಧ್ಯಾನ ಸಾಧನೆಯ ಮೂಲಕ ಪ್ರಜ್ಞೆಯನ್ನು ಬೆಳೆಸಿಕೊಂಡು ಚತುರಾರ್ಯ ಸತ್ಯಗಳ ಅಂತರ್‌ದರ್ಶನ ಪಡೆದು ಚಿತ್ತಪರಿಶುದ್ಧಿಯನ್ನು ಮತ್ತು ಲೋಕ ಬಂಧನದಿಂದ ಮುಕ್ತಿಹೊಂದುವುದು.

ಚತುರಾರ್ಯ ಸತ್ಯಗಳನ್ನು ಸಂಕ್ಷಿಪ್ತದಲ್ಲಿ ಹೇಳುವುದಾರೆ: ದುಃಖ ಸತ್ಯ, ದುಃಖ ಸಮುದಯ ಸತ್ಯ, ದುಃಖ ನಿರೋಧ ಸತ್ಯ ಮತ್ತು ದುಃಖ ನಿರೋಧಗಮನ ಸತ್ಯ – ಮೇಲೆ ಹೇಳಿದ ಮೂರು ರೀತಿಯಲ್ಲಿ ಈ ಚತುರಾರ್ಯಸತ್ಯಗಳನ್ನು ಸಾಧಿಸಿದ್ದೇ ಆದರೆ ಅಂತಹ ಧ್ಯಾನಿಯು ನಿಬ್ಬಾಣವೇ ಗುರಿಯಾದ ಲೋಕೋತ್ತರ ಪಥ ಮತ್ತು ಮಗ್ಗಗಳಲ್ಲಿ ನೆಲೆಸುತ್ತಾನೆ. ನಿಬ್ಬಾಣವನ್ನು ಹೊಂದಿದ ಧ್ಯಾನಿಯು ಆರ್ಯನಾಗಿ ಮತ್ತೆ ಹುಟ್ಟಬರದ ಮುಕ್ತಿಯನ್ನು ಪಡೆಯುತ್ತಾನೆ.

ಬುದ್ಧರು ಧಮ್ಮಚಕ್ಕಪವತ್ತನ ಸುತ್ತವನ್ನು ಬೋಧಿಸಿದ ಸಂದರ್ಭದಲ್ಲಿ ತಾಪಸಿಯಾದ ಕೊಂಡಞ್ಞನನು ಅದನ್ನು ಅತ್ಯಂತ ಶ್ರದ್ಧೆಯಿಂದ ಆಲಿಸಿ ವಿಪಶ್ಶನವನ್ನು ವೃದ್ಧಿಸಿಕೊಂಡು ಚತುರಾರ್ಯ ಸತ್ಯಗಳ ದರ್ಶನವಾಗಿ ಮೊದಲನೇ ಲೋಕೋತ್ತರ ಫಲಸ್ಥಿತಿಯಾದ ಸೋತಾಪತ್ತಿ ಫಲವನ್ನು ಪಡೆದು ಬುದ್ಧನ ಜ್ಞಾನೋದಯ ಹೊಂದಿದ ಮೊದಲ ಶಿಷ್ಯನೂ ಮತ್ತು ಆರ್ಯ ಸಂಘದ ಮೊದಲ ಆರ್ಯ ಭಿಕ್ಖುವೂ ಆದನು. ಅದೇ ಸಂದರ್ಭದಲ್ಲೇ ಹದಿನೆಂಟು ಕೋಟಿ ಪಾರಮಾರ್ಥವಾಗಿ ಮುಂದುವರಿದ ಬ್ರಹ್ಮದೇವತೆಗಳೂ ಸೋತಾಪತ್ತಿ ಫಲವನ್ನು ಪಡೆದರು.

ಬುದ್ಧರು ತಮ್ಮ ಸರ್ವಜ್ಞತ್ವ ದೃಷ್ಟಿಯಿಂದ ಪೂಜ್ಯ ಕೊಂಡಞ್ಞರ ಮನಸ್ಸು ಲೋಕೋತ್ತರ ಸ್ಥಿತಿಗೆ ಏರಿದುದನ್ನು ಕಂಡು ಸಂತೋಷದಿಂದ ಹೀಗೆ ಉದ್ಗರಿಸಿದರು: "ಅಞ್ಞಾಸಿ ವತ ಭೋ ಕೊಂಡಞ್ಞೋ" (ಓ, ಕೊಂಡಞ್ಞನು ಸೋತಾಪತ್ತಿ ಫಲದಿಂದೊಡಗೂಡಿದ

ನಿಬ್ಬಾಣವನ್ನು ಪಡೆದಿದ್ದಾನೆ!) ಅಂದರೆ ಕೊಂಡಞ್ಞನು ಸ್ರೋತಾಪನ್ನನಾಗಿದ್ದಾನೆ. ಉನ್ನತ ಸ್ತರದಲ್ಲಿರುವ ಪೂಜ್ಯ ಕೊಂಡಞ್ಞನು ಭಿಕ್ಖು ಸಂನ್ಯಾಸವನ್ನು ನೀಡುವಂತೆ ಪ್ರಾರ್ಥಿಸಿದನು.

ಆಗ ಬುದ್ಧರು ಆಶೀರ್ವಾದ ಕೊಡುವ ರೀತಿಯಲ್ಲಿ ಬಲಗೈಯನ್ನು ಮುಂದಕ್ಕೆ ಚಾಚಿ ಹೀಗೆಂದರು: 'ಏಹಿ ಭಿಕ್ಖು ! ಸ್ವಾಕ್ಖಾತೊ ಧಮ್ಮೋ, ಚರ ಬ್ರಹ್ಮಚರಿಯಂ ಸಮ್ಮಾ ದುಃಕ್ಖಸ್ಸ ಅಂತಕಿರಿಯಾಯ – ಬಾ ಭಿಕ್ಖು!'. ಧಮ್ಮವನ್ನು ಪರಿಪೂರ್ಣವಾಗಿ ನಿರೂಪಿಸಲಾಗಿದೆ. ದುಃಖವನ್ನು ಅಂತ್ಯಗೊಳಿಸಲು ಬ್ರಹ್ಮಚರಿಯ ಜೀವನವನ್ನು ನಡೆಸು. ಸಮ್ಮಾಸಂಬುದ್ಧರು ಹೀಗೆ ಘೋಷಿಸಿದ ಮೇಲೆ ಯಾವ ಸಂನ್ಯಾಸಿ ವೇಷದಲ್ಲಿ ಪೂಜ್ಯ ಕೊಂಡಞ್ಞರಿದ್ದರೋ ಆ ರೂಪವು ಮಾಯವಾಗಿ ಭಿಕ್ಖುವಿಗೆ ಇರಬೇಕಾದ ಎಲ್ಲ ಸಂಗತಿಗಳಿಂದ ಹೊಸ ರೂಪ ತಾಳಿದರು. ಎಂಭತ್ತು ವರ್ಷ ವಯಸ್ಸಿನ ಕೊಂಡಞ್ಞರು ಅರವತ್ತು ವರ್ಷದ ಸಂನ್ಯಾಸ ಜೀವನದ ಥೇರರಾಗಿ (ಹಿರಿಯರಾಗಿ) ಕಂಡರು !

ಇದಾದ ನಂತರ ಭಗವಾನ್ ಬುದ್ಧರು ಇಸಿಪಟಣದ ಮಿಗದಾಯಿ ವನದಲ್ಲಿ ಮೂರು ತಿಂಗಳ ವರ್ಷಾವಾಸವನ್ನು ಆರಂಭಿಸಿದರು. ವರ್ಷಾವಾಸ ಆರಂಭವಾದ ಮಾರನೇದಿನ ಬುದ್ಧರು ಮತ್ತು ತಾಪಸಿ ವಪ್ಪನು ವನದಲ್ಲಿ ಉಳಿದು ಉಳಿದ ನಾಲ್ಕು ಜನರು ಭಿಕ್ಷೆಗಾಗಿ ಹೊರಹೋಗಿದ್ದರು. ಆನಂತರದಲ್ಲಿ ಆರೂ ಜನ ಒಟ್ಟಾಗಿ ಸೇರಿ ಭಿಕ್ಷಾನ್ನವನ್ನು ಭುಂಜಿಸಿದರು. ಈ ದಿನ (ಎರಡನೇ) ಬುದ್ಧರು ತಾಪಸಿ ವಪ್ಪನಿಗೆ ಗಂಭೀರವಾಗಿ ಧಮ್ಮೋಪದೇಶ ಮಾಡಿದರು. ವಪ್ಪನೂ ಕೂಡ ಭಗವಾನರಿಗೆ ಸಂನ್ಯಾಸ ದೀಕ್ಷೆಯನ್ನು ನೀಡುವಂತೆ ಕೋರಿದನು. ವಪ್ಪನೂ ಕೂಡ ಸೋತಾಪನ್ನನಾದನು. ಯಾವರೀತಿ ಭಗವಾನರು ಕೊಂಡಞ್ಞನಿಗೆ "ಏಹಿ ಭಿಕ್ಖು" ದೀಕ್ಷೆಯನ್ನು ನೀಡಿದರೋ ಹಾಗೆಯೇ ಬೋಧಿಸಿದರು. ಮಾರನೇದಿನ ಭಗವಾನರು ತಾಪಸಿ ಭದ್ದಿಯನಿಗೆ ಧಮ್ಮೋಪದೇಶ ನೀಡಲು ಅವನೂ ಸೋತಾಪನ್ನನಾಗಿ, ಭಗವಾನರು ಮಹಾನಾಮನಿಗೆ ಧಮ್ಮೋಪದೇಶ ನೀಡಲು ಅವನೂ ಸ್ರೋತಾಪನ್ನನಾಗಿ "ಏಹಿ ಭಿಕ್ಖು" ದೀಕ್ಷೆಯನ್ನು ಪಡೆದನು. ಐದನೇ ದಿನ ಅಸ್ಸಾಜಿ ಭಗವಾನರ ಬಳಿ ಉಳಿದು, ಉಳಿದ ನಾಲ್ಕುಜನ ಭಿಕ್ಷೆಗೆ ಹೋದರು. ಆನಂತರದಲ್ಲಿ ಅದನ್ನು ಅರೂ ಜನ ಭುಂಜಿಸಿದರು. ಭಗವಾನರು ಅಸ್ಸಾಜಿಗೆ ಗಂಭೀರವಾಗಿ ಧಮ್ಮೋಪದೇಶವನ್ನು ನೀಡಲು ಅವನು ಸ್ರೋತಾಪನ್ನನಾಗಿ "ಏಹಿ ಭಿಕ್ಖು" ಸಂನ್ಯಾಸ ದೀಕ್ಷೆಯನ್ನು ಪಡೆದನು.

ಹೀಗೆ ಆಷಾಢ ಮಾಸದ ಹುಣ್ಣಿಮೆಯ ಐದು ದಿನಗಳ ನಂತರ ಅಂದರೆ ಆಷಾಢ ಬಹುಳ ಷಷ್ಠಿಯಂದು ಬೌದ್ಧ ಧರ್ಮದ ಇತಿಹಾಸದಲ್ಲಿ ಭವ್ಯ ಅಧ್ಯಾಯವೊಂದು ಆರಂಭವಾಯಿತು. ಎಲ್ಲ ಐದುಜನ ಭಿಕ್ಷುಗಳು ಸೋತಾಪನ್ನರಾಗಿ ಮಗ್ಗ ಮತ್ತು ಫಲಗಳಲ್ಲಿ ಸ್ಥಾಪಿತರಾಗಿರುವುದರಿಂದ ಭಗವಾನ್ ಬುದ್ಧರು ತಮ್ಮ ಎರಡನೇ ಧಮ್ಮೋಪದೇಶ ಅನತ್ತಲಕ್ಖಣ ಸುತ್ತವನ್ನು (ಎಲ್ಲವೂ ಅನಾತ್ಮವಾದುದು) ಬೋಧಿಸಿದರು. ಈ ಮಹಾಸುತ್ತವನ್ನು ಬೋಧಿಸಿ ಅದು ಅಂತ್ಯವಾಗುವ ಹೊತ್ತಿಗೆ ಈ ಎಲ್ಲ ಐದು ಭಿಕ್ಖುಗಳು ಅರಹತರಾದರು. ಅರಹತ ಬೋಧಿಯನ್ನು ಹೊಂದಿದರು. ಅಂದರೆ ಸಮ್ಮಾಸಂಬುದ್ಧರ



ಬೋಧಿ ಜ್ಞಾನವನ್ನು ಪಡೆದ ಅರಹತ ಶಿಷ್ಯರಾದರು. ಧಮ್ಮಚಕ್ಕಪವತ್ತನ ಸುತ್ತವನ್ನು ಬೋಧಿಸಿದ ಐದನೇ ದಿನದ ನಂತರದ ದಿನ ಮಹತ್ವವನ್ನು ಹೊಂದಿದೆ. ಕಾರಣ ಬುದ್ಧರ ಅರಹತ ಶಿಷ್ಯರ ಆರ್ಯ ಸಂಘವು (ಅರಿಯ ಸಂಘ) ಅಸ್ತಿತ್ವಕ್ಕೆ ಬಂದಿತು. ಕರುಣಾಮಯಿ ಬುದ್ಧನ ತತ್ವವನ್ನು ಬೋಧಿ ಧಮ್ಮವನ್ನು ಪಸರಿಸುವ ಬೌದ್ಧ ತ್ರಿರತ್ನಗಳು ಉದಯವಾದವು.

ವೈಶಾಖ ಮಾಸದ ಹುಣ್ಣಿಮೆಯ ದಿನದಂದು ಬೋಧಿ ಜ್ಞಾನವನ್ನು ಪಡೆದುದರಿಂದ ದೇವಮಾನವರಿಗೂ ಗುರುವಾದ ಬುದ್ಧರತ್ನವು ಉದಯವಾಯಿತು. ಆಷಾಢ ಮಾಸದ ಹುಣ್ಣಿಮೆಯ ದಿನದಂದು ಧಮ್ಮಚಕ್ಕಪವತ್ತನ ಸುತ್ತವು ಬೋಧನೆಯಾದುದರಿಂದ ಧಮ್ಮರತ್ನವು ಉದಯವಾಯಿತು. ಎರಡನೇ ಧಮ್ಮೋಪದೇಶ ಅನತ್ತ ಲಕ್ಖಣ ಸುತ್ತವು ಬೋಧನೆಯಾದ ಮೇಲೆ ಐದುಜನ ಅರಹತ ಶಿಷ್ಯರು ಸೃಷ್ಟಿಯಾದುದರಿಂದ ಬುದ್ಧನ ಬೋಧಿಜ್ಞಾನ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುವ ಸಂಘರತ್ನವು ಉದಯವಾಯಿತು.

ಈ ಪಂಚವರ್ಗೀಯ ಭಿಕ್ಖುಗಳು ಮೊದಲ ವರ್ಷಾವಾಸವನ್ನು ಮುಗಿಸುವ ಹೊತ್ತಿಗೆ ಅಂದರೆ ಮೂರು ತಿಂಗಳ ಹೊತ್ತಿಗೆ ಅಕ್ಟೋಬರಿನ ಹುಣ್ಣಿಮೆಯ ವೇಳೆಗೆ ಭಗವಾನ್ ಬುದ್ಧರಿಗೆ ಅರವತ್ತುಜನ ಅರಹತ ಶಿಷ್ಯರಿದ್ದರು.

## ಆಯುಷ್ಮಂತ ಅಸ್ಸಾಜಿ

ತಪಸ್ವಿಗಳಾದ ಉಪತಿಸ್ಸ ಮತ್ತು ಕೋಲಿಟ ಎನ್ನುವವರು ಜಂಬೂದ್ವೀಪದ (ಭಾರತ) ಎಲ್ಲ ಮತೀಯರನ್ನು ಸೋಲಿಸಿ ತಮ್ಮ ಹುಟ್ಟೂರಿಗೆ ವಾಪಸ್ಸಾಗಿ ತಮ್ಮಲ್ಲೇ ಒಂದು ತೀರ್ಮಾನಕ್ಕೆ ಬಂದರು: "ಗೆಳೆಯ ಕೋಲಿಟ, ನಮ್ಮಿಬ್ಬರಲ್ಲಿ ಯಾರು ಮೊದಲು ಅಮರ ಸ್ಥಿತಿಗೆ ಬರುತ್ತಾರೋ ಅವರು ಇನ್ನೊಬ್ಬರಿಗೆ ಅದನ್ನು ತಿಳಿಸಬೇಕು ಎಂಬ ಒಡಂಬಡಿಕೆಯಲ್ಲಿದ್ದರು. ಭಗವಾನರು ಆ ಸಂದರ್ಭದಲ್ಲಿ ರಾಜಗಹಕ್ಕೆ ಬಂದು ವೇಣುವನ ವಿಹಾರವನ್ನು ಉಡುಗೊರೆಯಾಗಿ ಪಡೆದು ಅಲ್ಲಿ ವಾಸಿಸುತ್ತಿದ್ದರು. ಅದಕ್ಕೂ ಮುನ್ನ ಭಗವಾನರು ತಮ್ಮ ಅರವತ್ತು ಜನ ಅರಹತ ಶಿಷ್ಯರಿಗೆ ತ್ರಿರತ್ನಗಳ ಹಿರಿಮೆಯನ್ನು ಪಸರಿಸಲು ಎಲ್ಲೆಡೆ ಕಳಿಸಿದ್ದರು. ಇಂತಹವರಲ್ಲಿ ಥೇರವಾದ ಅಸ್ಸಾಜಿ ಸುತ್ತಾಡುತ್ತ ರಾಜಗಹಕ್ಕೆ ಬಂದರು. ಒಂದುದಿನ ಅವರು ಭಿಕ್ಷಾಟನೆಗೆ ಹೋದರು.

ಆ ಸಮಯದಲ್ಲಿ ಪರಿವ್ರಾಜಕನಾದ ತಪಸ್ವಿ ಉಪತಿಸ್ಸನು ತನ್ನ ಊಟವನ್ನು ಮೊದಲೇ ಮುಗಿಸಿ ಪರಿವ್ರಾಜಕರ ಆಶ್ರಮದತ್ತ ತೆರಳುತ್ತಿದ್ದಾಗ ಥೇರರಾದ ಅಸ್ಸಾಜಿಯನ್ನು ಕಂಡು ಯೋಚಿಸಿದ: "ನಾನು ಇಂತಹ ಸಂನ್ಯಾಸಿಯನ್ನು ಹಿಂದೆ ಎಂದೂ ನೋಡಿರಲಿಲ್ಲ. ಈತನು ಈ ಪ್ರಪಂಚದ ಒಬ್ಬ ಪವಿತ್ರನಾದ ಅರಹತನೇ ಇರಬೇಕು ಅಥವಾ ಅರಹತ ಮಾರ್ಗದಲ್ಲಿರುವ ವ್ಯಕ್ತಿಯೇ ಇರಬೇಕು. ನಾನು ಇವರನ್ನು ಮಾತನಾಡಿಸಿ ಹೀಗೇಕೆ ಕೇಳಬಾರದು: "ನೀವು ಯಾರ ಮಾರ್ಗದರ್ಶನದಿಂದಾಗಿ ಹೀಗೆ ಅನಗಾರಿಕರಾಗಿರುವಿರಿ?

ನಿಮ್ಮ ಪಾರಮಾರ್ಥಿಕ ಗುರು ಯಾರು? ನೀವು ಯಾರ ಬೋಧನೆಯನ್ನು ಪಾಲಿಸುತ್ತಿದ್ದೀರಿ?" ಈ ರೀತಿಯ ಪ್ರಶ್ನೆಗಳನ್ನು ಹಾಕುವುದಕ್ಕೆ ಇದು ಸರಿಯಾದ ಸಮಯವಲ್ಲ. ಈ ಆಸುಪಾಸಿನಲ್ಲಿ ಈತ ಭಿಕ್ಷಾನಕ್ಕೆ ಹೋಗುತ್ತಿದ್ದಾನೆ ಎಂದು ಆಲೋಚಿಸಿ ಆತನು ಹೋಗುವ ಜಾಡಿನಲ್ಲೇ ಯಾಕೆ ಹೋಗಬಾರದೆಂದುಕೊಂಡನು.

ಥೇರರು ತಮ್ಮ ಭಿಕ್ಷಾಟನೆಯನ್ನು ಮುಗಿಸಿ ಇನ್ನೊಂದು ದಿಕ್ಕಿನತ್ತ ಹೋಗುವುದನ್ನು ನೋಡಿ ಅವರನ್ನೇ ಹಿಂಬಾಲಿಸಿದನು. ಥೇರರು ಒಂದುಕಡೆ ಕುಳಿತುಕೊಳ್ಳಲು ಸಿದ್ಧರಾಗುತ್ತಿರುವುದನ್ನು ಕಂಡು ಉಪತಿಸ್ಸನು ತನ್ನ ತಾಪಸಿ ಆಸನವನ್ನು ನೆಲದಮೇಲೆ ಹಾಸಿ ಕುಳಿತುಕೊಳ್ಳುವಂತೆ ವಿನಂತಿಸಿದನು. ಥೇರರು ತಮ್ಮ ಊಟವನ್ನು ಮುಗಿಸಿದ ಮೇಲೆ ಉಪತಿಸ್ಸನು ತನ್ನ ಬಳಿ ಇದ್ದ ನೀರನ್ನು ಕೊಟ್ಟನು. ಒಬ್ಬ ಶಿಷ್ಯನು ತನ್ನ ಗುರುವಿಗೆ ಸೇವೆ ಮಾಡುವ ರೀತಿಯಲ್ಲಿ ಉಪತಿಸ್ಸನು ಥೇರರಿಗೆ ಗೌರವವನ್ನು ಸೂಚಿಸಿದನು. ಆನಂತರದಲ್ಲಿ ಉಪತಿಸ್ಸನು ಅವರಿಗೆ "ಪೂಜ್ಯರೆ, ನಿಮ್ಮ ಇಂದ್ರಿಯಗಳು ಪ್ರಸನ್ನವಾಗಿವೆ. ತಾವು ಯಾರ ಅಡಿಯಲ್ಲಿ ಭಿಕ್ಖುವಾದಿರಿ? ನಿಮ್ಮ ಪಾರಮಾರ್ಥಿಕ ಗುರು ಯಾರು? ಮತ್ತು ಯಾರ ಬೋಧನೆಯನ್ನು ನೀವು ಪಾಲಿಸುತ್ತಿದ್ದೀರಿ?" ಎಂದು ಕೇಳಿದನು.

ಥೇರ ಅಸ್ಸಾಜಿ ಹೀಗೆ ಯೋಚಿಸಿದರು: "ಈ ಪರಿವ್ರಾಜಕ ಸಂನ್ಯಾಸಿಗಳು ನಮ್ಮ ಧಮ್ಮವನ್ನು ವಿರೋಧಿಸುವವರು. ಈ ಧಮ್ಮದ ಘನತೆಯನ್ನು ಅವರಿಗೆ ಅರ್ಥವಾಗುವ ರೀತಿಯಲ್ಲಿ ಹೇಳುತ್ತೇನೆ ಮತ್ತು ತಾನು ಈ ಧರ್ಮಕ್ಕೆ ಹೊಸಬನೆಂದು ಅವರಿಗೆ ತಿಳಿಯಪಡಿಸಲು ಹೀಗೆ ಹೇಳಿದರು: "ಗೆಳೆಯ, ನಾನು ನಿಜವಾಗಿಯೂ ಹೊಸಬ. ಈ ಧಮ್ಮ ಮತ್ತು ವಿನಯದಲ್ಲಿ ಇತ್ತೀಚೆಗಷ್ಟೇ ದೀಕ್ಷೆ ಪಡೆದವನು. ಧಮ್ಮವನ್ನು ತುಂಬ ವಿವರವಾಗಿ ಹೇಳಲು ನನಗೆ ಸಾಧ್ಯವಿಲ್ಲ."

ಈ ಪರಿವ್ರಾಜಕ ಉಪತಿಸ್ಸನು 'ನಾನು ಉಪತಿಸ್ಸ, ನಿಮ್ಮ ಶಕ್ತ್ಯಾನುಸಾರ ಚಿಕ್ಕದಾಗಿಯಾದರೂ ಹೇಳಿ, ದೊಡ್ಡದಾಗಿಯಾದರೂ ಹೇಳಿ. ಅದನ್ನು ನೂರು ಸಾವಿರ ವಿಧದಲ್ಲಿ ಅರ್ಥೈಸಿಕೊಳ್ಳುವುದು ನನ್ನ ಕೆಲಸ' ಎಂದು ಯೋಚಿಸಿದ ಉಪತಿಸ್ಸನು ಹೀಗೆ ಹೇಳಿದ: "ಚಿಕ್ಕದಾಗಿಯಾಗಲಿ, ದೊಡ್ಡದಾಗಿಯಾಗಲಿ ನನಗೆ ಅದರ ತಿರುಳನ್ನು ದಯಮಾಡಿ ಹೇಳಿ. ನನಗೆ ಬೇಕಿರುವುದು ಅಂತರಾರ್ಥ. ಬಹಳಷ್ಟು ಪದಗಳನ್ನು ತೆಗೆದುಕೊಂಡು ನಾನೇನು ಮಾಡಲಿ."

ಇದಕ್ಕೆ ಉತ್ತರವಾಗಿ ಥೇರರು ಕೆಳಗಿನ ಗಾಥೆಯ ಮೂಲಕ ಉತ್ತರಿಸಿದರು:

"ಏನೆಲ್ಲಾ ಸಂಗತಿಗಳು ಇವೆಯೋ ಅವೆಲ್ಲಾ ಕಾರಣದಿಂದಲೇ ಉದಯಿಸುತ್ತವೆ. ತಥಾಗತನು ಆ ಕಾರಣವನ್ನು ಬಯಲು ಮಾಡಿದನು."

ಪರಿವ್ರಾಜಕನು ಈ ಮೊದಲ ಗಾಥೆಯನ್ನು ಕೇಳಿದ ಕೂಡಲೇ ಇದರ ಅರ್ಥವನ್ನು ಸಾವಿರ ವಿಧದಲ್ಲಿ ಗ್ರಹಿಸಿ ಸೋತಾಪತ್ತಿ ಫಲವನ್ನು ಪಡೆದನು. ಯಾವಾಗ ಇವನು ಸೋತಾಪನ್ನನಾದನೋ, ಥೇರನು ಈ ಎರಡನೇ ಗಾಥೆಯನ್ನು ಹೇಳಿದನು:



"ಆ ಕಾರಣದ ನಿರೋಧವನ್ನು ಮಹಾ ಸಮಣನು ಸಾರಿದನು."

ಸೋತಾಪನ್ನನಾದ ಮೇಲೆ ಮುಂದಿನ ಹಂತಗಳಿಗೆ ಹೋಗುವ ಮುನ್ನ 'ಇದಕ್ಕೇನೋ ಕಾರಣವಿರಬೇಕು' ಎಂದುಕೊಂಡನು. ಆದ್ದರಿಂದ ಥೇರರಿಗೆ ಹೀಗೆ ಹೇಳಿದನು: "ಪೂಜ್ಯರೇ, ಧಮ್ಮವನ್ನು ಇನ್ನೂ ಸರಳ ಮಾಡಬೇಡಿ, ನನಗಿಷ್ಟು ಸಾಕು. ನಮ್ಮ ಪಾರಮಾರ್ಥಿಕ ಗುರು ಎಲ್ಲಿ ವಾಸಿಸುತ್ತಿದ್ದಾರೆ?"

"ವೇಣುವನದಲ್ಲಿ, ಗೆಳೆಯ."

"ಸರಿ ಪೂಜ್ಯರೆ, ತಾವು ಮುಂದೆ ಹೋಗುತ್ತಿರಿ, ನನಗೊಬ್ಬ ಗೆಳೆಯನಿದ್ದಾನೆ. ನಮ್ಮಲ್ಲಿ ಈ ರೀತಿಯ ಒಡಂಬಡಿಕೆಯಾಗಿದೆ: 'ಯಾರು ಅಮರತ್ವವನ್ನು ಪಡೆಯುತ್ತಾರೋ, ಅವರು ಅದನ್ನು ಇನ್ನೊಬ್ಬರಿಗೆ ತಿಳಿಸಬೇಕು'. ಈ ವಾಗ್ದಾನದ ಪೂರೈಕೆಗಾಗಿ ನಾನು ನನ್ನ ಗೆಳೆಯನನ್ನು ಕರೆತರುತ್ತೇನೆ ಮತ್ತು ಧಮ್ಮ ಮಾರ್ಗವನ್ನನುಸರಿಸಿ ನಾವಿಬ್ಬರೂ ಭಗವಾನರ ಬಳಿ ಬರುತೇವೆ. ಹೀಗೆ ಥೇರ ಅಸ್ಸಾಜಿಯವರಿಗೆ ಹೇಳಿ ಐದುಬಾರಿ ಕಾಲಿಗೆ ಅಡ್ಡಬಿದ್ದು, ಗೌರವದಿಂದ ಮೂರುಸಾರಿ ಪ್ರದಕ್ಷಿಣೆ ಮಾಡಿದನು. ಹೀಗೆ ಥೇರ ಅಸ್ಸಾಜಿಯವರನ್ನು ದರ್ಶಿಸಿಯಾದ ಮೇಲೆ ಅವನು ಆಶ್ರಮದತ್ತ ಹೊರಟನು.

ಪರಿವ್ರಾಜಕ ಕೋಲಿಟನು ಉಪತಿಸ್ಸನು ಬರುತ್ತಿರುವುದನ್ನು ದೂರದಿಂದಲೇ ನೋಡಿ ಹೀಗೆ ಯೋಚಿಸಿದನು: 'ನನ್ನ ಗೆಳೆಯನ ಮುಖ ಎಂದಿನಂತೆ ಇಲ್ಲ. ಅವನು ಅಮರತ್ವವನ್ನು ಪಡೆದಿರಬಹುದು'. ಆದ್ದರಿಂದ ಅಮರತ್ವವನ್ನು ಪಡೆದಿರುವಿಯೇನು ಎಂದು ಅವನಿಗೆ ಕೇಳಲು ಆಗ ಉಪತಿಸ್ಸನು "ಹೌದು ಸೋದರ, ನಾನು ಅಮರತ್ವವನ್ನು ಪಡೆದಿದ್ದೇನೆ" ಎಂದು ಪೂಜ್ಯ ಅಸ್ಸಾಜಿಯವರು ಹೇಳಿದ ಗಾಥೆಯನ್ನು ಹೇಳಿದನು.

ಗಾಥೆ ಮುಕ್ತಾಯಗೊಳಿಸುವ ಹೊತ್ತಿಗೆ ಕೋಲಿಟನು ಸೋತಾಪತ್ತಿ ಫಲವನ್ನು ಪಡೆದನು. "ಗೆಳೆಯ, ನಮ್ಮ ಪಾರಮಾರ್ಥಿಕ ಗುರು ಎಲ್ಲಿದ್ದಾರೆ?" ಎಂದು ಉಪತಿಸ್ಸನಿಗೆ ಕೇಳಿದನು. "ಸೋದರ, ನಮ್ಮ ಗುರುವು ವೇಣುವನದಲ್ಲಿದ್ದಾರೆಂದು ಥೇರ ಅಸ್ಸಾಜಿ ಹೇಳಿದರು" ಎಂದನು. "ಹಾಗಾದರೆ, ಸೋದರ ನಾವು ನಮ್ಮ ಪಾರಮಾರ್ಥಿಕ ಗುರುವನ್ನು ನೋಡಲು ಹೋಗೋಣ" ಎಂದು ಕೋಲಿಟನು ಹೇಳಿದನು.

ಒಬ್ಬ ಗುರುವನ್ನು ಅತ್ಯಂತ ಗೌರವದಿಂದ ಕಾಣುವುದು ಥೇರ ಉಪತಿಸ್ಸನ ಗುಣ. ಆದ್ದರಿಂದ ಗೆಳೆಯನಿಗೆ ಹೀಗೆ ಹೇಳಿದನು: "ಸೋದರ, ನಾವಿಬ್ಬರೂ ಅಮರತ್ವವನ್ನು ಸಾಧಿಸಿಕೊಂಡಿದ್ದೇವೆ. ನಮ್ಮ ಈ ಸಾಕ್ಷಾತ್ಕಾರದ ಬಗ್ಗೆ ನಮ್ಮ ಗುರುವಾದ ತಾಪಸಿ ಸಂಜಯನಿಗೂ ತಿಳಿಸೋಣ. ಅವರು ನಮ್ಮನ್ನು ಅರ್ಥಮಾಡಿಕೊಂಡರೆ ಅವರು ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳಬಹುದು, ಇಲ್ಲದಿದ್ದರೆ ಕೊನೇಪಕ್ಷ ನಮ್ಮ ಮೇಲೆ ನಂಬಿಕೆ ಇರುವುದರಿಂದ ನಮ್ಮೊಡನೆ ಭಗವಾನರ ಬಳಿ ಬರಬಹುದು. ಭಗವಾನ್ ಬುದ್ಧರ ಧಮ್ಮೋಪದೇಶವನ್ನು ಕೇಳಿದ ಮೇಲೆ ಅವರು ಖಂಡಿತ ಸೋತಾಪತ್ತಿ ಮಗ್ಗ ಮತ್ತು ಫಲಗಳನ್ನು ಹೊಂದಬಹುದು". ಹೀಗೆ ಇಬ್ಬರೂ ತಮ್ಮ ಗುರು ಸಂಜಯನ ಬಳಿ ಹೋದರು.

ಸಂಜಯ ಇವರಿಬ್ಬರನ್ನೂ ನೋಡಿದ ತಕ್ಷಣ "ಆತ್ಮೀಯರೆ, ಅಮರತ್ವದ ಹಾದಿಯನ್ನು ತೋರಿಸುವ ಮಹಾತ್ಮರು ಯಾರಾದರು ಸಿಕ್ಕಿದರೇನು?" ಎಂದು ಕೇಳಿದನು.

"ಹೌದು ಪೂಜ್ಯರೆ, ನಮಗೆ ದೊರೆತಿದ್ದಾರೆ, ಸಮ್ಮಾಸಂಬುದ್ಧರು ಈ ಜಗತ್ತಿನಲ್ಲಿ ಉದಯಿಸಿದ್ದಾರೆ, ಸಂಬೋಧಿಯನ್ನು ಬೋಧಿಸುವ ಆರ್ಯ ಧಮ್ಮವು ಉದಯವಾಗಿದೆ. ಬುದ್ಧನ ಅರಹತ ಶಿಷ್ಯರಿರುವ ಪವಿತ್ರ ಸಂಘವು ಉದಯವಾಗಿದೆ. ಅಸತ್ಯಕ್ಕೆ ಅಂಟಿಕೊಂಡಿರುವುದರಲ್ಲಿ ನಿಜವಾಗಿಯೂ ಅರ್ಥವಿಲ್ಲ. ಬನ್ನಿ ಗುರುಗಳೇ, ಬುದ್ಧರನ್ನು ನೋಡಲು ಹೋಗೋಣ ಬನ್ನಿ."

"ನೀವು ಹೋಗಿ, ನಾನು ಬರಲು ಸಾಧ್ಯವಿಲ್ಲ."

"ಯಾವ ಕಾರಣಕ್ಕಾಗಿ?"

"ಬಹಳ ಕಾಲದಿಂದ ನಾನು ಸಾವಿರಾರು ಜನರ ಗುರುವೆಂದು ಗುರುತಿಸಲ್ಪಟ್ಟಿದ್ದೇನೆ. ನಾನು ಮತ್ತೆ ಶಿಷ್ಯನಾಗುವುದೆಂದರೆ ಬಿಸಾಡಿದ ಹಳೆಯ ಗಡಿಗೆಯಂತಾಗುತ್ತೇನೆ. ಶಿಷ್ಯನಂತೆ ಬದುಕಲು ನನಗೆ ಸಾಧ್ಯವಿಲ್ಲ."

"ನೀವು ಈ ತರಹ ಎಲ್ಲಾ ಹೇಳಬೇಡಿ" ಎಂದು ಇಬ್ಬರೂ ಶಿಷ್ಯರು ವಾದಿಸಿದರು.

"ನೀವೇನು ಯೋಚಿಸಬೇಡಿ, ಆದರೆ ನಾನಂತೂ ಬರುವುದಿಲ್ಲ" ಎಂದು ಸಂಜಯನು ಹೇಳಿದನು. ಆಗ ಅವರಿಬ್ಬರೂ: "ಗುರುಗಳೇ, ಬುದ್ಧನ ಉದಯದಿಂದಾಗಿ ಈ ಜಗತ್ತಿನಲ್ಲಿ ಜನ ತಮ್ಮ ಕೈಗಳಲ್ಲಿ ಗಂಧ, ಹೂವು, ಮಾಲೆ ಮುಂತಾದವುಗಳನ್ನು ಹಿಡಿದು ಬುದ್ಧರನ್ನು ಪೂಜಿಸಲು ಹೋಗುತ್ತಿದ್ದಾರೆ. ನಾವಿಬ್ಬರೂ ಹೋಗುತ್ತಿದ್ದೇವೆ, ನೀವೇನು ಮಾಡಬೇಕೆಂದಿದ್ದೀರಿ?"

"ನನ್ನ ಪ್ರಿಯರೆ, ಈ ಜಗತ್ತಿನಲ್ಲಿ ಯಾರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ, ಮೂರ್ಖರೋ ಅಥವಾ ಬುದ್ಧಿವಂತರೋ?" "ಗುರುಗಳೇ, ಮೂರ್ಖರೇ ಜಾಸ್ತಿ, ಬುದ್ಧಿವಂತರು ಕೆಲವರು ಮಾತ್ರವೇ" ಎಂದು ಉತ್ತರಿಸಿದರು.

"ಹಾಗಾದರೆ ಬುದ್ಧಿವಂತರು ಬುದ್ಧಿವಂತ ಗೌತಮ ಬುದ್ಧರನ್ನು ಹಿಂಬಾಲಿಸಲಿ, ಮೂರ್ಖರು ಮೂರ್ಖನಾದ ನನ್ನನ್ನು ಹಿಂಬಾಲಿಸಲಿ. ನೀವು ಹೋಗಿ, ನಾನಂತೂ ಬರುವುದಿಲ್ಲ" ಎಂದು ಸಂಜಯನು ಹೇಳಿದನು.

"ಆಯ್ತು, ಹಾಗೆಯೇ ಆಗಲಿ" ಎಂದು ಅವರು ಹೊರಟರು. ಹೀಗೆ ಇವರ ನಿರ್ಗಮನದಿಂದ ಸಂಜಯನ ಅನುಯಾಯಿಗಳು ಒಡೆದುಹೋದರು. ಕೂಡಲೇ ಸಂಜಯನ ಆಶ್ರಮವು ಖಾಲಿಯಾಯಿತು, ಅವನು ರಕ್ತ ವಾಂತಿ ಮಾಡಿಕೊಂಡನು. ಐದುನೂರು ಜನ ಪರಿವ್ರಾಜಕ ಸಂನ್ಯಾಸಿಗಳಲ್ಲಿ ಇನ್ನೂರೈವತ್ತು ಜನ ಶಿಷ್ಯರಾಗಿ ವೇಣುವನಕ್ಕೆ ಹೊರಟರು.



ಆಗ ಭಗವಾನ್ ಬುದ್ಧರು ದೊಡ್ಡ ಭಕ್ತಸಮೂಹಕ್ಕೆ ಧಮ್ಮವನ್ನು ಉಪದೇಶಿಸುತ್ತಿದ್ದರು. ದೂರದಿಂದ ಬರುತ್ತಿರುವ ಇವರನ್ನು ನೋಡಿ ಭಗವಾನರು ಭಿಕ್ಖುಗಳಿಗೆ ಹೇಳಿದರು: "ಭಿಕ್ಖುಗಳೇ ನೋಡಿ, ಉಪತಿಸ್ಸ ಮತ್ತು ಕೋಲಿಟ ಎಂಬ ಇಬ್ಬರು ಸ್ನೇಹಿತರು ಬರುತ್ತಿದ್ದಾರೆ. ಅವರಿಬ್ಬರೂ ನನ್ನ ಪ್ರಮುಖ ಶಿಷ್ಯದ್ವಯರಾಗುತ್ತಾರೆ."

ಭಗವಾನರಿಗೆ ಭಕ್ತಿ ಗೌರವಗಳಿಂದ ವಂದಿಸಿ ಒಂದೆಡೆ ಕುಳಿತು "ಪರಮಪೂಜ್ಯರೆ, ನಾವು ಭಗವಾನರಿಮದ ಸಾಮಣೇರ ಮತ್ತು ಉಪಸಂಪದ ದೀಕ್ಷೆಯನ್ನು ಪಡೆಯಬಹುದೆ?" ಎಂದರು.

"ಬನ್ನಿ ಭಿಕ್ಖುಗಳೆ, ಧಮ್ಮವನ್ನು ಸರಿಯಾಗಿ ಪ್ರತಿಪಾದಿಸಲಾಗಿದೆ. ಎಲ್ಲ ದುಃಖಗಳನ್ನು ಅಂತ್ಯಗೊಳಿಸಲು ಪವಿತ್ರ ಜೀವನವನ್ನು ನಡೆಸಿರಿ" ಎಂದು ಬುದ್ಧರು ಹೇಳಿದರು.

"ಏಹಿ ಭಿಕ್ಖು" ಎನ್ನುವ ಅಪರೂಪವಾದ ಉಪಸಂಪದವನ್ನು ನೀಡಲು ಬುದ್ಧರ ಅಸಾಮಾನ್ಯ ಶಕ್ತಿಯಿಂದ ಅವರಿಗೆ ಪಿಂಡಪಾತ್ರೆ ಮತ್ತು ಚೀವರಗಳು ಬಂದವು ಮತ್ತು ಅವರು ಹಲವಾರು ವರ್ಷಗಳ ಹಿರಿಯ ಸಂನ್ಯಾಸಿಗಳಂತೆ ಕಂಡರು.

## ಪ್ರಮುಖ ಶಿಷ್ಯರಾದ ಆಯುಷ್ಮಂತ ಸಾರಿಪುತ್ತ, ಮಹಾಮೊಗ್ಗಲ್ಲಾನ

ಆಯುಷ್ಮಂತರಾದ ಸಾರಿಪುತ್ತ ಮತ್ತು ಮೊಗ್ಗಲ್ಲಾನರ ಕಥೆಯೇ ಚೇತೋಹಾರಿಯಾದುದು. ಅವರು ಬಾಲ್ಯದಿಂದಲೂ ಒಟ್ಟಿಗೆ ಬೆಳೆದವರು. ಇವರಿಬ್ಬರೂ ರಾಜಧಾನಿ ರಾಜಗೃಹ ನಗರದ ಬಳಿಯ ಉಪತಿಸ್ಸ ಮತ್ತು ಕೋಲಿಟ ಎಂಬ ಬ್ರಾಹ್ಮಣ ಗ್ರಾಮಗಳಲ್ಲಿ ಹುಟ್ಟಿ ಬೆಳೆದವರು.

ಏಳು ತಲೆಮಾರಿನವರೆಗೆ ಈ ಎರಡೂ ಕುಟುಂಬಗಳು ನಿಕಟವಾಗಿ ಸಂಬಂಧ ಹೊಂದಿರುವಂತಹವು. ಯಾವ ದಿನ ಉಪತಿಸ್ಸ ಗ್ರಾಮದ ಬ್ರಾಹ್ಮಣ ಸ್ತ್ರೀ ರೂಪಸಾರಿ ಗರ್ಭ ಧರಿಸಿದಳೋ ಅದೇದಿನ ಕೋಲಿಟ ಗ್ರಾಮದ ಬ್ರಾಹ್ಮಣ ಸ್ತ್ರೀ ಮೊಗ್ಗಲಿಯಾ ಗರ್ಭ ಧರಿಸಿದರಳು. ಕಾಲಾಂತರದಲ್ಲಿ ಇಬ್ಬರೂ ಗಂಡು ಮಕ್ಕಳಿಗೆ ಜನ್ಮವಿತ್ತರು. ರೂಪಸಾರಿಯ ಮಗನಿಗೆ ಉಪತಿಸ್ಸನೆಂದು ಇನ್ನೊಬ್ಬನಿಗೆ ಕೋಲಿಟನೆಂದೂ ಹೆಸರಿಟ್ಟರು. ಮಕ್ಕಳಿಬ್ಬರೂ ಬೆಳೆಯುತ್ತಿದ್ದಂತೆ ಎಲ್ಲ ವಿದ್ಯೆಗಳಲ್ಲಿ ಪರಿಣತಿಯನ್ನು ಪಡೆದರು.

ಪ್ರತಿ ವರ್ಷವೂ ರಾಜಗೃಹ ನಗರದಲ್ಲಿ ಗಿರಗ್ಗ ಸಮಜ್ಜ (ಬೆಟ್ಟದಲ್ಲಿ ಹಬ್ಬ) ಎಂಬ ಹಬ್ಬವನ್ನು ಆಚರಿಸುತ್ತಾರೆ. ಈ ಇಬ್ಬರೂ ಮಕ್ಕಳು ಈ ಹಬ್ಬದ ಎಲ್ಲಾ ಮನರಂಜನೆ ತೆಗೆದುಕೊಂಡರು. ಅಂದರೆ ಹಾಸ್ಯವನ್ನು ನೋಡಿ ನಗುವುದು, ದುರಂತಗಳನ್ನು ನೋಡಿ ದುಃಖಿಸುವುದು ಮತ್ತು ಯಾವಾಗ ಯಾವಾಗ ಕೇಕೆಗಳನ್ನು ಹಾಕಬೇಕೋ ಹಾಕಿ ಉತ್ಸಾಹಿಸುವುದು ಮಾಡುತ್ತಿದ್ದರು. ಹೀಗೆ ಅವರ ಹಬ್ಬಗಳನ್ನು ಆಚರಿಸುತ್ತಿರಲು ಬುದ್ಧಿ ಪಕ್ವವಾಗುತ್ತಿದ್ದಂತೆ ನಗು, ದುಃಖ, ಉತ್ಸಾಹ ಎಲ್ಲಾ ನಿಂತುಹೋದವು.

ಇಬ್ಬರೂ ಒಂದುದಿನ ಏಕಪ್ರಕಾರವಾಗಿ ಯೋಚಿಸಿದ್ದರು: "ಇಲ್ಲಿ ನೋಡುವಂತದ್ದು ಏನಿದೆ? ನೂರು ವರ್ಷ ಕಳೆದರೆ ಈ ಎಲ್ಲ ಮೋಜು ಕೊಡುವವರೆಲ್ಲ ಇಲ್ಲವಾಗುತ್ತಾರೆ.

ಆದ್ದರಿಂದ ನಾವು ಬಿಡುಗಡೆಯ ಮಾರ್ಗಕ್ಕಾಗಿ ಸಾಧನೆ ಮಾಡಬೇಕಾಗುತ್ತದೆ". ಇವರು ಈ ರೀತಿಯ ಆಲೋಚನೆಯಲ್ಲೇ ನಿಮಗ್ನರಾದರು. ಆಗ ಕೋಲಿಟನು ಉಪತಿಸ್ಸನಿಗೆ ಹೀಗೆ ಹೇಳಿದನು: "ಗೆಳೆಯ ಉಪತಿಸ್ಸ, ಯಾವಾಗಲೂ ಇರುವಂತೆ ಇಂದು ನೀನೇಕೆ ಹರ್ಷಚಿತ್ತನಾಗಿಲ್ಲ. ಏನೋ ದುಃಖದಿಂದ ನರಳುತ್ತಿರುವೆಯಲ್ಲ; ಏನನ್ನು ಯೋಚಿಸುತ್ತಿರುವೆ?"

"ಗೆಳೆಯ ಕೋಲಿಟ, ನಾನು ಹೀಗೆ ಯೋಚಿಸುತ್ತೇನೆ: 'ಈ ಮೋಜುಗಳನ್ನು ನೋಡುವುದರಲ್ಲಿ ಯಾವುದೇ ಅರ್ಥವಿಲ್ಲ. ಇದರ ಬದಲು ನಮಗೆ ನಾವೇ ಬಿಡುಗಡೆಯನ್ನು ಕಂಡುಕೊಳ್ಳಬೇಕಾಗಿದೆ." ಆನಂತರ ಅವನು "ನೀನು ಯಾಕೆ ಅಸಂತುಷ್ಟನಾಗಿ ಕಾಣುತ್ತಿರುವೆಯಲ್ಲ?" ಎಂದು ಕೇಳಿದ. ಅದಕ್ಕೆ ಕೋಲಿಟ ಉತ್ತರಿಸಿದ: "ನಾನೂ ನಿನ್ನಂತೆಯೇ ಯೋಚಿಸುತ್ತಿದ್ದೇನೆ."

ಇಬ್ಬರೂ ಒಂದೇ ನಿಟ್ಟಿನಲ್ಲಿ ಚಿಂತಿಸುತ್ತಿರುವುದನ್ನು ಅರಿತು ಉಪತಿಸ್ಸನು ಹೇಳಿದ: "ನಾವಿಬ್ಬರೂ ಸರಿಯಾದ ದಿಕ್ಕಿನಲ್ಲಿಯೇ ಚಿಂತನೆ ಮಾಡುತ್ತಿದ್ದೇವೆ. ಆದ್ದರಿಂದ ನಾವಿಬ್ಬರೂ ಗೃಹಸ್ತ ಬದುಕನ್ನು ತೊರೆದು ಬ್ರಹ್ಮಚರಿಯ ಜೀವನವನ್ನು ನಡೆಸುತ್ತಾ ಮುಕ್ತಿ ಮಾರ್ಗವನ್ನು ಹಿಡಿಯೋಣವೇ?"

ಹೀಗೆ ತಮ್ಮ ಮನೆ, ರಥ, ಒಡವೆ ಮುಂತಾದ ಮೌಲ್ಯದ ಸಂಗತಿಗಳನ್ನು ತೊರೆದು ತಮ್ಮಲ್ಲಿದ್ದ ಅರ್ಧದಷ್ಟು ಸೇವಕರನ್ನು ತೆಗೆದುಹಾಕಿ ಉಳಿದರ್ಧದಷ್ಟನ್ನು ಉಳಿಸಿಕೊಂಡು ರಾಜಗೃಹ ನಗರದ ಬಳಿ ಇದ್ದು, ಸಂಜಯನ ಬಳಿ ಹೋಗಿ ಶಿಷ್ಯರಾದರು. ಸ್ವಲ್ಪ ಕಾಲದಲ್ಲೇ ಇಬ್ಬರೂ ಸಂಜಯನ ಧರ್ಮೋಪದೇಶವನ್ನು ಅರಗಿಸಿಕೊಂಡರು; ನಿಬ್ಬಾಣದ ಮಾರ್ಗ ಸಿಗಲಿಲ್ಲವಾದ್ದರಿಂದ ಉತ್ತಮ ಗುರುವಿಗಾಗಿ ಜಂಬೂ ದ್ವೀಪದಲ್ಲೆಲ್ಲಾ ಸುತ್ತಾಡಿದರು.

ಒಬ್ಬ ಸರಿಯಾದ ಗುರುವು ಸಿಗಲಿಲ್ಲವಾದ್ದರಿಂದ ಇವರಿಬ್ಬರೂ 'ಯಾರು ಮೊದಲು ಅಮರತ್ವವನ್ನು ಪಡೆಯುತ್ತಾರೋ ಅವರು ಇನ್ನೊಬ್ಬರಿಗೆ ಆ ಸಂಗತಿಯನ್ನು ಹೇಳಬೇಕು' ಎಂಬ ಒಡಂಬಡಿಕೆಯನ್ನು ಮಾಡಿಕೊಂಡು ಹಾಗೆಯೇ ಇದ್ದರು.

ಪಂಚವರ್ಗೀಯ ಭಿಕ್ಖುಗಳಲ್ಲಿ ಒಬ್ಬರಾದ ಥೇರ ಅಸ್ಸಾಜಿಯವರು ರಾಜಗೃಹ ನಗರದಲ್ಲಿ ಭಿಕ್ಷಾಟನೆ ಮಾಡುತ್ತಿದ್ದಾಗ ಪರಿವ್ರಾಜಕ ಉಪತಿಸ್ಸನು ಥೇರರನ್ನು ನೋಡಿ ಹೀಗೆ ಯೋಚಿಸಿದ: "ನಾನು ಈ ಹಿಂದೆ ಎಂದೂ ಇಂತಹ ಸಂನ್ಯಾಸಿಯನ್ನು ನೋಡಿಲ್ಲ. ಇವರು ಈ ಪ್ರಪಂಚದ ಶ್ರೇಷ್ಠ ಅರಹತರೊಬ್ಬರಾಗಿರಬೇಕು ಅಥವಾ ಅರಹತ ಮಾರ್ಗವನ್ನು ಪ್ರವೇಶಿಸಿದವರಾಗಿರಬೇಕು. ಇವರನ್ನು ಸಂಧಿಸಿ ನಾನು ಯಾಕೆ ಹೀಗೆ ಕೇಳಬಾರದು: "ನೀವು ಯಾರ ಮಾರ್ಗದರ್ಶನದಲ್ಲಿ ಮನೆಯನ್ನು ತೊರೆದು ಅನಗಾರಿಕರಾದಿರಿ? ನಿಮ್ಮ ಪಾರಮಾರ್ಥಿಕ ಗುರು ಯಾರು? ಯಾರ ಧಮ್ಮವನ್ನು ನೀವು ಪರಿಪಾಲಿಸುತ್ತಿದ್ದೀರಿ." ಹೀಗೆ ಮನಸ್ಸಿನಲ್ಲಿ ಆಲೋಚಿಸಿಕೊಂಡು ಪ್ರಶ್ನೆಗಳನ್ನು ಕೇಳಲು ಇದು ಸಮಯವಲ್ಲವೆಂದು



ಥೇರರನ್ನು ಹಿಂಬಾಲಿಸಿದನು. ಥೇರರು ತಮ್ಮ ಭಿಕ್ಷಾಟನೆಯನ್ನು ಮುಗಿಸಿ ಊಟ ಮಾಡಿಯಾದ ಮೇಲೆ ಉಪತಿಸ್ಸನು ಹೀಗೆ ಕೇಳಿದನು: "ನಿಜವಾಗಿಯೂ ನಿಮ್ಮ ಚರ್ಯೆಗಳು ತೇಜೋಮಯವಾಗಿ ಶಾಂತವಾಗಿವೆ. ಆಯುಷ್ಮಂತರೆ, ತಾವು ಯಾರ ಅಡಿಯಲ್ಲಿ ಸಂನ್ಯಾಸಿಗಳಾಗಿದ್ದೀರಿ? ತಮ್ಮ ಪರಮಾರ್ಥಿಕ ಗುರು ಯಾರು? ಯಾರ ಧರ್ಮವನ್ನು ಪರಿಪಾಲಿಸುತ್ತಿದ್ದೀರಿ?"

ಆಗ ಥೇರ ಅಸ್ಸಾಜಿ ಹೇಳಿದರು: "ಗೆಳೆಯ, ನಾನು ನಿಜವಾಗಿಯೂ ಹೊಸಬ. ಈ ಧಮ್ಮ ವಿನಯಗಳಲ್ಲಿ ಇತ್ತೀಚೆಗೆಗಷ್ಟೇ ದೀಕ್ಷೆ ಪಡೆದವನು. ಧಮ್ಮವನ್ನು ಈಗ ದೀರ್ಘವಾಗಿ ಹೇಳಲು ನಾನು ಶಕ್ತ್ಯನಲ್ಲ."

ಆಗ ಪರಿವ್ರಾಜಕ ತಾಪಸಿ ಉಪತಿಸ್ಸನು ಹೇಳಿದನು: "ಚಿಕ್ಕದಾಗಿಯಾಗಲಿ, ದೊಡ್ಡದಾಗಿಯಾಗಲಿ ನನಗೆ ಅದರ ತಿರುಳನ್ನು ದಯಮಾಡಿ ಹೇಳಿ, ನನಗೆ ಬೇಕಿರುವುದು ಅಂತರಾರ್ಥ. ಬಹಳಷ್ಟು ಪದಗಳನ್ನು ತೆಗೆದುಕೊಂಡು ನಾನೇನು ಮಾಡಲಿ?"

ಥೇರರು ಈ ಕೆಳಗಿನ ಗಾಥೆಯ ಮೂಲಕ ಉತ್ತರಿಸಿದರು: "ಏನೆಲ್ಲಾ ಸಂಗತಿಗಳು ಇವೆಯೋ ಅವೆಲ್ಲಾ ಕಾರಣದಿಂದಲೇ ಉದಯಿಸುತ್ತವೆ. ತಥಾಗತನು ಈ ಕಾರಣವನ್ನು ಬಯಲು ಮಾಡಿದನು!

ಪರಿವ್ರಾಜಕ ತಾಪಸಿಯು ಈ ಮೊದಲ ಗಾಥೆಯನ್ನು ಕೇಳಿದ ಕೂಡಲೇ ಇದರ ಅರ್ಥವನ್ನು ಸಾವಿರ ವಿಧದಲ್ಲಿ ಗ್ರಹಿಸಿ ಸೋತಾಪತ್ತಿ ಫಲವನ್ನು ಪಡೆದನು. ಯಾವಾಗ ಇವನು ಸೋತಾಪನ್ನನಾದನೋ ಥೇರನು ಈ ಎರಡನೇ ಗಾಥೆಯನ್ನು ಹೇಳಿದನು: "ಆ ಕಾರಣದ ನಿರೋಧವನ್ನು ಮಹಾಸಮಣನು ಸಾರಿದನು."

ಸೋತಾಪನ್ನನಾದ ಮೇಲೆ ಥೇರರಿಗೆ ಹೀಗೆ ಕೇಳಿದನು: "ಆಯುಷ್ಮಂತರೇ, ನಮ್ಮ ಪಾರಮಾರ್ಥಿಕ ಗುರು ಎಲ್ಲಿ ವಾಸಿಸುತ್ತಿದ್ದಾರೆ?"

"ಗೆಳೆಯ ವೇಣುವನದಲ್ಲಿ."

"ಸರಿ ಪೂಜ್ಯರೆ, ನನಗೊಬ್ಬ ಗೆಳೆಯನಿದ್ದಾನೆ, ನಮ್ಮಲ್ಲಿ ಈ ರೀತಿಯ ಒಡಂಬಡಿಕೆಯಾಗಿದೆ: 'ಯಾರು ಅಮರತ್ವವನ್ನು ಪಡೆಯುತ್ತಾರೊ, ಅವರು ಅದನ್ನು ಇನ್ನೊಬ್ಬರಿಗೆ ತಿಳಿಸಬೇಕು'. ಈ ವಾಗ್ದಾನದ ಪೂರೈಕೆಗಾಗಿ ನಾನು ನನ್ನ ಗೆಳೆಯನನ್ನು ಕರೆತರುತ್ತೇನೆ. ಮತ್ತು ಧರ್ಮ ಮಾರ್ಗವನ್ನನುಸರಿಸಿ ನಾವಿಬ್ಬರೂ ಭಗವಾನರ ಬಳಿ ಬರುತ್ತೇವೆ."

ಥೇರರನ್ನು ಕಳಿಸಿದ ಮೇಲೆ ಉಪತಿಸ್ಸನು ತಾಪಸಿ ಕೋಲಿಟನಿರುವ ಪರಿವ್ರಾಜಕ ತಾಪಸಿ ಸಂಜಯನ ಆಶ್ರಯದತ್ತ ಹೊರಟನು.

ತಾಪಸಿ ಕೋಲಿಟನು ತನ್ನ ಗೆಳೆಯ ಉಪತಿಸ್ಸನ ಮುಖದಲ್ಲಿನ ಸಂಭ್ರಮವನ್ನು ಕಂಡು "ಅಮರತ್ವವನ್ನೇನಾದರೂ ಸಾಧಿಸಿರುವೆಯಾ?" ಎಂದು ಕೇಳಿದನು. ಉಪತಿಸ್ಸನು,

"ಹೌದು ಸೋದರ, ನಾನು ಅಮರತ್ವವನ್ನು ಪಡೆದಿದ್ದೇನೆ" ಎಂದು ಆಯುಷ್ಮಂತ ಅಸ್ಸಾಜಿಯು ಉದ್ಗರಿಸಿದ ಗಾಥೆಯನ್ನು ಪುನರುಚ್ಚರಿಸಿದನು.

ಗಾಥೆಯನ್ನು ಮುಗಿಸುತ್ತಿದ್ದಂತೆ ಕೋಲಿಟನೂ ಸೋತಾಪತ್ತಿ ಫಲವನ್ನು ಪಡೆದನು. ಕೋಲಿಟ ಉಪತಿಸ್ಸರಿಬ್ಬರೂ ತಮಗಾದ ಅನುಭವವನ್ನು ತಮ್ಮ ಪೂರ್ವ ಗುರುವಾದ ತಾಪಸಿ ಸಂಜಯನಿಗೆ ಹೇಳಿ ತಮ್ಮೊಡನೆ ಬುದ್ಧನನ್ನು ನೋಡಲು ಬರುವಂತೆ ವಿನಂತಿಸಿದರು. ಆದರೆ ಸಂಜಯನು ಅವರ ವಿನಂತಿಯನ್ನು ತಿರಸ್ಕರಿಸಿ ಹೀಗೆಂದನು: "ನಾನು ಬಹಳ ಕಾಲದಿಂದ ಬಹುಜನರ ಗುರುವೆಂದು ಮನ್ನಣೆ ಪಡೆದವನು; ಈಗ ಶಿಷ್ಯನಂತೆ ಬದುಕಲು ಸಾಧ್ಯವಿಲ್ಲ."

ಇವರಿಬ್ಬರ ನಿರ್ಗಮನದಿಂದ ಸಂಜಯನ ಅನುಯಾಯಿಗಳು ಸಣ್ಣಗಾಗುತ್ತಾ ಆಶ್ರಮವು ಖಾಲಿಯಾಗಿ ಸಂಜಯನು ರಕ್ತ ವಾಂತಿ ಮಾಡಿಕೊಂಡನು. ಕೋಲಿಟ ಮತ್ತು ಉಪತಿಸ್ಸರ ಜೊತೆಗೆ ಇನ್ನೂರೈವತ್ತು ಶಿಷ್ಯರು ಸೇರಿ ಎಲ್ಲರೂ ವೇಣುವನದತ್ತ ನಡೆದರು.

ಭಗವಾನರು ಒಂದು ದೊಡ್ಡ ಭಕ್ತ ಸಮೂಹಕ್ಕೆ ಧಮ್ಮವನ್ನು ಉಪದೇಶಿಸುತ್ತಿದ್ದರು. ದೂರದಿಂದಲೇ ಶಿಷ್ಯರು ಬರುತ್ತಿರುವುದನ್ನು ನೋಡಿ ಭಗವಾನರು ಭಿಕ್ಖುಗಳಿಗೆ ಹೇಳಿದರು: ಭಿಕ್ಖುಗಳೇ, ನೋಡಿ, ಇಲ್ಲಿಗೆ ಉಪತಿಸ್ಸ ಮತ್ತು ಕೋಲಿಟರೆಂಬ ಇಬ್ಬರು ಸ್ನೇಹಿತರು ಬರುತ್ತಿದ್ದಾರೆ. ಇವರು ಮುಂದೆ ಪರಮ ಜೋಡಿಗಳಾಗಿ ನಮ್ಮ ಪ್ರಮುಖ ಶಿಷ್ಯದ್ವಯರಾಗುತ್ತಾರೆ."

ಭಗವಾನರಿಗೆ ಅವರು ಭಕ್ತಿ ಗೌರವಗಳಿಂದ ವಂದಿಸಿ ಒಂದೆಡೆ ಕುಳಿತು ಹೀಗೆ ಹೇಳಿದರು: "ಪರಮಪೂಜ್ಯ ಗುರುಗಳೇ, ನಾವು ಭಗವಾನರಿಂದ ಸಾಮಣೇರ ಮತ್ತು ಉಪಸಂಪದ ದೀಕ್ಷೆಗಳನ್ನು ಸ್ವೀಕರಿಸಬಹುದೇ?"

ಭಗವಾನರು "ಬನ್ನಿ ಭಿಕ್ಖುಗಳೇ, ಈ ಧಮ್ಮವು ಸರಿಯಾಗಿ ಪ್ರತಿಪಾದಿತವಾಗಿದೆ. ಎಲ್ಲ ದುಃಖಗಳನ್ನು ಅಂತ್ಯಗೊಳಿಸಲು ಪವಿತ್ರ ಜೀವನವನ್ನು ನಡೆಸಿರಿ" ಎಂದು ಹೇಳಿದರು. 'ಏಹಿ ಭಿಕ್ಖು' ಎನ್ನುವ ಅಪರೂಪವಾದ ಉಪಸಂಪದವನ್ನು ನೀಡಲು ಬುದ್ಧರ ಅಸಾಮಾನ್ಯ ಶಕ್ತಿಯಿಂದ ಅವರಿಗೆ ಪಿಂಡಪಾತ್ರೆ ಮತ್ತು ಚೀವರಗಳು ಬಂದವು ಮತ್ತು ಅವರು ಹಲವಾರು ವರ್ಷಗಳ ಹಿರಿಯ ಸಂನ್ಯಾಸಿಗಳಂತೆ ಕಂಡರು.

ಆಯುಷ್ಮಂತ ಮೊಗ್ಗಲ್ಲಾನನು ಮಗಧ ದೇಶದ ಕಲ್ಲವಾಲ ಗ್ರಾಮದಲ್ಲಿರುವ ಸಂದರ್ಭದಲ್ಲಿ ತಥಾಗತರು ಉಪದೇಶಿಸಿದ 'ಧಾತುಗಳ ಮೇಲಿನ ಧ್ಯಾನ'ದ ಮೇಲೆ ತನ್ನ ಮನಸ್ಸನ್ನು ಕೇಂದ್ರೀಕರಿಸಿದನು. ಈ ಧ್ಯಾನದಿಂದ ಧಾತುಗಳಿಗೂ ಪಾರಮಾರ್ಥಕ್ಕೂ ಇರುವ ಪರಸ್ಪರ ಸಂಬಂಧವನ್ನು ಗ್ರಹಿಸಿ ಚಿತ್ತವನ್ನು ಮೂರು ಲೋಕೋತ್ತರ ಹಂತಗಳ ಎತ್ತರಕ್ಕೆ ತೆಗೆದುಕೊಂಡು ಹೋಗಿ ವಿಪಸ್ಸನ ಪರಿಶುದ್ಧತ್ವವನ್ನು ಮುಟ್ಟಿದನು.



ಆಯುಷ್ಮಂತ ಸಾರಿಪುತ್ತನು ರಾಜಗಹ ನಗರದ ಹೊರವಲಯದಲ್ಲಿರುವ ಗಿಜ್ಝಕೂಟ ಪರ್ವತದ ಸೂಕರಖತದಲ್ಲಿ ಭಗವಾನರೊಂದಿಗೆ ಇದ್ದನು. ಅಲ್ಲಿ ಭಗವಾನರು ಸಾರಿಪುತ್ತನ ಸೋದರನ ಮಗ ಪರಿಬ್ಬಾಜಕ ದೀಘನಖನಿಗೆ 'ವೇದನಾ ಪರಿಗ್ಗಹ ಸುತ್ತ'ದ ಮೇಲೆ ಧಮ್ಮೋಪದೇಶವನ್ನು ನೀಡುತ್ತಿದ್ದರು.

ಆಯುಷ್ಮಂತ ಸಾರಿಪುತ್ತನು ಈ ಸುತ್ತದ ಮಹತ್ವವನ್ನು ಗ್ರಹಿಸಿ ಲೋಕೋತ್ತರ ಪ್ರಜ್ಞೆಯನ್ನು ವೃದ್ಧಿಸಿಕೊಂಡು ಅಗ್ಗಸಾವಕ ಪರಿಶುದ್ಧ ಶೃಂಗವನ್ನು ಮುಟ್ಟಿದನು. ಇನ್ನೊಬ್ಬರಿಗೆ ಮಾಡಿದ ಅಡಿಗೆಯನ್ನು ತಾನು ಹಂಚಿಕೊಂಡು ತಿನ್ನುವಂತೆ ಆಯುಷ್ಮಂತ ಸಾರಿಪುತ್ತನು ಸಾವಕ ಬೋಧಿ ಸ್ಥಿತಿಯನ್ನು ತಲುಪಿದನು.

ಆಯುಷ್ಮಂತ ಸಾರಿಪುತ್ತ ಮತ್ತು ಮೊಗ್ಗಲ್ಲಾನರು ಅಗ್ಗಸಾವಕ (ಪ್ರಮುಖ ಶಿಷ್ಯರು) ಸ್ಥಿತಿಗೆ ಏರಿದಮೇಲೆ ಸಂಘದ ಪರಿಪಾಲಕರಾಗಿ ಹಲವಾರು ಜವಾಬ್ದಾರಿಗಳನ್ನು ನಿರ್ವಹಿಸಿದರು.

ಆಯುಷ್ಮಂತ ಸಾರಿಪುತ್ತನು ಪ್ರಜ್ಞೆಯಲ್ಲಿ ಬುದ್ಧರ ನಂತರ ನಿಲ್ಲುವ ಮೊದಲ ಪ್ರಜ್ಞಾವಂತ ಶಿಷ್ಯ. ಆದ್ದರಿಂದಲೇ ಬುದ್ಧರು ಅವನಿಗೆ ಪ್ರಜ್ಞೆಯಲ್ಲಿ ಅಗ್ರನೆಂದು ಪಟ್ಟಕಟ್ಟಿದರು. "ಏತದಗ್ಗಂ, ಭಿಕ್ಖವೇ, ಮಮ ಸಾವಕಾನಂ ಭಿಕ್ಖೂನಂ ಮಹಾಪಞ್ಞಾಮ್ ಯದಿದಂ ಸಾರಿಪುತ್ತೋ' – ಭಿಕ್ಖುಗಳೇ, ಅತ್ಯುನ್ನತ ಪ್ರಜ್ಞೆಯನ್ನು ಹೊಂದಿರುವ ನನ್ನ ಶಿಷ್ಯರ ಪೈಕಿ ಸಾರಿಪುತ್ತನು ಅಗ್ರಹಣ್ಯನು."

ಅಸಾಮಾನ್ಯ ಶಕ್ತಿಯನ್ನು ಹೊಂದಿರುವ ಪೈಕಿ ಬುದ್ಧರ ನಂತರ ನಿಲ್ಲುವ ಮೊದಲ ಶಿಷ್ಯನೆಂದರೆ ಆಯುಷ್ಮಂತ ಮೊಗ್ಗಲ್ಲಾನ. ಆದ್ದರಿಂದಲೇ ಬುದ್ಧರು ಅವನಿಗೆ ಇದ್ಧಿಮಂತ ಶಿಷ್ಯರಲ್ಲಿ ಅಗ್ರಗಣ್ಯನೆಂದು ಪಟ್ಟ ಕಟ್ಟಿದರು: "ಏತದಗ್ಗಂ, ಭಿಕ್ಖವೆ, ಮಮ ಸಾವಕಾನಂ ಭಿಕ್ಖೂನಂ ಇದ್ಧಿಮಂತನಮ್ ಯದಿದಂ ಮಹಾಮೊಗ್ಗಲ್ಲಾನೊ – ಭಿಕ್ಖುಗಳೇ, ಇದ್ಧಿಮಂತನ ಶಕ್ತಿ (ಅಸಾಮಾನ್ಯ ಶಕ್ತಿ) ಯನ್ನು ಹೊಂದಿರುವ ನನ್ನ ಶಿಷ್ಯರ ಪೈಕಿ ಮಹಾಮೊಗ್ಗಲ್ಲಾನನು ಅಗ್ರ ಸ್ಥಾನದಲ್ಲಿ ನಿಲ್ಲುತ್ತಾನೆ."

ಈ ಇಬ್ಬರು ಬುದ್ಧರ ಅಗ್ರಗಣ್ಯ ಶಿಷ್ಯರು ಎಲ್ಲ ಜೀವಿಗಳ ಉದ್ಧಾರಕ್ಕಾಗಿ ಮತ್ತು ಸುಖಕ್ಕಾಗಿ ನಲವತ್ತೈದು ವರ್ಷಗಳ ಕಾಲ ತುಂಬ ಶ್ರದ್ಧೆಯಿಂದ ಭಿಕ್ಖು ಸಂಘದ ಸೇವೆಯನ್ನು ಮಾಡಿದರು. ಇವರು ನೀಡಿದ ಹಲವಾರು ಧಮ್ಮೋಪದೇಶಗಳು ನಿಕಾಯಗಳಲ್ಲಿ ಸುತ್ತಪಿಟಿಕದಲ್ಲಿ ಅಡಕವಾಗಿವೆ.

ಆಯುಷ್ಮಂತ ಸಾರಿಪುತ್ತನಿಗೆ ಅವನ ಅಸಮಾನ ಧಮ್ಮಪ್ರಚಾರ ಮತ್ತು ಸೇವೆಗಾಗಿ 'ಧಮ್ಮಸೇನಾಪತಿ' ಎಂಬ ಬಿರುದನ್ನಿತ್ತರು. ಭಿಕ್ಖು ಸಂಘದಲ್ಲಿ ಅತ್ಯಂತ ಹೆಚ್ಚಿನ ಸ್ಥಾನವನ್ನು ಸಾಧಿಸಿದ್ದರೂ ಬದುಕಿನುದ್ದಕ್ಕೂ ಅತ್ಯಂತ ವಿನಯಶೀಲನೂ, ಸಮಾಧಾನಪರನೂ ಆಗಿ ಬಾಳಿದನು. ಈ ಮಹಾಥೇರನ ಗುಣವಿಶೇಷಣಗಳ ಬಗ್ಗೆ ತಿಪಿಟಕದಲ್ಲಿ ಸುಂದರವಾದ ಕಥೆಗಳು ದಾಖಲಾಗಿವೆ. ಒಮ್ಮೆ ಈತನು ಭಿಕ್ಷೆಗಾಗಿ ದಾರಿಯಲ್ಲಿ ಹೋಗುತ್ತಿದ್ದಾಗ ಸೇಡನ್ನು

ತೀರಿಸಿಕೊಳ್ಳಬೇಕಂದು ಹವಣಿಸುತ್ತಿದ್ದ ಒಬ್ಬ ಬ್ರಾಹ್ಮನನು, ಒಬ್ಬ ಅಬ್ರಾಹ್ಮಣನು ಅಂದರೆ ಕ್ಷತ್ರಿಯ ಕುಲದವನು ಸ್ಥಾಪಿಸಿದ ಸಂಘವನ್ನು ಸೇರಲೆಂದೇ ಈ ಬ್ರಾಹ್ಮಣ ಕುಲದ ಸಾರಿಪುತ್ತನು ಬ್ರಾಹ್ಮಣ್ಯವನ್ನು ತೊರೆದು ಸಮಣನಾಗಿದ್ದನೆಂದು ಭಾವಿಸಿದ. ಸಾರಿಪುತ್ತ ಥೇರನು ದಾರಿಯಲ್ಲಿ ಗಂಭೀರವಾಗಿ ನಿಧಾನವಾಗಿ ಪ್ರಸನ್ನ ಮುಖದಿಂದ ಭಿಕ್ಷೆಗಾಗಿ ಹೋಗುತ್ತಿರಲು ಕೋಪವನ್ನೇ ತುಂಬಿಕೊಂಡ ಈ ಬ್ರಾಹ್ಮಣನು ಸಹನಶೀಲತೆಯನ್ನು ಪರೀಕ್ಷಿಸಲು ಎರಡು ಬಲವಾದ ಏಟುಗಳನ್ನು ಕೊಟ್ಟ. ಅನಿರೀಕ್ಷಿತ ಏಟುಗಳಿಂದ ವಿಚಲಿತನಾಗದ ಸಾರಿಪುತ್ತನು ತನ್ನ ಭಿಕ್ಷಾ ಸಂಚಾರವನ್ನು ಮುಂದುವರಿಸಿದ. ದ್ವೇಷಾಗ್ನಿಯಿಂದ ಕುದಿಯುತ್ತಿದ್ದ ಬ್ರಾಹ್ಮಣ ಸಾರಿಪುತ್ತನ ಅಪ್ರತಿಮ ಸಹನೆಯನ್ನು ಕಂಡು ತನ್ನ ಕುಕೃತ್ಯಕ್ಕಾಗಿ ಪರಿತಪಿಸಿದ. ಓಡಿಹೋಗಿ ಸಾರಿಪುತ್ತ ಥೇರನ ಕಾಲಿಗೆ ಬಿದ್ದು ಕ್ಷಮೆಯನ್ನು ಯಾಚಿಸಿದ. ಮಹಾಸಂತನ ದೊಡ್ಡತನವನ್ನು ಮನಸಾರೆ ವಂದಿಸಿದ. ಬ್ರಾಹ್ಮಣನು ಕ್ಷಮೆ ಯಾಚಿಸಿದ ಕೂಡಲೇ ಆಯುಷ್ಮಂತ ಸಾರಿಪುತ್ತನು 'ನೀನು ಸುಖಿಯಾಗಿರು' ಎಂದು ಆಶೀರ್ವದಿಸಿದನು. ಬ್ರಾಹ್ಮಣನ ಮನಸ್ಸು ತಕ್ಷಣವೇ ಬದಲಾಗಿ ಅವನೊಳಗೆ ವಿವೇಕ ಜಾಗ್ರತವಾಗಿ ತನ್ನ ಮನೆಗೆ ಈ ಮುಂಜಾನೆಯೇ ಊಟಕ್ಕೆ ಬರಬೇಕೆಂದು ಯಾಚಿಸಿದ. ಥೇರ ಸಾರಿಪುತ್ತನು ಪ್ರೀತಿಯಿಂದ ಸಮ್ಮತಿಸಿದನು. ಈ ವರ್ತಮಾನ ಊರಲ್ಲೆಲ್ಲಾ ಹರಡಿತು.

ಆಯುಷ್ಮಂತ ಸಾರಿಪುತ್ತನು ಕೃತಜ್ಞತಾ ಭಾವವನ್ನು ವ್ಯಕ್ತಿಪಡಿಸುವುದರಲ್ಲಿ ಬಹು ಸೂಕ್ಷ್ಮನು. ಒಮ್ಮೆ ಒಬ್ಬ ವೃದ್ಧ ಬ್ರಾಹ್ಮಣನು ಒಂದು ಸೌಟಿನಷ್ಟೇ ಗಂಜಿಯನ್ನು ಮುಂಜಾನೆ ಭಿಕ್ಷೆಯಲ್ಲಿ ಕೊಟ್ಟನು. ಈ ಘಟನೆ ನಡೆದ ಬಹಳ ದಿನಗಳ ನಂತರ ಆ ವೃದ್ಧ ಬ್ರಾಹ್ಮಣನು ತನ್ನ ಹೆಂಡತಿ ಮಕ್ಕಳಿಂದಲೇ ನಿರ್ಲಕ್ಷೆಗೆ, ಹಿಂಸೆಗೆ ಒಳಗಾದನು. ಇದಕ್ಕೆ ಕಾರಣ ಈ ಮುದಿಯನಿಂದ ಏನು ಪ್ರಯೋಜನವೆಂಬ ದೆಸೆಯಿಂದ. ಆದ್ದರಿಂದ ಆ ವೃದ್ಧ ಬ್ರಾಹ್ಮಣನು ವಿಹಾರಕ್ಕೆ ಹೋಗಿ, ತನಗೆ ಸಂನ್ಯಾಸ ದೀಕ್ಷೆಯನ್ನು ನೀಡುವುದರ ಮೂಲಕ ಶಿಷ್ಯನಾಗಿ ಸ್ವೀಕರಿಸಬೇಕೆಂದು ವಿನಂತಿಸಿದನು. ಭಿಕ್ಖುಗಳು ಅವನ ದಯನೀಯ ಸ್ಥಿತಿಯನ್ನು ಕಂಡು ಚೆನ್ನಾಗಿ ಉಪಚರಿಸಿದರು. ಅವರು ತಾವು ಸಂಗ್ರಹಿಸಿದ ಭಿಕ್ಷೆಯಲ್ಲಿ ಆ ವೃದ್ಧನಿಗೂ ಕೊಟ್ಟು ಸಕ್ರಿಯವಾಗಿರಲು ನಿತ್ಯವೂ ವಿಹಾರದ ಅಂಗಳವನ್ನು ಗುಡಿಸುವಂತೆ ಇತ್ಯಾದಿ ಕೆಲಸಗಳಲ್ಲಿ ನಿರತರಾಗಲು ಹೇಳಿದರು. ಆ ವೃದ್ಧ ಇಷ್ಟೇ ವಿನಂತಿಸಿದರೂ ಅವನಿಗೆ ದೀಕ್ಷೆಯನ್ನು ಕೊಡಲಿಲ್ಲ. ಆದ್ದರಿಂದ ಅವನಿಗೆ ನಿರಾಸೆಯಾಯಿತು.

ಒಂದು ಮುಂಜಾನೆ ಮಹಾಕರುಣ ಸಂಪತ್ತಿಯಿಂದ ಎದ್ದ ಬುದ್ಧರು ತಮ್ಮ ತಮ್ಮ ಅಸಮಾನ ದಿವ್ಯಶಕ್ತಿಯಿಂದ ನೋಡಲು ಆ ವೃದ್ಧನು ಮನಸ್ಸಿನ ತೆರೆಯಮೇಲೆ ಕಾಣಿಸಿಕೊಂಡನು. ಬುದ್ಧರು ಅವನ ಮೇಲೆ ದಿಟ್ಟಿಯನ್ನು ಕೇಂದ್ರೀಕರಿಸಿ ನೋಡಲು ಅಂತಹ ದಯನೀಯ ಸ್ಥಿತಿಯಲ್ಲಿದ್ದರೂ ಅರಹತನಾಗುವ ಎಲ್ಲ ಲಕ್ಷಣಗಳಿರುವುದನ್ನು ಮನಗಂಡರು. ಆದ್ದರಿಂದ ಬುದ್ಧರು ವಿಹಾರದಲ್ಲಿರುವ ಎಲ್ಲ ಭಿಕ್ಖುಗಳ ಸಭೆಯನ್ನು ಸೇರಿಸಿದರು. ಈ ವೃದ್ಧ ಬಡ ಬ್ರಾಹ್ಮಣನಲ್ಲಿ ಯಾವುದಾದರೂ ಒಂದು ಒಳ್ಳೆಯ



ಗುಣವನ್ನು ಕಂಡಿರುವಿರೇನು ಎಂದು ಭಿಕ್ಖುಗಳನ್ನು ಕೇಳಿದರು. ಕೂಡಲೇ ಆಯುಷ್ಮಂತ ಸಾರಿಪುತ್ತನು ಕೈಯೆತ್ತಿ ಹೀಗೆ ಹೇಳಿದನು: 'ಹೌದು, ಭಗವಾನರೆ ನೋಡಿದ್ದೇನೆ. ಬಹಳ ಹಿಂದೆ ನಾನು ಭಿಕ್ಷಾಟನೆಯಲ್ಲಿದ್ದಾಗ ನನಗೆ ಒಂದು ಸೌಟಿನ ತುಂಬ ಅನ್ನದ ಗಂಜಿಯನ್ನು ನೀಡಿದ್ದಾನೆ'. ಬುದ್ಧರು ಸಾರಿಪುತ್ತನಿಗೆ ರಾಧ ಎಂಬ ಹೆಸರಿನ ಈ ಬ್ರಾಹ್ಮಣನಿಗೆ ದೀಕ್ಷೆಯನ್ನು ನೀಡಿ ಸಂಘಕ್ಕೆ ಸೇರಿಸಿಕೊಳ್ಳಬಹುದೇ ಎಂದರು. ಆಯುಷ್ಮಂತ ಸಾರಿಪುತ್ತನು ಅದಕ್ಕೆ ಸಿದ್ಧನಿದ್ದೇನೆಂದು ಅವನನ್ನು ತನ್ನ ಮಾಣವಕನನ್ನಾಗಿ ಸ್ವೀಕರಿಸಿ ಪಾರಮಾರ್ಥಿಕ ಬದುಕಿನ ತರಬೇತಿಯನ್ನು ನೀಡಿದನು. ಸ್ವಲ್ಪ ಕಾಲದಲ್ಲೇ ಆಯುಷ್ಮಂತ ರಾಧನು ಸಾರಿಪುತ್ತನ ಬಳಿಯಲ್ಲಿದ್ದು ಆರೋಗ್ಯವನ್ನು ಸುಧಾರಿಸಿಕೊಂಡು ಹಂತಹಂತವಾಗಿ ಕಲಿತು ಮುಂದೆ ಅರಹತನಾದನು.

ಆಯುಷ್ಮಂತ ಸಾರಿಪುತ್ತನ ಬಳಿಯಲ್ಲಿದ್ದು ಆರೋಗ್ಯವನ್ನು ಸುಧಾರಿಸಿಕೊಂಡು ಹಂತ ಹಂತವಾಗಿ ಕಲಿತು ಮುಂದೆ ಅರಹತನಾದ.

ಆಯುಷ್ಮಂತ ಸಾರಿಪುತ್ತನ ವಿನಯಪೂರಿತವಾದ ಮತ್ತು ಉತ್ತಮೋತ್ತಮದ ಗುಣಗಳು ಅವನನ್ನು ಹೇಗೆ ಎತ್ತರಕ್ಕೆ ಕೊಂಡೊಯ್ದವು ಎಂಬುದಕ್ಕೆ ಹಲವಾರು ನಿದರ್ಶನಗಳಿವೆ. ಆಯುಷ್ಮಂತ ಸಾರಿಪುತ್ತ ತನ್ನ ಗುಣಗಳಿಗಾಗಿ ಮತ್ತು ವಿನಯದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದರಲ್ಲಿ ನಿಸ್ಸೀಮರು.

ಒಮ್ಮೆ ಆಯುಷ್ಮಂತ ಸಾರಿಪುತ್ತರು ತುಂಬ ಹೊಟ್ಟೆ ನೋವಿನಿಂದ ಬಳಲುತ್ತಿರಲು ಆಯುಷ್ಮಂತ ಮೊಗ್ಗಲ್ಲಾನರು ಅವರ ನೋವನ್ನು ಕಂಡು "ಸೋದರ, ಸಾರಿಪುತ್ತ, ಮುಂಚೆ ಎಂದಾದರೂ ನೀನು ಹುಡುಗನಾಗಿದ್ದಾಗ ನೋವು ಬಂದಿತ್ತೆ?" ಎಂದರು. "ಹೌದು" ಎಂದಾಗ "ಆಗ ನಿನ್ನ ತಾಯಿ ಏನು ಕೊಟ್ಟಳು?" ಎನ್ನಲು ಅದಕ್ಕೆ ಸಾರಿಪುತ್ತರು "ನನ್ನ ತಾಯಿಯು ಅಕ್ಕಿ ಮತ್ತು ಹಾಲಿನಿಂದ ಮಾಡಿದ ಪಾಯಸಕ್ಕೆ ತುಪ್ಪ, ಜೇನುತುಪ್ಪ ಹಾಕಿಕೊಟ್ಟು ಕುಡಿ ಎಂದಳು, ನಾನು ಕುಡಿದೆ, ಕೂಡಲೇ ವಾಸಿಯಾಯಿತು" ಎಂದರು.

ಈ ಇಬ್ಬರು ಮಹಾಥೇರರ ಸಂವಾದಗಳನ್ನು ವಿಹಾರದ ಹತ್ತಿರದಲ್ಲೇ ಇದ್ದ ಒಬ್ಬ ದೇವನು ಇವನ್ನು ಆಲಿಸಿದನು. ಆ ದೇವನು ಆಯುಷ್ಮಂತ ಸಾರಿಪುತ್ತನ ಭಕ್ತನೊಬ್ಬನಲ್ಲಿಗೆ ಹೋಗಿ ಪಾಯಸವನ್ನು ತಯಾರು ಮಾಡಿಸಿದನು. ಆಯುಷ್ಮಂತ ಮೊಗ್ಗಲ್ಲಾನನು ಭಿಕ್ಷಾನ್ನಕ್ಕಾಗಿ ದಾರಿಯಲ್ಲಿ ಹೋಗುತ್ತಿರಲು ಈ ಭಕ್ತನ ಮನೆಯ ಮುಂದೆ ಹಾದುಹೋದನು. ಗೃಹಸ್ಥ ಭಕ್ತನು ಕೂಡಲೇ ಭಿಕ್ಖುವಿನ ಬಳಿ ಬಂದು ತನ್ನ ಮನೆಗೆ ಭಿಕ್ಷೆಯನ್ನು ಸ್ವೀಕರಿಸಲು ಬರುವಂತೆ ವಿನಂತಿಸಿದನು. ಊಟ ಮುಗಿದಮೇಲೆ ಗೃಹಸ್ಥ ಭಕ್ತನು ಆಯುಷ್ಮಂತ ಮೊಗ್ಗಲ್ಲಾನನ ಪಿಂಡಪಾತ್ರೆಯನ್ನು ತೆಗೆದುಕೊಂಡು ಅದರ ತುಂಬ ಪಾಯಸವನ್ನು ತುಂಬಿ ಅದನ್ನು ಆಯುಷ್ಮಂತ ಸಾರಿಪುತ್ತರಿಗೆ ನೀಡಬೇಕೆಂದು ವಿನಂತಿಸಿದನು. ಆಯುಷ್ಮಂತ ಮೊಗ್ಗಲ್ಲಾನನು ವಿಹಾರಕ್ಕೆ ಮರಳಿ ಸಾರಿಪುತ್ತನಿಗೆ ಕೊಟ್ಟನು. ಆಯುಷ್ಮಂತ ಸಾರಿಪುತ್ತನಿಗೆ ಅದೇ ಬೇಕಾಗಿತ್ತು. ಸಾರಿಪುತ್ತನು ಅದನ್ನು ಸ್ವೀಕರಿಸಿ ಸೋದರ ಭಿಕ್ಖುವಿಗೆ ವಂದಿಸಿದನು.

ಸಾರಿಪುತ್ತನು ತನ್ನ ಲೋಕೋತ್ತರ ಶಕ್ತಿಯನ್ನು ಪ್ರಯೋಗಿಸಿ ತಮ್ಮ ಸಂವಾದವನ್ನು ದೇವನೊಬ್ಬನು ಕೇಳಿ, ಗೃಹಸ್ಥ ಭಕ್ತನ ಬಳಿ ಹೋಗಿ ಪಾಯಸವನ್ನು ತಯಾರಿಸಲು ಹೇಳಿದ್ದನ್ನು, ಆತನು ತಯಾರಿಸಿದ್ದನ್ನು ಆನಂತರ ಆಯುಷ್ಮಂತ ಮೊಗ್ಗಲ್ಲಾನನು ಪಡೆದ ಈ ಎಲ್ಲ ಸಂಗತಿಗಳನ್ನು ತಿಳಿದನು. ಇಷ್ಟು ಹಿನ್ನೆಲೆಯಿರುವ ಈ ಆಹಾರ ತನ್ನ ಹೊಟ್ಟೆ ನೀಗಿಸುವುದಾದರೂ ಅದನ್ನು ತಿನ್ನಲು ಸಾಧ್ಯವಿಲ್ಲವೆಂದು ತುಂಬಾ ವಿನಯದಿಂದಲೇ ಸೋದರ ಭಿಕ್ಖುವಿಗೆ ಹೇಳಿದನು. ಹೀಗೆ ಹೇಳಿ ಆ ಆಹಾರವನ್ನು ಬಡವನೊಬ್ಬನಿಗೆ ದಾನ ಮಾಡಲು ಕೂಡಲೇ ಸಾರಿಪುತ್ತನ ನೋವು ವಾಸಿಯಾಗಿ ಆರೋಗ್ಯವಂತನಾದನು. ಈ ಸಂಗತಿಯು ಬುದ್ಧರ ಕಿವಿಗೆ ಮುಟ್ಟಲು, ಬುದ್ಧರು ಸಂಘದ ಸಭೆಯನ್ನು ಕರೆದು ಈ ಧಮ್ಮಸೇನಾಪತಿಯ ನಡತೆಯನ್ನು ಕೊಂಡಾಡಿ ಮಂಗಳವನ್ನು ಹರಸಿದರು.

## ಆಯುಷ್ಮಂತ ಮಹಾಕಸ್ಸಪ

ಮಗಧ ರಾಜ್ಯದ ಮಹಾತಿತ್ಥ ಎನ್ನುವ ಗ್ರಾಮದಲ್ಲಿ ಜನಿಸಿದ ಆಯುಷ್ಮಂತ ಮಹಾಕಸ್ಸಪನು ಬೋಧಿಸತ್ತ ಸಿದ್ಧಾರ್ಥ ಗೌತಮನಿಗಿಂತಲು ಹಲವಾರು ವರ್ಷ ಹಿರಿಯನು. ಇವನ ತಂದೆ ಕಪಿಲ, ತಾಯಿ ಸುಮನಾದೇವಿ ಶ್ರೀಮಂತ ಬ್ರಾಹ್ಮಣ ಜಮೀನ್ದಾರರು. ಇವನಿಗೆ ಪಿಪ್ಫಲಿ ಎಂದು ಹೆಸರಿಡಲಾಗಿತ್ತು. ವೈಭವ ಸಂಪತ್ತುಗಳ ನಡುವೆ ಬೆಳೆದವನು. ಆದರೂ ಎಳವೆಯಿಂದಲೇ ಪವಿತ್ರ ಬ್ರಹ್ಮಚರಿಯ ಜೀವನವನ್ನು ನಡೆಸಬೇಕೆಂಬ, ಸಾಂಸಾರಿಕ ಬದುಕಿನಲ್ಲಿ ತೊಡಗಬಾರದೆಂಬ ಹಂಬಲವಿದ್ದವನು.

ಇವನು ಯೌವನಾವಸ್ಥೆಗೆ ಬರುತ್ತಿದ್ದಂತೆ ತಂದೆ-ತಾಯಿಗಳು ವಿವಾಹವಾಗುವಂತೆ ಮನೆತನದ ಸಂತಾನ ಮುಂದುವರಿಯುವಂತೆ ಆಗ್ರಹಿಸುತ್ತಿದ್ದರು. ಈ ಮದುವೆ ಎನ್ನುವ ಬಂಧನದಿಂದ ದೂರವಾಗಿರಲು ಒಂದು ಸುಂದರ ಹೆಣ್ಣಿನ ಬಂಗಾರದ ವಿಗ್ರಹವನ್ನು ಮಾಡಿಸಿಕೊಂಡು ತನ್ನ ತಾಯಿಗೆ ಇಂಥಹುದೇ ಹುಡುಗಿ ಸಿಕ್ಕರೆ ಮದುವೆಯಾಗುತ್ತೇನೆಂದು ತಾಯಿಗೆ ತಿಳಿಸಿದನು.

ಬುದ್ಧಿಮತ್ತೆಯುಳ್ಳ ತಾಯಿಯು ಜ್ಯೋತಿಷ್ಯದಲ್ಲಿ ನಿಪುಣರಾದ ಎಂಟುಜನ ಬ್ರಾಹ್ಮಣರನ್ನು ಕರೆಸಿ ಈ ವಿಗ್ರಹದಂತೆಯೇ ಇರುವ ಹೆಣ್ಣನ್ನು ಹುಡುಕಲು ವಿನಂತಿಸಿದಳು. ಈ ಪಂಡಿತರು ಸುಮಾರು ದೇಶಗಳನ್ನು ಸುತ್ತಿ ಅಂತೂ ಕೊನೆಗೊಬ್ಬ ಹುಡುಗಿ ವಿಗ್ರಹದಂತೆಯೇ ಹೋಲುವ ಹೆಣ್ಣೊಂದನ್ನು ವಾಯುವ್ಯ ಜಂಬೂದ್ವೀಪದ ಸಾಗಲ ಎನ್ನುವ ಗ್ರಾಮದಲ್ಲಿ ಸಿಕ್ಕಿದಳು.

ಆ ಹುಡುಗಿಯ ಹೆಸರು ಭದ್ದ ಕಾಪಿಲಾನಿ; ಶ್ರೀಮಂತ ಜಮೀನ್ದಾರರ ಮಗಳು. ಇವಳಿಗೆ ಹದಿನಾರು ವಯಸ್ಸಾಗಿದ್ದರೆ ಪಿಪ್ಫಲಿಗೆ ಇಪ್ಪತ್ತು. ಈ ಬ್ರಾಹ್ಮಣ ಪಂಡಿತರು ತಂದ ಮದುವೆ ಪ್ರಸ್ತಾಪಕ್ಕೆ ಹುಡುಗಿಯ ತಂದೆ-ತಾಯಿಗಳು ಒಪ್ಪಿದರು. ಭದ್ದಾಳಿಗೆ ಏನು ನಡೆಯುತ್ತಿದೆ ಎಂಬುದು ಗೊತ್ತಾಯಿತು. ಇವಳಿಗೆ ಮದುವೆ ಎಂದರೆ ಕಿರಿಕಿರಿ.



ಆದ್ದರಿಂದ ಅವಳು ಪಿಪ್ಫಲಿಗೆ ಪತ್ರ ಬರೆದು ಸಾಂಸಾರಿಕ ಬದುಕು ತನಗೆ ಇಷ್ಟವಿಲ್ಲವೆಂದು ಸಂನ್ಯಾಸಿಯಾಗಬೇಕೆಂದಿದ್ದಾಳೆಂದು ತಿಳಿಸಿದಳು. ಇದೇ ಮನೋಧರ್ಮ ಪಿಪ್ಫಲಿಯದೂ. ಪಿಪ್ಫಲಿಯೂ ಕೂಡ ಪತ್ರವೊಂದನ್ನು ಬರೆತು ತಾನು ಸಂನ್ಯಾಸಿ ಬದುಕನ್ನು ಸಾಗಿಸಲು ತೀರ್ಮಾನಿಸಿದುದರಿಂದ ಮದುವೆಯಾಗಲು ಇಷ್ಟವಿಲ್ಲವೆಂದು ಹೇಳಿಕೊಂಡಿದ್ದನು. ಒಂದೇ ಮನೋಧರ್ಮದ ಈ ಎರಡೂ ಪ್ರತಿಗಳು ಪ್ರತ್ಯುತ್ತರವಾಗಿ ಹೋಗದೆ ಸುಮ್ಮನೆ ರವಾನೆಯಾದವು. ಪ್ರಾರಬ್ಧಕರ್ಮ ಎನ್ನುವಂತೆ ಇವು ಪರಸ್ಪರರಿಗೆ ಮುಟ್ಟದೆ ಅವರ ತಂದೆ-ತಾಯಿಗಳಿಗೆ ಮುಟ್ಟಿದವು; ಅವನ್ನು ನೋಡಿ ಹರಿದುಹಾಕಿದರು. ಹಿಂದಿನ ಜನ್ಮಗಳಲ್ಲಿ ಇವರು ಗಂಡ-ಹೆಂಡತಿಯರಾಗಿಯೋ, ಅಣ್ಣ-ತಂಗಿಯರಾಗಿಯೋ ಜೊತೆಗಿದ್ದರು. ಪೂರ್ವಜನ್ಮದ ಅನುಬಂಧದಂತೆ ಬದ್ದಾ ಕಾಪಿಲಾನಿಯು ಮಗಧಕ್ಕೆ ಬಂದಳು. ಇಬ್ಬರೂ ಮದುವೆಯಾದರು. ಇಬ್ಬರೂ ಪ್ರಥಮಬಾರಿಗೆ ಭೇಟಿಯಾದಾಗ ತಮ್ಮ ಬದುಕಿನ ಆಯ್ಕೆಗಳ ಬಗ್ಗೆ ಮಾತನಾಡಿಕೊಂಡು ಇಬ್ಬರೂ ಬ್ರಹ್ಮಚಾರಿಗಳಾಗಿಯೇ ಉಳಿಯಲು ತೀರ್ಮಾನಿಸಿದರು. ಪ್ರತಿ ರಾತ್ರಿಯು ಅವರು ಮಲಗುವ ಮಂಚದ ಮಧ್ಯೆ ಹೂವಿನ ಹಾರವೊಂದನ್ನು ಹರವಿ ಭೌತಿಕ ಸಂಬಂಧ ಬೆಳೆಯದಂತೆ ನೋಡಿಕೊಂಡರು. ದಿನದ ವೇಳೆಯಲ್ಲಿ ಪರಸ್ಪರರು ನಗುತ್ತಲೂ ಇರಲಿಲ್ಲ. ತಂದೆ-ತಾಯಿಗಳ ಆಶೋತ್ತರದಂತೆ ಒಟ್ಟಿಗೆ ಇದ್ದು ವಿಶಾಲ ಸಂಪತ್ತಿನ ಉಸ್ತುವಾರಿ ಮಾಡುತ್ತಿದ್ದರು.

ಪಿಪ್ಫಲಿಯ ತಂದೆ-ತಾಯಿಗಳು ತೀರಿಹೋದ ಮೇಲೆ ಇವರಿಬ್ಬರ ವೈರಾಗ್ಯ ಜೀವನ ನಡೆಸುವ ಹಂಬಲಗಳು ಫಲಿತವಾಗತೊಡಗಿದವು. ಒಂದುದಿನ ಪಿಪ್ಫಲಿಯು ತನ್ನ ಜಮೀನಿಗೆ ಹೋದಾಗ ರೈತರು ನೇಗಿಲಿನಿಂದ ಭೂಮಿಯನ್ನು ಉಳುತ್ತಿರಲು ನೆಲದೊಳಗಿನ ಹುಳಗಳು ಮೇಲಕ್ಕೆ ಬರಲು ಆಕಾಶದಲ್ಲಿನ ಹಕ್ಕಿಗಳು ಬಂದು ಅವನ್ನು ತಿನ್ನಲು ಹಾರಿಸಿಕೊಂಡು ಹೋಗುತ್ತಿದ್ದವು. ಆಗ ಪಿಪ್ಫಲಿಯು ರೈತರಿಗೆ, "ಇವುಗಳ ಪ್ರಾಣಹಾನಿಗೆ ಯಾರು ಕಾರಣರು?" ಎಂದು ಕೇಳಲು ಅವರು "ನೀವು ಭೂಮಿಯ ಒಡೆಯರಾದ್ದರಿಂದ ನೀವೇ ಹೊಣೆಗಾರರಾಗುತ್ತೀರಿ" ಎಂದರು. ತನಗೆ ಸಂಪತ್ತನ್ನು ಒದಗಿಸುವ ಸಲುವಾಗಿ ಇಷ್ಟು ಪ್ರಾಣಿಗಳ ಹಿಂಸೆ ಆಗಬೇಕೆ ಎಂದು ವಿಹ್ವಲಗೊಂಡನು. ಇತ್ತಕಡೆ ಮನೆಯಲ್ಲಿ ಭದ್ದಾಳಿಗೂ ಕೂಡ ಅಂತಹುದೇ ಅನುಭವವಾಯಿತು. ತನ್ನ ಸೇವಕಿಯರು ಎಳ್ಳನ್ನು ಬಿಸಿಲಿಗೆ ಹರವಿದ್ದರು. ಅವನ್ನು ತಿನ್ನಲು ಸಣ್ಣ ಸಣ್ಣ ಕ್ರಿಮಿಗಳು ಮುಕುರಿಕೊಂಡವು. ಆ ಕ್ರಿಮಿಗಳನ್ನು ತಿನ್ನಲು ಆಕಾಶದಲ್ಲಿನ ಕಾಗೆಗಳು ಇತರೆ ದೊಡ್ಡ ಹಕ್ಕಿಗಳು ಬಂದು ಅವನ್ನು ಹಾರಿಸಿಕೊಂಡು ಹೋದವು. ಈ ದೃಶ್ಯವನ್ನು ನೋಡಿ ಸೇವಕರಿಗೆ, "ಈ ಬಗ್ಗೆ ಕ್ರಿಮಿಗಳ ಸಾವಿಗೆ ಯಾರು ನೈತಿಕ ಹೊಣೆಯನ್ನು ಹೊರುತ್ತಾರೆ?" ಎಂದು ಕೇಳಿದಳು. ಅದಕ್ಕೆ ಸೇವಕರು, "ಈ ಪರಿಯ ಕ್ರಿಮಿಗಳ ಸಾವಿಗೆ ನೀವೇ ಹೊಣೆಯಾಗುತ್ತೀರಿ, ಬೇರೆಯವರಲ್ಲ" ಎಂದರು ಪಿಪ್ಫಲಿಯು ಮನೆಗೆ ಬಂದ ತಕ್ಷಣವೇ ತಾನಿನ್ನು ಬೈರಾಗಿ ಜೀವನವನ್ನು ನಡೆಸುವುದಾಗಿ ಹೇಳಿದಳು.

ಪಿಪ್ಫಲಿಯೂ ಕೂಡ ತನಗಾದ ಅನುಭವವನ್ನು ಹೇಳಿದನು. ಇಬ್ಬರೂ ಕಾವಿವಸ್ತ್ರಗಳನ್ನು ಖರೀದಿಸಿರು. ಒಬ್ಬರು ಮತ್ತೊಬ್ಬರ ತಲೆಯನ್ನು ಮುಂಡನ ಮಾಡಿ ಪರಿವ್ರಾಜಕರಾದರು. ಇಬ್ಬರೂ ಒಂದು ಸಾಂಪ್ರದಾಯಿಕ ಪ್ರತಿಜ್ಞೆಯನ್ನು ಮಾಡಿದರು: "ಈ ಅನಗಾರಿಕ ಪರಿವ್ರಾಜಕತನ (ಗೃಹತ್ಯಾಗ ಮಾಡುವುದು) ವನ್ನು ಪರಮೋಚ್ಛ ಅರಹತನ ಹೆಸರಿನಿಂದ ಸ್ವೀಕರಿಸಿದ್ದೇವೆ." ಗೃಹತ್ಯಾಗ ಮಾಡಿದ ದಿನದಂದೇ ಆಚಾರ್ಯನನ್ನು ಹೊಂದಿದರು. ಯಾರಿಗೂ ಗೊತ್ತಾಗದಂತೆ ತಮ್ಮ ಭವ್ಯ ಭವನವನ್ನು ತೊರೆದರು. ಹಾಗೆ ದಾರಿಯಲ್ಲಿ ಹೋಗುತ್ತಿರುವಾಗ ಜನ ಅವರನ್ನು ಗುರುತಿಸಿ ಕಾಲಿಗೆ ಬಿದ್ದು "ನೀವು ನಮ್ಮನ್ನು ಅನಾಥರಾಗಿ ಬಿಟ್ಟುಹೋಗಬಾರದು" ಎಂದರು. ಅವರನ್ನು ಸಮಾಧಾನಪಡಿಸಿ ತಾವು ಏನೆಲ್ಲ ಆಸ್ತಿಯನ್ನು ಹೊಂದಿದ್ದರೋ ಅದೆಲ್ಲವನ್ನೂ ದಾನಮಾಡಿ ತಮ್ಮ ದಾರಿಯನ್ನು ಹಿಡಿದರು.

ಹೀಗೆ ಬಹಳ ಜನ್ಮಗಳಿಂದ ಒಟ್ಟಾಗಿದ್ದವರು ಭಿನ್ನ ಮಾರ್ಗಗಳನ್ನು ಹಿಡಿದರು. ಪಿಪ್ಫಲಿಯು ರಾಜಗಹದ ದಾರಿಯನ್ನು ಹಿಡಿದರೆ ಭದ್ದಾಳು ಸಾವತ್ಥಿಯ ಕಡೆಗೆ ಹೊರಟಳು. ಅಟ್ಠಕಥೆಯಲ್ಲಿ ಆಗ ಇವರ ಗುಣಭಾರಕ್ಕೆ ಲೋಕಧಾತುವಿನಲ್ಲೆಲ್ಲ ಭೂಮಿಯು ಕಂಪಿಸಿತು; ಆಕಾಶದಲ್ಲಿ ಗುಡುಗು ಮಿಂಚುಗಳುಂಟಾದವು.

ಬುದ್ಧರಿಗೆ ಈ ಅಸಾಧಾರಣವಾದ ಘಟನೆಯು ಅರಿವಿಗೆ ಬಂದಿತು. ಬುದ್ಧರಿಗೆ ಇಬ್ಬರು ಮಹಾ ಅನಗಾರಿಕರು ಪರಮೋಚ್ಛ ಅರತಹ ತಥಾಗತರಾಗಿ ಬದುಕನ್ನು ಮುಡುಪಿಟ್ಟಿರುವ ಸಂಗತಿಯೇ ಕಾರಣವೆಂಬುದೂ ತಿಳಿಯಿತು. ಆದ್ದರಿಂದ ಬುದ್ಧರು ಯಾರಿಗೂ ಹೇಳದೆ ವೇಳುವನವನ್ನು ತೊರೆದು ರಾಜಗಹ–ನಲಂದ ಹೆದ್ದಾರಿಯಲ್ಲಿ ನಡೆದು ಬಹುಪುತ್ತಕ ವಿಹಾರವೆಂಬ ಗ್ರಾಮವನ್ನು ಸೇರಿ ಅಲ್ಲಿನ ವಿಹಾರದ ಬಳಿ ಇರುವ ವಿಶಾಲ ಆಲದ ಮರದ ಕೆಳಗೆ ಕುಳಿತು ಇಬ್ಬರು ಭಾವಿ ಶಿಷ್ಯರಿಗಾಗಿ ಕಾದರು. ಸಮ್ಮಾಸಂಬುದ್ಧರ ಮೈಯಿಂದ ಹೊಮ್ಮುವ ಆರು ಬಣ್ಣಗಳ ವೈಭವವನ್ನು ಮೆರೆದರು. ಆ ಕಾರಣಗಳಿಂದಾಗಿ ಅಲ್ಲಿನ ಪ್ರದೇಶವೆಲ್ಲ ಬೆಳಕಿನ ಗುಚ್ಛವಾಯಿತು.

ಸ್ವಲ್ಪಹೊತ್ತಿನಲ್ಲೇ ಪುರುಷ ವೈರಾಗಿ ಪಿಪ್ಫಲಿ ಕಸ್ಸಪನು ಮೂವತ್ತೆರಡು ಮಹಾಪುರುಷ ಲಕ್ಷಣಗಳನ್ನು, ಎಂಭತ್ತು ಅನುಷಾಂಗಿಕ ಗುಣಗಳಿಮದ ತೇಜೋಮಯನಾಗಿ ಕಾಣುತ್ತಿರುವ ತಥಾಗತನೆಡೆಗೆ ಬಂದನು. ಕಸ್ಸಪನು ಎಲ್ಲ ಗುಣಗಳನ್ನು ಗಮನಿಸಿ ಯೋಚಿಸಿದನು: "ನಾನು ಯಾರಿಗಾಗಿ ಅನಗಾರಿಕನಾಗಿ ಬಂದೆನೋ ಆ ಸಮ್ಮಾಸಂಬುದ್ಧ ಆಚಾರ್ಯ ಈತನೇ ಇರಬೇಕು." ಅವನು ಬುದ್ಧರ ಬಳಿ ಹೋಗಿ ಅವರ ಪಾದಕಮಲಗಳಿಗೆರಗಿ ತುಂಬು ಉತ್ಸಾಹ ಆನಂದದಿಂದ "ಭಗವಾ, ತಾವು ನನ್ನ ಆಚಾರ್ಯರು ನಾನು ತಮ್ಮ ಶಿಷ್ಯ ಎಂದು ಮೂರುಬಾರಿ ಹೇಳಿದನು. ಆಗ ಬುದ್ಧರು "ಕಸ್ಸಪ, ಅದು ನನಗೆ ತಿಳಿದಿದೆ" ಎಂದು ಉಪದೇಶ ರೂಪದಲ್ಲಿ ಮೂರು ಸಂಗತಿಗಳನ್ನು ಹೇಳಿದರು. "ಕಸ್ಸಪ, ನಿನ್ನನ್ನು ನೀನೇ ಈ ಕೆಳಗಿನಂತೆ ಶಿಕ್ಷಣಕ್ಕೆ ಒಳಪಡಿಸಿಕೊಳ್ಳಬೇಕು:



1. ಹಿರಿಯ ಕಿರಿಯ ಭಿಕ್ಖುಗಳಾಗಲಿ ಅಥವಾ ಹೊಸಬರಾಗಲಿ ಇವರಿಗೆ ತೊಂದರೆ ಕೊಡದಂತೆ ಇರಲು ಭಯ ನಾಚಿಕೆಗಳು ನನ್ನಲ್ಲಿ ಇರಲಿ.
2. ಯಾವ ಧಮ್ಮೋಪದೇಶವು ನನಗೆ ಶುಭವನ್ನುಂಟುಮಾಡುತ್ತದೋ ಅಂತಹ ಧರ್ಮವನ್ನು ನಾನು ಅದನ್ನು ಶ್ರದ್ಧೆಯಿಂದ ಕೇಳುವಂತಾಗಲಿ. ಅದನ್ನು ವಿಮರ್ಶಿಸಿ ಮನನ ಮಾಡಿ ಅರಗಿಸಿಕೊಳ್ಳುವಂತಾಗಲಿ.
3. ಯಾವ ಧ್ಯಾನವನ್ನು ಮಾಡುವುದರಿಂದ ಆನಂದವುಂಟಾಗುತ್ತದೋ ಅಂತಹ ಕಾಯಾನುಸ್ಸತಿ ವಿಪಸ್ಸನವನ್ನು ನಿರಂತರ ಅಭ್ಯಾಸ ಮಾಡುವಂತಾಗಲಿ ಮತ್ತು ಅದನ್ನು ನಾನು ಕಡೆಗಣಿಸದಿರಲಿ."

ಅಟ್ಠಕಥೆಯ ಪ್ರಕಾರ ಬುದ್ಧರ ಈ ಸೂಚನೆಗಳೇ ಕಸ್ಸಪನಿಗೆ ಸಾಮಣೇರ ಮತ್ತು ಉಪಸಂಪದ ದೀಕ್ಷೆಗಳನ್ನು ನೀಡಿದಂತಾಗಿದ್ದವು. ಆನಂತರ ಬುದ್ಧರು ಮತ್ತು ಹೊಸದಾಗಿ ದೀಕ್ಷೆ ಕೈಗೊಂಡ ಶಿಷ್ಯ ಇಬ್ಬರೂ ರಾಜಗಹದತ್ತ ನಡೆದರು. ದಾರಿಯಲ್ಲಿ ಹೋಗುವಾಗ ಬುದ್ಧರು ಮರದ ಕೆಳಗೆ ವಿಶ್ರಾಂತಿ ಪಡೆಯಲು ದಾರಿ ಪಕ್ಕಕ್ಕೆ ಬಂದರು. ಭಗವಾನರನ್ನೇ ಹಿಂಬಾಲಿಸುತ್ತಿದ್ದ ಕಸ್ಸಪನು ತನ್ನ ಚೀವರದ ಸಂಘಾತಿಯನ್ನು ನಾಲ್ಕು ಪದರ ಮಾಡಿ ನೆಲದಮೇಲೆ ಹಾಸಿ, "ಪೂಜ್ಯರೆ, ತಾವು ಇದರ ಮೇಲೆ ಆಸೀನರಾಗಿ ಇದು ನನ್ನ ಬದುಕಿನುದ್ದಕ್ಕೂ ಸುಖವನ್ನು ಕೊಡುತ್ತದೆ." ಬುದ್ಧರು ಅದರ ಮೇಲೆ ಕುಳಿತು "ಕಸ್ಸಪ, ನಿನ್ನ ಹರಿದುಹೊಲಿದ ಚೀವರ ಎಷ್ಟೊಂದು ಮೃದುವಾಗಿದೆ" ಎಂದರು. ಕೂಡಲೇ ಕಸ್ಸಪನು "ಪೂಜ್ಯರೆ, ನನ್ನ ಮೇಲೆ ಕರುಣೆಯನ್ನು ತೋರಿ ಹರಿದು ಹೊಲಿದುಕೊಂಡ ಈ ಸಂಘಾತಿಯನ್ನು ದಯಮಾಡಿ ಸ್ವೀಕರಿಸಿ" ಎಂದನು. ಆಗ ಬುದ್ಧರು "ಆದರೆ ಕಸ್ಸಪ, ನೀನು ಹರಿದುಹೋದ ಒರಟು ಚಿಂದಿಗಳಿಂದ ಮಾಡಲಾದ ನನ್ನ ಈ ಸಂಘಾತಿಯನ್ನು ಉಡುವೆಯಾ?" ಕಸ್ಸಪನು "ಖಂಡಿತವಾಗಿಯೂ ಪೂಜ್ಯರೆ, ಭಗವಾನರ ಚಿಂದಿಗಳಿಂದ ತಯಾರಾದ ಒರಟು ಸಂಘಾತಿಯನ್ನು ನಾನು ಉಡುತ್ತೇನೆ."

ಈ ಚೀವರಗಳ ವಿನಿಮಯವೇ ಮಹಾಕಸ್ಸಪನಿಗೆ ಸಂಘದಲ್ಲಿ ಒಂದು ವಿಶೇಷ ಸ್ಥಾನಮಾನವನ್ನು ನೀಡಿತು. ಕಾರಣ ಈ ರೀತಿಯ ಶಿಷ್ಯನೊಬ್ಬನ ಚೀವರವನ್ನು ಬುದ್ಧರು ಈ ಹಿಂದೆ ವಿನಿಮಯ ಮಾಡಿಕೊಂಡಿದ್ದೇ ಇಲ್ಲ. ಈ ಬಗ್ಗೆ ಅಟ್ಠಕಥೆಯಲ್ಲಿ ವಿವರವಾದ ವರ್ಣನೆ ಇದೆ. "ಚೀವರವನ್ನು ಕಸ್ಸಪನೊಂದಿಗೆ ವಿನಿಮಯ ಮಾಡಿಕೊಂಡುದರ ಹಿಂದಿನ ಉದ್ದೇಶವೆಂದರೆ ಕಸ್ಸಪನು ಹದಿಮೂರು ಧುತಾಂಗಗಳನ್ನು (ವೈರಾಗಿಯ ಕಠಿಣ ಆಚರಣೆಗಳು) ಸಂಘಕ್ಕೆ ಸೇರಿದ ಮೊದಲ ದಿನಗಳಿಂದಲೇ ಆಚರಿಸಲಿ ಎಂಬುದು." ಇನ್ನುಮುಂದೆ ಅಟ್ಠಕಥೆ ಏನು ಹೇಳುತ್ತದೆಂದರೆ ಯಾರು ಧುತಾಂಗಗಳನ್ನು ಸರಳತೆ ಚೈತನ್ಯಶೀಲತೆ ತ್ಯಾಗ ಮತ್ತು ತೃಪ್ತಿಗಳ ಸಲುವಾಗಿ ಆಚರಿಸುತ್ತಾರೋ ಅಂತಹ ಭಿಕ್ಖುಗಳನ್ನು ಭಗವಾನರು ಮೆಚ್ಚುತ್ತಿದ್ದರು.

ಉಪಸಂಪದ ಕುರುಹಾಗಿ ಚೀವರವನ್ನು ಪಡೆದ ಏಳುದಿನಗಳ ನಂತರ ಆಯುಷ್ಮಂತ ಮಹಾಕಸ್ಸಪನು ಅರಹತನಾದ. ನಂತರದ ದಿನಗಳಲ್ಲಿ ತನ್ನ ಶಿಷ್ಯನಾದ ಆನಂದನಿಗೆ "ಆಯುಷ್ಮಾನ್, ನಾನು ಏಳುದಿನಗಳು ಮಾತ್ರ ಜನ ನೀಡಿದ ಭಿಕ್ಷಾನ್ನವನ್ನು ಒಬ್ಬ ಸಾಲಗಾರನಂತೆ ತಿಂದೆ" ಎಂದನು. ಯಾಕೆಂದರೆ ಎಂಟನೆಯ ದಿನ ಅರಹತನಿಗಿರಬೇಕಾದ ನಿಬ್ಬಾಣದ ವಿಪಸ್ಸನವು ಉದಯವಾಗಿತ್ತು.

## ಆಯುಷ್ಮಂತ ಥೇರನಂದ

ಮಹಾರಾಣಿ ಮಾಯಾದೇವಿಯ ತಂಗಿಯಾದ ರಾಣಿ ಮಹಾಪಜಾಪತಿ ಗೋತಮಿಯು ರಾಜಕುಮಾರ ಸಿದ್ಧಾರ್ಥನು ಹುಟ್ಟಿದ ಎರಡು ದಿನಗಳ ನಂತರ ರಾಜಕುಮಾರ ನಂದನಿಗೆ ಜನ್ಮ ಕೊಡುತ್ತಾಳೆ. ಸಿದ್ಧಾರ್ಥ ಹುಟ್ಟಿದ ಏಳು ದಿನಗಳ ನಂತರ ರಾಣಿ ಮಾಯಾದೇವಿಯು ತೀರಿಹೋಗುತ್ತಾಳೆ. ಆಗ ಪಜಾಪತಿ ಗೋತಮಿಯೇ ಬೋಧಿಸತ್ವ ಸಿದ್ಧಾರ್ಥನನ್ನು ಸಲಹುತ್ತಾಳೆ.

ಬುದ್ಧರಾದ ಮೇಲೆ ಮೊದಲಬಾರಿಗೆ ಕಪಿಲವಸ್ತುವಿಗೆ ಬರುತ್ತಾರೆ. ಆ ಸಂದರ್ಭದಲ್ಲಿ ರಾಜಕುಮಾರ ನಂದನಿಗೆ ಸಿಂಹಾಸನದ ಉತ್ತರಾಧಿಕಾರಿಯಾಗಿ ಪಟ್ಟ ಕಟ್ಟುವ ಮತ್ತು ಅವನಿಗೆ ವಿವಾಹ ನಡೆಸುವ ಸಮಾರಂಭಗಳು ಜರುಗುತ್ತಿದ್ದವು. ಬುದ್ಧರು ಬಂದು ಮೂರು ದಿನಗಳಾಗಿದ್ದವು. ಬುದ್ಧರು ಭಿಕ್ಷಾನ್ನಕ್ಕಾಗಿ ಅರಮನೆಯನ್ನು ಪ್ರವೇಶಿಸಿದರು. ಬುದ್ಧರು ಭಿಕ್ಷಾನ್ನವನ್ನು ಭುಂಜಿಸಿದ ಮೇಲೆ ತಮ್ಮ ಸ್ಥಾನದಿಂದ ಎದ್ದು ರಾಜಕುಮಾರ ನಂದನಿಗೆ ಕೊಟ್ಟ ಪಿಂಡಪಾತ್ರೆಯನ್ನು ಹಿಂದಕ್ಕೆ ಪಡೆಯದೆ ನಿರ್ಗಮಿಸುತ್ತಾರೆ. ತಥಾಗತನ ಮೇಲಿನ ಅಪಾರ ಗೌರವದಿಂದಾಗಿ ರಾಜಕುಮಾರ ನಂದನು "ಪರಮಪೂಜ್ಯರೆ, ತಮ್ಮ ಪಿಂಡಪಾತ್ರೆಯನ್ನು ತೆಗೆದುಕೊಳ್ಳಿ" ಎಂದು ಹೇಳಲಾಗಲಿಲ್ಲ. ಭಗವಾನರು ಮೆಟ್ಟಿಲಿಳಿಯುವ ಮುನ್ನ ಪಿಂಡಪಾತ್ರೆಯನ್ನು ತೆಗೆದುಕೊಳ್ಳುವರೆಂದು ಭಾವಿಸಿದ. ಆದರೆ ಭಗವಾನರು ಅದನ್ನು ತೆಗೆದುಕೊಳ್ಳಲಿಲ್ಲ.

ಬುದ್ಧರು ಅರಮನೆಯನ್ನು ನಿರ್ಗಮಿಸಿದಂತೆ ನಂದನೂ ಹಿಂಬಾಲಿಸಿದ. ಆಗ ಅವನ ನವವಧು ಜನಪದ ಕಲ್ಯಾಣಿಗೆ ಅವಳ ಸಖಿಯರು "ಅಮ್ಮಾ, ಭಗವಾನರು ರಾಜಕುಮಾರ ನಂದನನ್ನು ತಮ್ಮ ಜೊತೆಗೆ ಕರೆದುಕೊಂಡು ಹೋಗಿದ್ದಾರೆ, ನೀವು ಅವರನ್ನು ಕಳೆದುಕೊಳ್ಳಬಹುದು" ಎಂದರು. ಜನಪದ ಕಲ್ಯಾಣಿಯು ಕೆದರಿದ ಕೇಶದಿಂದ, ಕಣ್ಣುಗಳಲ್ಲಿ ನೀರು ತುಂಬಿಕೊಂಡು ನಂದನ ಹಿಂದೆ ಓಡಿಹೋಗಿ "ಆರ್ಯಪುತ್ರ, ದಯಮಾಡಿ ವಾಪಸ್ಸು ಬನ್ನಿ" ಎಂದಳು. ಅವಳ ಮಾತುಗಳು ಅವನ ಹೃದಯವನ್ನು ಹೊಕ್ಕು ಅಲ್ಲಿಯೇ ಅಚ್ಚೊತ್ತಿದ್ದವು.

ಬುದ್ಧರು ರಾಜಕುಮಾರ ನಂದನಿಂದ ಪಿಂಡಪಾತ್ರೆಯನ್ನು ಪಡೆಯದೆ ನೇರವಾಗಿ ವಿಹಾರಕ್ಕೆ ತೆರಳಿ "ನಂದಾ, ನೀನು ಭಿಕ್ಖುವಾಗುವಿಯೇನು?" ಎಂದು ಪ್ರಶ್ನಿಸಿದರು. ಬುದ್ಧರ ಮೇಲೆ ಎಷ್ಟು ಭಕ್ತಿ ಇತ್ತೆಂದರೆ: "ಇಲ್ಲ, ನಾನು ಭಿಕ್ಖುವಾಗುವುದಿಲ್ಲ" ಎಂದು



ಹೇಳುವ ಬದಲು "ಆಗಲಿ ಭಗವಾನರೆ, ನಾನು ಭಿಕ್ಖುವಾಗುತ್ತೇನೆ" ಎಂದನು. ಬುದ್ಧರು ಅಗ್ರ ಸಾವಕರೊಬ್ಬರಿಗೆ ದೀಕ್ಷೆಯನ್ನು ನೀಡಲು ಹೇಳಿದರು. ಹೀಗೆ ಕಪಿಲವಸ್ತುವಿಗೆ ಬಂದ ಮಾರನೇ ದಿನವೇ ನಂದನು ಭಿಕ್ಖುವಾದನು.

ಆಯುಷ್ಮಂತ ನಂದನು ಜೇತವನ ವಿಹಾರದಲ್ಲಿದ್ದ ಸಂದರ್ಭದಲ್ಲಿ ಬ್ರಹ್ಮಚರಿಯ ಜೀವನದಲ್ಲಿರಲು ತೃಪ್ತಿಪಡಲಿಲ್ಲ. ಹಾಗೆಂದು ಭಿಕ್ಖುಗಳಿಗೆ ಹೇಳಿದ. ಆ ಮಾತು ಬುದ್ಧರಿಗೂ ಮುಟ್ಟಿತು.

ಈಗ ಭಗವಾನ್ ಬುದ್ಧರು ಆಯುಷ್ಮಂತ ನಂದನನ್ನು ಕಂಕುಳಲ್ಲಿ ಹಿಡಿದು ತನ್ನ ಅನುಮಾನ ಲೋಕೋತ್ತರ ಶಕ್ತಿಯನ್ನು ಪ್ರಯೋಗಿಸಿ ತಾವತಿಂಸ ದಿವ್ಯಲೋಕವನ್ನು ಪ್ರವೇಶಿಸಿದರು. ಹೀಗೆ ದಿವ್ಯಲೋಕಕ್ಕೆ ಹಿಮಾಲಯ ಶ್ರೇಣಿಯ ಮೂಲಕ ಹಾದು ಹೋಗುವಾಗ ಸುಟ್ಟುಹೋದ ಅಡವಿಯಲ್ಲಿನ ಇದ್ದಿಲಾದ ಕೊಂಬೆಯ ಮೇಲೆ ಕಿವಿ, ಮೂಗು, ಬಾಲ ಎಲ್ಲ ಅಲ್ಲಲ್ಲಿ ಸುಟ್ಟುಹೋದ ವಿಕಾರ ರೂಪದ ಹೆಣ್ಣು ಕೋತಿಯನ್ನು ನಂದನಿಗೆ ತೋರಿಸಿದರು. ಇಲ್ಲಿ ದಿವ್ಯ ಲೋಕದಲ್ಲಿ ಐದುನೂರು ಜನ ಸುಂದರ ಗುಲಾಬಿ ಬಣ್ಣದ ಪಾದಗಳುಳ್ಳ ಅಪ್ಸರೆಯರು ತಾವತಿಂಸ ದಿವ್ಯಲೋಕದ ಅರಸನಾದ ಸಕ್ಕನಿಗಾಗಿ ಕಾಯುತ್ತಿರುವುದನ್ನು ತೋರಿಸಿದನು.

ಬುದ್ಧರು ಅಪ್ಸರೆಯರನ್ನು ತೋರಿಸಿ, "ನಂದ ಇವರಲ್ಲಿ ಯಾರು ಸೌಂದರ್ಯವತಿಯರು, ನಿನ್ನ ಶಾಕ್ಯ ಕುಲದ ರಾಣಿ ಜನಪದ ಕಲ್ಯಾಣಿಯೋ ಅಥವಾ ಈ ಐದುನೂರು ಜನರ ಪೈಕಿ ಯಾರಾದರೂ ಒಬ್ಬರೋ?" ಎಂದು ಕೇಳಿದರು. "ಪೂಜ್ಯರೆ, ನಾವು ಹಿಮಾಲಯ ಪರ್ವತ ಶ್ರೇಣಿಯ ಮೂಲಕ ಹಾದುಹೋಗುತ್ತಿದ್ದಾಗ ತಾವು ನನಗೆ ಕಿವಿ, ಮೂಗು, ಬಾಲ ಸುಟ್ಟ ಹೆಣ್ಣು ಕೋತಿಯನ್ನು ತೋರಿಸಿದಿರಿ. ಆ ಹೆಣ್ಣು ಕೋತಿಯ ಮುಂದೆ ಜನಪದ ಕಲ್ಯಾಣಿಯು ಏನೂ ಅಲ್ಲ. ಹೀಗಿರುವಾಗ ಆ ಶಾಕ್ಯಕುಲದ ರಾಜಕುಮಾರಿಯನ್ನು ಸುಂದರ ಪಾದಗಳಿರುವ ಅಪ್ಸರೆಯರ ಸೌಂದರ್ಯಕ್ಕೆ ಹೋಲಿಸಿದರೆ ಇವರ ಸೌಂದರ್ಯದ ಒಂದು ಅಂಶವೂ ಅವಳಲ್ಲಿಲ್ಲ. ನಿಜವಾಗಿಯೂ ಈ ಅಪ್ಸರೆಯರು ಅಪಾರವಾದ ಗುಣ ಸೌಂದರ್ಯಗಳನ್ನು ಹೊಂದಿರುವವರು" ಎಂದನು.

ಭಗವಾನರು "ನಂದ, ನೀನು ಈ ಬ್ರಹ್ಮಚರಿಯ ಜೀವನದಲ್ಲಿ ಸುಖವಾಗಿರು, ನೀನು ಖಂಡಿತವಾಗಿಯೂ ಈ ಗುಲಾಬಿ ಬಣ್ಣದ ಪಾದಗಳುಳ್ಳ ಅಪ್ಸರೆಯರಲ್ಲಿ ಒಬ್ಬಳನ್ನು ಗೆಲ್ಲಬಹುದು" ಎಂದರು. "ಭಗವಾನರೆ, ತಾವು ಈ ದಿವ್ಯ ಅಪ್ಸರೆಯರಲ್ಲಿ ಒಬ್ಬಳು ನನ್ನವಳಾಗುತ್ತಾಳೆಂದು ಭರವಸೆ ನೀಡಿದರೆ ನಾನು ಈ ಬ್ರಹ್ಮಚರಿಯ ಜೀವನವನ್ನು ಕಳೆಯಲು ಇಷ್ಟಪಡುತ್ತೇನೆ."

ಆನಂತರದಲ್ಲಿ ಭಗವಾನರು ಆಯುಷ್ಮಂತ ನಂದನನ್ನು ಕಂಕುಳಲ್ಲಿ ಹಿಡಿದು ತಾವತಿಂಸ ದಿವ್ಯಲೋಕದಿಂದ ಅಂತರ್ಧಾನರಾಗಿ ಜೇತವನದಲ್ಲಿ ಪ್ರತ್ಯಕ್ಷರಾದರು. ಇಲ್ಲಿ ಜೇತವನದ ಭಿಕ್ಖುಗಳು ತಮ್ಮತಮ್ಮಲ್ಲಿ ಹೀಗೆ ಮಾತನಾಡಿಕೊಳ್ಳುತ್ತಿದ್ದರು: "ಭಗವಾನರ ಸೋದರನಾದ

ಆಯುಷ್ಮಂತ ನಂದನು ದಿವ್ಯ ಅಪ್ಸರೆಯರನ್ನು ಒಲಿಸಿಕೊಳ್ಳುವ ಸಲುವಾಗಿ ಬ್ರಹ್ಮಚರ್ಯ ಜೀವನವನ್ನು ನಡೆಸುತ್ತಿದ್ದಾನೆ. ಭಗವಾನರೇ, ಅವನು ದಿವ್ಯಲೋಕದ ಅಪ್ಸರೆಯನ್ನು ಒಲಿಸಿಕೊಳ್ಳಲು ಶಕ್ಯನಾಗಿದ್ದಾನೆಂದು ಹೇಳಿದ್ದಾರೆ." ಅಂದರೆ ತಾವತಿಂಸ ಲೋಕದಲ್ಲಿ ಹುಟ್ಟಿ, ಹೇಗೆ ದೇವರಾಜ ಸಕ್ಕನು ಅಪ್ಸರೆಯರನ್ನು ಒಲಿಸಿಕೊಂಡನೋ ಹಾಗೆ. ಆಯುಷ್ಮಂತ ನಂದನ ಸೋದರ ಭಿಕ್ಖುಗಳು ಅವನನ್ನು 'ಕೂಲಿಯಾಳು', 'ಖರೀದಿಸಲ್ಪಟ್ಟವನು' ಎಂಬುದಾಗಿ ಮಾತನಾಡಿಕೊಳ್ಳುತ್ತಿದ್ದರು. "ಆಯುಷ್ಮಂತ ಆನಂದನು ಖರೀದಿಗೆ ಒಳಗಾಗಿ ದಿವ್ಯ ಅಪ್ಸರೆಯರನ್ನು ಒಲಿಸಿಕೊಳ್ಳುವ ಸಲುವಾಗಿ ಬ್ರಹ್ಮಚರ್ಯ ಜೀವನವನ್ನು ನಡೆಸುತ್ತಿದ್ದಾನೆ. ಉತ್ತಮ ಬ್ರಹ್ಮಚರ್ಯ ಜೀವನವನ್ನು ನಡೆಸಿದರೆ ಅಪ್ಸರೆಯನ್ನು ಪಡೆಯಬಹುದೆಂದು ಭಗವಾನರೇ ಹೇಳಿದ್ದಾರಂತೆ" ಎಂಬ ವಾರ್ತೆಯು ಅಲ್ಲಲ್ಲಿ ಸುಳಿದಾಡುತ್ತಿತ್ತು.

ಆಯುಷ್ಮಂತ ನಂದನಿಗೆ ತನ್ನ ಸೋದರ ಭಿಕ್ಖುಗಳು ತನ್ನನ್ನು ಖರೀದಿಸಲ್ಪಟ್ಟ ಕೂಲಿಯಾಳು ಎಂಬ ಅಡ್ಡ ಹೆಸರಿನಿಂದ ಕರೆಯುತ್ತಿರುವುದು ಕಿವಿಗೆ ಬಿದ್ದು, ನಾಚಿಕೆಯೂ, ಅವಮಾನವೂ ಆಯಿತು. ಆದ್ದರಿಂದ ಪ್ರಪಂಚದಿಂದ ದೂರ ಉಳಿದು ಏಕಾಂತದಲ್ಲಿದ್ದುಕೊಂಡು ಗಂಭೀರ ಧ್ಯಾನಿಯಾಗಿ ಮೌನಿಯಾಗಿರಲು ತೀರ್ಮಾನಿಸಿದನು. ಕೊನೆಗೆ ಭಿಕ್ಖುವಿನ ಅಂತಿಮ ಗುರಿಯಾದ ಅರಹತ ಸ್ಥಿತಿಯನ್ನು ತಲುಪುವಲ್ಲಿ ವಿಜಯಿಯಾದನು.

ಯಾರು ನಿಬ್ಬಾಣಕ್ಕಾಗಿ ಭಗವಾನ್ ಬುದ್ಧರ ಅಡಿಯಲ್ಲಿ ಅನಗಾರಿಕ ಪಬ್ಬಜ್ಜವನ್ನು ಆಚರಿಸಲು ಸಾವಿರಾರು ಆರ್ಯ ಯುವಕರು ಗೃಹತ್ಯಾಗ ಮಾಡುತ್ತಾರೋ ಅಂತಹ ಪರಮಸತ್ಯವಾದ ನಿಬ್ಬಾಣವನ್ನು ಆಯುಷ್ಮಂತ ನಂದ ಥೇರನು ಇಲ್ಲಿಯೇ ಈಗಲೇ ಹೊಂದಿದನು. ಬುದ್ಧರು ಬ್ರಹ್ಮಚರಿಯ ಜೀವನದ ಅಂತಿಮ ಗುರಿ ಯಾವುದು ಎಂಬುದನ್ನು ತಿಳಿಸಿದ್ದರೋ ಅದನ್ನು ನೇರ ಜ್ಞಾನದಿಂದ ಹೀಗೆ ಪಡೆದನು: "ಅರಹಂತನಾದವನು ಪುನರ್ಜನ್ಮವನ್ನು ಕೊನೆಗಾಣಿಸುತ್ತಾನೆ, ಬ್ರಹ್ಮಚರ್ಯ ಜೀವನದ ಅಂತಿಮ ಗುರಿಯನ್ನು ಸಾಧಿಸುತ್ತಾನೆ. ಅವನು ಎಲ್ಲ ಕೆಲಸಗಳನ್ನೂ ಮುಗಿಸುತ್ತಾನೆ. ಮುಂದೆ ಹುಟ್ಟಿ ಬರಬೇಕಾದ ಯಾವ ಕೆಲಸಗಳು ಉಳಿದಿರುವುದಿಲ್ಲ". ಆಯುಷ್ಮಂತ ನಂದನು ಬುದ್ಧರ ಜ್ಞಾನೋದಯ ಹೊಂದಿದ ಅರಹತ ಶಿಷ್ಯರ ಸಾಲಿಗೆ ಸೇರಿದನು.

ರಾತ್ರಿ ಮುಗಿಯುವ ಮುನ್ನ ಆಯುಷ್ಮಂತ ನಂದನು ಭಗವಾನರ ಬಳಿ ಹೋಗಿ ಕಾಲಿಗೆರಗಿ "ಪೂಜ್ಯರೆ, ನಾನಿಂದು ತಾವು ಕೊಟ್ಟ ಭರವಸೆಯಿಂದ ತಮ್ಮನ್ನು ಮುಕ್ತಗೊಳಿಸುತ್ತೇನೆ ಅಂದರೆ ನಾನು ಸುಂದರ ಪಾದಗಳುಳ್ಳ ದಿವ್ಯ ಅಪ್ಸರೆಯರನ್ನು ಒಲಿಸಿಕೊಳ್ಳುವ ಪ್ರಶ್ನೆ ಇಲ್ಲ."

ಆಗ ಭಗವಾನರು "ನಂದ, ನಾನು ನಿನ್ನ ಮನಸ್ಸನ್ನು ಹೊಕ್ಕು ನೀನು ಆಸವಗಳಿಂದ ಮುಕ್ತವಾದ ಅರಹತ ಸ್ಥಿತಿಯನ್ನು ನೇರ ಜ್ಞಾನದಿಂದ ಪಡೆದು ಅದರಲ್ಲೇ ನಿವಾಸಿಸಿರುವೆ ಎಂಬುದನ್ನು ಕಂಡಿದ್ದೇನೆ. ನಂದ, ಒಬ್ಬ ದೇವತೆಯು ಬಂದು ನನಗೆ ಹೇಳಿದಳು:



"ಯಾವಾಗ ಆಸವ ಕ್ಷಯಗಳನ್ನು ಮಾಡಿಕೊಂಡು ಸಾಂಸಾರಿಕ ಬಂಧನಗಳಿಂದ ಮುಕ್ತನಾದೆಯೋ ಆಗಿನಿಂದಲೇ ನಾನು ಕೊಟ್ಟ ವಾಗ್ದಾನದಿಂದ ಬಿಡುಗಡೆಯಾಗಿದ್ದೇನೆಂದು ಹೇಳಿತು" ಎಂದರು. ಈ ಮಾತುಗಳನ್ನು ಹೇಳಿ ಭಗವಾನರು ಪರಮ ಸಂತೋಷದಿಂದ ಈ ಗಾಥೆಯನ್ನು ಹೇಳಿದರು:

*ಯಾರು ಕೆಸರನ್ನು ದಾಟುತ್ತಾರೊ*
*ಅವರು ಮುಳ್ಳೆಂಬ ಕಾಮವನ್ನು ದಮಿಸುತ್ತಾರೆ*
*ಭ್ರಮೆಗಳ ಅಂತ್ಯಕ್ಕೆ ಬಂದು*
*ಸುಖ ದುಃಖಗಳಿಂದ ತಾಕದವರಾಗುತ್ತಾರೆ.*

## ಆಯುಷ್ಮಂತ ರಾಹುಲ

ಮೊದಲನೇ ವರ್ಷವೇ ಬುದ್ಧರು ಎರಡು ವಾಗ್ದಾನಗಳನ್ನು ತೀರಿಸಿದರು; ಒಂದು ಯಶೋಧರೆ ಮತ್ತು ಮಗ ರಾಹುಲನಿಗೆ ನೀಡಿದ್ದು. ಎರಡು, ದೊರೆ ಬಿಂಬಿಸಾರನಿಗೆ ನೀಡಿದ್ದು. ರಾಜಕುಮಾರ ಸಿದ್ಧಾರ್ಥನು ಗೃಹವನ್ನು, ಸಿಂಹಾಸನವನ್ನು ತ್ಯಾಗ ಮಾಡುವಾಗ ತನ್ನ ಹೆಂಡತಿ ಯಶೋಧರೆ ಮತ್ತು ಆಗತಾನೆ ಹುಟ್ಟಿದ ರಾಹುಲನಿಗೆ ತಾನು ಅಂತಿಮ ಸತ್ಯ ನಿಬ್ಬಾಣವನ್ನು ಕಂಡುಕೊಂಡು ದುಃಖದಿಂದ ಮುಕ್ತವಾಗುವ ಉನ್ನತೋನ್ನತ ಪ್ರಜ್ಞೆಯನ್ನು ಹಂಚಲು ವಾಪಸು ಬರುತ್ತೇನೆಂದು ಹೇಳಿದ್ದರು. ಅಂತಿಮ ಸತ್ಯದ ಶೋಧನೆಗಾಗಿ ಪರಿವ್ರಾಜಕ ಸಂನ್ಯಾಸಿಯಾಗಿ ಅಲೆದಾಡುತ್ತಿದ್ದಾಗ ಮಗಧ ದೇಶದ ರಾಜಧಾನಿ ರಾಜಗಹಕ್ಕೆ ಹೋದಾಗ ಅಲ್ಲಿನ ದೊರೆ ಬಿಂಬಿಸಾರನನ್ನು ಭೇಟಿಯಾಗಿದ್ದರು. ದೊರೆ ಬಿಂಬಿಸಾರನು ಸಿದ್ಧಾರ್ಥನನ್ನು ಗೃಹಸ್ಥ ಜೀವನಕ್ಕೆ ಮರಳಿ ಬರುವಂತೆ ಬಹು ಪ್ರಯತ್ನ, ವಿನಂತಿ ಮಾಡಿದ್ದನು, ಆದರೆ ಅದು ಈಡೇರಲಿಲ್ಲ. ಸಿದ್ಧಾರ್ಥನು ಅನಗಾರಿಕ ಧಮ್ಮವನ್ನೇ ಪಾಲಿಸಿ, ಅಂತಿಮ ಸತ್ಯವನ್ನು ತಾನು ಕಂಡುಹಿಡಿದೇ ತೀರುತ್ತೇನೆಂದು ನಿರ್ಧರಿಸಿದ್ದನು. ಆಗ ದೊರೆ ಬೋಧಿಸತ್ವ ಸಿದ್ಧಾರ್ಥನಿಗೆ ಜ್ಞಾನೋದಯ ಪಡೆದ ನಂತರ ತನ್ನ ರಾಜ್ಯಕ್ಕೆ ಬಂದು ತನಗೂ ತನ್ನ ಪ್ರಜೆಗಳಿಗೂ ಧಮ್ಮವನ್ನು ಬೋಧಿಸುವಂತೆ ವಿನಂತಿಸಿದ್ದನು. ಹಾಗೆಯೇ ಮಾಡುವುದಾಗಿ ಬೋಧಿಸತ್ವನು ಹೇಳಿದ್ದನು.

ಭಗವಾನ್ ಬುದ್ಧರು ತಮ್ಮ ಮೊದಲ ಧಮ್ಮೋಪದೇಶ ಧಮ್ಮಚಕ್ಕಪವತ್ತನ ಸುತ್ತವನ್ನು ಇಸಿಪಟಣದ ಮಿಗದಾಯಿಯಲ್ಲಿ ನೀಡಿದರು. ಆ ಸಂದರ್ಭದಲ್ಲಿ ಒಟ್ಟು ಅರವತ್ತು ಭಿಕ್ಖುಗಳು ಅರಹತರಾಗಿ ಭಿಕ್ಖು ಸಂಘಕ್ಕೆ ಕಾರಣರಾದರು. ಆಗ ಆ ಭಿಕ್ಖುಗಳಿಗೆ ಬುದ್ಧರು ನೀಡಿದ ಸಂದೇಶ ಹೀಗಿತ್ತು: "ಭಿಕ್ಖುಗಳೇ, ಬಹುಜನರ ಹಿತಕ್ಕಾಗಿ ಬಹುಜನರ ಸುಖಕ್ಕಾಗಿ ಮುನ್ನಡೆಯಿರಿ. ಸಂಸಾರ ಬಂಧನದಲ್ಲಿ ಸಿಲುಕಿರುವ ಜನರನ್ನು ಮುಕ್ತಿಗೊಳಿಸಲು ಈ ಧಮ್ಮವನ್ನು ಬೋಧಿಸಿ. ಇಬ್ಬರು ಒಂದೇ ದಿಕ್ಕಿನಲ್ಲಿ ಹೋಗದಿರಿ. ಇನ್ನು ಹೊರಡಿ, ಆರ್ಯ ಧರ್ಮವನ್ನು ಬೋಧಿಸಿ."

ಹೀಗೆ ಸಂದೇಶವನ್ನು ನೀಡಿದ ಮೇಲೆ ಬೌದ್ಧ ಸಂಘದ ಭಿಕ್ಖುಗಳು ಎಲ್ಲ ದಿಕ್ಕುಗಳಿಗೂ ಹೊರಟಮೇಲೆ ಭಗವಾನರು ಉರುವೇಲದ ಕಡೆಗೆ ತೆರಳಿದರು. ಅಗ್ನಿಯ ಉಗ್ರ ಆರಾಧಕರಾದ ಜಟಿಲ ಸಂನ್ಯಾಸಿಗಳಿಗೆ ತನ್ನ ಅಸಮಾನ ಶಕ್ತಿಯನ್ನು ಪ್ರಯೋಗಿಸಿ ಧಮ್ಮವನ್ನು ಉಪದೇಶಿಸಿದರು. ಅವರೆಲ್ಲರೂ ಬುದ್ಧರ ಶಿಷ್ಯರಾದರು ಮತ್ತು ಬುದ್ಧರ 'ಆದಿತ್ತಾ ಪರಿಯಾಯ' (ಎಲ್ಲವೂ ಸುಡುವಂಥದೇ) ಸುತ್ತವನ್ನು ಕೇಳಿದ ಮೇಲೆ ಅವರೆಲ್ಲರೂ ಅರಹತರಾದರು. ಹೀಗೆ ಇಲ್ಲಿನ ಒಟ್ಟು ಒಂದು ಸಾವಿರದ ಮೂರು ಬಿಕ್ಖುಗಳೊಂದಿಗೆ ದೊರೆ ಬಿಂಬಿಸಾರನಿಗೆ ಇತ್ತ ಮಾತನ್ನು ಉಳಿಸಿಕೊಳ್ಳಲು ರಾಜಗಹಕ್ಕೆ ತೆರಳಿದರು.

ಬುದ್ಧರು ನಗರಕ್ಕೆ ಬರುತ್ತಿದ್ದಾರೆಂಬ ಸುದ್ದಿಯನ್ನು ಕೇಳಿದ ಕೂಡಲೇ ದೊರೆ ಬಿಂಬಿಸಾರನು ಒಂದು ಸಾವಿರ ಜನರನ್ನು ಸೇರಿಸಿದನು. ಅದರಲ್ಲಿ ಪುರಪ್ರಮುಖರು ಮತ್ತು ಸಾಮಾನ್ಯ ಜನರೂ ಇದ್ದರು. ಇವರೆಲ್ಲರೂ ಬುದ್ಧರು ಇರುವ ವಿಶಾಲ ಆಲದ ಮರದ ಚೈತ್ಯಕ್ಕೆ ಬಂದರು. ಭಗವಾನ್ ಬುದ್ಧರ ಧಮ್ಮೋಪದೇಶವನ್ನು ಕೇಳಿದಮೇಲೆ ಬಂದ ಜನರ ಧಮ್ಮಚಕ್ಷು ತೆರೆಯಿತು. ಇವರೆಲ್ಲರೂ ನಿಬ್ಬಾಣ ಮಾರ್ಗದ ಸ್ರೋತಾಪನ್ನರಾಗಿ ಬುದ್ಧರ ಮೊದಲ ಆರ್ಯ ಶಿಷ್ಯರಾದರು. ದೊರೆ ಬಿಂಬಿಸಾರನು ಭಗವಾನ್ ಬುದ್ಧರನ್ನು ಅವರ ಭಿಕ್ಖು ಸಂಘವನ್ನು ಮಾರನೆದಿನ ಪಿಂಡಪಾತಕ್ಕೆ ಆಹ್ವಾನಿಸಿದನು. ಸಮ್ಮಾಸಂಬುದ್ಧರನ್ನು ಅವರ ಭಿಕ್ಖುಸಂಘವನ್ನು ಬರಮಾಡಿಕೊಳ್ಳಲು ಎಲ್ಲರೀತಿಯ ಸಿದ್ಧತೆಯನ್ನು ಮಾಡಿಕೊಂಡನು. ಬುದ್ಧರು ಪೂರ್ವಾಹ್ನದ ಭಿಕ್ಷಾನ್ನವನ್ನು ಮುಗಿಸಿದ ಮೇಲೆ ದೊರೆ ಬಿಂಬಿಸಾರನಿಂದ ವೇಣುವನವನ್ನು ತಮ್ಮ ಮೊದಲ ವಿಹಾರವನ್ನಾಗಿ ಸ್ವೀಕರಿಸಿದರು. ಭಗವಾನರು ಅಲ್ಲಿ ವಾಸ್ತವ್ಯ ಹೂಡಿ ತಮ್ಮ ಅನುಕಂಪಪೂರಿತ ಧಮ್ಮ ಪ್ರಚಾರವನ್ನು ಆರಂಭಿಸಿದರು. ಆಗ ಡಿಸೆಂಬರ್‌ನ ತುಂಬು ಹುಣ್ಣಿಮೆಯ ದಿನವಾಗಿತ್ತು.

ಮುಂದಿನ ಎರಡು ತಿಂಗಳಲ್ಲಿ ಅವಿರತವಾಗಿ ಧಮ್ಮ ಬೋಧನೆಯಲ್ಲಿ ತೊಡಗಿದ್ದರು. ಬಹಳಷ್ಟು ಉಪಾಸಕರು ಮತ್ತು ಪರಿವ್ರಾಜಕರು ಬುದ್ಧರ ಶಿಷ್ಯರಾದರು. ತಂದೆಯಾದ ದೊರೆ ಶುದ್ಧೋಧನನಿಗೆ ತನ್ನ ಮಗನ ಆಧ್ಯಾತ್ಮಿಕ ಚಟುವಟಿಕೆಗಳು ಗೊತ್ತಾಗಿ ಒಬ್ಬ ನಿಷ್ಠಾವಂತ ಮಂತ್ರಿಯನ್ನು, ಅವನೊಡನೆ ಒಂದು ಸಾವಿರ ಜನ ಆಸ್ಥಾನ ಸದಸ್ಯರನ್ನು ತನ್ನ ಪರವಾಗಿ ಕಳುಹಿಸಿ ಭಗವಾನ್ ಬುದ್ಧರನ್ನು ತಮ್ಮ ಶಿಷ್ಯರ ಸಮೇತ ಕಪಿಲವಸ್ತುವಿಗೆ ಬಂದು ಆರ್ಯ ಧರ್ಮವನ್ನು ಬೋಧಿಸುವಂತೆ ವಿನಂತಿಸುವ ನಿರೂಪವನ್ನು ಕೊಟ್ಟರು. ಈ ನಿರೂಪದಂತೆ ಶಾಕ್ಯ ನಿಯೋಗವು ಬುದ್ಧರ ಬಳಿ ಬಂದು ಅವರು ಬೋಧಿಸಿದ ಧಮ್ಮವನ್ನು ಕೇಳಿ ಎಲ್ಲರೂ ಪಾರಮಾರ್ಥಿಕವಾಗಿ ಪರಿವರ್ತಿತರಾದರು. ಅವರೆಲ್ಲರೂ ಅರಹತರಾಗಿ ಆ ವಿಹಾರದಲ್ಲಿಯೇ ನೆಲೆಸಿದರು.

ನಿಬ್ಬಾಣದ ಸುಖದಲ್ಲಿ ತಲ್ಲೀನರಾದ ಶಾಕ್ಯರು ಬುದ್ಧರನ್ನು ಆಹ್ವಾನಿಸಲೂ ಇಲ್ಲ, ದೊರೆ ಶುದ್ಧೋಧನನಿಗೆ ಸಂದೇಶವನ್ನೂ ಕಳುಹಿಸಲಿಲ್ಲ. ದೊರೆ ನಿಯೋಗದ ಮೇಲೆ



ನಿಯೋಗವನ್ನು ಕಳುಹಿಸುತ್ತಲೇ ಇದ್ದ. ಎಲ್ಲ ನಿಯೋಗಗಳ ಗತಿ ಒಂದೇ ಆಯಿತು! ಕೊನೆಯದಾಗಿ ಹತ್ತನೇ ನಿಯೋಗವನ್ನು ತನ್ನ ಮಂತ್ರಿ ಕಲುದಾಯಿಯ ನೇತೃತ್ವದಲ್ಲಿ ಕಳುಹಿಸಿ ಬುದ್ಧರನ್ನು ಕರೆತರಲೇಬೇಕೆಂದು ನಿರ್ದೇಶಿಸಿದ. ಆಗ ಕಲುದಾಯಿ ಹೇಳಿದ: "ನಾನು ಭಗವಾನ್ ಬುದ್ಧರನ್ನು ಕರೆತರುತ್ತೇನೆ, ಷರತ್ತೆಂದರೆ ನಾನು ಭಿಕ್ಖು ಸಂಘ ಸೇರಲು ಅವಕಾಶ ಸಿಕ್ಕರೆ ಮಾತ್ರ." ದೊರೆ ಇದಕ್ಕೆ ಸಮ್ಮತಿಸಲು ಕಲುದಾಯಿಯು ರಾಜಗಹಕ್ಕೆ ತೆರಳಿ ಬುದ್ಧರನ್ನು ಕಪಿಲವಸ್ತುವಿಗೆ ತರಲು ಯಶಸ್ವಿಯಾದ.

ಭಗವಾನ ಬುದ್ಧರು ವಿಶೇಷವಾಗಿ ನಿರ್ಮಿಸಲಾದ ನ್ಯಗ್ರೋಧಾರಾಮದಲ್ಲಿ ತಂಗಿದರು. ಬುದ್ಧರು ಎರಡನೆಯದಿನ ಭೇಧಭಾವವೆಣಿಸದೆ ಕಪಿಲವಸ್ತುವಿನಲ್ಲಿ ಮನೆಯಿಂದ ಮನೆಗೆ ಭಿಕ್ಷೆಗಾಗಿ ಹೋದರು. ತೇಜೋಮಯ ಬುದ್ಧರು ಶಾಂತರೀತಿಯಿಂದ ನಡೆದು ಹೋಗುತ್ತಿರುವುದನ್ನು ಸುತ್ತಮುತ್ತಲಿನ ಜನರೆಲ್ಲ ಗುಂಪುಗಟ್ಟಿ ಬುದ್ಧರಿಗೆ ಶರಣು ಹೋಗಲು "ಅಗೋ, ನಮ್ಮ ರಾಜಕುಮಾರ ಸಿದ್ಧಾರ್ಥ ಭಗವಾನರು ಬರುತ್ತಿದ್ದಾರೆ" ಎಂದು ಪಲುಕುತ್ತಿದ್ದರು.

ರಾಹುಲನ ತಾಯಿ ರಾಜಕುಮಾರಿ ಯಶೋಧರೆಯು ಬುದ್ಧನು ತನ್ನ ಅರಹತ ಶಿಷ್ಯರೊಂದಿಗೆ ಭಿಕ್ಷಾನ್ನಕ್ಕಾಗಿ ಹೋಗುತ್ತಿರುವುದನ್ನು ಕಂಡು ಮನಸ್ಸು ಕಸಿವಿಸಿಯಾಗಿ "ಮೊದಲು ನಮ್ಮ ಈ ಆರ್ಯ ರಾಜಕುಮಾರನು ಬಂಗಾರದ ಪಲ್ಲಕ್ಕಿಯಲ್ಲಿ ಕುಳಿತು ರಾಜವೈಭವದಿಂದ ಹೋಗುತ್ತಿದ್ದನು. ಆದರೆ ಆಯ್ಯೋ, ಈಗ ಆತನು ಕೈಯಲ್ಲಿ ಬವನಾಸಿಯನ್ನು ಹಿಡಿದು ಭಿಕ್ಷಾನ್ನಕ್ಕಾಗಿ ನಗರದಲ್ಲಿ ಹೋಗುತ್ತಿದ್ದಾನೆ." ಮಗ ರಾಹುಲನ ಗಮನವನ್ನು ಸೆಳೆದು ಹೇಳಿದಳು: "ನನ್ನ ಮಗುವೇ ನೋಡು, ಗಾಂಭೀರ್ಯದಿಂದ ನಡೆದು ಹೋಗುತ್ತಿರುವ ಆರು ಬಣ್ಣಗಳ ಪ್ರಭಾವಳಿಯಿಂದ ಕೂಡಿದ ಸಂನ್ಯಾಸಿ ಇಪ್ಪತ್ತು ಸಾವಿರ ಭಿಕ್ಖುಗಳೊಂದಿಗೆ ಇರುವುದನ್ನು ನೋಡು, ಅವರೇ ಪುರುಷ ಸಿಂಹನಾದ ನಿನ್ನ ತಂದೆ."

ಆ ದೃಶ್ಯವನ್ನು ನೋಡಿಯೇ ಭಕ್ತಿ ಗೌರವಗಳಿಂದ ಕಂಪಿತಳಾಗಿ ಆನಂದದಿಂದ ಒಂಭತ್ತು ಗಾಥೆಗಳನ್ನು ಉಸುರಿದಳು. ಆನಂತರ ರಾಜನ ಬಳಿ ಹೋಗಿ "ಮಹಾರಾರೇ, ನಿಮ್ಮ ರಾಜಕುಲಪುತ್ರ ಇಪ್ಪತ್ತು ಸಾವಿರ ಅರಹತರ ಜೊತೆ ಭಿಕ್ಷಾನ್ನಕ್ಕೆ ಹೋಗುತ್ತಿದ್ದಾರೆ" ಎಂದು ಹೇಳಿದಳು.

ಈ ಮಾತನ್ನು ಕೇಳಿದಮೇಲೆ ರಾಜನು ತುಂಬ ವಿಹ್ವಲನಾಗಿ ಅರಮನೆಯಿಂದ ಹೊರಬಂದನು. ಬುದ್ಧರು ಮತ್ತು ಅವರ ಶಿಷ್ಯರು ತನ್ನ ಅರಮನೆಗೆ ಬಂದೇ ಬರುತ್ತಾರೆಂದು ಊಹಿಸಿದ್ದನು. ಆದರೆ ಹೀಗೆ ಭಿಕ್ಷೆಗಾಗಿ ತಿರುಗುತ್ತಿರುವುದನ್ನು ಕಂಡು "ಪರಮಪೂಜ್ಯರೆ, ತಾವು ಹೀಗೆ ಭಿಕ್ಷೆ ಬೇಡುವುದರಿಂದ ನಮ್ಮನ್ನೇಕೆ ಅವಮಾನಕ್ಕೊಳಗು ಮಾಡಿದಿರಿ?"

ಆಗ ಈ ಕೆಳಗಿನಂತೆ ಸಂವಾದ ನಡೆಯಿತು:

ಬುದ್ಧ: "ಮಹಾರಾಜರೆ, ನಾನು ತಮ್ಮನ್ನು ಅವಮಾನಕ್ಕೆ ಗುರಿ ಮಾಡುತ್ತಿಲ್ಲ. ನನ್ನ ಪಾರಂಪರ್ಯದ ಸಂಪ್ರದಾಯವನ್ನು ಅನುಸರಿಸುತ್ತಿದ್ದೇನೆ ಅಷ್ಟೇ."

ಮಹಾರಾಜ: "ಪರಮಪೂಜ್ಯರೆ, ಭಿಕ್ಷಾನ್ನದಿಂದ ಜೀವನವನ್ನು ನಡೆಸುವುದು ನಮ್ಮ ವಂಶದ ಪರಂಪರೆಯಲ್ಲ. ನಮ್ಮ ಕ್ಷತ್ರಿಯ ಕುಲದ ಸಂತತಿಯಲ್ಲಿ ಯಾವ ಕ್ಷತ್ರಿಯ ರಾಜನೂ ಭಿಕ್ಷೆಗೆ ಹೋಗಿಲ್ಲ."

ಬುದ್ಧ : "ಮಹಾರಾಜರೆ, ಭಿಕ್ಷೆಯನ್ನು ಬೇಡುವುದು ನಿಮ್ಮ ರಾಜ ಪರಂಪರೆಯಲ್ಲಿ ಇಲ್ಲ, ಆದರೆ ಬುದ್ಧ ಪರಂಪರೆಯಲ್ಲಿನ ಸಂಪ್ರದಾಯ. ನನ್ನ ಹಿಂದಿನ ಸಾವಿರಾರು ಬುದ್ಧರು ಬೇಧಭಾವ ಎಣಿಸದೆ ಭಿಕ್ಷಾನ್ನಕ್ಕೆ ಹೋಗುತ್ತಿದ್ದರು. ಅದುವೇ ಸರಿಯಾದ ಸಂನ್ಯಾಸಿ ಬದುಕು." ಹಾದಿಯಲ್ಲಿ ನಿಂತೇ ಬುದ್ಧರು ಈ ಗಾಥೆಯನ್ನು ಹೇಳಿದರು, ಅದು ಧಮ್ಮಪದದಲ್ಲಿ ಬಂದಿದೆ (ಗಾಥೆ-168)

***ಉತ್ತಿಟ್ಠೇ ನಪ್ಪಮಜ್ಜೇಯ್ಯ***
***ಧಮ್ಮಂ ಸುಚರಿತಂ ಚರೇ***
***ಧಮ್ಮಚಾರೀ ಸುಖಂ ಸೇತಿ***
***ಅಸ್ಮಿಂ ಲೋಕೇ ಪರಮ್ಹಿ ಚ.***

"ಎದ್ದೇಳು, ಅಜಾಗರೂಕನಾಗಬೇಡ. ಸಚ್ಚಾರಿತ್ರ್ಯದ ಜೀವನವನ್ನು ನಡೆಸು. ಒಳ್ಳೆಯದಾದ ಧರ್ಮವನ್ನು ಅನುಸರಿಸುವವನು ಈ ಲೋಕದಲ್ಲೂ ಪರಲೋಕದಲ್ಲೂ ಸುಖದಿಂದ ಬದುಕುವನು."

ಈ ಗಾಥೆ ಮುಗಿಯುವ ಹೊತ್ತಿಗೆ ರಾಜ ಶುದ್ಧೋಧನನು ಪಾರಮಾರ್ಥಿಕವಾಗಿ ಪರಿವರ್ತಿತನಾದನು. ನಿಬ್ಬಾಣದ ಹಾದಿಯಲ್ಲಿನ ಸ್ರೋತಾಪನ್ನನಾದನು. ಈ ಪವಿತ್ರ ಘಟನೆಯಿಂದ ತನ್ನ ಹತ್ತಿರದ ಬಂಧು ಬಾಂಧವರಿಗೆ ಜ್ಞಾನೋದಯವನ್ನು ಕೊಡಬೇಕೆಂಬ ಧಮ್ಮಕಾರ್ಯ ಫಲಿತವಾಯಿತು. ರಾಜನು ಬುದ್ಧರನ್ನು ಮತ್ತು ಅರಹಂತರನ್ನು ಊಟಕ್ಕಾಗಿ ಆಮಂತ್ರಿಸಿದ. ಊಟ ಮುಗಿದ ಮೇಲೆ ಭಗವಾನರು ಊರ ಹೊರಗಿರುವ ವಿಹಾರದತ್ತ ಹೋದರು. ಮಾರನೆಯ ದಿನ ಭಗವಾನರು ಸೋದರ ನಂದನಿಗೆ ಸಾಮಣೇರ ದೀಕ್ಷೆಯನ್ನು ನೀಡಲೂ ಆತನೂ ಪಾರಮಾರ್ಥಿಕವಾಗಿ ಪರಿವರ್ತಿತನಾದನು.

ಬಂದು ಏಳು ದಿನಗಳಾದ ಮೇಲೆ ಏಳು ವರ್ಷದ ಬಾಲಕ ರಾಹುಲನು ಅರಮನೆಯಲ್ಲಿ ಬುದ್ಧನ ಮುಂದೆ ಬಂದುನಿಂತನು. ಆ ಎಳೆಯ ರಾಜಕುಮಾರನು ಬುದ್ಧನ ಸಮೀಪದಲ್ಲಿದ್ದಂತೆ ಅಪಾರ ಹಿತವಾದ ಅನುಭವವಾಯಿತು. ಆ ಬಾಲಕ ಅದನ್ನು ಹೀಗೆ ಹೇಳಿದನು: "ಸುಖಾ ವಾತಾ ತೆ ಛಾಯಾ ಸಮಣ!" (ಓ ಸಮಣನೆ, ನಿಮ್ಮ ನೆರಳು ಎಷ್ಟೊಂದು ಸುಖವಾಗಿದೆ!)

ರಾಜಕುಮಾರಿ ಯಶೋಧರೆಯು ಮಗ ರಾಹುಲನಿಗೆ ಚೆನ್ನಾಗಿ ಬಟ್ಟೆ ತೊಡಿಸಿದಳು; ಅವನಿಗೆ ಹೀಗೆ ಹೇಳಿದಳು: "ಮಗನೆ, ತಂದೆಯವರ ಊಟವಾದ ಮೇಲೆ ಅವರ ಬಳಿ ಹೋಗಿ, ನಿನ್ನ ಆಸ್ತಿಯನ್ನು ಕೇಳು." ಒಂದುವೇಳೆ ನಿನ್ನ ತಂದೆ ಭಿಕ್ಖುವಾಗದಿದ್ದರೆ ಚಕ್ರವರ್ತಿ ಮಹಾರಾಜನಾಗಿರುತ್ತಿದ್ದ ಎಂದು ಅವಳು ಮಗನಿಗೆ ಹೇಳಿದ್ದಳು. ಅವಳು



ಹೇಳಿದಳು: "ಮಗನೆ, ನಿಮ್ಮ ತಂದೆ ಗೃಹತ್ಯಾಗ ಮಾಡುವ ಮುನ್ನ ಅವರ ಬಳಿ ನಾಲ್ಕು ಚಿನ್ನದ ಗಡಿಗೆಗಳ ತುಂಬ ಸಂಪತ್ತು ಇತ್ತು. ಅವರು ಸಂನ್ಯಾಸಿಯಾದ ತಕ್ಷಣವೇ ಆ ಅಪಾರ ಸಂಪತ್ತೆಲ್ಲಾ ಮಾಯವಾಯಿತು. ಆದ್ದರಿಂದ ಹೋಗಿ ನೀನು ಆ ಸಂಪತ್ತನ್ನು ಕೇಳು". ಈ ಹಿನ್ನೆಲೆಯಲ್ಲಿ ರಾಹುಲನು ಬುದ್ಧರ ಬಳಿ ಹೋದನು. ಊಟವಾದ ಮೇಲೆ ಬುದ್ಧರು ತನ್ನ ಶಿಷ್ಯರ ಸಮೇತ ಊರ ಹೊರಗಡೆ ಇರುವ ನ್ಯಗ್ರೋಧಾರಾಮ ವಿಹಾರಕ್ಕೆ ಹೋದರು.

ಧಮ್ಮೋಪದೇಶದ ನಂತರ ಬುದ್ಧರು ವಿಹರದತ್ತ ಹೊರಡಲು ಸಿದ್ಧವಾದಾಗ ಈ ಏಳು ವರ್ಷದ ಮುಗ್ಧ ಬಾಲನು ನುಡಿದ; "ನನಗೆ ನನ್ನ ವಂಶಪಾರಂಪರ್ಯದ ಆಸ್ತಿಯನ್ನು ಕೊಡಿ!" ಬುದ್ಧರು ವಿಹಾರಕ್ಕೆ ಹೋಗುವವರೆಗೂ ಈ ಮಾತನ್ನು ಹೇಳುತ್ತಲೇ ಇದ್ದ. ಬುದ್ಧರು ಒಂದು ಮಾತನ್ನೂ ಆಡಲಿಲ್ಲ. ರಾಜ ಪರಿವಾರದವರೂ ಕೂಡ ಏನೂ ಹೇಳಲು ಹಿಂಜರಿದರು. ನ್ಯಗ್ರೋಧಾರಾಮವನ್ನು ಸೇರುತ್ತಿದ್ದಂತೆ ಬುದ್ಧರು ಆಲೋಚಿಸಿದರು: "ಈ ರಾಜಕುಮಾರ ರಾಹುಲನು ತನ್ನ ತಂದೆಯ ವಂಶಪಾರಂಪರ್ಯದ ಆಸ್ತಿಯನ್ನು ಕೇಳುತ್ತಿದ್ದಾನೆ. ಪ್ರಾಪಂಚಿಕ ಸಂಪತ್ತೇನಿದ್ದರೂ ಪ್ರಪಂಚ ಇರುವವರೆಗೆ ಇದ್ದು, ಅವು ಬರೀ ದುಃಖವನ್ನು ತರುತ್ತವೆ. ಆದ್ದರಿಂದ ನಾನು ಇವನಿಗೆ ನಾನು ಯಾವ ಬೋಧಿ ವೃಕ್ಷದ ಅಡಿ ಏಳು ಸಂಪತ್ತುಗಳನ್ನು; ಮಾರನನ್ನು ಮತ್ತು ಅವನ ದುಷ್ಟಶಕ್ತಿಗಳನ್ನು ಸೋಲಿಸಿದ ಮೇಲೆ ಪಡೆದೆನೋ ಅವನ್ನು ಇವನಿಗೆ ಕೊಡುತ್ತೇನೆ". ಆಗ ತಮ್ಮ ಪ್ರಮುಖ ಶಿಷ್ಯ ಆಯುಷ್ಮಂತ ಸಾರಿಪುತ್ತನನ್ನು ಕರೆದು ರಾಹುಲನಿಗೆ ಸಾಮಣೇರ ದೀಕ್ಷೆಯನ್ನು ಕೊಡುವಂತೆ ಸೂಚಿಸಿದರು. ಅಂಗತ್ತರ ನಿಕಾಯದಲ್ಲಿ (ಅಂ. 2, 398) ಉಲ್ಲೇಖಿತವಾದ ಆ ಏಳು ಸಂಪತ್ತುಗಳು ಇವು:

***ಸದ್ಧಾಧನಂ ಸೀಲಧನಂ ಹಿರಿ ಓತ್ತಪಿಯಂ ಧನಂ***
***ಸುತ್ತ ಧನಂಚ ಚಾಗೋ ಚ ಪಞ್ಞಾವೇ ಸತ್ತಮಂ ಧನಂ***

(ಶ್ರದ್ಧೆಧನ, ಶೀಲಧನ, ನಾಚಿಕೆ ಮತ್ತು ಭಯಗಳೆಂಬ ಧನಗಳು, ವಿದ್ಯೆಧನ ತ್ಯಾಗ ಮತ್ತು ಪ್ರಜ್ಞೆ ಎಂಬ ಏಳನೆಯ ಧನ.)

ಕಪಿಲವಸ್ತುವಿನ ತಮ್ಮ ವಾಸ್ತವ್ಯದ ಕೊನೆಯಲ್ಲಿ ಬುದ್ಧರು ಎಳೆಯ ಏಳು ವರ್ಷದ ಸಾಮಣೇರ ಆಯುಷ್ಮಂತ ರಾಹುಲನನ್ನು ಕರೆದುಕೊಂಡು ಹೋದರು. ಆಯುಷ್ಮಂತ ರಾಹುಲನು ಭಗವಾನರೊಡನೆ ವೇಣುವನ ವಿಹಾರದಲ್ಲಿ ಎರಡನೇ ವರ್ಷಾವಾಸವನ್ನು ಕಳೆದನು. ವಿಶಾಲವಾದ ಈ ವೇಣುವನ ವಿಹಾರದ ಯಾವ ಭಾಗದಲ್ಲಿ ನೀನು ನಿವಾಸಿಸಲು ಇಚ್ಛಿಸುವೆ ಎಂದು ರಾಹುಲನನ್ನು ಕೇಳಲು ವನದ ಕೊನೆಯ ಏಕಾಂತ ಜಾಗದಲ್ಲಿರುವುದಾಗಿ ಹೇಳಿದನು. ಆ ವರ್ಷದ ವರ್ಷಾವಾಸವನ್ನು ಅರಣ್ಯದ ದೂರದ ಮೂಲೆಯೊಂದರ ಏಕಾಂತವಾದ ಧ್ಯಾನ ಕೋಶವನ್ನು ಆಯುಷ್ಮಂತ ರಾಹುಲನೇ ಆರಿಸಿಕೊಂಡನು.

ಆಯುಷ್ಮಂತ ರಾಹುಲನು ದೂರದ ಏಕಾಂತ ಧ್ಯಾನ ಕೋಶವನ್ನು ಆರಿಸಿಕೊಂಡುದಕ್ಕೆ ಒಂದು ಸುಂದರ ಹೋಲಿಕೆಯನ್ನು ಕೊಡಲಾಗಿದೆ. ಮುಳ್ಳು ಹುಟ್ಟಿನಿಂದಲೇ ಚೂಪಾಗಿ ಬೆಳೆಯುತ್ತದೆ. ಹಾಗೆಯೇ ಆಯುಷ್ಮಂತ ರಾಹುಲನು ಮೂರುಬಗೆಯ ವಿವೇಕಗಳಾದ ಕಾಯ ವಿವೇಕ, ಚಿತ್ತ ವಿವೇಕ ಮತ್ತು ಉಪಾದಿ ವಿವೇಕ (ಪುನರ್ಜನ್ಮಕ್ಕೆ ಕಾರಣವಾಗುವ ಕಮ್ಮಗಳ ಬಗೆಗಿನ ವಿವೇಕ) ಗಳ ಬಗ್ಗೆ ಒಲವು ತೋರಿಸಿದನು. ಭಗವಾನರು ಸಮಯ ದೊರೆತಾಗೆಲ್ಲ ತಾವೇ ಆಯುಷ್ಮಂತ ರಾಹುಲನ ಬಳಿ ಹೋಗಿ ಸೂಕ್ತ ಉಪಮೆಗಳ ಮೂಲಕ ಬೋಧಿಸುತ್ತಿದ್ದರು.

ಒಮ್ಮೆ ಬಗವಾನರು ತಮ್ಮ ಮಧ್ಯಾಹ್ನದ ಧ್ಯಾನದಿಂದ ಎದ್ದು ಏಕಾಂತವಾಗಿರುವ ಅಂಬಾಲಟ್ಠಿಕ ಧ್ಯಾನ ಕುಟೀರಕ್ಕೆ ಹೋದರು. ಭಗವಾನರು ಬರುತ್ತಿರುವುದನ್ನು ಕಂಡು ಆಯುಷ್ಮಂತ ರಾಹುಲನು ಆಸನವನ್ನು ಸಿದ್ಧಗೊಳಿಸಿ ಕಾಲ್ತೊಳೆಯಲು ನೀರನ್ನಿಟ್ಟನು. ತಥಾಗತರು ಕಾಲ್ತೊಳೆದು ಆಸನದ ಮೇಲೆ ಕುಳಿತರು. ಕಾಲ್ತೊಳೆದಾದ ಮೇಲೆ ಭಗವಾನರು ಸ್ವಲ್ಪ ನೀರನ್ನು ಗಡಿಗೆಯಲ್ಲಿ ಹಾಗೆಯೇ ಬಿಟ್ಟರು. ರಾಹುಲನಿಗೆ ಸ್ವಲ್ಪವೇ ನೀರಿರುವ ಗಡಿಗೆಯನ್ನು ತೋರಿಸಿ ಭಗವಾನರು ಕೇಳಿದರು:

"ರಾಹುಲ ಈ ಗಡಿಗೆಯಲ್ಲಿ ಸ್ವಲ್ಪವೇ ನೀರಿರುವುದನ್ನು ನೋಡಿದೆಯಾ?"

ರಾಹುಲ : "ಹೌದು, ಪರಮಪೂಜ್ಯರೆ, ನಾನು ನೋಡುತ್ತಿದ್ದೇನೆ."

ತಥಾಗತರು : "ರಾಹುಲ, ಹಾಗೆಯೇ ಯಾರು ಉದ್ದೇಶಪೂರ್ವಕವಾಗಿ ಸುಳ್ಳನ್ನು ಹೇಳಲು ಹಿಂಜರಿಯುವುದಿಲ್ಲವೋ ಅಂತಹ ಸಮಣರ ಬ್ರಹ್ಮಚರ್ಯ ಜೀವನವೂ ಅರ್ಥಹೀನ ಎಂಬುದನ್ನು ತಿಳಿ." ಆನಂತರದಲ್ಲಿ ತಥಾಗತ ಬುದ್ಧರು ಇರುವ ಸ್ವಲ್ಪ ನೀರನ್ನು ಚೆಲ್ಲಿ ರಾಹುಲನಿಗೆ ಹೇಳಿದರು: "ಉಳಿದ ನೀರು ಚೆಲ್ಲಿದ್ದನ್ನು ನೋಡಿದೆಯಾ?"

ರಾಹುಲ : "ಹೌದು, ಪರಮಪೂಜ್ಯರೆ, ನೋಡಿದೆ" ಎಂದನು ರಾಹುಲ.

ತಥಾಗತರು : "ಹಾಗೆಯೇ ಯಾರು ಗೊತ್ತಿದ್ದೂ ಸುಳ್ಳು ಹೇಳಲು ನಾಚುವುದಿಲ್ಲವೋ ಅಂತಹರವ ಪವಿತ್ರ ಬ್ರಹ್ಮಚರ್ಯ ಜೀವನವೂ ಚೆಲ್ಲಿಹೋದಂತೆ."

ಆನಂತರ ತಥಾಗತರು ಖಾಲಿ ನೀರಿನ ಗಡಿಗೆಯನ್ನು ತಲೆಕೆಳಗೆ ಮಾಡಿ ಹೇಳಿದರು: "ರಾಹುಲ, ಈ ನೀರು ಗಡಿಗೆಯನ್ನು ತಲೆಕೆಳಗೆ ಮಾಡಿರುವುದನ್ನು ನೋಡಿದೆಯಾ?"

ರಾಹುಲ : "ಹೌದು, ಪರಮಪೂಜ್ಯರೆ, ನಾನು ನೋಡಿದೆ."

ಆಗ ತಥಾಗತರು ಹೇಳಿದರು: "ಯಾರು ಬೇಕೆಂತಲೇ ಸುಳ್ಳು ಹೇಳಲು ನಾಚುವುದಿಲ್ಲವೋ ಅಂತಹವರ ನೀರ ಗಡಿಗೆಯನ್ನು ಸರಿಯಾಗಿ ಹಿಡಿದು ಹೇಳಿದರು: "ರಾಹುಲ ಒಂದು ಹನಿಯೂ ನೀರಿಲ್ಲದ ಖಾಲಿ ಗಡಿಗೆಯನ್ನು ಮೇಲ್ಮುಖ ಮಾಡಿರುವುದನ್ನು ನೋಡಿದೆಯಾ?"

ರಾಹುಲ : "ಹೌದು ಪರಮಪೂಜ್ಯರೆ, ನಾನು ನೋಡಿದೆ."



ಆಗ ತಥಾಗತರು ಹೇಳಿದರು: "ಯಾರು ಬೇಕೆಂತಲೇ ಸುಳ್ಳು ಹೇಳಲು ನಾಚುವುದಿಲ್ಲವೋ ಅಂತಹವರ ಪವಿತ್ರ ಬ್ರಹ್ಮಚರ್ಯ ಜೀವನವು ಖಾಲಿಯೂ ಗುರಿಯಿಲ್ಲದೆಯೂ ಇರುವಂಥದ್ದು."

ತಥಾಗತರ ಮತ್ತು ನವ ಸಾಮಣೇರ ರಾಹುಲನ ನಡುವೆ ಇಂತಹ ಹಲವಾರು ಸಂವಾದಗಳು ನಡೆದಿವೆ.

ಭಗವಾನ್ ಬುದ್ಧರು ರಾಹುಲನಿಗೆ ಸಮ್ಮಾಕಮ್ಮಂತದ ಮೇಲೆ ಧಮ್ಮೋಪದೇಶವನ್ನು ಮಾಡಿರುವುದು ಒಂದು ಸುತ್ತದಲ್ಲಿ ಇದೆ. ಮನುಷ್ಯನ ಇಡೀ ಬದುಕನ್ನು ಮೂರುರೀತಿಯ ಕಮ್ಮಗಳ ಮೂಲಕ ವಿವರಿಸಬಹುದು; ಕಾಯಕಮ್ಮ (ಶರೀರದಿಂದ ಮಾಡಲಾಗುವ ಕಮ್ಮಗಳು), ವಾಚಿಕಮ್ಮ (ಮಾತಿನ ಮೂಲಕ ಮಾಡುವ ಕಮ್ಮಗಳು) ಮತ್ತು ಮನೋಕಮ್ಮ (ಮನಸ್ಸಿನಿಂದ ಮಾಡುವ ಕಮ್ಮಗಳು). ಸಮ್ಮಾ ಕಮ್ಮಾಂತದ ಮೇಲೆ ಮಾಡಿದ ಈ ಉಪದೇಶವು ರಾಹುಲನಿಗೆ ಬಹುಮುಖ್ಯವಾಗಿತ್ತು.

ಒಬ್ಬ ವ್ಯಕ್ತಿ ದಿನರಾತ್ರಿ ಏನೇ ಕಮ್ಮವನ್ನು ಮಾಡಲಿ ಅದನ್ನು ಸರಿಯಾಗಿ ಅವಲೋಕಿಸಿದರೆ ಮೇಲೆ ಹೇಳಿದ ಮೂರರಲ್ಲಿ ಯಾವುದಾದರೂ ಒಂದು ಬಗೆಯ ಕಮ್ಮಕ್ಕೆ ಸೇರುತ್ತದೆ. ಆದ್ದರಿಂದ ಒಂದು ಕಮ್ಮವನ್ನು ಸರಿಯಾದ ರೀತಿಯಲ್ಲಿ ಸರಿಯಾದ ಪ್ರೇರಣೆಯಿಂದ ಅಥವಾ ಅದರ ಮೂಲವನ್ನು ಅಂತಿಮ ಫಲದ ಅರಿವಿನಿಂದ ಎಸಗಿದಲ್ಲಿ ಅಂತಹ ಕಮ್ಮವನ್ನು ಇರುವುದಕ್ಕಿಂತ ಹೆಚ್ಚಿನದಾಗಿ ನೋಡಬೇಕಾದ್ದಿಲ್ಲ. ಬುದ್ಧರ ಧಮ್ಮವನ್ನು ಅರ್ಥಮಾಡಿಕೊಳ್ಳಬೇಕೆಂದರೆ ಅವರು ಬೋಧಿಸಿದ ಕಮ್ಮಸಿದ್ಧಾಂತವನ್ನು ಸರಿಯಾಗಿ ತಿಳಿದಿರಬೇಕು. ಆದ್ದರಿಂದ ಬುದ್ಧರು ಕನ್ನಡಿಯ ಸಾಮ್ಯ ಸಿದ್ಧಾಂತವನ್ನು ಹೇಳುತ್ತಾರೆ.

"ರಾಹುಲ, ಕನ್ನಡಿಯ ಉದ್ದೇಶವೇನು?" ಎಂದು ಭಗವಾನರು ಕೇಳಿದರು.

ರಾಹುಲನು "ಪರಮಪೂಜ್ಯರೆ, ಪ್ರತಿಬಿಂಬವನ್ನು ನೋಡಲಿಕ್ಕಾಗಿ."

ಬುದ್ಧರು "ಹಾಗೆಯೇ ರಾಹುಲ, ಒಂದು ಕರ್ಮವನ್ನು ಪ್ರಜ್ಞಾ ಬಿಂಬವನ್ನಿಟ್ಟುಕೊಂಡೇ ಮಾಡಬೇಕು." ಒಂದು ಕ್ರಿಯೆಯನ್ನು ಮಾಡುವಾಗ, ಮಾಡುವ ಮುನ್ನ ಮತ್ತು ಮಾಡಿದ ನಂತರ ಅದರ ಸಹಜ ಸ್ಥಿತಿಯನ್ನು ಅರಿತೇ ಮಾಡಬೇಕು. ಕನ್ನಡಿಯು ಅದರ ಮುಂದಿರುವ ರೂಪವನ್ನು ಇರುವಂತೆಯೇ ಬಿಂಬಿಸುತ್ತದೆ. ಹಾಗೆಯೇ ಒಬ್ಬನು ಕಾರ್ಯವನ್ನು ಎಸಗಿದಾಗ, ಎಸಗುವಾಗ ಮತ್ತು ಎಸಗಿದ ಮೇಲೆ ಅದರ ನಿಜಸ್ಥಿತಿಯನ್ನು ಪುನಃ ಪುನಃ ಬಿಂಬಿಸಿಕೊಳ್ಳುತ್ತಲೇ ಹೋಗಬೇಕು."

ಬುದ್ಧರು ಮತ್ತೆ ಹೇಳಿದರು: "ರಾಹುಲ, ನೀನು ಶರೀರದ ಮೂಲಕ, ಮಾತಿನ ಮೂಲಕ ಅಥವಾ ಮನಸ್ಸಿನ ಮೂಲಕ ಕ್ರಿಯೆಯನ್ನು ಎಸಗುವಾಗ ಅದನ್ನೆಸಗುವ ಮುನ್ನ ನೀನು ಅದರ ನಿಜದ ಸ್ಥಿತಿಯನ್ನು ಹೀಗೆ ತಿಳಿಯಬೇಕು: 'ನಾನು ಮಾಡುವ ಶರೀರದ ಮೂಲಕ ಆಗುವ ಕೆಲಸವಾಗಲಿ, ವಾಚಿಕವಾಗಲಿ ಅಥವಾ ಮಾನಸಿಕವಾಗಿಯಾಗಲಿ ಅದು ನನ್ನನ್ನಾಗಲಿ, ಇತರರನ್ನಾಗಲಿ ಅಥವಾ ನಮ್ಮಿಬ್ಬರನ್ನಾಗಲಿ

ಘಾಸಿಗೊಳಿಸುತ್ತದೆಯೇ? ಅದು ಅಕುಶಲವೇ? ಕಮ್ಮವಾಗಿ ನೋವನ್ನುಂಟುಮಾಡಿ ನೋವಿನ ಕಮ್ಮ ಫಲವನ್ನು ತರುತ್ತದೆಯೇ?' ಹಾಗೆಯೇ ನೀನು ಕಮ್ಮವನ್ನು ಎಸಗುವಾಗ ಮತ್ತು ಎಸಗಿದ ನಂತರ ಇದೇ ರೀತಿಯಾಗಿ ಆಲೋಚಿಸಬೇಕು. ಒಂದುವೇಳೆ ಆ ಕಮ್ಮವು ಅಕುಶಲವಾಗಿದ್ದರೆ ಅದು ನಿಶ್ಚಯವಾಗಿಯೂ ನೋವಿನ ಫಲವನ್ನೇ ಕೊಡುತ್ತದೆ. ಅದು ಕುಶಲಕಮ್ಮವಾಗಿದ್ದರೆ ಕಮ್ಮಫಲವು ನಿಶ್ಚಯವಾಗಿಯೂ ಸುಖಪ್ರದವಾಗಿಯೇ ಇರುತ್ತದೆ."

ಒಂದು ಕಮ್ಮದ ನಿಜವಾದ ಸ್ಥಿತಿಯನ್ನು ಅರಿಯುವುದೇ ಪ್ರಜ್ಞೆ, ಒಂದು ಕಮ್ಮದ ನಿಜಸ್ಥಿತಿ, ಅದರ ಹಿಂದಿನ ಪ್ರೇರಣೆ ಮತ್ತು ಅದು ತರಬಹುದಾದ ಪರಿಣಾಮಗಳು ಇವೆಲ್ಲವನ್ನೂ ಏಕಕಾಲಕ್ಕೆ ನಿಚ್ಚಳವಾಗಿ ಗ್ರಹಿಸಬೇಕು. ಹೀಗೆ ಮಾಡುವುದರಿಂದ ಒಬ್ಬನು ತನ್ನ ಕಮ್ಮಗಳ ಮೇಲೆ ಸಂಪೂರ್ಣ ನಿಯಂತ್ರಣವನ್ನು ಹೊಂದಿರುತ್ತಾನೆ. ಯಾರು ತನ್ನ ಕಮ್ಮಗಳ ಮೇಲೆ ನಿಯಂತ್ರಣವನ್ನು ಹೊಂದಿರುತ್ತಾನೋ ಅಷ್ಟರಮಟ್ಟಿಗೆ ತನ್ನಮೇಲೆ ತಾನೇ ಪ್ರಭುತ್ವವನ್ನು ಹೊಂದಿರುತ್ತಾನೆ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ತನ್ನ ಅಂತಿಮ ಗುರಿಯ ಶಿಲ್ಪಿ ತಾನೇ ಆಗಿರುತ್ತಾನೆ. ಬೇರೆ ಹೊರ ಶಕ್ತಿ, ಉದಾಹರಣೆಗೆ ಎಷ್ಟೇ ಶಕ್ತಿಶಾಲಿಯಾದ ಸೃಷ್ಟಿಕರ್ತ ದೇವರಾಗಲಿ ಒಬ್ಬ ಗುರಿಯನ್ನು ರೂಪಿಸುವುದಿಲ್ಲ. ಒಬ್ಬನು ತನ್ನ ಕಮ್ಮಗಳ ಮೇಲೆ ಹೊಂದಿರುವ ಪ್ರಭುತ್ವವೇ ಒಬ್ಬನ ಈಗಿನ ಮತ್ತು ಮುಂದಿನ ಗುರಿಯನ್ನು ನಿರ್ಧರಿಸುತ್ತದೆ. ಈ ಪ್ರಬುದ್ಧವಾದ ಅರಿವನ್ನು ನವ ಸಾಮಣೇರ ರಾಹುಲನಲ್ಲಿ ಬಿತ್ತಬೇಕಿತ್ತು. ಆದ್ದರಿಂದ ಬುದ್ಧರು ಕನ್ನಡಿಯ ಉಪಮೆಯನ್ನು ತೆಗೆದುಕೊಂಡರು.

ಬಹಳ ಕಾಲದ ನಂತರ ರಾಹುಲನು ಅರಹತನಾದಾಗ ಮತ್ತು ಸಂಘದ ಥೇರನಾದಾಗ ಬುದ್ಧರು ಅವನ ಉನ್ನತೋನ್ನತ ಗುಣಗಳನ್ನು ಹೇಳಿ ಮಹಾಸಾವಕ ಪದವಿಗೆ ಏರಿಸಿದರು. ಮಹಾಸಾವಕ ಎಂದರೆ ಭಿಕ್ಖು ಶೀಲಗಳನ್ನು, ವಿನಯಗಳನ್ನು ಮಿಂಚಿಸಿ ತನ್ನ ಮೇಲೆ ತಾನೇ ಪ್ರಭುತ್ವವಿರುವವನು ಎಂದು.

ಆಯುಷ್ಮಂತ ರಾಹುಲನು ಬುದ್ಧನಿಗಿಂತ ಮೊದಲೇ ಪರಿನಿಬ್ಬುತನಾದನು (ಕಾಲವಾದನು). ಪರಿನಿಬ್ಬುತನಾಗುವ ಮುನ್ನ ಒಬ್ಬ ಅರಹತನು ಏನೆಲ್ಲಾ ಸಾಧಿಸಬಹುದು ಎನ್ನುವ ಬಗೆಗಿನ ಒಂದು ಪ್ರಭಾವಿ ದಾಖಲೆಯೂ ಇದೆ. ಥೇರಗಾಥದಲ್ಲಿ ರಾಹುಲನ ಸಾಧನೆ ಬಗೆಗಿನ ನಾಲ್ಕು ಗಾಥೆಗಳು ಹೀಗಿವೆ:

*ಇಕ್ಕೆಲಗಳಿಂದಲೂ ನಾನು ಭಾಗ್ಯಶಾಲಿಯೇ*
*ನಾನು ಭಾಗ್ಯವಂತ ರಾಹುಲ*
*ನಾನು ತಥಾಗತನ ಪುತ್ರನಾಗಿದ್ದೆ,*
*ಈಗ ನನ್ನೆಲ್ಲ ಆಸವಗಳನ್ನು ನಾಶಗೊಳಿಸಿ*
*ಈಗ ನಾನು ನಿಜವಾದ ಪುತ್ರನಾಗಿದ್ದೇನೆ.*



*ನನಗಿನ್ನು ಪುನರ್ಜನ್ಮವಿಲ್ಲ*
*ಅರಹತ ಹಂತಕ್ಕೆ ಏರಿರುವುದರಿಂದ*
*ದಾನವನ್ನು ಪಡೆಯಲು ಈಗ ಯೋಗ್ಯನಾಗಿದ್ದೇನೆ.*

*ಲೋಕೋತ್ತರ ತ್ರೈವಿದ್ಯೆಗಳನ್ನು ಹೊಂದಿದವನಾಗಿ,*
*ಅಮರತ್ವದ ನಿಜ ದಾರ್ಶನಿಕನು ನಾನಾಗಿದ್ದೇನೆ*
*ಇಂದ್ರಿಯ ಚಾಪಲ್ಯಗಳಿಂದ ಬಂಧಿತನಾಗಿ*
*ಮತ್ತೆ ಮತ್ತೆ ಬೇಕೆಂಬ ತನ್ಹಾದೊಳಗೆ ಸಿಲುಕಿ*
*ಪ್ರಮಾದದ ಸೆರೆಯೊಳಗೆ ಉಸಿರುಗಟ್ಟಿದ್ದೆ.*

*ಇಂದು ನಾನು ಈ ಎಲ್ಲ ಇಂದ್ರಿಯ ಚಾಪಲ್ಯಗಳನ್ನು ಭಸ್ಮಗೊಳಿಸಿದ್ದೇನೆ*
*ತನ್ಹಾದ ಬೇರನ್ನೇ ಕಿತ್ತುಹಾಕಿ*
*ಮಾರ ಬಂಧನವನ್ನು ನಾಶ ಮಾಡಿದ್ದೇನೆ.*
*ನಾನು ನಿಜವಾಗಿಯೂ ಪರಮಾನಂದನೂ ಅರಹತನೂ ಆಗಿದ್ದೇನೆ.*

## ಆಯುಷ್ಮಂತ ಆನಂದ

ಆಯುಷ್ಮಂತ ಆನಂದನು ಭಗವಾನ್ ಬುದ್ಧರ ದಾಯಾದಿ. ಅವನ ತಂದೆ ಅಮಿತೋದನನು ರಾಜ ಶುದ್ಧೋಧನನ ತಮ್ಮ. ಇಬ್ಬರೂ ಒಂದೇದಿನ ಹುಟ್ಟಿದವರು ಮತ್ತು ಇಬ್ಬರೂ ತುಸಿತ ದಿವ್ಯಲೋಕದಿಂದ ಹುಟ್ಟಿಬಂದವರೇ. ಸಿದ್ಧಾರ್ಥನು ತನ್ನ ನಿಕಟ ಪೂರ್ವ ಜನ್ಮದಲ್ಲಿ ತುಸಿತದೇವ ಲೋಕದ ದೊರೆಯಾಗಿದ್ದರೆ ಆಯುಷ್ಮಂತ ಆನಂದನು ಅದೇ ದಿವ್ಯಲೋಕದ ಒಬ್ಬ ಪ್ರತಿಭಾನ್ವಿತ ಜೀವಿ. ಆಯುಷ್ಮಂತ ಆನಂದನು, ಬುದ್ಧರು ಜೊತೆಗೆ ಹಲವಾರು ಜನ್ಮಗಳಲ್ಲಿ ತುಂಬ ಹತ್ತಿರದ ಸಂಬಂಧಿಗಳಾಗಿಯೇ ಬಾಳಿದವರು. ಜಾತಕ ಸಾಹಿತ್ಯದಲ್ಲಿ ಈ ಇಬ್ಬರ ಅಂದರೆ ಬುದ್ಧರು ಗುರುವಾಗಿ, ಆನಂದನು ಸೇವಕನಾಗಿ ಅಗ್ರಗಣ್ಯ ಶಿಷ್ಯನಾಗಿ ಇದ್ದ ಸಂಬಂಧದ ಹಲವಾರು ಸ್ಫೂರ್ತಿದಾಯಕ ಕಥೆಗಳಿವೆ.

ಆಯುಷ್ಮಂತ ಆನಂದನಿಗೆ ಆ ಹೆಸರು ಏಕೆ ಬಂದಿತೆಂದರೆ ಅವನು ಆ ಕುಟುಂಬದಲ್ಲಿ ಹುಟ್ಟಿದ ಕೂಡಲೇ ಆ ಕುಟುಂಬದವರಿಗೆಲ್ಲ ಅಪಾರ ಆನಂದ ತಂದಿತು. ಆದ್ದರಿಂದಲೇ ಆನಂದನೆಂಬ ಹೆಸರು ಬಂದಿತು.

ಆಯುಷ್ಮಂತ ಆನಂದನು ಸಿದ್ಧಾರ್ಥನು ಜ್ಞಾನೋದಯ ಹೊಂದಿದ ಎರಡು ವರ್ಷಗಳ ನಂತರ ಅಂದರೆ ಮೂವತ್ತೇಳನೇ ವಯಸ್ಸಿಗೆ ಭಿಕ್ಖುವಾದನು. ಅದಕ್ಕೆ ಮುನ್ನ ಆನಂದನು ರಾಜವೈಭವದ ಜೀವನವನ್ನು ನಡೆಸಿದ್ದನು. ಆನಂದನು ಆಯುಷ್ಮಂತ ಧಮ್ಮಪ್ರಚಾರಕ ಪುನ್ನ ಮಂತಾನಿಪುತ್ತನ ಧಮ್ಮೋಪದೇಶಗಳನ್ನು ಕೇಳಿದಮೇಲೆ ಸ್ರೋತಾಪನ್ನನಾದನು.

ಎಲ್ಲ ಅಗ್ರಗಣ್ಯ ಶಿಷ್ಯರ ಪೈಕಿ ಆಯುಷ್ಮಂತ ಆನಂದನಿಗೆ ವಿಶೇಷ ಸ್ಥಾನವಿದೆ. ಮೊಟ್ಟಮೊದಲಿಗೆ ಈತನು ಧಮ್ಮಭಾಂಧಗಾರಿಕ ಬಿರುದನ್ನು ಹೊಂದಿದವನು. ಅಂದರೆ ಧಮ್ಮದ ಮೇಲ್ವಿಚಾರಕ ಸಂರಕ್ಷಕ. ಕಾರಣ ಎಲ್ಲ ಅಗ್ರಗಣ್ಯ ಶಿಷ್ಯರಿಗಿಂತಲೂ ಐದುಬಗೆಯಲ್ಲಿ ಮೀರಿದವನು. ಸ್ವತಃ ಬುದ್ಧರೇ ಇವನನ್ನು ಈ ಗುಣಗಳಲ್ಲಿ ಶ್ರೇಷ್ಠನೆಂದು ಘೋಷಿಸಿದ್ದಾರೆ. ಬೇರೆಲ್ಲಾ ಮಹಾಸಾವಕರು ಒಂದು ಎರಡು ವರ್ಗಗಳಲ್ಲಿ ಅತ್ಯುನ್ನತ ಶ್ರೇಣಿಯನ್ನು ಗಳಿಸಿದರೆ ಆಯುಷ್ಮಂತ ಆನಂದನು ಐದು ವರ್ಗಗಳಲ್ಲಿ ಶ್ರೇಯಾಂಕವನ್ನು ಪಡೆದವನು. ಇವನು ಮೊಟ್ಟಮೊದಲಿಗೆ ಬಹುಸ್ಸುತನು (ವಿದ್ಯೆಯಲ್ಲಿ ಅಗ್ರಗಣ್ಯನು); ಸತಿಮಂತಾನನು (ಒಳ್ಳೆ ನೆನಪಿನ ಶಕ್ತಿಯುಳ್ಳವನು); ಗತಿಮಂತಾನನು (ಒಳ್ಳೆ ನಡತೆಯಲ್ಲಿ ನಿಸ್ಸೀಮನು; ಥಿತಿಮಂತಾನನು (ಧೃತಗತಿಯಲ್ಲಿ ಪ್ರಚಂಡನು) ಮತ್ತು ಉಪಟ್ಠಾಕಾನನು (ಗುರುವಿಗೆ ಸೇವೆ ಸಲ್ಲಿಸುವುದರಲ್ಲಿ ಶ್ರೇಷ್ಠನು).

ಈ ಅಸಾಧಾರಣ ಗುಣಗಳನ್ನು ಹೊಂದಿರುವುದರಿಂದಲೆ ಧಮ್ಮಭಾಂದಾಗಾರಿಕನು ಮತ್ತು ಧಮ್ಮವನ್ನು ಉಪದೇಶಿಸುವುದರಲ್ಲಿ ಪ್ರಾವೀಣ್ಯತೆಯನ್ನು ಪಡೆದಿದ್ದನು. ಈ ಎಲ್ಲ ಗುಣಗಳನ್ನು ತುಂಬ ಸೂಕ್ಷ್ಮವಾಗಿ ಅವಲೋಕಿಸಿದಲ್ಲಿ ಇವೆಲ್ಲವೂ ಪ್ರಖರವಾದ ಸಮ್ಮಾಸತಿಯಿಂದಲೆ ಉದಿಸಿ ಬಂದಿರುವಂತಹವು. ಈ ಸಮ್ಮಾಸತಿಯೇ ಯಾವುದೇ ಸಂದರ್ಭದಲ್ಲೂ ಮನಸ್ಸು ಮಾಡಿದರೆ ಒಬ್ಬನ ಮನಸ್ಸಿನ ಮೇಲೆ ನಿಯಂತ್ರಣವನ್ನು ಸಾಧಿಸುವುದು. ಆಯುಷ್ಮಂತ ಆನಂದನು ಬುದ್ಧರು ದಿನಂಪ್ರತಿ ನಲವತ್ತೈದು ವರ್ಷಗಳ ಕಾಲ ಅನುಕಂಪದಿಂದ ನೀಡಿದ ಎಂಭತ್ನಾಲ್ಕು ಸಾವಿರ ಸುತ್ತಗಳನ್ನು ಅಕ್ಷರಶಃ ನೆನಪಿಟ್ಟುಕೊಂಡಿದ್ದನು.

ಒಮ್ಮೆ ಒಬ್ಬ ಬ್ರಾಹ್ಮಣ ಅನುಯಾಯಿಯು ಬುದ್ಧರ ಬಳಿ ಹೋಗಿ ಹೇಳಿದ: "ಸರಿ ಗುರುಗಳೇ, ನಾನು ಬುದ್ಧರನ್ನು ಮತ್ತು ಸಂಘವನ್ನು ನೋಡುತ್ತಿರುವುದರಿಂದ ಅವರಿಗೆ ಗೌರವವನ್ನು ಸಲ್ಲಿಸುತ್ತೇನೆ. ಆದರೆ ನನಗೆ ಧಮ್ಮಕ್ಕೆ ಶರಣು ಹೋಗುವುದು ಅಥವಾ ಗೌರವಿಸುವುದು ಗೊತ್ತಿಲ್ಲ. ಕಾರಣ ಅದು ಕಣ್ಣಿಗೆ ಕಾಣುವಂತದ್ದಲ್ಲ. ಹೀಗಿರುವಾಗ ನಾನು ಧಮ್ಮಕ್ಕೆ ಯಾವರೀತಿಯಲ್ಲಿ ನನ್ನ ಭಕ್ತಿಪೂರ್ವಕವಾದ ಗೌರವವನ್ನು ಸಲ್ಲಿಸಬಹುದು?

ಆಗ ಬುದ್ಧರು ಹೇಳಿದರು: "ನೀನು ಭಿಕ್ಖುಗಳ ಬಳಿ ಹೋಗು, ಅವರೇ ನಿನಗೆ ಹೇಳುತ್ತಾರೆ."

ಬುದ್ಧರ ಸೂಚನೆ ಪ್ರಕಾರ ಬ್ರಾಹ್ಮಣನು ಬುದ್ಧರ ಅಗ್ರಗಣ್ಯ ಶಿಷ್ಯರಲ್ಲಿ ಆಯುಷ್ಮಂತ ಸಾರಿಪುತ್ತ ಮೊದಲ್ಗೊಂಡು ಮಹಾಸಾವಕರಲ್ಲಿನ ಕೊನೆಯ ಶಿಷ್ಯನವರೆಗೂ ಹೋಗಿ ಮೇಲಿನಂತೆ ಪ್ರಶ್ನೆಯನ್ನು ಹಾಕಿದನು. ಈ ಎಲ್ಲ ಮಹಾಸಾವಕರು ಧಮ್ಮದ ಭಂಡಾಗಾರಕನಾದ ಆಯುಷ್ಮಂತ ಆನಂದನ ಬಳಿ ಹೋಗೆಂದರು. ಅದರಂತೆಯೇ ಬ್ರಾಹ್ಮಣನು ಆನಂದನ ಬಳಿ ಹೋಗಿ "ಪೂಜ್ಯರೇ, ನೀವು ಯಾವರೀತಿಯಲ್ಲಿ ಧಮ್ಮವನ್ನು ನಿಮ್ಮೊಳಗೆ ಹುದುಗಿಸಿಕೊಂಡಿದ್ದೀರಿ ಎಂಬುದನ್ನು ತಿಳಿಯಲು ನನ್ನನ್ನು ನಿಮ್ಮ ಬಳಿಗೆ



ಕಳುಹಿಸಿದ್ದಾರೆ. ಆದ್ದರಿಂದ ನಾನು ತಮಗೆ ಧಮ್ಮದ ಜ್ಞಾನವನ್ನ ಎಷ್ಟರಮಟ್ಟಿಗೆ ಹೊಂದಿದ್ದೀರಿ ಎಂಬುದರ ಬಗ್ಗೆ ಪ್ರಶ್ನೆ ಕೇಳಲು ಬಂದಿದ್ದೇನೆ" ಎಂದನು. ಆಗ ಆಯುಷ್ಮಂತ ಆನಂದನು: ಎಲ್ಲ ಸೇರಿದರೆ ಒಟ್ಟು 84,000 ಧಮ್ಮಕ್ಖಂಧಗಳಿವೆ. ಅವುಗಳಲ್ಲಿ ಬುದ್ಧರ ಶ್ರೀಮುಖವಾಣಿಯಿಂದಲೇ 82,000 ಕೇಳಿದ್ದೇನೆ, ಇನ್ನುಳಿದ 2000 ಧಮ್ಮ ಸುತ್ತಗಳನ್ನು ಅಗ್ರಗಣ್ಯ ಶಿಷ್ಯರಿಂದ ಕೇಳಿ ತಿಳಿದಿದ್ದೇನೆ" ಎಂದನು. ಇಷ್ಟು ಅಪಾರವಾದ ಜ್ಞಾನವನ್ನು ಹೊಂದಿದ್ದರಿಂದಲೆ ಅವನನ್ನು ಬಹುಸ್ಸುತ ಎಂದು ಕರೆದರು.

ಆಯುಷ್ಮಂತ ಆನಂದನು ಆನಂದ ಬೋಧಿವೃಕ್ಷವನ್ನು ನೆಟ್ಟು ಹೆಸರಾಗಿದ್ದಾನೆ. ಅದು ಈಗಲೂ ಸಾವತ್ಥಿಯಲ್ಲಿದೆ. ಆಗಿನ ಸಂದರ್ಭದಲ್ಲಿ ಉಪಾಸಕರು ಬುದ್ಧರು ವಾಸಿಸುತ್ತಿದ್ದ ಗಂಧಕುಟಿಯ ಮುಂದೆ ಹೂವು-ಹಣ್ಣು-ಸುಗಂಧಗಳ ರಾಶಿಯನ್ನಿಟ್ಟು ತಮ್ಮ ಭಕ್ತಿ ಗೌರವಗಳನ್ನು ಪ್ರದರ್ಶಿಸುತ್ತಿದ್ದರು. ಬುದ್ಧರು ವಾಸಿಸಿದ ಕುಟೀರವು ಪವಿತ್ರವಾದುದೆಂದು ಅದನ್ನು ಬೋಧಿ ವೃಕ್ಷದಂತೆ ಪೂಜನೀಯ ಸ್ಥಳವಾಗಿ ಪರಿಗಣಿಸಿದ್ದರು. ಈ ಪೂಜನೀಯ ಸ್ಥಳಗಳನ್ನು ಚೇತಿಯಾಗಳೆಂದು ಕರೆಯುತ್ತಾರೆ.

ಬುದ್ಧರು ವರ್ಷದ ಎಂಟು ತಿಂಗಳ ಕಾಲ ಊರಿನಿಂದ ಊರಿಗೆ ಹೋಗಿ ಅನುಕಂಪಪೂರಿತ ಧಮ್ಮಪ್ರಚಾರ ಭಾಗವಾಗಿ ಬಹುಜನ ಹಿತಕ್ಕಾಗಿ ಬಹುಜನರ ಸುಖಕ್ಕಾಗಿ ಧಮ್ಮವನ್ನು ಬೋಧಿಸುತ್ತಿದ್ದರು. ಬುದ್ಧರು ಧಮ್ಮ ಪ್ರಚಾರಕ್ಕೆ ಹೋದ ಸಂದರ್ಭದಲ್ಲಿ ಉಪಾಸಕರು ಜೇತವನಾರಾಮದಲ್ಲಿ ಬುದ್ಧನಿಲ್ಲದಿದ್ದರೂ ಜನ ಎಂದಿನಂತೆ ಅಲ್ಲಿ ಸೇರಿ ಬುದ್ಧ ಇರುವರೋ ಎಂಬಂತೆ ಪರಿಮಳದ ಹೂ ಇತ್ಯಾದಿಗಳನ್ನು ಭಕ್ತಿಪೂರ್ವಕವಾಗಿ ಅಲ್ಲಿ ಇಟ್ಟು ಹೋಗುತ್ತಿದ್ದರು.

ಒಮ್ಮೆ ಭಗವಾನರು ಇಲ್ಲದಿದ್ದ ಸಂದರ್ಭದಲ್ಲಿ ಅನಾಥಪಿಂಡಿಕನು ಆಯುಷ್ಮಂತ ಆನಂದನ ಬಳಿ ಹೋದನು. ಬುದ್ಧರು ಇಲ್ಲದಿದ್ದ ಸಂದರ್ಭದಲ್ಲಿ ಚೈತ್ಯವೊಂದನ್ನು ನಿರ್ಮಿಸಬಹುದೇ ಎಂಬುದನ್ನು ಬುದ್ಧರಿಂದಲೇ ಕೇಳಿ ತಿಳಿಯಬೇಕೆಂದು ವಿನಂತಿಸಿದನು. ಅದೇರೀತಿಯಲ್ಲಿ ಆಯುಷ್ಮಂತ ಆನಂದನು ಬುದ್ಧರ ಬಳಿ ಹೋಗಿ, "ಭಗವಾನರೆ, ಎಷ್ಟು ಚೈತ್ಯಗಳಿವೆ?" ಎಂದು ಕೇಳಿದನು.

ಬುದ್ಧರು ಹೇಳಿದರು: "ಮೂರು ರೀತಿಯ ಚೈತ್ಯಗಳಿವೆ: 1. ಶಾರೀರಿಕ ಧಾತು ಚೈತ್ಯ; 2. ಪಾರಿಭೋಗಿಕ ಚೈತ್ಯ (ಬುದ್ಧರು ಉಪಯೋಗಿಸಿದ ವಸ್ತುಗಳನ್ನು ಗೌರವಿಸುವುದು) ಮತ್ತು 3. ಉದ್ದೇಶಿಕ ಚೈತ್ಯ (ಯಾವುದು ಬುದ್ಧರ ಇರವನ್ನು ನೆನಪಿಸುತ್ತದೋ ಆ ವಸ್ತು).

ಆಯುಷ್ಮಂತ ಆನಂದ "ಭಗವಾನರೆ, ತಾವು ಬದುಕಿರುವಾಗಲೇ ಚೈತ್ಯವನ್ನು ನಿರ್ಮಿಸುವುದು ಸರಿಯೇ?"

ಬುದ್ಧರು : "ಇಲ್ಲ, ಅಂದರೆ ಮೊದಲನೇ ಶಾರೀರಿಕ ಧಾತು ಚೈತ್ಯವಲ್ಲ. ತಥಾಗತರು ಅಂತಿಮವಾಗಿ ಮಹಾಪರಿನಿಬ್ಬಾಣವನ್ನು ಹೊಂದಿದ ಮೇಲೆ ಅಂತಹ ಚೈತ್ಯವನ್ನು

ನಿರ್ಮಿಸುವುದು ಸೂಕ್ತವಾದೀತು. ಬುದ್ಧರು ಯಾವ ಬೋಧಿ ಮರದ ಅಡಿಯಲ್ಲಿ ಜ್ಞಾನೋದಯವನ್ನು ಹೊಂದಿದರೋ ಅಂತಹುದನ್ನು ಬದುಕಿರುವಾಗಾಗಲಿ ಅಥವಾ ಇಲ್ಲದಿರುವಾಗಾಗಲಿ ಚೈತ್ಯವಾಗಿ ಎಲ್ಲ ಕಾಲಕ್ಕೂ ಉಪಯೋಗಿಸಬಹುದು. ಇನ್ನು ಬುದ್ಧರ ಇರವನ್ನು ನೆನಪಿಸುವ ವಸ್ತು ಉದಾ: ಬುದ್ಧ ರೂಪವು ಅದಕ್ಕೆ ಭೌತಿಕ ಅಸ್ತಿತ್ವವಿರುವುದಿಲ್ಲ. ಅದು ಸಂಪೂರ್ಣ ಮಾನಸಿಕವಾಗಿದ್ದು ಬುದ್ಧನ ಗುಣಗಳ ಮೇಲೆ ಧ್ಯಾನಿಸಲು ಅಂತಹ ರೂಪಗಳು ಸಹಾಯವಾಗುತ್ತವೆ."

ಆಯುಷ್ಮಂತ ಆನಂದ: "ಭಗವಾನರೆ, ತಾವು ಧಮ್ಮ ಪ್ರಚಾರಕ್ಕಾಗಿ ಹೊರಗೆ ಹೋದಾಗ ಜೇತವನಾರಾಮದಲ್ಲಿ ಶರಣು ಹೋಗಲು ಅಥವಾ ಗೌರವ ಸಮರ್ಪಿಸಲು ಏನು ಇರುವುದಿಲ್ಲ. ಅದು ಖಾಲಿ ಖಾಲಿಯಾಗಿದ್ದು, ಜನ ಭಕ್ತಿ ಗೌರವ ಸಲ್ಲಿಸಲು ಏನೂ ಇಲ್ಲ. ಆದ್ದರಿಂದ ಪೂಜ್ಯರೆ, ಬುದ್ಧಗಯಾದಲ್ಲಿನ ಮಹಾ ಬೋಧಿಮರದ ಬೀಜವೊಂದನ್ನು ತಂದು ಈ ಜೇತವನದ ಪ್ರವೇಶ ಭಾಗದಲ್ಲಿ ಬಿತ್ತಲೆ?"

ಬುದ್ಧರು : "ಆಯಿತು ಆನಂದ, ಹಾಗೆಯೇ ಮಾಡು. ಹಾಗೆ ಮಾಡಲು ನಾನು ಜೇತವನದಲ್ಲಿಯೇ ವಾಸವಾಗಿದ್ದೇನೆಂದು ಭಾಸವಾಗುತ್ತದೆ."

ಆನಂದನು ಅನಾಥಪಿಂಡಿಕ, ವಿಶಾಖಾ, ಕೋಸಲದ ರಾಜ ಪಸೇನದಿ ಮುಂತಾದ ಪ್ರಸಿದ್ಧ ವ್ಯಕ್ತಿಗಳಿಗೆ ಈ ಮಾತನ್ನು ಹೇಳಿ ನಂತರ ಆಯುಷ್ಮಂತ ಮೊಗ್ಗಲ್ಲಾನನಿಗೆ ಬುದ್ಧಗಯಾದಿಂದ ಮಹಾಬೋಧಿ ಮರದ ಬೀಜವನ್ನು ಪಡೆದು ತರುವಂತೆ ವಿನಂತಿಸಿದನು. ಅದೇರೀತಿಯಲ್ಲಿ ಆಯುಷ್ಮಂತ ಮೊಗ್ಗಲ್ಲಾನನು ಕೂಡಲೇ ಆ ಮರದಿಂದ ಕೆಳಗೆ ಬಿದ್ದ ಬೀಜವೊಂದನ್ನು ಪಡೆದು ಆಯುಷ್ಮಂತ ಆನಂದನಿಗೆ ಕೊಟ್ಟನು.

ಆಯುಷ್ಮಂತ ಆನಂದನು ಆ ಬೀಜವನ್ನು ರಾಜನಿಗೆ ಕೊಟ್ಟನು. ರಾಜನು ಅದನ್ನು ಅನಾಥಪಿಂಡಿಕನಿಗೆ ಕೊಟ್ಟನು. ಅನಾಥಪಿಂಡಿಕನು ಜಾಗವನ್ನು ಹಸನುಗೊಳಿಸಿ ಪನ್ನೀರನ್ನು ಚೆಲ್ಲಿ, ಆ ಸುಗಂಧಯುತ ಮಣ್ಣಿನಲ್ಲಿ ಗುಣಿ ತೆಗೆದು ಬೀಜವನ್ನು ಅದರಲ್ಲಿ ಬಿಟ್ಟನು. ಮುಂದೆ ಅದು ಗಿಡವಾಗಿ, ಮರವಾಗಿ ದೊಡ್ಡದಾಗಿ ಬೆಳೆದು ಆನಂದ ಬೋಧಿ ಎಂದು ಕರೆಸಿಕೊಂಡಿತು.

ಆಯುಷ್ಮಂತ ಆನಂದನಿಗೆ ಸಮನಾದ ಸೇವಕ ಭಕ್ತನಿಲ್ಲ. ವಾಸ್ತವದಲ್ಲಿ ಇಂದಿನ ನವಯುಗದಲ್ಲಿ ಸೇವಕ ಎಂದರೆ ಒಬ್ಬ ಖಾಸಗಿ ಕಾರ್ಯದರ್ಶಿ ಎಂದು.

ಥೇರಗಾಥಾದ ಮೂರು ಗಾಥೆಗಳಲ್ಲಿ ಆಯುಷ್ಮಂತ ಆನಂದನು ಬುದ್ಧರನ್ನು ಹೇಗೆ ಸೇವೆ ಮಾಡಿದನೆಂಬುದನ್ನು ದಾಖಲಿಸುತ್ತದೆ; "ನಾನು ಪೂಜ್ಯ ಭಗವಾನರನ್ನು ಇಪ್ಪತ್ತೈದು ವರ್ಷಗಳ ಕಾಲ ಸೇವೆ ಮಾಡಿದೆ ಮತ್ತು ಅವರನ್ನು ಶ್ರದ್ಧಾಪೂರ್ವಕವಾಗಿ ಪ್ರೀತಿಯ ಕೆಲಸಗಳಿಂದ... ಪ್ರೀತಿಯ ಮಾತುಗಳಿಂದ... ಎಡೆಬಿಡದ ನೆರಳಿನಂತೆ ಪ್ರೀತಿಯ ಚಿಂತನೆಗಳಿಂದ ಅವರನ್ನು ಸೇವೆಗೈದೆ..."



ಬುದ್ಧರು ಎಲ್ಲೆಲ್ಲಿ ಹೋದರೋ ಅಲ್ಲೆಲ್ಲ ಆಯುಷ್ಮಂತ ಆನಂದನು ಜೊತೆಗಿದ್ದ. ಒಂದು ಧ್ವನಿಮುದ್ರಿಕೆಯಂತೆ ತನ್ನ ಜಾಗ್ರತ ಸ್ಥಿತಿಯಲ್ಲಿ ಗುರುವಿನ ಪ್ರತಿ ಮಾತನ್ನು ಉಳಿಸಿಕೊಂಡನು. ಬುದ್ಧರು ಮುಂಜಾನೆ ಎರಡರಿಂದ ನಾಲ್ಕರವರೆಗೆ ಎರಡು ಗಂಟೆಗಳ ಕಾಲ ಮಾತ್ರ ನಿದ್ದೆ ಮಾಡುತ್ತಿದ್ದರು. ಉಳಿದೆಲ್ಲಾ ಸಮಯದಲ್ಲಿ ಬೇರೆ ಬೇರೆ ರೀತಿಯಲ್ಲಿ ಜೀವಿಗಳ ದುಃಖವನ್ನ ಹೋಗಲಾಡಿಸುವುದರಲ್ಲಿ, ಹಿತವನ್ನು ತರುವುದರಲ್ಲಿ ತಮ್ಮ ಸೇವೆಯನ್ನು ಚಲನಶೀಲತೆಯಲ್ಲಿಟ್ಟಿದ್ದರು.

ಭಗವಾನರ ಧಮ್ಮೋಪದೇಶವನ್ನು ಅರ್ಥಮಾಡಿಕೊಳ್ಳಲಾಗದೆ ಸಂಶಯ ಹೊಂದಿರುವ ಜನರ ಮನಸ್ಸನ್ನು ತಿಳಿ ಮಾಡುವುದರಲ್ಲಿ ಆಯುಷ್ಮಂತ ಆನಂದನದು ಬಹುಮುಖ್ಯವಾದ ಪಾತ್ರವಾಗಿತ್ತು. ಬುದ್ಧ ಭಗವಾನರ ಮುಂದೆ ಪ್ರೇಕ್ಷಕರನ್ನು ವ್ಯವಸ್ಥೆ ಮಾಡುವುದು ಅಥವಾ ಕೆಲವು ಮತಗಳ ಮುಖ್ಯಸ್ಥರಿಗೆ ಸಂದೇಶವನ್ನು ರವಾನಿಸುವುದು ಇತ್ಯಾದಿ ಕೆಲಸಗಳಲ್ಲಿ ಆನಂದನು ಭಿಕ್ಖುಗಳ ನೆರವನ್ನು ಪಡೆದು ಮುಖ್ಯ ಸೇವೆಗಳನ್ನು ಸಲ್ಲಿಸುತ್ತಿದ್ದನು.

ಯಾರು ನಿಬ್ಬಾಣವೆನ್ನುವ ಇನ್ನೊಂದು ದಡವನ್ನು ಸೇರಲು ಇಚ್ಛಿಸುತ್ತಿದ್ದರೋ ಅಂತಹವರಿಗೆ ಸೇತುವೆಯಂತೆ ಇದ್ದನು.

ಭಗವಾನ್ ಬುದ್ಧರು ಐದುವರೆ ಚದರ ಮೈಲಿಯಷ್ಟು ವಿಶಾಲವಾದ ಜೇತವನದ ಆವರಣದಲ್ಲಿ ಹನ್ನೆರಡು ಸಾವಿರದೈನೂರು ಭಿಕ್ಖುಗಳು ವಾಸಿಸುತ್ತಿದ್ದ ಹಲವಾರು ಕುಟೀರಗಳಿಗೆ ಬುದ್ಧರು ಹೋಗುತ್ತಿದ್ದ ಸಂದರ್ಭದಲ್ಲಿ ಆಯುಷ್ಮಂತ ಆನಂದನು ಅವರ ಹಿಂದೆಯೇ ಹೋಗಿ ಆಯಾ ಸಂದರ್ಭಗಳಲ್ಲಿ ಒದಗಿ ಬರುತ್ತಿದ್ದ ಹಲವಾರು ಸೇವೆಗಳನ್ನು ಸಲ್ಲಿಸುತ್ತಿದ್ದನು. ಬುದ್ಧರು ತಾವೇ ಸ್ವತಃ ರೋಗದಿಂದ ನರಳುತ್ತಿದ್ದ ಭಿಕ್ಖುಗಳಿಗೆ ಸೇವೆ ಮಾಡುತ್ತಿದ್ದರು. ಆ ಸಂದರ್ಭದಲ್ಲಿ ಆಯುಷ್ಮಂತ ಆನಂದನು ನೀರು, ಔಷಧಿ ಇತ್ಯಾದಿಗಳನ್ನು ತಂದು ಶುಶ್ರೂಷೆಗೆ ಅನುವಾಗುತ್ತಿದ್ದನು. ಯಾರಾದರೂ ಭಿಕ್ಖುಗಳು ತಮ್ಮ ಕುಟೀರವನ್ನು ಸರಿಯಾಗಿ ಸ್ವಚ್ಛವಾಗಿ ಇಟ್ಟುಕೊಳ್ಳದಿದ್ದರೆ ಬುದ್ಧರು ಆನಂದನ ನೆರವಿನಿಂದ ಜಾಗವನ್ನು ಸ್ವಚ್ಛಗೊಳಿಸಿ ಬಾಹ್ಯಶುದ್ಧಿಯೂ ಅತ್ಯಂತ ಮುಖ್ಯವಾದ ಸಂಗತಿ ಎಂಬ ಸಂದೇಶವನ್ನು ರವಾನಿಸುತ್ತಿದ್ದರು.

ಬುದ್ಧರು ಆಯುಷ್ಮಂತ ಆನಂದನನ್ನು ತಮ್ಮ ಆಪ್ತ ಸೇವಕನನ್ನಾಗಿ ಮತ್ತೆ ಕೆಲವು ಮುಖ್ಯ ಸಂದರ್ಭಗಳಲ್ಲಿ ಸಹಚರನನ್ನಾಗಿ ಆಯ್ಕೆ ಮಾಡಿಕೊಂಡಿದ್ದರು. ಬುದ್ಧರು ಜ್ಞಾನೋದಯ ಹೊಂದಿದ ಮೊದಲ ಇಪ್ಪತ್ತು ವರ್ಷಗಳ ಕಾಲ ಯಾರು ಸರಿಯಾದ ಆಪ್ತ ಸಹಾಯಕರಿರಲಿಲ್ಲ. ಯಾವಾಗಲಾದರೂ ಬೇಕೆನಿಸಿದಾಗ ಯಾರಾದರೊಬ್ಬರು ಸೇವೆ ಸಲ್ಲಿಸುತ್ತಿದ್ದರು; ಅದೂ ಸರಿಯಾಗಿ ಸೇವೆ ಮಾಡುತ್ತಿರಲಿಲ್ಲ. ಐವತ್ತೈದು ವಯಸ್ಸಾದಾಗ ಜೇತವನಕ್ಕೆ ಭಕ್ತರು ಬಹುಸಂಖ್ಯೆಯಲ್ಲಿ ಬರಲು ಶುರುವಾದಾಗ ಒಬ್ಬ ಆಪ್ತ ಸಹಾಯಕನನ್ನು ಆಯ್ಕೆ ಮಾಡಿಕೊಳ್ಳಬೇಕಾಯಿತು. ಆಗ ಬುದ್ಧರು ತಮ್ಮ ಶಿಷ್ಯರಿಗೆ ಹೀಗೆ ಹೇಳಿದರು: "ನನ್ನ ಸೇವೆಯನ್ನು ಮಾಡಲು ಒಬ್ಬ ಭಿಕ್ಖುವನ್ನು ಆಯ್ಕೆ ಮಾಡಿ."

ಕೂಡಲೇ ಆಯುಷ್ಮಂತ ಸಾರಿಪುತ್ತರಾದಿಯಾಗಿ ಎಲ್ಲರೂ ಸೇವೆಯನ್ನು ಸಲ್ಲಿಸಲು ಮುಂದೆ ಬಂದರು, ಬುದ್ಧರು ಇವರನ್ನು ಒಪ್ಪಿಕೊಳ್ಳಲಿಲ್ಲ. ಕೊನೆಯಲ್ಲಿ ಮಹಾಸಾವಕರು ಆಯುಷ್ಮಂತ ಆನಂದನಿಗೆ ಬುದ್ಧನ ಆಪ್ತ ಸೇವಕನಾಗಲು ವಿನಂತಿಸಿದರು. ಆಯುಷ್ಮಂತ ಆನಂದನು ಬುದ್ಧರು ಎಂಟು ವರಗಳನ್ನು ಕರುಣಿಸಿದರೆ ಸೇವಕನಾಗುವೆನೆಂದು ಹೇಳಿದನು. ಅವು ಯಾವುವೆಂದರೆ: ಭಗವಾನರು ತಮ್ಮ ಸ್ವಂತ ಬಳಕೆಗಾಗಿ ಬಂದ ಉಡುಗೊರೆಗಳನ್ನು ಅಂದರೆ ಚೀವರ, ಭಿಕ್ಷಾನ್ನ, ಶಯನಾಸನ ಇತ್ಯಾದಿಗಳನ್ನು ತನಗೆ ನೀಡಬಾರದು. ಯಾವುದೇ ಫಲಾಪೇಕ್ಷೆಯಿಲ್ಲದೆ ಸೇವೆ ಸಲ್ಲಿಸುವುದು ಇದರ ಹಿಂದಿನ ಉದ್ದೇಶವಾಗಿತ್ತು. ಹಾಗೆಯೇ ಬೇರೆಯವರು ಇವನು ವೈಯಕ್ತಿಕ ಲಾಭಕ್ಕಾಗಿ ಸೇವೆ ಮಾಡುತ್ತಿದ್ದಾನೆ ಎಂಬ ಮಾತನ್ನು ತಪ್ಪಿಸುವುದು. ಬುದ್ಧರು ಯಾವುದಾದರೂ ಮನೆಗೆ ಆಹ್ವಾನಿತರಾಗಿದ್ದರೆ ಅಲ್ಲಿಗೆ ಆಯುಷ್ಮಂತ ಆನಂದನು ಹೋಗದೆ ಇರುವುದು. ಆದರೆ ಎಲ್ಲೆಲ್ಲಿ ಆನಂದನಿಗೂ ಆಹ್ವಾನವಿದೆಯೋ ಆಗ ಬುದ್ಧರು ಆನಂದನನ್ನು ಕರೆದುಕೊಂಡು ಹೋಗಬಹುದು. ಹಾಗೆಯೇ ಆಯುಷ್ಮಂತ ಆನಂದನು ಯಾರಾದರೂ ಸಂದರ್ಶಕರನ್ನು ಕರೆತಂದರೆ ಅವರನ್ನು ಭಗವಾನರು ತಮ್ಮ ಮುಂದೆ ಬರಲು ಅವಕಾಶ ನೀಡುವುದು. ತನಗೆ ಸಂಶಯಗಳೇನಾದರೂ ಬಂದರೆ ಅಂತಹ ಸಂದರ್ಭದಲ್ಲಿ ಭಗವಾನರನ್ನು ನೋಡಲು ಅವಕಾಶ ನೀಡುವುದು. ಇದರ ಉದ್ದೇಶವೆಂದರೆ ಭಗವಾನರ ಎಲ್ಲ ಧಮ್ಮದೇಸನಗಳನ್ನು ತನ್ನ ನೆನಪಿನಲ್ಲಿಟ್ಟುಕೊಳ್ಳುವುದು ಮತ್ತು ಬುದ್ಧರು ಧಮ್ಮದೇಸನವನ್ನು ಕೊಟ್ಟಾದ ಮೇಲೆ ಅದನ್ನು ಪುನಃ ತನಗಾಗಿ ಹೇಳಬೇಕು; ಆ ಮೂಲಕ ಆ ಧಮ್ಮದೇಸನವನ್ನು ತನ್ನ ನೆನಪಿನಲ್ಲಿಟ್ಟುಕೊಳ್ಳಬಹುದು. ಬುದ್ಧರು ಈ ಎಲ್ಲ ಎಂಟು ವರಗಳನ್ನು ನೀಡಿದರು.

ಇದಾದನಂತರ ಆಯುಷ್ಮಂತ ಆನಂದನು ಬುದ್ಧರ ಆಪ್ತ ಸೇವಕನಾಗಿ ಇಪ್ಪತ್ತೈದು ವರ್ಷಗಳ ಕಾಲ ಅಂದರೆ ಮಹಾಪರಿನಿಬ್ಬಾಣವಾಗುವವರೆಗೂ ಸೇವೆ ಮಾಡಿದನು.

ಆಯುಷ್ಮಂತ ಆನಂದರ ಸ್ಮರಿಸಬಹುದಾದ ಸೇವೆಯೆಂದರೆ ಭಿಕ್ಖು ಸಂಘವನ್ನು ಕಟ್ಟಿ ಬೆಳೆಸುವುದರಲ್ಲಿ. ಆ ಸಮಯದಲ್ಲಿ ಆತನು ಭಗವಾನರೊಡನೆ ವೈಶಾಲಿಯಲ್ಲಿದ್ದನು. (ಈ ಐತಿಹಾಸಿಕ ಘಟನೆಯ ಪೂರ್ಣ ವಿವರಗಳನ್ನು ಒಂಭತ್ತನೇ ಅಧ್ಯಾಯದಲ್ಲಿ ಕೊಡಲಾಗಿದೆ).

## ಆಯುಷ್ಮಂತ ಕುಮಾರ ಕಸ್ಸಪ

ಆಯುಷ್ಮಂತ ಕುಮಾರ ಕಸ್ಸಪನ ಕಥೆ ನಮ್ಮನ್ನು ಬುದ್ಧ ಕಸ್ಸಪನ ಕಾಲಕ್ಕೆ ಕೊಂಡೊಯ್ಯುತ್ತದೆ. ಬುದ್ಧಕಸ್ಸಪ ಶಾಸನ ಕಾಲವು ಇಳಿಮುಖವಾಗುತ್ತಿರುವ ಸಂದರ್ಭದಲ್ಲಿ ಐದುಜನ ನಿಷ್ಠಾವಂತ ಶಿಷ್ಯರು ಈ ಬುದ್ಧ ಶಾಸನದ ಅವನತಿಯ ಕಾಲವನ್ನು ಚೆನ್ನಾಗಿ ಉಪಯೋಗಿಸಿಕೊಳ್ಳಲು ತೀರ್ಮಾನಿಸಿದರು. ಈ ಐದೂಜನ ಶಿಷ್ಯರು ಎತ್ತರ ಪರ್ವತವೊಂದರ ಬುಡದಲ್ಲಿರುವ ಅರಣ್ಯಕ್ಕೆ ಹೋದರು. ಅದರ ಶಿಖರವು ಸ್ತೂಪದಂತೆ ಕಾಣುತ್ತಿತ್ತು. ಅದನ್ನು ಯಾರೂ ಇದುವರೆಗೆ ಹತ್ತಲು ಸಾಧ್ಯವಾಗಿರಲಿಲ್ಲ. ಅಸಾಮಾನ್ಯ



ಅಥವಾ ಲೋಕೋತ್ತರ ಶಕ್ತಿಯನ್ನು ಹೊಂದಿದ ಭಿಕ್ಖುಗಳು ಮಾತ್ರ ಅಲ್ಲಿಗೆ ಹಾರಿ ಏಕಾಂತದಲ್ಲಿ ಸ್ವಲ್ಪಕಾಲ ಧ್ಯಾನ ಮಾಡಲು ಹೋಗುತ್ತಿದ್ದರು.

ಈ ಐದುಜನ ಶಿಷ್ಯರು ಶಿಖರದೆತ್ತರಕ್ಕೆ ಏರಿ ಧ್ಯಾನಮಾಡಿ ನಿಬ್ಬಾಣ ಸಿಗುವವರೆಗೂ ವಾಪಸ್ಸು ಬರುವುದಿಲ್ಲವೆಂಬ 'ಮಾಡು ಇಲ್ಲವೇ ಮಡಿ' ಎಂದು ನಿಶ್ಚಯ ಮಾಡಿದರು. ತಾವು ಮರಣವನ್ನು ಅಪ್ಪಿಯೇ ತೀರುತ್ತೇವೆಯಾಗಲೀ ಹಿಂದಿರುಗಿ ಬರುವುದಿಲ್ಲವೆಂದು ತೀರ್ಮಾನಿಸಿದರು. ಈ ದೃಢ ನಿರ್ಧಾರದ ಅನುಸಾರ ಉದ್ದನೆಯ ಗಟ್ಟಿಯಾದ ಬಿದಿರುಗಳನ್ನು ಜೋಡಿಸಿ ಏಣಿಯಂತೆ ಕಟ್ಟಿ ಬಹು ಉದ್ದನೆಯ ಏಣಿಯನ್ನು ತಯಾರಿಸಿದರು. ಆ ಶಿಲಾಶಿಖರ ಎಷ್ಟು ಎತ್ತರವಿತ್ತೆಂದರೆ ಏಣಿಯನ್ನು ಒಂದರ ಮೇಲೊಂದರಂತೆ ಬಿಗಿಯಾಗಿ ಕಟ್ಟಿರು. ಕೊನೆಗೆ ಎಲ್ಲರೂ ಶಿಖರಾಗ್ರವನ್ನು ಮುಟ್ಟಿದರು.

ಒಮ್ಮೆ ಶಿಖರವನ್ನು ಮುಟ್ಟಿದಮೇಲೆ ಅಲ್ಲಿಂದ ಸಿಗುವ ನಯನ ಮನೋಹರ ನಿಸರ್ಗ ಅವರನ್ನು ಸೂರೆಗೊಂಡಿತು. ಪ್ರತಿಕ್ಷಣವೂ ಅರಹತ ಸ್ಥಿತಿ ತಲುಪಿಯೇ ವಾಪಸ್ಸು ಹೋಗುವುದೆಂದು ನಿಶ್ಚಯವನ್ನು ಮನದಲ್ಲಿಟ್ಟುಕೊಂಡು ಧ್ಯಾನ ಸಾಧನೆಯನ್ನು ಆರಂಭಿಸಿದರು. ತಮ್ಮ ಪ್ರಯತ್ನದಲ್ಲಿ ಕಿಂಚಿತ್ತೂ ಕಡಿಮೆ ಮಾಡಲಿಲ್ಲ. ದಿನದಿಂದ ದಿನಕ್ಕೆ ತುಂಬ ಉತ್ಸಾಹದಿಂದ ಬೆಳಗಿನಿಂದ ರಾತ್ರಿಯವರೆಗೆ ನಿಂತು, ಕುಳಿತು, ನಡೆದಾಡುತ್ತಾ, ನೆಲದ ಮೇಲೆ ಮಲಗಿ ಹೀಗೆ ಎಲ್ಲ ಭಂಗಿಗಳಲ್ಲಿ ರಾತ್ರಿಯವರೆಗೂ ಧ್ಯಾನ ಸಾಧನೆಯಲ್ಲಿ ತೊಡಗಿದರು. ಮೂರನೆಯ ದಿನ ಹಿರಿಯ ಭಿಕ್ಖುವು ಅರಹತ ಸ್ಥಿತಿಯ ಮಗ್ಗಫಲವನ್ನು ಪಡೆಯುವಲ್ಲಿ ಸಫಲನಾದನು. ಹೀಗೆ ಅರಹತ ಗುರಿಯನ್ನು ಮುಟ್ಟಿದಮೇಲೆ ಎಲ್ಲರಿಗೂ ಆಹಾರವನ್ನು ತರಲು ತೀರ್ಮಾನಿಸಿದನು. ಶಿಖರವನ್ನು ಮುಟ್ಟಿದ ಮೇಲೆ ಯಾರೂ ಆಹ್ವಾನವನ್ನು ಸ್ವೀಕರಿಸಿರಲಿಲ್ಲ. ಅರಹತ ಭಿಕ್ಖುವು ನೇರವಾಗಿ ಹಿಮಾಲಯದ ಉತ್ತರದಲ್ಲಿನ ದೂರದಲ್ಲಿರುವ ಉತ್ತರಕುರು ಗ್ರಾಮಕ್ಕೆ ಹೋಗಿ ತನ್ನ ಆಹಾರವನ್ನು ಭುಂಜಿಸಿ ಗೆಳೆಯರಿಗೆ ಭಿಕ್ಷಾನ್ನವನ್ನು ಕೊಡಲು ಶಿಖರಕ್ಕೆ ಹಾರಿಹೋದನು. ಶಿಖರಾಗ್ರವನ್ನು ಮುಟ್ಟಿದಮೇಲೆ ಸೋದರ ಭಿಕ್ಖುಗಳಿಗೆ ತಾನು ತಂದ ಭಿಕ್ಷಾನ್ನವನ್ನು ಕೊಡಲು, ತಾವು ಗುರಿಯನ್ನು ಮುಟ್ಟಿ ತಾವೇ ಭಿಕ್ಷಾನ್ನವನ್ನು ಸಂಪಾದಿಸಬೇಕಾಗಿರುವುದರಿಂದ ಅವರು ಅದನ್ನು ತಿರಸ್ಕರಿಸಿದರು. ತಮ್ಮ ಸಾಧನೆಯನ್ನು ತೀವ್ರತರವಾಗಿ ಮುಂದುವರಿಸಿದರು. ಒಂದುದಿನದ ನಂತರ ಅಂದರೆ ನಾಲ್ಕನೇ ದಿನ ಇನ್ನೊಬ್ಬ ಭಿಕ್ಖುವುದು ಅನಾಗಾಮಿ ಸ್ಥಿತಿಯನ್ನು ಮುಟ್ಟುವಲ್ಲಿ ಸಫಲನಾದನು; ಆದರೆ ಅರಹತ ಸ್ಥಿತಿಯನ್ನು ತಲುಪಲಿಲ್ಲ. ಇನ್ನುಳಿದ ಮೂವರು ನಿರಾಹಾರದಿಂದ ಬಳಲಿದ್ದರೂ ಇನ್ನಷ್ಟು ಹೆಚ್ಚಿನ ಶ್ರಮದಿಂದ ಧ್ಯಾನ ಸಾಧನೆಯನ್ನು ಮುಂದುವರೆಸಿದರು. ಅರಹಂತನಾದ ಭಿಕ್ಖುವು ಕಾಲವಾದನು ಅಥವಾ ಪರಿನಿಬ್ಬಾಣ ಹೊಂದಿದನು. ಅನಾಗಾಮಿ ಭಿಕ್ಖುವೂ ಕೂಡ ಕಾಲವಾಗಿ ಸುದ್ಧಾವಾಸ ದಿವ್ಯಲೋಕದಲ್ಲಿ ಮಹಾಬ್ರಹ್ಮನಾಗಿ ಹುಟ್ಟಿದನು. ಒಬ್ಬರಾದ ಮೇಲೆ ಒಬ್ಬ ಭಿಕ್ಖುವು ಅಂತಿಮ ಕ್ಷಣದವರೆಗೂ ತೀವ್ರ ಧ್ಯಾನ ಸಾಧನೆಯಲ್ಲಿದ್ದಂತೆ ಎಲ್ಲರೂ ಕಾಲವಾದರು. ಇವರೆಲ್ಲರೂ ಅಧಿಟ್ಠಾಣ ಪಾರಮಿಯಿಂದ ಕಾಮಾವಚರದ ಮೂರು ಭಿನ್ನ ದಿವ್ಯಲೋಕಗಳಲ್ಲಿ ಪುನರ್ಜನ್ಮ ಪಡೆದರು. ಅಲ್ಲಿ ಬುದ್ಧ ಕಸ್ಸಪರು ಮತ್ತು ಬುದ್ಧ ಗೌತಮರ

ನಡುವಿನ ಶಾಸನ ಕಾಲದಲ್ಲಿ ಈ ಮೂವರು ಬಹು ದೀರ್ಘಕಾಲ ದಿವ್ಯಲೋಕದಲ್ಲಿ ಆನಂದದಿಂದ ಕಳೆದರು. ನಂತರ ಬುದ್ಧ ಗೌತಮರ ಕಾಲದಲ್ಲಿ ಈ ಮೂವರೂ ಪ್ರತಿಷ್ಠಿತ ಮನೆತನಗಳಲ್ಲಿ ಜನ್ಮ ಪಡೆದರು.

ಆಯುಷ್ಮಂತ ಕುಮಾರ ಕಸ್ಸಪನು ಸಾವತ್ಥಿಯ ರಾಜ ಭಂಡಾರದ ಅಧಿಕಾರಿಯ ಮಗಳ ಮಗನಾಗಿ ಹುಟ್ಟಿದನು. ಎರಡನೇಯವನು ತಕ್ಷಶಿಲಾದ (ಈಗಿನ ಪಾಕಿಸ್ಥಾನದಲ್ಲಿದೆ) ರಾಜಮನೆತನದಲ್ಲಿ ಪುಕ್ಕುಸತಿಯಾಗಿ ಹುಟ್ಟಿದನು. ಆನಂತರ ಇವನು ರಾಜನಾದನು.

ಧಾತುವಿಭಂಗ ಸುತ್ತದ ಅಟ್ಠಕಥೆಯು ರಾಜ ಪುಕ್ಕುಸತಿಯ ಬಗ್ಗೆ ಒಂದು ರಂಜನೀಯ ಕಥೆಯನ್ನು ನೀಡುತ್ತದೆ. ಆಫಘಾನಿಸ್ತಾನದ ಹತ್ತಿರವಿರುವ ತಕ್ಷಶಿಲಾ ದೇಶದ ರಾಜನಾದ ಪುಕ್ಕುಸತಿ ಪೂರ್ವ ಭಾರತದಲ್ಲಿನ ಮಗಧದ ದೊರೆ ಬಿಂಬಿಸಾರನೂ ಸೇರಿದಂತೆ ಹಲವಾರು ರಾಜರುಗಳೊಡನೆ ಸಂಬಂಧವನ್ನಿಟ್ಟುಕೊಂಡಿದ್ದನು. ಈ ಇಬ್ಬರೂ ರಾಜರು ಒಳ್ಳೆಯ ಸ್ನೇಹಿತರಾಗಿ ತಮ್ಮ ವಣಿಕರ ಮೂಲಕ ಉಡುಗೊರೆಗಳನ್ನು ವಿನಿಮಯಿಸಿಕೊಳ್ಳುತ್ತಿದ್ದರು. ಬುದ್ಧನ ಧಮ್ಮಸಾರವನ್ನು ಒಂದು ಬಂಗಾರದ ತಟ್ಟೆಯಲ್ಲಿ ಕೆತ್ತಿಸಿ ಆ ಅತ್ಯಮೂಲ್ಯವಾದ ಉಡುಗೊರೆಯನ್ನು ದೊರೆ ಬಿಂಬಿಸಾರನು ರಾಜ ಪುಕ್ಕುಸತಿಗೆ ಕಳುಹಿಸಿದನು. ಅದರಲ್ಲಿ ತ್ರಿರತ್ನಗಳಾದ ಬುದ್ಧ, ಧಮ್ಮ, ಸಂಘದ ವರ್ಣನೆ ಮಾಡಿದ್ದನು.

ಪುಕ್ಕುಸತಿಯ ಈ ಅತ್ಯಮೂಲ್ಯ ಉಡುಗೊರೆಯನ್ನು ನೋಡಿದ ಕೂಡಲೇ ಅದರಲ್ಲಿನ ಧಮ್ಮಸಾರಕ್ಕೆ ಮನಸೋತನು. ಅವನು ಈಗಾಗಲೇ ಪಾರಮಾರ್ಥಿಕವಾಗಿ ವೃದ್ಧಿಗೊಂಡಿದ್ದನು. ಪರ್ವತಾಗ್ರವನ್ನು ಹತ್ತಿ ನಿರಾಹಾರಿಯಾಗಿ ನಿಬ್ಬಾಣವನ್ನು ಹೊಂದಲು ಬಹು ಸಾಹಸ ಮಾಡಿದವನು. ಸಮಥಾ ಮತ್ತು ವಿಪಸ್ಸನ ಧ್ಯಾನಗಳಲ್ಲಿ ಸಾಕಷ್ಟು ಪಳಗಿದವನಾದ್ದರಿಂದ ಶ್ರೀಮಂತ ಪಾರಮಾರ್ಥಿಕ ಹಿನ್ನೆಲೆಯಿತ್ತು.

ಬುದ್ಧರ ಅಗ್ರಗಣ್ಯ ಶಿಷ್ಯನೂ, ಮೊದಲ ರಾಜ ಶಿಷ್ಯನೂ ಆದ ಬಿಂಬಿಸಾರನು ಕಳುಹಿಸಿದ ಸುವರ್ಣ ತಟ್ಟೆಯ ಮೇಲಿದ್ದ ಬುದ್ಧರ ಮಾತುಗಳನ್ನು ಪುಕ್ಕುಸತಿಯು ಓದಿ ತನ್ನ ಸಿಂಹಾಸನವನ್ನು ತೊರೆಯಲು ಉದ್ಯುಕ್ತನಾದನು. ಸಮಣರು ಉಡುವ ಚೀವರವನ್ನು ತೊಟ್ಟು, ತಲೆಯನ್ನು ಮುಂಡನ ಮಾಡಿಸಿಕೊಂಡನು. ರಾಜ್ಯದ ರಾಜಭಾರವನ್ನು ತನ್ನ ಸಂತತಿಯ ಕುಡಿಗೆ ಕೊಟ್ಟು ರಾಜಗಹದತ್ತ ನಡೆದನು. ವಾರಗಟ್ಟಲೆ ನಡೆದು ರಾಜಗಹ ಹತ್ತಿರ ಬರುತ್ತಿದ್ದಂತೆ ಒಂದು ರಾತ್ರಿಯನ್ನು ಕುಂಬಾರ ಕೊಟ್ಟಿಗೆಯಲ್ಲಿ ಕಳೆದನು.

ಆ ದಿನದ ಮುಂಜಾನೆಯೇ ಬುದ್ಧರು ತಮ್ಮ ದಿವ್ಯದೃಷ್ಟಿಯಿಂದ ಮುಂದೆ ಏನಾಗುವುದೆಂಬುದನ್ನು ನೋಡಿದ್ದರು. ಆದ್ದರಿಂದ ಬುದ್ಧರು ತಮ್ಮ ಮೂವತ್ತೆರಡು ಮಹಾಪುರುಷ ಲಕ್ಷಣಗಳನ್ನು ಮತ್ತು ಎಂಭತ್ತು ಲಘು ಲಕ್ಷಣಗಳನ್ನು ಮರೆಮಾಚಿಕೊಂಡು ಒಬ್ಬ ಸಾಧಾರಣ ಭಿಕ್ಖುವಿನಂತೆ ಈ ಶಿಷ್ಯನನ್ನು ನೋಡಲು ನಿರ್ಧರಿಸಿದರು. ಶಿಷ್ಯನು ತನ್ನ ಬಳಿ ಬರುವ ಮುಂಚೆಯೇ ಬುದ್ಧರು ಕುಂಬಾರ ಕೊಟ್ಟಿಗೆಗೆ ಹೋದರು. ಪುಕ್ಕುಸತಿ ಮತ್ತು ಬುದ್ಧರ ನಡುವೆ ಒಂದು ಸುಂದರ ಸಂವಾದವೇ ನಡೆಯಿತು.

ಪುಕ್ಕುಸತಿಯು ಬುದ್ಧರ ಧಮ್ಮದೇಸನವನ್ನು ತುಂಬಾ ಆಸಕ್ತಿಯಿಂದ ಕೇಳಿ



ಪ್ರಜ್ಞಾವಂತನಾದ್ದರಿಂದ ಪಾರಮಾರ್ಥಿಕವಾಗಿ ಪರಿವರ್ತಿತನಾದನು; ಅನಾಗಾಮಿ ಲೋಕೋತ್ತರ ಸ್ಥಿತಿಯನ್ನು ಹೊಂದಿ ಆನಂತರದಲ್ಲಿ ಅರಹತನೂ ಆದನು.

ಮೂರನೆಯವನು ಬಾಹಿಯ ದಾರುಚಿರಿಯ. ಇವನು ಹೆಸರಾಂತ ಬಾಹಿಯ ಕುಲದಲ್ಲಿ ಸುಪ್ಪಾರಕ ಎನ್ನುವ ಬಂದರು ನಗರದಲ್ಲಿ ಹುಟ್ಟಿದನು. ಒಮ್ಮೆ ಈತನು ಸುವರ್ಣ ಭೂಮಿಗೆ (ಈಗಿನ ಮಿಯನ್ಮಾರ್) ಸಮುದ್ರಯಾನ ಮಾಡಿದ್ದನು. ಇವನಿದ್ದ ಹಡಗು ಧಕ್ಕೆಗೊಳಗಾಯಿತು. ದೃಢಚಿತ್ತದಿಂದ ಮರದ ದಿಮ್ಮಿಯೊಂದನ್ನು ಹಿಡಿದುಕೊಂಡ ದಡ ಸೇರಿದನು. ಆನಂತರದಲ್ಲಿ ತನ್ನ ಬಂದರು ನಗರವನ್ನು ಸೇರಿದನು. ಸಮುದ್ರ ತೀರ ಸೇರುವ ವೇಳೆಗೆ ತಾನು ಹೊದ್ದ ಬಟ್ಟೆಗಳೆಲ್ಲ ಕಳಚಿಹೋಗಿ ದಿಗಂಬರನಾಗಿದ್ದನು. ಮರದ ತೊಗಟೆಗಳನ್ನು (ದಾರುಚಿರ) ಒಂದಕ್ಕೊಂದು ಸೇರಿಸಿ ಮಾನ ಮುಚ್ಚಿಕೊಳ್ಳಲು ಲಂಗೋಟಿಯನ್ನಾಗಿ ಮಾಡಿಕೊಂಡು ಮಣ್ಣಿನ ಗಡಿಗೆಯೊಂದನ್ನು ಹೊಂದಿಸಿಕೊಂಡನು. ರಸ್ತೆಯಲ್ಲಿ ಉತ್ತರಾಭಿಮುಖವಾಗಿ ಹೋಗುತ್ತಾ ಹಸಿವನ್ನು ತಡೆಯಲಾರದೆ ಭಿಕ್ಷೆ ಬೇಡುತ್ತಾ ಹೋದನು. ಜನ ಅವನು ದಾರುಚಿರವನ್ನು ಲಂಗೋಟಿಯಾಗಿ ಉಟ್ಟುದನ್ನು ಕಂಡು ಇವನೊಬ್ಬ ಅರಹತನೇ ಇರಬೇಕೆಂದು ಭಾವಿಸಿದರು. ಅವನು ಕೂಡಲೇ ಒಬ್ಬ ಪ್ರತಿಮಾಪುರುಷನಾದ. ಅವನು ಎಲ್ಲಿಯೇ ಹೋಗಲಿ ಅವನನ್ನು ಅರಹತನೆಂದೇ ನಂಬಿದರು ಮತ್ತು ತನ್ನನ್ನು ಅರಹತ ದಾರುಚಿರಿಯ ಎಂದೇ ಕರೆದುಕೊಂಡನು.

ಸುದ್ಧಾವಾಸ ದಿವ್ಯಲೋಕದಲ್ಲಿರುವ ಕಸ್ಸಪ ಬುದ್ಧ ಇವನ ಹಳೆಯ ಸ್ನೇಹಿತ. ಕಸ್ಸಪ ಬುದ್ಧನು ದಿವ್ಯಚಕ್ಷುವಿನ ಮೂಲಕ ದಾರುಚಿರಿಯನಿಗೆ ಏನಾಗುತ್ತಿದೆ ಎಂಬುದನ್ನು ಕಂಡುಕೊಂಡು ಇವನ ಭ್ರಮೆಯನ್ನು ಇಳಿಸಲು ಇದು ಸಮಯವೆಂದು ತೀರ್ಮಾನಿಸಿದನು. ಕೂಡಲೇ ಅವನ ಮುಂದೆ ಆಕಾಶದಲ್ಲಿ ಪ್ರತ್ಯಕ್ಷನಾದ. ದಾರುಚಿರಿಯನಿಗೆ ದಿಗ್ಭ್ರಮೆಯಾಯಿತು. ಭಕ್ತಿಯಿಂದಲೇ ನೀನು ಯಾರು ಎಂದು ಕೇಳಿದ. ಈ ಸುದ್ಧಾವಾಸ ಬ್ರಹ್ಮ ದೇವತೆಯು ತನ್ನ ಹಿಂದಿನ ಚರಿತ್ರೆಯನ್ನು ಹೇಳಿ ಅರಹಂತನಾಗಲು ಇನ್ನೂ ಬಹಳ ದೂರ ಇರುವೆ ಎಂಬ ಮಾತನ್ನು ಅವನ ಕಿವಿಗೆ ಹಾಕಿದ. ದೇವತೆಯು ಹೀಗೆ ಹೇಳಿತು: "ಭ್ರಮೆಗಳಿಂದ ತೊಂದರೆ ಪಡುವುದಕ್ಕಿಂತ, ನೀನು ಕೂಡಲೇ ಜೇತವನಕ್ಕೆ ಹೋಗಿ ಅಲ್ಲಿ ಸಮ್ಮಾಸಂಬುದ್ಧರಿಗೆ ಅಡ್ಡಬಿದ್ದು ಧಮ್ಮವನ್ನು ಕಲಿ, ಆಗಲೇ ನೀನು ಅರಹತನಾಗುವುದು."

ದಾರುಚಿರಿಯನು ದೇವತೆಯ ಮಾತಿಗೆ ಕೃತಜ್ಞನಾದನು. ಬುದ್ಧನ ಹೆಸರು ಕೇಳಿದ ತಕ್ಷಣವೇ ಅವನ ಮೈಯಲ್ಲಿ ವಿದ್ಯುತ್ ಸಂಚಾರವಾಯಿತು. ಅವನ ಚಿತ್ತವನ್ನು ಉತ್ತೇಜಿಸಿತು. ಅವನು ಉತ್ತರ ದಿಕ್ಕಿಗೆ ಮುಖಮಾಡಿ ಬುದ್ಧರನ್ನು ಸಂದರ್ಶಿಸಲೇಬೇಕೆಂಬ ಅಚಲ ನಿರ್ಧಾರವನ್ನು ಮಾಡಿದನು.

ಸುಪ್ಪಾರಕ ಬಂದರು ನಗರವು ಮಹಾರಾಷ್ಟ್ರದ ದಕ್ಷಿಣ ಭಾಗದಲ್ಲಿದೆ. ಅಲ್ಲಿಂದ ಸಾವತ್ಥಿಗೆ ನಡೆದು ಬರುವುದೆಂದರೆ ನೂರಾರು ಮೈಲಿಗಳ ಹರಿದರಿ. ಅವನೊಳಗೆ ಎಷ್ಟು ಉತ್ಸಾಹವಿತ್ತೆಂದರೆ ನಡೆಯಲು ಮುನ್ನುಗ್ಗಿದ. ದೇವತೆಯೊಂದರ ನೆರವಿನಿಂದ ಕ್ಷಿಪ್ರ ನಡಿಗೆಯಲ್ಲಿ ಸಾವತ್ಥಿಗೆ ಸ್ವಲ್ಪದರಲ್ಲೇ ಸೇರಿದನು. ಅವನು ಜೇತವನದ ಬಳಿ

ಬಂದಾಗ ಬುದ್ಧರು ಆಗ ಅಲ್ಲಿರಲಿಲ್ಲ. ಅವರು ತಮ್ಮ ಭಿಕ್ಷಾಟನೆಗಾಗಿ ಹೊರಗೆ ಹೋಗಿದ್ದರು. ದಾರುಚಿರಿಯನಿಗೆ ಕಾಯಲು ಸಂಯಮವಿರಲಿಲ್ಲ. ಬುದ್ಧರನ್ನು ಹಿಂಬಾಲಿಸೋಣವೆಂದು ತೀರ್ಮಾನಿಸಿದನು. ಸಾಮಾನ್ಯವಾಗಿ ಅನಗಾರಿಕ ಭಿಕ್ಷುವು ಇನ್ನೊಬ್ಬ ಭಿಕ್ಷುವು ಭಿಕ್ಷಾಟನೆಯಲ್ಲಿದ್ದಾಗ ಹಿಂಬಾಲಿಸುವುದಿಲ್ಲ. ಪ್ರವಾಸದ ಆಯಾಸವನ್ನು ತೀರಿಸಿಕೊಳ್ಳಲು ವಿಶ್ರಾಂತಿ ಪಡೆಯುವಂತೆ ಅವನಿಗೆ ಸೂಚನೆಯನ್ನು ಮುಂಚೆಯೇ ನೀಡಲಾಗಿತ್ತು. ಆದರೆ ಅವನಲ್ಲಿ ಆತುರವಿತ್ತು, ತಲ್ಲಣವಿತ್ತು, ಕೂಡಲೇ ಬುದ್ಧರನ್ನು ನೋಡಲು ಹುಡುಕ ಹೊರಟ. ಬುದ್ಧರು ಪ್ರಶಾಂತ ಮುಖಮುದ್ರೆಯಿಂದ ಗ್ರಾಮದತ್ತ ಭಿಕ್ಷೆಗಾಗಿ ಹೋಗುತ್ತಿದ್ದರು. ಇವನು ಬುದ್ಧರನ್ನು ಕಂಡೊಡನೆ ಧೊಪ್ಪನೆ ಕಾಲಿಗೆಬಿದ್ದು ಗೌರವ ಸಲ್ಲಿಸಿದನು. ಬುದ್ಧರು ಅವನಿಗೆ ಇದು ಸರಿಯಾದ ಸಮಯವಲ್ಲವೆಂದು ಹೇಳಿದರು. ಆದರೂ ಅವನು ಈ ಪ್ರಶ್ನೆಯನ್ನು ಹಾಕಿದ: "ಸಂಸಾರವೆಂಬ ದೀರ್ಘನಡಿಗೆಯಲ್ಲಿ ತಾನು ಎಷ್ಟು ಆಹಾರವನ್ನು ಸೇವಿಸಿರಬಹುದು? ತನಗೆ ಎಷ್ಟು ಬೇಗ ಸಾವು ಸಂಭವಿಸಬಹುದು?" ಬುದ್ಧರಿಗೆ ಇವನ ಸಾವು ಹತ್ತಿರವೇ ಇದೆ ಎಂಬುದು ಗೊತ್ತಿತ್ತು ಮತ್ತು ಇವನ ಪ್ರಶ್ನೆಯಲ್ಲಿಯೇ ಅವನ ಭವಿಷ್ಯದ ಸೂಚನೆ ಅಡಗಿತ್ತು.

ಆದ್ದರಿಂದ ಬುದ್ಧರು ಅವನಿಗೆ ಒಂದು ವಾಕ್ಯದಲ್ಲಿ ಧಮ್ಮವನ್ನು ಉಪದೇಶಿಸಿದರು: "ದಿಟ್ಠೇ ದಿಟ್ಠಮತ್ತಮ್ ಭವಿಸ್ಸತಿ – ಒಬ್ಬನು ಸಂಗತಿಗಳನ್ನು ಅವು ಹೇಗಿವೆಯೋ ಹಾಗೆಯೇ ನೋಡಬೇಕು." ಅಂದರೆ ಒಂದು ದೃಶ್ಯವನ್ನು ಆತ್ಮಪ್ರತ್ಯಯವನ್ನು ಹಚ್ಚದೆಯೇ ನೋಡಬೇಕು. ಹಾಗೆಯೇ ಬೇರೆ ಇಂದ್ರಿಯಗಳಿಗೆ ಸಂಬಂಧಪಟ್ಟಂತೆಯೇ ಇರಬೇಕು. ದಾರುಚಿರಿಯನು ಪಾರಮಾರ್ಥಿಕವಾಗಿ ಪರಿವರ್ತನೆಗೊಂಡವನು ಅವನ ಅರಹತನಾದನು. ಆನಂತರದಲ್ಲಿ ಉಪಸಂಪದವನ್ನು ನೀಡುವಂತೆ ಪ್ರಾರ್ಥಿಸಿದನು. ಬುದ್ಧರಿಗೆ ಗೊತ್ತಿತ್ತು, ಇವನು ಕೆಲವೇ ಕ್ಷಣಗಳಲ್ಲಿ ಸಾಯುತ್ತಾನೆಂದು. ಆದ್ದರಿಂದ ಸಹಾಯ ಮಾಡಲೆಂದೇ "ನಿನ್ನಲ್ಲಿ ಚೀವರವಿದೆಯೇ?" ಎಂದು ಕೇಳಿದರು. ಅವನು ಹತ್ತಿರದಲ್ಲಿಯೇ ಇದ್ದ ತಿಪ್ಪೆಗುಂಡಿಯ ಬಳಿ ಹೋಗಿ ಬಟ್ಟೆಗಾಗಿ ಹುಡುಕುತ್ತಿದ್ದನು. ಆಗ ಈ ಹಿಂದೆ ಅವನ ವೈರಿಯಾಗಿದ್ದು ಈಗ ರಾಕ್ಷಸ ಜೀವಿ ಯಕ್ಷನಾಗಿದ್ದನು. ಅವನು ಎಳೆಗರುವಿನಲ್ಲಿ ಹೊಕ್ಕು ದಾರುಚಿರಿಯನನ್ನು ತಿವಿದು ಕೊಂದು ಹಾಕಿದ. ಅವನ ವೈರಿಯ ಸುಪ್ತ ಮನಸ್ಸಿನಲ್ಲಿ ಪೂರ್ವ ಕರ್ಮ ಹಾಗೆ ಉಳಿದುಕೊಂಡು ಆ ಕೆಲಸ ಮಾಡಿಸಿತು. ಆನಂತರದಲ್ಲಿ ಬುದ್ಧರು ತಾವೇ ಸ್ವತಃ ಶವವನ್ನು ಉಚಿತ ಗೌರವದಿಂದ ಸಂಸ್ಕಾರ ಮಾಡಿಸಿದರು.

ಅಂತ್ಯಕ್ರಿಯಾ ಸಂಸ್ಕಾರಗಳು ಮುಗಿದಮೇಲೆ ಬುದ್ಧರು ತಮ್ಮೊಂದಿಗಿದ್ದ ಭಿಕ್ಷುಗಳಿಗೂ ಉಪಾಸಕರಿಗೂ ಬಾಹಿಯ ದಾರುಚಿರಿಯನು ಅರಹತನಾಗಿದ್ದನೆಂದು ಘೋಷಿಸಿದರು. ಅಷ್ಟೇ ಅಲ್ಲ, ಬುದ್ಧರ ಏಕವಾಕ್ಯ ಧಮ್ಮೋಪದೇಶದಿಂದ ಅಂತಿಮ ಸತ್ಯವನ್ನು ಕಂಡುಕೊಂಡು ಅರಹತತ್ವವನ್ನು ಪಡೆದ ಅಗ್ರಗಣ್ಯ ಶಿಷ್ಯನಾದನು.

ಕುಮಾರ ಎಂದರೆ ರಾಜಕುಮಾರ ಎಂದು. ಕಸ್ಸಪನು ತುಂಬ ಚಿಕ್ಕವನಿರುವಾಗಲೇ ರಾಜ ಪಸೇನದಿಯು ಅವನನ್ನು ದತ್ತು ತೆಗೆದುಕೊಂಡುದರಿಂದ ಅವನು ಕುಮಾರ ಕಸ್ಸಪನೆಂದೇ ಗುರುತಿಸಲ್ಪಟ್ಟನು. ಅವನ ತಾಯಿಯದು ಒಂದು ಹೃದಯಸ್ಪರ್ಶಿ ಕಥೆ.



ಸಾವತ್ಥಿಯ ಭಂಡಾರದ ಅಧಿಕಾರಿಯ ಮಗಳಾದ ಈಕೆ ಪಾರಮಾರ್ಥದತ್ತ ವಾಲಿದವಳು. ವಾಸ್ತವದಲ್ಲಿ ಅವಳಿಗೆ ಸಂಸಾರದ ಬದುಕು ಸಾಕಾಗಿತ್ತು. ಆದ್ದರಿಂದ ಅವಳು ತಂದೆ–ತಾಯಿಗಳಿಗೆ ತನ್ನನ್ನು ಸಂನ್ಯಾಸಿನಿಯಾಗಿ ಬದುಕಲು ಪ್ರಾರ್ಥಿಸಿದ್ದಳು. ತಂದೆ–ತಾಯಿಗಳು ಸಾರಾಸಗಟಾಗಿ ಅವಳ ಕೋರಿಕೆಯನ್ನು ತಳ್ಳಿಹಾಕಿ ಹೇಗಾದರೂ ಮದುವೆ ಮಾಡಿ ಸಾಗಿಸಬೇಕೆಂದು ಅದರಲ್ಲಿ ಯಶಸ್ವಿಯಾದರು. ಬಲವಂತವಾಗಿಯಾದರೂ ಈಕೆ ಹೆಂಡತಿಯಾಗಿ ತನ್ನ ಗಂಡನಿಗೆ ಶ್ರದ್ಧಾಭಕ್ತಿಗಳಿಮದ ಸೇವೆ ಮಾಡಿದಳು. ಅವಳ ಗಂಡನ ಕಡೆಯವರು ಒಂದು ಪ್ರಸಿದ್ಧವಾದ ಜಾತ್ರೆಗೆ ಹೋಗಬೇಕಾಗಿದೆಯೆಂದು ಹೇಳಿದರು. ಆದ್ದರಿಂದ ಅವಳು ಆ ಸಂದರ್ಭಕ್ಕೆ ತಕ್ಕಂತೆ ಬೆಲೆಬಾಳುವ ಉಡುಪನ್ನು ಧರಿಸಿದಳು. ಹಾಗಾಗಿ ಅವಳು ಹಬ್ಬದ ಕೆಲಸಗಳಲ್ಲಿ ತೊಡಗಲು ನಿರಾಸಕ್ತಿ ಹೊಂದಿದಳು. ಆಮೇಲೆ ಅವಳು ಹೊಲಸು ರಜ್ಜೆಗಳನ್ನು ಹೊತ್ತ ಸುವರ್ಣ ಬಟ್ಟಲಿನಂತಹ ಈ ಮನುಷ್ಯನ ಶರೀರ ಎಲ್ಲ ಬಗೆಯ ಹೊಸಿನಿಂದ ಕೂಡಿದ್ದು, ಮೇಲೆ ಉತ್ತಮ ಹೊದಿಕೆಯಿಂದ ಕೂಡಿದೆ ಎಂಬುದಾಗಿ ಕುಟುಂಬದವರಿಗೆ ಹೇಳಿದಳು. ಈ ಮಾತನ್ನು ಗಂಡ, ತಂದೆ–ತಾಯಿ ಮುಂತಾದವರೆಲ್ಲ ಕೇಳಿ ದಂಗು ಹೊಡೆದು ಏನು ಉತ್ತರಿಸಬೇಕೆಂದು ತೋಚದಾದರು.

ಈ ಸಂದರ್ಭಕ್ಕಾಗಿಯೇ ಅವಳು ತನ್ನ ಅಭಿಪ್ರಾಯವನ್ನು ಮಂಡಿಸಲು ಕಾದಿದ್ದಳು. ಇನ್ನೂ ಗಾರ್ಹಸ್ಥ್ಯ ಧರ್ಮದಲ್ಲಿ ಮುಂದುವರಿಯುವುದರಲ್ಲಿ ಅರ್ಥವಿಲ್ಲ, ತಾನಿನ್ನು ಸಂನ್ಯಾಸಿನಿಯಾಗಲು ಇಚ್ಛಿಸಿರುವುದಾಗಿ ತಿಳಿಸಿ, ತನ್ನನ್ನು ಸಂನ್ಯಾಸಿನಿ ಆಶ್ರಮಕ್ಕೆ ಹೋಗುವಂತೆ ಬಿಡಲು ಆಗ್ರಹಿಸಿದಳು. ಅವಳ ಅಧಿಟ್ಠಾಣವನ್ನು ನೋಡಿ ಅವಳ ಕೋರಿಕೆಯನ್ನು ಒಪ್ಪಿದರು; ಹೀಗೆ ಅವಳು ಸಂನ್ಯಾಸಿನಿಯಾದುದು.

ಕಥೆಯ ಕರುಣಾಜನಕ ಸ್ಥಿತಿ ಆರಂಭವಾಗುವುದು ಇಲ್ಲಿಂದ. ಅವಳು ಸಂನ್ಯಾಸಿನಿಯಾಗುವ ಮುನ್ನ ಅವಳು ಗರ್ಭ ತಾಳಿದ್ದು ಅದು ಇನ್ನು ಪ್ರಾಥಮಿಕಾವಸ್ಥೆಯಲ್ಲಿರುವುದು ಅವಳಿಗೆ ತಿಳಿದಿರಲಿಲ್ಲ. ಕೆಲವು ವಾರಗಳ ನಂತರ ಅವಳು ಗರ್ಭವತಿ ಎಂಬುದು ಸ್ಪಷ್ಟವಾಯಿತು. ಅವಳು ಸೇರಿದ ಸಂನ್ಯಾಸಿನಿ ಆಶ್ರಮವು ದೇವದತ್ತನಿಂದ ನಡೆಸಲ್ಪಡುತ್ತಿದ್ದ ಆಶ್ರಮವಾಗಿತ್ತು. ಯಾವಾಗ ಇವಳು ಗರ್ಭವತಿ ಎಂಬುದು ಗೊತ್ತಾಯಿತೊ ಅವಳು ನಕಾರಾತ್ಮಕ ಪರಿಣಾಮಗಳನ್ನು ಎದುರಿಸಬೇಕಾಯಿತು. ದೇವದತ್ತನು ತನ್ನ ಗೌರವವನ್ನು ಕಾಪಾಡಿಕೊಳ್ಳಲು ಅವಳನ್ನು ಆಶ್ರಮದಿಂದ ಹೊರಹಾಕಿದನು. ನಿಸ್ಸಹಾಯಕಳು, ಅಮಾಯಕಳೂ ಆದ ಅವಳು ಸಂನ್ಯಾಸಿನಿಯಾಗಬೇಕೆಂಬ ಆತುರದಲ್ಲಿ ತಪ್ಪಾಗಿ ಭಿನ್ನ ಸಂನ್ಯಾಸಿನಿ ಗುಂಪನ್ನು (ದೇವದತ್ತನ ಗುಂಪು) ಸೇರಿದ್ದಳು. ಈ ಹಂತದಲ್ಲಿ ವಿಹ್ವಲಗೊಂಡವಳಾಗಿ ಬುದ್ಧರ ಬಳಿ ಹೋದಳು. ಬುದ್ಧರಿಗೆ ಇವಳ ಕಥೆಯೆಲ್ಲಾ ಅರಿವಿಗೆ ಬಂದಿತು.

ಈ ಎಳೆಯ ವಯಸ್ಸಿನ ಸಂನ್ಯಾಸಿನಿ ತುಂಬ ಅಮಾಯಕಳೆಂಬುದನ್ನು ತಿಳಿದು ಸೂಕ್ತ ಸಮಯದಲ್ಲಿ ಇವಳಿಗೆ ನ್ಯಾಯವನ್ನು ದೊರಕಿಸಿ ಕೊಡಲು ತೀರ್ಮಾನಿಸಿದರು.

ಈ ಹಿನ್ನೆಲೆಯಲ್ಲಿ ಬುದ್ಧರು ರಾಜ ಪಸೇನದಿ, ತಮ್ಮ ಮುಖ್ಯ ಶಿಷ್ಯ ಅನಾಥಪಿಂಡಿಕ ಮತ್ತು ಮುಖ್ಯ ಶಿಷ್ಯೆ ವಿಶಾಖಾ ಇವರು ಸದಸ್ಯರುಗಳಾಗಿಯೂ ಹಾಗು ವಿನಯ ನಿಯಮಗಳಲ್ಲಿ ಪಾಂಡಿತ್ಯವನ್ನು ಪಡೆದ ಆಯುಷ್ಮಂತ ಅರಹತ ಉಪಾಲಿಯು ನೇತೃತ್ವವನ್ನು ವಹಿಸಿದ ಸಮಿತಿಯೊಂದನ್ನು ರಚಿಸಿದರು.

ಸಮಿತಿಯು ಆಳವಾದ ಸಂಶೋಧನೆಯನ್ನು ನಡೆಸಿ ಅವಳು ಸಂನ್ಯಾಸಿನಿಯಾಗುವ ಮುನ್ನವೇ ಗರ್ಭ ಧರಿಸಿದ್ದಳೆಂಬುದನ್ನು ನಿರ್ಧರಿಸಿದರು. ಸಮಿತಿಯ ಅಧ್ಯಕ್ಷರಾದ ಆಯುಷ್ಮಂತ ಅರಹತ ಉಪಾಲಿಯು ಸಂನ್ಯಾಸಿನಿಯು ನಿಂದನಾರ್ಹಳಲ್ಲವೆಂದು ಘೋಷಿಸಿದರು. ಆದ್ದರಿಂದ ಆಕೆಯು ಥೇರಿ ಅರಹತಳಾದ ಮಹಾಪಜಾಪತಿಯ ನೇತೃತ್ವದಲ್ಲಿ ನಡೆಯುತ್ತಿರುವ ಸಂನ್ಯಾಸಿನಿ ಆಶ್ರಮವನ್ನು ಸೇರಿದಳು. ಕಾಲಾಂತರದಲ್ಲಿ ಅವಳು ಗಂಡು ಮಗುವಿಗೆ ಜನ್ಮ ನೀಡಿದಳು; ಅವನಿಗೆ ಕಸ್ಸಪನೆಂದು ಹೆಸರಿಡಲಾಯಿತು. ಒಂದುದಿನ ಕೋಸಲದ ಮಹಾರಾಜ ಆಶ್ರಮದ ಹಾದಿಯಲ್ಲಿ ಹೋಗುತ್ತಿರುವಾಗ ಮಗುವಿನ ಅಳು ಕೇಳಿಸಿತು. ರಾಜನಿಗೆ ಈ ಆಶ್ರಮದ ಸಂನ್ಯಾಸಿನಿಗೆ ಮಗುವೊಂದು ಇದೆ ಎಂಬುದು ತಿಳಿದಿತ್ತು. ಕೂಡಲೇ ಅವನು ಆ ಮಗುವನ್ನು ದತ್ತು ತೆಗೆದುಕೊಂಡು ಅದಕ್ಕೆ ಕುಮಾರಕಸ್ಸಪನೆಂದು ಕರೆದರು. ಅವನು ಬೆಳೆದಂತೆ ಗೆಳೆಯರು ಸಿಕ್ಕಿದರು; ಅವನು ಒಳ್ಳೆಯ ವಾಗ್ಮಿಯಾದ. ಅವನಿಗೆ ಯಾರೋ ಏನೋ ಅಂದುದು ಮನಸ್ಸಿಗೆ ನೋವನ್ನುಂಟು ಮಾಡಿತು. ಒಬ್ಬ ಹುಡುಗ ಅವನನ್ನು ಅನಾಥನೆಂದು ಗೇಲಿ ಮಾಡಿದ್ದ.

ಕುಮಾರಕಸ್ಸಪನು ತನ್ನ ವೃತ್ತಾಂತವನ್ನು ಕೇಳಲು ನೇರವಾಗಿ ರಾಜನ ಬಳಿ ಹೋದ. ರಾಜನು ಅವನನ್ನು ಸಾಕಿದ ದಾದಿಯ ಬಳಿ ಕಳುಹಿಸಿದ. ಅವನಿಗೆ ಎಲ್ಲ ವಿಷಯಗಳು ವಿಶದವಾದವು. ಏಳು ವರ್ಷದ ಕುಮಾರಕಸ್ಸಪ ತಾನಿನ್ನು ಭಿಕ್ಖು ಸಂಘವನ್ನು ಸೇರುವುದಾಗಿ ಅದಕ್ಕಾಗಿ ಅನುಮತಿಯನ್ನು ಬೇಡಿದ. ರಾಜನು ಅನುಮತಿಯನ್ನು ನೀಡಿ ಅವನು ದೀಕ್ಷೆ ಹೊಂದುವ ದಿನದಂದು ಒಂದು ದೊಡ್ಡ ಸಮಾರಂಭವನ್ನು ಏರ್ಪಡಿಸಿದ. ಕುಮಾರ ಕಸ್ಸಪನು ಎಳೆಯ ಹುಡುಗನಾದರೂ ಧಮ್ಮದ ಗಂಭೀರ ಅಧ್ಯಯನ ಮತ್ತು ಸಾಧನೆಯನ್ನು ಮಾಡಿದ. ಧಮ್ಮದ ಮೇಲೆ ಪಾಂಡಿತ್ಯ ಹೊಂದಲು ಸಾಕಷ್ಟು ಪರಿಶ್ರಮವನ್ನು ಹಾಕಿದ. ಅವನು ಆಗಲೇ ಸೋದರ ಸಾಮಣೇರರ ನಡುವೆ ಧಮ್ಮೋಪದೇಶ ನೀಡುವಲ್ಲಿ ಸಾಮರ್ಥ್ಯ ಉಳ್ಳವನೆಂದು ಪ್ರಖ್ಯಾತನಾಗಿದ್ದ. ಅರಹತ ಸೋಪಕ ಎನ್ನುವವನು ಕುಮಾರಕಸ್ಸಪನ ಬಲಗೈ ಆಗಿದ್ದ. ಅವನು ಕೂಡ ಮುಂಚೆ ಒಬ್ಬ ಬಹಿಷ್ಕೃತ ಮಗುವಾಗಿದ್ದ. ಕುಮಾರಪನ್ಹ (ಪ್ರಶ್ನೆ) ದಲ್ಲಿ ಇವರಿಬ್ಬರ ನಡುವೆ ಆದ ಪ್ರಶ್ನೋತ್ತರಗಳು ಹೀಗಿವೆ:

1. ಏಕ ನಾಮ ಕಿಮ್ ? ಸಬ್ಬೇಸತ್ತಾ ಆಹಾರಟ್ಠಿತಿಕಾ.
   ಯಾವುದು ಒಂದು ಆಗಿದೆ ? ಎಲ್ಲ ಜೀವಿಗಳೂ ಆಹಾರದಿಂದಲೇ ಬದುಕಿರುವುದು.
2. ದ್ವೇ ನಾಮ ಕಿಮ್ ? ನಾಮಂಚ ರೂಪಂಚ.
   ಯಾವುದು ಎರಡು ಆಗಿವೆ ? ಮನಸ್ಸು ಮತ್ತು ಶರೀರ.



3. ತೀನಿ ನಾಮ್ ಕಿಮ್ ? ತಿಸ್ಸೋ ವೇದನಾ.
   ಯಾವುದು ಮೂರು ? ಮೂರು ವೇದನೆಗಳು.
4. ಚತ್ತಾರಿ ನಾಮ ಕಿಮ್ ? ಚತ್ತಾರಿ ಅರಿಯಸಚ್ಚಾನಿ.
   ನಾಲ್ಕು ಯಾವುವು ? ಚತುರಾರ್ಯ ಸತ್ಯಗಳು.
5. ಪಂಚ ನಾಮ ಕಿಮ್ ? ಪಂಚುಪಾದಾನಕ್ಖಂದಾ.
   ಐದು ಯಾವುವು ? ಐದು ಉಪದಾನಕ್ಖಂದಗಳು
6. ಛ ನಾಮ ಕಿಮ್ ? ಛ ಅಜ್ಝತ್ತಿಕಾನಿ ಆಯತನಾನಿ.
   ಆರು ಯಾವುವು ? ಆರು ಆಂತರಿಕ ಆಯತನಗಳು.
7. ಸತ್ತ ನಾಮ ಕಿಮ್ ? ಸತ್ತ ಬೋಜ್ಝಂಗಾ.
   ಏಳು ಯಾವುವು ? ಏಳು ಬೋಜ್ಝಂಗಗಳು.
8. ಅಟ್ಠ ನಾಮ ಕಿಮ್ ? ಅರಿಯೋ ಅಟ್ಠಂಗಿಕೊ ಮಗ್ಗೊ.
   ಎಂಟು ಯಾವುವು ? ಆರ್ಯ ಅಷ್ಟಾಂಗ ಮಾಗ.
9. ನವ ನಾಮ ಕಿಮ್ ? ನವ ಸತ್ತಾವಾಸ.
   ಒಂಭತ್ತು ಯಾವುವು ? ಇಂದ್ರಿಯ ಜೀವಿಗಳ ಏಳು ನಿವಾಸಗಳು.
10. ದಸ ನಾಮ ಕಿಮ್ ? ದಸಹಂಗೇಹಿ ಸಮನ್ನಾಗತೋ ಅರಹಾತಿ ವುಚ್ಚತೀ'ತಿ.
    ಹತ್ತು ಯಾವುವು ? ಯಾರು ಹತ್ತು ಲೋಕೋತ್ತರ ಪಾರಮಾರ್ಥಿಕ ಗುಣಗಳನ್ನು ಹೊಂದಿದ್ದಾರೋ ಅಂತಹವರನ್ನು ಅರಹತರೆಂದು ಕರೆಯುತ್ತಾರೆ.

ಕುಮಾರ ಕಸ್ಸಪನು ಅತ್ಯಂತ ಪ್ರೌಢಿಮೆಯಿಂದ ವ್ಯಾಖ್ಯಾನಿಸಲು ಅಲ್ಲಿಂದ ವಿದ್ವಾಂಸ ಧಮ್ಮ ಬೋಧಕರು ಅವನ ಸಾಮರ್ಥ್ಯವನ್ನು ಕೊಂಡಾಡಿದರು. ಕಾಲಾಂತರದಲ್ಲಿ ಅವನು ಪ್ರಸಿದ್ಧ ಧಮ್ಮಬೋಧಕನಾಗಿ ಧಮ್ಮದಲ್ಲೂ, ಚರ್ಚೆಯಲ್ಲೂ ಅವನನ್ನು ಮೀರಿಸದಾದರು. ಒಮ್ಮೆ ಅವನು ಅಂಧವನಕ್ಕೆ ಹೋಗುವ ಪ್ರಸಂಗ ಬಂದಿತು. ಅದು ದಟ್ಟವಾದ ತುಂಬ ಒಳಗೆ ಹೋಗಬೇಕಾದ ದೂರವೇ ಇರುವ ಕಾಡು. ಧ್ಯಾನ ಮಾಡುವಾಗ ಅವನಿಗೆ ಒಂದು ಅಸಾಧಾರಣವಾದ ಅನುಭವವಾಯಿತು. ಕೂಡಲೇ ಅವನಿಗೆ ಒಂದು ದಿವ್ಯಜೀವಿ ತನ್ನ ಕಣ್ಣಮುಂದೆ ಇರುವುದು ಗೊತ್ತಾಯಿತು. ಕಣ್ತೆರೆದು ನೋಡಲು ಪ್ರಕಾಶಮಾನವಾದ ದೇವನೊಬ್ಬನು ದಿವ್ಯಕಿರಣಗಳನ್ನು ಚೆಲ್ಲುತ್ತಿದ್ದನು. ಅವನು ಬೇರೆ ಯಾರೂ ಆಗಿರದೆ ಈ ಹಿಂದೆ ತನ್ನ ಭಿಕ್ಖು ಸೋದರನಾಗಿದ್ದು ತನ್ನೊಡನೆ ಅನಾಗಾಮಿ ಹಂತದ ಶಿಖರವನ್ನು ಹತ್ತಿ ಈಗ ಸುದ್ದಾವಾಸದ ಅರಹತ ಬ್ರಹ್ಮದೇವತೆಯಾಗಿದ್ದನು. ಈ ದೇವನು ಅವನ ಮುಂದೆ ಪ್ರತ್ಯಕ್ಷನಾಗಿ 'ವಮ್ಮಿಕ' ಎಂಬ ಹೆಸರಿನ ರೂಪಕವೊಂದನ್ನು ನೀಡಿದನು.

ಈ ರಹಸ್ಯವಾದ ರೂಪಕಕ್ಕೆ ಸಂಬಂಧಪಟ್ಟ ಕೊನೇಪಕ್ಷ ಹದಿನೈದು ಸಂಗತಿಗಳಿವೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಈ ರೂಪಕ ಅಥವಾ ಕಥೆಯಲ್ಲಿ ಸುಮೇಧ ಎನ್ನುವ ಚೈತನ್ಯ ಪುರುಷನು ಸಲಿಕೆ ಹಿಡಿದು ರಾತ್ರಿಯೆಲ್ಲಾ ಹೊಗೆಯನ್ನು ಉಗುಳುವ ಮತ್ತು

ದಿನದ ಹೊತ್ತಲ್ಲಿ ಬೆಳಕನ್ನು ಚೆಲ್ಲುವ ವಮ್ಮಿಕ (ಹುತ್ತ)ದ ಬಳಿ ಹೋಗುತ್ತಾನೆ. ಒಬ್ಬ ಬ್ರಾಹ್ಮಣ ಅವನಿಗೆ ವಮ್ಮಿಕವನ್ನು ಸಲಿಕೆಯಿಂದ ಕಿತ್ತುವಂತೆ ಹೇಳುತ್ತಾನೆ. ಇಡೀ ಕಾರ್ಯವು ಒಂಭತ್ತು ಹಂತಗಳುಳ್ಳದ್ದಾಗಿದೆ. ಹೀಗೆ ಅಗೆಯುತ್ತಿರಲು ಮೊದಲು ಒಂದು ಶಸ್ತ್ರವು, ಆನಂತರ ಬಾಗಿಲು, ಆನಂತರದಲ್ಲಿ ನೀಲಿಯಾಗಿ ಊದಿಕೊಂಡ ಕಪ್ಪೆ, ಆನಂತರ ಎರಡು ಮಾರ್ಗಗಳನ್ನು ತೋರಿಸುವ ಒಂದು ಫಲಕ, ಆನಂತರ ಒಂದು ಜರಡಿ, ಆನಂತರ ಆಮೆ, ಅದರ ಹಿಂದೆಯೇ ಕಟುಕನ ಕತ್ತಿ ಇರುವ ದಿಮ್ಮಿ, ಆನಂತರ ಹಸಿ ಮಾಂಸ ಇರುವುದನ್ನು ಕಾಣುತ್ತಾನೆ, ಕೊನೆಯಲ್ಲಿ ನಾಗರ ಹಾವು ಕಾಣುತ್ತಾನೆ. ಆ ನಾಗರಾಜನನ್ನು ಹಾಗೆಯೇ ಬಿಡಬೇಕು.

ಅರಹತ ಬ್ರಹ್ಮನು ಆಯುಷ್ಮಂತ ಕಸ್ಸಪನಿಗೆ ಸಮ್ಮಾಸಂಬುದ್ಧರನ್ನು ಕಾಣುವಂತೆ ಹೇಳುತ್ತಾನೆ. ಆಗ ಬುದ್ಧರ ವಮ್ಮಿಕ ಸುತ್ತದ ಮೇಲೆ ಅದ್ಭುತವಾದ ಧಮ್ಮದೇಸನವನ್ನು ನೀಡುತ್ತಾರೆ. ಈ ಸುತ್ತವು ಮೇಲಿನ ಎಲ್ಲಾ ಸಂಗತಿಗಳ ಮೇಲೆ ವಿಶ್ಲೇಷಣೆಯನ್ನು ನೀಡಿದೆ. ಕುಮಾರ ಕಸ್ಸಪನು ಈ ಪ್ರಸಿದ್ಧ ಸುತ್ತವನ್ನು ಕೇಳಿದ ಮೇಲೆ ಅರಹತನಾದ. ಆನಂತರದಲ್ಲಿ ಕುಮಾರ ಕಸ್ಸಪನು ಉತ್ತಮ ವಾಗ್ಮಿಯೂ ಧಮ್ಮ ಪ್ರಚಾರದಲ್ಲಿ ನಿಸ್ಸೀಮನೂ ಆದನು.

– ೦೦೦ – ೦೦೦ – ೦೦೦ –



## ಅಧ್ಯಾಯ–6

# ಬೌದ್ಧ ದೃಷ್ಟಿಯಲ್ಲಿ ಲೋಕ

### ಬೌದ್ಧ ಧರ್ಮದಲ್ಲಿ ಲೋಕ ಮತ್ತು ಲೋಕೋತ್ತರ

ಹುಟ್ಟಿ ಸಾಯುವ ಪ್ರಾಪಂಚಿಕ ವ್ಯವಸ್ಥೆಯ ಮೂರು ಲೋಕಗಳಿವೆ. ಜೀವಿಗಳು ಹುಟ್ಟುತ್ತವೆ, ಬದುಕಿನ ಸುಖದ ದುಃಖದ ಅನುಭವಗಳನ್ನು ಹೊಂದಿ ಸತ್ತು ಮತ್ತೆ ಈ ಲೋಕಗಳಲ್ಲಿ ಪುನರ್ಜನ್ಮ ತಾಳುತ್ತವೆ. ಹುಟ್ಟಿ ಸತ್ತು ಮತ್ತೆ ಹುಟ್ಟುವ ಈ ಪ್ರಕ್ರಿಯೆಯನ್ನೇ ಸಂಸಾರ ಎಂದು ಕರೆಯುವುದು.

ಈ ಸಂಸಾರ ಚಕ್ರಕ್ಕೆ ಸಿಲುಕಿಕೊಂಡಿರುವ ಎಲ್ಲಬಗೆಯ ಜೀವಿಗಳು 31 ಭಿನ್ನಸ್ತರದ ಲೋಕಗಳಲ್ಲಿ ಜೀವಿಸುತ್ತಾರೆ. ಪಾತಾಳದಲ್ಲಿ, ನರಕದಲ್ಲಿರುವ ಜೀವಿಗಳು ಅಪಾರ ದುಃಖವನ್ನನುಭವಿಸುತ್ತಿದ್ದರೆ ಉನ್ನತೋನ್ನತದಲ್ಲಿ ಅಗಣ್ಯ ಆಯಸ್ಸನ್ನು ಹೊಂದಿರುವ ಬ್ರಹ್ಮದೇವತೆಗಳಿದ್ದಾರೆ. ಇವೆರಡರ ಮಧ್ಯೆ ಅಪಾರ ಆನಂದವನ್ನು ಅನುಭವಿಸುವ ಹಲವು ಬಗೆಯ ದೇವತೆಗಳು, ನಂತರದಲ್ಲಿ ಮಾನವರು, ಪ್ರಾಣಿಗಳು, ರೂಪಾರೂಪ ಶಕ್ತಿಗಳು ಇತ್ಯಾದಿ ಇವೆ.

### 31 ಬಗೆಯ ಅಸ್ತಿತ್ವಗಳು

**ಲೋಕೋತ್ತರ ಅರೂಪಾವಚಾರ ಲೋಕಗಳು**

(ರೂಪದ ಅಸ್ತಿತ್ವವೇ ಇರದ ಜೀವಿಗಳ ಲೋಕಗಳು)

31. ನೇವಸಞ್ಞಾನಾಸಞ್ಞಾಯತನ (ಗ್ರಹಿಕೆ ಇಲ್ಲದ ಅ-ಗ್ರಹಿಕೆಯೂ ಅಲ್ಲದ ಲೋಕ).
30. ಅಕಿಞ್ಚಞ್ಞಾಯತನ (ಏನೂ ಇಲ್ಲದಿರುವ (ಶೂನ್ಯ) ಲೋಕ.
29. ವಿಞ್ಞಾಣಞ್ಚಾಯತನ (ಪಾರವೇ ಇಲ್ಲದ ಚಿತ್ತ / ವಿಞ್ಞಾಣ ಲೋಕ)
28. ಆಕಾಸಾನಞ್ಚಾಯತನ (ವಿಶಾಲ ಆಕಾಶವೇ ನೆಲೆಯಾಗಿರುವ ಲೋಕ)

**ರೂಪಾವಚರ ಲೋಕಗಳು**

(ರೂಪದ ಅಸ್ತಿತ್ವ ಇರುವ ಲೋಕಗಳು)

27. ಅಕನಿಟ್ಠಾ (ಅತ್ಯಂತ ಶ್ರೇಷ್ಠ ಪರಿಶುದ್ಧ ನಿವಾಸದ ಲೋಕ)
26. ಸುದಸ್ಸಿ (ಸ್ಪಷ್ಟ ದೃಷ್ಟಿ ಇರುವವರ ಲೋಕ)
25. ಸುದಸ್ಸ (ಸುಂದರವಾಗಿರುವವರ ಲೋಕ)
24. ಆತಪ್ಪ (ಪ್ರಸನ್ನ ನಿವಾಸಿಗಳ ಲೋಕ)

23. ಅವಿಹ (ಬಹುಕಾಲ ನಿವಸಿಸುವ ಲೋಕ)
22. ಅಸಞ್ಞಾಸತ್ತ (ಅ–ಗ್ರಹಿಕೆಯ ಲೋಕ)
21. ವೇಹಪ್ಫಲ (ಮಹಾಪ್ರತಿಫಲ ಇರುವ ಲೋಕ)
20. ಸುಭಕಿಣ್ಣ (ಸ್ಥಿರ ಪ್ರಭೆ ಇರುವ ಲೋಕ)
19. ಅಪ್ಪಮಾನಸುಭ (ಅಪ್ರಮಾಣ ತೇಜೋಮಂಡಲ ಇರುವ ಲೋಕ)
18. ಪರಿತ್ತಸುಭ (ಪರಿಮಿತ ತೇಜೋಮಂಡಲ ಇರುವ ಲೋಕ)
17. ಆಭಸ್ಸರಾ (ದೇದೀಪ್ಯಮಾನ ಪ್ರಭೆ ಇರುವ ಲೋಕ)
16. ಅಪ್ಪಮಾನಾಭಾ (ಅಪ್ರಮಾಣ ಪ್ರಭೆಯ ಲೋಕ)
15. ಪರಿತ್ತಾಭಾ (ಪರಿಮಿತ ಪ್ರಭೆ ಇರುವ ಲೋಕ)
14. ಮಹಾಬ್ರಹ್ಮ (ಮಹಾಬ್ರಹ್ಮನ ಲೋಕ)
13. ಬ್ರಹ್ಮ ಪುರೋಹಿತ (ಬ್ರಹ್ಮನ ಪುರೋಹಿತರಿರುವ ಲೋಕ)
12. ಬ್ರಹ್ಮಪಾರಿಸಜ್ಜ (ಬ್ರಹ್ಮನ ಪರಿವಾರದವರ ಲೋಕ)

**ಕಾಮಾವಚರ ಲೋಕಗಳು**

11. ಪರನಿಮ್ಮಿತ ವಸವತ್ತಿ (ಪರನಿರ್ಮಾಣದ ಮೇಲೆ ಅಂಕೆ ಇರುವ ದೇವತೆಗಳ ಲೋಕ)
10. ನಿಮ್ಮಾನರತಿ (ತಮ್ಮ ನಿರ್ಮಾಣದಲ್ಲೇ ಆನಂದ ಹೊಂದುತ್ತಿರುವ ದೇವತೆಗಳ ಲೋಕ)
9. ತುಸಿತ (ಆನಂದ ಲೋಕ)
8. ಯಾಮ (ಯಮಲೋಕ)
7. ತಾವತಿಂಸ (33 ದೇವತೆಗಳ ಲೋಕ)
6. ಚಾತುಮ್ಮಹಾರಾಜಿಕ (ನಾಲ್ಕು ದಿವ್ಯ ಮಹಾರಾಜರ ಲೋಕ)
5. ಮನುಸ್ಸ (ಮನುಷ್ಯ ಲೋಕ)
4. ಅಸುರ (ಅಸುರ ಲೋಕ)
3. ಪೇತ (ಪ್ರೇತ ಲೋಕ)
2. ತಿರಚ್ಛನಾ (ಪ್ರಾಣಿಗಳ ಪ್ರಪಂಚ)
1. ನಿರಯ (ನರಕ ಲೋಕ / ದುಃಖದ ಸ್ಥಿತಿ)

ಮೂರು ಲೋಕಗಳೆಂದರೆ: ಕಾಮಲೋಕ – ಇಂದ್ರಿಯ ಮೂಲ ಆಸೆಗಳಿರುವ ಲೋಕಗಳು; ರೂಪಲೋಕ – ರೂಪವಿರುವ ಬ್ರಹ್ಮ ದೇವತೆಗಳ ಲೋಕ; ಮತ್ತು ಅರೂಪಲೋಕ – ರೂಪವಿಲ್ಲದಿದರುವ ಬ್ರಹ್ಮದೇವತೆಗಳ ಲೋಕ. ಕಾಮಲೋಕದಲ್ಲಿ 11 ಬಗೆಯ ಅಸ್ತಿತ್ವ ನೆಲೆಗಳಿದ್ದು ಆರು ಇಂದ್ರಿಯಗಳ ಸುಖದ ಇಚ್ಛೆಯೇ ಪ್ರಬಲವಾಗಿರುತ್ತದೆ. ಈ ನೆಲೆಗಳಲ್ಲಿ ಸಂಕಟದ ನೋವಿನ ನಾಲ್ಕು ದುರ್ಗತಿಗಳು ಇವೆ; ನಿರಯ, ತಿರಚ್ಛಾನ, ಪ್ರೇತ, ಅಸುರ. ಸುಗತಿಗಳೂ ಇವೆ: ಮನುಷ್ಯ ಮತ್ತು ಆರು ದಿವ್ಯ ಲೋಕಗಳು.

ರೂಪಲೋಕಗಳು ರೂಪವಿರುವ ಹದಿನಾರು ಬ್ರಹ್ಮಲೋಕಗಳನ್ನು ಹೊಂದಿವೆ. ಈ ಲೋಕಗಳು ನಾಲ್ಕು ಝಾನಗಳ ಸ್ಥಿತಿಗಳಿಗೆ ಸಂಬಂಧಪಟ್ಟವು ಆಗಿವೆ. ಅರೂಪ ಲೋಕಗಳು ರೂಪವಿರದ ಬ್ರಹ್ಮದೇವತೆಗಳಿಗೆ ಸೇರಿದುವಾಗಿವೆ. ಇಲ್ಲಿರುವ ಜೀವಿಗಳು



ಕೇವಲ ಚೈತನ್ಯ ಅಥವಾ ಪವಿತ್ರ ಮಾನಸಿಕ ಅಸ್ತಿತ್ವವನ್ನು ಹೊಂದಿವೆ. ಈ 31 ಲೋಕಗಳು 11 + 16 + 4 (ಮೂರು ಲೋಕೀಯ ಅಸ್ತಿತ್ವಗಳಿಂದ ಕೂಡಿ) ಒಟ್ಟು ಬ್ರಹ್ಮಾಂಡವಾಗಿದೆ. ನಾಲ್ಕು ಅರಿಯ ಪುಗ್ಗಲರು (ಆರ್ಯ ಪುರುಷರು) ಎಂಟು ಹಂತಗಳ ಮಗ್ಗ ಮತ್ತು ಫಲಗಳ ವಿಪಸ್ಸನದಿಂದ ಸಾಧಿಸುತ್ತಾರೆ. ಈ ಎಂಟು ಹಂತಗಳ ಗುರಿಯೇ ಎಲ್ಲ ಲೌಕಿಕ ಅಸ್ತಿತ್ವಗಳನ್ನು ಮೀರಿ ನಿಬ್ಬಾಣವನ್ನು ಸಾಧಿಸಿರುವುದು. ಆದ್ದರಿಂದಲೇ ಇವನ್ನು ಜ್ಞಾನೋದಯದ ಹಂತಗಳೆಂದು ಕರೆಯುವುದು.

ಇವು ಮೂವತ್ತೊಂದು ಬಗೆಯ ಅಸ್ತಿತ್ವ ನೆಲೆಗಳು. ನಾಲ್ಕು ದುರ್ಗತಿಗಳನ್ನು ವಂಚಿತ ಸ್ಥಿತಿಗಳೆಂದು ಕರೆಯುತ್ತಾರೆ. ಕಾರಣ ಇಲ್ಲಿ ಹುಟ್ಟಿರುವ ಜೀವಿಗಳು ತಮ್ಮ ಹಿಂದಿನ ಜನ್ಮಗಳ ಕಮ್ಮಗಳಿಂದಾಗಿ ಅಪಾರ ದುಃಖವನ್ನು ಅನುಭವಿಸಬೇಕು. ಇನ್ನುಳಿದ ಇಪ್ಪತ್ತೇಳು ಅಸ್ತಿತ್ವದ ನೆಲೆಗಳು ಅಥವಾ ಲೋಕಗಳು ಮನುಷ್ಯರು ಮತ್ತು ದೇವತೆಗಳಿಗೆ ಸಂಬಂಧಪಟ್ಟಿದ್ದು ಅವು ಸುಗತಿ (ಅಥವಾ ಸದ್ಗತಿ) ಅಂದರೆ ಸುಖ ಸಂತೋಷ ರಕ್ಷಣೆಯನ್ನು ತಮ್ಮ ಪೂರ್ವ ಪುಣ್ಯಕಮ್ಮಗಳಿಂದಾಗಿ ಅನುಭವಿಸುವವರು ಎಂದು.

**ಅರಿಯರು (ಆರ್ಯರು)**

ನಾಲ್ಕು ಬಗೆಯ ಆರ್ಯ (ಶ್ರೇಷ್ಠ) ಪುರುಷರಿದ್ದಾರೆ. ಅವರು ಯಾರೆಂದರೆ: ಸೋತಾಪನ್ನ, ಸಕದಾಗಾಮಿ, ಅನಾಗಾಮಿ ಮತ್ತು ಅರಹತ. ಯಾರು ಸಂಯೋಜನೆಗಳನ್ನು ನಾಶಮಾಡಿಕೊಂಡಿರುತ್ತಾರೋ ಅವರೇ ಆರ್ಯರಾಗುವುದು, ಬೇರೆ ಅಲ್ಲ. ಸೋತಾಪನ್ನನಾದವನು ಮೊದಲ ಮೂರು ಸಂಯೋಜನೆಗಳನ್ನು ನಾಶಮಾಡಿರುತ್ತಾನೆ. ಸಕದಾಗಾಮಿಯು ಮುಂದಿನ ಎರಡು ಸಂಯೋಜನೆಗಳನ್ನು ತಟಸ್ಥಗೊಳಿಸಿರುತ್ತಾನೆ. ಅನಾಗಾಮಿಯು ಈ ಎರಡು ಸಂಯೋಜನೆಗಳನ್ನು ನಾಶಗೊಳಿಸಿರುತ್ತಾನೆ. ಅರಹತನಾದವನು ಎಲ್ಲ ಹತ್ತು ಸಂಯೋಜನೆಗಳನ್ನು ನಾಶಮಾಡಿರುತ್ತಾನೆ. ಮೂರು ಸಂಯೋಜನೆಗಳನ್ನು ನಾಶ ಮಾಡಿದ ಸೋತಾಪನ್ನನು ವಿಮುತ್ತಿ ಸೋತವನ್ನು (ವಿಮುಕ್ತಿಯ ಹೊಳೆಯನ್ನು) ಪ್ರವೇಶಿಸಿ ಸಾಂಸಾರಿಕ ತಾಪತ್ರಯಗಳಿಂದ (ಲೋಕೀಯ ಸೋತ) ಮೇಲಿರುತ್ತಾನೆ. ಅವನು ಹೆಚ್ಚೆಂದರೆ ಏಳುಬಾರಿ ಮಾನವ ದೇವಲೋಕಗಳಲ್ಲಿ ಸುಗತಿಯಲ್ಲಿ ಹುಟ್ಟುತ್ತಾನೆ. ಅವನು ದುರ್ಗತಿಯಿಂದ ಸಂಪೂರ್ಣವಾಗಿ ಮುಕ್ತನಾಗಿರುತ್ತಾನೆ. ಸಕದಾಗಾಮಿಯು ಒಮ್ಮೆ ಮಾತ್ರ ಕಾಮಸುಗತಿಯಲ್ಲಿ ಹುಟ್ಟುತ್ತಾನೆ. ಅನಾಗಾಮಿಯು ಕಾಮಲೋಕದಿಂದ ಪೂರ್ಣ ಮುಕ್ತನಾಗಿರುತ್ತಾನೆ. ಅರಹತರು ಮೇಲೆ ಹೇಳಿದ ಮೂರೂ ಲೋಕಗಳ ಅಸ್ತಿತ್ವದಿಂದ ಮುಕ್ತರಾಗಿರುತ್ತಾರೆ. ಅವರು ಬುದ್ಧ ಧಮ್ಮದ ಮೂಲಕ ಅರಹತರಾಗಿ ಬೋಧಿಜ್ಞಾನ ಪಡೆದವರಾಗಿರುತ್ತಾರೆ.

ಇವು ಆ ಎಂಟು ಲೋಕೋತ್ತರ ಮಗ್ಗ ಮತ್ತು ಫಲ ಹಂತಗಳು.

**ಪಾರಮೀ = ಪರಿಪೂರ್ಣತೆ**

ಪಾರಮಿ ಎಂದರೆ ಉನ್ನತೋನ್ನತ ಗುಣ ಅಥವಾ ಪರಿಪೂರ್ಣತೆ. ಯಾವಾಗ ಒಬ್ಬನು ಪರಿಪೂರ್ಣವಾದ ಈ ಗುಣಗಳನ್ನು ಸಾಧಿಸುವನೋ ಅವನು ಬೋಧಿಜ್ಞಾನ ಪಡೆಯುತ್ತಾನೆ. ಮೂರುಬಗೆಯ ಬೋಧಿಜ್ಞಾನಗಳಿವೆ:

| ಲೋಕ | | ಅಸ್ತಿತ್ವದ ಸ್ಥಿತಿ | ಜೀವಿತಾವಧಿ |
|---|---|---|---|
| ಅರೂಪ ಲೋಕ 4 | | 31. ನೇವಸಞ್ಞಾನಾಸಞ್ಞಾಯತನ (ಗ್ರಹಿಕೆ ಇಲ್ಲದ, ಅ-ಗ್ರಹಿಕೆಯೂ ಅಲ್ಲದ ಲೋಕ) | 84,000 ಮಹಾ ಕಲ್ಪಗಳು |
| | | 30. ಅಕಿಂಞ್ಚಞ್ಞಾಯತನ (ಏನೂ ಇಲ್ಲದಿರುವ ಶೂನ್ಯ ಲೋಕ) | 60,000 ಮಹಾಕಲ್ಪಗಳು |
| | | 29. ವಿಞ್ಞಾಣಞ್ಚಾಯತನ (ಪಾರವೇ ಇಲ್ಲದ ಚಿತ್ತ (ವಿಞ್ಞಾಣ) ಲೋಕ) | 40,000 ಮಹಾಕಲ್ಪಗಳು |
| | | 28. ಆಕಾಸಾನಞ್ಚಾಯತನ (ವಿಶಾಲ ಆಕಾಶವೇ ನೆಲೆಯಾಗಿರುವ ಲೋಕ) | 20,000 ಮಹಾಕಲ್ಪಗಳು |
| ರೂಪ ಲೋಕ 16 | ಚತುರ್ಥ ಧ್ಯಾನ ಭೂಮಿ — ಸುದ್ಧಾವಾಸ ಲೋಕಗಳು | 27. ಅಕನಿಟ್ಠಾ ಶ್ರೇಷ್ಠ ಪರಿಶುದ್ಧ ನಿವಾಸದ ಲೋಕ) | 16,000 ಮ.ಕ. |
| | | 26. ಸುದಸ್ಸಿ (ಸ್ಪಷ್ಟದೃಷ್ಟಿ ಇರುವವರ ಲೋಕ) | 8,000 ಮ.ಕ. |
| | | 25. ಸುದಸ್ಸ (ಸುಂದರವಾಗಿರುವವರ ಲೋಕ) | 4,000 ಮ.ಕ. |
| | | 24. ಅತಪ್ಪ (ಪ್ರಸನ್ನ ನಿವಾಸಿಗಳ ಲೋಕ) | 2,000 ಮ.ಕ. |
| | | 23. ಅವಿಹ (ಬಹುಕಾಲ ನಿವಸಿಸುವ ಲೋಕ) | 1,000 ಮ.ಕ. |
| | | 22. ಅಸಞ್ಞಾಸತ್ತ (ಅಗ್ರಹಿಕೆಯ ಲೋಕ) | 500 ಮ.ಕ. |
| | | 21. ವೇಹಫಲ (ಮಹಾಪ್ರತಿಫಲ ಇರುವ ಲೋಕ) | 500 ಮ.ಕ. |
| | ತೃತೀಯ ಧ್ಯಾನ ಭೂಮಿ | 20. ಸುಭಕಿಣ್ಣ (ಸ್ಥಿರ ಪ್ರಭೆಯ ಲೋಕ) | 64 ಮ.ಕ. |
| | | 19. ಅಪ್ಪಮಾನಸುಭ (ಅಪ್ರಮಾಣ ತೇಜೋಮಂಡಲ ಲೋಕ) | 32 ಮ.ಕ. |
| | | 18. ಪರಿತ್ತಸುಭ (ಪರಿಮಿತಿ ತೇಜೋಮಂಡಲ ಲೋಕ) | 16 ಮ.ಕ. |
| | ದ್ವಿತೀಯ ಧ್ಯಾನ ಭೂಮಿ | 17. ಆಭಸ್ಸರಾ (ದೇದೀಪ್ಯಮಾನ ಪ್ರಭೆಯ ಲೋಕ) | 8 ಮ.ಕ. |
| | | 16. ಅಪ್ಪಮಾನಾಭಾ (ಅಪ್ರಮಾಣ ಪ್ರಭೆಯ ಲೋಕ) | 4 ಮ.ಕ. |
| | | 15. ಪರಿತ್ತಭ (ಪರಿಮಿತಿ ಪ್ರಭೆಯ ಲೋಕ) | 2 ಮ.ಕ. |
| | ಪ್ರಥಮ ಧ್ಯಾನ ಭೂಮಿ | 14. ಮಹಾಬ್ರಹ್ಮ (ಮಹಾಬ್ರಹ್ಮನ ಲೋಕ) | 1 ಅಂಸಖೇಯ ಕಲ್ಪ |
| | | 13. ಬ್ರಹ್ಮ ಪುರೋಹಿತ (ಬ್ರಹ್ಮ ಪುರೋಹಿತ ಲೋಕ) | 1/2 " " |
| | | 12. ಬ್ರಹ್ಮಪಾರಿಸಜ್ಜ (ಬ್ರಹ್ಮ ಪರಿವಾರ) | 1/3 " " |
| ಕಾಮಲೋಕ 11 | 7 ಸುಗತಿಯ ಸ್ಥಿತಿಗಳು | 11. ಪರನಿಮ್ಮಿತ ವಸವತ್ತಿ | 16,000 ದಿವ್ಯ ವರ್ಷಗಳು |
| | | 10. ನಿಮ್ಮಾನರತಿ | 8,000 |
| | | 9. ತುಸಿತ | 4,000 |
| | | 8. ಯಾಮ | 2,000 |
| | | 7. ತಾವತಿಂಸ | 1,000 |
| | | 6. ಚಾತುಮ್ಮಹಾರಾಜಿಕ | 500 |
| | | 5. ಮನುಷ್ಯ | ಅನಿರ್ಧಿಷ್ಟ ವರ್ಷಗಳು |
| | 4 ಸುಗತಿಯ ಸ್ಥಿತಿಗಳು | 4. ಅಸುರಯೋನಿ | ಅನಿರ್ಧಿಷ್ಟ ವರ್ಷಗಳು |
| | | 3. ಪೇತಯೋನಿ | |
| | | 2. ತಿರಚ್ಛನಾಯೋನಿ (ಪ್ರಾಣಿ) | |
| | | 1. ನಿರಯ (ನರಕ) | |



1. ಅರಹಂತ ಬೋಧಿ : ಬುದ್ಧನ ಪರಿಪೂರ್ಣ ಶಿಷ್ಯರು ಪಡೆಯುವ ಬೋಧಿ ಜ್ಞಾನ.
2. ಪಚ್ಚೇಕ ಬೋಧಿ : ಪ್ರತ್ಯೇಕ ಬುದ್ಧರು ಪಡೆಯುವ ಬೋಧಿ ಜ್ಞಾನ.
3. ಸಮ್ಮಾಸಂಬೋಧಿ : ಸಮ್ಮಾಸಂಬುದ್ಧರು ಪಡೆಯುವ ಬೋಧಿ ಜ್ಞಾನ.

ಹತ್ತು ಪಾರಮೀಗಳು ಇವು :

1. ದಾನ ಪಾರಮೀ – ದಾನ ಕೊಡುವ ಪರಿಪೂರ್ಣ ಗುಣ
2. ಸೀಲ ಪಾರಮೀ – ಶೀಲ ಪಾಲಿಸುವ ಪರಿಪೂರ್ಣ ಗುಣ
3. ನೇಕ್ಖಮ್ಮ ಪಾರಮೀ – ತ್ಯಾಗದ ಪರಿಪೂರ್ಣ ಗುಣ
4. ಪಞ್ಞಾ ಪಾರಮೀ – ಪ್ರಜ್ಞೆಯ ಪರಿಪೂರ್ಣ ಗುಣ
5. ವಿರಿಯ ಪಾರಮೀ – ಪ್ರಯತ್ನಶೀಲತೆಯ ಪರಿಪೂರ್ಣ ಗುಣ
6. ಖಂತಿ ಪಾರಮೀ – ಸಹನಶೀಲತೆಯ ಪರಿಪೂರ್ಣತೆ
7. ಸಚ್ಚಾ ಪಾರಮೀ – ಸತ್ಯಸಂದತೆಯ ಪರಿಪೂರ್ಣತೆ
8. ಅಧಿಟ್ಠಾಣ ಪಾರಮೀ – ಅಧಿಷ್ಠಾಣದ ಪರಿಪೂರ್ಣತೆ
9. ಮೆತ್ತಾ ಪಾರಮೀ – ಮೈತ್ರಿ ಭಾವದ ಪರಿಪೂರ್ಣತೆ
10. ಉಪೇಕ್ಕ ಪಾರಮೀ – ಉಪೇಕ್ಷೆಯ (ಸಮತಾಭಾವ) ಪರಿಪೂರ್ಣತೆ

ಯಾರು ಈ ದಶಪಾರಮಿಗಳನ್ನು ಸಾಧಿಸಿ ಸಮ್ಮಾಸಂಬುದ್ಧರ ಧಮ್ಮವನ್ನು ಕೇಳುತ್ತಾರೋ ಅವರು ಅರಹಂತ ಬೋಧಿ ಜ್ಞಾನವನ್ನು ಪಡೆಯುತ್ತಾರೆ.

ಯಾರು ಈ ದಶಪಾರಮಿಗಳನ್ನು ಎರಡರಷ್ಟು ಪರಿಪೂರ್ಣಗೊಳಿಸುತ್ತಾರೋ ಅವರು ಪಚ್ಚೇಕ (ಪ್ರತ್ಯೇಕ) ಬುದ್ಧರಾಗುತ್ತಾರೆ. ಅಂದರೆ ಅವರು ತಾವೇ ಬೋಧಿಜ್ಞಾನವನ್ನು ಪಡೆಯುತ್ತಾರೆ. ಆದರೆ ಅವರು ಬೇರೆಯವರನ್ನು ಬೋಧಿಜ್ಞಾನದತ್ತ ಒಯ್ಯಲಾರರು. ಇದಕ್ಕೆ ವಿರುದ್ಧವಾಗಿ ಅರಹಂತನು ತಾನೇ ಸ್ವಂತವಾಗಿ ಜ್ಞಾನೋದಯ ಪಡೆಯದೆ ಬುದ್ಧನ ಧಮ್ಮವನ್ನು ಕೇಳಿದ ಮೇಲೆ ಬೋಧಿಜ್ಞಾನವನ್ನು ಪಡೆಯುತ್ತಾನೆ ಮತ್ತು ಬುದ್ಧನ ಧಮ್ಮೋಪದೇಶಗಳ ಮೇಲಿನ ಪ್ರಭುತ್ವದಿಂದಾಗಿ ಬೇರೆಯವರನ್ನು ಬೋಧಿಜ್ಞಾನದತ್ತ ಕೊಂಡೊಯ್ಯಲು ಶಕ್ಯನಿರುತ್ತಾನೆ. ಈ ದಶಪಾರಮಿಗಳನ್ನು ಮೂರುಪಟ್ಟು ಪರಿಪೂರ್ಣಗೊಳಿಸಿದಲ್ಲಿ ಅಂತಹವರು ಸ್ವತಃ ಬೋಧಿಜ್ಞಾನವನ್ನು ಪಡೆದು ಸಮ್ಮಾಸಂಬುದ್ಧರಾಗುತ್ತಾರೆ ಮತ್ತು ಅಸಂಖ್ಯ ಜೀವಿಗಳನ್ನು ಬೋಧಿಜ್ಞಾನದೆಡೆಗೆ ಸೆಳೆಯಲು ಶಕ್ಯರಾಗಿರುತ್ತಾರೆ.

**ಸಂಕಟದ ಪಾತಾಳ ಲೋಕಗಳು**

ನಿರಯ, ಪ್ರಾಣಿಪ್ರಪಂಚ, ವಿಕೃತ ದೇಹದ ಪ್ರೇತಗಳು, ರಾಕ್ಷಸರು:

ಬೌದ್ಧ ವಿಶ್ವೋತ್ಪತ್ತಿ ಶಾಸ್ತ್ರದ ಪ್ರಕಾರ ಈ ಬ್ರಹ್ಮಾಂಡವನ್ನು ಭಿನ್ನತೆ ಮತ್ತು ಅಸಮತೆಯ ದೃಷ್ಟಿಯಿಂದ ಎರಡು ಭಾಗಗಳನ್ನಾಗಿ ಮಾಡಲಾಗಿದೆ. ಒಂದು ಲೋಕದಲ್ಲಿ ಜೀವಿಗಳು ಸಂಕಟ ನೋವುಗಳಲ್ಲೇ ಇರುವುದು ಕಂಡು ಬಂದರೆ, ಇನ್ನೊಂದು ಲೋಕದಲ್ಲಿನ ಜೀವಿಗಳ ಬದುಕು ಸುಖದಿಂದ ಕೂಡಿರುತ್ತದೆ. ಮೊದಲಿನ ಲೋಕವನ್ನು ದುಗ್ಗತಿ (ದುಗ್ಗತಿ) ಎಂತಲೂ, ಎರಡನೆಯದನ್ನು ಸುಗತಿಯ (ಸದ್ಗತಿ) ಲೋಕವೆಂತಲೂ ಗುರುತಿಸಲಾಗುವುದು.

ದುಗ್ಗತಿಯನ್ನು ಸಂಕಟಗಳ ಪಾತಾಳ ಲೋಕವೆಂತಲೂ ಕರೆಯುತ್ತಾರೆ. ಅದರಲ್ಲಿ ನಾಲ್ಕು ವಿಭಿನ್ನ ಅಸ್ತಿತ್ವಗಳಿವೆ; ಅವು :

1. ನಿರಯ (ನರಕ ಲೋಕ)
2. ತಿರಚ್ಚಾನ ಲೋಕ (ಪ್ರಾಣಿ ಲೋಕ)
3. ಪೇತ ಲೋಕ (ಪ್ರೇತಗಳು ಅಥವಾ ವಿಕೃತ ದೇಹವುಳ್ಳ ಭೂತಗಳ ಲೋಕ)
4. ಅಸುರ ಲೋಕ (ರಾಕ್ಷಸರು ಅಥವಾ ಬೃಹದಾಕಾರದ ಜೀವಿಗಳ ಲೋಕ)

ಈ ನಾಲ್ಕು ಲೋಕಗಳಲ್ಲಿ ಜೀವಿಗಳು ಉದಾಹರಣೆಗೆ ನಿರಯದಲ್ಲಿ ಬಹುಕಾಲ ಅತೀವ ದುಃಖ ಅಥವಾ ನೋವಿನಲ್ಲಿ ನರಳುತ್ತಾರೆ. ಬೌದ್ಧ ಧರ್ಮದಲ್ಲಿ ಖಾಯಂ ನರಕ ಎಂಬುದಿಲ್ಲ. ತುಂಬ ಕೆಟ್ಟ ಕೆಲಸಗಳನ್ನು ಮಾಡಿದವರು, ಹಿಂಸೆಯನ್ನು, ನೋವನ್ನು ಖಂಡಿತವಾಗಿಯೂ ಕೊನೆಯಿಲ್ಲದ ನೋವಿಗೆ ಒಳಗಾಗುತ್ತರೆ. ಅಂತಹ ಹೀನವಾದ ಅಪರಾಧಗಳನ್ನು ಮಾಡಿದ ಹಿಂಸಾತ್ಮಕ ಕೃತ್ಯಗಳಲ್ಲಿ ತೊಡಗಿದವರು ಇಲ್ಲಿ ಹುಟ್ಟಿ ತಮ್ಮ ಕುಕೃತ್ಯಗಳಿಂದಾಗಿಯೇ ನರಳುತ್ತಾರೆ. ಹಲವುರೀತಿಯ ನರಕಗಳಿವೆ; ಅಲ್ಲಿನ ನರಕವಾಸಿಗಳು ಎಲ್ಲಬಗೆಯ ಹಿಂಸೆಗಳನ್ನು ಕೊಡುತ್ತಾರೆ.

ನರಕವನ್ನು ನೋಡಿಕೊಳ್ಳುವ ಒಬ್ಬ ಯಮ ದೇವನಿದ್ದಾನೆ. ಅವನನ್ನು ಕಂಡರೆ ಎಲ್ಲರಿಗೂ ಭಯ. ಅವನು ಒಬ್ಬ ಜೀವಿಯು ನಡೆಸಿದ ಅಪರಾಧ ಜೀವನ ಮತ್ತು ಅವನ ಹಿಂಸಾತ್ಮಕ ಕರ್ಮಗಳ ಅನುಸಾರ ಶಿಕ್ಷೆಯನ್ನು ನೀಡುತ್ತಾನೆ. ಒಮ್ಮೆ ನರಕಲೋಕದ ಶಿಕ್ಷೆಯನ್ನನುಭವಿಸಿಯಾದ ಮೇಲೆ ಅಂದರೆ ಕಮ್ಮ ತೊಳೆದುಕೊಂಡಮೇಲೆ ನರಕದಿಂದ ನಿರ್ಗಮಿಸಿ ಮತ್ತೆ ಕಮ್ಮಾನುಸಾರ ಬೇರೆ ಲೋಕಗಳಲ್ಲಿ ಹುಟ್ಟುತ್ತಾನೆ.

ಬೌದ್ಧ ಧರ್ಮದಲ್ಲಿ ವರ್ಣಿಸಿರುವ ನರಕವು ಒಂದು ದಂತಕಥೆಯಾಗಲಿ ಪುರಾಣವಾಗಲಿ ಅಲ್ಲ. ಸಮ್ಮಾಸಂಬುದ್ಧರು ಮತ್ತು ಅವರ ಅರ್ಹತ ಶಿಷ್ಯರು ಇವನ್ನು ತುಂಬ ನಿಖರವಾಗಿ ವಿವರಿಸಿದ್ದಾರೆ. ತಾನು ಮಾನಸಿಕ ಕ್ಲೇಶಗಳಿಂದ ಮಾಡಿದ ಕೆಟ್ಟ ಕೆಲಸಗಳ ಅನುಸಾರ ತಕ್ಕ ಬೆಲೆಯನ್ನು ಕೊಡಲೇಬೇಕೆಂದು ತಮ್ಮ ಶಿಷ್ಯರಿಗೆ ಎಚ್ಚರಿಸಿದ್ದಾರೆ. ಕೆಟ್ಟ ಕೆಲಸವನ್ನು ಮಾಡಿದವರಿಗೆ ದಂಡವಿನಾಯಿತಿ ಎಂಬ ಪ್ರಶ್ನೆಯೇ ಇಲ್ಲ. ಸಂಪತ್ತು, ಶಿಫಾರಸ್ಸು, ಅಧಿಕಾರ ಇವು ಯಾವೂ ಕುಕರ್ಮವೆಸಗಿದ ಒಬ್ಬನನ್ನು ರಕ್ಷಿಸಲು ಸಾಧ್ಯವೇ ಇಲ್ಲ. ಜೀವಿಗಳು ನರಕದ ಕಷ್ಟವನ್ನನುಭವಿಸಿ ಮನುಷ್ಯ ಲೋಕಕ್ಕೆ ಬಂದವರು ತುಂಬ ಸ್ಪಷ್ಟವಾಗಿ ಆ ಲೋಕಗಳಲ್ಲಿನ ಸಂಕಟಗಳನ್ನು ವರ್ಣಿಸಿದ್ದಾರೆ. ಬುದ್ಧನ ಪ್ರಮುಖ ಶಿಷ್ಯರಲ್ಲೊಬ್ಬನಾದ ಆಯುಷ್ಮಂತ ಮಹಾಮೊಗ್ಗಲ್ಲಾನನು ಅತಿಮಾನುಷ ಶಕ್ತಿಗಳಲ್ಲಿ ಬುದ್ಧನಿಗೆ ಎರಡನೆಯವನು. ಈತನು ಇಂತಹ ಲೋಕಗಳಿಗೆಲ್ಲಾ ಆಗಾಗ್ಗೆ ಹೋಗಿ ವಾಪಸ್ಸು ಬಂದು ಯಾರ್‍ಯಾರು ಮನುಷ್ಯ ಲೋಕದಲ್ಲಿ ಪ್ರಭಾವಿತರೋ, ಶ್ರೀಮಂತರೋ, ಅಧಿಕಾರವುಳ್ಳವರೋ ಅವರೆಲ್ಲಾ ಸತ್ತಮೇಲೆ ಅಲ್ಲಿ ಜನ್ಮಪಡೆದಿರುವುದನ್ನು ಕಂಡನು. ಅವರ ನೋವುಗಳನ್ನು ವರ್ಣಿಸಿ ಅವರಿಗೆ ಎಂತಹ ಸಹಾಯ ನೀಡಬಹುದೆಂದು ಚಿಂತಿಸುತ್ತಿದ್ದನು.

ಇದರಂತೆಯೇ ಪ್ರಾಣಿ ಲೋಕವು ಇದೆ. ಇದು ಕೂಡ ಭಿನ್ನವಾಗಿದೆ ಮತ್ತು ಮನುಷ್ಯರಿಗೆ ಹತ್ತಿರವಾಗಿದೆ. ಕಾರಣ ಅವು ಕಾಣುವಂತಹವು. ಪ್ರಾಣಿಗಳು ಹೆಚ್ಚಾಗಿ



ಭಯ ಮತ್ತು ಆತಂಕಗಳಿಮದ ನರಳುತ್ತವೆ. ಅವಕ್ಕೆ ಮನಸ್ಸಿನ ಮೇಲೆ ಹಿಡಿತವಿಲ್ಲದಿರುವುದರಿಂದ ಜನ್ಮಜಾತ ಬುದ್ಧಿಯಿಂದ ಅಥವಾ ಹುಟ್ಟು ಗುಣದಿಂದ ಬದುಕುತ್ತವೆ. ಆದರೆ ಮನುಷ್ಯರು ಹಾಗಲ್ಲ, ಬುದ್ಧಿಪೂರ್ವಕವಾಗಿ ತಮ್ಮ ಮನಸ್ಸಿನ ಮೇಲೆ ನಿಯಂತ್ರಣವನ್ನಿಟ್ಟುಕೊಂಡು ತಮಗೆ ಬೇಕಾದ ಭವಿಷ್ಯವನ್ನು ರೂಪಿಸಿಕೊಳ್ಳುತ್ತಾರೆ. ಪ್ರಾಣಿಗಳಿಗೆ ತಮ್ಮ ಮನೋಪ್ರೇರಿತ ಕ್ರಿಯೆಗಳ ಮೇಲೆ ನಿಯಂತ್ರಣವೇ ಇರುವುದಿಲ್ಲ. ಆದರೆ ಮನುಷ್ಯನು ಅವನ್ನು ಒಂದು ನಿರ್ದಿಷ್ಟ ರೀತಿಯಲ್ಲಿ ತರಬೇತಿಗೆ ಒಳಪಡಿಸಿ ತನ್ನ ಸೇವೆಗಾಗಿ ಇಲ್ಲವೇ ಮನರಂಜನೆಗಾಗಿ ಬಳಸಿಕೊಳ್ಳುತ್ತಾನೆ; ಆದರೆ ಆ ಪ್ರಾಣಿ ಮನುಷ್ಯನಿಗೆ ಏನೇ ಸೇವೆ ಮಾಡುತ್ತಿದ್ದರೂ ಅವು ತಮ್ಮ ಜನ್ಮಜಾತ ಮುಗ್ಧತೆ (ಅವಿದ್ಯಾ) ಯಲ್ಲಿ ಆನಂದವಾಗಿರುತ್ತವೆ.

ಪ್ರಾಣಿಗಳು ಯಾವಾಗಲು ತಮ್ಮ ಸ್ವರಕ್ಷಣೆಯ ಆತಂಕದಲ್ಲಿದ್ದರೂ ಮನುಷ್ಯರ ಸುಖಬಾಳ್ವೆಗೆ ಮತ್ತು ಪ್ರಕೃತಿಯಲ್ಲಿನ ಪರಿಸರ ಸಮತೋಲನೆಗೆ ತಮ್ಮ ಕೊಡುಗೆಯನ್ನು ಕೊಟ್ಟಿವೆ. ಕಾಡಿನಲ್ಲಿರುವ ಪ್ರಾಣಿಗಳು ಯಾವಾಗ ಎಲ್ಲಿ ಇನ್ನೊಂದು ಪ್ರಾಣಿಯಿಂದ ಸತ್ತುಹೋಗುತ್ತೇವೆಂಬ ಭಯದಿಂದ ಅಕ್ಷರಶಃ ನಡುಗುತ್ತವೆ. ಆತಂಕ ಭಯಗಳ ಅಸ್ತಿತ್ವದಲ್ಲೇ ಅವು ಬದುಕುತ್ತವೆ. ಮಾನವ ಕರುಣೆಯೇ ಅವುಗಳನ್ನು ಕಾಪಾಡಬೇಕು.

ಅಸುರ ಲೋಕವು ಹಲವು ಬಗೆಯ ಬೃಹತ್ ಜೀವಿಗಳಿಂದ ಕೂಡಿರುವಂತಹುದು. ಈ ಜೀವಿಗಳಿಗೆ ಅಪಾರವಾದ ಮಾನಸಿಕ ಶಕ್ತಿ ಇದ್ದು ಅದನ್ನು ಹೆಚ್ಚಾಗಿ ಪ್ರಕೃತಿ ಮತ್ತು ಪರಿಸರದ ಮೇಲೆ ಪ್ರಯೋಗಿಸಿ ತನ್ನ ನಿಯಂತ್ರಣಕ್ಕೆ ತೆಗೆದುಕೊಂಡು ತಮ್ಮ ಹಿಂದಿನ ಸಂಬಂಧಗಳ ಅನುಸಾರ ಮನುಷ್ಯ ಲೋಕಕ್ಕೆ ಕಷ್ಟವನ್ನುಂಟುಮಾಡುವ ಅಥವಾ ಸಹಾಯ ಮಾಡುವ ಕೆಲಸದಲ್ಲಿ ತೊಡಗುತ್ತವೆ.

ನಾಗ ಎನ್ನುವ ಪ್ರಾಣಿ ಈ ಲೋಕದ ಜೀವಿಯು ಅತ್ಯಂತ ಶಕ್ತಿಶಾಲಿಯಾದ ಸರೀಸೃಪ ಜೀವಿಗಳು. ಇವಕ್ಕೆ ಮನುಷ್ಯ ಲೋಕಕ್ಕೆ ಸಹಾಯ ಮಾಡುವ ಅಥವಾ ನಾಶಮಾಡುವ ಎರಡೂ ಶಕ್ತಿಗಳಿವೆ. ಏನೇ ಆಗಲಿ, ಇವು ಬುದ್ಧನಂತಹ ಪಾರಮಾರ್ಥಿಕ ಗುರುಗಳ ಮತ್ತು ಆತನ ಅರಹತ ಶಿಷ್ಯರುಗಳ ಪ್ರಭಾವ ವಲಯಕ್ಕೆ ಬಂದರೆ ಈ ನಾಗರು ತುಂಬಾ ಸಹಾಯಕಾರಿ ಮತ್ತು ಅವರು ಪಾರಮಾರ್ಥಿಕವಾಗಿ ಉನ್ನತಿ ಹೊಂದಬಹುದು.

ಇನ್ನು ಗಂಧರ್ವರಿದ್ದಾರೆ. ಇವರು ಎಲ್ಲರೀತಿಯ ಮನರಂಜನೆಯನ್ನು ನೀಡುವ ಸಂಗೀತಗಾರರು. ವಿವಿಧ ದೇವಲೋಕಗಳಲ್ಲಿ ಮನರಂಜನೆ ನೀಡುವವರು. ಇವರಿಗೂ ಬಹಳಷ್ಟು ಮನೋಶಕ್ತಿಗಳಿವೆ. ಇವರು ದೇವತೆಗಳೊಂದಿಗೆ ಇರುವುದರಿಂದ ಮಾನವರಿಗೆ ನಿರುಪದ್ರವಿಗಳು.

ಹಾಗೆಯೇ ಯಕ್ಷರೂ, ಅಸುರರೂ ಇದ್ದಾರೆ. ಇವರು ದೈತ್ಯಾಕಾರ ಹೊಂದಿದ್ದು, ಅಸಮಾನ ಶಕ್ತಿಯುಳ್ಳವರು. ಇವರನ್ನು ಅಸುರರೆಂದು ಕರೆಯುತ್ತಾರೆ. ದೇವತೆಗಳೊಂದಿಗೆ ಹೋರಾಡುವಂತವರು. ಬುದ್ಧರ ಮತ್ತು ಅವರ ಅರಹತ ಶಿಷ್ಯರ ಸಂಪರ್ಕಕ್ಕೆ ಬಂದು ಬಹಳಷ್ಟು ಅಸುರರು ಪಾರಮಾರ್ಥಿಕ ಹಾದಿಯನ್ನು ಹಿಡಿದು ಮಾನವ ಜೀವಿಗಳಿಗೆ ಉಪಕಾರಿಗಳಾಗಿಯೇ ಇದ್ದಾರೆ.

ಪ್ರೇತ ಭೂತಗಳ ಲೋಕದಲ್ಲಿ ವಿಕೃತಾಕಾರದ ಜೀವಿಗಳಿದ್ದಾರೆ. ಇವರು ತಮ್ಮಲ್ಲಿರುವ ಸಹಜವಾದ ಶಕ್ತಿಯನ್ನು ವಿನಾಶಕ್ಕಾಗಿಯೇ ಬಳಸುತ್ತಾರೆ. ಮೇಲೆ ಹೇಳಿದ ಜೀವಿಗಳಂತೆ ಇವರು ಕಾಣದೇ ಇದ್ದರೂ ಮನುಷ್ಯ ಲೋಕದ ಮೇಲೆ ಸಾಕಷ್ಟು ಪ್ರಭಾವವನ್ನು ಬೀರುತ್ತಾರೆ. ಇವರು ಹಸಿವು ಬಾಯಾರಿಕೆಗಳಿಂದ ತೀವ್ರವಾಗಿ ನರಳುವವರು. ಬೇರೆಯ ಜೀವಿಗಳಿಗೆ ತಮ್ಮದೇ ಆದ ಆಹಾರವಿದ್ದರೆ ಈ ಪ್ರೇತಗಳಿಗೆ ತಮ್ಮ ಆಹಾರವೆಂಬುದಿಲ್ಲ. ಆದ್ದರಿಂದ ಅವರು ಮನುಷ್ಯರು ದಾನಮಾಡುವ ಪುಣ್ಯಗಳ ಮೇಲೆ ಅವಲಂಬಿಸಿರುತ್ತಾರೆ. ಪ್ರೇತಗಳು ಸಾಮಾನ್ಯವಾಗಿ ತಮ್ಮ ಹಿಂದಿನ ಜನ್ಮಗಳನ್ನು ನೆನಪಿಸಿಕೊಳ್ಳುತ್ತವೆ. ತಮ್ಮ ಎಲ್ಲ ಹಿಂದಿನ ಬಂಧುಗಳನ್ನು ಸ್ಮರಿಸಿಕೊಳ್ಳುತ್ತಾರೆ ಮತ್ತು ಪದೇ ಪದೇ ತಮ್ಮ ಹಿಂದಿನ ಮನೆಗಳಿಗೆ ಅನ್ನಾಹಾರಗಳಿಗೆ ಸೌಕರ್ಯವನ್ನು ಎಸಗುವುದಕ್ಕೆ ಹೋಗುತ್ತಾರೆ. ಅವನ್ನು ಮಾನವ ಬಂಧುಗಳು ತಮ್ಮ ಪುಣ್ಯವನ್ನು ಹಂಚಿಕೊಳ್ಳುವುದರ ಮೂಲಕ ಅವಕ್ಕೆ ಕೊಡಬಹುದು.

ಆಯುಷ್ಮಂತ ಮೊಗ್ಗಲ್ಲಾನರು ಈ ಜೀವಿಗಳ ಬಳಿ ಆಗಾಗ್ಗೆ ಹೋಗಿ ಅವರು ಮಾನವ ಜೀವದಲ್ಲಿದ್ದಾಗ ಏನೇನು ಕೆಟ್ಟ ಕೆಲಸ ಮಾಡಿ ನೋವು, ಹಸಿವು, ಬಾಯಾರಿಕೆ ಇರುವ ಈ ಜಾಗಕ್ಕೆ ಬಂದಿದ್ದಾರೆಂಬುದನ್ನು ಗುರುತಿಸುತ್ತಿದ್ದರು. ಈ ಆಯುಷ್ಮಂತರ ಉದ್ದೇಶವೆಂದರೆ ಈ ಪ್ರೇತಗಳ ಬಂಧುಗಳ ಮೇಲೆ ಮತ್ತು ಇತರರ ಮೇಲೆ ಪ್ರಭಾವ ಬೀರಿ ಅವರು ತಮ್ಮ ಪುಣ್ಯವನ್ನು ಈ ಅಭಾಗ್ಯರಿಗೆ ದಾನಮಾಡಲಿ, ಅವರ ನರಳಾಟ ಹೋಗಲಿ ಎನ್ನುವುದೇ ಆಗಿತ್ತು.

ಸುಗತ ಲೋಕಗಳಲ್ಲಿ ಎರಡು ಅಸ್ತಿತ್ವದ ನೆಲೆಗಳಿವೆ. ಮನುಷ್ಯ ಲೋಕವು ಒಂದು. ಇನ್ನುಳಿದ ಇಪ್ಪತ್ತಾರು ದಿವ್ಯ ವಲಯಗಳು ಅಥವಾ ಅಸ್ತಿತ್ವದ ನೆಲೆಗಳು. ಅಸಞಾಸತ್ತ ಅಂದರೆ ಮನಸ್ಸೇ ಇಲ್ಲದ ಜೀವಿಗಳ ನೆಲೆ ಇದೆ. ಇದು ಕೇವಲ ಯಾವುದೇ ನಿರ್ದಿಷ್ಟ ರೂಪವಿಲ್ಲದ, ಸೂಕ್ಷ್ಮ ಭೌತಿಕ ರೂಪ. ಆಕಾಶದಲ್ಲಿನ ಮೋಡಗಳು ಯಾವುದೇ ರೂಪವನ್ನು ಹೊಂದಬಹುದೋ ಹಾಗೇ ಈ ರೂಪಗಳೂ ಕೂಡ.

ಕೇವಲ ಮನಸ್ಸಿರುವ ಜೀವಿಗಳು ಚೈತನ್ಯ ರೂಪದ ಅರೂಪ ಬ್ರಹ್ಮರುಗಳಿದ್ದಾರೆ. ಈ ಜೀವಿಗಳಿಗೆ ಯಾವುದೇ ರೀತಿಯ ಭೌತಿಕ ರೂಪವಿರುವುದಿಲ್ಲ. ಇವರು ಮೇರೆ ಇರದ ಮಾನಸಿಕ ಅಸ್ತಿತ್ವದಲ್ಲಿಯೇ ಜೀವಿಸುವವರು. ಅವರ ಅಭೌತ ಪ್ರಭಾವ ಅಥವಾ ಅಗಾಧ ಪ್ರಮಾಣದ ಕಂಪನದಿಂದ ಅವರನ್ನು ಊಹಿಸಬಹುದು.

ಹೀಗೆ ಇಪ್ಪತ್ತಾರು ಸುಗತ ದಿವ್ಯಲೋಕದ ಅಸ್ತಿತ್ವಗಳಲ್ಲಿ ನಾಲ್ಕು ಪೂರ್ಣವಾಗಿ ಮಾನಸಿಕ ಅಸ್ತಿತ್ವವುಳ್ಳವುಗಳು, ಒಂದು ಸೂಕ್ಷ್ಮ ಭೌತಿಕ ಸ್ವರೂಪ ಅಸ್ತಿತ್ವವಾಗಿದ್ದು, ಇನ್ನುಳಿದ ಇಪ್ಪತ್ತೊಂದು ಅಸ್ತಿತ್ವಗಳು ಮನಸ್ಸು ಮತ್ತು ಶರೀರ ಹೊಂದಿದ್ದು ಒಳ್ಳೆಯದನ್ನೇ ಮಾಡುವ ಅಪಾರ ಸತ್ವವುಳ್ಳ ಜೀವಿಗಳು.

ಈ ಇಪ್ಪತ್ತೊಂದು ಅಸ್ತಿತ್ವಗಳಲ್ಲಿ ಆರು ಕಾಮಾವಚರ ದೇವತೆಗಳು ಅರ್ಥಾತ್ ಇಂದ್ರಿಯ ಲಾಲಸೆಗಳುಳ್ಳ ದೇವತೆಗಳು. ಇನ್ನುಳಿದ ಹದಿನೈದು ಸೂಕ್ಷ್ಮ ಶರೀರವುಳ್ಳ ಉನ್ನತವಾದ ದಿವ್ಯಲೋಕದ ರೂಪವಚಾರ ಬ್ರಹ್ಮರುಗಳು.



ರೂಪಾವಚಾರ ಬ್ರಹ್ಮದೇವತೆಯು ಮನುಷ್ಯ ಲೋಕವನ್ನು ಸಂದರ್ಶಿಸಿದಲ್ಲಿ ಅವನ ಸೂಕ್ಷ್ಮ ರೂಪವು ಮನುಷ್ಯನ ಕಣ್ಣಿಗೆ ಕಾಂತಿಯುತವಾದ ಬೆಳಕಿನ ಕಂಪನವಾಗಿ ಕಾಣುತ್ತಿದೆ.

## ದೇವರು ಮತ್ತು ದೇವರುಗಳು ಎಂಬ ಪರಿಕಲ್ಪನೆ

ಆಸ್ತಿಕ ಮೂಲದ ಧರ್ಮಗಳ ಪರಿಪಾಲಕರು ಕೆಲವೊಮ್ಮೆ ಒರಟಾಗಿ ಪ್ರಶ್ನಿಸುತ್ತಾರೆ: ಬೌದ್ಧರು ದೇವರನ್ನು ನಂಬುತ್ತಾರೆಯೇ ಅಥವಾ ಇಲ್ಲವೇ? ಇದು ಸರಳವಾದ ಪ್ರಶ್ನೆ ಅಲ್ಲ. ಇದೊಂದು ಸಂಕೀರ್ಣವಾದ ಪ್ರಶ್ನೆ; ಟೀಕಿಸಲು ಇದನ್ನೇ ಒಂದು ಅಸ್ತ್ರವನ್ನಾಗಿ ಬಳಸುತ್ತಾರೆ. ಅಂದರೆ, ನೀವು 'ಇಲ್ಲ' ಎಂದು ಉತ್ತರಿಸಿದರೆ ನಿಮ್ಮನ್ನು ಹಿಂದುಗಳು 'ನಾಸ್ತಿಕರು' ಎಂದು, ಕ್ರಿಶ್ಚಿಯನ್ನರು 'ಹೀದನ್' (ಅ-ಕ್ರೈಸ್ತ) ಎಂದೂ, ಮುಸಲ್ಮಾನರು 'ಕಾಫಿರ' (ಅ-ಇಸ್ಲಾಮಿ) ರೆಂದೂ ಖಂಡಿಸುತ್ತಾರೆ. ಒಂದುವೇಳೆ 'ಹೌದು' ಎಂದರೆ ಆಗಲೂ ನಿಮ್ಮನ್ನು 'ಮಿಥ್ಯಾದೃಷ್ಟಿ' ಉಳ್ಳವರೆಂದು ಹಂಗಿಸುತ್ತಾರೆ. ವಾಸ್ತವ ಸಂಗತಿ ಏನೆಂದರೆ ಪ್ರಶ್ನೆಯೇ ತಪ್ಪಾಗಿದೆ. ಸರಿಯಾದ ಉತ್ತರ ಬರಬೇಕಾದರೆ 'ದೇವರು' ಅಥವಾ ದೇವಗಳು ಎಂದರೆ ಯಾರು ಎಂಬುದನ್ನು ಅರ್ಥೈಸಬೇಕು.

ಬೌದ್ಧರು ಸೃಷ್ಟಿಕರ್ತ ದೇವರೊಬ್ಬನಿದ್ದಾನೆ, ಆತನೇ ಎಲ್ಲ ಜೀವಿಗಳನ್ನು ಸೃಷ್ಟಿಸಿರುವುದು ಮತ್ತು ಅವರ ಭವಿಷ್ಯವನ್ನು ನಿರ್ಧರಿಸುವುದು ಎಂಬುದನ್ನು ಪ್ರಥಮದಲ್ಲೇ ಅಲ್ಲಗಳೆಯುತ್ತಾರೆ. ಜೀವಿಗಳೆಲ್ಲ ಆ ದೇವನ ಅಂಕೆಯಲ್ಲಿದ್ದು ತಾವು ನಿಸ್ಸಹಾಯಕರು ಎಂಬುದಾದರೆ ಬದುಕಿನ ವಾಸ್ತವದ ಸಂಗತಿಯೇ ಬೇರೆ. ಒಬ್ಬ ಮನುಷ್ಯನು ನಿಜವಾಗಿಯೂ ಭವಿಷ್ಯವನ್ನು ತಾನೇ ತನ್ನ ಸ್ವಂತ ನಿರ್ಧಾರಗಳಿಂದ ಕ್ರಿಯೆಗಳಿಂದ ರೂಪಿಸಿಕೊಳ್ಳುವ ರೂವಾರಿ. ಒಬ್ಬನು ತನ್ನ ಭವಿಷ್ಯವನ್ನು ಇಲ್ಲೇ ಈಗಲೇ ಮತ್ತು ಮುಂದೆಯೂ ಸೃಷ್ಟಿಸಿಕೊಳ್ಳುತ್ತಾನೆಂಬುದು ಅವಿವಾದಾತ್ಮಕವಾದುದು. ಹೀಗೆ ಸೃಷ್ಟಿಕರ್ತ ದೇವರು ನಮ್ಮ ಭವಿಷ್ಯವನ್ನು ರೂಪಿಸುತ್ತಾನೆನ್ನುವುದು ಕೇವಲ ತಪ್ಪಷ್ಟೇ ಅಲ್ಲ, ಅದು ಅಪಾಯಕಾರಿ ಸಂದೇಶವೂ ಆಗುತ್ತದೆ.

ಯಾರೇ ಆಗಲಿ, ಇಂತಹ ನಂಬಿಕೆಯ ಬಲೆಯಲ್ಲಿ ಬಿದ್ದರೆ ಅದೊಂದು ಭಯಾನಕ ಮಾನಸಿಕ ಕಾಯಿಲೆಯಾದ 'ಅದೃಷ್ಟ ವಾದ'ದಿಂದ ಬಳಲುತ್ತಿದ್ದಾನೆಂದೇ ಅರ್ಥ. ಇದರ ನಿರೂಪವೇನೆಂದರೆ ಒಬ್ಬ ಮನುಷ್ಯನು ಯಾರೋ ಒಬ್ಬರು ನಿರ್ದೇಶಿಸಿದಂತೆ ಅಂದರೆ ಪೂರ್ವನಿರ್ಧಾರಿತವಾಗಿರುವುದರಿಂದ ಆ ರೀತಿಯೇ ಮಾಡಬೇಕು ಅಷ್ಟೇ ಎನ್ನುವುದರಿಂದ ತಾನು ಮಾಡುವ ಕರ್ಮಗಳ ಮೇಲೆ ಯಾವುದೇ ಅಂಕೆ ಇಲ್ಲವೆಂದಾಯಿತು.

ಒಮ್ಮೆ ಸೆರೆಮನೆಯೊಂದಕ್ಕೆ ಆಶೀರ್ವಾದವನ್ನು ಮಂಗಳವನ್ನು ನೀಡಲು ಹೋದಾಗ ಶಿಕ್ಷೆಗೊಳಗಾದ ಖೈದಿಯನ್ನು ನಾನು ಕೇಳಿದೆ; "ಅಯ್ಯಾ, ನೀನು ಇಡೀ ಕುಟುಂಬವೊಂದನ್ನು ರಕ್ತಸಿಕ್ತ ಮಾಡಿ ಕೊಂದದ್ದು ಯಾಕೆ?"

ಅವನು ಮರುಯೋಚನೆ ಮಾಡದೆ ಹೇಳಿದ: "ನಾನು ಹೀಗೆಯೇ ಮಾಡಬೇಕೆಂದು ಪೂರ್ವ ನಿರ್ಧರಿತವಾಗಿತ್ತು. ಅದು ನನ್ನ ಹಣೆಬರಹವಾಗಿತ್ತು. ದೇವರು ಅಂದುಕೊಂಡಂತೆ ನಾನು ಮಾಡಿದೆ, ನನ್ನದೇನೂ ಅದರಲ್ಲಿಲ್ಲ."

ಹೀಗೆ ಸಂವಾದ ಮುಂದುವರಿಯಿತು:

ನಾನು : "ಈಗ ನೀನು ತೊಂದರೆ ಅನುಭವಿಸುತ್ತಿದ್ದೀಯೋ, ಇಲ್ಲವೋ?"

ಅವನು : "ಹೌದು ನಾನು ದಿನರಾತ್ರಿ ನೋವಿನಲ್ಲಿದ್ದೇನೆ. ರಾತ್ರಿ ನಿದ್ದೆ ಬರುತ್ತಿಲ್ಲ, ಭಯ ನನ್ನನ್ನು ಆವರಿಸಿದೆ."

ನಾನು : "ನಿನ್ನ ದುಃಖ, ಆತಂಕ, ಭಯ ಇವೆಲ್ಲವೂ ದೇವರಿಂದ ಆದುದು, ಹೌದು ತಾನೇ?"

ಅವನು : "ಹೌದು."

ನಾನು : "ಅಂದರೆ ದೇವರು ಒಬ್ಬ ಕ್ರೂರ ಜೀವಿ ಅಲ್ಲವೇ ?"

ಅವನು : "ಇಲ್ಲ, ನಾನು ದೇವರನ್ನು ಹೇಗೆ ನಿಂದಿಸಲಿ? ಅವನು ಸರ್ವಶಕ್ತ."

ನಾನು : "ಅದನ್ನು ನೀನು ಹೇಳು ಅಥವಾ ಬಿಡು, ಅದು ಹಾಗೆಂದೇ ಭಾಸವಾಗುತ್ತದೆ. ನೀನು ಇಷ್ಟೊಂದು ನೋವನ್ನು ಅನುಭವಿಸುತ್ತಿರುವುದನ್ನು ನೋಡಿದರೆ ಆ ದೇವರು ನಿನಗೆ ಯಾವ ಒಳ್ಳೆಯದನ್ನೂ ಮಾಡಿಲ್ಲ. ನೀನ್ಯಾಕೆ ಸರಳವಾಗಿ ನೇರವಾಗಿ ಯೋಚನೆ ಮಾಡಬಾರದು?"

ಅವನು : "ಅದು ಹೇಗೆ?"

ನಾನು : "ಅವರನ್ನು ಕೊಲ್ಲುವಾಗ ನೀನು ಕೋಪದಲ್ಲಿ ಇದ್ದೆ ಅನ್ನುವುದು ವಾಸ್ತವ ತಾನೆ?"

ಅವನು : "ಹೌದು."

ನಾನು : "ನೀನು ಅವರನ್ನು ಕೊಂದುದರಿಂದ ನೀನು ಕ್ರೂರಿಯೇ ಆಗಿದ್ದೆ. ನೀನು ಕೋಪಾವಿಷ್ಟನೂ, ಕ್ರೂರಿಯೂ ಆದುದೇಕೆಂದರೆ ಅವರೆಲ್ಲರ ಆಸ್ತಿ ಸಂಪತ್ತೆಲ್ಲವನ್ನೂ ನಿನ್ನದಾಗಿ ಮಾಡಿಕೊಳ್ಳಬೇಕೆಂದಿದ್ದೆ. ನೀನು ಲೋಭಿತನಕ್ಕೆ ಒಳಗಾದುದರಿಂದ ನಿನ್ನ ಮನಸ್ಸು ಕತ್ತಲೆ ಕವಿದು ಕೋಪಿಯೂ, ಕ್ರೂರಿಯೂ ಆಗಿ ಅವರೆಲ್ಲರನ್ನೂ ಕೊಂದೆ. ಆದ್ದರಿಂದ ದೇವರು ನಿನ್ನನ್ನು ಕೊಲೆಗಾರನನ್ನಾಗಿ ಮಾಡಲಿಲ್ಲ, ಆದರೆ ನಿನ್ನಲ್ಲೇ ಲೋಭ ಮೂಲವಾದ ದುಷ್ಟ ಮನಸ್ಸು ಕೊಲೆ ಮಾಡಿಸುವಂತೆ ಮಾಡಿತು. ನೀನು ಈ ಸಂಗತಿಯನ್ನು ಅರ್ಥಮಾಡಿಕೊಂಡರೆ ನಿನ್ನ ಭವಿಷ್ಯವನ್ನು ನೀನೇ ಸೃಷ್ಟಿಸಿಕೊಳ್ಳಬಹುದು, ನಿನ್ನ ಬದುಕು ಪೂರ್ಣ ನಿನ್ನ ನಿಯಂತ್ರಣದಲ್ಲೇ ಇರುವುದು."

ದೈವಾಯುಕ್ತವಾದ ಅಥವಾ ಅದೃಶ್ಯವಾದ ಎನ್ನುವುದು ಸೃಷ್ಟಿಕರ್ತ ದೇವರೊಬ್ಬನಿದ್ದಾನೆ ಅಥವಾ ನಮ್ಮ ಮೇಲೊಂದು ಅತಿಮಾನುಷ ಶಕ್ತಿಯೊಂದಿದೆ ಎನ್ನುವ ನಂಬಿಕೆಯೇ ಒಂದು ಮಾನಸಿಕ ಕಾಯಿಲೆ. ಇದು ಬೌದ್ಧ ಸಿದ್ಧಾಂತ. ಸೃಷ್ಟಿಕರ್ತ ದೇವರೊಬ್ಬನಿದ್ದಾನೆ ಎನ್ನುವ ಸಿದ್ಧಾಂತವನ್ನು ಬೌದ್ಧರು ಅಲ್ಲಗಳೆಯುತ್ತಾರೆ. ಯಾಕೆಂದರೆ ಒಬ್ಬನ ಸುಖವಾಗಲಿ, ದುಃಖವಾಗಲಿ ಅವನು ಮಾಡುವ ಸ್ವಂತ ಕರ್ಮಗಳ ಮೇಲೆಯೇ ನಿಂತಿದೆ ಎಂಬುದು ಬೌದ್ಧರ ನಿಲುವು. ಆ ಕರ್ಮಗಳು ಒಳ್ಳೆಯ ಮತ್ತು ಕೆಟ್ಟ ಮಾನಸಿಕ ಸ್ಥಿತಿಗಳಿಂದ ಆಗುವಂತಹವು. ಇದರ ಅರ್ಥವೇನೆಂದರೆ ಒಬ್ಬನು ತನ್ನ ಮನಸ್ಸನ್ನು ಪರಿಶುದ್ಧಿ ಮಾಡಿ



ಉತ್ತಮವಾದುದಕ್ಕೆ ಈಡು ಮಾಡಿಕೊಂಡು ಸಾಂಸಾರಿಕ ದುಃಖಗಳಿಂದ ಬಿಡುಗಡೆ ಹೊಂದಬಹುದು.

ಪ್ರಾಪಂಚಿಕ ಸಂಗತಿಗಳಲ್ಲೇ ಮುಗಳುಗಿದವನ ಮನಸ್ಸು ಪ್ರಪಂಚದ ಭೋಗವಸ್ತುಗಳಿಗೆ ಬದ್ಧವಾಗಿಯೋ ಅವುಗಳ ಪ್ರಭಾವಕ್ಕೊಳಪಟ್ಟು ಇರುತ್ತದೆ. ಹೀಗಾಗಿ ಅವನು ಬಹುವಿಧದಲ್ಲಿ ದುಃಖಕ್ಕೆ ಒಳಗಾಗುತ್ತಾನೆ. ಯಾರು ಇದನ್ನು ಸರಿಯಾಗಿ ಅರ್ಥಮಾಡಿಕೊಳ್ಳುತ್ತಾನೊ, ಅವನು ಮನಸ್ಸನ್ನು ಸರಿಯಾಗಿ ತರಬೇತಿಗೆ ಒಳಪಡಿಸಿ ಪರಿಶುದ್ಧಿ ಮಾಡಿಕೊಂಡು ಯಾವ ಸಂಯೋಜನೆಗಳು ಅವನ ಮನಸ್ಸನ್ನು ಬಂಧಿಸಿವೆಯೋ ಅವುಗಳನ್ನು ಕತ್ತರಿಸಿ ಹೊರಗೆ ಬರುತ್ತಾನೆ. ಒಬ್ಬ ಬೌದ್ಧನು ಹೀಗೆಯೇ ಚಿಂತನೆ ಮಾಡುವುದು.

ಈ ರೀತಿಯ ಚಿಂತನೆ ಅಥವಾ ಆಧ್ಯಾತ್ಮಿಕ ನಂಬಿಕೆಯಿಂದ ಒಬ್ಬನು ಒಳ್ಳೆಯದರ ಮೂಲಕ ದುಷ್ಟಶಕ್ತಿಯ ಮೇಲೆ ವಿಜಯ ಸಾಧಿಸಬಹುದು. ಬುದ್ಧನ ಬದುಕೇ ಒಂದು ತೆರೆದ ಪುಸ್ತಕ. ಈ ಸತ್ಯವನ್ನು ಗ್ರಹಿಸಲು ಅಸಂಖ್ಯಾತ ಉಪಾಸಕ ಉಪಾಸಿಕೆಯರು ಸಮ್ಮಾಸಂಬುದ್ಧನನ್ನು ಅನುಸರಿಸಿ ಜ್ಞಾನೋದಯವನ್ನು ಪಡೆದಿದ್ದಾರೆ. ಈ ಪ್ರಕ್ರಿಯೆಯು ನಮ್ಮ ಕಾಲದಲ್ಲೂ ಮುಂದುವರಿದಿದೆ.

ಸೃಷ್ಟಿಕರ್ತ ದೇವರು ಇಲ್ಲವೆನ್ನುವುದು ಒಂದು ಸ್ಪಷ್ಟ ಅರಿವಿನ ಮೇಲೆ ನಿಂತಿದೆ. ಕೇವಲ ತಿರಸ್ಕಾರ ಅಥವಾ ಅಪನಂಬಿಕೆಯಿಂದಲ್ಲ. ದೇವರು ಇದ್ದಾರೆ, ಹೌದು ಎಂಬುದು ಬೌದ್ಧರು ಹೇಳಿದರೆ ಅದರ ಅರ್ಥ ಹಲವು ದಿವ್ಯಲೋಕಗಲ್ಲಿ ವಾಸಿಸುವ ದೇವರುಗಳನ್ನು ಅವರು ನಂಬುತ್ತಾರೆ. ಈ ದಿವ್ಯ ಜೀವಿಗಳು ದಿವ್ಯಲೋಕಗಳಲ್ಲಿ ಯಾಕೆ ಜೀವಿಸುತ್ತಿದ್ದಾರೆಂದರೆ ಅವರು ಮನುಷ್ಯರಾಗಿ ಇಲ್ಲವೇ ದೇವತೆಗಳಾಗಿ ಉತ್ತಮೋತ್ತಮ ಕಾರ್ಯಗಳನ್ನು ಎಸಗಿರುವುದರಿಂದ. ಈ ದಿವ್ಯ ಲೋಕಗಳೆಂದರೆ ಅಲ್ಲಿರುವವರು ಸಾಂಸಾರಿಕ ತಾಪತ್ರಯಗಳಿಂದ ಮುಕ್ತರಾಗಿದ್ದಾರೆಂದಲ್ಲ. ವಾಸ್ತವವಾಗಿ ಆ ದಿವ್ಯ ಜೀವಿಗಳು ಬಹುಕಾಲ ಆನಂದವಾಗಿ ಜೀವಿಸುವಂತಹವರು. ಮನುಷ್ಯರ ಲೆಕ್ಕಾಚಾರದಲ್ಲಿ ಅವರ ಜೀವಿತಾವಧಿ ಅನಂತವೇ ಸರಿ.

ನಿಜದ ಸಂಗತಿ ಏನೆಂದರೆ ದಿವ್ಯಲೋಕಗಳ ಅಸ್ತಿತ್ವಕ್ಕೂ ಒಂದು ಆರಂಭವಿದೆ ಮತ್ತು ಅಂತ್ಯವಿದೆ. ಆದ್ದರಿಂದ ಅದು ಅನಂತವಲ್ಲ. ದಿವ್ಯಜೀವಿಗಳು ತಮ್ಮ ಉತ್ತಮ ಕಮ್ಮಗಳ ದೆಸೆಯಿಂದಾಗಿ ಅಲ್ಲಿ ಹುಟ್ಟುತ್ತಾರೆ ಮತ್ತು ಅವರ ಒಳ್ಳೆಯ ಕಮ್ಮಗಳ ಗಂಟು ಖಾಲಿಯಾದ ಮೇಲೆ ಬೇರೆ ಎಲ್ಲ ಜೀವಿಗಳಂತೆ ಅವರೂ ಕೂಡ ತಮ್ಮ ಮರಣ ಹೊಂದಿ ದಿವ್ಯಲೋಕಗಳಿಂದ ನಿರ್ಗಮಿಸುತ್ತಾರೆ.

ಮುಕ್ತಿ ಎಂದರೆ ಬೌದ್ಧರ ಪ್ರಕಾರ ಅದೊಂದು ಇರುವಿಕೆಯ ಸ್ಥಿತಿ ಅಲ್ಲ; ಮರಣವೇ ಇರದಿರುವ ಉನ್ನತೋನ್ನತವೂ, ಆನಂದವೂ ಆಗಿರುವ ಒಂದು ಆಯಾಮ, ಅದುವೇ ನಿಬ್ಬಾಣ. ಒಬ್ಬ ವ್ಯಕ್ತಿ ಅತ್ಯಂತ ಶ್ರದ್ಧೆಯಿಂದ ಮನಸ್ಸಿಗೆ ತರಬೇತಿ ಕೊಟ್ಟು ವೃದ್ಧಿಪಡಿಸಿ ಪರಿಶುದ್ಧಿಗೊಳಿಸಿ ಲೋಕೋತ್ತರ ಞಾನದಿಂದ ನಿಬ್ಬಾಣವನ್ನು ಹೊಂದುತ್ತಾನೆ. ಆನಂತರದಲ್ಲಿ ಮನಸ್ಸು ಪಾರಮಾರ್ಥಿಕವಾಗಿ ಪರಿವರ್ತನೆಯಾಗುತ್ತದೆ. ಹಾಲು ತುಪ್ಪವಾಗಿ ಪರಿವರ್ತಿತವಾದ ಮೇಲೆ ಮರಳಿ ಹಾಲಿನ ಸ್ಥಿತಿಗೆ ಬರದು, ಅದು ಪರಿವರ್ತನೆಯಾಯಿತು. ಹೀಗೆ ಪಾರಮಾರ್ಥಿಕ ಪರಿವರ್ತನೆಯಾದಾಗಲೂ ಮತ್ತೆ ಮತ್ತೆ ಹುಟ್ಟುವುದನ್ನು

ತಡೆಗಟ್ಟುತ್ತದೆ. ಅಂದರೆ ಕಮ್ಮ ಪುನರ್ಜನ್ಮಗಳ ಚಕ್ರ ನಿಂತು ಹೋಗುತ್ತದೆ. ಒಮ್ಮೆ ಮನಸ್ಸು ಪರಿವರ್ತನೆಗೊಂಡು ಕಮ್ಮಚಕ್ರವು ಪೂರ್ಣವಾಗಿ ನಾಶವಾದರೆ ಅಮರತ್ವ ಪ್ರಾಪ್ತಿಯು ಸಹಜವಾಗಿ ಆಗುತ್ತದೆ.

ಇದು ಬೌದ್ಧ ನಿಲುವು. ಅಂದರೆ ದೇವರನ್ನು ಒಂದು ಜೀವಿ ಎಂದು ಬೌದ್ಧರು ಒಪ್ಪಿಕೊಳ್ಳುತ್ತಾರೆ. ಕಾರಣ, ಅದು ಅಸ್ತಿತ್ವದಲ್ಲಿದೆ ಮತ್ತು ಆ ದಿವ್ಯ ಅಸ್ತಿತ್ವವನ್ನು ಭಕ್ತಿ ಗೌರವಗಳಿಂದ ನೋಡುತ್ತಾರೆ. ಆದರೆ ದೇವರು ಸೃಷ್ಟಿಕರ್ತ ಎಂಬುದೊಂದು ಊಹಾತ್ಮಕ ಸಿದ್ಧಾಂತ. ಒಂದು ಪರಿಕಲ್ಪನೆ ಅಥವಾ ಮನೋನಿರ್ಮಿತಿ. ಈ ಪರಿಕಲ್ಪನೆಯನ್ನು ಒಂದು ಧರ್ಮದ ನಂಬಿಕೆಯಾಗಿ ತೆಗೆದುಕೊಂಡಾಗ, ಪೀಳಿಗೆಯಿಂದ ಪೀಳಿಗೆಯ ಜನ ಇದನ್ನು ಮುಂದುವರಿಸಿಕೊಂಡು ಹೋಗಿ ಧರ್ಮದ ಭದ್ರ ಬುನಾದಿಯನ್ನೇ ಹಾಕುತ್ತಾರೆ.

ಸ್ಪಷ್ಟ ಮಾತುಗಳಲ್ಲಿ ಹೇಳಬೇಕೆಂದರೆ ಬೌದ್ಧ ಧರ್ಮವು ಒಂದು ಪಾರಮಾರ್ಥಿಕ ಪಥ, ಅದು ಕೇವಲ ಧರ್ಮವಲ್ಲ. ಯಾವುದೋ ಒಂದು ಸಿದ್ಧಾಂತ ಅಥವಾ ರೂಢಮೂಲವಾದ ನಂಬಿಕೆಗೆ ಒಳಗಾಗಿ ಅನುಸರಿಸುವುದಲ್ಲ. ಪರಿಶುದ್ಧಿಗೊಳಿಸಿ ಎಲ್ಲ ಅತಿರೇಕಗಳನ್ನು ವರ್ಜಿಸುವುದು. ಆದ್ದರಿಂದ ಬೌದ್ಧ ಧರ್ಮವನ್ನು ಮನೋವಿಜ್ಞಾನವೆಂದು ಕರೆಯಬಹುದು. ಲೋಭ, ಮೋಹ, ದ್ವೇಷಗಳನ್ನು; ಅಲೋಭ, ಅಮೋಹ, ಅದ್ವೇಷಗಳಿಂದ ಕಿತ್ತುಹಾಕಿ ಹೇಗೆ ಆ ಮನಸ್ಸನ್ನು ಶುದ್ಧಿಮಾಡಬಹುದು ಎಂಬುದನ್ನು ಈ ಧಮ್ಮ ಹೇಳುತ್ತದೆ. ಲೋಭ-ಅಲೋಭ ಇತ್ಯಾದಿ ಜೋಡಿಗಳು ಮಾನಸಿಕ ಕಮ್ಮ ಹೇತುಗಳಾಗಿರುವುದರಿಂದ ಪುನಃ ಪುನಃ ಹುಟ್ಟಿ ಬರುವುದನ್ನೇ ಹೇಳುತ್ತವೆ. ಅಕುಶಲಕಮ್ಮ ಹೇತುಗಳು ದುರ್ಗತಿಯಲ್ಲಿ ಹುಟ್ಟುವಂತೆ ಮಾಡಿ ನೋವನ್ನು ಅನುಭವಿಸುವಂತೆ ಮಾಡಿದರೆ, ಕುಶಲ ಕಮ್ಮಗಳು ಮಾನವ ದೇವಲೋಕಗಳಲ್ಲಿ ಹುಟ್ಟಿ ಸುಖವನ್ನನುಭವಿಸುವಂತೆ ಮಾಡುವುವು. ಅಮರತ್ವದ ಈ ನಿಬ್ಬಾಣವು ಒಳ್ಳೆಯ-ಕೆಟ್ಟ ಎರಡನ್ನೂ ಮೀರಿರುವಂತಹುದು. ಇರುವ ಎಲ್ಲದಿರುವ ಎರಡೂ ಅಸ್ತಿತ್ವಗಳನ್ನು ಮೀರಿರುವಂತಹುದು. ಅಂದರೆ ತರ್ಕಕ್ಕೆ ಸಿಕ್ಕುವ ನಾಲ್ಕು ಅಸ್ತಿತ್ವ ವರ್ಗಗಳಾದ ಅಸ್ತಿತ್ವ, ಅಸ್ತಿತ್ವದಲ್ಲಿ ಇಲ್ಲದ, ಅಸ್ತಿತ್ವವೂ ಅಲ್ಲದ ಅಸ್ತಿತ್ವದಲ್ಲಿ ಇಲ್ಲದಿರುವುದೂ ಅಲ್ಲದ, ಅಸ್ತಿತ್ವ ಮತ್ತು ಅಸ್ತಿತ್ವವಲ್ಲದ ಎರಡೂ – ಈ ನಾಲ್ಕು ಸ್ಥಿತಿಗಳನ್ನೂ ಮೀರಿರುವಂತಹುದು.

ಒಬ್ಬ ಬೌದ್ಧನಾದವನು ದೇವರ ಅಥವಾ ಸೃಷ್ಟಿಕರ್ತ ದೇವರ ಬಗೆಗಿನ ಪರಿಕಲ್ಪನೆ ಮತ್ತು ದೇವರೂ ಒಬ್ಬ ಜೀವಿ ಎನ್ನುವ ವಾಸ್ತವ ಸಂಗತಿ. ಹಾಗೆಯೇ ಹಲವಾರು ದಿವ್ಯಲೋಕಗಳು ಇರುವುದನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕು. ಒಮ್ಮೆ ಇದು ಚೆನ್ನಾಗಿ ಮನದಟ್ಟಾಯಿತೆಂದರೆ ಆಸ್ತಿಕ-ನಾಸ್ತಿಕ ವಿಚಾರದ ಗೊಂದಲವಿರುವುದಿಲ್ಲ.

– ೦೦೦ – ೦೦೦ – ೦೦೦ –

# ಅಧ್ಯಾಯ-7

# ಪಟಿಚ್ಚ ಸಮುಪ್ಪಾದ

**ಪಟಿಚ್ಚ ಸಮುಪ್ಪಾದ**

ಬುದ್ಧರು ಬೋಧಿಸಿದ ಧಮ್ಮದ ತಿರುಳೇ ಪಟಿಚ್ಚ ಸಮುಪ್ಪಾದ. ಪಟಿಚ್ಚ ಸಮುಪ್ಪಾದ ಎಂದರೆ ಎಲ್ಲ ಅವಲಂಬಿತ ಸ್ಥಿತಿಗಳು ನಾಮರೂಪಗಳಿಂದಲೇ ಉದಯವಾಗುವಂಥದ್ದು ಎಂದು. ಇಡೀ ಲೋಕವೆಲ್ಲ ಅಥವಾ ಏನೆಲ್ಲ ಇಂದ್ರಿಯ ಗೋಚರವಾದ ಅಸ್ತಿತ್ವವು ಮತ್ತು ಅದರೊಳಗೆ ವಾಸಿಸುವ ಅಸಂಖ್ಯ ಜೀವಿಗಳನ್ನು ನಾಮ (ಮನಸ್ಸು), ರೂಪ (ಶರೀರ)ಕ್ಕೆ ತಂದು ನಿಲ್ಲಿಸಬಹುದು. ಯಾವುದೆಲ್ಲವೂ ಜೀವ ತಳೆದಿದೆಯೋ ಅದೆಲ್ಲವೂ ಕಾರ್ಯಕಾರಣ ಸಂಬಂಧ (ಇದಪ್ಪಚ್ಚಯತಾ) ದಿಂದಲೇ ಬಂದಿದೆ ಎಂಬುದನ್ನು ಪಟಿಚ್ಚ ಸಮುಪ್ಪಾದದಲ್ಲಿ ವಿವರವಾಗಿ ಹೇಳಿದೆ.

ಆದ್ದರಿಂದ 'ಪಟಿಚ್ಚಾ ಸಮುಪ್ಪಾದ'ವನ್ನು 'ಸಂಸಾರ ಚಕ್ರ' (ಪುನಃ ಪುನಃ ಹುಟ್ಟುವುದು) ಎಂದು ಕರೆಯುತ್ತಾರೆ. ಇದರಲ್ಲಿ ಹನ್ನೆರಡು ಹೇತುಗಳು ಅಥವಾ ಕೊಂಡಿಗಳು (ಪಚ್ಚಯಗಳು) ಇದ್ದು ಹನ್ನೊಂದು ಕಾರಣಗಳಿಗೆ ಸಂಬಂಧಪಟ್ಟಿವೆ. ಈ ಸಂಬಂಧಗಳು ಜೀವಿಗಳು ಹೇಗೆ ಪೂರ್ವ ಕಮ್ಮಗಳಿಗೆ ಬದ್ಧವಾಗಿವೆ ಮತ್ತು ಹುಟ್ಟಿ ಬದುಕು ಹೇಗೆ ಕಮ್ಮ ಮತ್ತು ಬುದ್ಧಿಪೂರ್ವಕ ಕಾರ್ಯಗಳಿಂದ ಮುಂದುವರಿಯುತ್ತವೆ ಮತ್ತು ಭವಿಷ್ಯ ಜೀವನದ ಅಸ್ತಿಭಾರವನ್ನು ಈಗಲೇ ಹೇಗೆ ಹಾಕುತ್ತವೆ ಎಂಬುದನ್ನು ಹೇಳುತ್ತವೆ. ಪಟಿಚ್ಚ ಸಮುಪ್ಪಾದವು ಜೀವನದ ಹುಟ್ಟು ಮತ್ತು ಸಾವುಗಳು ಭೂತ ವರ್ತಮಾನ ಭವಿಷ್ಯತ್ ಕಾಲಗಳಲ್ಲಿ ಜೀವನವು ಹೇಗೆ ಘಟಿಸುತ್ತದೆ ಎಂಬ ವಿಧಾನವನ್ನು ವರ್ಣಿಸುತ್ತದೆ.

ಪಾಳಿ ಗ್ರಂಥವಾದ 'ಉದಾನ'ದ ಮೊದಲ ಸುತ್ತದಲ್ಲಿ ಭಗವಾನ್ ಬುದ್ಧರು ಪಟಿಚ್ಚ ಸಮುಪ್ಪಾದವನ್ನು ಸ್ಪಷ್ಟವಾಗಿ ಉಪದೇಶಿಸಿದ್ದಾರೆ. ಗ್ರಂಥದ ಪ್ರಕಾರ ಬುದ್ಧರು ಜ್ಞಾನೋದಯ ಹೊಂದಿದ ತಕ್ಷಣ ಧ್ಯಾನ ಮಗ್ನರಾಗಿ ಬೋಧಿಮರದಡಿಯಲ್ಲಿ ನಿಬ್ಬಾಣ ಸುಖವನ್ನು ಅನುಭವಿಸುತ್ತಾ ಒಂದು ವಾರ ಕಳೆಯುತ್ತಾರೆ. ಇಡೀ ದಿನವನ್ನು ಸಮಾಧಿಯಲ್ಲಿ ಕಳೆದ ಮೇಲೆ ಜಾಗ್ರತರಾಗಿ ರಾತ್ರಿಯ ಮೊದಲ ಜಾವದಲ್ಲಿ ಪಟಿಚ್ಚ ಸಮುಪ್ಪಾದ ನಿಯಮದ ಮೇಲೆ ಧ್ಯಾನಿಸುತ್ತಾರೆ. ಸುತ್ತವು ನಿಯಮವನ್ನು ಹೀಗೆ ವಿವರಿಸುತ್ತದೆ;

"ಇತಿ ಇಮಸ್ಮಿಂ ಸತಿ ಇದಂ ಹೋತಿ; ಇಮಸ್ಸುಪಾದಾ ಇದಂ ಉಪ್ಪಜ್ಜತಿ, ಯದಿದಂ."

1. ಅವಿಜ್ಜಾ ಪಚ್ಚಯಾ ಸಂಖಾರಾ;
2. ಸಂಖಾರ ಪಚ್ಚಯಾ ವಿಞ್ಞಾಣಂ;

3. ವಿಞ್ಞಾಣ ಪಚ್ಚಯಾ ನಾಮರೂಪಂ;
4. ನಾಮರೂಪ ಪಚ್ಚಯಾ ಸಳಾಯತನಂ;
5. ಸಳಾಯತನ ಪಚ್ಚಯಾ ಫಸ್ಸೊ;
6. ಫಸ್ಸ ಪಚ್ಚಯಾ ವೇದನಾ;
7. ವೇದನಾ ಪಚ್ಚಯಾ ತಣ್ಹಾ;
8. ತಣ್ಹಾ ಪಚ್ಚಯಾ ಉಪಾದಾನಂ;
9. ಉಪಾದಾನ ಪಚ್ಚಯಾ ಭವೋ;
10. ಭವ ಪಚ್ಚಯಾ ಜಾತಿ;
11. ಜಾತಿ ಪಚ್ಚಯಾ ಜರಾ-ಮರಣ-ಸೋಕ-ಪರಿದೇವ-ದುಕ್ಖ-ದೋಮನಸ್ಸ-ಉಪಾಯಾಸಾ ಸಂಭವಂತಿ.

"ಏವಮೇತಸ್ಸ ಕೇವಲಸ್ಸ ದುಕ್ಖಕ್ಖಂದಸ್ಸ ಸಮುದಯೋ ಹೋತಿ."

"ಯಾವಾಗ ಇದು ಅಸ್ತಿತ್ವಕ್ಕೆ ಬರುತ್ತದೋ ಆಗ ಅದು ಹುಟ್ಟುತ್ತದೆ; ಇದು ಹುಟ್ಟುವುದರಿಂದ ಅದು ಕೂಡ ಅಸ್ತಿತ್ವಕ್ಕೆ ಬರುತ್ತದೆ ಈ ರೀತಿಯಲ್ಲಿ :

1. ಅವಿದ್ಯೆಯು ಹೇತುವಾಗಿ (ಕಾರಣವಾಗಿ) ಸಂಖಾರಗಳು ಮನಸಾ ಇಚ್ಛೆಯಿಂದ ಆಗುವ ಕಮ್ಮಗಳು) ಆಗುತ್ತವೆ.
2. ಸಂಖಾರಗಳ ಹೇತುವಿನಿಂದಾಗಿ ವಿಞ್ಞಾಣ (ಪುನರ್ಜನ್ಮ ಚಿತ್ತ)ವು ಆಗುತ್ತದೆ.
3. ವಿಞ್ಞಾಣದ ಹೇತುವಿನಿಂದಾಗಿ ನಾಮರೂಪಗಳು (ಮನಸ್ಸು ಮತ್ತು ಶರೀರ) ಆಗುತ್ತವೆ.
4. ನಾಮರೂಪಗಳ ಹೇತುವಿನಿಂದಾಗಿ ಆರು ಆಯತನಗಳು (ಪಂಚೇಂದ್ರಿಯಗಳು ಮತ್ತು ಮನಸ್ಸು) ಆಗುತ್ತವೆ.
5. ಆರು ಆಯತನಗಳ ಹೇತುವಿನಿಂದಾಗಿ ಸ್ಪರ್ಶ ಉಂಟಾಗುತ್ತದೆ.
6. ಸ್ಪರ್ಶ ಹೇತುವಿನಿಂದಾಗಿ ವೇದನೆ (ಅನುಭವ) ಯಾಗುತ್ತದೆ.
7. ವೇದನೆ ಹೇತುವಿನಿಂದಾಗಿ ತಣ್ಹಾ (ಆಸೆ) ಹುಟ್ಟುತ್ತದೆ.
8. ತಣ್ಹಾ ಹೇತುವಾಗಿ ಉಪಾದಾನ (ಆಸೆಗಳಿಗೆ ಅಂಟಿಕೊಳ್ಳುವುದು) ವಾಗುತ್ತದೆ.
9. ಉಪಾದಾನ ಹೇತುವಾಗಿ ಭವ (ಅಸ್ತಿತ್ವಕ್ಕೆ ಬರುವುದು) ಆಗುತ್ತದೆ.
10. ಜಾತಿ ಹೇತುವಾಗಿ ಜಾತಿ (ಹುಟ್ಟು) ಆಗುತ್ತದೆ.
11. ಜಾತಿ ಹೇತುವಾಗಿ ವೃದ್ಧಾಪ್ಯ, ಮರಣ, ಶೋಕ, ಪರಿತಾಪ, ದುಃಖ, ನಿರುತ್ಸಾಹ, ಹತಾಶೆಗಳು ಆಗುತ್ತವೆ.

ಹೀಗೆ ದುಃಖ ಸಮೂಹವೇ ಹುಟ್ಟುತ್ತದೆ.

## ಸಂಸಾರ ಚಕ್ರ

ಪಟಿಚ್ಚ ಸಮುಪ್ಪಾದವು ಹಿಂದಿನ ಇಂದಿನ ಮತ್ತು ಮುಂದಿನ ಜನ್ಮಗಳ ನಡುವಿನ ಸಂಬಂಧದ ಸ್ಪಷ್ಟ ಚಿತ್ರಣವನ್ನು ಕೊಡುತ್ತದೆ. ಬದುಕನ್ನು ಹೇಗಿದೆಯೋ ಹಾಗೆ ಅಂದರೆ ಯಾವುದೇ ಸಿದ್ಧಾಂತಗಳ ಆಶ್ರಯವಿಲ್ಲದೆ ಬಿಂಬಿಸಲಾಗಿದೆ. ಬದುಕು ಎನ್ನುವುದು



ನಿರಂತರವಾಗಿ ಆಗುತ್ತಲೇ ಇರುವಂತಹ ಕ್ರಿಯಾತ್ಮಕ ಸ್ಥಿತಿ, ನಿಂತ ನೀರಲ್ಲ, ಬದಲಾಗದೇ ಇರುವಂತಹ ಜೀವವಲ್ಲ ಅಥವಾ ಒಂದೇರೀತಿ ಇರುವಂತಹುದೂ ಅಲ್ಲ.

ನಿರಂತರವಾಗಿ ಬದಲಾಗುತ್ತಲೇ ಇರುವ ಬದುಕನ್ನು 'ಭವ' ಎಂದು ಸೂಕ್ತವಾಗಿಯೇ ಕರೆಯಲಾಗಿದೆ. ಭವದಲ್ಲಿ ಎರಡು ಭಿನ್ನ ವಿಧಾನಗಳೇ ಇವೆ:

1. ಕಮ್ಮಭವ; 2. ಉಪಪತ್ತಿಭವ. ಮೊದಲನೆಯದು ಭವದ (ಆಗುವುದರ) ಪ್ರತ್ಯಕ್ಷ ರೂಪವನ್ನು ವ್ಯಕ್ತಪಡಿಸಿದರೆ, ಎರಡನೆಯದು ಅದರ ಪರೋಕ್ಷ ರೂಪವನ್ನು ವ್ಯಕ್ತಪಡಿಸುತ್ತದೆ. ರಥದ ಚಕ್ರವು ತಿರುಗುತ್ತಿದ್ದರೆ ಚಕ್ರದ ಅರ್ಧಭಾಗ ಮೇಲಿದ್ದಾಗ ಉಳಿದರ್ಧಭಾಗವು ಕೆಳಗಿರುತ್ತದೆ. ಎರಡು ವಿರುದ್ಧ ಚಲನೆಗಳು ಏಕಕಾಲಕ್ಕೆ ಸಂಭವಿಸುತ್ತವೆ. ಹೀಗೆ ಬದುಕೆಲ್ಲಾ ದ್ವಂದ್ವವೇ. ಪ್ರತ್ಯಕ್ಷ ಪರೋಕ್ಷ ಸಂಗತಿಗಳೂ ಹಾಗೆಯೇ.

ಪಟಿಚ್ಚ ಸಮುಪ್ಪಾದವು ಹಿಂದಿನ ಈಗಿನ ಮತ್ತು ಮುಂದೆ ಬರುವ ಜನ್ಮಗಳ ಸಂಬಂಧವನ್ನು ತೋರಿಸಿ ಒಂದು ಇನ್ನೊಂದನ್ನು ಹೇಗೆ ಮುಂದುವರೆಸಿಕೊಂಡು ಹೋಗುತ್ತದೆ ಎನ್ನುವ ಕೊನೆ ಇಲ್ಲದ ಸಾಂಸಾರಿಕ ಚಕ್ರವನ್ನು ವಿವರಿಸುತ್ತದೆ. ನದಿ ಕೆಲವು ಜಾಗಗಳಲ್ಲಿ ಜಾಗ್ರತವಾಗಿ ಕಾಣಿಸಿಕೊಳ್ಳುತ್ತ ಇನ್ನು ಕೆಲವೆಡೆ ಕಾಣದಂತೆ ಒಳಗೆಲ್ಲೋ ಇರುವಂತೆ ಭವ ಎನ್ನುವುದು ನಿರಂತರವಾಗಿ ಬದಲಾಗುತ್ತಿರುವ ಚಲನಶೀಲವಾಗಿಯೋ ಅಂತರ್‌ವಾಹಿನಿಯಾಗಿಯೋ ಇರುತ್ತದೆ. ಕಮ್ಮಭವ ಮತ್ತು ಉಪಪತ್ತಿ ಭವಗಳೂ (ಪುನರ್ಜನ್ಮ) ಕೂಡ ಪ್ರತ್ಯಕ್ಷ ಮತ್ತು ಪರೋಕ್ಷ ಆಗುವಿಕೆಗಳು. ಒಂದಾದರ ಮೇಲೊಂದು ಉದಿಸುವ ಮೂರು ಜನ್ಮಗಳಿಗೆ ಸಂಬಂಧಪಟ್ಟ ಹನ್ನೆರಡು ಹೇತುಗಳನ್ನು ಮತ್ತದರೊಡನೆ ಇಡೀ ಸಂಸಾರ ಚಕ್ರವನ್ನು ಈ ಕೆಳಗಿನ ಕೋಷ್ಠಕದಲ್ಲಿ ಕೊಡಲಾಗಿದೆ:

**ಪಟಿಚ್ಚ ಸಮುಪ್ಪಾದ**

| | | | |
|---|---|---|---|
| ಭೂತ ಕಾಲ | 1. ಅವಿದ್ಯೆ<br>2. ಸಂಖಾರ | ಕಮ್ಮಭವ<br>ಐದು ಕಾರಣಗಳು:<br>1, 2, 8, 9, 10 | ಪ್ರತ್ಯಕ್ಷ ಸಂಗತಿ |
| ವರ್ತಮಾನ ಕಾಲ | 3. ವಿಞ್ಞಾಣ<br>4. ನಾಮರೂಪ<br>5. ಆಯತನ<br>6. ಫಸ್ಸ<br>7. ವೇದನಾ | ಉಪಾದಾನಭವ<br>ಐದು ಫಲಿತಗಳು<br>3 ರಿಂದ 7 | ಪರೋಕ್ಷ ಸಂಗತಿ |
| | 8. ತಣ್ಹಾ<br>9. ಉಪದಾನ<br>10 ಭವ | ಕಮ್ಮಭವ<br>ಐದು ಕಾರಣಗಳು:<br>1, 2, 8, 9, 10 | ಪ್ರತ್ಯಕ್ಷ ಸಂಗತಿ |
| ಭವಿಷ್ಯತ್ ಕಾಲ | 11. ಜಾತಿ (ಪುನರ್ಜನ್ಮ<br>12. ಜರಾ-ಮರಣ | ಉಪಪತ್ತಿ ಭವ<br>ಐದು ಫಲಿತಗಳು<br>3 ರಿಂದ 7 | ಪರೋಕ್ಷ ಸಂಗತಿ |

ಕಮ್ಮಭವ ಮತ್ತು ಉಪಪತ್ತಿ ಭವಗಳು ಚಕ್ರದ ರೀತಿಯಲ್ಲಿರುವುವು. ಅವು ಋತುಮಾನಗಳು ಬದಲಾಗುವಂತೆ ಒಂದು ಇನ್ನೊಂದನ್ನು ಹಿಂಬಾಲಿಸುತ್ತವೆ. ಚಳಿಗಾಲ ಬಂತೆಂದರೆ ಹೂ-ಎಲೆಗಳು ಒಣಗಿ ಉದುರುತ್ತವೆ. ಮರ ಬೋಡು ಬೋಡಾಗಿ ಕಾಣುತ್ತದೆ. ಮತ್ತೆ ವಸಂತ ಬಂದಿತೆಂದರೆ ಚಿಗುರು ಮೂಡಿ ಮೊಗ್ಗುಗಳಾಗಿ ಹೂವರಳುತ್ತವೆ. ಪ್ರತಿ ಮರವೂ ಮೈದುಂಬಿಕೊಂಡು ನಳನಳಿಸುತ್ತವೆ. ಮತ್ತೆ ಋತು ಬಂದಾಗ ಹೂವು-ಎಲೆಗಳು ಉದುರಿ ಹೋಗುತ್ತವೆ. ಈ ಎರಡು ಒಂದು ಚಲನಶೀಲ ಇನ್ನೊಂದು ಜಡ-ವಿಧಾನಗಳು ಮನುಷ್ಯನ ಬದುಕಿನಲ್ಲಿ ಬರುತ್ತವೆ. ಪುನರ್ಜನ್ಮದೊಳಗೆಯೇ ಹಲವಾರು ವಿಷಯಗಳು ಉದ್ಭವವಾಗಿ ಬೆಳೆದು ಪರೋಕ್ಷವಾಗಿ ಕೆಲಸ ಮಾಡುತ್ತಿರುತ್ತವೆ. ಒಳಗಿನ ಇಂದ್ರಿಯಗಳು ಮತ್ತು ಹೊರಗಿನ ಅಥವಾ ಪ್ರಪಂಚದ ನಡುವೆ ಸಂಪರ್ಕವಾಗಿ ಹಲವಾರು ಸಂಗತಿಗಳು ಕಮ್ಮ ಭವಗಳ ಮೂಲಕ ಅಸ್ತಿತ್ವಕ್ಕೆ ಬಂದು ಉಪಪತ್ತಿ ಭವಕ್ಕೆ ಸೂಕ್ತವಾದ ಭೂಮಿಕೆಯನ್ನು ಸೃಷ್ಟಿಮಾಡಿ ಹೀಗೆ ಆಗುತ್ತಲೇ ಇರುತ್ತವೆ.

## ಮೂರು ವೃತ್ತಗಳು

ಚಕ್ರ ಎನ್ನುವುದು ಮತ್ತೆ ಮತ್ತೆ ಹುಟ್ಟುವ ಸಂಸಾರಕ್ಕೆ ಬಳಸಲಾದ ರೂಪಕ. ಹೇಗೆ ಚಕ್ರವೊಂದು ಶಕ್ತಿ ಅಥವಾ ಚೈತನ್ಯದ ನೆರವಿನಿಂದ ಸುತ್ತುತ್ತಾ ಇರುತ್ತದೋ ಮತ್ತು ಯಾವಾಗ ಆ ಶಕ್ತಿಯ ನೆರವು ನಿಂತಾಗ ನಿಲ್ಲುತ್ತದೋ ಹಾಗೆಯೇ ಪಟಿಚ್ಚ ಸಮುಪ್ಪಾದದ ಹನ್ನೆರಡು ಹೇತುಗಳು ಅಥವಾ ಕಾರಣಬದ್ಧ ಸ್ಥಿತಿಗಳೆಂಬ ಶಕ್ತಿಯಿಂದ ಬದುಕು ನಿರಂತರವಾಗಿ ಸಾಗುತ್ತಲೇ ಇರುತ್ತದೆ.

ಹಿಂದಿನ ಜನ್ಮದ ಕಮ್ಮಭವಗಳಿಂದಾಗಿ ಒಬ್ಬನು ಹುಟ್ಟುತ್ತಾನೆ. ಈ ಕಮ್ಮಭವಗಳು ಪುನಃ ಅವಿದ್ಯೆ ಮತ್ತು ಅದಕ್ಕೆ ಅಂಟಿಕೊಂಡ ತಣ್ಹಾದಿಂದಲೇ ಆದುವು. ಒಂದು ಇನ್ನೊಂದಕ್ಕೆ ಪೂರಕ ಕ್ಲೇಶಗಳು ಕಮ್ಮಭವಕ್ಕೆ ನೀರುಣಿಸಿ ಬೆಳೆಸಿ ಪುನರ್ಜನ್ಮಕ್ಕೆ ಕಾರಣವಾಗುತ್ತವೆ. ಕಾರಣಬದ್ಧ ಸ್ಥಿತಿಗಳನ್ನು ನಿರ್ಮಾಣ ಮಾಡುವ ಮೂರು ವಿಭಿನ್ನ ಕೇಂದ್ರಗಳಿವೆ. ಇವುಗಳನ್ನು ವೃತ್ತಗಳೆಂದು ಕರೆಯುತ್ತಾರೆ. ಕ್ಲೇಶ ವೃತ್ತವು ಅವಿದ್ಯೆ ತಣ್ಹಾಗಳಿಂದ ರೂಪುಗೊಂಡಿದೆ. ಕಮ್ಮ ವೃತ್ತವು ಸಂಖಾರದಿಂದ ರೂಪುಗೊಂಡಿದೆ. ಮೂರನೆಯದಾದ ವಿಪಾಕ ವೃತ್ತವು ಮೊದಲನೇ ಹೇತುವದ ವಿಞ್ಞಾಣ (ಪುನರ್ಜನ್ಮ ಚಿತ್ತ) ಮತ್ತು ಸಂಸಾರ ಚಕ್ರದ ಹನ್ನೊಂದನೆಯ ಹೇತುವಾದ ಹುಟ್ಟು (ಜಾತಿ) ನಿಂದ ರೂಪುಗೊಂಡಿದೆ.

ಗಡಿಯಾರದ ಮೂರು ಮುಳ್ಳುಗಳು ಇದ್ದಂತೆ ಸೆಕೆಂಡಿನ ಮುಳ್ಳು, ನಿಮಿಷಕ್ಕೂ, ನಿಮಿಷದ ಮುಳ್ಳು ಗಂಟೆಗೂ ನಿರಂತರವಾಗಿ ಚಲನೆ ನೀಡಿ ಗಡಿಯಾರವನ್ನು ನಿರಂತರವಾಗಿ ನಡೆಯುವಂತೆ ಮಾಡುತ್ತದೆ. ಅದೇರೀತಿಯಲ್ಲಿ ಈ ಮೂರು ವೃತ್ತಗಳೂ ಜೀವನ ಚಕ್ರವನ್ನು ಚಾಲನಶೀಲವಾಗಿ ಇಟ್ಟಿರುತ್ತವೆ. ಕ್ಲೇಶಗಳು ಸಂಖಾರಗಳಿಗೆ ನೀರೆರೆದರೆ ಆ ಸಂಖಾರಗಳು ಪುನರ್ಜನ್ಮಕ್ಕೆ ಆಹಾರವಾಗುತ್ತವೆ. ಜನ್ಮದಿಂದ ಜನ್ಮಕ್ಕೆ ಚಲಿಸುತ್ತಾ ಅಂದರೆ ಇಲ್ಲಿ ಹುಟ್ಟುತ್ತೇವೆ, ಹುಟ್ಟಿದ ಕಾರಣಕ್ಕಾಗಿ ಸಾಯುತ್ತೇವೆ ಮತ್ತು ಎಲ್ಲಿಯೋ



ಹುಟ್ಟುತ್ತೇವೆ. ಹೀಗೆ ಮತ್ತೆ ಮತ್ತೆ ಘಟಿಸುವ ಜೀವನ ಚಕ್ರವನ್ನು ಹೇತುಬದ್ಧವಾದ (ಕಾರಣಬದ್ಧವಾದ) ಅಸ್ತಿತ್ವವು ಮುಂದಕ್ಕೆ ಹಾಕುತ್ತಲೇ ಇರುತ್ತದೆ.

ಕೊನೆಯಿಲ್ಲದ, ಗುರಿಯಿಲ್ಲದೆ ಸಾಗುವ ಸಂಸಾರದ ಪರಿಯೇ ಮೊದಲ ಆರ್ಯಸತ್ಯ 'ದುಃಖ". ತಣ್ಹಾದಿಂದೊಡಗೂಡಿದ ಅವಿದ್ಯೆ ಅರ್ಥಾತ್ 'ಸಂಸಾರ' ಎಂಬ ಮೊದಲ ಕ್ಲೇಶವೃತ್ತ 'ದುಃಖ ಸಮುದಯ' (ದುಃಖದ ಕಾರಣ)ವೇ ಎರಡನೇ ಆರ್ಯಸತ್ಯ. ಇ ಸಾಂಸಾರಿಕ ಚಕ್ರ ಸ್ವಯಂ ನಿರ್ವಹಣೆಯ ತಂತ್ರವನ್ನು ಹೊಂದಿದೆ. ಬೇರೆ ಬೇರೆ ಹೇತುಗಳ ದೆಸೆಯಿಂದ ಚಾಲನೆಗೊಳ್ಳುತ್ತದೆ. ಯಾವುದೇ ಸೃಷ್ಟಿಕರ್ತ ದೇವರು ಅಥವಾ ದಿವ್ಯಶಕ್ತಿ ಬದುಕನ್ನು ಸೃಷ್ಟಿಸುವುದಾಗಲಿ ನಿರಂತರವಾಗಿ ಕಾಪಾಡುವುದಾಗಲಿ ಇಲ್ಲ. ಬದುಕಿನ ಮೂಲವು ಅಸ್ತಿತ್ವಕ್ಕೆ ಬರಬೇಕೆನ್ನುವ ತಣ್ಹಾದಲ್ಲಿ ಮತ್ತು ಅದರ ನಿರಂತರ ಓಟವು ಒಂದು ಇನ್ನೊಂದನ್ನು ಮೂರು ವೃತ್ತಗಳ ಹೇತುಗಳಲ್ಲಿ ಅಥವಾ ಕಾರಣಬದ್ಧ ಸ್ಥಿತಿಗಳಲ್ಲಿ ಅಡಿಗಿಸಿದೆ. ಬೌದ್ಧ ಧರ್ಮವು ಸೃಷ್ಟಿಕರ್ತ ದೇವರು ಅಥವಾ ವ್ಯಕ್ತಿರೂಪದ ದೇವರು ಈ ಬದುಕಿಗೆ ಮೂಲ ಎಂಬುದನ್ನು ಅಲ್ಲಗಳೆಯುತ್ತದೆ. ಯಾಕೆಂದರೆ ಪಟಿಚ್ಚ ಸಮುಪ್ಪಾದ ನಿಯಮದಲ್ಲಿ ಹೇಳಿದಂತೆ ಬದುಕಿಗೆ ಸ್ವಯಂ ನಿರ್ವಹಣಾ ತಂತ್ರವಿದೆ. ಈ ರೀತಿಯ ಅಲ್ಲಗಳಿಕೆಯು ಸತ್ಯ ಮತ್ತು ವಾಸ್ತವಾಂಶಗಳ ಮೇಲೆ ನಿಂತಿದೆ, ಯಾವುದೇ ಬುದ್ಧಿ ಪ್ರಯೋಗ ನಿಲುವಲ್ಲ.

## ನಿರೋಧದ ವಿಧಾನ

ಬದುಕು ಅಥವಾ ಜೀವನ ಹೇಗೆ ತಳೆಯಿತು ಮತ್ತು ಮುಂದುವರಿಯುತ್ತದೆ ಎಂಬುದನ್ನು ಹೇತುಗಳ ದೆಸೆಯಿಂದ ಪಟಿಚ್ಚಾ ಸಮುಪ್ಪಾದವು ತಿಳಿಸಿತೋ ಹಾಗೆಯೇ ನಿರೋಧದ ವಿಧಾನವು ಹೇತುಮೂಲವಾದ ಈ ಸಂಸಾರವನ್ನು ಕೊನೆಗಾಣಿಸುವುದನ್ನು ಹೇಳುತ್ತದೆ. ಯಾವ ಕಾರಣಗಳು ಅಸ್ತಿತ್ವದ ಪುನರ್ಜನ್ಮಕ್ಕೆ ಪೂರಕವಾಗಿದ್ದವೋ, ಕಾರಣಗಳ ತಡೆಯೇ ಅಸ್ತಿತ್ವಗಳ ಸಮಾಪ್ತಿಗೆ ಪೂರಕವಾಗುತ್ತವೆ. ಅದೇ ಈ ನಿರೋಧ ನಿಯಮ. ಪಾಳಿ ಗ್ರಂಥ ಉದಾನದಲ್ಲಿ ಭಗವಾನ್ ಬುದ್ಧರು ಮೂರನೇ ಆರ್ಯಸತ್ಯವಾದ ದುಃಖ ನಿರೋಧ ಎಂದರೆ ಕಾರಣಬದ್ಧ ಸ್ಥಿತಿಗಳ ಮುಕ್ತಾಯ ಅಂದರೆ ನಿಬ್ಬಾಣ ಮತ್ತು ಆ ನಿಬ್ಬಾಣವನ್ನು ಪಡೆಯಲು ನಾಲ್ಕನೇ ಆರ್ಯಸತ್ಯವಾದ ಅಷ್ಟಾಂಗ ಮಾರ್ಗವನ್ನು ಈ ರೀತಿಯಾಗಿ ಹೇಳಿದ್ದಾರೆ:

## ನಿರೋಧ

1. ಅವಿಜ್ಜಾಯ ತ್ವೇವ ಅಸೇವ ವಿರಾಗ ನಿರೋಧಾ; ಸಂಖಾರಾ ನಿರೋಧೋ;
2. ಸಂಖಾರ ನಿರೋಧಾ, ವಿಞ್ಞಾಣ ನಿರೋಧೋ;
3. ವಿಞ್ಞಾಣ ನಿರೋಧಾ, ನಾಮರೂಪ ನಿರೋಧೋ;
4. ನಾಮರೂಪ ನಿರೋಧಾ, ಸಳಾಯತನ ನಿರೋಧೋ;

5. ಸಳಾಯತನ ನಿರೋಧಾ, ಫಸ್ಸ ನಿರೋಧೋ;
6. ಫಸ್ಸ ನಿರೋಧಾ, ವೇದನಾ ನಿರೋಧೋ;
7. ವೇದನಾ ನಿರೋಧಾ, ತಣ್ಹಾ ನಿರೋಧೋ;
8. ತಣ್ಹಾ ನಿರೋಧಾ, ಉಪಾದಾನ ನಿರೋಧೋ;
9. ಉಪದಾನ ನಿರೋಧಾ, ಭವ ನಿರೋಧೋ;
10. ಭವ ನಿರೋಧಾ, ಜಾತಿ ನಿರೋಧೋ;
11. ಜಾತಿ ನಿರೋಧಾ, ಜರಾ-ಮರಣ-ಸೋಕ-ಪರಿದೇವ-ದುಕ್ಖಾ-ದೋಮನಸ್ಸ-ಉಪಾಯಾಸಾ ನಿರುಜ್ಝಂತಿ.

ಏವಮೇತಸ್ಸ ಕೇವಲಸ್ಸ ದುಕ್ಖಕ್ಖಂದಸ್ಸ ನಿರೋಧೋ ಹೋತಿ.

## ನಿರೋಧಿಸುವ ವಿಧಾನ

1. ಅವಿದ್ಯೆಯ ನಾಶದಿಂದ ಅದಕ್ಕೆ ಕಟ್ಟುಬೀಳದಿರುವುದರಿಂದ ಮತ್ತು ಅದರ ನಿರೋಧದಿಂದ ಸಂಖಾರಗಳು ನಿಲ್ಲುತ್ತವೆ.
2. ಸಂಖಾರಗಳು ನಿಲ್ಲುವುದರಿಂದ ವಿಞಾಣವು ನಿಲ್ಲುತ್ತದೆ.
3. ವಿಞ್ಞಾಣವು ನಿಲ್ಲುವುದರಿಂದ ನಾಮರೂಪಗಳು ನಿಲ್ಲುತ್ತವೆ.
4. ನಾಮರೂಪಗಳು ನಿಲ್ಲುವುದರಿಂದ ಆರು ಆಯತನಗಳು ನಿಲ್ಲುತ್ತವೆ.
5. ಆರು ಆಯತನಗಳು ನಿಲ್ಲುವುದರಿಂದ ಸ್ಪರ್ಶವು ನಿಲ್ಲುತ್ತದೆ.
6. ಸ್ಪರ್ಶವು ನಿಲ್ಲುವುದರಿಂದ ವೇದನೆಯು (ಅನುಭವವು) ನಿಲ್ಲುತ್ತದೆ.
7. ಅನುಭವವು ನಿಲ್ಲುವುದರಿಂದ ತಣ್ಹಾ ನಿಲ್ಲುತ್ತದೆ.
8. ತಣ್ಹಾ ನಿಲ್ಲುವುದರಿಂದ ಉಪಾದಾನವು ನಿಲ್ಲುತ್ತದೆ.
9. ಉಪಾದಾನವು ನಿಲ್ಲುವುದರಿಂದ ಭವವು ನಿಲ್ಲುತ್ತದೆ.
10. ಭವವು ನಿಲ್ಲುವುದರಿಂದ ಹುಟ್ಟು ನಿಲ್ಲುತ್ತದೆ.
11. ಹುಟ್ಟು ನಿಲ್ಲುವುದರಿಂದ ವೃದ್ಧಾಪ್ಯ-ಮರಣ-ಶೋಕ-ಪರಿತಾಪ-ದುಃಖ-ನಿರಾಶೆ-ಹತಾಶೆಗಳು ನಿಲ್ಲುತ್ತವೆ.

ಹೀಗೆ ದುಃಖ ಸಮೂಹವೇ ನಿಂತು ಹೋಗುವ ಸ್ಥಿತಿ ಬರುತ್ತದೆ.

## ಎರಡು ಸ್ರೋತಗಳು

ಎರಡು ಸ್ರೋತ (ಹರಿವು) ಗಳಿವೆ: ಮತ್ತೆ ಮತ್ತೆ ಹುಟ್ಟುವ ಸ್ರೋತ (ಸಂಸಾರ) ಮತ್ತು ಕಾರಣಬದ್ಧ (ಅವಲಂಬಿತ) ಸ್ಥಿತಿಗಳಿಂದ ಬಿಡುಗಡೆಯಾದ ಸ್ರೋತ. ಪಟಿಚ್ಚ ಸಮುಪ್ಪಾದವು ಸಾಂಸಾರಿಕ ಅಥವಾ ಲೋಕೀಯ ಸ್ರೋತವನ್ನು ಪ್ರತಿಪಾದಿಸಿದರೆ,



ಇದರ ನಿರೋಧ ವಿಧಾನವು ನಿಬ್ಬಾಣ ಅಥವಾ ಲೋಕೋತ್ತರ ಸ್ರೋತವನ್ನು ಪ್ರತಿಪಾದಿಸುತ್ತದೆ.

ಹೇಗೆ ಈ ಲೌಕಿಕ ಅಸ್ತಿತ್ವವು ಹಲವಾರು ಸಂಗತಿಗಳ ಮೇಲೆ ಅವಲಂಬಿತ ವಾಗಿದೆಯೋ (ಸೃಷ್ಟಿಕರ್ತ ದೇವರು, ಇತ್ಯಾದಿ ಅಲ್ಲ). ಹಾಗೆಯೇ ಈ ಸಾಂಸಾರಿಕ ಅಥವಾ ಲೌಕಿಕ ಅಸ್ತಿತ್ವದಿಂದ, ಬಂಧನದಿಂದ ಬಿಡುಗಡೆಯಾಗಲು ನಿರೋಧ ವಿಧಾನವಿದೆ. ಇದಕ್ಕೆ ಹೊರಗಿನ ಶಕ್ತಿಗಳು ಅಂದರೆ ದೇವರು ಇತ್ಯಾದಿಗಳು ಬೇಕಿಲ್ಲ. ಇವುಗಳು ಇದ್ದರು ಒಬ್ಬನು ಶ್ರಮವನ್ನು ಹಾಕದಿದ್ದರೆ ಲೋಕೋತ್ತರ ಞಾಣ ಸಿದ್ಧಿಸಿಕೊಳ್ಳದಿದ್ದರೆ ಪಾರಮಾರ್ಥಿಕವಾದ ಮುಕ್ತಿ ದೊರೆಯದು.

ಬದುಕು ಎನ್ನುವುದು ಒಂದು ಪಯಣ, ಒಂದು ವಿಧಾನ. ಒಬ್ಬನು ಹುಟ್ಟಿ ಬದುಕಿನ ವಿವಿಧ ಹಂತಗಳಲ್ಲಿ ಪಯಣಿಸಿ ಕೊನೆಯಲ್ಲಿ ಸಾಯುತ್ತಾನೆ. ಬದುಕಿನ ನಿರಂತರ ಗತಿಶೀಲತೆಯನ್ನು ಸ್ರೋತವೆಂದು ಕರೆದಿರುವುದು ಸೂಕ್ತ. ಸ್ರೋತವೆಂದರೆ ಹರಿಯುವುದು, ಆ ನಿರಂತರ ಹರಿವಿನಲ್ಲಿಯೇ ನಿರಂತರವಾದ ಬದಲಾವಣೆ ಇದೆ. ಪಟಿಚ್ಚ ಸಮುಪ್ಪಾದವು ಪ್ರಮಾಣಕ್ಕೊಳಪಡುವ ನಿಯಮಗಳ ಮೇಲೆ ತತ್ತ್ವಗಳ ಮೇಲೆ ನಿಂತಿದ್ದು ಬದುಕಿನ ಓಟವನ್ನು ಒಂದು ಸ್ಥಿತಿಯಿಂದ ಇನ್ನೊಂದು ಸ್ಥಿತಿಗೆ ಹೋಗುವ ಗತಿವಿಧಾನವನ್ನು ವರ್ಣಿಸುತ್ತದೆ.

ಕಾರಣ ಯಾವುದೇ ಆಗಿರಲಿ, ಅದು ಖಂಡಿತವಾಗಿಯೂ ಅವಲಂಬಿತವೇ. ಕಾರಣವನ್ನೇ ಕಿತ್ತುಹಾಕಿದರೆ, ಏನು ಕಾರಣದಿಂದ ಹೊರಬರುತ್ತಿತ್ತೋ ಅದು ನಿಂತು ಹೋಗುತ್ತದೆ. ಮುಖ್ಯವಾಗಿ ತಿಳಿದುಕೊಳ್ಳಬೇಕಾಗಿರುವುದು ಕಾರಣ-ಕಾರ್ಯಗಳ ಸಂಬಂಧ, ಕೇವಲ ಲೌಕಿಕ ಅಸ್ತಿತ್ವವಲ್ಲ; ಲೋಕೋತ್ತರ ಸಮಾಪತ್ತಿಯನ್ನು (ಸಿದ್ಧಿಯನ್ನು) ಕೂಡ. ಬಂಧನ ಮತ್ತು ಬಿಡುಗಡೆಯ ಶ್ರೋತಗಳು – ಮಾನಸಿಕ ಮಲಿನತೆ ಮತ್ತು ಪರಿಶುದ್ಧಿ-ಇವೆರಡೂ ಗತಿಶೀಲತೆಯುಳ್ಳವುಗಳು.

ಈ ಬದುಕೆಂಬ ಪಯಣವು ಈ ಎರಡು ವಿಭಿನ್ನ ನಾಲೆಗಳಲ್ಲಿ – ಅಂದರೆ ಒಂದು ಮೇಲು ಹರಿವು ಇನ್ನೊಂದು ಕೆಳಹರಿವುಗಳಲ್ಲಿಯೇ ಹರಿಯಬೇಕು. ಕೆಳಹರಿವಿನಲ್ಲಿ ಸಾಗುವುದು ಶ್ರಮವಿಲ್ಲದ್ದು ಮತ್ತು ನಿರಾಯಾಸದ್ದು. ಆದರೆ ಅದು ಭಯಾನಕ ಸಮುದ್ರಕ್ಕೆ ಕೊಂಡೊಯ್ಯು ಅಲ್ಲಿ ಎತ್ತಿಹಾಕಿ ಗೊತ್ತುಗುರಿ ಇಲ್ಲದೆ ಒದ್ದಾಡುವುದಾಗಿರುತ್ತದೆ. ಇನ್ನು ಮೇಲು ಹರಿವಿನಲ್ಲಿ ಸಾಗುವುದೆಂದರೆ ಪ್ರಯತ್ನ ಶ್ರಮಗಳಿರಬೇಕು ಮತ್ತು ಅದು ಸವಾಲು ಒಡ್ಡುವಂತಹುದು; ಆದರೆ ಅದು ಶಾಂತಿಯುತವಾದ ಶಿಖರಕ್ಕೆ ಕೊಂಡೊಯ್ದು ನಿರಂತರವಾದ ಸುಖವನ್ನು ನೀಡುವಂಥದ್ದಾಗಿರುತ್ತದೆ. ಬದುಕಿನ ಈ ಎರಡು ಸಾಧ್ಯತೆಗಳನ್ನು ಒಬ್ಬನು ಗ್ರಹಿಸದಿದ್ದರೆ, ಸ್ಥಾವರವೆಂಬ (ಚಲನವಿಲ್ಲದ ಸ್ಥಿತಿ) ಮೂರನೇ ಸ್ಥಿತಿ ಇರುವುದಿಲ್ಲ ಮತ್ತು ಒಬ್ಬನು ಅರ್ಥಪೂರ್ಣವಾದ ಬದುಕನ್ನು ಎಂದಿಗೂ ಅಲ್ಲಿ ಮಾಡಲಾರ. ಇದೇ ಪಟಿಚ್ಚ ಸಮುಪ್ಪಾದ ಮತ್ತು ನಿರೋಧದ ಮೂಲ ಸಂದೇಶ.

## ಕಾರ್ಯಕಾರಣಗಳ ಸರಪಳಿ

ಹನ್ನೆರಡು ಕಾರಣಬದ್ಧ ಸ್ಥಿತಿಗಳು (ಪಚ್ಚಯಗಳು) ಒಂದು ಸರಪಳಿಯ ಹಲವಾರು ಕೊಂಡಿಗಳಂತೆ. ಕೊಂಡಿ ಎನ್ನುವ ಪದ ಅತ್ಯಂತ ಸೂಕ್ತವಾದುದು. ಏಕೆಂದರೆ ಪ್ರತಿ ಪಚ್ಚಯ ಕೊಂಡಿಯು ಹಿಂದಿನ ಮುಂದಿನ ಕೊಂಡಿಯನ್ನು ಹಿಡಿದೇ ಇರುತ್ತದೆ. ಅಂದರೆ ಪ್ರತಿ ಪಚ್ಚಯವು 1) ಕಾರಣಬದ್ಧವಾಗಿರುತ್ತದೆ ಅಥವಾ ಕಾರಣಬದ್ಧತೆಗಳಿಂದ ಉತ್ಪನ್ನವಾಗಿರುತ್ತದೆ; 2) ಕಾರಣಬದ್ಧತೆಯ ಸಂಗತಿ ಅಂದರೆ ಏನೋ ಒಂದು ಆಗುವಂತೆ ಮಾಡುವ ಅಥವಾ ಬದ್ಧತೆಯನ್ನು ನಿರ್ಮಿಸುವ ಶಕ್ತಿ ಇರುವಂತಹುದು. ಇದನ್ನು ಹೇಗೆ ಹೇಳಬಹುದೆಂದರೆ ಒಂದು ಸಂಗತಿಯು ಕಾರಣವೂ ಆಗಿರಬಹುದು, ಕಾರ್ಯವೂ ಆಗಿರಬಹುದು. ಅಥವಾ ಇವೆರಡೂ ಕಾರಣವಾಗಿ ಅದು ಕಾರ್ಯವನ್ನು ಉಂಟುಮಾಡುತ್ತದೆ ಮತ್ತು ಕಾರಣವಾಗಿ ಅದು ಹೊಸದೊಂದು ಸ್ಥಿತಿಯನ್ನು ಸೃಷ್ಟಿಸುತ್ತದೆ. ಹೀಗೆ ಅದು ಕಾರಣಬದ್ಧತೆಯ ಸಂಗತಿ.

ಹನ್ನೆರಡು ಪಚ್ಚಯಗಳು, ಕೊಂಡಿಗಳಂತೆ ಕಾರ್ಯಕಾರಣಗಳ ಸರಪಳಿಯಾಗಿದೆ. ಒಂದು ಕೊಂಡಿಯು ಸರಪಳಿಯ ಭಾಗವಾಗಿ ಅದು ಇಡೀ ಸರಪಳಿಯನ್ನು ಹಿಡಿದಿರುತ್ತದೆ. ಪಚ್ಚಯವೂ ಹಾಗೇ. ಅದು ಕೊಂಡಿಯಂತೆ ಇನ್ನೊಂದು ಪಚ್ಚಯಕ್ಕೆ ಕಾರಣವಾಗುತ್ತದೆ. ಇಲ್ಲವೇ ತಾನೇ ಪಚ್ಚಯಕ್ಕೆ ಒಳಗಾಗಿರುತ್ತದೆ. ಅದು ಕಾರಣವಾಗಿ ಕಾರ್ಯವೊಂದನ್ನು ಎಸಗುತ್ತದೆ. ಹಾಗೆಯೇ ಕಾರಣ-ಕಾರ್ಯ ಸರಪಳಿ ಕೊನೆಯಿಂದ ಮುಂದುವರಿಯುತ್ತದೆ.

ಪಚ್ಚಯವು ಕಾರಣಬದ್ಧ ಸಂಗತಿಯಾಗಿ ಅಥವಾ ಕಾರ್ಯವಾಗಿ ಇನ್ನೊಂದು ಪಚ್ಚಯದ ಹುಟ್ಟಿಗೆ ಕಾರಣವಾಗುತ್ತದೆ. ಹೀಗೆ ಕಾರ್ಯಕಾರಣ ಸಂಬಂಧ ಮುಂದುವರೆದು ಈ ಸರಪಳಿಯು ಅನಿಶ್ಚಯತೆಯಿಂದ ಮುಂದುವರಿಯುತ್ತದೆ. ಯಾವುದಾದರೂ ಒಂದರ ಸಂಬಂಧ ಸ್ಪಷ್ಟವಾಗಿ ಮುರಿದರೆ ಅಥವಾ ಕಳಚಿದರೆ ಕೊನೆಯಿರದ ಹರಿವು ಅಥವಾ ನಿರಂತರತೆ ನಿಲ್ಲುತ್ತದೆ.

ಪಟಿಚ್ಚ ಸಮುಪ್ಪಾದವು ಒಂದು ಸರಪಳಿಯಲ್ಲಿನ ಆದಿಯನ್ನು ಮತ್ತು ಕೊಂಡಿಯಿಂದ ಕೊಂಡಿಗೆ ಕೊನೆಯಿಲ್ಲದೆ ಬೆಳೆದ ಸ್ಥಿತಿಯನ್ನು ತೋರಿಸಿದರೆ, ನಿರೋಧವು ನಿರಂತರವಾಗಿ ಮುಂದುವರಿಯುತ್ತಲೇ ಇರುವ ಕಾರ್ಯ-ಕಾರಣ ವಿಧಾನವೇ ಹಿಂದುಮುಂದಾಗದ ಸ್ಥಿತಿಯನ್ನು ಅಂದರೆ ಒಬ್ಬ ವ್ಯಕ್ತಿಯು ತನ್ನ ಚಲನಶೀಲತೆಯ ಪ್ರಸ್ತುತ ಬದುಕಿನಲ್ಲಿ ಕಾರ್ಯ-ಕಾರಣ ಸಂಬಂಧ ಸರಪಳಿಯ ಯಾವುದೇ ಒಂದರ ಕೊಂಡಿಯನ್ನು ಮುರಿಯುವ ಸ್ಥಿತಿಯನ್ನು ತೋರಿಸುತ್ತದೆ. ಉದಾಹರಣೆಗೆ ಸತಿ (ಮಾನಸಿಕ ಎಚ್ಚರ) ಮತ್ತು ಸಂಪಜಞಾ (ಸ್ಪಷ್ಟವಾದ ತಿಳುವಳಿಕೆ)ದ ಮೂಲಕ ವೇದನೆಗಳ ಮೇಲೆ ಹತೋಟಿ ಪಡೆದು ತನ್ಹಾವನ್ನು ಗೆಲ್ಲುವುದು. ಹೀಗೆ ಮಾಡುವುದರಿಂದ ಅವಿದ್ಯೆಯು ನಾಶವಾಗಿ ತನ್ಮೂಲಕ ಪುನರ್ಜನ್ಮ ಚಕ್ರವೇ ಕೊನೆಯಾಗುತ್ತದೆ.



ನಿರೋಧ ವಿಧಾನದ ಮೂಲಕ ಮೂರು ಚಕ್ರಗಳು ನಾಶವಾದಾಗ ಸಂಸಾರವೆಂಬ ಸಾಗರದಲ್ಲಿ ಎಡ್ಡಾದಿಡ್ಡಿಯಾಗಿ ಅಲೆದಾಡುವ ಪ್ರಶ್ನೆಯೇ ಬರುವುದಿಲ್ಲ. ಒಬ್ಬನು ಅಂತಿಮ ಮುಕ್ತಿ ಮತ್ತು ಪರಮ ಸುಖದ ತಾಣದವಾದ ನಿಬ್ಬಾಣವೆಂಬ ಪ್ರಶಾಂತ ಶಿಖರವನ್ನು ಸೇರಿ ಶಾಶ್ವತ ಭದ್ರತೆಯನ್ನು ಅನುಭವಿಸುತ್ತಾನೆ. ಅನಿತ್ಯ ಮತ್ತು ದುಃಖಗಳ ಆಚೆಗಿನ ಇರವೇ ನಿಬ್ಬಾಣ. ನಿಬ್ಬಾಣದಲ್ಲಿ ನಾನು ತಾನು ಎಂಬುದು ಇಲ್ಲದೇ ಇರುವುದರಿಂದ ಅದು ಅನಾತ್ಮವೇ ಆಗಿರುತ್ತದೆ.

## ಸರಪಳಿಯನ್ನು ಮುರಿಯುವುದು

ಬುದ್ಧರು ಹಿಗೆ ಹೇಳಿದ್ದಾರೆ: "ಆನಂದ, ಪಟಿಚ್ಚ ಸಮುಪ್ಪಾದವು ಘನ ಗಂಭೀರವಾದುದು ಮತ್ತು ನೋಡಲು ಅದು ಹಾಗೆಯೇ ಇದೆ. ಈ ಧಮ್ಮವನ್ನು ತಿಳಿಯದೇ ಇರುವುದರಿಂದ ಮತ್ತು ಅದರೊಳಗೆ ಆಳಕ್ಕೆ ಇಳಿಯದೇ ಇರುವುದರಿಂದ ಎಲ್ಲ ಲೋಕದ ಜೀವಿಗಳು ಬಂಧನಕ್ಕೊಳಗಾಗಿವೆ. ಸುಕ್ಕುಗಟ್ಟಿದ ದಾರದ ಉಂಡೆಯಂತೆ ಈ ಕಾರಣಬದ್ಧ ಅಸ್ತಿತ್ವಗಳಲ್ಲಿ ಸಿಲುಕಿಕೊಂಡಿವೆ. ಅವು ಮುಂಜಾನೆ ಹುಲ್ಲಿನಂತೆ ಮೃದುವಾಗಿ ದೃಢತೆಯನ್ನು ಕಳೆದುಕೊಂಡು ದುಃಖಸಂಕಟಗಳು ತುಂಬಿದ ಸಂಸಾರ ಚಕ್ರದ ಆಚೆ ಹೋಗಲು ನಿಶ್ಶಕ್ತವಾಗಿವೆ.

ಈ ಲೋಕವು ಜೀವಿಗಳ ಒಳಿತು ಕೆಡಕುಗಳಿಗೆ ಪುರಸ್ಕಾರ, ಶಿಕ್ಷೆಗಳನ್ನು ಕೊಡುವ ಯಾವುದೇ ಒಬ್ಬ ಸೃಷ್ಟಿಕರ್ತ ದೇವರ ಇಚ್ಛೆಯಿಂದಾಗಲಿ ಅಥವಾ ಅತಿಮಾನುಷ ಶಕ್ತಿಯಿಂದಾಗಲಿ ನಿಯಂತ್ರಿತವಾಗಿಲ್ಲ. ಜೀವಿಗಳ ಹಣೆಬರಹವನ್ನು ನಿರ್ಧರಿಸಲು 'ದೈವೇಚ್ಛೆ' ಇದೆ ಎಂಬುದೇ ಇಲ್ಲ. ನಿಜ, ಅಸಂಖ್ಯ ದೇವರುಗಳಿದ್ದಾರೆ; ಆದರೆ ಅವರೆಲ್ಲಾ ಹುಟ್ಟು-ಸಾವು ಮತ್ತು ಮರುಹುಟ್ಟುಗಳ ಕೊನೆಯಿರದ ಚಕ್ರದಲ್ಲಿ ಸಿಲುಕಿಕೊಂಡಿದ್ದಾರೆ. ಬೌದ್ಧ ಧರ್ಮದಲ್ಲಿ ಈ ಲೋಕ ಮತ್ತು ಅದರಲ್ಲಿರುವ ಜೀವ ಇವೆಲ್ಲ ಪ್ರಕೃತಿ ಸಹಜವಾದ ಕಾರ್ಯ-ಕಾರಣ ಸಂಬಂಧಗಳಿಂದ, ಪಚ್ಚಯಗಳಿಂದ ಮತ್ತು ಪಚ್ಚಯಗಳಿಂದ ಉಂಟಾದ ಸ್ಥಿತಿಗಳಿಂದ ನಿಯಂತ್ರಿತವಾಗಿದ್ದು, ಇವೆಲ್ಲ ತಂತಾನೆ ಬದುಕುವ ತಂತ್ರದಲ್ಲಿವೆ.

ಎಲ್ಲಿಯವರೆಗೆ ಅವಿದ್ಯೆ, ತನ್ಹಾ ಮತ್ತು ತತ್ಸಂಬಂಧಿತ ಕಳಂಕಗಳನ್ನು ಮತ್ತೆ ಮತ್ತೆ ಹುಟ್ಟಲು ಬಿಡುತ್ತೇವೋ, ಅಲ್ಲಿಯವರೆಗೆ ಪುನರ್ಜನ್ಮ ಸೃಷ್ಟಿಯ ಕಮ್ಮಗಳೂ ಹುಟ್ಟುತ್ತವೆ. ಎಲ್ಲ ಜೀವಿಗಳನ್ನು ನಿಯಂತ್ರಿಸುವ ಪ್ರಕೃತಿ ನಿಯಮದಂತೆ ಕಾರ್ಯ-ಕಾರಣ ಸಂಬಂಧ ಸರಪಳಿಯೂ ಕೂಡ.

ಯಾವಾಗ ಬೋಧಿಸತ್ವ ಸಿದ್ಧಾರ್ಥ ಗೌತಮರು ಪಟಿಚ್ಚ ಸಮುಪ್ಪಾದವನ್ನು ಕಂಡುಹಿಡಿದು ಕಾರ್ಯ-ಕಾರಣ ಸಂಬಂಧ ಸರಪಳಿಯನ್ನು ಮುರಿದರೋ ಆಗ ಅವರು ಸಮ್ಮಾಸಂಬುದ್ಧರಾದರು. ಬೋಧಗಯಾದ ಬೋಧಿ ಮರದಡಿಯಲ್ಲಿ ಬೋಧಿ ಜ್ಞಾನವನ್ನು ಪಡೆದ ಕೂಡಲೇ ಈ ಅನನ್ಯವಾದ ಮುಕ್ತಿಯನ್ನು ಅನುಭವಿಸುತ್ತಾ ಒಂದು ವಾರದ ಕಾಲ ಆ ಆನಂದದ ಗುಂಗಿನಲ್ಲೇ ಮುಳುಗಿದ್ದರು. ರಾತ್ರಿಯ ಮೊದಲ ಜಾವದಲ್ಲಿ

ಸಂಬೋಧಿಯ ಸಮಾಧಿಯಿಂದ ಹೊರಬಂದು ಈ ಪರಮ ಸಂಶೋಧನೆಯಾದ ಪಟಿಚ್ಚ ಸಮುಪ್ಪಾದದ ಮೇಲೆ ಮನನ ಮಾಡುತ್ತಾ ಹೀಗೆ ಹೇಳಿದರು:

"ಯಾವಾಗ ಇದು ಅಸ್ತಿತ್ವದಲ್ಲಿ ಇರುತ್ತದೋ ಆಗ ಅದು ಆಗುತ್ತದೆ. ಇದು ಹುಟ್ಟುವುದರಿಂದ ಅದು ಹುಟ್ಟುತ್ತದೆ. ಹೇಗೆಂದರೆ: ಅವಿದ್ಯೆ ಕಾರಣವಾಗಿ ಸಂಖಾರಗಳು ಹುಟ್ಟುತ್ತವೆ; ಸಂಖಾರಗಳ ಕಾರಣವಾಗಿ ವಿಞ್ಞಾಣ ಹುಟ್ಟುತ್ತದೆ... ಇತ್ಯಾದಿ ಹೀಗೆ ದುಃಖಖಂಧವೇ ಹುಟ್ಟುತ್ತದೆ."

ರಾತ್ರಿಯ ಮಧ್ಯ ಜಾವದಲ್ಲಿ ಪಟಿಚ್ಚ ಸಮುಪ್ಪಾದದ ನಿರೋಧ ವಿಧಾನದ ಮೇಲೆ ಮನನ ಮಾಡುತ್ತಾ ಹೀಗೆ ಹೇಳಿದರು: "ಯಾವಾಗ ಇದು ಅಸ್ತಿತ್ವದಲ್ಲಿ ಇರುವುದಿಲ್ಲವೋ ಆಗ ಅದು ಆಗುವುದಿಲ್ಲ. ಇದು ನಿಂತುಹೋಗುವುದರಿಂದ ಅದೂ ನಿಂತು ಹೋಗುತ್ತದೆ. ಹೇಗೆಂದರೆ ಅವಿದ್ಯೆ ಇಲ್ಲವಾಗುವುದರಿಂದ ಸಂಖಾರಗಳು ಇಲ್ಲವಾಗುತ್ತವೆ, ಸಂಖಾರಗಳು ಇಲ್ಲವಾಗುವುದರಿಂದ ವಿಞ್ಞಾಣ ಇಲ್ಲವಾಗುತ್ತದೆ ಇತ್ಯಾದಿ. ಹೀಗೆ ಇಡೀ ದುಃಖಖಂಧವೇ ನಿಂತುಹೋಗುತ್ತದೆ."

ರಾತ್ರಿಯ ಕೊನೆಯ ಜಾವದಲ್ಲಿ ಪಟಿಚ್ಚಾ ಸಮುಪ್ಪಾದವನ್ನು ಅನುಲೋಮ ವಿಲೋಮ ಗತಿಯಲ್ಲಿ ಹೀಗೆ ಮನನ ಮಾಡಿದರು: "ಯಾವಾಗ ಇದು ಅಸ್ತಿತ್ವಕ್ಕೆ ಬರುತ್ತದೋ ಆಗ ಅದೂ ಅಸ್ತಿತ್ವಕ್ಕೆ ಬರುತ್ತದೆ... ಹೀಗೆ ಇಡೀ ದುಃಖಕ್ಖಂಧವೇ ಉದಯವಾಗುತ್ತದೆ. ಯಾವಾಗ ಇದು ಇಲ್ಲವೋ ಆಗ ಅದೂ ಕೂಡ ಆಗುವುದಿಲ್ಲ... ಹೀಗೆ ಇಡೀ ದುಃಖಕ್ಖಂಧವೇ ಇಲ್ಲದಂತಾಗುತ್ತದೆ." ಉದಾನ ಪಾಳಿ.

ಅನುಲೋಮ ಪಟಿಚ್ಚ ಸಮುಪ್ಪಾದ - ವಿಲೋಮ ಪಟಿಚ್ಚ ಸಮುಪ್ಪಾದದ ಆವಿಷ್ಕಾರವೇ ಚತುರಾರ್ಯಸತ್ಯಗಳ ಅವಿಷ್ಕಾರವನ್ನು ಸೂಚಿಸುತ್ತದೆ. ಪಟಿಚ್ಚ ಸಮುಪ್ಪಾದವು ವಿವಿಧ ಅಸ್ತಿತ್ವಗಳಲ್ಲಿರುವ ಜೀವಿಗಳ ಆಗುವಿಕೆಯ ವಿಧಾನವನ್ನು (ಭವ) ಮತ್ತು ಉದಯವಾದ ವಿಧಾನವನ್ನು (ಜಾತಿ) ವಿಶದಪಡಿಸುತ್ತದೆ. ಹೀಗೆ ಮೊದಲ ಆರ್ಯಸತ್ಯವಾದ ದುಃಖದ ಉದಯವನ್ನು ಹೇಳುತ್ತದೆ. ಹಾಗೆಯೇ ಭವ ಮತ್ತು ದುಃಖಗಳು ಕ್ಲೇಶ ಕಮ್ಮ ಚಕ್ರಗಳಿಂದ ಅಂತರ್ಗತವಾಗಿ ಪಚ್ಚಯವಾಗಿ ಪರಿಣಮಿಸಿರುವುದು ಎರಡನೇ ಆರ್ಯಸತ್ಯವಾದ ದುಃಖದ ಮೂಲವನ್ನು ಹೇಳುತ್ತದೆ.

ವಿಲೋಮ ಪಟಿಚ್ಚ ಸಮುಪ್ಪಾದವು ಈ ಭವ ಮತ್ತು ಜಾತಿಗಳ ವಿಧಾನವನ್ನೇ ವಿನಾಶಮಾಡುವ ಅರ್ಥಾತ್ ನಿಬ್ಬಾಣ ಸಿದ್ಧಿಯನ್ನು ಹೇಳುತ್ತದೆ. ಪಚ್ಚಯಗಳ ನಿರೋಧವೇ ನಿಬ್ಬಾಣದ ಹಾದಿ; ಅಷ್ಟಾಂಗ ಮಾರ್ಗವೇ ಇದರಲ್ಲಿ ಅಂತರ್ಗತವಾಗಿದೆ. ಈ ಮಾರ್ಗದಲ್ಲಿ ಮುಂದುವರಿದರೆ ಪಚ್ಚಯಗಳೇ ನಿಶ್ಚಯವಾಗಿ ಮುರಿದುಹೋಗುತ್ತವೆ.

## ಮೊದಲ ಕಾರಣ

ಕಾರ್ಯ-ಕಾರಣ ನಿಯಮವನ್ನು ಇದೊಂದು ಯಾಂತ್ರಿಕವಾದ ಮೊದಲ ಕಾರಣದ ಮೇಲೆ ನಿಂತ ಕಾರ್ಯ-ಕಾರಣ ಸಂಬಂಧವೆಂದು ತಪ್ಪಾಗಿ ಅರ್ಥೈಸಲಾಗಿದೆ. ಈ



ಸರಪಳಿಯಲ್ಲಿನ ಮೊದಲ ಕೊಂಡಿ ಅವಿದ್ಯೆಯಾಗಿದ್ದರೂ ಅದೇ ಮೊದಲ ಕಾರಣವಲ್ಲ. ಯಾರು ಅವಿದ್ಯೆಯನ್ನು ಮೊದಲ ಕಾರಣವಾಗಿ ತಿಳಿದಿದ್ದರೋ, ಅವರು ಹಾಗೆ ಮಾಡುವರೇಕೆಂದರೆ ಪಟಿಚ್ಚಾ ಸಮುಪ್ಪಾದವು ಅದೊಂದು ಸರಳವಾದ ಕಾರ್ಯ-ಕಾರಣ ಸಂಬಂಧ ಸೂತ್ರವೆಂದು ತಿಳಿದು ಸಂಗತಿಗಳು ಸಹಜವಾಗಿ ಮೊದಲ ಕಾರಣದಿಂದಲೇ ಹುಟ್ಟುತ್ತವೆ ಎನ್ನುವುದರಿಂದ.

ಭಗವಾನ್ ಬುದ್ಧರು ಅಸ್ತಿತ್ವದ ಮೂಲವೇ ಅನೂಹ್ಯ (ಅನಮತಗ್ಗ ಸಂಸಾರ) ಎಂದಿದ್ದಾರೆ. ಮೊದಲ ಕಾರಣ ಎನ್ನುವ ಪರಿಕಲ್ಪನೆಯೇ ಮಾನಸಿಕ ಪಲ್ಲಟತೆಗೆ ಎಡೆಯಾಗುತ್ತದೆ. ಆಸ್ತಿಕ ಧರ್ಮಗಳಿಗೆ ಸೃಷ್ಟಿಕರ್ತನೇ ಮೊದಲ ಕಾರಣ. ಭೌತಿಕ ಮತ್ತು ವೈಜ್ಞಾನಿಕ ಸಿದ್ಧಾಂತಗಳಲ್ಲಿ ಒಂದು ಅವಕಾಶ ಅಥವಾ ತಕ್ಷಣದ ಉತ್ಪತ್ತಿ ಅಥವಾ ಇದ್ದಕ್ಕಿದ್ದ ಹಾಗೆ ನಡೆದ ಘಟನೆಯೇ ಈ ಲೋಕದ ಉಗಮಕ್ಕೆ ಮೊದಲ ಕಾರಣ.

ಬೌದ್ಧ ಧರ್ಮದ ಪ್ರಕಾರ ಇವೆಲ್ಲಾ ಊಹಾಪೋಹ ಸಿದ್ಧಾಂತಗಳು. ಯಾಕೆಂದರೆ ಜಗತ್ತಿನ ಎಲ್ಲ ಸಂಗತಿಗಳು ಕಾರ್ಯ-ಕಾರಣ ಸಂಬಂಧ ತತ್ವಕ್ಕೆ ಒಳಗಾಗಿರುವುದರಿಂದ ಮೊದಲ ಕಾರಣವೂ ಕೂಡ ಅದು ಯಾತಕ್ಕಾಗಿ ಆಯಿತೆಂಬ ಕಾರಣದಿಂದ ತಪ್ಪಿಸಿಕೊಳ್ಳಲಾರದು. ಮೊದಲ ಕಾರಣ ಎಂದು ಹೇಳಲಾಗುವ ಆ ಕಾರಣವು ಯಾವುದು ಎನ್ನುವುದು ಸರಿಯಾದ ಪ್ರಶ್ನೆಯೇ! ಈ ಅಸ್ತಿತ್ವಕ್ಕೆ ಮೊದಲ ಕಾರಣ ಯಾವುದು ಎಂಬುದನ್ನು ಹುಡುಕುತ್ತಾ ಹೋದರೆ ಮಿಥ್ಯಾದೃಷ್ಟಿಯ ಬಲೆಯೊಳಗೆ ಬಿದ್ದಂತೆ, ಅಂದರೆ ಈ ಜಗತ್ತಿನ ಎಲ್ಲ ಕೇಡುಗಳಿಗೆ ಒಂದೇ ಕಾರಣವನ್ನು ಹುಡುಕಿದಂತೆ. ವಾಸ್ತವ ಎಂದರೆ ಅಸ್ತಿತ್ವವೇ ಕಾರಣಬದ್ಧವಾದುದು. ಅದು ಹಲವಾರು ಕಾರಣಗಳು ಹಾಗು ನಿಯತಿಗಳ ಮೇಲೆ ಆಧಾರಿತವಾದುದು ಮತ್ತು ಇವೆಲ್ಲವೂ ಏಕಸಮಯದಲ್ಲೇ ಸೂಕ್ಷ್ಮಾತಿಸೂಕ್ಷ್ಮ ಪರಸ್ಪರ ಸಂಬಂಧಗಳಲ್ಲಿ ಕೆಲಸ ಮಾಡುವಂತಹುದು.

ಸರ್ವಶಕ್ತ ದೇವರು ಅಥವಾ ಬಿಗ್ ಬ್ಯಾಂಗ್ ಸಿದ್ಧಾಂತ ಎಂಬವುಗಳನ್ನೇ ಮೊದಲ ಕಾರಣವಾಗಿ ಪರಿಕಲ್ಪನೆ ಮಾಡಿಕೊಂಡರೆ ಸತ್ಯ ಹುಡುಕಾಟದ ಸಂಶೋಧನಾ ಬಾಗಿಲುಗಳನ್ನೇ ಮುಚ್ಚಿದಂತೆ. ಬೌದ್ಧ ಧರ್ಮದ ಪ್ರಕಾರ ಒಂದೇ ಕಾರಣ (ಏಕ ಹೇತು) ಅಥವಾ ಕಾರಣವೇ ಇಲ್ಲ (ಅಹೇತುಕ) ಎಂಬುದು ಇಲ್ಲ. ಒಂದೇ ಅಥವಾ ಮೊದಲ ಕಾರಣವಾಗಲಿ ಅಥವಾ ಕಾರಣವೇ ಇಲ್ಲ ಎಂಬುದು ಅತಿರೇಕದ ಮತ್ತು ಚಿತ್ತ ವೈಕಲ್ಯದ ಮಾತುಗಳಾಗುತ್ತವೆ.

ಮೊದಲನೆಯದು ಮತಾಂಧತೆಗೆ ಮೂಲಭೂತವಾದಕ್ಕೆ ಧಾರ್ಮಿಕ ಅಸಹಿಷ್ಣುತೆಗೆ ಎಡೆಮಾಡಿಕೊಡುತ್ತದೆ; ಎರಡನೆಯದು ಭೌತಿಕ ವಾದಕ್ಕೆ ಇಂದ್ರಿಯಪರತೆಗೆ ಮತ್ತು ಹಿಂಸೆಗೆ ದಾರಿಮಾಡಿಕೊಡುತ್ತದೆ. ಎರಡು ಅಭಿಪ್ರಾಯಗಳು ಸ್ವಾರ್ಥವನ್ನು ಹುಟ್ಟಿಸಿ ಮನುಷ್ಯರನ್ನು ಸತ್ಯಮಾರ್ಗದ ಅನ್ವೇಷಣೆಯಿಂದ ಹಿಮ್ಮೆಟ್ಟಿಸುತ್ತದೆ.

ಬೌದ್ಧ ಧರ್ಮವು ಅನೇಕ ಕಾರಣಗಳನ್ನು ನಿಯತಿಗಳನ್ನು (ಅನೇಕ ಹೇತು ಪಚ್ಚಯ) ಬೋಧಿಸುತ್ತದೆ, ಅವು ನಿರ್ದಿಷ್ಟವಾದ ಸಂಯೋಜನೆ ಮತ್ತು ಕ್ರಮಪಲ್ಲಟನೆಗಳ ಮೂಲಕ ಕೆಲಸ ಮಾಡಿ ಜೀವನ ಚಕ್ರ ಸೃಷ್ಟಿ ಮಾಡುತ್ತದೆ. ಆದ್ದರಿಂದ ಸಂಗತಿ ಅಥವಾ ವಸ್ತುಗಳ ಮೂಲ ಉಗಮ ಅಥವಾ ಮೊದಲೇ ಇಲ್ಲವೆಂಬುದರ ಮೊದಲ ಉಗಮದ ಹುಡುಕಾಟ ಇವೆಲ್ಲಾ ಕಟ್ಟುಕತೆಗಳ ಊಹೆಯಷ್ಟೆ. ನಾಮ-ರೂಪಗಳಿಂದ ಉದಯವಾದ ಭವ ಎನ್ನುವುದು ಇದೆ. ಜೀವನದ ಪ್ರತಿಯೊಂದು ಘಟನೆಯೂ ಪೂರ್ವ ಘಟನೆಗಳ ಪರಿಣಾಮವಷ್ಟೇ. ಹೀಗೆ ಸರಪಳಿಯು ಮುಂದುವರಿಯುತ್ತದೆ.

ಈ ಬದುಕಿನಲ್ಲಿ ಏನೆಲ್ಲಾ ಕಾಣುತ್ತದೋ ಅದೆಲ್ಲವೂ ಹಲವಾರು ಪೂರ್ವ ಕಾರಣಗಳ ಸಂಯೋಜನೆಯಿಂದಾಗಿ. ಎಲ್ಲ ಅವಲಂಬಿತ ಅಥವಾ ಕಾರಣಬದ್ಧ ಸ್ಥಿತಿಗಳು ಉತ್ಪತ್ತಿಯಾಗುತ್ತವೆ, ಇರುತ್ತವೆ ಮತ್ತು ಇಲ್ಲವಾಗುತ್ತವೆ (ಉಪ್ಪದ, ಥಿತಿ, ಭಂಗ) ಮತ್ತೆ ಇವೆಲ್ಲವೂ ಕಾರ್ಯಕಾರಣಗಳಿಂದಾಗಿಯೇ. ಪಟಿಚ್ಚ ಸಮುಪ್ಪಾದವು ಮಜ್ಝಿಮ ಪಟಿಪದವನ್ನೇ ಅಂದರೆ ಒಂದೇ ಅಥವಾ ಮೊದಲ ಕಾರಣವಿದೆ ಒಂದು ಅತಿರೇಕವನ್ನು ಕಾರಣವೇ ಇಲ್ಲಬೆಂಬ ಭೌತಿಕವಾದವೆಂಬ ಇನ್ನೊಂದು ಅತಿರೇಕವನ್ನು ಬಿಟ್ಟು ಇರುವುದನ್ನು ಪ್ರತಿಪಾದಿಸುತ್ತದೆ.

## ಕಾರ್ಯಕಾರಣ ಸಂಬಂಧದ ಕೊಂಡಿಗಳು

### 1. ಅವಿದ್ಯೆ :

ಪಟಿಚ್ಚಾ ಸಮುಪ್ಪಾದದ ಹನ್ನೆರಡು ಅಂಗಗಳು: ಅವಿದ್ಯೆ, ಸಂಖಾರ, ವಿಞ್ಞಾಣ, ನಾಮ-ರೂಪ, ಸಳಾಯತನ, ಸ್ಪರ್ಶ, ವೇದನಾ, ತನ್ಹಾ, ಉಪಾದಾನ, ಭವ, ಜಾತಿ, ಜರಾಮರಣ.

ಅವಿದ್ಯೆಯ ಸಮಾನಾರ್ಥಕ ಪದಗಳೇ ಮೋಹ ಮತ್ತು ಅಜ್ಞಾನ. ಕೇವಲ ತಿಳುವಳಿಕೆ ಇಲ್ಲದಿರುವಷ್ಟೇ ಅಲ್ಲ (ಅಜ್ಞಾನ). ತಿರುಗುಮುರುಗಾಗಿ ಇಲ್ಲವೇ ವ್ಯತಿರಿಕ್ತವಾಗಿ ತಿಳಿದಿರುವುದು ಅಜ್ಞಾನವೇ. ಚತುರಾರ್ಯ ಸತ್ಯಗಳ ಅರಿವು ಇಲ್ಲದೇ ಇರುವ ಮತ್ತು ಅರ್ಧಸತ್ಯ ಹಾಗು ಸತ್ಯವನ್ನು ಬಚ್ಚಿಡುವುದೇ ಅವಿದ್ಯೆಯ ಗುಣ ಅಥವಾ ಪ್ರಕೃತಿ. ಅವಿದ್ಯೆಯ ವಿರುದ್ಧ ಸ್ಥಿತಿಯೇ ಪ್ರಜ್ಞೆ, ಬೋಧಿಜ್ಞಾನ, ವಿಪಸ್ಸನ. ಸರಿಯಾದ ಅರಿವು ಮತ್ತು ಸಮ್ಯಕ್ ದೃಷ್ಟಿ. ಅವಿದ್ಯೆಯೇ ಎಲ್ಲ ಕೆಡಕುಗಳಿಗೆ ಮೂಲಕಾರಣ. ಎಲ್ಲ ಮಾನಸಿಕ ಕ್ಲೇಶಗಳು ಉದಯವಾಗಲು ಯಾವ ಕಾರಣಗಳಿವೆಯೋ ಅವುಗಳಿಗೆ ಕಾರಣವಾದುದು ಈ ಅವಿದ್ಯೆ. ಇದು ತನ್ಹಾ, ಲೋಭ, ದ್ವೇಷ, ಅಹಂಕಾರ, ಮಿಥ್ಯಾದೃಷ್ಟಿ, ಮೋಸ ಮತ್ತು ಎಲ್ಲರೀತಿಯ ಮಾನಸಿಕ ಕ್ಲೇಶಗಳ ಉದಯಕ್ಕೆ ಕಾರಣವಾಗಿದೆ.

ಎಲ್ಲ ಅಕುಶಲ ಕಮ್ಮಗಳಲ್ಲಿ ಲೋಭ, ದ್ವೇಷ ಮತ್ತು ಮೋಹಗಳು ಮೂಲ ಕಾರಣಗಳಾಗಿರುತ್ತವೆ. ಕಾಯಾ-ವಾಚಾ-ಮನಸಾಗಳ ಮೂಲಕ ಅಕುಶಲ ಕಮ್ಮಗಳು ಅವಿದ್ಯೆ ತನ್ಹಾ ಮತ್ತು ದ್ವೇಷವೆಂಬ ಮೂರು ಮೂಲ ಕಾರಣಗಳಿಂದ ಆಗುತ್ತವೆ.



ಒಂದು ತ್ರಿಪಾದವು ನೆಟ್ಟಗೆ ನಿಲ್ಲಬಲ್ಲದು. ಯಾಕೆಂದರೆ ಅದರ ಮೂರು ಕಾಲುಗಳು ಒಂದರ ಮೇಲೊಂದು ಅವಲಂಬಿತವಾಗಿವೆ. ಹಾಗೆಯೇ ಈ ಏಕಕಾಲಕ್ಕೆ ಈ ಮಾನಸಿಕ ಕ್ಲೇಶಗಳು ಉದಯವಾಗುವುದರಿಂದ ಎಲ್ಲ ಅಕುಶಲ ಕಮ್ಮಗಳಿಗೆ ಕಾರಣವಾಗಿ ಸಂಖಾರಗಳು ಉದಯವಾಗುತ್ತವೆ.

ಹೀಗೆ ಅವಿದ್ಯೆಯು ಸರಣಿಯಲ್ಲಿ ಮೊದಲನೆಯದಾಗಿದ್ದರೂ ಎರಡನೆಯದಾದ ಸಂಖಾರಗಳ ಉದಯಕ್ಕೆ ಇದೇ ಮೊದಲ ಪಚ್ಚಯವಲ್ಲ. ಮೂಲ ಕಾರಣಗಳ ಹುಟ್ಟುವಿಕೆಯಿಂದ ಸಂಖಾರ ಮತ್ತು ಬೇರೆ ತತ್ಸಂಬಂಧಿತ ಪಚ್ಚಯಗಳು ಉದಯವಾಗಿ ಕಮ್ಮ ಸೃಷ್ಟಿಯಾಗುತ್ತದೆ. ಮೊದಲ ಎರಡು ಕಾರ್ಯ-ಕಾರಣ ಸಂಬಂಧದ ಕೊಂಡಿಗಳು (ಪಚ್ಚಯಗಳು) ಒಟ್ಟಿಗೆ ಹುಟ್ಟುತ್ತವೆ. ಅವು ಒಟ್ಟಿಗೆ ಹುಟ್ಟುತ್ತವೆ, ಆದರೆ ಒಂದರ ನಂತರ ಒಂದಲ್ಲ.

ಬಹು ಮುಖ್ಯವಾಗಿ ಅರ್ಥಮಾಡಿಕೊಳ್ಳುವುದೇನೆಂದರೆ ಸರಪಳಿಯಲ್ಲಿನ ಹನ್ನೆರಡು ಪಚ್ಚಯಗಳು ಒಂದೊಂದೇ ಮೆಟ್ಟಿಲಿನಂತೆಯಾಗಲಿ ಒಂದರ ನಂತರ ಒಂದಾಗಲಿ, ಏರುಗತಿಯಲ್ಲಿ ಆಗುವ ಘಟನೆಗಳಲ್ಲ. ಮೊದಲೆರಡು ಪಚ್ಚಯಗಳು ಹಿಂದಿನ ಜನ್ಮಕ್ಕೆ ಸಂಬಂಧಪಟ್ಟಿದ್ದು ಅವೇ ಕ್ಲೇಶಗಳು, ಕಮ್ಮ ವೃತ್ತಗಳೂ ಆಗುತ್ತವೆ. ಮಾನಸಿಕ ಕ್ಲೇಶಗಳಿಂದಾಗಿ ಕಮ್ಮಗಳು ಸೃಷ್ಟಿಯಾದರೆ, ಅವು ಮತ್ತೆ ಮರುಕಳಿಸುವ ಗುಣವನ್ನು ಹೊಂದುತ್ತವೆ ಮತ್ತು ಒಂದು ನಿರ್ದಿಷ್ಟ ನಮೂನೆಯನ್ನೇ ಹೊಂದುತ್ತವೆ. ಒಂದುರೀತಿಯ ನಮೂನೆಯಲ್ಲಿಯೇ ಆಗುವ ಪ್ರವೃತ್ತಿ ಮತ್ತು ಅದು ಉತ್ಪನ್ನವಾಗುವ ಪರಿಣಾಮಗಳ ಮೇಲೆ ಬೀರುವ ಪ್ರಭಾವ ಮತ್ತು ಅದೂ ಒಂದು ನಮೂನೆಯನ್ನು ಪಡೆದುಕೊಳ್ಳುವಂಥದ್ದು. ಇವೆಲ್ಲ ಒಂದು 'ವೃತ್ತ' ಎಂಬ ಪದವನ್ನು ಏಕೆ ಬಳಸುತ್ತೇವೆಂಬುದನ್ನು ಹೇಳುತ್ತದೆ. ಒಂದು ನಮೂನೆ ರೂಪ ತಾಳಿತೆಂದರೆ ಅದು ತನ್ನಿಂತಾನೆ ಕಾರ್ಯ ಆರಂಭಿಸುತ್ತದೆ. ಅಂದರೆ ಸ್ವಯಂ ನಿಲ್ಲಬಲ್ಲ ತಂತ್ರವನ್ನು ರೂಪಿಸಿಕೊಳ್ಳುತ್ತದೆ. ಇದೇ 'ಚಕ್ರ' ಎಂದು ಪ್ರಯೋಗಿಸಲಾದ ರೂಪಕದ ಹಿಂದಿನ ಅರ್ಥ. ಬದುಕಿನ ಚಕ್ರದಲ್ಲಿ ಒಂದು ಚಕ್ರದೊಳಗೆ ಹಲವು ಚಕ್ರಗಳಿವೆ; ಅವು ತಮ್ಮ ಸ್ವಂತ ಸಾಮರ್ಥ್ಯದ ಮೇಲೆ ತಿರುಗುವ ಶಕ್ತಿ ಹೊಂದಿದ್ದು, ಈ ಜಾತಿ ಜರಾಮರಣ ಪುನರ್ಜನ್ಮದ ಚಕ್ರ ಮತ್ತೆ ಮತ್ತೆ ತಿರುಗುತ್ತಿರುವಂತೆ ಮಾಡುತ್ತಿರುತ್ತದೆ.

### 2. ಸಂಖಾರಾ :

I. ಸಂಖಾರಾ ಎನ್ನುವುದಕ್ಕೆ ಹಲವಾರು ಅರ್ಥಗಳಿವೆ. ಏನೆಲ್ಲ ವಸ್ತುಗಳು, ಸಂಗತಿಗಳು ಇವೆಯೋ ಅವು ಎಂಬುದಾಗುತ್ತದೆ. ಮನೋನಿರ್ಮಿತಿಗಳು ಅಥವಾ ಒಂದು ಅರಿವಿನಿಂದ ಉದಯವಾಗುವ ವಿಚಾರಗಳು ಇತ್ಯಾದಿ ಎಂಬುದೂ ಆಗುತ್ತದೆ. ನಾವು ಚರ್ಚಿಸುತ್ತಿರುವ ಈ ಸಂದರ್ಭದಲ್ಲಿ ಇಚ್ಛಾಪೂರ್ವಕವಾಗಿ ಮಾಡುವ ಮೂರು ರೀತಿಯ ಕಮ್ಮಗಳು. ಕಾಯಕಮ್ಮ, ವಾಚಿಕಮ್ಮ ಮತ್ತು ಮನೋಕಮ್ಮ ಎಂಬ ಅರ್ಥವನ್ನು ಇಟ್ಟುಕೊಳ್ಳಬೇಕು.

ನಿರ್ದಿಷ್ಟವಾಗಿ ಹತ್ತು ರೀತಿಯ ಪುನರ್ಜನ್ಮಕ್ಕೆ ಕಾರಣವಾಗುವ ಕುಶಲ ಅಕುಶಲ ಕಮ್ಮಗಳ ಬಗ್ಗೆ ನಾವು ಹೇಳುತ್ತಿದ್ದೇವೆ. ಅವು: ಪ್ರಾಣಿಹಿಂಸೆ, ಕಳ್ಳತನ, ವ್ಯಭಿಚಾರ (ಇದರಲ್ಲಿ ಮದ್ಯಪಾನ ಸೇರಿದೆ) – ಇವು ಮೂರು ಕಾಯಕಮ್ಮಗಳು. ಸುಳ್ಳು ಹೇಳುವುದು, ಚಾಡಿ ಹೇಳುವುದು, ಕೆಟ್ಟ ಮಾತನಾಡುವುದು ಮತ್ತು ಹರಟೆ ಕೊಚ್ಚುವುದು – ಇವು ನಾಲ್ಕು ವಾಚಿಕಕಮ್ಮಗಳು. ಲೋಭಿತನ, ದ್ವೇಷ ಮತ್ತು ಮಿಥ್ಯಾದೃಷ್ಟಿ – ಇವು ಮೂರು ಮನೋ ಕಮ್ಮಗಳು.

ಈ ಹತ್ತೂ ಬಗೆಯ ಕಮ್ಮಗಳನ್ನು ಆಚರಣೆಯಲ್ಲಿಟ್ಟುಕೊಂಡಾಗ, ಪದೇ ಪದೇ ಮಾಡುತ್ತಿದ್ದಾಗ ಕಮ್ಮ ವೃತ್ತವಾಗುತ್ತದೆ. ಈ ಕಮ್ಮ ವೃತ್ತವು ಮನುಷ್ಯ ಜನ್ಮಕ್ಕಿಂತಲೂ ಕಡೆಯವಾದ ನಾಲ್ಕುಬಗೆಯ ಅಪಾಯ ಅಥವಾ ದುಗ್ಗತಿಯ ಲೋಕಗಳಲ್ಲಿ ಪುನರ್ಜನ್ಮ ತಳೆಯುವಂತೆ ಮಾಡುತ್ತದೆ. ಈ ದುಃಖದ ಲೋಕಗಳಲ್ಲಿ ಜೀವಿಗಳು ಸ್ವತಃ ಸಂಭವತೆಯಿಂದ ಉದ್ಭವವಾದ ಮನಸ್ಸಿರುವವರು, ಅವರು ಪ್ರಜ್ಞಾ ಪೂರ್ಣವಾದ ಕಮ್ಮಗಳಿಂದ ತಮ್ಮ ಗುರಿಯನ್ನು ಸಾಧಿಸಿಕೊಳ್ಳಲು ಸಾಧ್ಯವಿಲ್ಲ. ಸುಗತಿ ಲೋಕಗಳಲ್ಲಿ ವಾಸಿಸುವ ಜೀವಿಗಳು ಸಹಜ ಪ್ರವೃತ್ತಿ ಅಥವಾ ಸ್ವತಃ ಸಂಭವವಾದ ಮನಸ್ಸಿನಿಂದ ತಮ್ಮ ಗುರಿಗಳನ್ನು ಸಾಧಿಸಿಕೊಳ್ಳಬಹುದು. ಒಮ್ಮೆ ಜೀವಿಗಳು ನಾಲ್ಕುಬಗೆಯ ದುಗ್ಗತಿಗಳಲ್ಲಿ ಹುಟ್ಟಿದರೆಂಬದರೆ ಆ ಸ್ಥಿತಿಗಳಿಂದ ಅವರು ಹೊರಬರುವುದೇ ಕಷ್ಟವಾಗುತ್ತದೆ. ಆದ್ದರಿಂದ ಅಂತಹ ಜೀವಿಗಳನ್ನು ವಿನಿಪಾತಿಕರೆಂದು ಕರೆಯುತ್ತಾರೆ. ಕೆಟ್ಟ ಕೆಲಸಗಳಿಗಾಗಿ ಆ ರೀತಿಯ ಫಲವನ್ನು ಅನುಭವಿಸಿ ತಮ್ಮ ಗುರಿ-ಸಾಧನೆಗಳ ಮೇಲೆ ನಿಯಂತ್ರಣವನ್ನು ಹೊಂದಿರುವುದಿಲ್ಲ. ದುಗ್ಗತಿಯ ನಾಲ್ಕು ಲೋಕಗಳು:

1. ಅಸುರ ಲೋಕ :- ಅಪಾರ ಗುಪ್ತ ಶಕ್ತಿಯುಳ್ಳ, ಆದರೆ ತಮ್ಮ ಮನಸ್ಸಿನ ಮೇಲೆ ಪ್ರತಿಸ್ಪಂದನೆಯಿಲ್ಲದ ಮತ್ತು ತಮ್ಮ ಗುರಿಗಳ ಮೇಲೂ ಹತೋಟಿ ಇರದ ರಾಕ್ಷಸ ಜೀವಿಗಳು.
2. ಪೇತಲೋಕ :- ಮುಕ್ಕಾದ ದೇಹವುಳ್ಳ ಪ್ರೇತಗಳು.
3. ತಿರಚ್ಚಾನ ಲೋಕ :- ಪ್ರಾಣಿ ಪ್ರಪಂಚ.
4. ನಿರಯ ಲೋಕ :- ನರಕಲೋಕ. ಈ ಅತ್ಯಂತ ಕೆಳ ಲೋಕದಲ್ಲಿರುವ ಜೀವಿಗಳು ಕೊನೆಯಿರದ ದುಃಖವನ್ನನುಭವಿಸುತ್ತಾರೆ. ಆಸ್ತಿಕ ಧರ್ಮಗಳು ಹೇಳುವಂತೆ ಇದು ನಿರಂತರವಾದ ಸ್ಥಿತಿ ಏನಲ್ಲ. ಕಮ್ಮಗಳು ಮುಗಿದಮೇಲೆ ಆ ಜೀವಿಗಳು ತಮ್ಮ ಕಮ್ಮಾನುಸಾರ ಬೇರೆ ಲೋಕಗಳಲ್ಲಿ ಜನ್ಮ ತಳೆಯಬಹುದು.

**II.** ಹತ್ತು ಕಮ್ಮಗಳೆಂದರೆ: ಪ್ರಾಣಿಹಿಂಸೆಯನ್ನು, ಕಳ್ಳತನವನ್ನು ಮತ್ತು ವ್ಯಭಿಚಾರವನ್ನು ಮಾಡದೇ ಇರುವುದು – ಇವು ಮೂರು ಕುಶಲ ಕಾಯಕಮ್ಮಗಳು. ಸುಳ್ಳು ಹೇಳದಿರುವುದು, ಚಾಡಿ ಹೇಳದಿರುವುದು, ಕೆಟ್ಟ ಮಾತನಾಡದಿರುವುದು ಮತ್ತು ಹರಟೆ ಕೊಚ್ಚದಿರುವುದು – ಇವು ನಾಲ್ಕು ವಾಚಕುಶಲ ಕಮ್ಮಗಳು. ಇನ್ನೊ ಲೋಭಿತನ, ದ್ವೇಷ ಮತ್ತು ಮಿಥ್ಯಾದೃಷ್ಟಿ ಇಲ್ಲದೇ ಇರುವುದು – ಇವು ಮೂರು ಮನೋಕುಶಲ ಕಮ್ಮಗಳು.



ಈ ಹತ್ತು ಕುಶಲ ಕಮ್ಮಗಳಿಗೆ ಪುನರ್ಜನ್ಮ ಸೃಷ್ಟಿಯ ಶಕ್ತಿ ಇರುವುದರಿಂದ ತಮ್ಮ ಅಕುಶಲ ಕಮ್ಮಗಳ ಉತ್ತಮೋತ್ತಮತೆಯಿಂದಾಗಿ ಜೀವಿಗಳು ಉತ್ತಮ ಲೋಕಗಳಲ್ಲಿ ಅಂದರೆ ಮಾನವ ಲೋಕದಲ್ಲಿ, ಕಾಮಲೋಕದಲ್ಲಿ, ರೂಪ-ಅರೂಪ ಬ್ರಹ್ಮಲೋಕಗಳಲ್ಲಿ ಜನ್ಮತಳೆಯುತ್ತಾರೆ. ಕುಶಲ ಕಮ್ಮಗಳಲ್ಲಿ ತೊಡಗಿಸಿಕೊಳ್ಳುವುದರಿಂದ ಈ ಲೋಕಗಳಲ್ಲಿರುವ ಜೀವಿಗಳು ಪರಿಶುದ್ಧ ಮನಸ್ಸನ್ನು ಹೊಂದಿ ಮತ್ತು ಮನಸ್ಸಿನ ಮೇಲೆ ನಿಯಂತ್ರಣ ಹೊಂದಿರುವುದರಿಂದ ಪ್ರಜ್ಞಾಪೂರ್ವಕವಾಗಿ ಮತ್ತು ಇಚ್ಛಾಶಕ್ತಿಯಿಂದ ತಮ್ಮ ಗುರಿಗಳ ಮೇಲೆ ನಿಯಂತ್ರಣ ಸಾಧಿಸಬಹುದು. ಸುಗತಿಯ ಮಾನವ ಮತ್ತು ದಿವ್ಯ ಜೀವಿಗಳು ಅಲ್ಲಿ ಹುಟ್ಟಿರುವುದು ತಮ್ಮ ಕುಶಲ ಕಮ್ಮಗಳ ದೆಸೆಯಿಂದಾಗಿ. ಆದರೆ ಅಲ್ಲಿ ಹುಟ್ಟಿದ ಮೇಲೆ ಕುಶಲ ಮತ್ತು ಅಕುಶಲ ಕಮ್ಮಗಳನ್ನೆಸಗಿ ಅದಕ್ಕೆ ತಕ್ಕಂತಹ ಭವಿಷ್ಯವನ್ನು ಪಡೆಯುತ್ತಾರೆ.

### 3. ವಿಞ್ಞಾಣ

ಇಲ್ಲಿ ವಿಞ್ಞಾಣವೆಂದರೆ ಮತ್ತೆ ಕೊಂಡಿಯಾಗುವ ಅಥವಾ ಪುನರ್ಜನ್ಮಕ್ಕೆ ಕಾರಣವಗುವ ಚಿತ್ತ (ಪಟಿಸಂಧಿ ವಿಞ್ಞಾಣ) ಎಂದು ಅರ್ಥ. ಮತ್ತೆ ಕೊಂಡಿಯಾಗುವ ಪದಪ್ರಯೋಗ ಏಕೆಂದರೆ ಅದು ಒಂದು ಜನ್ಮದಿಂದ ಇನ್ನೊಂದು ಜನ್ಮಕ್ಕೆ ಕೊಂಡಿ ಬೆಸೆಯುವಂಥದು. ಪಟಿಚ್ಚ ಸಮುಪ್ಪಾದದ ಸಂದರ್ಭದಲ್ಲಿ ಹೇಳುವುದಾದರೆ ಈಗಿನ ವರ್ತಮಾನದ ಜನ್ಮವನ್ನು ಹಿಂದಿನ ಜನ್ಮಕ್ಕೆ ಬೆಸೆಯುವಂಥದ್ದು. ಆ ಹಿಂದಿನ ಜನ್ಮದ ಕಮ್ಮದ ದೆಸೆಗಳಿಂದಾಗಿಯೇ ಈಗಿನ ಜನ್ಮಕ್ಕೆ ಕಾರಣವಾದುದಕ್ಕಾಗಿ. ಹೀಗೆ ವಿಞ್ಞಾಣವು ಪೂರ್ವಜನ್ಮದ ಕಮ್ಮಫಲದ ಚಿತ್ತದಿಂದಲೇ ಈಗಿನ ಜನ್ಮದ ಮೊದಲ ಚಿತ್ತವಾಗಿ ಪರಿಣಮಿಸಿರುವುದನ್ನು ಹೇಳುತ್ತದೆ. ಪುನರ್ಜನ್ಮ ಚಿತ್ತದಲ್ಲಿ ಬೇರೆ ಚಿತ್ತ ಸ್ಥಿತಿಗಳ ಕಾಲಘಟ್ಟಗಳಿರುವಂತೆ ಮೂರು ಕ್ಷಣಗಳಿವೆ: ಉಪ್ಪತ್ತಿ (ಉತ್ಪತ್ತಿ), ಠಿತಿ (ಸ್ಥಿತಿ) ಮತ್ತು ಭಂಗ (ಲಯ). ಪುನರ್ಜನ್ಮ ಚಿತ್ತ (ಧಾರಣೆ) ದಿಂದ ಹೊಸ ಜೀವವು ಅಸ್ತಿತ್ವಕ್ಕೆ ಬರುತ್ತದೆ ಮತ್ತು ಆ ಜೀವವು ಹೊರಟುಹೋದ ಕೂಡಲೇ ಅದರ ಹಿಂದೆಯೇ ಚಿತ್ತಸ್ಥಿತಿಯು ಇರುತ್ತದೆ. ಅದನ್ನೇ ಭವಾಂಗ ಎನ್ನುವುದು. ಈ ಚಿತ್ತಸ್ರೋತವು ನದಿಯಂತೆ ಜೀವಕೊನೆಯಾಗುವವರೆಗೂ, ಚ್ಯುತಿ ಚಿತ್ತದವರೆಗೂ, ಹರಿಯುತ್ತದೆ. ಭವಾಂಗವು ಪುನರ್ಜನ್ಮ ಚಿತ್ತ ಮತ್ತು ಚ್ಯುತಿ ಚಿತ್ತದ ನಡುವೆ ಒಂದು ಸುಪ್ತ ಚೇತನವಾಗಿ ಹರಿಯುತ್ತಿರುತ್ತದೆ. ಈ ಸ್ರೋತವು ಯಾವಾಗ ಭಂಗಗೊಳಪಡುತ್ತದೆಂದರೆ ಯಾವಾಗ ಇಂದ್ರಿಯ ಅಥವಾ ಮಾನಸಿಕ ಸಂಗತಿಗಳು ಪ್ರಜ್ಞಾಪೂರ್ವ ಚಿತ್ತವನ್ನೋ ಅರೆ ಪ್ರಜ್ಞಾ ಚಿತ್ತವನ್ನೋ ಎಡತಾಕಿದಾಗ.

ಕಮ್ಮ ಫಲಾಧಾರವಾದ ಪುನರ್ಜನ್ಮ ಚಿತ್ತದ ಜೊತೆಗೆ ನಾಲ್ಕು ಬೇರೆ ಪಚ್ಚಯಗಳು ಅಥವಾ ಸ್ಥಿತಿಗಳು ಕೂಡಿಬರುತ್ತವೆ. ನಾಮರೂಪ, ಸಳಾಯತನ, ಸ್ಪರ್ಶ ಮತ್ತು ವೇದನೆಗಳು ಈ ನಾಲ್ಕು ಸಂಗತಿಗಳು ಬದುಕಿನ ಉಳಿದ ಜಡ ಅಂಗಗಳು. ಇದನ್ನೇ ಉಪಪತ್ತಿಭವ ಅಥವಾ ವಿಪಾಕ ವೃತ್ತ ಎಂದು ಕರೆಯುವುದು. ಈ ಐದೂ ಪಚ್ಚಯಗಳು ಪರಿಣಾಮ

ಬೀರುವ ವೃತ್ತಗಳಾಗಿದ್ದು, ಎಲ್ಲವೂ ಒಟ್ಟಿಗೆ ಪುನರ್ಜನ್ಮ ಆಗುವ ವೇಳೆಗೆ ಉದಯವಾಗಿ ಆನಂತರದಲ್ಲಿ ಪ್ರತಿಯೊಂದು ತನ್ನದೇ ಆದ ಕೆಲಸವನ್ನು ನಿರ್ದಿಷ್ಟ ರೀತಿಯಲ್ಲಿ ಮಾಡುತ್ತದೆ. ತಂದೆ–ತಾಯಿಗಳ ಭೌತಿಕ ಸಂಯೋಗದಿಮದ ಗರ್ಭಧಾರಣೆಯಾದ ವೇಳೆಯೇ ಜೀವಿ ಉದಿಸಿದ ಸಂದರ್ಭವಾಗಿದ್ದು, ಆಗ ಹೃದಯ ಭಾಗ ಮಾತ್ರ ರೂಪುಗೊಂಡಿರುತ್ತದೆ. ಇದು ಮತ್ತು ತತ್ಸಂಬಂಧ ಮಾನಸಿಕ ಸಂಗತಿಗಳು. ಮನಸ್ಸು–ಶರೀರಗಳು ತಮ್ಮ ಗುಣಾನುಸಾರ ಒಟ್ಟಿಗೆ ಉತ್ಪನ್ನವಾಗುತ್ತವೆ. ಸಳಾಯತನಗಳೂ ಒಟ್ಟಿಗೆ ಉತ್ಪನ್ನವಾಗುತ್ತವೆ. ಇವೆಲ್ಲವೂ ಕತ್ರ್ಯ, ಕರ್ಮ, ಚಿತ್ತ ಮಾನಸಿಕ ರೂಪಗಳೊಂದಿಗೆ ಸಂವಾದಿಸುವ ತಂತ್ರವನ್ನೊದಗಿಸುತ್ತವೆ.

ಜನ್ಮವಾದ ನಂತರ ಭವಾಂಗದ ಸುಪ್ತ ಪ್ರಜ್ಞಾವಸ್ಥೆಯಲ್ಲಿ ಒಂದು ಜೀವವು ತನ್ನ ಹಿಂದಿನ ಜೀವನ ಎಲ್ಲರೀತಿಯ ಘಟನೆಗಳನ್ನು ತಾನೇ ನೋಡುತ್ತಿರುವ ಅನುಭವವನ್ನು ಪಡೆಯಬಹುದು. ಆ ವ್ಯಕ್ತಿ ಪಾರಮಾರ್ಥಿಕವಾಗಿ ಉನ್ನತ ಸ್ಥಿತಿಯಲ್ಲಿದ್ದರೆ ತಾನು ಗರ್ಭದಲ್ಲಿದ್ದ ಸಂದರ್ಭದಲ್ಲಿ ಹೇಗಿದ್ದೆನೆಂಬ ಅರಿವನ್ನು ಹೊಂದಿರುತ್ತಾನೆ. ಬೇರೆಯವರಿಗೆ ಅದೊಂದು ಸುಪ್ತಾವಸ್ಥೆಯಲ್ಲಿನ ಕನಸಿನಂತೆ ಅನುಭವವಾಗಿರುತ್ತದೆ. ಚಿತ್ತ ಮತ್ತು ಚೇತಸಿಕಾ ಕತ್ರ್ಯ ಮತ್ತು ಕಮ್ಮಗಳ ನಡುವೆ ಆಗ ಪರಸ್ಪರ ವರ್ತನೆಗಳನ್ನು ಗಮನಿಸಿ ಆ ಬಗ್ಗೆ ಚಿತ್ತದಲ್ಲಿ ಒಂದು ನಿಲುವನ್ನು ಒತ್ತುತ್ತದೆ. ಚಿತ್ತ ಮತ್ತು ಚೇತಸಿಕ ನಡುವಿನ ಸ್ಪರ್ಶವೇ ಒಂದು ಅನುಭವವನ್ನು ಅಥವಾ ವೇದನೆಯನ್ನುಂಟುಮಾಡುತ್ತದೆ. ಅದು ಸುಖದ, ದುಃಖದ ಅಥವಾ ಅದ್ಯಾವುದೂ ಆಗದ ವೇದನೆಯಾಗಿರಬಹುದು.

ಒಬ್ಬನು ತನ್ನ ತಾಯಿಯ ಗರ್ಭದಲ್ಲಿ ದೈಹಿಕವಾಗಿ, ಮಾನಸಿಕವಾಗಿ ಬೆಳೆಯುತ್ತಿದ್ದಂತೆ ಮತ್ತು ಕಾಲ ಸರಿದಂತೆ ಕರ್ಮೇಂದ್ರಿಯಗಳೂ ಬೆಳೆಯಲು ಮಗುವು ಗರ್ಭದಿಂದ ಹೊರಬಂದು ಹೊರ ಜಗತ್ತಿನೊಂದಿಗೆ ಸಂಪರ್ಕವಾಗುತ್ತದೆ. ಹೀಗೆ ಹೊರಬಂದಾಗ ಈ ಕರ್ಮೇಂದ್ರಿಯಗಳು ತಮ್ಮ ತಮ್ಮ ಬಾಹ್ಯ ಸಂಗತಿಗಳೊಂದಿಗೆ ಅಥವಾ ವಸ್ತುಗಳೊಂದಿಗೆ ಸೇರಿ ಪರಸ್ಪರ ವರ್ತನೆ ಆಗುತ್ತದೆ. ಈ ಸ್ಪರ್ಶ ಅಥವಾ ಪರಸ್ಪರ ವರ್ತನೆ ಅಥವಾ ಕಾರ್ಯ ಒಬ್ಬನನ್ನು ತನ್ನ ಸುತ್ತಮುತ್ತ ಇರುವ ಪ್ರಪಂಚದ ಒಂದು ಭಾಗವನ್ನಾಗಿ ಮಾಡುತ್ತದೆ. ಹೀಗೆ ಪ್ರಪಂಚ ಮತ್ತು ಒಬ್ಬನು ಅವಿಭಾಜ್ಯವಾಗುತ್ತಾರೆ. ಹೀಗೆ ಬದುಕು ಮುಗಿಯುವವರೆಗೂ ಒಬ್ಬನು ಪ್ರಪಂಚವನ್ನು ಸಮ್ಮತವಾಗುವ, ಸಮ್ಮತವಾಗದಿರದ ಅಥವ ಯಾವ ಭಾವನೆಗಳೂ ಅಥವಾ ವೇದನೆಗಳೂ ಇರದ ಸ್ಥಿತಿಯನ್ನು ಅನುಭವಿಸುತ್ತಾನೆ (ವೇದೇತಿ); ಈ ವೇದನೆಗಳೇ ತನ್ಹಾಗಳನ್ನು ಹುಟ್ಟುವಂತೆ ಮಾಡುತ್ತವೆ.

ಒಬ್ಬನು ವೇದನೆಗಳ ಮೂಲಕ ಏನನ್ನೇ ಅನುಭವಿಸಲಿ, ಅದು ಸಂತೋಷಕರ ವಾಗಿದ್ದಲ್ಲಿ ಆಶಿಸುತ್ತಾನೆ, ಅದು ಅಸಂತೋಷಕರವಾಗಿದ್ದಲ್ಲಿ ಅದನ್ನು ಹಿಮ್ಮೆಟ್ಟುತ್ತಾನೆ, ತಿರಸ್ಕರಿಸುತ್ತಾನೆ.

ಹೀಗೆ ವಸ್ತುಗಳನ್ನು ಇಷ್ಟಪಡುವ ಅಥವಾ ಇಷ್ಟಪಡದಿರುವುದು ಅರಿವಿಲ್ಲದಂತೆಯೇ ಒಬ್ಬನನ್ನು ತನ್ಹಾದೊಳಗೆ ದೂಡುತ್ತಿದೆ. ಯಾವ ವೇದನೆಯೂ ಆಗದಿರುವ ಸ್ಥಿತಿಯು



ಸಮಸ್ಥಿತಿಯ ಭಾವವಾಗಿರುತ್ತದೆ. ಒಬ್ಬನು ಭಿನ್ನವಿರದ ಭಾವದಿಂದಲೂ ಆಶಿಸಬಹುದು. ಅದು ಸಂತೋಷ ಅಥವಾ ಅಸಂತೋಷದ ತನ್ಹಾ ಆಗಿದ್ದು ಅವಿದ್ಯೆಯುಕ್ತವಾದ ಲೋಭ, ಮೋಹಗಳಿಗೆ ಎಡೆಮಾಡಿಕೊಡುತ್ತದೆ.

ಹೀಗೆ ವೇದನೆಯು ಪರಿಣಾಮ ಬೀರುವ ವೃತ್ತದ ಭಾಗವಾಗಿ ಪಚ್ಚಯ ಅಥವಾ ಕಾರ್ಯಸಂಬಂಧವಾಗಿ ಅದು ಕ್ಲೇಶವೊಂದರ ಉತ್ಪತ್ತಿಗೆ ಕಾರಣವಾಗುತ್ತದೆ; ಕಮ್ಮ ವೃತ್ತವಾಗುತ್ತದೆ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ಹಳೆಯ ಕ್ಲೇಶಗಳು ಮತ್ತು ಕಮ್ಮಗಳ ಫಲವಾಗಿ ಅವು ಈಗಿನ ಬದುಕಿನಲ್ಲಿ ಪರೋಕ್ಷವಾಗಿ ಒಂದು ಕಾರಣ ರೂಪವಾಗಿ ಪ್ರತ್ಯಕ್ಷ ಬದುಕಿನಲ್ಲಿ ಚಿಗುರಿಕೊಳ್ಳುತ್ತವೆ. ಹೀಗೆ ಮೂರು ವೃತ್ತಗಳು ಸಂಸಾರವೆಂಬ ಚಕ್ರವನ್ನು ಗತಿಯಲ್ಲಿಟ್ಟಿರುತ್ತವೆ.

**4. ನಾಮರೂಪ**

ಇಲ್ಲಿ ನಾಮ–ರೂಪವೆಂದರೆ ಪುನರ್ಜನ್ಮ ಚಿತ್ತ ಕೂಡಿದ ಚೇತಸಿಕಾಗಳು ಮತ್ತು ತಂದೆ–ತಾಯಿಗಳಿಂದ ರೂಪಿತವಾದ ಹೃದಯ ಮೂಲವಾದ ಭೌತಿಕ ರೂಪ. ಭೌತಿಕ ಶರೀರವು ಮತ್ತು ಚಿತ್ತ ಹಾಗೂ ಚೇತಸಿಕಾಗಳು ಏಕಕಾಲಕ್ಕೆ ಗರ್ಭಧಾರಣೆಯ ಸಮಯದಲ್ಲೇ ಹುಟ್ಟುತ್ತವೆ.

**5. ಸಳಾಯತನಗಳು (ಆರು ಇಂದ್ರಿಗಳು)**

ಆರು ಇಂದ್ರಿಯಗಳೆಂದರೆ ಕಣ್ಣು, ಕಿವಿ, ಮೂಗು, ನಾಲಗೆ, ಶರೀರ ಮತ್ತು ಮನಸ್ಸು. ಈ ಆರು ಜ್ಞಾನೇಂದ್ರಿಯಗಳು ಪುನರ್ಜನ್ಮ ಚಿತ್ತ (ವಿಜ್ಞಾಣ) ದೊಂದಿಗೆ ಹುಟ್ಟಿ ಆನಂತರದಲ್ಲಿ ಕಮ್ಮವಿಪಾಕದನುಸಾರ ತಮ್ಮತಮ್ಮದೇ ಆದ ರೀತಿಯಲ್ಲಿ ಬೆಳೆಯುತ್ತವೆ.

**6. ಸ್ಪರ್ಶ (ಫಸ್ಸ)**

ಇವು ಯಾವುವೆಂದರೆ: ಚಕ್ಷು ಸಂಸ್ಪರ್ಶ (ಚಕ್ಕು ಸಂಫಸ್ಸ), ಶ್ರೋತ ಸಂಸ್ಪರ್ಶ (ಸೋತ ಸಂಫಸ್ಸ); ಘ್ರಾಣ ಸಂಸ್ಪರ್ಶ (ಘಾನ ಸಂಫಸ್ಸ); ಜಿಹ್ವಾ ಸಂಸ್ಪರ್ಶ (ಜಿಹ್ವಾ ಸಂಫಸ್ಸ) ಮತ್ತು ಮನೋ ಸಂಸ್ಪರ್ಶ (ಮನೋ ಸಂಫಸ್ಸ). ಆರು ಜ್ಞಾನೇಂದ್ರಿಯಗಳಿಗೆ ಅವಕ್ಕೆ ತಕ್ಕುದಾದ ಸಂಸ್ಪರ್ಶಗಳಿವೆ. ಇವು ಮನಸ್ಸಿಗೆ ಆಹಾರವನ್ನು ಕೊಡುವಂತಹವು. ಹೇಗೆ ದೇಹಕ್ಕೆ ಆಹಾರಗಳೋ ಹಾಗೆಯೇ ಇಂದ್ರಿಯಗಳೂ ಮಾನಸಿಕ ವಿಧಾನಕ್ಕೆ ಆಹಾರವನ್ನೊದಗಿಸುತ್ತವೆ. ಸಂಸ್ಪರ್ಶ ಎನ್ನುವುದು ಸ್ಪರ್ಶ ಮತ್ತು ಮೂರು ಸಂಗತಿಗಳೊಂದಿಗೆ ಪರಸ್ಪರ ಹೆಣೆದುಕೊಂಡ ಯಂತ್ರ ಕೌಶಲ್ಯತೆ. ಆ ಮೂರು ಸಂಗತಿಗಳೆಂದರೆ: ಇಂದ್ರಿಯ ಮೂಲವಾದ ಚಿತ್ತ, ಇಂದ್ರಿಯಗಳು ಮತ್ತು ಅವುಗಳ ಬಾಹ್ಯ ಸಂಗತಿಗಳು.

ಹೀಗೆ ಕತ್ರ್ಯ ಮೂಲವಾದ ಬದುಕನ್ನು ಕರ್ಮಮೂಲವಾದ ಜಗತ್ತಿನೊಡನೆ ಪರಸ್ಪರ ಸೇರಿಸುವುದು. ಹೀಗೆ ಸ್ಪರ್ಶವು ವೇದನೆಯನ್ನು ಉಂಟುಮಾಡುವುದು ಇಲ್ಲವೆ

ಏಕಕಾಲದಲ್ಲಿಯೇ ಹೊರಗೆ ಕಾಣುವ ವಸ್ತುವಿನ ಪ್ರಕೃತಿಯನ್ನು ಅಥವಾ ಗುಣವನ್ನು ಅನುಭವಿಸುವುದು ವೇದನೆಯು ಕಮ್ಮವಿಪಾಕವಾಗಿ ತನ್ಮೂಲಕ ಕ್ರಿಯಾಶೀಲವಾದ ಅನುಸಯದ ಉದಯಕ್ಕೆ ಎಡೆಮಾಡಿಕೊಡುತ್ತದೆ. ಅನುಸಯವೆಂದರೆ ತನ್ಹಾದತ್ತ ಪ್ರವೃತ್ತವಾಗುವುದು – ಹೀಗೆ ಅಕ್ರಿಯಶೀಲ ವೃತ್ತವು ಕ್ರಿಯಾಶೀಲ ವೃತ್ತಕ್ಕೆ ಗತಿಯನ್ನು ನೀಡುತ್ತದೆ.

### 7. ವೇದನಾ

ಇಲ್ಲಿ ಸುಖವಾದ ಅಥವಾ ಸಮ್ಮತವಾದ, ದುಃಖದ ಅಥವಾ ಅಸಮ್ಮತವಾದ ಮತ್ತು ತಟಸ್ಥ ಅಥವಾ ಭೇದವಿಲ್ಲದ ಮಾನಸಿಕ ಮತ್ತು ಶಾರೀರಿಕ ವೇದನೆಗಳಿವೆ. ಇನ್ನು ಆರು ಸ್ಪರ್ಶಗಳನ್ನು ತೆಗೆದುಕೊಂಡರೆ ಹದಿನೆಂಟು (6 x 3 = 18) ವೇದನಾಗಳಿವೆ. ಅವನ್ನು ಎರಡರಿಂದ ಮಾನಸಿಕ ಮತ್ತು ಶಾರೀರಿಕ ಎಂದು ಮತ್ತೂ ಗುಣಿಸಿದರೆ ಒಟ್ಟು ಮೂವತ್ತಾರು ಆಗುತ್ತವೆ. ಇವು ಮೂವತ್ತಾರು ತನ್ಹಾ ಸ್ರೋತಗಳಿಗೆ ಮೂಲವಾಗಿ ಹರಿಯುತ್ತಲೇ ಇರುತ್ತವೆ. ತನ್ಹಾಗಳು ಬಗೆಬಗೆಯಲ್ಲಿ ಮತ್ತು ವೃತ್ತಗಳಲ್ಲಿ ಬೆಳೆದು ಸಂಸಾರವೆಂಬ ಚಕ್ರ ನಿಲ್ಲದೆ ಸಾಗುತ್ತಲೇ ಇರುತ್ತದೆ.

### 8. ತಣ್ಹಾ

ಮೂರು ಬಗೆಯ ತಣ್ಹಾಗಳಿವೆ. ಕಾಮತಣ್ಹಾ (ಇಂದ್ರಿಯ ಸುಖಗಳ ಬಯಕೆ), ಭವತಣ್ಹಾ (ಇನ್ನೂ ಇರಲು ಮತ್ತು ಉಳಿವಿಗಾಗಿ ಬಯಸುವುದು) ಮತ್ತು ವಿಭವತಣ್ಹಾ (ಬೇಡವೆಂಬುದಕ್ಕಾಗಿ ಬಯಸುವುದು). ಈ ಹಿಂದೆಯೇ ಹೇಳಿದಂತಹ ತಣ್ಹಾವನ್ನು ಹರಿಯುವ ನದಿಗೆ ಹೋಲಿಸಲಾಗಿದೆ. ಅಂದರೆ ಕ್ಷಣಿಕ ಪ್ರವೃತ್ತಿಯದಾದರೂ ಒಂದಾದಮೇಲೆ ಒಂದರಂತೆ ಆಗುವುದಿದ್ದರೂ ತಣ್ಹಾ ಒಂದು ನಿರಂತರ ಹರಿವಿನಂತೆ, ಬರುಬರುತ್ತಾ ಇನ್ನಷ್ಟು ಗಾಢವಾಗುತ್ತದೆ. ಒಮ್ಮೆ ಗಟ್ಟಿಗೊಂಡಿತೆಂದರೆ ಅದು ಉಪಾದಾನವಾಗಿ ನಂತರ ಭವವಾಗಿ ಅಥವಾ ಕಮ್ಮರೂಪವಾಗಿ ಮೈದಾಳುತ್ತದೆ. ಮೂರುರೀತಿಯ ತಣ್ಹಾ ಸ್ರೋತಗಳು ಮೇಲೆ ಹೇಳಿದ ಮೂವತ್ತಾರು ವೇದನೆಗಳಲ್ಲಿ ಒಟ್ಟು ನೂರೆಂಟು ಸ್ರೋತಗಳಾಗುತ್ತವೆ. ಇವನ್ನು ಭೂತ, ವರ್ತಮಾನ, ಭವಿಷ್ಯತ್ ಎಂದು ಕಾಲಗಣನೆಯಲ್ಲಿ ಪರಿಗಣಿಸಿ ನೋಡಲು ಮೂರುನೂರ ಇಪ್ಪತ್ನಾಲ್ಕು ಆಗುತ್ತವೆ. ಹೀಗೆ ಇವುಗಳ ಸಂಯೋಜನೆ ಕ್ರಮ ಪಲ್ಲಟನೆಯಲ್ಲಿ ವಿವೇಚಿಸಿದರೆ ನಕ್ಷತ್ರಗಳ ಸಂಖ್ಯೆಯಾದೀತು! ಆದ್ದರಿಂದ 'ಜಾಲ' ಎಂಬ ರೂಪಕಾಲಂಕಾರವನ್ನು ತನ್ಹಾಕ್ಕೆ ಬಳಸಿ ಅದು ಹೇಗೆ ದುಃಖಸತ್ಯದ ಮೂಲವಾಯಿತೆಂದು ವಿವರಿಸಲಾಗುತ್ತದೆ.

### 9. ಉಪದಾನ

ನಾಲ್ಕು ರೀತಿಯ ಉಪಾದಾನಗಳಿವೆ: ಕಾಮೂಪದಾನ, ದಿಟ್ಠೂಪಾದಾನ, ಸೀಲಬ್ಬತೂಪಾದನ ಮತ್ತು ಅತ್ತವಾದೂಪಾದಾನ. ತಣ್ಹಾದ ಪ್ರಬಲ ರೂಪವೇ ಉಪಾದಾನವಾಗಿದ್ದು, ಅದು ನಾಲ್ಕು ಭಿನ್ನ ದಿಕ್ಕುಗಳನ್ನು ಹೊಂದಿದೆ. ಇಂದ್ರಿಯ ಭೋಗ



ವಸ್ತುಗಳು, ಅಭಿಪ್ರಾಯ ಮಾಡಿಸಿಕೊಳ್ಳುವುದು ಅಥವಾ ತತ್ವನಿಷ್ಠ ಆಯ್ಕೆಗಳು ಆಂತರಿಕ ಶುದ್ಧಿಗೆ ವ್ರತ, ಶೀಲ, ನಿಯಮಗಳನ್ನನುಸರಿಸಿದರೆ ಸಾಕು ಎಂಬ ನಿಲುವು ಮತ್ತು ಬೇರೆ ಬೇರೆ ರೀತಿಯಲ್ಲಿ ಆತ್ಮ ಅಥವಾ 'ನಾನು' ಎಂಬುದು ಇದೆ ಎಂಬ ಸಂಗತಿ. ಈ ನಾಲ್ಕು ಬಗೆಗಳ ಪೈಕಿ ಕಾಮೂಪದಾನವನ್ನು ಬಿಟ್ಟು ಉಳಿದೆಲ್ಲವೂ ದೃಷ್ಟಿ ಅಥವಾ ಅಭಿಪ್ರಾಯ ಪರಿಕಲ್ಪನೆಗಳಿಗೆ ಸಂಬಂಧಪಟ್ಟಿವೆ. ತನ್ಹಾಕ್ಕೂ ತಾತ್ವಿಕ ಆಯ್ಕೆ ಅಥವಾ ಅಭಿಪ್ರಾಯಗಳ ನಡುವೆ ನಿಕಟವಾದ ಸಂಬಂಧ ಇದೆ ಎಂಬುದು ಇದರಿಂದ ಅರ್ಥವಾಗುತ್ತದೆ.

ಇಂದ್ರಿಯ ಸಂಬಂಧ ಸುಖಗಳಿಗೆ ಅಂಟಿಕೊಂಡಿರುವುದು ಎರಡು ಬಗೆಯವು: ಕ್ಲೇಶಕಾಮ (ಯಾವುದು ಬೇಕೆಂದು ಆಶಿಸಿರುವರೋ ಅದಕ್ಕೆ ಅಂಟಿಕೊಂಡಿರುವುದು) ಮತ್ತು ವಸ್ತು ಕಾಮ (ಈಗಾಗಲೇ ಇಷ್ಟಪಟ್ಟ ವಸ್ತುವಿಗೆ ಅಂಟಿಕೊಂಡಿರುವುದು). ಯಾರು ಕ್ಲೇಶಕಾಮ ಮತ್ತು ವಸ್ತುಕಾಮಗಳಿಗೆ ಅಂಟಿಕೊಳ್ಳುತ್ತಾರೋ ಅಂತಹ ಮನೋಸ್ಥಿತಿಯವರು ಪಂಚಕ್ಖಂಧಗಳನ್ನು ಅರ್ಥಮಾಡಿಕೊಳ್ಳಲಾರರು. ಅವು ಬರೀ ಖಂಧಗಳಲ್ಲ, ಅವು ಪಂಚಕ್ಖಂಧುಪಾದಾನಗಳು. ಅಂದರೆ ಒಬ್ಬನು ನಾಮ-ರೂಪಗಳೆಂಬ ಶರೀರ, ವೇದನಾ, ಸಞ್ಞಾ, ಸಂಖಾರ ಮತ್ತು ವಿಞ್ಞಾಣಗಳಿಗೆ ಸಹಜವಾಗಿಯೇ ಅಂಟಿಕೊಂಡು ಆ ಮೂಲಕ ಕ್ಲೇಶವೃತ್ತ ಹಾಗು ಕಮ್ಮವೃತ್ತಗಳಿಂದ ಕಮ್ಮವನ್ನೆಸಗುತ್ತಾನೆ.

### 10. ಭವ

ಭವ ಎನ್ನುವುದು ಇಡೀ ಅಸ್ತಿತ್ವಕ್ಕೆ ಅನ್ವಯಿಸುವಂತಹುದು. ಒಬ್ಬನು ಹುಟ್ಟುತ್ತಾನೆ; ಕಾಮಭವದಲ್ಲಿಯೋ, (ಇಂದ್ರಿಯ ಸಂಬಂಧ ಆಸೆಗಳಲ್ಲಿ) ರೂಪಭವದಲ್ಲಿಯೋ (ರೂಪ ಬ್ರಹ್ಮಲೋಕ) ಅಸ್ತಿತ್ವಕ್ಕೆ ಬರುತ್ತಾರೆ. ಭವ ಎನ್ನುವುದು ಲೋಕ ಅಥವಾ ಅಸ್ತಿತ್ವದ ನೆಲೆ ಎನ್ನುವುದರ ಸಮಾನಾರ್ಥ ಪದ. ಭವವನ್ನು ಹೀಗೆ ನೋಡಿದಲ್ಲಿ ಎರಡು ವಿಧ:

1. **ಕಮ್ಮಭವ** ಎನ್ನುವುದು ಕಮ್ಮವಿಧಾನ ಅಂದರೆ ಕಾಮ್ಮಿಕವಾಗಿ ಎಚ್ಚರವಿರುವ, ಚಲನಶೀಲವಾಗಿ ಅಸ್ತಿತ್ವವಿರುವ ಪುನರ್ಜನ್ಮಕ್ಕೆ ಕಾರಣವಾಗಿರುವ ಕಮ್ಮ. ಹೀಗೆ ಕಮ್ಮಭವ ಎನ್ನುವುದು ಕುಶಲ ಮತ್ತು ಅಕುಶಲ ಕಮ್ಮಗಳನ್ನೊಳಗೊಂಡಿರುವಂತಹುದು.

2. **ಉಪಪತ್ತಿಭವ :** ಕಮ್ಮ ದೆಸೆಯಿಂದಾಗಿ ಮೂರು ಲೋಕಗಳಲ್ಲಿ ಪುನರ್ಜನ್ಮ ತಳೆಯುವಂತಹುದು. ಹೀಗೆ ಉಪಪತ್ತಿ ಭವವು ನಮ್ಮ ಬದುಕಿನ ಸುಪ್ತಭಾವದಲ್ಲಿರುವ ಪಟಿಚ್ಚ ಸಮುಪ್ಪಾದದ ಐದು ಕೊಂಡಿಗಳನ್ನು ಸೇರಿಸಿಕೊಂಡಿದೆ. ವಿಞ್ಞಾಣ, ನಾಮರೂಪ, ಸಳಾಯತನ, ಫಸ್ಸ, ವೇದನಾ, ಉಪಪತ್ತಿಭವವು ನಿಖರವಾಗಿ ಕಮ್ಮಪ್ರೇರಿತವಾದ ಸಂಗತಿಗಳ ಉದಯ ಮತ್ತು ವೃದ್ಧಿಯನ್ನೇ ಹೇಳುತ್ತವೆ; ಈ ಕಮ್ಮಗಳು ಕುಶಲವೂ ಅಲ್ಲದ ಅಕುಶಲವೂ ಅಲ್ಲದ ತಟಸ್ಥ ಸ್ವಭಾವದ ವಿಪಾಕವಿರುವಂಥವು.

### 11. ಜಾತಿ

ಜಾತಿ ಎಂದರೆ ತಾಯಿಯ ಗರ್ಭದಲ್ಲಿ ಧಾರಣೆ ಎಂದು, ಕಮ್ಮಭವದ ಪರಿಣಾಮ ಪಂಚಕ್ಖಂಧಗಳ ಸೃಷ್ಟಿಯೆಂದು ಅರ್ಥ. ಇಲ್ಲಿ ಜಾತಿ ಎಂದರೆ ಭವಿಷ್ಯದಲ್ಲಿನ ಪುನರ್ಜನ್ಮವೆಂದು.

### 12. ಜರಾ–ಮರಣ :

ಹುಟ್ಟು ಇದ್ದಕಡೆ ವೃದ್ಧಾಪ್ಯ, ಮರಣ ಮತ್ತು ಬದುಕಿನ ಬೇರೆ ಅನುಭವಗಳಾದ ದುಃಖ, ಶೋಕ, ನೋವು, ವ್ಯಸನಗಳು ಇದ್ದೇ ಇರುತ್ತವೆ. ಭವಿಷ್ಯದ ಅಸ್ತಿತ್ವವನ್ನು ಪ್ರತಿನಿಧಿಸುವ ಕೊನೆ ಎರಡು ಕೊಂಡಿಗಳು. ಮನುಷ್ಯ ಅಸ್ತಿತ್ವದ ಸುಪ್ತ ಭಾಗವಾದ ಪುನರ್ಜನ್ಮ ವಿಧಾನವನ್ನು ಹೇಳುತ್ತವೆ.

ಹೀಗೆ ಹನ್ನೆರಡು ಕೊಂಡಿಗಳನ್ನು ಮೂರು ಕಾಲಗಳಿಗೆ ಭೂತ–ವರ್ತಮಾನ–ಭವಿಷ್ಯತ್ ಮತ್ತು ಮೂರು ವೃತ್ತ ಕ್ಲೇಶ, ಕಮ್ಮ ಮತ್ತು ಪುನರ್ಜನ್ಮ – ಇವೆಲ್ಲವೂ ಕಾರಣ–ಕಾರ್ಯ–ಕಾರಣ ಗುಂಪನ್ನು ಪ್ರತಿನಿಧಿಸುತ್ತವೆ. ವಿಸುದ್ಧಿ ಮಗ್ಗವು ಹೀಗೆ ಹೇಳುತ್ತದೆ:

*"ಭೂತಕಾಲದಲ್ಲಿ ಐದು ಕಾರಣಗಳಿದ್ದವು*
*ವರ್ತಮಾನದ ಬದುಕಿನಲ್ಲಿ ಐದು ಕಾರ್ಯಗಳಿವೆ*
*ಮತ್ತು ಒಬ್ಬನು ಐದು ಕಾರಣಗಳನ್ನು ಈಗ ಸೃಷ್ಟಿಸಲು*
*ಉಣ್ಣುವನು ಭವಿಷ್ಯದ ಬದುಕಿನ ಐದು ಕಾರ್ಯಗಳನು."*

ಭೂತಕಾಲದ ಐದು ಕಾರಣಗಳು ಅವಿದ್ಯೆ ಮತ್ತು ಕಮ್ಮ ಭವಗಳಿಂದ (ತನ್ಹಾ, ಉಪಾದಾನ, ಭವ) ಕೂಡಿರುವಂತಹವು. ಹೀಗೆ ಐದು ಕಾರಣಗಳು ಕಮ್ಮ ವಿಧಾನವನ್ನು ಪ್ರತಿನಿಧಿಸುತ್ತಿವೆ. 1, 2, 8, 9, 10. ಭೂತಕಾಲದ ಐದು ಕಾರ್ಯಗಳಿಂದಾಗಿ ವರ್ತಮಾನದ ಬದುಕಿನಲ್ಲಿ ಸಂಖಾರ, ನಾಮರೂಪ, ಸಳಾಯತನ, ಫಸ್ಸ ಮತ್ತು ವೇದನಾಗಳು ಇವೆ. ಇವು ಕಮ್ಮವಿಪಾಕ ಅಥವಾ ಪುನರ್ಜನ್ಮ ವಿಧಾನವಾಗಿವೆ: 3, 4, 5, 6, 7. ವರ್ತಮಾನದ ಬದುಕಿನ ಐದು ಕಾರಣಗಳು ಕಮ್ಮ ವಿಧಾನದಂತೆಯೇ ಇರುತ್ತವೆ: 1, 2, 8, 9, 10. ಭವಿಷ್ಯದ ಬದುಕಿನ ಐದು ಕಾರ್ಯಗಳು ಕಮ್ಮ ವಿಪಾಕಗಳು: 3, 4, 5, 6, 7. ಹೀಗೆ ಪಟಿಚ್ಚಾ ಸಮುಪ್ಪಾದದ ಹನ್ನೆರಡು ಕೊಂಡಿಗಳನ್ನು ಕಾರಣ–ಕಾರ್ಯ, ಕಾರ್ಯ–ಕಾರಣ, ಕಾರಣ–ಕಾರ್ಯ ವೃತ್ತಗಳನ್ನು ಇಪ್ಪತ್ನಾಲ್ಕು ಬಗೆಯಲ್ಲಿ ಮೂರು ಕಾಲಗಳಲ್ಲಿ ಕಾಣಬಹುದು.

## ಕಮ್ಮ ಮತ್ತು ಪುನರ್ಜನ್ಮ ನಿಯಮ

ಪಟಿಚ್ಚ ಸಮುಪ್ಪಾದದ ಮೂಲ ಸಂದೇಶವೇ ಕಮ್ಮ ಮತ್ತು ಪುನರ್ಜನ್ಮ. ಕಮ್ಮ ಮತ್ತು ಪುನರ್ಜನ್ಮದ ಬಗ್ಗೆ ಹಲವಾರು ತಪ್ಪು ಕಲ್ಪನೆಗಳಿವೆ. ಉದಾಹರಣೆಗೆ ಕಮ್ಮ ಎಂದರೆ 'ಒಂದು ಕಾರ್ಯದ ಫಲ' ಎಂಬ ಸಾಮಾನ್ಯವಾದ ತಪ್ಪು ಅಭಿಪ್ರಾಯ. ಕಮ್ಮ ಮತ್ತು ಕಮ್ಮಫಲ ಇವೆರಡು ಭಿನ್ನ ಸಂಗತಿಗಳು. ವೇದಾಂತ ಅಥವಾ ಬ್ರಹ್ಮವಿದ್ಯೆಯಿಂದ ಪ್ರಭಾವಿತರಾದ ಭಾರತೀಯರಾಗಲಿ, ಪಾಶ್ಚಿಮಾತ್ಯರಾಗಲಿ 'ಕಮ್ಮ'ವನ್ನು ಕಮ್ಮಫಲದೊಂದಿಗೆ ಅರ್ಥೈಸಿ ಕಮ್ಮವನ್ನು ಪ್ರಾರಬ್ಧದೊಂದಿಗೆ ಸಮೀಕರಿಸುತ್ತಾರೆ.

ಈ ಬದುಕಿನಲ್ಲಿ ಏನೇ ಆಗಲಿ, ಅದೆಲ್ಲವೂ ಹಿಂದಿನ ಕಮ್ಮಗಳ ದೆಸೆಯಿಂದಾಗಿ ಎಂದು ನಂಬುತ್ತಾರೆ. ಅಂದರೆ ಒಬ್ಬನು ಅದನ್ನು ಅನುಭವಿಸಲೇಬೇಕು, ಬೇರೆ ವಿಧಿಯೇ



ಇಲ್ಲ. ಇಲ್ಲಿ ಕಮ್ಮ ಎಂದರೆ ಅದು ಒಂದು ಶಾಸನ ನಿಯಮವಲ್ಲ, ಅದೊಂದು ಸಿದ್ಧಾಂತ ಅಥವಾ ತತ್ತ್ವ–ವಿಧಿಲಿಖಿತ. ಒಬ್ಬನು ಪೂರ್ವ ನಿರ್ಧಾರಿತ ಕಮ್ಮಗಳ ಮೂಲಕ ಹೋಗಿಯೇ ಎಲ್ಲರೀತಿಯ ಅನುಭವಗಳನ್ನು ಪಡೆಯಬೇಕು ಎಂಬುದು ಇದರ ಅರ್ಥ. ಯಾವ ಜನ ಆಸ್ತಿಕ ಧರ್ಮಗಳಲ್ಲಿ ನಂಬಿಕೆಯನ್ನಿಟ್ಟುಕೊಂಡಿದ್ದಾರೊ ಬದುಕಿನ ಎಲ್ಲಾ ಅನುಭವಗಳೂ 'ದೈವಪ್ರೇರಣೆ'ಯಿಂದ ಎಂದು. ಅಂದರೆ ನಮ್ಮ ಪ್ರತಿಯೊಂದನ್ನು ನಿರ್ಧರಿಸುವವನು ಒಬ್ಬನಿದ್ದಾನೆ ಎಂಬುದು. ಹೀಗೆಯೇ ಬಹಳ ಜನ ಪಾಶ್ಚಿಮಾತ್ಯರಾಗಲಿ ಪೌರ್ವಾತ್ಯರಾಗಲಿ 'ಕಮ್ಮ' ಎನ್ನುವ ಪದವನ್ನು 'ಪೂರ್ವ ನಿರ್ಧರಿತ'ವೆಂದೂ 'ದೈವಕೃಪೆ' ಎಂದೂ ಅರ್ಥಬರುವಂತೆ ಬಳಸುತ್ತಾರೆ.

ಬೌದ್ಧ ಧರ್ಮದ ಪ್ರಕಾರ ಕಮ್ಮ (ಸಂಸ್ಕೃತದಲ್ಲಿ ಕರ್ಮ) ಎನ್ನುವ ಪದವು 'ಕರ್' ಎನ್ನುವ ಧಾತುವಿನಿಂದ ಹುಟ್ಟಿದೆ. 'ಕರ್' ಎಂದರೆ 'ಮಾಡು' ಎಂದು. ನಿರ್ದಿಷ್ಟವಾಗಿ ಇದು ಬೌದ್ಧ, ತಾಂತ್ರಿಕ ಪದ. ಇದರ ಅರ್ಥ ಕುಶಲ ಅಥವಾ ಅಕುಶಲ ಕಮ್ಮ ಅಥವಾ ಚೇತನಾ ಎಂದು. ಬುದ್ಧರು ಹೀಗೆ ಹೇಳಿದ್ದಾರೆ: "ಭಿಕ್ಖುಗಳೇ, ಅದು ಚೇತನಾ ಅಥವಾ ಕಮ್ಮ. ಅದನ್ನು ನಾನು ಕಮ್ಮ ಎಂದು ಕರೆಯುತ್ತೇನೆ. ಒಬ್ಬನು ಇಚ್ಛೆಸಿದ ಮೇಲೆ ಅವನು ಅದನ್ನು ಕಾಯದಿಂದ, ಮಾತಿನಿಂದ, ಮನಸ್ಸಿನಿಂದ ಮಾಡುತ್ತಾನೆ. (ಚೇತನಾಹಂ, ಭಿಕ್ಖವೇ, ಕಮ್ಮಮ್ ವದಾಮಿ, ಚೇತಯಿತ್ವಾ ಕಮ್ಮಮ್ ಕರೋತಿ, ಕಾಯೇನ, ವಾಚಾಯ, ಮನಸಾ)". ಆದ್ದರಿಂದ ಕಮ್ಮವು ಇಚ್ಛಾಪೂರ್ವಕವಾಗಿ ಮಾಡಿದ ಕೆಲಸ. ಅದರಲ್ಲಿ ಚೇತನವು ಚಿತ್ತದೊಡನೆ ಮತ್ತು ತತ್ಸಂಬಂಧ ಚೇತಸಿಕಾಗಳ ಮೂಲಕ ಕಾಯ–ವಾಚಾ–ಮನಸಾ ಕಮ್ಮವನ್ನು ಮಾಡುವುದು. ಬೌದ್ಧ ಸಂದರ್ಭದಲ್ಲಿ ಕಮ್ಮ ಎನ್ನುವುದು ಪ್ರಜ್ಞಾಪೂರ್ವಕವಾಗಿ ಮಾಡಿದ ಕಾರ್ಯ ಅಥವಾ ಕಮ್ಮ–ಭವ.

## ಕಮ್ಮ ಬಗೆಗಿನ ತಪ್ಪು ಕಲ್ಪನೆಗಳು

ಹಲವಾರು ತಪ್ಪು ಕಲ್ಪನೆಗಳಿವೆ. ಉದಾಹರಣೆಗೆ ನಾವು ಪ್ರಜ್ಞಾಪೂರ್ವಕವಾಗಿ ಮಾಡಿದ ಕುಶಲ ಮತ್ತು ಅಕುಶಲ ಕಮ್ಮಗಳು. ಇವೆಲ್ಲವನ್ನೂ ನಾವು ಹಳೆಯ ಕಮ್ಮಗಳ ಪರಿಣಾಮವಾಗಿ ಮಾಡುತ್ತೇವೆ. ಹೀಗೂ ಹೇಳಬಹುದು: ನಮ್ಮ ಹಿಂದಿನ ಜನ್ಮಗಳಲ್ಲಿ ಎಲ್ಲಬಗೆಯ ಕಮ್ಮಗಳನ್ನು ಮಾಡಿದ್ದರಿಂದ, ನಾವು ಅದೇರೀತಿಯಲ್ಲಿ ವಿಧಿಯಿಲ್ಲದೆ ಪುನರಾವರ್ತಿಸಬೇಕಾಗಿದೆ. ಹೀಗೆ ಒಂದು ಹೊಸ ಕುಶಲ ಅಥವಾ ಅಕುಶಲ ಕಮ್ಮವನ್ನು ಉದ್ದೇಶಪೂರ್ವಕವಾಗಿ ಮಾಡಿದ್ದರೂ ಅದು ಇನ್ನೊಂದು ಫಲವಷ್ಟೇ. ಈ ಫಲದ ದೆಸೆಯಿಂದಾಗಿ ಇನ್ನೊಂದು ಫಲವು ಪ್ರಾಪ್ತಿಯಾಗುತ್ತದೆ, ಅದೂ ಕಮ್ಮವೇ ಹೀಗೆ. ಒಬ್ಬನು ನಿಸ್ಸಹಾಯಕನಾಗಿ ಕಮ್ಮಗಳನ್ನು ಮಾಡುತ್ತಲೇ ಹೋಗುತ್ತಾನೆ. ಆ ವಿಷವರ್ತುಲದಿಂದ ಹೊರಬರಲು ಸಾಧ್ಯವೇ ಇಲ್ಲ. ಇದು ಕಮ್ಮದ ಮೇಲಿನ ವಿಕಾರವಾದ ಅಭಿಪ್ರಾಯ. ಇದನ್ನು 'ಪುಬ್ಬೆಕತ ಹೇತು' ಎನ್ನುತ್ತಾರೆ; ಕೊನೆಯಿರದ ಕ್ರಿಯೆ ಮತ್ತು ಪ್ರತಿಕ್ರಿಯೆ. ಇದೊಂದು ರೀತಿಯ ಅದೃಷ್ಟವಾದ ಅಥವಾ ದೈವಾಯುಕ್ತವಾದ.

ಇನ್ನೂ ಬೇರೆ ತಪ್ಪು ಕಲ್ಪನೆಗಳಿವೆ. ಇಲ್ಲಿ ಬ್ರಹ್ಮ ವಿದ್ಯಾಜ್ಞಾನಿಗಳು ವಿಶಿಷ್ಟವಾಗಿ 'ಕರ್ಮ' ಪದದ ಅರ್ಥ ವ್ಯಾಪ್ತಿಯನ್ನು ಹಿಗ್ಗಿಸಿದ್ದಾರೆ. 'ಕರ್ಮ' ಎಂದರೆ 'ರಾಶಿ ಕರ್ಮ' ಎಂದು. ಅವರು ಒಂದು ದೇಶದ ಅಥವಾ ಜನರ 'ರಾಶಿ ಕರ್ಮ', (ಗುಂಪು ಕರ್ಮ) 'ಸಂಗ್ರಹ ಕರ್ಮ' ಎಂಬುದಾಗಿ ಹೇಳುತ್ತಾರೆ. ತಮ್ಮ ಪೂರ್ವಜರು ಮಾಡಿದ ಕರ್ಮಗಳಿಗಾಗಿ ಇಡೀ ಸಮುದಾಯವೇ ಹೊಣೆಯಾಗುತ್ತದೆ. ಆದ್ದರಿಂದ ಸಮುದಾಯವು ಹಿಂದಿನವರ ಒಳ್ಳೆಯ ಅಥವಾ ಕೆಟ್ಟ ಕೆಲಸಗಳಿಗಾಗಿ ಜವಾಬ್ದಾರಿಯನ್ನು ಹೊರಬೇಕು.

ಬೌದ್ಧ ಧರ್ಮದ ಪ್ರಕಾರ ಕಮ್ಮವು ಕೇವಲ ವ್ಯಕ್ತಿಗತವಾದುದು. ಒಂದುವೇಳೆ ಬಹುಸಂಖ್ಯೆಯ ವ್ಯಕ್ತಿಗಳು ಸೇರಿ ಒಂದುರೀತಿಯ ಕಮ್ಮವನ್ನು ಮಾಡುತ್ತಾರೆ. ಅವರು ಮುಂದಿನ ಜನ್ಮಗಳಲ್ಲಿ ಒಂದೇರೀತಿಯ ಫಲವನ್ನು ಅನುಭವಿಸುತ್ತಾರೆ. ಇದು ರಾಶಿ ಕಮ್ಮ ಅಥವಾ ಗುಂಪು ಕಮ್ಮವಾಗುವುದಿಲ್ಲ. ಉದಾಹರಣೆಗೆ: ರೈಲ್ವೆ ಅಪಘಾತದಲ್ಲಿ ಐವತ್ತು ಜನ ಒಂದೇರೀತಿಯಲ್ಲಿ ಸಾಯುತ್ತಾರೆ. ಈ ಐವತ್ತೂ ಜನಗಳಿಗೆ ತಮ್ಮ ಹಿಂದಿನ ಜನ್ಮಗಳಲ್ಲಿ ಮಾಡಿದ ಹಿಂಸಾತ್ಮಕ ಕರ್ಮಗಳಿಂದಾಗಿ ಈ ರೀತಿಯ ಸಂಕಟಮಯ ಪರಿಸ್ಥಿತಿ ಬಂದಿದೆ ಎಂದು ಊಹಿಸಬಹುದು. ಆದರೆ ಅವರು ಹಿಂದಿನ ಜನ್ಮದಲ್ಲಿ ಒಂದೇರೀತಿಯ ಹಿಂಸಾತ್ಮಕ ಕೃತ್ಯಗಳನ್ನು ಮಾಡಿದ್ದರೆಂಬುದು ಅಲ್ಲ. ಈ ಎಲ್ಲ ಜನರು ಭಿನ್ನ ಭಿನ್ನ ಸಂದರ್ಭಗಳಲ್ಲಿ ಹುಟ್ಟಿರಬಹುದು. ಒಬ್ಬರಿಗೊಬ್ಬರು ಸಂಬಂಧಿಗಳಾಗದಿದ್ದರೂ ಬೇರೆ ಜೀವಿಗಳನ್ನು ವಿವಿಧ ರೀತಿಯಲ್ಲಿ ಕೊಂದಿರಬಹುದು.

ಪ್ರಾಣಿಹಿಂಸೆ ಅಂದರೆ ಒಬ್ಬರ ಜೀವವನ್ನು ತೆಗೆಯುವುದು ಯಾವುದೇ ಸಂದರ್ಭವಾಗಲಿ ಅದು ಪ್ರಜ್ಞಾಪೂರ್ವಕವಾದ ಕಮ್ಮವೇ. ಹೀಗಿರುವಾಗ ಅದರ ಫಲಿತಾಂಶವೂ ಅದೇ ಅಂದರೆ ಜೀವ ಕಳೆದುಕೊಳ್ಳುವುದು. ಒಬ್ಬನು ಅಸಹಜವಾಗಿ ಮತ್ತು ಅಪ್ರಾಪ್ತ ವಯಸ್ಸಿನಲ್ಲಿ ಪ್ರಾಣ ಕಳೆದುಕೊಳ್ಳುತ್ತಾನೆ. ಇಂದಿನ ನವೀನ ಯುಗದಲ್ಲಿ ರೈಲ್ವೆ ಅಪಘಾತದಲ್ಲಿ ಅಂತಹ ಘಟನೆ ನಡೆದು ಜನ ಅಸಹಜವಾಗಿ ಅಪ್ರಾಪ್ತ ವಯಸ್ಸಿನಲ್ಲಿ ಸಾಯುತ್ತಾರೆ. ಇದು ಅವರು ಈ ಹಿಂದೆ ಬೇರೆಯವರ ಪ್ರಾಣವನ್ನು ಹರಣ ಮಾಡಿದ್ದಕ್ಕಾಗಿ.

ಒಬ್ಬನು ಎಣಿಕೆ ಸಿಗದಷ್ಟು ಜನ್ಮಗಳಲ್ಲಿ ಹುಟ್ಟಿ, ಎಲ್ಲರೀತಿಯ ಒಳ್ಳೆಯ ಮತ್ತು ಕೆಟ್ಟ ಕೆಲಸ ಮಾಡಿರುತ್ತಾನೆ. ಈ ಕಮ್ಮಭವಗಳು ಒಳಗೇ ಸುಪ್ತವಾಗಿದ್ದು, ಕಮ್ಮವಿಪಾಕ ವಾಗುವುದನ್ನೇ ಕಾಯುತ್ತಿರುತ್ತವೆ. ಸೂಕ್ತ ಸಂದರ್ಭಗಳು ಬಂದಾಗ ಸುಪ್ತವಾಗಿ ಕಮ್ಮ ಚೇತನಗಳು ಚಲನಶೀಲಗೊಂಡು ಕಮ್ಮವಿಪಾಕವಾಗುತ್ತವೆ. ಅಪಘಾತದ ಸಾವುಗಳು ಕೂಡ ಇಂತಹ ಹಳೆಯ ಕಮ್ಮಗಳ ಫಲವೇ ಆಗಿರುತ್ತವೆ.

ಐವತ್ತು ಜನಗಳು ಏಕರೀತಿಯ ಅಪಘಾತದ ಸಾವನ್ನು ಅನುಭವಿಸಿದರು ಎನ್ನುವ ವಾಸ್ತವ ಸಂಗತಿಯು 'ರಾಶಿ ಕರ್ಮ'ವನ್ನು ಅಂದರೆ ಒಂದೇರೀತಿಯ ಹಿಂದಿನ ಜನ್ಮದಲ್ಲಿ ಕಮ್ಮವನ್ನು ಗುಂಪಿನಲ್ಲಿ ಮಾಡಿದ್ದರಿಂದ ಹಾಗಾಯಿತು ಎಂದಲ್ಲ. 'ರಾಶಿ ಕರ್ಮ' ಎನ್ನುವುದು ಪ್ರಾರಬ್ಧಕರ್ಮವೆಂಬ ಸಿದ್ಧಾಂತದ ವಿಸ್ತ್ರತ ಊಹೆಯಷ್ಟೆ. ಇದೊಂದು ನಿಯಮ ಅಥವಾ



ಧಮ್ಮವಲ್ಲ. ಧಮ್ಮವೆಂದರೆ ಸ್ವಯಂ ಸಿದ್ಧಪಡಿಸಿಕೊಳ್ಳುವ ಆಧಾರಭೂತವಾದ ತಂತ್ರ. ಬೌದ್ಧ ಧರ್ಮದಲ್ಲಿ 'ಕಮ್ಮ' ಎನ್ನುವುದು ಒಂದು ನಿಯಮ, ಅದೊಂದು ಬರಿ ಸಿದ್ಧಾಂತವಾಗಲಿ, ಪರಿಕಲ್ಪನೆಯಾಗಲಿ, ಅಭಿಪ್ರಯವಾಗಲಿ ಅಲ್ಲ.

ಈ ಪಟ್ಟಿಚ್ಚ ಸಮುಪ್ಪಾದದಲ್ಲಿ ಕಮ್ಮ ಮತ್ತು ಕಮ್ಮವಿಪಾಕಗಳನ್ನು ಸ್ಪಷ್ಟವಾಗಿ ವಿವರಿಸಲಾಗಿದೆ. ಮೂರು ವೃತ್ತಗಳಿವೆ: ಕ್ಲೇಶ ವೃತ್ತ, ಕಮ್ಮ ವೃತ್ತ ಮತ್ತು ವಿಪಾಕ ವೃತ್ತ. ಇವು ಮೂರು ಒಂದಕ್ಕೊಂದು ಸಂಬಂಧ ಹೊಂದಿದ್ದರೂ ಭಿನ್ನ ಮತ್ತು ತುಂಬ ನಿಖರವಾದವುಗಳು. ಪಟಿಚ್ಚಾ ಸಮುಪ್ಪಾದದ ಪ್ರಕಾರ ಒಬ್ಬ ವ್ಯಕ್ತಿಯು ತನ್ನ ಭವಿಷ್ಯವನ್ನು ತುಂಬ ಚೆನ್ನಾಗಿ ಇಚ್ಛಾಪೂರ್ವಕವಾಗಿ ಕುಶಲ ಕಮ್ಮಗಳ ಮೂಲಕ ರೂಪಿಸಿಕೊಳ್ಳಲು ಶಕ್ಯನಿದ್ದಾನೆ. ಇದೇರೀತಿಯಲ್ಲಿ ಒಬ್ಬನು ತನ್ನ ಭವಿಷ್ಯವನ್ನು ಅಕುಶಲ ಕಮ್ಮಗಳನ್ನು ಇಚ್ಛಾಪೂರ್ವಕವಾಗಿ ಪದೇಪದೇ ಮಾಡಿ ದುರಂತವಾಗಿ ಮಾಡಿಕೊಳ್ಳಲೂಬಹುದು.

ಒಬ್ಬರು ತನ್ನನ್ನು ಪುರೋಗಾಮಿಯಾಗಲಿ ಅಧೋಗಾಮಿಯಾಗಿ ಆಗಲಿ ಸುಖ ಮತ್ತು ದುಃಖದ ಸ್ಥಿತಿಗಳಿಗೆ ಹೇಗೆ ಕೊಂಡು ಹೋಗುತ್ತಾನೆಂಬುದು ಅವನು ಪ್ರಜ್ಞಾಪೂರ್ವಕವಾಗಿ ಮಾಡುವ ಕಮ್ಮಗಳ ಮೇಲೆ ನಿಂತಿದೆ. ಒಬ್ಬನು ಕಮ್ಮದ ಹೆಸರಿನಲ್ಲಿ ಅದೃಷ್ಟವಾದಕ್ಕೆ ಅಥವಾ ಪೂರ್ವ ನಿರ್ಧರಿತವೆಂಬ ಭಾವನೆಗಳ ಗುಲಾಮನಾಗಬೇಕಿಲ್ಲ. ವಾಸ್ತವವಾಗಿ ಬೌದ್ಧ ಧಮ್ಮದಲ್ಲಿ ಕಮ್ಮಸಿದ್ಧಾಂತವನ್ನು ತುಂಬ ಪರಿಣಾಮಕಾರಿಯಾಗಿ ಬದುಕಿನಲ್ಲಿ ಅನ್ವಯಿಸಿಕೊಂಡು ಎಲ್ಲ ಮಿಥ್ಯಾದೃಷ್ಟಿಗಳಿಂದ ಬಿಡುಗಡೆ ಹೊಂದಿ ನಿಬ್ಬಾಣವನ್ನು ಪಡೆಯಬಹುದು.

## ಪುನರ್ಜನ್ಮ

ಕಮ್ಮವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕಾದರೆ ಪುನರ್ಜನ್ಮದ ಸರಿಯಾದ ಅರ್ಥವನ್ನು ತಿಳಿದಿರಬೇಕು. ಬೌದ್ಧ ಧರ್ಮದಲ್ಲಿ ಪುನರ್ಜನ್ಮವು ಪುನರಾವತಾರವಲ್ಲ. ಪುನರ್ಜನ್ಮವೆಂದರೆ ಮತ್ತೆ ಮತ್ತೆ ಬದಲಾಗುತ್ತಿರುವ ಚಿತ್ತದ ಮುಂದುವರಿಕೆ. ಪುನರಾವತಾರವೆಂದರೆ ಬದಲಾಗದೇ ಇರುವುದು. ಒಂದು ಜನ್ಮದಿಂದ ಇನ್ನೊಂದು ಜನ್ಮಕ್ಕೆ ಮುಂದುವರಿಯುವುದು. ಹೇಗೆ ಒಬ್ಬನು ತನ್ನ ಬಟ್ಟೆಗಳನ್ನು ಬದಲಿಸಿದ ಹಾಗೆ. 'ಆತ್ಮ', 'ನಾನು', 'ಅಹಂ' ಇದು ಬದಲಾಗದೇ ಇರುವುದು ಎಂದು ಹೇಳುತ್ತಾರೆ. ಒಂದು ಶಾಶ್ವತವಾದ 'ಆತ್ಮ', 'ನಾನು', 'ಅಹಂ'ನಲ್ಲಿರುವ ನಂಬಿಕೆ ಇರುವವರು ಕಮ್ಮ ಸಿದ್ಧಾಂತವನ್ನು ಮತ್ತು ಅದರ ಸಹಜ ಪರಿಣಾಮವಾದ ಪುನರ್ಜನ್ಮ ತತ್ತ್ವವನ್ನು ತಪ್ಪಾಗಿ ತಿಳಿಯುತ್ತಾರೆ. ಪುನರಾವತಾರವನ್ನು ಪುನರ್ಜನ್ಮವೆಂದು ತಪ್ಪಾಗಿ ತಿಳಿಯುವುದರಿಂದ ಒಬ್ಬನು ಬದಲಾಗದಿರುವ ಸದಾ ಇರುವ 'ಆತ್ಮ'ದಲ್ಲಿ ನಂಬಿಕೆ ಇಟ್ಟು ಸಾವು ಸಂಭವಿಸಿದಾಗ ಅದೇರೀತಿಯಲ್ಲಿ ಇನ್ನೊಂದು ಶರೀರದಲ್ಲಿ ಮುಂದುವರಿಯುತ್ತಾನೆ.

ವಾಸ್ತವವೆಂದರೆ ಶಾಶ್ವತವೆಂಬ 'ಆತ್ಮ', 'ನಾನು' ಇಲ್ಲ. ನಿತ್ಯ ನಿರಂತರ ಬದಲಾಗುವ 'ಆತ್ಮ' ಭ್ರಮೆ ಅಥವಾ 'ಅಹಂ' ಭಾವ ಮಾತ್ರ ಇದೆ. ನಾವು ಯಾವುದನ್ನು 'ನಾನು'

ಅಥವಾ 'ಆತ್ಮ' ಎಂದು ಕರೆಯುತ್ತೇವೆಯೋ ಅದು ತುಂಬ ಸೂಕ್ಷ್ಮಾತಿಸೂಕ್ಷ್ಮವಾದ ಬದುಕಿನ ಮಾನಸಿಕ ಆಯಾಮವಾದ ಚಿತ್ತ. ಈ ಚಿತ್ತದ ಗುಣವೇ ನಿರಂತರವಾಗಿ ಹರಿಯುವುದು. ಈ ಚಿತ್ತವು ಕ್ಷಣಕ್ಷಣಕ್ಕೂ ಬದಲಾಗುತ್ತಿರುತ್ತದೆ ಮತ್ತು ಆ ಬದಲಾಗುವಿಕೆಯೇ ಅದರ ಮೂಲ ರೂಪ. ಅದು ವಿಷಯದಲ್ಲಿ ಬದಲಾಗುತ್ತಿರುತ್ತದೆ. ಒಂದುವೇಳೆ ಆ ಚಿತ್ತವು ತನ್ನ ಚಿತ್ತದ ಬಗ್ಗೆಯೇ ಅರಿವುಳ್ಳದ್ದಾಗಿದ್ದರೆ ಆಗ ಅದನ್ನು 'ಆತ್ಮ' 'ನಾನು' ಎನ್ನಬೇಕಿರುತ್ತದೆ. ಕ್ಷಣಕ್ಷಣಕ್ಕೂ ಬದಲಾಗುವ ಗುಣ ಹೊಂದಿದ 'ಮನಸ್ಸು' ಇದ್ದರೂ ಒಬ್ಬನು 'ಆತ್ಮ ಪ್ರಜ್ಞೆ'ಯುಳ್ಳವನಾದ್ದರಿಂದ ಅವನು ಬದಲಾಗದಿರುವ ಆತ್ಮವಿದು, ಶಾಶ್ವತ ಆತ್ಮವಿದು ಎಂಬ ಭ್ರಮೆಯನ್ನು ಹೊಂದುತ್ತಾನೆ. ಈ ಭ್ರಮೆಯಾದರೂ ಹೊರಟದ್ದು ಸದಾ ಬದಲಾಗುತ್ತಿರುವ 'ನಾಮ-ರೂಪ' ಪಂಚಕ್ಖಂಧದಿಂದಲೇ.

ಒಂದು ಪಂಖದ (ಫ್ಯಾನ್) ನಾಲ್ಕು ಬಿಲ್ಲೆಗಳು ಜೋರಾಗಿ ಸುತ್ತುತ್ತಿರಲು ಅಲ್ಲಿ ಒಂದೇ ಬಿಲ್ಲೆ ಇದೆ ಎಂಬ ದೃಷ್ಟಿ ಭ್ರಮೆಯಾಗುತ್ತದೆ. ವಾಸ್ತವದಲ್ಲಿ ಭಿನ್ನ ಭಿನ್ನ ಭಾಗಗಳಿದ್ದು ವೇಗದೊಡನೆ ಕೂಡಿ ಒಂದೇ ಇರುವುದೆಂಬ ಭ್ರಮೆಯನ್ನು ತೋರುತ್ತದೆ. ಹಾಗೆಯೇ ಮನಸ್ಸು ಕೂಡ ಅತ್ಯಂತ ವೇಗದಲ್ಲಿ ಚಲಿಸುತ್ತದೆ. ಒಂದು ಚಿತ್ತದ ಸ್ಥಿತಿಯು ಇನ್ನೊಂದು ಚಿತ್ತದ ಸ್ಥಿತಿಯನ್ನು ಕ್ಷಣಕ್ಷಣಕ್ಕೂ ಅತಿವೇಗದಲ್ಲಿ ಹಿಂಬಾಲಿಸಿ ಒಂದು 'ಆತ್ಮ' ಇದೆ ಎಂಬ ಭ್ರಮೆ ಸೃಷ್ಟಿ ಮಾಡುತ್ತದೆ. ಸಂಕ್ಷಿಪ್ತದಲ್ಲಿ ಪ್ರತಿ ಚಿತ್ತಸ್ಥಿತಿಯೂ ಅದು ಎಷ್ಟೇ ಜೋರಾಗಿ ಹಾರುತ್ತಿದ್ದರೂ ಅದು ತನ್ನ ಗುಣಗಳಿಂದ ಪ್ರತ್ಯಕ್ಷವಾಗಿ ಇದ್ದೇ ಇರುತ್ತದೆ. 'ಆತ್ಮಪ್ರಜ್ಞೆ'ಯಿಂದ ಇರುವುದು ಎಂದರೆ ಅದು ಭ್ರಮೆಯ 'ಆತ್ಮ' ವ್ಯಕ್ತಿತ್ವ ಅಷ್ಟೇ.

ತನ್ನ ಆತ್ಮದ ಬಗ್ಗೆ ಒಬ್ಬನು ತಾನು ಪ್ರಜ್ಞೆಯುಳ್ಳವನು ಎನ್ನುವುದೇ 'ಆತ್ಮ', 'ನಾನು' ಎನ್ನುವ ಪರಿಕಲ್ಪನೆಯನ್ನು ಗ್ರಹಿಸುವುದೋ ತಪ್ಪಾಗಿ ಗ್ರಹಿಸುವುದೋ ಆಗಿರುತ್ತದೆ. ಎರಡು ಕ್ಷಣಗಳೂ ಕೂಡ ಯಾವುದೋ ಒಂದೇ ಅದೇ ಆಗಿರುವುದಿಲ್ಲ. ಅಶಾಶ್ವತ ಅಥವಾ ಅನಿತ್ಯದ ಸಂದರ್ಭದಲ್ಲಿ ಯಾವುದೂ ಸ್ಥಿರವಲ್ಲ. ಚಿತ್ತದ ಕ್ಷಣಿಕ ಸ್ಥಿತಿಗಳು ಮೂಲತಃ ಅಸ್ಥಿರವಾಗಿದ್ದು, ವೇಗದ ಕಾರಣವಾಗಿ ಆತ್ಮದ ಭ್ರಮೆಯನ್ನು ಹುಟ್ಟಿಸುತ್ತವೆ. ಅದೇ ಸ್ಥಿರವೆಂಬ ಭ್ರಮೆ, ಬದಲಾಗದಿರುವ ನಾನು, ಆತ್ಮ, ಅಹಂ.

**ಕಮ್ಮ ಪಚ್ಚಯ**

'ಆತ್ಮ' ಅಥವಾ 'ನಾನು' ಎನ್ನುವ ಮರುಜನ್ಮದಿಂದ ಜನ್ಮಕ್ಕೆ ಮುಂದುವರಿಯುತ್ತದೆ ಎನ್ನುವ ತಪ್ಪು ಕಲ್ಪನೆಯಿಂದಲೇ 'ಪುನರಾವತಾರ' ಎನ್ನುವ ಸಿದ್ಧಾಂತ ಸೃಷ್ಟಿಯಾಗಿದೆ. ಈ ಆತ್ಮ ತತ್ತ್ವವನ್ನು ವಿಶ್ವಾತ್ಮಕ್ಕೆ, ಎಲ್ಲೆಡೆ ಆವರಿಸಿರುವ ಎಲ್ಲ ವಸ್ತುಗಳಲ್ಲಿರುವ ಶಕ್ತಿಗೆ, ಚೈತನ್ಯಕ್ಕೆ ವಿಸ್ತರಿಸಿದಲ್ಲಿ ಈ ಆತ್ಮಪರಿಕಲ್ಪನೆಯು ಅಸ್ಪಷ್ಟವೂ, ರಹಸ್ಯವೂ ಆಗುತ್ತದೆ. ಇದು ಧಾರ್ಮಿಕ ಅಥವಾ ಬ್ರಹ್ಮವಿದ್ಯೆಗಳಲ್ಲಿ ವೈಭವೀಕೃತವಾಗಿ ಅಲ್ಲಿ ಆ ಸಿದ್ಧಾಂತಕ್ಕೆ ಗೌರವ ದೊರಕುತ್ತದೆ. ಧಾರ್ಮಿಕ ಗ್ರಂಥಗಳಲ್ಲಿ ಅದೊಂದು ಭಾಗವಾಗಿ ಉಳಿದರೆ ಅದನ್ನು ಮತ್ತಷ್ಟು ಪವಿತ್ರಗೊಳಿಸಲಾಗುತ್ತದೆ. ಹೀಗೆ ಅದನ್ನು ತಲತಲಾಂತರಗಳವರೆಗೆ



ಧಾರ್ಮಿಕ ಸಿದ್ಧಾಂತವಾಗಿ ಆರಾಧಿಸುತ್ತಾ, ಗೌರವಿಸುತ್ತಾ ಮತ್ತು ಪ್ರಶ್ನಾತೀತವಾಗಿಯೇ ಉಳಿಯುತ್ತದೆ. ಒಟ್ಟಾರೆಯಾಗಿ ಪರಿಪೂರ್ಣ ವೇದಾಂತ ಎಂಬ ಹೊದಿಕೆಯಲ್ಲಿ ಶ್ರೇಷ್ಠವಾಗಿ ಉಳಿದುಬಿಡುತ್ತದೆ. ಒಂದು ಭ್ರಮೆಯನ್ನೇ ಸತ್ಯಸಂಗತಿ ಎನ್ನುವ ಎತ್ತರಕ್ಕೆ ಕೊಂಡೊಯ್ಯಲಾಗುತ್ತದೆ.

ಕಮ್ಮ-ಪುನರ್ಜನ್ಮಗಳು ಪರಸ್ಪರಾವಲಂಬಿಗಳು. ಪುನರ್ಜನ್ಮವು ಕಮ್ಮಭವದಿಂದ ಉದ್ಭವವಾದ ಸಹಜವಾದ ಪರಿಣಾಮ. ಹೇಗೆ ಒಂದು ದೀಪವು ಸಾವಿರ ದೀಪಗಳನ್ನು ಹಚ್ಚಬಲ್ಲದೋ, ಹಾಗೆಯೇ ಚಿತ್ತಸ್ರೋತವು ಸಾವಿರ ಅಸ್ತಿತ್ವ ನೆಲೆಗಳ ಮೂಲಕ ಭಿನ್ನಲೋಕಗಳಲ್ಲಿ, ಭಿನ್ನರೂಪಗಳಲ್ಲಿ ಹರಿಯಬಹುದು. ಸ್ರೋತ ಎನ್ನುವ ಅರ್ಥದಲ್ಲೇ ಕ್ಷಣಿಕವಾದ ಮಾನಸಿಕ ಸ್ಥಿತಿಗಳಿವೆ. ಪ್ರತಿ ಮಾನಸಿಕ ಘಟಕದ ಚೇತಸಿಕಾಗಳ ಸಂಯೋಜನೆ ಮತ್ತು ಕ್ರಮಪಲ್ಲಟನೆಗಳಿಂದ ಕೂಡಿದ್ದರೂ ಅವು ಹಿಂದಿನ ಮಾನಸಿಕ ಸ್ಥಿತಿಗೆ ಅನ್ವಯಿಸಿಕೊಂಡಿರುವುದರಿಂದ ಒಂದು ನಿರಂತರತೆಯ ಸ್ರೋತವಿದೆ.

ಪ್ರಣತಿಯೊಂದರಲ್ಲಿನ ಉರಿವ ಬತ್ತಿಯು ಇನ್ನೊಂದು ಬತ್ತಿಯನ್ನು ಮತ್ತೊಂದು ಬತ್ತಿಯನ್ನು ಹಚ್ಚಬಲ್ಲದು. ಪ್ರತಿ ಬತ್ತಿಯಿಂದ ಹೊರಡುವ ಜ್ವಾಲೆಯೂ ಭಿನ್ನವೇ, ಅವು ಒಂದೇ ಅಲ್ಲ. ಆದರೆ ಅವು ಒಂದಕ್ಕೊಂದು ಸಂಬಂಧವೇ. ಹಿಂದಿನದು ಉರಿಯದಿದ್ದರೆ ಈಗಿನದು ಉರಿಯುವುದಿಲ್ಲ. ಇದೇರೀತಿಯಲ್ಲಿ ಮಾನಸಿಕ ಸ್ರೋತದಲ್ಲಿರುವ ಚಿತ್ತ ಘಟಕಗಳು ಒಂದಕ್ಕೊಂದು ಸಂಬಂಧವಿದ್ದು, ಹತ್ತಿರವಿದ್ದು ಬದುಕೆಂಬ ಹರಿವನ್ನು ನಿರಂತರವಾಗಿ ಹರಿಸುತ್ತದೆ, ಇನ್ನೂ ಬೇರೆಯದಾಗಿಯೇ ಹೇಳುವುದಾದರೆ ಕಾರಣಬದ್ಧ ಅಸ್ತಿತ್ವವಾಗಿರುತ್ತದೆ.

ಕಮ್ಮ ಮತ್ತು ಪುನರ್ಜನ್ಮಗಳ ಸ್ಪಷ್ಟ ಅರಿವಿದ್ದರೆ ಮಾತ್ರ ಪಟಿಚ್ಚಾ ಸಮುಪ್ಪಾದವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಬಹುದು. ಕಮ್ಮವು ಶೀಲ ಪಚ್ಚಯ. ಆ ಪ್ರತಿ ಕಮ್ಮವೂ ಮನೋ ವೈಜ್ಞಾನಿಕವಾದ ಕುಶಲಾಕುಶಲಗಳಲ್ಲಿ ಮೂಲವಾಗಿವೆ. ಹೇಗೆ ಮರವು ಬೆಳೆದು ಗಟ್ಟಿಯಾಗಿ ನಿಲ್ಲಬೇಕಾದರೆ ಅದರ ಬೇರುಗಳು ನೆಲದ ಆಳದಲ್ಲಿ ಗಟ್ಟಿಯಾಗಿರುವಂತೆ ಒಂದು ಕಮ್ಮವೂ ಕೂಡ ಹುಟ್ಟಿ ಮುಂದುವರಿಯಬೇಕಾದರೆ ಅದರ ಕುಶಲಾಕುಶಲಗಳ ಬೇರುಗಳೇ ಆಧಾರವಾಗಿರುತ್ತದೆ. ಮೂರು ಬಗೆಯ ಅಕುಶಲ ಮತ್ತು ಮೂರು ಬಗೆಯ ಅಕುಶಲ ಹೇತುಗಳು (ಬೇರುಗಳು) ಇವೆ. ಅವು ಲೋಭ, ದ್ವೇಷ, ಮೋಹ ಮತ್ತು ಅಲೋಭ, ಅದ್ವೇಷ ಮತ್ತು ಅಮೋಹ. ಈ ಮನೋ ಕುಶಲಾಕುಶಲಗಳಿಗೆ ಶೀಲಗುಣಗಳಿವೆ. ಹಾಗೆಂದರೆ ಅವು ಜನ್ಮತಃ ಒಳ್ಳೆಯ ಅಥವಾ ಕೆಟ್ಟವು ಆಗಿರುತ್ತವೆ. ಈ ಮೂಲಬೋಧನೆಯಾದ ಕಮ್ಮ ಪಚ್ಚಯವು ಪಟಿಚ್ಚ ಸಮುಪ್ಪಾದವನ್ನು ಸ್ಪಷ್ಟವಾಗ ಅರ್ಥೈಸಿ ಕಮ್ಮ ಮತ್ತು ಪುನರ್ಜನ್ಮಗಳು ಮುರಿಯದ ಸರಪಳಿಯಂತೆ ಜನ್ಮ ಜನ್ಮಗಳಲ್ಲೂ ಹರಿಯುತ್ತವೆ ಎಂಬುದನ್ನು ತೋರಿಸುತ್ತವೆ.

– ೦೦೦ – ೦೦೦ – ೦೦೦ –

# ಅಧ್ಯಾಯ–8

# ಎರಡು ಬಗೆಯ ಸತ್ಯಗಳು

## ಪರಮಾರ್ಥ ಧರ್ಮ – ಅಂತಿಮ ಸತ್ಯ

ಎರಡು ಬಗೆಯ ಸತ್ಯಗಳಿವೆ: ಸಮ್ಮುತಿ (ಪಾರಂಪರಿಕ) ಸತ್ಯ ಮತ್ತು ಪರಮಾರ್ಥ (ಅಂತಿಮ) ಸತ್ಯ. ಸಮ್ಮುತಿ ಅಥವಾ ನೈಜ ಸತ್ಯವು ಸಾಮಾನ್ಯ ಬಗೆಯ ಆಲೋಚನೆ, ಮಾತು ಮತ್ತು ಕೃತಿಯ ಬಗ್ಗೆ ಕುರಿತದ್ದಾದರೆ ಪರಮಾರ್ಥ ಸತ್ಯವು ಒಂದು ಸಂಗತಿಯ ನಿಜ ಸ್ವಭಾವದ ಮೂಲಕ್ಕೆ ಹೋಗಿ ಕಾರಣ ಸಮೇತ ಅರಿಯುವುದಾಗಿರುತ್ತದೆ. ಅಂದರೆ ಮೊದಲನೇ ಸತ್ಯವು ನಮ್ಮ ದೈನಂದಿನ ಬದುಕಿನ ಅನುಕೂಲಕ್ಕೆ ತಕ್ಕಂತೆ ಇದ್ದರೆ, ಎರಡನೇ ಸತ್ಯವು ಅದು ವಾಸ್ತವವಾಗಿ ಏನು ಎಂಬುದಾಗಿರುತ್ತದೆ, ಆದರೆ ಕಂಡಂತೆ ಇರುವುದಿಲ್ಲ.

ಈ ಕೆಳಗಿನಂತೆ ನಾಲ್ಕು ರೀತಿಯ ಅಂತಿಮ ಸತ್ಯಗಳಿವೆ:

1. ಚಿತ್ತ
2. ಚೇತಸಿಕ
3. ರೂಪ
4. ನಿಬ್ಬಾಣ (ಮೇರೆಯಿಂದ ಪಾರಮಾರ್ಥಿಕವಾದ ಬಿಡುಗಡೆಯ ಸ್ಥಿತಿ, ಅಂದರೆ

ವ ' ) ೀ ಲ '

ಹೇಳಿದ ಮೂರು ಸ್ಥಿತಿಗಳ ಸೀಮಿತ ಬಂಧನದಿಂದ ಮುಕ್ತಿ).

ಈ ನಾಲ್ಕು ಅಂತಿಮ ಸತ್ಯಗಳು, ಸಂಗತಿಗಳು ಹೇಗಿವೆಯೋ ಹಾಗಿರುವ ವಾಸ್ತವ ಸ್ಥಿತಿಯನ್ನು ತಿಳಿಸುವಂತಹವು. ಮನುಷ್ಯ, ಹೆಂಗಸು ಇತ್ಯಾದಿಗಳು, ಪದಗಳು, ಸಂಕೇತಗಳು, ಹೆಸರುಗಳು, ಪರಿಕಲ್ಪನೆಗಳು ಆಗಿದ್ದು ಇವೆಲ್ಲಾ ಮಾನಸಿಕವಾಗಿ ರಚಿಸಲ್ಪಟ್ಟವು. ಆದರೆ ಮನುಷ್ಯನನ್ನು ಅಂತಿಮ ಸತ್ಯಕ್ಕೆ ಒಳಪಡಿಸಿದರೆ ಅಲ್ಲಿ ನಾಮ (ಮನಸ್ಸು) ಮತ್ತು ರೂಪದಿಂದ ಕೂಡಿದ ವಾಸ್ತವವಾದ ಐದು ಖಂಧಗಳಿವೆ ಅಷ್ಟೇ. ಅವು ಸಂಖತ ಧಮ್ಮಾಕ್ಕೆ (ಕಾರಣಬದ್ಧ ಸಂಗತಿಗಳಿಗೆ) ಒಳಪಟ್ಟಿದ್ದು ಕಾಲಕಾಲಕ್ಕೆ ಬದಲಾಗತ್ತಿದ್ದರೂ



ಆ ಕ್ಷಣಕಾಲದ ಸ್ಥಿತಿಯಲ್ಲೂ ಅವು ತಮ್ಮದೇ ಆದ ಅರ್ಥದಲ್ಲಿ ನೆಲೆಯಾಗಿರುತ್ತವೆ.

## ಮನೋಸ್ಥಿತಿ ಮತ್ತು ಚೇತಸಿಕಾ

**ಚಿತ್ತ :** ಚಿತ್ತವು ನಾಲ್ಕು ರೀತಿಯ ಅಂತಿಮ ಸತ್ಯಗಳಲ್ಲಿನ ಮೊದಲನೆಯದು. ಚಿತ್ತ ಎನ್ನುವುದು 'ಚಿತಿ' ಎನ್ನುವ ಕ್ರಿಯಾಪದದ ಮೂಲದಿಂದ ಬಂದಿದೆ. 'ಚಿತಿ' ಎಂದರೆ ಗುರುತಿಸು ಅಥವಾ ತಿಳಿ ಎಂದು ಅರ್ಥ. 'ಚಿತ್ತ'ದ ಸಮಾನ ರೂಪಗಳೆಂದರೆ ಮನೋ (ಮನಸ್ಸು), ವಿಞ್ಞಾಣ (ವಿಜ್ಞಾನ), ಹೃದಯ. ಈ ಎಲ್ಲ ಪದಗಳು ಮನಸ್ಸಿಗೆ ಸಂಬಂಧಪಟ್ಟವೇ. ಚಿತ್ತವನ್ನು ನಿಯೋಗಿ (ಕಾರ್ಯಕರ್ತ) ಯಾಗಿ, ಅಸ್ತ್ರವಾಗಿ ಮತ್ತು ಕ್ರಿಯಾ ಅಥವಾ ಚೈತನ್ಯ ರೂಪವಾಗಿ ಈ ಕೆಳಗಿನಂತೆ ಮೂರು ರೀತಿಯಲ್ಲಿ ನಿರೂಪಿಸಬಹುದು:

1. ಆರಮ್ಮನಂ ಚಿಂತೋ'ತಿ ಚಿತ್ತಂ (ಒಂದು ವಸ್ತುವನ್ನು ಕುರಿತು ಚಿಂತಿಸುವುದರಿಂದಲೇ ಅದು ಚಿತ್ತವಾಗುತ್ತದೆ (ಗುರಿತಿಸುವ ಕೆಲಸ);
2. ಏತೇನ ಚಿಂತೇ'ತಿ ಚಿತ್ತಂ (ಚಿಂತಿಸುವುದರ ಕಾರಣದಿಂದಾಗಿ ಅದು ಚಿತ್ತವಾಗುತ್ತದೆ. ಚಿಂತಿಸಲು ಇರುವ ಅಸ್ತ್ರಗಳ ದೆಸೆಯಿಂದ).
3. ಚಿಂತನ ಮತ್ತಂ ಚಿತ್ತಂ (ಒಂದು ವಸ್ತುವನ್ನು ಗುರುತಿಸುವ ಚೈತನ್ಯಶೀಲತೆಯ ವಿಧಾನವೇ ಚಿತ್ತ.)

ಮೂಲತಃ ಚಿತ್ತ ಎಂದರೆ ಒಂದು ವಸ್ತುವನ್ನು ಗುರುತಿಸುವ (ಚಿಂತನೆ ಮಾಡುವ ಅಥವಾ ಗುರುತಿಸುವ ವಿಧಾನ ಅಥವಾ ಒಂದು ಕ್ರಿಯೆ. ಈ ಗುರುತಿಸುವ ಕ್ರಿಯೆಯ ಗುಣಧರ್ಮವೇ ಅನಿತ್ಯ. ಅಂದರೆ ಕ್ಷಣದಿಂದ ಕ್ಷಣಕ್ಕೆ ಹುಟ್ಟಿಬಿದ್ದು ಇನ್ನೊಂದು ಹೊಸ ಚಿತ್ತಕ್ಕೆ ಎಡೆಮಾಡಿಕೊಡುವ ಸ್ಥಿತಿ. ಹೀಗೆ ಚಿತ್ತವು ನಿರ್ಬಂಧಗಳಿಗೆ ಅಥವಾ ಮಿತಿಗಳಿಗೆ ಒಳಗಾದುದು. ಲೌಕಿಕ ಮತ್ತು ಪರಲೌಕಿಕ ಚಿತ್ತಗಳೆಂದು 89 ರೀತಿಯ ಚಿತ್ತಗಳಿವೆ. ಅವುಗಳಲ್ಲಿ 54 ಕಾಮಾವಚರ ಚಿತ್ತಗಳು, 15 ರೂಪಾವಚರ ಚಿತ್ತಗಳು, 12 ಅರೂಪಾವಚರ ಚಿತ್ತಗಳು ಮತ್ತು 8 ಅಲೌಕಿಕ (ಲೋಕೋತ್ತರ) – ಹೀಗೆ 89 ಚಿತ್ತಗಳು. ಈ ಅಲೌಕಿಕ ಅಥವಾ ಪಾರಲೌಕಿಕ ಚಿತ್ತಗಳನ್ನು 8 ಭಾಗಗಳುಳ್ಳ ಐದು ಝಾನ (5 x 8 = 40) ಗಳೆಂದು ವಿಭಜಿಸಬಹುದು. ಚಿತ್ತವನ್ನು ಪುನಃ 12 ಅಕುಶಲ, 21 ಕುಶಲ, 36 ಪರಿಣಾಮ ಚಿತ್ತಗಳು ಮತ್ತು 20 ಕ್ರಿಯಾಚಿತ್ತಗಳು ಒಟ್ಟು 89 ಆಗಿ ವಿಭಜಿಸಬಹುದು. ಈ ವರ್ಗೀಕರಣ ಗಳನ್ನು ಅವುಗಳ ನೆಲೆ ಮತ್ತು ಗುಣಧರ್ಮಗಳ ಆಧಾರದ ಮೇಲೆ ಮಾಡಲಾಗಿದೆ.

## ಚೇತಸಿಕಾ (ಮಾನಸಿಕ ಸ್ಥಿತಿಗಳು)

ಈ ಚೇತಸಿಕಾಗಳು ಚಿತ್ತದೊಂದಿಗೆ ಹುಟ್ಟಿ ಇದು ಲಯವಾಗುವಂತಹವು. ಆದ್ದರಿಂದ ಅವುಗಳನ್ನು ಚಿತ್ತ ಸಹಗಾಮಿಗಳು ಅಥವಾ ಚಿತ್ತ ಸಹಭಾಗಿಗಳು ಎಂದು ಕರೆಯಬಹುದು. ಇವು ಚಿತ್ತದೊಂದಿಗೆ ನಿರ್ದಿಷ್ಟವಾದ ಅರಿಯುವ ಅಥವಾ ಅರಿವಿನ ಪೂರ್ಣ ಕ್ರಿಯೆಯನ್ನು ಮಾಡುತ್ತವೆ. ಒಟ್ಟು 52 ಚೇತಸಿಕಾಗಳು ಇದ್ದು, ಅವನ್ನು ಮೂರು ಸ್ಕಂದ (ಖಂಧ) ಗಳಾದ ವೇದನಾ, ಸಞ್ಞಾ, ಮತ್ತು ಸಂಖಾರಗಳಲ್ಲಿ ಸೇರಿಸಬಹುದು. ಈ ಮೂರೂ

ಖಂಧಗಳು ಚಿತ್ತದೊಡನೆ (ವಿಞ್ಞಾಣ ಖಂಧ) ಹುಟ್ಟಿ ಇದ್ದು ಇಲ್ಲವಾಗುತ್ತವೆ.

ಈ ಚೇತಸಿಕಾಗಳನ್ನು ಸಾಮಾನ್ಯ, ಅಕುಶಲ ಮತ್ತು ಕುಶಲ ಎಂದು ಮೂರು ರೀತಿಯಲ್ಲಿ ವಿಂಗಡಿಸಬಹುದು: ಸಾಮಾನ್ಯ ಚೇತಸಿಕಗಳನ್ನು ಸರ್ವವ್ಯಾಪಿ ಮತ್ತು ಸಾಂದರ್ಭಿಕ ಎಂಬುದಾಗಿ ವಿಭಜಿಸಬಹುದು. ಈ 89 ಚೇತಸಿಕಗಳು ಸರ್ವ ವ್ಯಾಪಿಯೇ. ಸಾಂದರ್ಭಿಕ ಚೇತಸಿಕಗಳು ಯಾವುವೆಂದರೆ: ಅವು ಸಾಮಾನ್ಯವಾಗಿ ಘಟಿಸುವಂತಹುವು, ಆದರೆ ಪ್ರತಿ ಚಿತ್ತದೊಂದಿಗೆ ಅಲ್ಲ.

ಅಕುಶಲ ಚಿತ್ತಗಳನ್ನು ಎರಡು ಭಾಗಗಳಲ್ಲಿ ವರ್ಗೀಕರಿಸಲಾಗಿದೆ. ಎಲ್ಲ ಅಕುಶಲ ಚಿತ್ತಗಳಲ್ಲಿ ಸಂಭವಿಸುವ ಸಂಗತಿಗಳು ಮತ್ತು ಸಾಂದರ್ಭಿಕವಾಗಿ ಉದಯವಾಗುವ ಸಂಗತಿಗಳು. ಕುಶಲ ಚಿತ್ತಗಳನ್ನೂ ವಿವಿಧ ರೀತಿಯಲ್ಲಿ ವಿಂಗಡಿಸಲಾಗಿದೆ. ಕೆಲವು ಕುಶಲ ಚಿತ್ತಗಳು ಸರ್ವವ್ಯಾಪಿಯಾಗಿವೆ. ಕೆಲವು ನಿಷೇಧಾತ್ಮಕಗಳು ಶೀಲದ ಮೂಲಗಳಾಗಿರುತ್ತವೆ. ಅದರಲ್ಲಿನ ಕೆಲವು ಶೀಲಗಳು ಚಿತ್ತವನ್ನು ಅನಂತದೆಡೆಗೆ ಕೊಂಡೊಯ್ಯುತ್ತವೆ. ಒಂದು ನಿರ್ದಿಷ್ಟವಾದ ಚೇತಸಿಕಾವು ಪ್ರಜ್ಞೆಗೆ ಸಂಬಂಧಪಟ್ಟಿದ್ದು ಅವಿದ್ಯೆ ಅಥವಾ ಮೋಹವನ್ನು ಸಂಪೂರ್ಣವಾಗಿ ನಾಶಮಾಡುವಂಥದ್ದಾಗಿರುತ್ತದೆ. ಕುಶಲ ಚೆತಸಿಕಗಳನ್ನು ಶುಭ ಚೇತಸಿಕವೆಂದೂ ಕರೆಯಲಾಗುತ್ತದೆ.

## ರೂಪ ಮತ್ತು ರೂಪವನ್ನು ಮೀರಿದ್ದು

**ರೂಪ :** ಎಂದರೆ ಭೌತಿಕ ಅಥವಾ ಆಕಾರ ಹೊಂದಿರುವುದು ಎಂದು. ಇದು 28 ರೀತಿಯ ರೂಪ ಸಂಗತಿಗಳನ್ನು ಹೊಂದಿರುವುದು. ಇವನ್ನು ಎರಡು ರೀತಿಯಲ್ಲಿ ವಿಭಾಗಿಸಬಹುದು: (1) ನಾಲ್ಕು ಮೂಲಭೂತ ಧಾತುಗಳು ಮತ್ತು (2) ಈ ಮೂಲಭೂತಗಳಿಂದ ಉತ್ಪತ್ತಿಯಾದ 24 ರೂಪ ಸಂಬಂಧದ ದ್ರವ್ಯಗಳು. ಒಂದು ಸ್ಪಷ್ಟ ಉದಾಹರಣೆ ಎಂದರೆ ಭೂಮಿ ಮತ್ತು ಅದರ ಮೇಲೆ ಬೆಳೆಯುವ ಸಸ್ಯಜೀವಿ. ಇವನ್ನು ಮೇಲೆ ಹೇಳಿದ ಎರಡು ವಿಭಾಗಗಳಿಗೆ ಹೊಂದಿಸಬಹುದು. ಈ 28 ರೀತಿಯ ರೂಪ ಸಂಗತಿಗಳನ್ನು ಹನ್ನೊಂದು ವರ್ಗಗಳಲ್ಲಿ ವಿಂಗಡಿಸಿದರೆ ಅವುಗಳಲ್ಲಿ ಏಳು ಮೂರ್ತ ಸ್ವರೂಪದವುಗಳಾಗಿದ್ದು, ತಮ್ಮ ನೈಜಸ್ಥಿತಿಯಲ್ಲಿರುವಂತಹವು. ಇನ್ನುಳಿದ ನಾಲ್ಕು ಅಮೂರ್ತ ಸ್ವರೂಪದವುಗಳು.

## ನಿಬ್ಬಾಣ = ಸಂಸಾರದಿಂದ ಬಿಡುಗಡೆ

ನಿಬ್ಬಾಣವನ್ನು ಲೋಕೋತ್ತರ ಅಥವಾ ಮೀರಿದ್ದು ಎಂದು ಕರೆಯುತ್ತಾರೆ. ಅದು ಭೌತಿಕವಾದ ಅಥವಾ ಕಾರಣಬದ್ಧವಾದ ಮೂರು ಲೋಕಗಳನ್ನು ಮೀರಿಸುವಂತಹುದು. ಲೋಕೋತ್ತರವಾದುದರಿಂದ ನಿಬ್ಬಾಣವು ನಿರ್ಬಂಧನಾತೀತವಾದುದು. ಈ ಕಾರಣದಿಂದ ಎಲ್ಲ ಲೋಕೀಯ ಬಂಧನಗಳ ಆಚೆ ಇರುವಂಥದ್ದು. ನಿಬ್ಬಾಣಕ್ಕೆ ತನ್ನದೇ ಆದ ಸ್ವಭಾವವಿದೆ. ಸಾವೇ ಇರದ ಅಂತಿಮ ಸ್ಥಿತಿ ಅದು. ಸಂಸಾರವಾದರೋ ಲೌಕಿಕ ಜಗತ್ತಿಗೆ ಸಂಬಂಧಪಟ್ಟಿದ್ದು, ಕಾರಣಬದ್ಧತೆಗೆ ಒಳಗಾಗಿ ಅಲ್ಲಿ ಹುಟ್ಟು-ಸಾವು ಪುನರ್ಜನ್ಮಗಳಿವೆ. ನಿಬ್ಬಾಣವು ಎರಡು ಬಗೆ :



1) ಬುದ್ಧರು ಮತ್ತು ಅರಹತರು ಬದುಕಿದ್ದಾಗಲೇ ನಿಬ್ಬಾಣ ಧಾತುವನ್ನು ಅನುಭವಿಸುವುದು (ಸ-ಉಪಾದಿಸೇಸ ನಿಬ್ಬಾಣಧಾತು). ಅವರೊಳಗಿನ ಎಲ್ಲ ಕ್ಲೇಶಗಳು ಸುಟ್ಟುಹೋಗಿ ಎಲ್ಲ ಉಪಾದಾನಗಳಿಂದ ಮುಕ್ತರಾಗಿ ಆನಂದದಿಂದ ಇರುತ್ತಾರೆ. ಆದಾಗ್ಯೂ ಅವರಲ್ಲಿ ಇನ್ನೂ ಶೇಷವಾದ ಖಂಧಗಳು ಇರುತ್ತವೆ.

2) ಬುದ್ಧರು ಮತ್ತು ಅರಹತರು ತಮ್ಮ ಸಾವಿನಿಂದ ಪಡೆಯುವ ನಿಬ್ಬಾಣಧಾತು (ಅನುಪಾದಿಸೇಸ ನಿಬ್ಬಾಣಧಾತು). ಅಂದರೆ ಬುದ್ಧರ ಮತ್ತು ಅರಹತರ ಸಾವಿನಿಂದ ಅವರ ಅಳಿದುಳಿದ ಖಂಧಗಳೂ ನಿಶ್ಶೇಷವಾಗುತ್ತವೆ.

ಮೇಲಿನ ಎರಡನ್ನು ಕಿಲೇಸ ಪರಿನಿಬ್ಬಾಣವೆಂತಲೂ, ಖಂಧ ಪರಿನಿಬ್ಬಾಣವೆಂತಲೂ ಕರೆಯುತ್ತಾರೆ.

## ಅಷ್ಟಾಂಗ ಮಾರ್ಗ

ಯಾವ ಮಾರ್ಗವು ದುಃಖವನ್ನು ನಿರೋಧ ಮಾಡುತ್ತದೋ ನಿಲ್ಲಿಸುತ್ತದೋ ಅದನ್ನು ಆರ್ಯ ಅಷ್ಟಾಂಗ ಮಾರ್ಗವೆಂದು ಕರೆಯುತ್ತಾರೆ. ಅದು ಆರ್ಯ, ಏಕೆಂದರೆ ಪರಿಶುದ್ಧವೂ ಮತ್ತು ಏಕೈಕ ಮಾರ್ಗವೂ ಆಗಿರುತ್ತದೆ. ಈ ಮಾರ್ಗವನ್ನು ಕಂಡುಹಿಡಿದವರು ಅರಹತ ಸಮ್ಮಾಸಂಬುದ್ಧರು.

ಆರ್ಯ ಅಷ್ಟಾಂಗ ಮಾರ್ಗವು ಈ ಕೆಳಗಿನಂತೆ ಒಳಗೊಂಡಿದೆ:

**ಪ್ರಜ್ಞೆ (ಪಞ್ಞಾ)**

1. ಸಮ್ಯಕ್ ದೃಷ್ಟಿ (ಸಮ್ಮಾದಿಟ್ಠಿ)
2. ಸಮ್ಯಕ್ ಸಂಕಲ್ಪ (ಸಮ್ಮಾಸಂಕಪ್ಪ)

**ಶೀಲ (ಸೀಲ)**

3. ಸಮ್ಯಕ್ ವಾಚನ (ಸಮ್ಮಾವಾಚಾ)
4. ಸಮ್ಯಕ್ ಕರ್ಮ (ಸಮ್ಮಾಕಮ್ಮಂತ)
5. ಸಮ್ಯಕ್ ಆಜೀವ ಸಮ್ಮಾ ಆಜೀವ)

**ಸಮಾಧಿ**

6. ಸಮ್ಯಕ್ ವ್ಯಾಯಾಮ (ಸಮ್ಮಾ ವಾಯಾಮ)
7. ಸಮ್ಯಕ್ ಸ್ಮೃತಿ (ಸಮ್ಮಾಸತಿ)
8. ಸಮ್ಯಕ್ ಸಮಾಧಿ (ಸಮ್ಮಾಸಮಾಧಿ)

ಆಧ್ಯಾತ್ಮಿಕ ಬೆಳವಣಿಗೆಗೆ ಅಷ್ಟಾಂಗದಿಂದ ಕೂಡಿದ ಮೂರು ವಿಧಿಗಳನ್ನು ಒಟ್ಟಿಗೆಯೇ ಸಾಧಿಸಬೇಕು.

ಸಮ್ಯಕ್ ದೃಷ್ಟಿ ಮತ್ತು ಸಂಕಲ್ಪಗಳು ನಿಂತಿರುವುದೇ ಶೀಲದ ಆಧಾರದ ಮೇಲೆ. ಸಮ್ಯಕ್ ಸಮಾಧಿಯು ಪ್ರಜ್ಞೆಯ ಮೇಲೆ ನಿರ್ಮಿತವಾದುದು. ಬುದ್ಧ ಧರ್ಮದ ಭವ್ಯ ಕಟ್ಟಡದ ಶೃಂಗವೇ ಅಂತಃಪ್ರಜ್ಞೆ.

# ಅಧ್ಯಾಯ-9

# ಭಿಕ್ಷುಣಿ ಸಂಘದ ಸ್ಥಾಪನೆ

ಆರ್ಯಳಾದ ರಾಣಿ ಮಹಾಪಜಾಪತಿಯು ತನ್ನ ಪತಿ ರಾಜ ಶುದ್ಧೋಧನನು ತೀರಿಹೋದ ಮೇಲೆ ಸಂನ್ಯಾಸಿನಿಯಾಗಬೇಕೆಂದು ತೀರ್ಮಾನಿಸಿದಳು. ಅವಳಿಗೆ ಮುಂಚಿನಿಂದಲೂ ಆ ಹಂಬಲವಿತ್ತು. ಭಗವಾನ್ ಬುದ್ಧರು ನ್ಯಗ್ರೋಧ ವಿಹಾರದಲ್ಲಿದ್ದಾಗ ಅವಳು ಒಮ್ಮೆ ಭಗವಾನರನ್ನು ಸಂದರ್ಶಿಸಿ ತನ್ನನ್ನು ಭಿಕ್ಷುಣಿಯನ್ನಾಗಿ ಸಂಘಕ್ಕೆ ಸೇರಿಸಿಕೊಳ್ಳಬೇಕೆಂದು ವಿನಂತಿಸಿದ್ದಳು. ಬುದ್ಧರು ಈಗ ಸೂಕ್ತಕಾಲವಲ್ಲವೆಂದು ಅವಳನ್ನು ನಿರುತ್ಸಾಹಗೊಳಿಸಿದ್ದರು. ಸಾಂಸಾರಿಕ ಬದುಕಿನ ಕಷ್ಟ-ಕೋಟಲೆಗಳನ್ನು ನೋಡಿ ಗೃಹತ್ಯಾಗ ಮಾಡಿ ಪವಿತ್ರ ಬದುಕನ್ನು ಆಹ್ವಾನಿಸಲು ಇನ್ನೂ ಅವಳ ಅಭೀಪ್ಸೆಯು ಮಾಗಬೇಕಿತ್ತು.

ಯಾವಾಗ ಅವಳು ಪವಿತ್ರ ಸಂಘವನ್ನು ಸೇರಲು ಸರಿಯಾದ ಪ್ರಯತ್ನ ಮಾಡಲು ಸಮರ್ಥಳೋ ಆಗ ಅನುಮತಿಯನ್ನು ಕೊಡೋಣವೆಂಬುದು ಬುದ್ಧರ ಆಲೋಚನೆ. ಸಂನ್ಯಾಸಿ ಬದುಕಿನ ನಿಜವಾದ ಮೌಲ್ಯ ಮತ್ತು ಅದಕ್ಕೆ ಬೇಕಾದ ಅರ್ಹತೆಯನ್ನು ಪಡೆದಾಗಲೇ ಮುಂದಿನ ಸಂನ್ಯಾಸಿ ಬದುಕಿನಲ್ಲಿ ಎಚ್ಚರದಿಂದ ಸಾಗಲು ಸಾಧ್ಯವಾಗುತ್ತದೆ.

ಈಗ ಅವಳು ಎಲ್ಲಾ ಸಾಂಸಾರಿಕ ತಾಪತ್ರಯಗಳಿಂದ ಮುಕ್ತಳಾದುದರಿಂದ ದಾರಿಯಲ್ಲಿ ಎಷ್ಟೇ ಅಪಾಯ ಅಡ್ಡಿ-ಆತಂಕಗಳಿದ್ದರೂ, ವೈಶಾಲಿಯವರೆಗೂ ನಡೆದೇ ಹೋಗಲು ತೀರ್ಮಾನಿಸಿದಳು. ಅವಳ ಇಚ್ಛೆಯ ಜೊತೆಗೆ ಇನ್ನೊಂದು ಮುಖ್ಯ ಬೆಳವಣಿಗೆಯೂ ಸಂಭವಿಸಿತು. ಐದುನೂರು ಜನ ಅರಹತರಾದವರ ಮಡದಿಯರು ತಮ್ಮ ಬದುಕನ್ನು ಅರ್ಥಪೂರ್ಣ ಮಾಡಿಕೊಳ್ಳಬೇಕೆಂಬ ತೀವ್ರ ಕಳವಳದಲ್ಲಿದ್ದರು. ಅವರ ಬದುಕು ಬೇಸರಗೊಂಡಿತ್ತು. ಅವರೆಲ್ಲರೂ ಒಂದುಕಡೆ ಸೇರಿ ತಮ್ಮ ಪರಿಸ್ಥಿತಿಯ ಬಗ್ಗೆ ಚರ್ಚಿಸಿದರು. ಅದರಲ್ಲಿ ಒಬ್ಬಳು, "ನಮ್ಮ ಗಂಡಂದಿರು ಅರಹತರಾಗಿದ್ದಾರೆ, ನಾವು ಯಾಕೆ ಭಿಕ್ಷುಣಿಗಳಾಗಿ ಬದುಕಿ ತಥಾಗತರ ಅಡಿಯಲ್ಲಿ ಪವಿತ್ರ ಜೀವನವನ್ನು ನಡೆಸಬಾರದು?" ಎಂದಳು.

ಅದಕ್ಕೆ ಎಲ್ಲರೂ ಒಪ್ಪಿಕೊಂಡರು. ಅವರೆಲ್ಲ ಮಹಾರಾಣಿ ಮಹಾಪಜಾಪತಿ ಗೋತಮಿ ಬಳಿ ಹೋಗಿ ತಾವು ಏನು ಮಾಡಬೇಕೆಂದಿದ್ದೇವೆ ಎಂಬುದನ್ನು ಹೇಳಿದರು. ಇಂತಹ



ಗಳಿಗೆಗಾಗಿಯೇ ಗೌತಮಿಯೂ ಕಾಯುತ್ತಿದ್ದಳು. ಆಗಲೇ ಅವಳು ಕಾರ್ಯಪ್ರವೃತ್ತಳಾದಳು. ಮೊದಲ ತನ್ನ ಬಟ್ಟೆಗಳಿಗೆ ಬಣ್ಣ ಹಾಕಿದಳು, ನಾಪಿತನನ್ನು ಅರಮನೆಗೆ ಕರೆಸಿ ತಲೆಯನ್ನು ಬೋಳಿಸಿಕೊಂಡಳು. ಯಾರೆಲ್ಲ ಅರಹತರ ಸತಿಯರು ಯುವ ರಾಜಕುಕಾರಿಯರು ಬಂದಿದ್ದರೋ ಅವರಿಗೆಲ್ಲ ಸಂನ್ಯಾಸಿ ಬದುಕಿಗೆ ಬೇಕಾದ ತಮ್ಮ ಬಟ್ಟೆಗಳನ್ನು ಬಣ್ಣಗೊಳಿಸಿಕೊಂಡು ತಮ್ಮ ತಲೆಗಳನ್ನು ನುಣ್ಣಗೆ ಮಾಡಿಸಿಕೊಳ್ಳಲು ಹೇಳಿದಳು. ಹೀಗೆ ಎಲ್ಲರೂ ಕಾವಿ ಉಡುಪು ಧರಿಸಿ ಗೃಹತ್ಯಾಗ ಮಾಡಿ ಮಹಾಪಜಾಪತಿ ಗೌತಮಿಯ ಸಾರಥ್ಯದಲ್ಲಿ ವೈಶಾಲಿಗೆ ಐವತ್ತು ಯೋಜನಗಳನ್ನು (ನಾನ್ನೂರು ಮೈಲಿ) ನಡೆದೇ ಹೋದರು.

ಹೀಗೆ ನಡೆದು ವೈಶಾಲಿ ಬಳಿಯ ಮಹಾವನಕ್ಕೆ ಬಂದು ಅಲ್ಲಿನ ಘೋಸಿತಾರಾಮದ ಮುಂದೆ ನಿಂತರು. ಈ ರಾಜವನಿತೆಯರ ಪಾದಗಳು ನಡೆದು ಊದಿಕೊಂಡಿದ್ದವು. ಮೈಯೆಲ್ಲ ಧೂಳು ತುಂಬಿಕೊಂಡು ಸುಸ್ತಾಗಿದ್ದರು. ಈಗ ವಿಹಾರದ ಮುಂದೆ ಮ್ಲಾನವದನರಾಗಿ ಕಣ್ಣೀರು ಹಾಕುತ್ತ ನಿಂತಿದ್ದರು.

ಆಯುಷ್ಮಂತ ಆನಂದನು ಅವರನ್ನು ನೋಡಿ ಮಹಾಪಜಾಪತಿ ಗೌತಮಿಯ ಬಳಿ ಬಂದನು. ಅವರ ದಯನೀಯ ಸ್ಥಿತಿಯನ್ನು ಕಂಡು ಪ್ರೇಮ ಕರುಣೆಗಳಿಂದ, "ನೀವೇಕೆ ಹೀಗಿದ್ದೀರಿ? ಏನಾದರೂ ದುರಂತ ಸಂಭವಿಸಿತೆ? ಇಲ್ಲಿ ಬಾಗಿಲ ಮುಂದೆ ಇದ್ದು ಅಳಲು ಏನು ಕಾರಣ? ಏಕೆ ದುಃಖದಿಂದ ಬಾಧಿತರಾಗಿದ್ದೀರಿ?" ಎಂದು ಕೇಳಿದನು.

ಮಹಾಪಜಾಪತಿ ಗೌತಮಿ ಹೇಳಿದಳು: "ಆಯುಷ್ಮಂತ, ನಮ್ಮನ್ನು ಪವಿತ್ರ ಸಂಘದಲ್ಲಿ ಸೇರಿಸಿಕೊಳ್ಳುವಂತೆ ಭಗವಾನರ ಅಪ್ಪಣೆಯನ್ನು ಪಡೆಯಲು ಇಲ್ಲಿ ನಿಂತಿದ್ದೇವೆ."

ಆಗ ಆನಂದನು "ಹಾಗಿದ್ದರೆ, ನಿಮ್ಮನ್ನು ಸಂಘದಲ್ಲಿ ಸೇರಿಸಿಕೊಳ್ಳುವ ಬಗ್ಗೆ ಕೇಳಿಕೊಂಡು ಬರುತ್ತೇನೆ, ಅಲ್ಲಿಯವರೆಗೂ ಇಲ್ಲೇ ಇರಿ" ಎಂದನು.

ಬುದ್ಧರಿಗೆ ಹೊರಗಡೆ ಏನಾಗುತ್ತಿದೆ ಎಂಬ ಅರಿವಿತ್ತು. ಯಾವಾಗ ಆಯುಷ್ಮಂತ ಆನಂದನು ಗೌತಮಿಯನ್ನು ಸಂಘದಲ್ಲಿ ಸೇರಿಸಿಕೊಳ್ಳುವ ಬಗ್ಗೆ ವಿನಂತಿಸಿದಾಗ ಗೌತಮ ಬುದ್ಧರು ಅವನನ್ನು ನಿರುತ್ಸಾಹಗೊಳಿಸಿ ಹೇಳಿದರು: "ಆನಂದ, ಸ್ತ್ರೀಯರನ್ನು ಪವಿತ್ರ ಸಂಘದಲ್ಲಿ ಸೇರಿಸಿಕೊಳ್ಳುವುದಕ್ಕೆ ಆಸಕ್ತಿಯನ್ನು ತೋರಿಸಬೇಡವೆಂದು ನಿನಗೆ ಬುದ್ಧಿವಾದ ಹೇಳುತ್ತೇನೆ". ಆಯುಷ್ಮಂತ ಆನಂದ ಹಿಂತೆಗೆಯಲಿಲ್ಲ. ಎರಡನೆಯಬಾರಿ ಮತ್ತು ಮೂರನೆಯಬಾರಿ ಅದೇ ವಿನಂತಿಯನ್ನು ಮಾಡಿದ. ಅವನಿಗೆ ಅದೇ ಉತ್ತರ ಅನಾವಶ್ಯವಾದ ಆಸಕ್ತಿಯನ್ನು ತೋರಬೇಡವೆಂದು ಬಂದಿತು.

ಆಯುಷ್ಮಂತ ಆನಂದನು ಹೊಸ ತಂತ್ರವನ್ನು ಹೂಡಿದ. ಈ ಕೆಳಗಿನಂತೆ ಸಂಭಾಷಣೆ ನಡೆಯಿತು:

ಆಯುಷ್ಮಂತ ಆನಂದ : "ಪೂಜ್ಯರೆ, ಒಬ್ಬ ಸ್ತ್ರೀಯು ಈ ಪವಿತ್ರ ಶಾಸನದ ಬದುಕಿನ ಮೂಲಕ ಸೋತಾಪತ್ತಿ, ಸಕದಾಗಾಮಿ, ಅನಾಗಾಮಿ ಮತ್ತು ಅರಹತ ಸ್ಥಿತಿಗಳನ್ನು ಅವುಗಳ ಲೋಕೋತ್ತರ ಮಗ್ಗ ಮತ್ತು ಫಲಗಳನ್ನು ಪಡೆಯಲು ಸಾಧ್ಯವೆ?"

ಭಗವಾನರು : "ಆನಂದ, ಒಬ್ಬ ಸ್ತ್ರೀಯು ಈ ಪವಿತ್ರ ಶಾಸನದ ಬದುಕಿನ ಮೂಲಕ ಸೋತಾಪತ್ತಿ, ಸಕದಾಗಾಮಿ, ಅನಾಗಾಮಿ ಮತ್ತು ಅರತಹ ಸ್ಥಿತಿಗಳನ್ನು, ಅವುಗಳ ಲೋಕೋತ್ತರ ಮಗ್ಗ ಮತ್ತು ಫಲಗಳನ್ನು ಪಡೆಯಲು ಸಾಧ್ಯವಿದೆ."

ಆಯುಷ್ಮಂತ ಆನಂದ : "ಭಗವಾನ್, ಸ್ತ್ರೀಯರು ಬುದ್ಧ ಶಾಸನದ ಬದುಕಿನ ಮೂಲಕ ಲೋಕೋತ್ತರ ಮಗ್ಗ ಮತ್ತು ಫಲಗಳನ್ನು ಗಳಿಸಲು ಅರ್ಹರಾಗಿದ್ದರೆ ಮಹಾಪಜಾಪತಿ ಗೌತಮಿಯ ವಿನಂತಿಯ ಮೇಲೆ ಕರುಣೆ ತೋರಿಸಬಹುದೆಂದು ನಾನು ಮನವಿ ಮಾಡುತ್ತೇನೆ." ಮುಂದುವರೆದು ಪೂಜ್ಯ ಆನಂದನು ಭಾವಪೂರ್ಣವಾಗಿ ಹೀಗೆ ವಿನಂತಿಸಿದನು: "ಭಗವಾನರೇ, ಗೌತಮಿಯು ನಿಮ್ಮ ತಾಯಿ. ನೀವು ಹುಟ್ಟಿದಾಗಿನಿಂದ ತನ್ನ ಎದೆಹಾಲನ್ನು ಉಣಿಸಿ ಬೆಳೆಸಿದವಳು. ಆದ್ದರಿಂದ ನಾನು ಅವಳಿಗೆ ಉಪಸಂಪದವನ್ನು ಪಡೆಯಲು ಅನುಮತಿ ನೀಡಬೇಕೆಂದು ದಯನೀಯವಾಗಿ ಕೇಳಿಕೊಳ್ಳುತ್ತೇನೆ."

ಬುದ್ಧರು ಆಗ ಮಹಾಪಜಾಪತಿ ಗೌತಮಿಯ ವಿನಂತಿಯನ್ನು ಅಂಗೀಕರಿಸುವುದಕ್ಕೆ ಸೂಕ್ತಕಾಲವೆಂದು ಆಲೋಚಿಸಿ ಆನಂದನಿಗೆ ಹೀಗೆ ಹೇಳಿದರು: "ಆಯಿತು ಆನಂದ, ಮಹಾಪಜಾಪತಿ ಗೌತಮಿಯು ಈ ಎಂಟು ವಿಶೇಷ ನಿಯಮಗಳನ್ನು (ಗುರುಧಮ್ಮ) ಒಪ್ಪಿಕೊಂಡರೆ ಈ ಪವಿತ್ರ ಸಂಘಕ್ಕೆ ಅವರು ಸೇರಿದಂತೆಯೇ!"

ಭಗವಾನರು ಭಿಕ್ಖುಣಿಯರಿಗೆ ಸಂಪೂರ್ಣ ಸಂರಕ್ಷಣೆ ಕೊಡುವ ದೃಷ್ಟಿಯಿಂದ ಎಂಟು ವಿಶೇಷ ನಿಯಮಗಳನ್ನು ವಿಧಿಸಿದರು. ಆಯುಷ್ಮಂತ ಆನಂದನು ಮಹಾಪಜಾಪತಿ ಗೌತಮಿಯ ಬಳಿ ಹೋಗಿ ಇದನ್ನು ಹೇಳಲು ಅವಳು ಸಂತೋಷಪಟ್ಟು ಕೂಡಲೇ ಮತ್ತು ಉತ್ಸಾಹದಿಂದ ನಿಯಮಗಲನ್ನು ಒಪ್ಪಿಕೊಂಡಳು.

ಗೌತಮಿಯು ಬುದ್ಧರ ಬಳಿ ಹೋಗಿ ಗೌರವದಿಂದ ವಂದಿಸಿ, ಒಂದು ಪಕ್ಕದಲ್ಲಿ ಕುಳಿತು "ಭಗವಾನರೇ, ತಾವು ನನಗೆ ಅಟ್ಠ ಗುರುಧಮ್ಮಾ ಪಟಿಗ್ಗಹಣ ಉಪಸಂಪದಾ (ನೇರವಾಗಿ ಬುದ್ಧರಿಂದಲೇ ಎಂಟು ನಿಯಮಗಳನ್ನು ಒಪ್ಪಿಕೊಳ್ಳುವುದರ ಮೂಲಕ ಸಂನ್ಯಾಸತ್ವವನ್ನು ಪಡೆಯುವುದು) ವನ್ನು ಪಡೆದು ಸಂತೃಪ್ತಳಾಗಿದ್ದೇನೆ. ನನ್ನ ಜೊತೆಗೆ ಬಂದಿರುವ ಐದುನೂರು ಜನ ರಾಜಕುಮಾರಿಯರನ್ನು ಏನು ಮಾಡಬೇಕು?" ತಥಾಗತರು ಅವಳಿಗೆ ಕೆಲವು ಸೂಚನೆಗಳನ್ನು ನೀಡಿ ಧಮ್ಮೋಪದೇಶವನ್ನು ನೀಡಿದರು. ಗೌತಮಿಯು ತಥಾಗತರಿಗೆ ವಂದಿಸಿ ನಿರ್ಗಮಿಸಿದಳು.

ಆನಂತರ ಭಗವಾನರು ಭಿಕ್ಖುಗಳಿಗೆ ಮಹಾಪಜಾಪತಿ ಗೌತಮಿಗೆ ನೀಡಿದ ಸೂಚನೆಗಳನ್ನು ವಿಶೇಷ ನಿಯಮಗಳನ್ನು ವಿಧಿಸಿದ ಬಗ್ಗೆ ಹೇಳಿ "ಭಿಕ್ಖುಗಳೇ, ಈ ಮಹಿಳೆಯರಿಗೆ ಭಿಕ್ಖುಣಿಗಳಾಗುವಂತೆ ಉಪಸಂಪದಕ್ಕಾಗಿ ಸಹಕರಿಸಲು ಅನುಮತಿ



ನೀಡಿದ್ದೇನೆ" ಎಂದರು. ಆನಂತರದಲ್ಲಿ ಕೆಲವು ಹಿರಿಯ ಥೇರರು ಗೌತಮಿಯ ಬಳಿಹೋಗಿ ಅವಳನ್ನು ಗುರುವಿನ ಸ್ಥಾನದಲ್ಲಿ ಕುಳ್ಳಿರಿಸಿ ಉಳಿದು ಐದುನೂರು ರಾಜಕುಮಾರಿಯರಿಗೆ ಉಪಸಂಪದ ನೀಡುವ ಸಮಾರಂಭವನ್ನು ಆಯೋಜಿಸಿದರು. ಇದನ್ನು 'ಏಕತೋ ಉಪಸಂಪನ್ನ' (ಎಲ್ಲರೂ ಒಟ್ಟಿಗೆ ಸಂನ್ಯಾಸವನ್ನು ಪಡೆಯುವುದು) ಎಂದು ಕರೆಯುತ್ತಾರೆ.

ಉಪಸಂಪದವು ಮುಗಿಯುತ್ತಲೇ ಮಹಾಪಜಾಪತಿ ಗೌತಮಿಯು ಪರಮಾರ್ಥ ಪರಿವರ್ತನೆಗೆ ಒಳಗಾಗಿ ಅರಹತಳಾದಳು. ಹೊಸದಾಗಿ ಸಂನ್ಯಾಸ ಸ್ವೀಕರಿಸಿದ ಐದುನೂರು ಜನ ಭಿಕ್ಖುಣಿಯರು ಕೂಡ ಲೋಕೋತ್ತರ ಮಗ್ಗ ಮತ್ತು ಫಲಗಳ ಸ್ಥಿತಿಗಳನ್ನು ಹೊಂದಿದರು. ಹೀಗೆ ಬುದ್ಧರು ತಮ್ಮ ಶಾಸನದಲ್ಲಿ ಭಿಕ್ಖುಣಿ ಸಂಘವನ್ನು ಸ್ಥಾಪಿಸಿದರು.

## ಬುದ್ಧರ ನಲವತ್ತೈದು ವರ್ಷಾವಾಸಗಳು

ಭಗವಾನರು ಜ್ಞಾನೋದಯ ಹೊಂದಿದ ಮೊದಲ ಇಪ್ಪತ್ತೈದು ವರ್ಷಗಳು ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ಹೋಗಿ ಧಮ್ಮವನ್ನು ಬೋಧಿಸುತ್ತಾ ಜೀವಿಗಳನ್ನು ದುಃಖದಿಂದ ಬಿಡುಗಡೆ ಮಾಡುತ್ತಾ ಇದ್ದರು. ಆಷಾಢಮಾಸದ ತುಂಬು ಹುಣ್ಣಿಮೆಯಂದು ತಮ್ಮ ಮೊದಲ ಧಮ್ಮೋಪದೇಶ 'ಧಮ್ಮಚಕ್ಕಪವತ್ತನ ಸುತ್ತ'ವನ್ನು ಐದುಜನ ಶಿಷ್ಯರಿಗೆ ಬೋಧಿಸಿದರು. ಈ ಗುಂಪಿನ ನಾಯಕ ಪೂಜ್ಯ ಕೊಂಡಞ್ಞ ಮತ್ತು ಬ್ರಹ್ಮಲೋಕದ ಹದಿನೆಂಟು ಕೋಟಿ ದೇವತೆಗಳು ಬಿಡುಗಡೆ ಹೊಂದಿದರು. ಆನಂತರದಲ್ಲಿ ತಥಾಗತ ಬುದ್ಧರು ಮೊದಲ ವರ್ಷಾವಾಸವನ್ನು ವಾರಾಣಸಿ ಬಳಿಯ ಸಾರನಾಥದ ಮಿಗದಾಯಿ ವನದಲ್ಲಿ ಕಳೆದರು. ಆನಂತರ ತಥಾಗತರು ತಮ್ಮ ಬದುಕಿನುದ್ದಕ್ಕೂ ವರ್ಷಾವಾಸಗಳನ್ನು ಆಚರಿಸಿದರು.

ಎರಡು, ಮೂರು ಮತ್ತು ನಾಲ್ಕನೇ ವರ್ಷಾವಾಸಗಳನ್ನು ರಾಜಗೃಹ ಬಳಿಯ ವೇಣುವನದಲ್ಲಿ ಕಳೆದರು.

ಐದನೇ ವರ್ಷಾವಾಸವನ್ನು ವೈಶಾಲಿ ಬಳಿಯ ಮಹಾವನ ಅರಣ್ಯ ವಿಹಾರದಲ್ಲಿ ಕಳೆದರು.

ಆರನೇ ವರ್ಷಾವಾಸವನ್ನು ಮಾಕುಲ ಪರ್ವತದ ಬಳಿ ಇರುವ ಛಾಯಾವನದಲ್ಲಿ ಕಳೆದರು.

ಏಳನೇ ವರ್ಷಾವಾಸವನ್ನು ತಾವತಿಂಸ ದಿವ್ಯಲೋಕದಲ್ಲಿ ತಾಯಿ ಮಹಾ ಮಾಯಾದೇವಿಗೆ ಅಭಿಧಮ್ಮವನ್ನು ಬೋಧಿಸುತ್ತ ಕಳೆದರು. ತಾಯಿ ಮಹಾ ಮಾಯಾದೇವಿಯು ಭೂಲೋಕದಲ್ಲಿ ತೀರಿಹೋದ ಮೇಲೆ ತುಸಿತ ಸ್ವರ್ಗಲೋಕದಲ್ಲಿ ದೇವತೆಯಾಗಿ ಹುಟ್ಟಿದ್ದಳು.

ಎಂಟನೇ ವರ್ಷಾವಾಸವನ್ನು ಭಗ್ಗದೇಶದಲ್ಲಿರುವ ಸುಂಸಮಾರ ಪರ್ವತದ ತಪ್ಪಲಲ್ಲಿ ಇರುವ ಅರಣ್ಯದಲ್ಲಿ ಕಳೆದರು.

ಒಂಭತ್ತನೇ ವರ್ಷಾವಾಸವನ್ನು ಕೋಸಂಬಿಯ ಧನಿಕ ಘೋಸಿತನು ನಿರ್ಮಿಸಿದ ಘೋಸಿತಾರಾಮದಲ್ಲಿ ಕಳೆದರು.

ಹತ್ತನೇ ವರ್ಷಾವಾಸವನ್ನು ಪಾರಿಲೆಯ್ಯಕ ಅರಣ್ಯದಲ್ಲಿ ಕಳೆದರು. ರಾಜ ಪಾರಿಲೆಯ್ಯಕ ಆನೆಯು ಬುದ್ಧನನ್ನು ನೋಡಿಕೊಂಡಿತು. ಹನ್ನೊಂದನೆ ವರ್ಷಾವಾಸವನ್ನು ನಾಲ ಎಂಬ ಬ್ರಾಹ್ಮಣ ಗ್ರಾಮದಲ್ಲಿರುವ ನಾಲಕಾರಾಮ ವಿಹಾರದಲ್ಲಿ ಕಳೆದರು.

ಹನ್ನೆರಡನೇ ವರ್ಷಾವಾಸವನ್ನು ವೇರಂಜಾನಗರದಲ್ಲಿ ಕಳೆದರು. ಹದಿಮೂರನೇ ವರ್ಷವಾಸವನ್ನು ಚಾಲಿಯಾ ದೇಶದ ಚಾಲಿಯಾ ಪರ್ವತ ವಿಹಾರದಲ್ಲಿ ಕಳೆದರು.

ಹದಿನಾಲ್ಕನೇ ವರ್ಷಾವಾಸವನ್ನು ಕೋಸಲದ ರಾಜಧಾನಿ ಸಾವತ್ಥಿ ಬಳಿಯಿರುವ ಜೇತನದಲ್ಲಿ ಕಳೆದರು.

ಹದಿನೈದನೇ ವರ್ಷಾವಾಸವನ್ನು ಕಪಿಲವಸ್ತುವಿನ ಬಳಿಯ ನ್ಯಗ್ರೋಧಾರಾಮದಲ್ಲಿ ಕಳೆದರು.

ಹದಿನಾರನೆ ವರ್ಷಾವಾಸವನ್ನು ಆಲವಿ ಸಮೀಪದ ಅಗ್ಗಾಲವ ದೇಗುಲದಲ್ಲಿ ಕಳೆದರು.

ಹದಿನೇಳನೇ ವರ್ಷಾವಾಸವನ್ನು ರಾಜಗಹ ಸಮೀಪದ ವೇಣುವನ ವಿಹಾರದಲ್ಲಿ ಕಳೆದರು.

ಹದಿನೆಂಟು ಮತ್ತು ಹತ್ತೊಂಭತ್ತನೆಯ ವರ್ಷಾವಾಸಗಳನ್ನು ಛಾಲಿಯಾ ರಾಜ್ಯದಲ್ಲಿನ ಛಾಲಿಯ ಪರ್ವತ ವಿಹಾರದಲ್ಲಿ ಕಳೆದರು.

ಇಪ್ಪತ್ತನೆಯ ವರ್ಷಾವಾಸವನ್ನು ರಾಜಗಹ ಸಮೀಪದ ವೇಣುವನ ವಿಹಾರದಲ್ಲಿ ಕಳೆದರು.

ಹೀಗೆ ಭಗವಾನರು ಜ್ಞಾನೋದಯ ಹೊಂದಿದ ನಂತರ ಮೊದಲ ಇಪ್ಪತ್ತು ವರ್ಷಗಳ ವರ್ಷಾವಾಸವನ್ನು ಮೇಲಿನಂತೆ ಕಳೆದರು. ತಥಾಗತರು ತಮ್ಮ ಇಡೀ ಬದುಕಿನಲ್ಲಿ ವರ್ಷದ ಎಂಟು ತಿಂಗಳ ಕಾಲ ಊರಿನಿಂದ ಊರಿಗೆ ಧಮ್ಮೋಪದೇಶಕ್ಕಾಗಿ ಅಲೆದು ಮೂರು ತಿಂಗಳಕಾಲ ವರ್ಷಾವಾಸ ಮತ್ತು ತಿಂಗಳ ಕಾಲ ಚೀವರ ತಯಾರಿಸುವಲ್ಲಿ ಕಳೆಯುತ್ತಿದ್ದರು.

ಇಪ್ಪತ್ತೊಂದರಿಂದ ನಲವತ್ನಾಲ್ಕು ವರ್ಷಗಳವರೆಗಿನ ವರ್ಷಾವಾಸಗಳನ್ನು ಭಗವಾನರು ಸಾವತ್ಥಿ ಸಮೀಪದ ಜೇತವನ ಅಥವಾ ಪುಬ್ಬಾರಾಮ ವಿಹಾರಗಳಲ್ಲಿ ಕಳೆದರು. ನಲವತ್ತೈದನೆಯ ವರ್ಷಾವಾಸದ ವಿಹಾರವನ್ನು ವೇಲುವ ಗ್ರಾಮದಲ್ಲಿ ಕಳೆದರು.

ಮೇಲಿನ ವರ್ಷಾವಾಸದ ವಿವರಗಳು ಖುದ್ದಕನಿಕಾಯದ ಬುದ್ಧವಂಶ ಭಾಷ್ಯದಲ್ಲಿ ಅಡಕವಾಗಿವೆ.



## ಭಗವಾನರ ಎರಡು, ಮೂರು ಮತ್ತು ನಾಲ್ಕನೇ ವರ್ಷಾವಾಸಗಳು

ಭಗವಾನರು ಕಪಿಲವಸ್ತುವಿನಿಂದ ರಾಜಗಹಕ್ಕೆ ದೊರೆ ಬಿಂಬಿಸಾರನ ವಿನಂತಿಯ ಮೇರೆಗೆ ಎರಡನೇ ವರ್ಷಾವಾಸಕ್ಕೆ ಬಹುಸಂಖ್ಯೆಯ ಅಂದರೆ ಇಪ್ಪತ್ತೊಂದು ಸಾವಿರ ಅರ್ಹತ ಭಿಕ್ಖುಗಳ ಜೊತೆಗೆ ವೇಣುವನ ವಿಹಾರಕ್ಕೆ ಬಂದು ಕಳೆದರು. ಆನಂತರದಲ್ಲಿ ಬುದ್ಧರು ಮೂರು ಮತ್ತು ನಾಲ್ಕನೇ ವರ್ಷಾವಾಸಗಳನ್ನು ವೇಣುವನ ವಿಹಾರದಲ್ಲೇ ಕಳೆದರು.

– ೦೦೦ – ೦೦೦ – ೦೦೦ –